ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 1
ಸಂಚಿಕೆ 1
ಜನವರಿ–ಮಾರ್ಚ್ 1972

ಸಾಧನೆ

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE : Kannada Quarterly of the Bangalore University, Bangalore.
Vol. 1. No. 1. January-March 1972. pp. 218+iv.

Chief Editor: Dr. G. S. Sivarudrappa.

ಪ್ರಧಾನ ಸಂಪಾದಕರು:
ಡಾ. ಜಿ. ಎಸ್. ಶಿವರುದ್ರಪ್ಪ

ಸಂಪಾದಕರು:
ಡಾ. ಎಂ. ಚಿದಾನಂದ ಮೂರ್ತಿ
ಡಾ. ಪಿ. ಎಸ್. ವೆಂಕಟಸ್ವಾಮಿ ಶೆಟ್ಟಿ
ಡಾ. ಸೂರ್ಯನಾಥ ಕಾಮತ್

ವಾರ್ಷಿಕ ಚಂದಾ : ರೂ. 6-00
ರೂ. 4-00 [ವಿದ್ಯಾರ್ಥಿಗಳಿಗೆ]

ಪ್ರಕಾಶಕರು: ಕೆ. ಸಿ. ಶಿವಪ್ಪ
ಕೋ-ಆರ್ಡಿನೇಟರ್, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 1

ಮುದ್ರಕರು: ಎಂ. ಎಸ್. ಚಿಂತಾಮಣಿ, ಈಸ್ಟರ್ನ್ ಪ್ರೆಸ್, ಬೆಂಗಳೂರು 29

ಪರಿವಿಡಿ

ಸಂಧ್ಯಾರಾಗ (ಕವನ) 1
ಕೆ. ಎಸ್. ನ.

ಆಚೆ (ಕವನ) 4
ಚೆನ್ನವೀರ ಕಣವಿ

ಭಾರತೀಯತೆ ಮತ್ತು ಸಮಕಾಲೀನ ಭಾರತೀಯ ಸಾಹಿತ್ಯ 5
ವಿ. ಕೃ. ಗೋಕಾಕ

ಡಿ. ವಿ. ಜಿ. ಅವರ ಶೃಂಗಾರ ಸಂಹಿತೆ 11
ಜಿ. ವರದರಾಜರಾವ್

ಅನುಭೂತ್ಯಾಭಾಸ : ಒಂದು ಅಲಂಕಾರ 36
ಎಂ. ವಿ. ಸೀತಾರಾಮಯ್ಯ

ವ್ಯಕ್ತಿಯ ಪ್ರವೃತ್ತಿಗಳು ಮತ್ತ ವಿನ್ಯಾಸಗಳು 54
ಎಸ್. ಕೆ. ರಾಮಚಂದ್ರರಾವ್

ನ್ಯಾಯಶಾಸ್ತ್ರ ಮತ್ತು ಸಾಮಾಜಿಕ ವಿಜ್ಞಾನಗಳು 65
ಟಿ. ಕೆ. ತುಕೋಳ್

ಇಂಟರ್‌ಫೆರಾನ್ 73
ಎಂ. ಷಡಕ್ಷರಸ್ವಾಮಿ

ಹೆಂಗಸರ ರೋಗಗಳು 79
ಡಿ. ಎಸ್. ಶಿವಪ್ಪ

ಭಾರವಾದ ನೀರು ಮತ್ತು ಅಣುಕಾರಕಗಳು 87
ವಿ. ಚೆಲುವರಾಜ ಅಯ್ಯಂಗಾರ್

ಶ್ರೀರಂಗರ ಪ್ರಕೃತಿ–ಪುರುಷ 93
ಎಸ್. ಎಲ್. ಭೈರಪ್ಪ

ಪರ್ಣಾಶ್ರಮ (ಕವನ) 124
ಕೆ. ಎಸ್. ನಿಸಾರ್ ಅಹಮದ್

ಕೆಟ್ಟ ಕಣ್ಣು 127
ತೀ. ನಂ. ಶಂಕರನಾರಾಯಣ

ಲುನಖೋಡ್–1 139
ಪಾ. ಸಂ. ವೆಂಕಟಸ್ವಾಮಿ ಶೆಟ್ಟಿ

ಒಂದಿರುಳು (ಕವನ) 144
ಜಿ. ಎಸ್. ಶಿವರುದ್ರಪ್ಪ

ದುಃಖ–ಒಂದು ಮನೋವೈಜ್ಞಾನಿಕ ವಿಶ್ಲೇಷಣೆ 145
ಎಂ. ಬಸವಣ್ಣ

ಮೈಸೂರು ರಾಜ್ಯದ ನೀರು ಮತ್ತು ಮಣ್ಣಿನ ಸಂಪತ್ತು 153
ಬಿ. ವಿ. ವೆಂಕಟರಾವ್

ಕಣ್ಣು-ಮುಚ್ಚೆಣಕಿ (ಕವನ) 159
ಅಂಬಿಕಾತನಯದತ್ತ

ನೊಬೆಲ್ ಪ್ರಶಸ್ತಿವಿಜೇತ ಜಾನ್ ಟಿನ್‌ಬರ್ಗನ್ 161
ಎನ್. ಪ್ರಭುಸ್ವಾಮಿ

ಆಧಾರ ಶ್ರುತಿಯ ಮನೋವೈಜ್ಞಾನಿಕ ಸಮೀಕರಣ 169
ಟಿ. ಆರ್. ನಾಗರತ್ನ

ಬಯಲು (ಕವನ) 175
ಜಿ. ಎಸ್. ಸಿದ್ಧಲಿಂಗಯ್ಯ

ಭೂ ಸಂಪತ್ತು 177
ಸಿ. ನಾಗಣ್ಣ

ಕಪ್ಪೆ ಮತ್ತು ನೆಲಗಪ್ಪೆಗಳಲ್ಲಿ ಲೈಂಗಿಕ ವಿಭೇದೀಕರಣ ಅಸಂಗತಿಗಳು 181
ಎಚ್. ಬಿ. ದೇವರಾಜ ಸರ್ಕಾರ್, ಎಂ. ಸುವರ್ಣಲತ ಮತ್ತು ಬಿ. ಎಸ್. ತ್ಯಾಗರಾಜ

ಕನ್ನಡ ಭಾಷೆಯ "ಅ–"ಸ್ವನಗಳು 187
ತೀ. ನಂ. ಶ್ರೀಕಂಠಯ್ಯ

ಮೆರವಣಿಗೆ (ಕವನ) 192
ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

ಭಾರತದ ಭೂಸಂಪತ್ತು 194
ಎಂ. ಸೂರ್ಯನಾರಾಯಣ ಶಾಸ್ತ್ರಿ

ಮಂಥನ

1. ಶುಕ ಸಪ್ತತಿಯ ಬಗೆಗೆ ಒಂದು ಟಿಪ್ಪಣಿ 201
ಕೆ. ವೆಂಕಟರಾಯಾಚಾರ್ಯ

2. ಕೆಲವು ವಸ್ತ್ರನಾಮ ವಿಶೇಷಗಳು 206
ಹಂಪ. ನಾಗರಾಜಯ್ಯ

ಸಂಪಾದಕೀಯ 213

ಈ ಸಂಚಿಕೆಯ ಲೇಖಕರು 216

ಸಂಧ್ಯಾರಾಗ

ಕೆ. ಎಸ್. ನ.

ಮೂವತ್ತು ವರುಷ ಕುದುರೆಯ ಮೇಲೆ ಮೆರೆದವನು,
ಮೂರು ಜಿಲ್ಲೆಗಳಲ್ಲಿ 'ದೊರೆ'ಯೆನಿಸಿಕೊಂಡವನು
ನಿವೃತ್ತನಾಗಿ ನಗುತ್ತ ಮನೆಗೆ ಬಂದಿರುವಾಗ
ಇದೇಕೆ ನೀನು ಹೀಗೆ ಹೊಸಿಲಾಚೆ ನಿಂತಿರುವೆ ?

ಇಲ್ಲಿದ್ದ ಸರ್ಕಾರಿ ಸರಕು ಹೋಯಿತು ನಿನ್ನೆ,
ಈ ಕೋಣೆಗಿನ್ನೆಲ್ಲಿ ಬಂತು ಕಾವಲು ? ಬಂದು,
ನಿನ್ನ ಮದುವೆಯ ದಿನದ ಕುರ್ಚಿ ಇಲ್ಲಿದೆ, ಕೂರು.
ನೀನು ಕೊಡಬಂದಿರುವ ಪತ್ರವನ್ನಲ್ಲಿರಿಸು.

ಈ ಪುಷ್ಪಮಾಲೆ ನಿನ್ನೆಯದು ; ಬಳಲಿದೆ, ಪಾಪ !
ಹಣ್ಣುಗಳು ನಿಲ್ಲಲಾರವು, ಬೇಗ ಹಂಚಿಬಿಡು.
ನಾನರ್ಹನಲ್ಲ ಈ ನಡೆಗೋಲಿನುಡುಗೊರೆಗೆ ;
ತೆಗೆದುಕೋ ನಿನ್ನ ಸೇವಿಗೆಯ ಕೈಗಾರಿಕೆಗೆ !

ನಾಚುವುದು ಬೇಡ. ಮಾತಾಡು, ಬಂದರೆ, ಹಾಡು.
ನೀನಿಷ್ಟು ಚೆಲುವೆಯೆನ್ನುವುದು ತಿಳಿದದ್ದೀಗ,
ಹರೆಯದಲ್ಲೆಲ್ಲರಿಗು ಒಲವು ಬಂದರೆ, ನಮಗೆ
ಎರಡನೆಯ ಅಂಚೆಯಲ್ಲೀಗ ಬಂದದ್ದಕ್ಕೆ

ಧನ್ಯವಾದಗಳು ! "ಈ ದೊರೆಗೆ ಕುದುರೆಯ ಹುಚ್ಚು ;
ಮನೆಯ ಕಡೆಗಿಲ್ಲ ಈತನ ಗಮನ"ವೆಂದವರು
ಬಂದು ನೋಡಲಿ, ನಾಳೆಯಿಂದ ಈ ಸಂಸಾರ
ಹೇಗಿರುವುದೆಂದು ! ಆ ಕುದುರೆ ಮಾಡಿದ್ದೇನು ?

ಒಂದು ಸಲಿ ಮಾತ್ರ ಕೆಡವಿತ್ತು ; ಜೇಲಿಗೆ ಬಿದ್ದೆ.
ಗೆದ್ದ ವಿಷಯಗಳನ್ನೆ ನಾನು ಹೇಳಿರಬೇಕು ;
ಬಿದ್ದದ್ದು ಗೊತ್ತಿಲ್ಲ ನಿನಗೆ, ಹತ್ತಿರ ಸರಿದು,
ಕೇಳು : ಮರುದಿನ ನನ್ನ ನ್ಯಾಯಾಲಯದ ಮುಂದೆ

ಹೊಸತಾಗಿ ಮದುವೆಯಾದೊಂದು ಜಂಬದ ಜೋಡಿ
(ಅವಳ ಅಪ್ಪುಗೆಯಲ್ಲಿ ಇವನು ಮೈಮರೆಯುತ್ತ),
ಸೈಕಲಿನ ಮೇಲೆ ಸೊಟ್ಟಾಗಿ ಬಂದದ್ದನ್ನು
ಕಂಡು ಕಿಡಿಕಿಡಿಯಾಗಿ, ತಿಳಿಸಿದೆ ಪೋಲೀಸರಿಗೆ.

ನನ್ನ ಅಂದಿನ ದುಡುಕಿಗೀಗ ನೊಂದಿದ್ದೇನೆ;
ನನ್ನನ್ನು ಕ್ಷಮಿಸು, ಏನಂಥ ಯೋಚನೆ ನಿನಗೆ ?—
ನಿವೃತ್ತಿವೇತನ ಕೂಡ ಕೈತುಂಬ ಬರುವುದಿದೆ ;
ಅದು ಸಾಕು ನಮಗೆ, ಮಗನೂ ಸೇರಿ ಮೂವರಿಗೆ.

ಕಡಲಾಚೆಗಿರುವ ಆ ಚಿನ್ನದಂತಹ ಹುಡುಗ
ಬರಲಿ ಕಣೆ, ಪದಕಗಳ ಗೆದ್ದು! ಕಾದಿದ್ದಾಳೆ
ನಿನ್ನ ತಮ್ಮನ ಮಗಳು. ಗಂಟು ಹಾಕೋಣ ಬಿಡು.
ದೊರೆಮಕ್ಕಳಂತೆ ಊಟಿಗೆ ಹೋಗಿಬರಲವರು

ಹೊಸ ಕಾರಿನಲ್ಲಿ! ನಾನಂತು ತಡೆಯುವುದಿಲ್ಲ.
ತಡೆದರೂ, ನನ್ನ ಬಾಯಿಂದ ಉರುಳಿತ್ತು ಮುತ್ತು :
ನೀಲಗಿರಿಯಲ್ಲಿ ಮಿನುಗುವ ಊಟಿ! ಹಿಂದೆಯೂ
ಮೆರವಣಿಗೆಯಿತ್ತು ಮದುವೆಗಳಲ್ಲಿ—ಇಲ್ಲಿಲ್ಲ!

ಊಟಿಯವರೆಗೆ ಅಲ್ಲ. ನಾವೆ ಇದ್ದೇವಲ್ಲ!
ಆಮೇಲೆ ಅಧಿಕಾರ ಬಂತು ; ನೀನೂ ಬಂದೆ ;
ಕುದುರೆಯೂ ಬಂತು, ಹೋಯಿತು ; ಕಾರು ಬಂದಿತ್ತು.
ಇದ್ದ ಕಾರನ್ನರ್ಧಬೆಲೆಗೆ ಮಾರುವವರೆಗೆ

ಊಟಿಯ ವಿಳಾಸ ನಮಗೇಕೆ ಹೊಳೆದಿರಲಿಲ್ಲ.
ಈಗ ಬಿಡುವಲ್ಲ, ಊಟಿಗೆ ಹೋಗಬಹುದೆಂದು
ಹೊಳೆದದ್ದು ನಿನ್ನೆ. ನಾನೊಡನೆಯೇ ಫೋನೆತ್ತಿ
ಪ್ರವಾಸಪಂಡಿತರನ್ನು ಗುಟ್ಟಾಗಿ ಕೇಳಿದರೆ,

ತಿಳಿದು ಬರೆಯುವುದಾಗಿ ಹೇಳಿ, ಇಟ್ಟರು ಕೆಳಗೆ.
ಎರಡನೆಯ ಅಂಚೆಯಲ್ಲೇನೊ ಧುಮುಕಿತು ಎಂದು
ನೀನೀಗ ತಂದಿರುವುದವರ ಪತ್ರವೆ ಏನೊ!
ನೋಡಬೇಕಾಗಿತ್ತು ಮೊದಲೆ, ಓದೋಣ, ಕೊಡು :

"ಊಟಿಯಲ್ಲೀಗ ಕುದುರೆಯ ಜೂಜು ; ಎಲ್ಲರೂ
ಹೋಗಬೇಕಾದ್ದೆ! ಪ್ರತ್ಯೇಕ ವಾಹನವಿಲ್ಲ.
ಮೈತುಂಬ ಕಣ್ಣಿರುವ ರಾತ್ರಿ ಬಸ್ಸುಂಟಲ್ಲ,
ಬನ್ನಿ,"—ಕೇಳಿದೆಯ ? 'ಅರ್ಧಾಂಗಿಯೊಂದಿಗೆ ನಾನು,

ಮೂವತ್ತು ವರುಷ ಕುದುರೆಯ ಮೇಲೆ ಮೆರೆದವನು,
ಮೂರು ಜಿಲ್ಲೆಗಳಲ್ಲಿ 'ದೊರೆ'ಯೆನಿಸಿಕೊಂಡವನು
ಹೋಗುವುದಸಾಧ್ಯ ಅದರಲ್ಲಿ ಊಟಿಗೆ' ಎಂದು
ಉತ್ತರ ಕೊಡೋಣ ಅವರಿಗೆ. ಮುಂದೆ ಹೋಗೋಣ,

ಸೊಸೆಯ ಕಾಲ್ಗುಣದಿಂದ ಹೊಸಕಾರು ಬಂದಾಗ ;
ಕಾರು ಬಾಗಿಲು ತೆರೆದು ನಮ್ಮನ್ನು ಕರೆದಾಗ,—
ಎಲ್ಲಕ್ಕು ಮೊದಲು ಆ ಹುಡುಗ ಬರಬೇಕಲ್ಲ ?—
ಕಡಲಾಚೆಗಿರುವ ಆ ಹುಡುಗನಿಗೆ ಕಾಯೋಣ.

ಆಚೆ

ಚೆನ್ನವೀರ ಕಣವಿ

ಅಣು-ಕಣಗಳ ವಿಭಜಿಸಿ ವಿಶ್ಲೇಷಿಸಿ ನೋಡುವ
ಕನ್ನಡಿ ಈ ಕ್ಷಣ. ಅನುದಿನವೂ ಅನುಮಾನದ
ಅವಶೇಷ. ದ್ವೇಷ-ವೇಷ-ಕ್ಲೇಶ ಸಂಕೀರ್ಣದ

ಮದ್ದಿನ ಕುಡಿಕೆಗೆ ಒಳಗೇ ಕೊಳ್ಳಿಯನಿಡುವ —
ಹಾರಿವೆ ಕಿಡಿವೂಗಳು ಬಿದ್ದಿದೆ ಬರಿ ಬೂದಿ.

ಎತ್ತುವ, ಬಿತ್ತುವ, ತುತ್ತುವ ಕೈಗಳಿಗೆ ಸಿಗದು
ಕೀಲಿಯ ಕೈ. ಗಾಳಿಗೆ ಗೋಣಾಡಿಸಿ ನಿಲ್ಲದು

ಒಂದೆಡೆ; ಒಂದೇ ಸಮ ಹುಡುಕುತ್ತಿದೆ ಹಾದಿ.
ಚಕ್ರದಿ ಅದೆ ಆಗಿದೆ, ನೂಕಿದೆ ಮತ್ತೊಂದು.

ಹಗಲಿರುಳು, ಋತುಮಾನವು — ಶತಮಾನದ ಬಿಂದು.
ಈ ಕ್ಷಣದಲಿ ತೂಗಿದೆ ತತ್ತರಿಸಿದೆ 'ಇಂದು'.

ಒಳಗೇ ಕತ್ತರಿಯಾಡಿಸಿ ಎಳೆಯುತ್ತಿದೆ 'ಮುಂದು'.

ಏರಿಳಿಯಲು ಕಾದಿವೆ ಗಿರಿ-ಕಂದರ: ಅದರಾಚೆ
ಕ್ಷಿತಿಜದ ಗೆರೆಯೆ ? ಬೆಳಕಿನ ತೊರೆಯೆ ? ಬರಿಮಿಂಚೆ ?

ಭಾರತೀಯತೆ ಮತ್ತು ಸಮಕಾಲೀನ ಭಾರತೀಯ ಸಾಹಿತ್ಯ

ವಿ. ಕೃ. ಗೋಕಾಕ

ಸರ್ವ ಲೇಖಕರೂ ಸಾಹಿತ್ಯ ಪ್ರಜಾಪ್ರಭುತ್ವದಲ್ಲಿ ಸೇರುತ್ತಾರೆ; ಅವರು ಯಾವ ದೇಶೀಯರಾಗಿದ್ದರೂ ಸಹ. ತಮ್ಮಷ್ಟಕ್ಕೇ ಅಮೂಲ್ಯವಾಗಿರುವ ತನ್ನ ಅನುಭವಗಳನ್ನು ಮತ್ತು ಪ್ರಜ್ಞೆಯ ವಿವಿಧ ಸ್ಥಿತಿಗಳನ್ನು ನಿವೇದಿಸಿಕೊಳ್ಳುವವನೇ ಸೃಜನಶೀಲ ಬರೆಹಗಾರ ನಾಗುತ್ತಾನೆ; ಅವನು ಕವಿ, ನಾಟಕಕಾರ, ಕಾದಂಬರಿಕಾರ ಅಥವಾ ಮತ್ತೇನೋ ಆಗಿರ ಬಹುದು. ಈ ಕಾರಣಕ್ಕಾಗಿಯೇ ಸಾಹಿತ್ಯ ಸಾಮ್ರಾಜ್ಯದ ಗಡಿ ಭೂತ ಮತ್ತು ಭವಿಷ್ಯ ಗಳಲ್ಲಿ, ಕಾಲ ದೇಶಗಳಾಚೆ ಚಾಚಿಕೊಳ್ಳುತ್ತದೆ; ವಾಲ್ಮೀಕಿ, ಹೋಮರ್, ಷೇಕ್ಸ್‌ಪಿಯರ್, ಗಯಟೆ, ಟಾಗೂರ್ ಮತ್ತು ಟಿ. ಎಸ್. ಎಲಿಯಟ್ — ಎಲ್ಲರೂ ಅಲ್ಲಿ ಸೇರುತ್ತಾರೆ.

ಸಮಕಾಲೀನ ಭಾರತೀಯ ಸಾಹಿತಿ ಇಲ್ಲಿ ಸಮಗೆ ಸಂಬಂಧಿಸಿದವನು. ಅವನ ಲಕ್ಷಣ ನಿರೂಪಣೆ ಹೇಗೆ? ಆತನೂ ಸಾಹಿತ್ಯ ಸಾಮ್ರಾಜ್ಯದ ಸರ್ವವ್ಯಾಪ್ತಿ ವಾಯು ವನ್ನೇ ಸೇವಿಸುತ್ತಾನೆ; ಅದರಂತೆ ಪ್ರತಿಯೊಬ್ಬ ಲೇಖಕನೂ ಸಾಹಿತ್ಯ ಸಾಮ್ರಾಜ್ಯ ದಲ್ಲಿರುವ ತನ್ನ ಭಾಗದ ವಾಯುಗುಣವನ್ನೇ ತನ್ನೊಂದಿಗೆ ಹೊತ್ತುತಂದಿರುತ್ತಾನೆನ್ನು ವುದೂ ಅಷ್ಟೇ ಸತ್ಯ. ಇಂದಿನ ಭಾರತದ ಚತುರ್ಮುಖ ವಿರೋಧಾಭಾಸಗಳ ಜ್ವಲಂತ ಸಂವೇದನೆಗಳನ್ನು ಅಂತರಂಗದಲ್ಲಿ ಹುದುಗಿಸಿಕೊಂಡಿರುವವನೇ ಈ ಅರ್ಥದಲ್ಲಿ ಸಮ ಕಾಲೀನ ಭಾರತೀಯ ಲೇಖಕನಾಗುತ್ತಾನೆ. ಆತನ ಆದರ್ಶದೃಷ್ಟಿ ವೈಯಕ್ತಿಕವೇ ಇರ ಬಹುದು; ಆತನ ಶಿಕ್ಷಣ ಮತ್ತು ಚಂಚಲಶೀಲ ಆಯ್ಕೆಗಳಿಂದ ಅದು ಅನಿವಾರ್ಯ ವಾಗಿ ನಿಯಮಾಧೀನವಾಗಿರುತ್ತದೆ. ಆದರೆ ಆತನು ನಿಜವಾದ ಭಾರತೀಯನೆನ್ನಿಸಿಕೊಳ್ಳ ಬೇಕಾದರೆ — ಅದೂ ಸಮಕಾಲೀನ ಅರ್ಥದಲ್ಲಿ — ಆತನ ಸಂವೇದನೆ ಈ ಚತು- ರ್ಮುಖ ವಿರೋಧಾಭಾಸಗಳ ಸಾಧ್ಯವಿದ್ದಷ್ಟೂ ಮೂಲಗಳಿಂದ ಉದ್ದೀಪ್ತಗೊಳ್ಳಬೇ ಕಾಗುತ್ತದೆ. ಕಲಾತ್ಮಕವಾಗಿ ಹೇಳುವುದಾದರೆ, ಆತನ ಪ್ರಜ್ಞೆ ಎಷ್ಟು ಮುಖಗಳನ್ನು ಮುಟ್ಟಲು ಸಾಧ್ಯವಾಗುತ್ತದೆಯೋ ಅಷ್ಟು ಮಟ್ಟಿಗೆ ಅವನ ಮಾರ್ಗ ಸಮಗ್ರವಾಗಿರು ತ್ತದೆ; ಬಹುಪಾಲು ಆತನು ಧ್ವನಿಸಬಹುದಾದ ಆಳವನ್ನೂ ಅದು ಅವಲಂಬಿಸಿರುತ್ತದೆ. ಆತನ ತೋರ್ಕೆ — ವ್ಯಂಗ್ಯ, ಹಾಸ್ಯ, ಸುಖಾಂತ, ದುರಂತ, ಕರುಣ ಅಥವಾ ರೋಷ ಗಳಲ್ಲಿ ಒಂದಾಗಿರಬಹುದು. ಆತನ ಅಂತಃಪ್ರವೃತ್ತಿಯ ಬಲವನ್ನು ಅವಲಂಬಿಸಿ ಒಂದು ವಿಶಿಷ್ಟ ರಸೋದ್ದೇಶ ಅಥವಾ ಭಾವ ಮೇಲುಗೈಯಾಗಿರುತ್ತದೆ.

ಹಾಗಾದರೆ ಸಮಕಾಲೀನ ಭಾರತದ ಚತುರ್ಮುಖಿ ವಿರೋಧಾಭಾಸವೆಂದರೇನು? ಮೊದಲನೆಯದಾಗಿ, ಭಾರತವು ತನ್ನ ಅಂತಸ್ಥ ಸಾಧನ ಸಂಪತ್ತುಗಳಿಂದ ಶ್ರೀಮಂತ ವಾಗಿದ್ದೂ ಉಗ್ರ ದಾರಿದ್ರ್ಯದಿಂದ ನರಳುತ್ತಿರುವ, ಶ್ರೇಷ್ಠ ಸಾಂಸ್ಕೃತಿಕ ಪರಂಪರೆಯಿದ್ದೂ ಅಸೀಮ ಮೌಢ್ಯದಿಂದ ಮುಚ್ಚಿಹೋಗಿರುವ ಜನಗಳಿಂದ ಕೂಡಿದ ದೇಶ. ಸೋವಿಯೆಟ್ ರಷ್ಯಾ ಮತ್ತು ಅಮೇರಿಕೆಗಳಂತೆ ತಾಂತ್ರಿಕವಾಗಿ ಚಂದ್ರಯುಗವನ್ನೂ ತಲುಪಿಲ್ಲ ಅಥವಾ ಇಂಗ್ಲೆಂಡ್, ಫ್ರಾನ್ಸ್, ಜಪಾನ್‌ಗಳಂತೆ ಯಾಂತ್ರಿಕ ಪ್ರಗತಿಯನ್ನೂ ಪಡೆದಿಲ್ಲ. ಮಧ್ಯಯುಗದ ವ್ಯವಸಾಯ ಪದ್ಧತಿಯಲ್ಲೇ ಇರುವ ಈ ವಿಸ್ತಾರವಾದ ಭೌಗೋಳಿಕ ಜನಾಂಗಕ್ಕೆ ವಿಜ್ಞಾನ ಮತ್ತು ಕೈಗಾರಿಕೆಯೆನ್ನುವುದು ಇನ್ನೂ ಒಂದು ತೇಪೆಯಿದ್ದಂತೆ. ನಮ್ಮ ದೇಶದಲ್ಲಿರುವ ನಿರುದ್ಯೋಗಿಗಳ ಸಂಖ್ಯೆ ಗಂಜಲಾಗದ್ದು ಮತ್ತು ಬೆರಗು ಹುಟ್ಟಿಸುವಂಥದು. ಇಲ್ಲಿ ನಡೆಯುವ ವಿದ್ಯಾರ್ಥಿ ಚಳುವಳಿಗಳು ಪ್ರಪಂಚದ ಯಾವುದೇ ಮುಂದುವರಿದ ರಾಷ್ಟ್ರಗಳ ವಿದ್ಯಾರ್ಥಿ ಚಳುವಳಿಗಳಿಗಿಂತ ಭಿನ್ನಕಾರಣಗಳಿಂದಾಗಿ ನಡೆಯುತ್ತವೆ. ಅಭಿವೃದ್ಧಿ ಹೊಂದುತ್ತಿರುವ ಇತರ ಕೆಲವು ದೇಶಗಳೊಂದಿಗೆ ನಮ್ಮ ಸ್ಥಿತಿ ಬಹುಶಃ ಹೋಲಿಕೆ ಪಡೆಯುತ್ತದೆಯೆನ್ನಬಹುದು; ಆದರೆ ನಮ್ಮ ದೇಶದಲ್ಲಿ ನಡೆಯುತ್ತಿರುವ ರೀತಿಯು ಪ್ರಮಾಣ ಎಲ್ಲ ವಿಧದಿಂದಲೂ ಅಸಾಮಾನ್ಯವಾಗಿದೆ. ಶ್ರೀ ದ. ರಾ. ಬೇಂದ್ರೆಯವರು ತಮ್ಮ ಒಂದು ಕವನದಲ್ಲಿ ಹೇಳಿರುವಂತೆ, ಜನತೆಯ ಧ್ವನಿ ಹೀಗೆ ಗುಡುಗುತ್ತದೆ:

ದೇವರದೊಂದು ಗೋರಿಯ ಕಟ್ಟಿ
ಧರ್ಮದ ಧೂಪಕೆ ಬೆಂಕಿಯನಿಕ್ಕಿ
ಗಣಗಣ ಬಾರಿಸಿ ಪ್ರಾಣದ ಗಂಟೆಯ
ಸಾವಿನ ನೋವಿಗೆ ಕಲಮಲವೆದ್ದು
ನೆಲವನ್ನೆಲ್ಲಾ ತುತ್ತುವೆನೆಂದು
ಗದರುತ್ತಿಹುದು ಗರ್ಜಿಸುತಿಹುದು
ಬಡವರ ಬಗ್ಗರ ತುತ್ತಿನ ಚೀಲದ
ಒಳಗಿನ ಒಳಗಿನ ಒಳದನಿಯೊಂದು !

ಎರಡನೆಯದಾಗಿ, ವೈವಿಧ್ಯತೆಯ ನಡುವೆ ಹೊಂದಿಕೆಯಲ್ಲಿ ನಂಬಿಕೆ ಇಟ್ಟು ಕೊಂಡಿರುವ ದೇಶದಲ್ಲಿ ನಾವು ಬದುಕುತ್ತಿದ್ದೇವೆ; ಆದರೆ ವಾಸ್ತವವಾಗಿ ಅವರ ಪಕ್ರತೆಯಲ್ಲಿ ಸಾಮ್ಯವಿಲ್ಲ. ಬದುಕಿನ ಹಲವು ವಿಭಾಗಗಳಲ್ಲಿ ಸಾಮ್ರಾಜ್ಯಶಾಹಿಯ ನೊಗದಿಂದ ಪೂರ್ತಿ ಬಿಡುಗಡೆಯನ್ನು ನಾವಿನ್ನೂ ಪಡೆದಿಲ್ಲ; ಮಹಾ ಸಾಮಾಜಿಕ ಹೋರಾಟ ನಡೆಯುತ್ತಿದೆ. ನಮ್ಮ ಆದಿವಾಸಿಗಳು, ಹರಿಜನರು, ಹಿಂದುಳಿದ ವರ್ಗದವರು ಮತ್ತು ಮೊದಲ ತಲೆಮಾರಿನ ವಿದ್ಯಾವಂತರು ಇತಿಹಾಸದಿಂದಾದ ಕಾಲವಂಚನೆಯನ್ನು ಕುರಿತು ತಾಳ್ಮೆಗೆಟ್ಟಿದ್ದಾರೆ; ಆದರ್ಶದ ಮರೆಯಲ್ಲಿ ಆಶ್ರಯಪಡೆದಿರುವ ಪಟ್ಟಭದ್ರ ಹಿತಾಸಕ್ತಿಗಳ ಬಣದಲ್ಲಾಗುವ ಕ್ಷೋಭೆಯನ್ನೂ ಲೆಕ್ಕಿಸದೆ ತಮ್ಮ ಸಂಪೂರ್ಣ ಸ್ವಾಮ್ಯವನ್ನು ಪಡೆಯಲು ಪಣ ತೊಟ್ಟಿದ್ದಾರೆ. ಭಾರತೀಯ ಸಮಾಜದಲ್ಲಿ ವರ್ಗಗಳು ಮೇಲೇಳು

ತ್ತಿವೆ: ಮರೆಯಾಗುತ್ತಿರುವ ಊಳಿಗ ಪದ್ಧತಿ, ಆಧುನಿಕ ಒರಟು ಶ್ರೀಮಂತರಿಂದ ಕೂಡಿದ ಮೇಲು ಮಧ್ಯಮ ವರ್ಗ, ರಾಜಕೀಯ ಮಧ್ಯವರ್ತಿ ಮತ್ತು ನಿರ್ಲಜ್ಜ ವ್ಯಾಪಾರಿ, ತಾಳ್ಮೆಗೆಟ್ಟು ನರಳುತ್ತಿರುವ, ಒಡೆದು ಹೋಗುತ್ತಿರುವ ಅಥವಾ ಹೊಸ ಉದ್ಯೋಗಗಳಿಗೆ ಹೊಂದಿಕೊಳ್ಳುತ್ತಿರುವ ಮಧ್ಯಮ ವರ್ಗ ಮತ್ತು ಕ್ರಿಯೆ ಹಾಗೂ ಮಾತುಗಳಲ್ಲಿ ಕ್ರೂರವಾಗುತ್ತಿರುವ ಶ್ರಮಜೀವಿ. ಒಂದೇ ಸಮಾಜದ ವಿವಿಧ ಧಾರ್ಮಿಕ ಪಂಗಡಗಳು ಪ್ರತ್ಯೇಕವಾಗಿಯೇ ಬದುಕಲು ಅಪೇಕ್ಷಿಸುತ್ತವೆ. ನಮ್ಮ ನಾಗರಿಕ ಮತ್ತು ರಾಜಕೀಯ ಜೀವನದ ಮೇಲೆ ಇಂದಿಗೂ ಜಾತಿ ಉಪಜಾತಿಗಳು ಅಧಿಕಾರ ನಡೆಸುತ್ತಿವೆ. ನಮ್ಮ ನಗರಗಳು ಲಾಭದಾಯಕವಲ್ಲದ ಪ್ರಮಾಣದಲ್ಲಿ ಬೆಳೆಯುತ್ತಿದ್ದರೆ, ನಮ್ಮ ಹಳ್ಳಿಗಳು ಜನಸಂಖ್ಯೆ ಮತ್ತು ಚುನಾವಣೆಗಳ ಕಾರಣದಿಂದಾದ ಗುಂಪುಗಾರಿಕೆಯಿಂದ ಶೋಷಿತಗೊಳ್ಳುತ್ತಿವೆ. ಭಾಷಾವಾದ ಎಲ್ಲ ದಿಕ್ಕುಗಳಿಗೂ ಹಬ್ಬುತ್ತಿದೆ. ನದಿನೀರು ಮತ್ತು ಗಡಿವಿವಾದಗಳಿಂದಾಗಿ ರಾಜ್ಯಗಳ ನಡುವೆ ಪ್ರಾಂತೀಯವಾದ ಅಸಹ್ಯವಾಗಿ ತಲೆಯೆತ್ತುತ್ತಿದೆ.

ಮೂರನೆಯದಾಗಿ, ಭಾರತವು ವಿಶ್ವದಲ್ಲೇ ಅತ್ಯಂತ ದೊಡ್ಡ ಪ್ರಜಾಪ್ರಭುತ್ವವನ್ನು ಪಡೆದ ರಾಷ್ಟ್ರವಾಗಿದ್ದು ತನ್ನ ಬುಡವನ್ನು ಭದ್ರಪಡಿಸಿಕೊಂಡಿದೆಯೆಂಬುದನ್ನು ಇತ್ತೀಚಿನ ಲೋಕಸಭಾ ಚುನಾವಣೆಗಳ ಮೂಲಕ ವಿಪುಲ ಪ್ರಮಾಣ ಸಹಿತವಾಗಿ ಸ್ಪಷ್ಟಪಡಿಸಿಕೊಂಡಿದೆಯಾದರೂ ಸಹ, ಇದು ವಿಶ್ವದಲ್ಲಿಯೇ ಪ್ರಜಾಪ್ರಭುತ್ವವನ್ನು ಪಡೆದ ರಾಷ್ಟ್ರಗಳಲ್ಲಿ ಅತ್ಯಂತ ಕನಿಷ್ಠ ಸಂಖ್ಯೆಯ ವಿದ್ಯಾವಂತರನ್ನು ಪಡೆದ ರಾಷ್ಟ್ರವಾಗಿದೆ. ರಾಷ್ಟ್ರೀಯ ನೆಲದಲ್ಲಿ ಪ್ರಜಾಪ್ರಭುತ್ವವು ಜೀವನದ ಒಂದು ಅಂಗವಾಗಿ ಇನ್ನೂ ಬೇರು ಬಿಡಬೇಕಾಗಿದೆ. ಅನೇಕ ಮಹಾವ್ಯಕ್ತಿಗಳನ್ನು ನಾವು ಇತ್ತೀಚಿನ ವರ್ಷಗಳಲ್ಲಿ ಪಡೆದಿದ್ದೇವೆ; ಆದರೆ ಕುರುಚಲು ಮತ್ತು ಮುಳ್ಳು ಪೊದೆಯ ಕಾಡಿನಲ್ಲಿ ಕೆಲವೇ ಎತ್ತರವಾದ ಅರಳಿ ಮತ್ತು ಆಲದ ವೃಕ್ಷಗಳು ಹೇಗೆ ಎಣಿಕೆಗೆ ಬಂದಾವು? ಕೋಟ್ಯಾವಧಿ ಮೂಕ ಜನತೆ ಗಣನೆಗೆ ಬರಬೇಕಾದವರಾದರೂ ಅವರು ಅಸಮರ್ಥರಲ್ಲದಿದ್ದರೂ ಮೂಕರಾಗಿದ್ದಾರೆ – ರಾಜಕೀಯ, ಬದುಕಿನ ಎಲ್ಲ ಕ್ಷೇತ್ರಗಳಿಗೂ ಪ್ರವೇಶಿಸಿರುವುದರಿಂದ ಮತ್ತು ನಮ್ಮ ಅಧಿಕಾರಾನ್ವೇಷಕರಿಂದ. ಶ್ರಮಜೀವಿಗಳ ಸರ್ವಾಧಿಕಾರವನ್ನು ಪಡೆದಿರುವ ಚೀನಾ ಸಾಂಸ್ಕೃತಿಕ ಕ್ರಾಂತಿಯನ್ನೇ ಹೊಡೆದೆಬ್ಬಿಸಿದೆ. ನಾವಾದರೋ ಇಡೀ ಭಾರತೀಯ ಸಮಾಜ ವ್ಯವಸ್ಥೆಯನ್ನೇ ಪ್ರಜಾಪ್ರಭುತ್ವಗೊಳಿಸುವ ಮಹಾನ್ ಪ್ರಯೋಗದಲ್ಲಿ ಉದ್ಯುಕ್ತರಾಗಿದ್ದೇವೆ; ಸಹಜವಾಗಿಯೇ ಇದಕ್ಕೆ ಸ್ವಲ್ಪ ಸಮಯ ಹಿಡಿಯುತ್ತದೆ.

ಕೊನೆಯದಾಗಿ. ವಿಶ್ವದಲ್ಲಿ ಪ್ರಾಚೀನವಾಗಿರುವ ಜೀವಂತ ಮಹಾನ್ ಸಂಸ್ಕೃತಿಗಳ ಲ್ಲೊಂದಕ್ಕೆ ನಾವು ವಾರಸುದಾರರಾಗಿದ್ದೇವೆ. ಆದರೂ, ವಿಜ್ಞಾನ. ತಾಂತ್ರಿಕಜ್ಞಾನ ಮತ್ತು ಧರ್ಮಾತೀತ ವ್ಯವಸ್ಥೆಗಳ ಪ್ರಾಥಮಿಕ ಪಾಠಗಳನ್ನು ಪಶ್ಚಿಮದಿಂದ ಕಲಿಯುವ ತರಾತುರಿಯಲ್ಲಿದ್ದೇವೆ. ಭಾರತೀಯ ಪರಂಪರೆಯನ್ನು ಕುರಿತು ವಿದೇಶಗಳಲ್ಲಿ ತುಂಬಾ ಆಸಕ್ತಿಯಿದೆ. ಭಾರತದಲ್ಲಿ ಅದನ್ನು ನಿರ್ಮೂಲಗೊಳಿಸಲು ಸಾಧ್ಯವೆಂದು ನಾವು ಕಲಿಸಿಕೊಂಡರೂ

ವಿಶ್ವದ ಎಲ್ಲ ಭಾಗಗಳಲ್ಲಿಯೂ, ವಸ್ತುಸಂಗ್ರಹಾಲಯ ಮತ್ತು ಗ್ರಂಥ ಭಂಡಾರಗಳಲ್ಲಿ ತನ್ನ ಅಸ್ತಿತ್ವವನ್ನು ಅದು ಮುಂದುವರಿಸುತ್ತದೆ. ಜಪಾನ್ ದೇಶದಲ್ಲಿ ಕೆಲವುಮಟ್ಟಿಗೆ ಸಾಧಿಸಿರುವಂತೆ ಪೂರ್ವ ಮತ್ತು ಪಶ್ಚಿಮಗಳ ಕರಾರುವಾಕ್ ಸಮತೋಲನವನ್ನು ಸಾಧಿಸಲು, ರಾಷ್ಟ್ರೀಯ ಒಪ್ಪಿಗೆಯಿಂದಾಗುವ ಈ ಕೆಲವು ಅಂಶಗಳನ್ನು ಪ್ರತ್ಯೇಕಗೊಳಿಸಿ ನಿರ್ದಿಷ್ಟಪಡಿಸಬೇಕಾಗಿದೆ. ಇದರ ಫಲವೆಂದರೆ ಭಾರತದಲ್ಲಿ ಉದ್ಭವಿಸಿರುವ ಸಂಸ್ಕೃತಿಗಳ ಸಂಘರ್ಷ ಮತ್ತು ಅದರ ಪರಿಣಾಮವಾಗಿ ಅನುಭಾವದಿಂದ ಮಾರ್ಕ್ಸ್‌ವಾದದ ತನಕ ತೂಗುಯ್ಯಾಲೆಯಾಡುವ ಆದರ್ಶಗಳು; ಹೀಗಾಗಿ ನಾವು ಬದುಕುತ್ತಿರುವುದೇ ಆದರ್ಶಗಳ ಗೊಂದಲದಲ್ಲಿ.

ಇದು ಸಮಕಾಲೀನ ಭಾರತದ ಚತುರ್ಮುಖ ವಿರೋಧಾಭಾಸ; ದುರಂತ ಮತ್ತು ಹಾಸ್ಯಾಸ್ಪದ. ಒಂದು ಕ್ಷಣ ಕಣ್ಣೀರಿಗೆ ಮತ್ತೊಂದು ಕ್ಷಣಕ್ಕೆ ಪಕ್ಕೆ ಮುರಿಯುವ ನಗೆಗೆ ನಮ್ಮನ್ನು ಗುರಿ ಮಾಡುವಂಥದು. ದಿವ್ಯದರ್ಶನದಿಂದ ಮತ್ತು ಬಹು ವಿಸ್ತಾರ ಹಾಗೂ –ಡ್ರೈಡನ್ ಕವಿಯು ಷೇಕ್ಸ್‌ಪಿಯರನಿಗೆ ವಿಶೇಷಿಸಿರುವುದಕ್ಕಿಂತಲೂ – ವ್ಯಾಪಕವಾದ ಧೀಮಂತ ಶಕ್ತಿಯನ್ನು ಪಡೆದ ಭಾರತೀಯ ಲೇಖಕನನ್ನು ನಾವು ಕಲ್ಪಿಸಿಕೊಂಡರೆ, ಈ ದಿನ ಅವನು ಹೇಗೆ ಬರೆಯುತ್ತಿದ್ದಿರಬಹುದು?

ಆತ ಭಾರತೀಯ 'ಪ್ರಕೃತಿ ಭವ್ಯತೆ'ಯನ್ನು ವರ್ಣಿಸುತ್ತಾನೆ: ಅವಳ ಹಿಮಾಲಯದ ಶಿಖರಗಳು, ಅವಳ ಐತಿಹಾಸಿಕ ಮಹತ್ವವುಳ್ಳ ಮಹಾನದಿಗಳು. ಸುರುಳಿಯಾಗಿ ಹರಡಿರುವ ಅವಳ ಬಯಲುಸೀಮೆ ಹಾಗೂ ಚಿತ್ರವತ್ತಾದ ಕಾಡುಗಳು ಮತ್ತು ಇದರ ಹಿನ್ನೆಲೆಯಲ್ಲಿ ಋತುಗಳ ಚಕ್ರವು ಕಾಲದಿಂದ ಕಾಲಕ್ಕೆ ಯೋಜಿಸುವ ಉಜ್ವಲ ಪ್ರದರ್ಶನವಿರುತ್ತದೆ. ಇದರೊಂದಿಗೆ ಹೋಲಿಕೆ ಪಡೆಯುವಂತೆ. ದಾರಿದ್ರ್ಯ. ಕೃಪಣತ್ವ ಮತ್ತು ಮೌಢ್ಯದ ಸರಪಳಿಯಿಂದ ಬಂಧಿತವಾಗಿರುವ ಭಾರತದ ಮಹಾ ಜನತೆಯ ಕಳೆಗುಂದಿದ ಚಿತ್ರವನ್ನೂ ಚಿತ್ರಿಸುತ್ತಾನೆ; ಸಮಾಜವಾದಿ, ಮಾರ್ಕ್ಸ್‌ವಾದಿ ಅಥವಾ ಮಾವೋವಾದಿಯಂತೆ ಎಣೆಯಿಲ್ಲದ ಮರುಕ ಮತ್ತು ರೋಷಗಳಿಂದ ತನ್ನ ಓದುಗರ ಅಂತಃಕರಣವನ್ನು ಕಲಕುತ್ತಾನೆ. ಆತ ಭಾವೋದ್ವೇಗದಿಂದ ವಾದಿಸುತ್ತಾನೆ. ಕ್ರಿಯೆಗೆ. ತತ್‌ಕ್ಷಣದ ಕಾರ್ಯಕ್ಕೆ: ಈ ಅನ್ಯಾಯಗಳನ್ನು ಒರೆಸಿ ಹಾಕುವುದಕ್ಕೆ. ಹೊಸ ಆರ್ಥಿಕ ವ್ಯವಸ್ಥೆಯ ಅರುಣೋದಯಕ್ಕೆ.

ಮತ್ತೊಂದು ಮೂಡಿನಲ್ಲಿ. ತನ್ನ ಬೀಗದಕೈ ಬದಲಾಯಿಸಿ ವಿಚಾರ ಮತ್ತು ಬುದ್ಧಿವಂತಿಕೆಯ ಅಗತ್ಯ ಹಾಗೂ ಧರ್ಮಾತೀತ ಭಾವೈಕ್ಯಗಳನ್ನು ನಿರ್ಭಾವುಕ ಉತ್ಸಾಹದಿಂದ ಮಿಡಿಯುತ್ತಾನೆ: ಗುಡ್ಡಗಾಡಿನ ಬದುಕಿನ ಚಿತ್ತಾಕರ್ಷಕ ಚಿತ್ರಗಳನ್ನು ನೀಡುತ್ತಾನೆ: ಬರ್ನ್ಸ್‌ನಂತೆ ಜಾನಪದ ಧಾಟಿಯನ್ನನುಸರಿಸಿ ಹಾಡುತ್ತಾನೆ: ಮೊದಲ ತಲೆಮಾರಿನ ವಿದ್ಯಾವಂತರ ಉದ್ವೇಗದ ನರಳುವಿಕೆಯನ್ನು. ಬ್ರಾಹ್ಮಣ ಮತ್ತು ನವ ಬೌದ್ಧರ ನಡುವೆ ಆದ ಹೋರಾಟವನ್ನು ವರ್ಣಿಸುತ್ತಾನೆ; ಹಿಂದೂ – ಮುಸ್ಲಿಂ ದಂಗೆಗಳನ್ನು ವಿಶ್ಲೇಷಿಸುತ್ತಾನೆ; ಸಾಯುತ್ತಿರುವ ಪ್ರಭುವರ್ಗ ಮತ್ತು ಸತ್ತು ಬದುಕುತ್ತಿರುವ ಮಧ್ಯಮವರ್ಗದ ಸಂಕಟ

ವನ್ನು ಅನಾವರಣಗೊಳಿಸುತ್ತಾನೆ; ರಾಜಕಾರಣಿಗಳ ಮತ್ತು ಹೊಸ ಶ್ರೀಮಂತರ ಕಾಲು ಜಗ್ಗಿಸುತ್ತಾನೆ; ಅಗತ್ಯವೇ ಪರಮಗುರಿಯಾಗಿರುವ, ಅಸಹ್ಯ ಹುಟ್ಟಿಸುವ ನಗರ ಜೀವನವನ್ನೂ ಮತ್ತು ಕೆಲವು ದಶಕಗಳ ಹಿಂದೆ ಶಾಂತಿಯ ನೆಲವೀಡಾಗಿದ್ದು ಈಗ ಚೂರು ಚೂರಾಗಿರುವ ಹಳ್ಳಿಯ ಬದುಕನ್ನೂ ಚಿತ್ರಿಸುತ್ತಾನೆ; ರಾಜ್ಯ-ರಾಜ್ಯಗಳ ನಡುವೆ ಮಸೆದಿರುವ ದ್ವೇಷದ ಅಲುಗಿನ ನಗ್ನತೆಯನ್ನು ಮುಂದಿಡುತ್ತಾನೆ; ಅಥವಾ ಸಾಮ್ರಾಜ್ಯಶಾಹಿಯ ಮತ್ತು ನಿನ್ನೆಯ ಬಿಳಿಯ ಸಾಹೇಬನ ಕಡೆಗೆ ನೋಡುತ್ತ ನಿಧಾನವಾಗಿ ತನ್ನ ದೃಷ್ಟಿಯನ್ನು ತಿರುಗಿಸುತ್ತಾನೆ.

ಧ್ವಂಸಮಾಡುವ, ಉಗ್ರವಾದ ಒಂದು ಮನಃಸ್ಥಿತಿಯಲ್ಲಿ ಈ ದಾರ್ಶನಿಕ ಲೇಖಕ ತನ್ನ ಪೂರ್ಣದೃಷ್ಟಿಯನ್ನು ದೇಶದ ರಾಜಕೀಯ ಜೀವನದ ಮೇಲೆ ಬೀರುತ್ತಾ, ವಿಶ್ವದಲ್ಲೇ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಇನ್ನೂ ಎಂದೋ ಬರಬೇಕಾಗಿರುವ ಪ್ರಜಾಪ್ರಭುತ್ವವನ್ನು ಕುರಿತು ಮಾತನಾಡುತ್ತಾನೆ. ನೈತಿಕ ಧೋರಣೆಯೊಂದನ್ನು ಪ್ರತಿಪಾದಿಸುತ್ತಾ. ನಾಶವಾಗಿರುವ ನೈತಿಕಮೌಲ್ಯಗಳು ಹಾಗೂ ಲಂಚ ಮತ್ತು ಉದ್ಯೋಗಾ-ಸಕ್ತ ವಾತಾವರಣವನ್ನು ಕುರಿತು ಪ್ರವಚಿಸುತ್ತಾನೆ: ಮಂತ್ರಿಗಳ. ಎಂ. ಎಲ್. ಎ. ಗಳ. ಪಕ್ಷಾಂತರಿಗಳ ಮತ್ತು ಮುನಿಸಿಪಾಲಿಟಿ. ಜಿಲ್ಲಾಬೋರ್ಡ್. ಪಂಚಾಯಿತಿ ಅಧ್ಯಕ್ಷರುಗಳ ವ್ಯಂಗ್ಯ ರೇಖಾಚಿತ್ರಗಳನ್ನು ಬಿಡಿಸುತ್ತಾನೆ; ಮನೆಯ ಯಜಮಾನಿಕೆ ಒಬ್ಬರದೇ — ಅದು ಮನೆಯೊಡತಿಯದೇ – ಆಗಿರುವ ಟಿ. ಪಿ. ಕೈಲಾಸಂ ರ 'ಹೋಂರೂಲ್' ಮತ್ತು ಇಬ್ಬರು ಕೌನ್ಸಿಲರುಗಳು ಒಂದೇ ಬೀದಿಯಲ್ಲಿ ವಾಸವಾಗಿರದಂತಿರುವ ನಿಯಮವನ್ನು ಕುರಿತು — ಪರಿಣಾಮವಾಗಿ ಮುನಿಸಿಪಾಲಿಟಿಯ ಸದಸ್ಯರ ಸಂಖ್ಯೆಗನುಗುಣವಾಗಿ ಹಲವು ಬೀದಿಗಳು ಬೆಳಕನ್ನು ಕಾಣಲು ಸಾಧ್ಯವಾಗುತ್ತದೆ – ಮಾತನಾಡುತ್ತಾನೆ: ಭಾರತೀಯ ಪುನರುಜ್ಜೀವನ ಕಾಲದ ಮಹಾ ಪುಣ್ಯ ಪುರುಷರನ್ನೂ ಸ್ತ್ರೀಯರನ್ನೂ ತನ್ನ ಕಾದಂಬರಿ ಮತ್ತು ನಾಟಕಗಳಲ್ಲಿ ತರುವುದರೊಂದಿಗೆ ರಾಷ್ಟ್ರೀಯ ಕಾರ್ಯಕ್ಷೇತ್ರದ ಮೇಲೆ ಆಗಿರುವ ಅವರ ಪ್ರಭಾವವನ್ನು ತೋರಿಸುತ್ತಾನೆ; ನಿರುದ್ಯೋಗಿಗಳಾಗಿರುವ ಲಕ್ಷಾಂತರ ಜನಗಳ ಸಮೂಹಗಾನವನ್ನು ಹಾಡುತ್ತಾ ನೆನಪಿಸಿಕೊಳ್ಳುತ್ತಲೇ ಇರುವ ಮಮ್ಮಿಗಳು ಮತ್ತು ಪ್ರಾಣಿಗಳಿಂದ ತುಂಬಿಹೋಗಿರುವ "ಸರಸ್ವತೀ ಸರ್ಕಸ್ಸಿ"ನ ನಮ್ಮ ವಿದ್ಯಾಭ್ಯಾಸಕ್ರಮದ ದುರಂತವನ್ನು ಬಯಲಿಗೆಳೆಯುತ್ತಾನೆ; ತಲೆಮಾರುಗಳ ನಡುವಿರುವ ಹೋರಾಟ ಮತ್ತು ವೇಗವಾಗಿ ಉಸಿರುಕಟ್ಟಿಸುವಂತೆ ಬದಲಾಯಿಸುತ್ತಿರುವ ಫ್ಯಾಷನ್‌ಗಳ ತಮಾಷೆಯ ಮೇಲೆ ಗಮನವಿಡುತ್ತಾನೆ.

ಅತ್ಯಂತ ಪ್ರಸನ್ನವಾಗಿರುವ ಒಂದು ಕ್ಷಣದಲ್ಲಿ. ವಿಶ್ವ ದರ್ಶನವುಳ್ಳ ಭಾರತೀಯ ಲೇಖಕ. ಭಾರತವೆಂಬ ದುರಂತ ಹಾಸ್ಯ ದೃಶ್ಯ ಪರಂಪರೆಯನ್ನೂ. ಜಗತ್ತಿನ ವೈಭವ. ತಮಾಷೆ ಮತ್ತು ಒಗಟನ್ನೂ ಕುರಿತು ಧ್ಯಾನಿಸುತ್ತಾನೆ; ಭ್ರಮೆ ಮತ್ತು ಕನಸಿನ ಲೋಕಕ್ಕೆ ಪಲಾಯನಮಾಡುತ್ತಾನೆ; ಐತಿಹಾಸಿಕ ರಮ್ಯತೆಯ ಭೂತಕಾಲ

ವನ್ನು ಅಗೆಯತೊಡಗುತ್ತಾನೆ; ನಿರಾಶಾವಾದಿ. ಆಶಾವಾದಿ, ಸಿನಿಕ, ಪ್ರತಿಮಾವಾದಿ ಅಥವಾ ಅಸ್ತಿತ್ವವಾದಿಯಾಗುತ್ತ ಅಸಂಗತ ರಂಗಭೂಮಿಯಲ್ಲಿ ಜೂಜಾಡುತ್ತಾನೆ; ಅಥವಾ ಮಾನವ ವಿಕಾಸವನ್ನು ಮತ್ತು ಐಕ್ಯ ದರ್ಶನವನ್ನು ಕುರಿತ ನವಸಿದ್ಧಾಂತವನ್ನು ರೂಪಿಸುತ್ತಾ ಮಹಾಪುರುಷನ ಅವತಾರವನ್ನೂ ಧರ್ಮಯುಗದ ಬರವನ್ನೂ ಸಾರುತ್ತಾನೆ; ತನ್ನ ಧಾರ್ಮಿಕ ಪರಂಪರೆಯನ್ನು ಒಳಹೊಕ್ಕು ನೋಡುತ್ತಾ ಅದಕ್ಕೆ ಜೋತು ಬಿದ್ದಿರುವಾಗಲೇ ಅದರ ವಿರುದ್ಧ ಬಂಡೇಳುತ್ತಾನೆ.

ರೂಪಕ್ಕೆ ಸಂಬಂಧಿಸಿದಂತೆ, ಸಮಕಾಲೀನ ಭಾರತೀಯ ಲೇಖಕ ಅಸಂಖ್ಯ ರೋಗಗಳು. ವೈಲಕ್ಷಣ್ಯಗಳು ಮತ್ತು ಅಭಿವ್ಯಕ್ತಿಯ ವಿಧಾನಗಳೊಂದಿಗೆ ಪ್ರಯೋಗ ನಡೆಸುತ್ತಿರುತ್ತಾನೆ. ರಮ್ಯ ಸಾಹಿತಿಯಂತೆ ಬರವಣಿಗೆಯ ಅತಿಸಾರದಿಂದ ಬಳಲುತ್ತಿರುತ್ತಾನೆ (ನವ್ಯ ಸಾಹಿತಿಯಂತೆ ಬರವಣಿಗೆಯ ಮಲಬದ್ಧತೆಯಿಂದ ಪೀಡಿಸಲ್ಪಡುತ್ತಿರುತ್ತಾನೆ); ಅಥವಾ ಅರವಿಂದರಂತೆ ಮಹಾಕಾವ್ಯದಂಥ ಪ್ರಾಚೀನ ಸಾಹಿತ್ಯರೂಪವನ್ನು ಸ್ವೀಕರಿಸಿ ಹೊಸ ಆಕಾರದಲ್ಲಿ ಅದನ್ನು ಬೆಸೆಯುತ್ತಾನೆ. ಜಾನಪದ ಧಾಟಿ ಅಥವಾ ಜಾನಪದ ಕಲಾರೂಪಗಳು ಅವನನ್ನು ಗೀಳಿನಂತೆ ಬೆನ್ನು ಹತ್ತಬಹುದು: ‘ಪ್ರಜ್ಞಾ ಪ್ರವಾಹ’ದ ಮೇಲೆ ಆತ ತೇಲಬಹುದು ಅಥವಾ ಶುದ್ಧವಕ್ರತೆಯಿಂದ ಆಧುನಿಕ ವಿರೋಧಿಯಾಗಿ ಮುಂದುವರಿಯಬಹುದು; ರೂಪರಹಿತನಾಗಿರಲು ಆತ ಹವಣಿಸಬಹುದು; ಅಥವಾ ಸಾಹಿತ್ಯಿಕ ಜೀವದ್ರವ್ಯ ಸ್ಥಿತಿಯಲ್ಲಿಯೇ ಸಂಭ್ರಮಿಸಬಹುದು.

ಇಂದಿನ ಸಾಹಿತ್ಯ ರಂಗದ ಸ್ಥಿತಿಗತಿ ಹೀಗಿದೆ: ಭಾರತೀಯ ಸಾಹಿತ್ಯದ ಕೋಟೆಯನ್ನು ಸ್ವಾಧೀನಪಡಿಸಿಕೊಂಡಿರುವವನೇ ಈ ಲೇಖಕ. ಲಕ್ಷಾಂತರ ಚೂರುಗಳಾಗಿ ಸಿಡಿದಿರುವ ಮಾಯಾ ಕನ್ನಡಿಯ ದಿವ್ಯ ದರ್ಶನವನ್ನು ಕಲ್ಪಿಸಿಕೊಂಡರೆ ಭಾರತದ ಸಮಕಾಲೀನ ಸಾಹಿತ್ಯ ಪ್ರಜಾಪ್ರಭುತ್ವದ ಸ್ವರೂಪವನ್ನು ಸಾಕಷ್ಟು ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದು. ಈ ಜಾದುಗಾರಿಕೆ, ಕನ್ನಡಿಯ ಬಾಹ್ಯ ರೇಖೆಗಳನ್ನು ಮಾರ್ದವಗೊಳಿಸುವಿಕೆ ಮತ್ತು ಪರಿಹಾರಗಳನ್ನು ಸೂಚಿಸುವುದರೊಂದಿಗೆ ಹೊಂದಿಕೊಂಡಿದೆ. ಭಾರತೀಯ ಪ್ರಜಾಪ್ರಭುತ್ವ ಸಾವಕಾಶವಾಗಿ ರೂಪುಗೊಂಡಂತೆ. ಸಾಹಿತಿಯೂ ಉಜ್ವಲವಾದ ಭರವಸೆಯಿಂದ ಕೂಡಿದ ವಸ್ತುಗಳೊಂದಿಗೆ ವ್ಯವಹರಿಸಬಹುದು: ರಾಷ್ಟ್ರೀಯ ಕಲಾರೂಪಗಳತ್ತ ತನ್ನ ದಾರಿಯನ್ನು ಗೊತ್ತುಮಾಡಿಕೊಳ್ಳಬಹುದು.

ಅಂದರೆ. ಚತುರ್ಮುಖಿ ವಿರೋಧಾಭಾಸದ ಆತನ ದರ್ಶನದಲ್ಲಿ ಏನೂ ವೈಭವವಿಲ್ಲವೆಂದು ಇದರ ಅರ್ಥವಲ್ಲ. ಆತ ಬರೆಯುತ್ತಿರುವಂತೆಯೇ ಶ್ರೇಷ್ಠ ಸೌಂದರ್ಯಾನ್ವೇಷಣೆಯ ಸಾಹಸದಲ್ಲಿ ಅವನೂ ಒಬ್ಬ ಕ್ರಿಯಾತ್ಮಕ ಸಹಭಾಗಿಯಾಗಿರುತ್ತಾನೆ: ಭಾವೀಜನಾಂಗಕ್ಕೆ ಮಹತ್ವವುಳ್ಳ ಅಗಣಿತ ಅಂಶಗಳಲ್ಲಿ ಅದು ಸಹ ಒಂದಾಗಿರುತ್ತದೆ. ಏಕೆಂದರೆ. ಭಾರತೀಯ ನೆಲದ ಅಡಿಗಲ್ಲಿನ ಮೇಲೆ ನಾಳಿನ ವಿಶ್ವಸಂಸ್ಕೃತಿಯ ಆದರ್ಶ ತನ್ನೆಲ್ಲ ಹೊಂದಿಕೆ ಮತ್ತು ಸಂಕೀರ್ಣತೆಗಳೊಡನೆ ರೂಪುಗೊಳ್ಳಬೇಕಾಗಿದೆ.

[ಅನು : ಕೆ. ಮರುಳಸಿದ್ದಪ್ಪ]

ಡಿ. ವಿ. ಜಿ. ಅವರ ಶೃಂಗಾರ ಸಂಹಿತೆ

ಜಿ. ವರದರಾಜರಾವ್

I

'ಸ್ತ್ರೀರೂಪಮೆ ರೂಪಂ ಶೃಂಗಾರಮೆ ರಸಂ' ಎಂದು ಭುಜ ತಟ್ಟಿಕೊಂಡು ನಮ್ಮ ಹಿಂದಿನ ಕವಿಗಳು. ತಮ್ಮ ಕಾವ್ಯಗಳಲ್ಲಿ ಶೃಂಗಾರ ರಸವನ್ನು ಮೆರೆಸಿರುವುದುಂಟು. ಪರಿಣತರ ಕೈಯಲ್ಲಿ ಅದು ಅಮೃತಸಮಾನವೆನ್ನಿಸಿದರೆ, ಅಪ್ರಬುದ್ಧರ ಪ್ರಯತ್ನದಲ್ಲಿ ಅದು ಅಹಿತವಾಗಿ ಪರಿಣಮಿಸಿದೆ. ಇಂದಿನ ಕವಿಗಳಲ್ಲಿಯೂ ಈ ವಿಷಯ ಸಾಕಷ್ಟು ಪ್ರಧಾನವಾಗಿಯೇ ನಿರೂಪಿತವಾಗಿದೆ. ಕುವೆಂಪು ಅವರ 'ಪ್ರೇಮಕಾಶ್ಮೀರ', ದ. ರಾ. ಬೇಂದ್ರೆ ಅವರ 'ಕಾಮಕಸ್ತೂರಿ', ತೀ.ನಂ.ಶ್ರೀ. ಅವರ 'ಒಲುಮೆ', ಕೆ. ಎಸ್. ನರಸಿಂಹಸ್ವಾಮಿ ಅವರ 'ಮೈಸೂರು ಮಲ್ಲಿಗೆ', ಬೆಟಗೇರಿ ಕೃಷ್ಣಶರ್ಮರ 'ಒಡನಾಡಿ' ಮೊದಲಾದ ಕೆಲವು ಕೃತಿ ಸಂಕಲನಗಳಲ್ಲಿ ಪ್ರಣಯದ ವಿವಿಧ ವಿಲಾಸಗಳನ್ನು ನಾವು ಕಾಣಬಹುದು. ಕಾಮ ಪ್ರೇಮಗಳ ಅಂತರವನ್ನು ರಸಿಕನಾದವನು ಮಾತ್ರ ಹೇಳಲು ಶಕ್ತ. ದೈಹಿಕ ಚಪಲದಿಂದ ತಲೆದೋರುವ ನವೆಯನ್ನೂ ಸಹ ಕಾವ್ಯಕ್ಕೆ ವಸ್ತುವನ್ನಾಗಿಸುವ ಚಟ ಇಂದಿನ ಅಪ್ರಬುದ್ಧ ನವ್ಯಕವಿಗಳಲ್ಲಿ ತೋರಿಬಂದು ಅದು ತನ್ನ ಪ್ರೇತನೃತ್ಯವನ್ನೇ ನಡೆಸಿರುತ್ತದೆ. ಹೀಗಿರುವಲ್ಲಿ ಚಿತ್ತಸಂಸ್ಕಾರದಿಂದ, ವಯೋಪರಿಣತಿಯಿಂದ ಪ್ರಣಯವು ಹೇಗೆ ಪರಮ ಪೂಜ್ಯವೆನ್ನಿಸಿ ಅದೂ ಸಹ ಉತ್ತಮ ಜೀವನಕ್ಕೆ ಒಂದು ಪೋಷಕದ್ರವ್ಯವಾಗಬಲ್ಲುದೆಂಬುದನ್ನು ತಮ್ಮ ಜೀವನಾನುಭವದಿಂದ ಪ್ರತಿಪಾದಿಸಿರುವ ಡಿ.ವಿ.ಜಿ. ಅವರ 'ಶೃಂಗಾರ ಮಂಗಳಂ' ಎಂಬ ಪುಟ್ಟ ಪುಸ್ತಕ * ಕನ್ನಡ ಕಾವ್ಯ ಪ್ರಪಂಚಕ್ಕೆ ಒಂದು ಪ್ರಶಸ್ತವಾದ ಕೊಡುಗೆಯೇ ಸರಿ. ಡಿ.ವಿ.ಜಿ. ಅವರ ಇತರ ಕವನ ಸಂಕಲನಗಳಂತೆಯೇ ಇದೂ ಸಹ ವಿಷಯ ಗಾಂಭೀರ್ಯ. ಸಂವಿಧಾನ ಸೌಂದರ್ಯಗಳಿಂದ ಓದುವವರ ಮನಸ್ಸನ್ನು ತಣಿಸುವುದು ಮಾತ್ರವಲ್ಲದೆ. ವಿಚಾರ ಪ್ರಚೋದನೆಯನ್ನೂ ಉಂಟುಮಾಡುತ್ತದೆ. ಋಷಿವರ್ಯನಾದ ವಾತ್ಸ್ಯಾಯನನು ಕಾಮಶಾಸ್ತ್ರವನ್ನು ರಚಿಸಿ ಅದಕ್ಕೆ ಹೇಗೆ ಪ್ರಪಂಚದ ಮಾನ್ಯತೆಯನ್ನು ದೊರಕಿಸಿಕೊಟ್ಟು ಕೃತಾರ್ಥನಾಗಿದ್ದಾನೆಯೋ ಅದೇ ರೀತಿ ಡಿ.ವಿ.ಜಿ. ಅವರು ತಮ್ಮ ಈ ಪುಟ್ಟ ಪುಸ್ತಕದಲ್ಲಿ ಪ್ರಣಯದ ಸ್ವರೂಪವನ್ನು ಪ್ರಾಚ್ಯ ಮತ್ತು ಪಾಶ್ಚಾತ್ಯ ದೃಷ್ಟಿಗಳಿಂದ ಪರಿಶೀಲಿಸಿ, ಅದರ ಸತ್ವವನ್ನು ಹೃದಯಂಗಮವಾಗುವಂತೆ ಚಿತ್ರಿಸಿ. ಅದಕ್ಕೆ ತಾತ್ವಿಕ ಮೌಲ್ಯವನ್ನೇ ಗಳಿಸಿಕೊಟ್ಟಿರುತ್ತಾರೆ. ನಿರ್ವಿಕಾರದಿಂದ ವಿಚಾರ ಮಾಡಿ

---

* ಶೃಂಗಾರ ಮಂಗಳಂ–ಡಿ.ವಿ.ಜಿ. ಪ್ರಕಾಶಕರು: ಕಾವ್ಯಾಲಯ, ಮೈಸೂರು 9. F.c. 1/8. ಪು. 112.

ದಾಗ ಪ್ರಣಯದ ಪ್ರಸನ್ನತೆಯೇನು ಎಂಬುದನ್ನು ತಿಳಿಯಬಯಸುವವರಿಗೆ ಡಿ.ವಿ.ಜಿ. ಅವರ ಈ ಕೃತಿ ಅಪೂರ್ವವಾದ ಕೈಗನ್ನಡಿಯೇ ಸರಿ. ಬೇಲೂರಿನ ಶಿಲಾಬಾಲಿಕೆಯರ ಸೌಂದರ್ಯವನ್ನು ಮುಕ್ತಕಂಠದಿಂದ ಹಾಡಿ ಸತ್ಯ, ಸೌಂದರ್ಯಗಳ ಅಮರ ತತ್ವವನ್ನು ಸಾರಿ ಹೇಳಿದ ಅಂದಿನ ಡಿ.ವಿ.ಜಿ. ಅವರೇ ಇಂದಿಗೂ ಆ ಸಂದೇಶದ ಹಿರಿಮೆಯೇನು ಎನ್ನುವುದನ್ನು ಇಲ್ಲಿ ಉಜ್ವಲವಾಗಿ ಸಮೀಕರಿಸಿ ಸಫಲರಾಗಿರುತ್ತಾರೆ. 'ಉಮರನ ಒಸಗೆ'ಯಲ್ಲಿ ಕಂಡುಕೊಂಡ ಪ್ರೇಮದ ರಹಸ್ಯವನ್ನು ಇಲ್ಲಿನ ಬಿಡಿಬಿಡಿಯಾದ ಕಿರುಗವಿತೆಗಳಲ್ಲಿ ಪ್ರತ್ಯಕ್ಷವಾಗಿ ಸರ್ವರಿಗೂ ಧಾರೆಯೆರೆದು ಕೊಟ್ಟಿದ್ದಾರೆ. 'ಮಂಕುತಿಮ್ಮನ ಕಗ್ಗ'ದಲ್ಲಿ ತೋರಿಬರುವ ಅವರ ಜೀವನದರ್ಶನದ ಆ ವೈಶಾಲ್ಯ ವೈಶಿಷ್ಟ್ಯಗಳು ಇಲ್ಲಿನ ಕಾಮ-ಯಮರ ಪರಸ್ಪರ ಶಕ್ತಿತುಲನದಲ್ಲಿ ಸ್ವವಿದಿತವಾಗುವುದಲ್ಲದೆ. ಉದ್ದಕ್ಕೂ. ಹಾಸುಹೊಕ್ಕಾಗಿ ಹೆಣೆದುಕೊಂಡು ಬಂದಿರುವ ಹರಳಿನಂತಹ ಹೇಳಿಕೆಗಳು ಚೆನ್ನಾಗಿ ಪಳಗಿದ ಕಾವ್ಯಶೈಲಿ ಎಷ್ಟು ಉನ್ನತವಾಗಿರಬಲ್ಲುದೆಂಬುದನ್ನೂ ಮನವರಿಕೆಮಾಡಿಕೊಡುತ್ತವೆ. ಈ ತಲೆಮಾರಿನ ಕವಿಗಳಲ್ಲಿ ಡಿ.ವಿ.ಜಿ. ಅವರಂತೆ ಭಾಷಾಪ್ರಭುತ್ವ ಮತ್ತು ವಿಷಯ ಮರ್ಯಾದೆಯನ್ನು ಲಕ್ಷಿಸುವವರು ವಿರಳವೇ ಸರಿ. ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳ ಪರಿಪಕ್ವವಾದ ಪಾಂಡಿತ್ಯದಿಂದ ಅವರ ಕನ್ನಡ ಪ್ರತಿಭಾಶ್ರೀ ಪುಷ್ಟಿ ತುಷ್ಟಿಗಳಿಂದ ಕೂಡಿ ಇಂದಿನ ಕನ್ನಡ ಕಾವ್ಯಪ್ರಪಂಚದಲ್ಲಿ ವಿಶಿಷ್ಟವಾದ ಸ್ಥಾನವನ್ನು ಗಳಿಸಿ ಸಹೃದಯರ ಪ್ರಶಂಸೆಗೆ ಪಾತ್ರವಾಗಿದೆ.

ಪದ್ವಳಗಳಿಂದ ಶೋಭಿಸುತ್ತಿರುವ ಈ 'ಶೃಂಗಾರ ಮಂಗಳಂ' ಎಂಬ ಕಾವ್ಯವಾದರೂ ಯಾವ ಒಂದು ಕಥೆಯನ್ನಾಗಲಿ ಅವಲಂಬಿಸಿ ಬರೆದುದಲ್ಲ. ಅಷ್ಟೇ ಏಕೆ, ಇಲ್ಲಿನ ಪದ್ಯಗಳನ್ನು ಒಂದೇ ಸಿಟ್ಟಿನಲ್ಲಿ ಕುಳಿತು ಪ್ರಜ್ಞಾಪೂರ್ವಕವಾಗಿ ಬರೆದುದೂ ಅಲ್ಲ. ಕವಿಗಳ ಮಾತಿನಲ್ಲಿಯೇ ಹೇಳಬಹುದಾದರೆ. ವಯೋಧರ್ಮದಿಂದ 'ನಿದ್ದೆ ಬಾರದಾಗ. ಆಯಾಸವಾದಾಗ ತೋರಿಬಂದ ಭಾವನೆಗಳನ್ನು ಆಗ್ಗೆ ಒದಗಿಬಂದ ಮಾತಿನಲ್ಲಿ. ಆ ಸಮಯಕ್ಕೆ ಸಿಕ್ಕಿದ ಕಾಗದದ ಚೂರಿನಲ್ಲಿ ಆಗ ಕೈಗೆ ದೊರೆತ ಲೇಖನಿಯಿಂದ ಗುರುತು' ಮಾಡಿಕೊಂಡ ರಚನೆಗಳಿವು. ಇಲ್ಲಿನ ಪದಬಂಧ ವಿಷಯ ಮಹತ್ವಗಳನ್ನು ಮನಗಂಡರೆ ಕವಿಗಳ ಈ ಮಾತುಗಳನ್ನು ನಂಬುವುದೇ ಕಠಿಣ. ಕಂಡಕಂಡಂತೆ ತೋಚಿದ್ದನ್ನು ಗೀಚಿ ಚುಟುಕಗಳೆಂದು ಹೇಳಿ ತಲೆಚಿಟ್ಟು ಹಿಡಿಸುವ ಇಂದಿನ ಹಲವಾರು ಅಲ್ಪಚಾಪಲ್ಯದ ಕವಿಗಳ ಪ್ರಯತ್ನದಂತಲ್ಲದೆ. ಈ ಒಂದೊಂದು ಕಿರುಗವಿತೆಯೂ ಪುನಃಪುನಃ ಓದಿ ಮನನ ಮಾಡುವಂತಿದೆ. ಇದಕ್ಕೆ ಮುಖ್ಯ ಕಾರಣ ಇಲ್ಲಿ ನಿರೂಪಿತವಾಗಿರುವ ತಿರುಳು ಕವಿಗಳನ್ನು 'ಬಹುಕಾಲದಿಂದ ಮನಸ್ಸಿನಲ್ಲಿ ಮಿಡಿಯುತ್ತ ಉಳಿದುಕೊಂಡಿದ್ದ ಪ್ರಶ್ನೆಗೆ ಸಮಾಧಾನ' ರೂಪದಲ್ಲಿ ಅವರಿಗೆ ತೋರಿಬಂದ ಒಂದು ಗಹನವಾದ ಉತ್ತರವೇ ಇದು! ವಾಸ್ತವವಾಗಿ ಇದು ಪ್ರಣಯವನ್ನು ಕುರಿತ ಒಂದು ಆಳವಾದ ಚಿಂತನೆ: ಮರಣವನ್ನೂ ಮೆಟ್ಟಿಕೊಳ್ಳುವ ಒಂದು ಗಾಢವಾದ ಸಾಧನೆ.

'ಪೀಠಿಕಾ' ಪ್ರಕರಣದ ಸೂಚನಾಪದ್ಯದಲ್ಲಿ ಮಾಡಿರುವ ಈಶನ ಸ್ತುತಿಯೇ ಈ ಕೃತಿಯ ಮಹತ್ವಕ್ಕೆ ತಕ್ಕ ಮಂಗಲತೋರಣದಂತಿದೆ.

ಶ್ರೀಮದ್ವಿಶ್ವವಿಲಾಸಿ ಸರ್ವಹೃದಯಾಂತರ್ವಾಸಿ ಶೃಂಗಾರಿಕ
ಪ್ರೇಮಾಂಬೋಧಿತರಂಗಲಾಲಿತಸವಾಂದೋಲೋತ್ಸವೋಲ್ಲಾಸಿ ತಾಂ
ವ್ಯಾಮೋಹಾಂಬುದಕಾರಣಾಪಹರಣ ದ್ವಂದ್ವಾರ್ಕನೀಶಂ ಪರಂ
ಸೌಮಾಂಗಲ್ಯವ ಮಾಳ್ಕೆ ಭಕ್ತರಸಿಕರ್ಗ್ಗೆ ಸಚ್ಚಿದಾನಂದಮಂ

ಈ ಶಾರ್ದೂಲವಿಕ್ರೀಡಿತದ ವೈಭವ ನಮ್ಮ ಪುರಾತನ ಚಂಪೂ ಕವಿಯ ಕಲಾ ಕೌಶಲವನ್ನು ನಮ್ಮ ನೆನಪಿಗೆ ತಾರದೆ ಇರದು; ಡಿ.ವಿ.ಜಿ. ಅವರು ತಮ್ಮ ಪ್ರಾರಂಭದ ಕವನ ಸಂಕಲನಗಳಲ್ಲಿ ಒಂದಾದ 'ನಿವೇದನ'ದಲ್ಲಿಯೇ ಈ ಪ್ರಾಚೀನ ಛಂದೋಬಂಧ ಪ್ರೌಢಿಮೆಯನ್ನು ತಮ್ಮ ರಚನೆಗಳಲ್ಲಿ ತೋರಿರುವುದರಿಂದ ಇದು ಆರೋಪಿತ ಪಾಂಡಿತ್ಯದ ಕುರುಹಲ್ಲ. ಶೃಂಗಾರಸಮನ್ವಿತವಾದ ಪ್ರೇಮ ಸಮುದ್ರದ ತರಂಗಗಳ ಮೇಲೆ ಆಂದೋಲೋತ್ಸವದಿಂದ ಉತ್ಸಾಹದಾಯಕನಾಗಿ ಎಲ್ಲರ ಹೃದಯದಲ್ಲೂ ನೆಲೆಸಿ ಕಂಡುಬರುವ ದೇವತೆ ತಮ್ಮ ಈ ಕೃತಿಯನ್ನು ಮೆಚ್ಚಿಕೊಳ್ಳುವ ಭಕ್ತರಸಿಕರ್ಗೆ ಸಚ್ಚಿದಾನಂದನಾದ ಪರಮಾತ್ಮನ ಒಲವನ್ನು ಸಂಪಾದಿಸಿಕೊಡಲೆಂಬ ಪ್ರಾರ್ಥನೆಯ ಮೂಲಕವೇ ಕವಿಗಳ ಸದಾಶಯವೇನೆಂಬುದು ವ್ಯಕ್ತವಾಗುವುದು.

'ಕಂದಂಗಳಮೃತಲತಿಕಾ ಕಂದಂಗಳ್' ಎಂದು ಹರಿಹರನು ಬಹಳ ಹಿಂದೆಯೇ ಹೇಳಿದ್ದುಂಟು. ಅವನ ಆ ಮಾತನ್ನು ಡಿ.ವಿ.ಜಿ. ಅವರ ಇಂದಿನ ಕಂದಪದ್ಯಗಳಿಗೂ ನಾವು ಧಾರಾಳವಾಗಿ ಅನ್ವಯಿಸಬಹುದು. ಕವಿಗಳಿಗೆ ಪ್ರಾಚೀನ ಪರಂಪರೆಯಲ್ಲಿರುವ ಶ್ರದ್ಧೆ, ಭಕ್ತಿಗಳು ಅಪಾರ. ಹಲವಾರು ಶತಮಾನಗಳ ಕಾಲ ಬಾಳಿದ ಹಿರಿಯ ಚೇತನಗಳ ಅನುಭವರಾಶಿ, ಪರ್ವತೋಪಮವಾಗಿ ನಮಗೆ ಲಭಿಸುವಂತಿದ್ದರೆ ಅದನ್ನು ನಿರಾಕರಿಸುವವರು ಮೂಢರೇ ಸರಿ! ಅದಕ್ಕಾಗಿ ಕವಿಗಳು,

ಗುರುಗಳ್ ಪ್ರಾಕ್ತನರಾರ್ಯರ್
ಪರತತ್ವವ ತೋರ್ದರಾರ್ಷಶಾಸ್ತ್ರಕ್ರಮದಿಂ
ಪರಿಕಿಪಮಾ ಮಾ ದೀಪದ
ಕಿರಣದಿನೈಹಿಕದ ಜೀವನ ಪ್ರಶ್ನೆಗಳಂ

ಎಂದು ಪೂಜ್ಯರಿಗೆ ಪ್ರಪ್ರಥಮವಾಗಿ ನಮಸ್ಕರಿಸುವರು. ನಮ್ಮ ನಮ್ಮ ತಂದೆ ತಾತಂದಿರು ಕಟ್ಟಿದ ಮನೆ ಮಾರುಗಳು ಹೇಗೆ ನಮಗೆ ಅಮೂಲ್ಯವೋ, ಅವುಗಳನ್ನು ರೂಢಿಸಿ ಬೆಳೆಸುವುದು ಹೇಗೆ ಸತ್ಕುಲಪ್ರಸೂತರಾದವರ ಕರ್ತವ್ಯವೋ ಹಾಗೆಯೇ 'ಗುರುವಾಕ್ಯಾರ್ಥವ ನಾನಾ ಪರಿ ಯೋಜಿಸಿಕೊಳುವುದಲ್ತೆ ನಮಗಿಹ ಕಜ್ಜಂ' ಎಂದು ಮನವೊಪ್ಪುವಂತೆ ತಿಳಿಯ ಹೇಳುವರು. ಚತುರ್ವಿಧ ಪುರುಷಾರ್ಥಗಳಲ್ಲಿ 'ನಿರ್ಮಲ ಕಾಮವ ಬಗೆದರ್ ಮರ್ಮಜ್ಞರ್ ಋಷಿಗಳಲ್ತೆ ಲೋಕಹಿತಾರ್ಥರ್' ಎಂದು ನಮ್ಮ ಮುನಿ

ಸಮ್ಮತವಾದ ಪವಿತ್ರ ಪ್ರೇಮವನ್ನು ತಮ್ಮ ಕಾವ್ಯದ ವಿಷಯವನ್ನಾಗಿ ಆರಿಸಿಕೊಳ್ಳಲು ಸಹಕಾರವನ್ನು ನೀಡುವರು. ಧರ್ಮವೆಂಬ ಏಣಿಯು ತುತ್ತತುದಿ ಬ್ರಹ್ಮಪದವಿಯಾದರೆ ಅವರ ತಳವೇ ಲೋಕವೆಂದೂ, ನಿರ್ಮಲ ಕುಟುಂಬದ ಮೂಲಕ ಇಹಪರಗಳೆರಡನ್ನೂ ಸಾಧಿಸಬಹುದೆಂದೂ ಕವಿಗಳು ಸ್ಪಷ್ಟಪಡಿಸುವರು. ಜೀವವು ಆ ಬ್ರಹ್ಮದ ಒಂದು ಅಂಶ ಮಾತ್ರವಾಗಿರುವುದೆಂದೂ. ಶರೀರವು ಭೋಗಸಾಧನವೆಂದೂ ನಮ್ಮ ಹಿಂದಿನವರ ಸಿದ್ಧಾಂತಕ್ಕೆ ಅನುಗುಣವಾಗಿ ಬಿಡಿಸಿ ಹೇಳುವರು. ವಸ್ತುಸ್ಥಿತಿ ಹೀಗಿರಬೇಕಾದರೆ.

ತುಚ್ಛಂ ಜೀವನಮಲ್ಲಂ
ತುಚ್ಛಂ ಭೋಗೇಚ್ಛೆಯಲ್ತು ಮನಮುಚ್ಚವಿರಲ್
ಉಚ್ಚಪದಂ ಬ್ರಹ್ಮಪದಂ
ಸಚ್ಚಿತ್ಸುಖನಿಧಿಯ ಲೀಲೆ ಜೀವವಿಲಾಸಂ

ಎಂದು ತಮ್ಮ ಪ್ರತಿಪಾದ್ಯ ವಿಷಯಕ್ಕೆ ಸಮುಚಿತವಾದ ಭೂಮಿಕೆಯನ್ನು ಕಲ್ಪಿಸಿಕೊಳ್ಳುವರು. ರಸಾಲವೃಕ್ಷದಂತಿರುವ ಈ ವಿಶ್ವವೃಕ್ಷದಲ್ಲಿ ಬಿಡುವ ಫಲವೇ ಮೋಕ್ಷವೆನ್ನಿಸಿಕೊಳ್ಳುವುದರಿಂದ ‘ಮೋಕ್ಷದ ಫಲಮಂ ಸವಿವೊಡೆ ವೃಕ್ಷವ ನೀಂ ಮೊದಲು ಸೇವಿಸವನೀತಲದೊಳ್’ ಎಂದು ಕವಿಗಳು ಬೋಧಿಸುವರು. ಮನುಷ್ಯನು ಒಂಟಿಯಾಗಿ ಬಾಳಲಾರನು; ಆತನು ಸಮಾಜಜೀವಿ ಎಂಬ ಆಧುನಿಕರ ಅಭಿಪ್ರಾಯಕ್ಕೂ ಸರಿಹೋಗುವಂತೆ ‘ಲೋಕವೆ ತನ್ನಂ ತಾಂ ಪ್ರತ್ಯೇಕಿಸಿಕೊಂಡಿರ್ದು ಬಾಳ್ ಅಹಂಕೃತಿ, ಜನದೊಳ್ ಐಕ್ಯದಿ ಬಾಳ್ವಭ್ಯಾಸಂ ಶೋಕಾತೀತಕ್ಕೆ ಮಾರ್ಗಮಾತ್ಮವಿಕಾಸಂ’ ಎಂಬುದಾಗಿ ಅತ್ಯಂತ ಉನ್ನತವಾದ ರೀತಿಯಲ್ಲಿ ಚಿತ್ರಿಸಿರುವರು. ‘ಒಡಲೀ ಲೋಕಂ ಸ್ವಾಮಿಗೆ’ ಎಂಬ ತುಂಬುನಂಬಿಕೆಯನ್ನು ಒತ್ತಿ ಹೇಳಿ ‘ಲೋಕಮೆ ದೇವಾಯತನಂ ವೈಕಾರಿಕ ಜೀವಕೋಟಿಯೇ ದೇವತೆಗಳ್’ ಎಂದು ಸಮಸ್ತ ಜೀವರಾಶಿಗಳ ಮೇಲ್ಮೆಯನ್ನು ಬಹಳ ಪರಿಣಾಮಕಾರಿಯಾಗಿ ಶ್ರುತಪಡಿಸುವರು. ಪ್ರತಿಯೊಬ್ಬರೂ ಈ ಲೋಕಗತಿಯನ್ನು ತಮ್ಮ ತಮ್ಮ ಸುಕೃತಕ್ಕನುಸಾರವಾಗಿ ಅರ್ಚಿಸಿ ಕೃತಾರ್ಥರಾಗಬೇಕೆಂಬ ನೀತಿವಚನ ಪ್ರೀತಿಪೂರ್ವಕವಾಗಿ ಬಂದ ತಿಳಿವಳಿಕೆಯೇ ಸರಿ. ಜೀವಿಗಳ ಮುಖ್ಯಸತ್ವವೇ ಪ್ರಣಯವೆಂಬ ತತ್ವವನ್ನು ಕವಿಗಳು ಎಲ್ಲರಿಗೂ ಗ್ರಾಹ್ಯವಾಗುವಂತೆ ಚಿರಪರಿಚಿತವಾದ ನಿದರ್ಶನವೊಂದರ ಮೂಲಕ ಹೀಗೆ ನಿರೂಪಿಸಿರುವರು.

ಘನದಿಂ ಮಳೆನೀರ್ ನೆಲಕಂ
ನೆಲದಿಂ ಬೀಜಕ್ಕಮಿಳಿದು ಬೆಳೆಯಾಗಿಪವೋಲ್
ತನುವಿಂ ಮನಕಂ ಮನದಿಂ
ಪ್ರಣಯಂ ಜೀವಕ್ಕಮಿಳಿದು ಶುಭಫಲಮಕ್ಕುಂ

ಪ್ರಣಯದ ಬೆಳವಣಿಗೆಯಲ್ಲಿ ತನುಮನಗಳ ಪಾತ್ರವೇನೆಂಬುದನ್ನು ಇದಕ್ಕಿಂತಲೂ ಸರಳವಾಗಿ ಹೇಳುವುದು ಅಸಾಧ್ಯವೆನ್ನಿಸುತ್ತದೆ. ಈ ಆಲೋಚನೆಗೆ ಮತ್ತಷ್ಟು ಪೋಷಕವಾಗುವಂತೆ ಮುಂದೆಯೇ ಬರುವ ‘ಚೇತನಮಂ ಪೋಗಾಡಿಸಿ ಪ್ರಾಣಿಯ ಬಾಳ್ವೆಯನು ತರುವ ತಂತ್ರಂ ಪ್ರಣಯಂ’ ಎಂಬ ಹೇಳಿಕೆಯಂತೂ ಮಾಣಿಕ್ಯದಂತಿದೆ.

ಲೋಕವನ್ನು ತುಚ್ಛೀಕರಿಸದೆ ಹೇಗೆ ಬದುಕಬೇಕೆಂದು ದಾರಿ ತೋರುವರೋ ಹಾಗೆಯೇ ಭೋಗವನ್ನು ಅಲ್ಲಗಳೆಯದೆ ಅದನ್ನು ನಮ್ಮ ಸುಕೃತಕ್ಕೆ ಹೇಗೆ ಸಾಧನವನ್ನಾಗಿ ಬಳಸಿಕೊಳ್ಳಬಹುದೆಂಬುದನ್ನು ಈ ವಿಚಾರಮತಿಗಳಾದ ಕವಿಗಳು ಹೃದಯಸ್ಪರ್ಶಿಯಾಗಿ ಹೇಳಿರುತ್ತಾರೆ. 'ಭೋಜನದೊಳ್ ರೋಗಭಯಮೆನುತುಪ್ರೋಷ್ಯಮೆ ಜಾಗೃತನಲಸನದಿನ ಗಳಿಸಲಾಗದೆ ಬಲಮುಂ?' ಎಂದು ನಮ್ಮನ್ನು ಬಡಿದೆಬ್ಬಿಸುವಂತೆ ಪ್ರಶ್ನಿಸಿ. 'ರತಿಪತಿವಹ್ನಿಗಳಿಗೆಂತು ಶಮನೋಪಾಯಂ?' ಎಂದು ತರ್ಕಿಸಿ. ಕಡೆಗೆ 'ಹುತವಹನುಂ ರತಿಪತಿಯುಂ ಸತತ ಜಗನ್ಮೂಲ ಚೇತನಿಕರ್. ಅನಿವಾರ್ಯರ್. ಅತಿಯೊಳ್ ಭಯಂಕರರಾದರ್ ಮಿತಿಯೊಳ್ ಸುಖಕಾರರ್. ಅಮಲ ಸಂಸ್ಕಾರಕರರ್' ಎಂದು ತಮ್ಮ ಮತವನ್ನು ನಮ್ಮ ಮುಂದಿಡುವರು. ಅಲ್ಲದೆ 'ದಹನನ ಬಿಟ್ಟಿಹುದೆ ಜಗಂ, ತುಹಿನದೊಳೇನಿಹುದು ಜೀವನಮೆ ಚೇತನಮೇ?' ಎಂದು ಸೃಷ್ಟಿವ್ಯಾಪಾರವನ್ನೇ ದೃಷ್ಟಾಂತವಾಗಿ ನೀಡುವರು. ಮುಖ್ಯವಾಗಿ 'ಮಿತಸಂಸೇವೆಯುಪಾಯಂ' ಎಂದು ಸೂತ್ರಬದ್ಧವಾದ ಮಾತನ್ನು ಹೇಳಿ 'ಅತಿಯಾಗದ ಶಿಖಿ ಕಾಮರ್ ಹಿತರಪ್ಪರ್ ಜೀವಿಗಳ್ಗೆ ಬಾಧಕರಾಗರ್' ಎಂದು ದೃಢಪಡಿಸುವರು.

ಚಿತ್ತಪರಿಪಾಕಕ್ಕೆ ದುಃಖ ಹೇಗೆ ಸಹಾಯಕವೋ ಹಾಗೆಯೇ ಸುಖದಿಂದಲೂ ಜೀವನಕ್ಕೆ ತಕ್ಕ ಸಂಸ್ಕಾರ ಒದಗುವುದೆಂದು ಅಭಿಪ್ರಾಯಪಡುವರು. ಸುಖದುಃಖಗಳಿಂದ ಸದ್ಯದ ಫಲವು ಮಾತ್ರ ಲಭ್ಯವಾಗುವುದಲ್ಲದೆ ಅವುಗಳಿಂದ ಆ ತರುವಾಯವೂ ಸದ್ಗತಿಯುಂಟೆಂದು ಹೇಳಿ, 'ಪ್ರಣಯಮತೃಪ್ತಂ ಮನದೊಳ್ ವ್ರಣಮಪ್ಪುದು ಕೀವು ನೋವುಗಳನಾಗಿಸುತುಂ' ಎಂದು ಎಚ್ಚರಿಸುವರು. ಅದ್ದರಿಂದ ಪ್ರಣಯವನ್ನು ಸಂಯಮದಿಂದ ಅನುಭವಿಸುವುದೇ ಶ್ರೇಯಸ್ಕರವೆಂದು ಸೂಚಿಸುವರು. ಇಷ್ಟಾನಿಷ್ಟಗಳು ಕರ್ಮಫಲವಾಗಿರುವುದರಿಂದ ಅವು ಆತ್ಮವನ್ನು ಮುಟ್ಟವೆಂದು ತಿಳಿಯ ಹೇಳಿ 'ತಟ್ಟುವುದೇಂ ರವಿಯನಿಳೆಯ ಕಶ್ಮಲದೋಷಂ?' ಎನ್ನುವರು.

ಜನ್ಮಜನ್ಮಾಂತರಗಳ ಋಣವಿಶೇಷವೇ ಪ್ರಣಯರೂಪದಿಂದ ಜೀವಜೀವಿಗಳನ್ನು ಒಡಗೂಡಿಸುವುದೆಂಬ ಕಲ್ಪನೆ ತುಂಬ ಅಮೋಘವಾದದ್ದು. ಒಂದೇ ನೊಗವು ಎರಡು ಎತ್ತುಗಳನ್ನೂ. ಒಂದೇ ರಥವು ಎರಡು ಚಕ್ರಗಳನ್ನೂ ಹೇಗೆ ಪರಸ್ಪರವಾಗಿ ವರ್ತಿಸುವಂತೆ ಪ್ರೇರಿಸುವುವೋ ಹಾಗೆಯೇ ದಾಂಪತ್ಯವು 'ದ್ವಂದ್ವಕ ಜೀವಂಗಳ ದೃಢವೊಂದಾಗಿಪ ಕುಶಲ ಸಾಧನಂ' ಎಂದು ಮನಃಪ್ರಿಯವಾಗುವಂತೆ ತಿಳಿಸುವರು. ಅಹಂಕಾರನಿರಸನಕ್ಕೆ ಪ್ರಣಯವೂ ಒಂದು ಸಾಧನವಾಗಬಲ್ಲುದೆಂದು ಸಮರ್ಥಿಸಿ. 'ಕಾಮನನೀಶಂ ದಹಿಸಲ್ ಕ್ಷೇಮಮದಾರ್ಗ್ಗಾಯ್ತು ಸತ್ತನೇನಾ ಕಾಮಂ? ಪ್ರೇಮದ ಪ್ರಸರಂಕುಂಠಿತದೆ ಸೋಮನೆ ತಾನಾದನಲ್ತೆ ಗೃಹಿಗಳಿಗಾದ್ಯಂ' ಎಂದು ಸುಪ್ರಸಿದ್ಧವಾದ ಪೌರಾಣಿಕ ಸಂದರ್ಭವನ್ನೇ ಉದಾಹರಿಸುವರು. ಯಾವ ಜೀವಿಯೇ ಆಗಲಿ ಒಂಟಿಯಾಗಿ ನವೆಯುವುದಕ್ಕಿಂತಲೂ ಎಲ್ಲರೊಂದಿಗೂ ಬೆರೆತು ಬಾಳುವುದೇ ಆತ್ಮವಿವೇಕದ ಲಕ್ಷಣವೆನ್ನುವರು. 'ಯಾತ್ರಿಕನ

ಮಾರ್ಗಪಾರ್ಶ್ವದ ಸತ್ಕಾರಾಮಂಗಳೊತ್ತಣಿಕೆ ಕರೆಯುತಿರಲ್ ಶಾಸ್ತ್ರಪದಂ ದೂಷಿಪುದೇಂ?' ಎಂದು ಗಹನವಾದ ಪ್ರಶ್ನೆಯನ್ನೇ ಎತ್ತಿ, 'ಕ್ಷೇತ್ರಪ ತಾಂ ಮರೆಯದುಂಡ ಸವಿ ಪುಷ್ಟಿಕರಂ' ಎಂದು ಅತ್ಯಂತ ಸಾಧುವಾದ ಹಿತೋಕ್ತಿಯನ್ನು ಹೇಳುವರು. ಜೀವನು ತನ್ನ ಮುಖ್ಯಗುರಿಯನ್ನು ಮರೆಯದಂತೆ ತನ್ನ ಪಾಲಿಗೆ ಪರಮಾತ್ಮನು ಅನುಗ್ರಹಿಸಿರುವ ಸುಖವನ್ನು ಮಿತವರಿತು ಸವಿಯುವುದು ಸರ್ವಥಾ ಅಪರಾಧವಲ್ಲವೆಂಬ ತಿಳಿವು ಯಾರಿಗಾದರೂ ನಲಿವನ್ನು ನೀಡುವಂತಹುದು. 'ಜೀವನ್ನೇಹಾಭ್ಯಾಸಮೆ ಕೈವಲ್ಯಾತ್ಮಾನುಭವಕೆ ಸುಲಭೋಪಾಯಂ', 'ಭಗವಂತನವಯವಾಂಶಂ ಜಗಮೆನ್ನುತೆ ಬಗೆದು ಭುಜಿಸಿ ಬಾಳ್ವಂ ಧನ್ಯಂ', 'ಭಗವದ್ಗೃಹಮಿದು ನೀನೂಳಿಗೆಯೆಂಬುದನರಿತು ಬಾಳೆ ಹಸದಂ ಭೋಜ್ಯಂ' ಎಂಬ ಒಂದೊಂದು ವಾಕ್ಯವೂ ಧರ್ಮವಿರುದ್ಧವಲ್ಲದ ಭೋಗದ ಮೌಲ್ಯವೇನೆಂಬುದನ್ನು ಒತ್ತಿ ಒತ್ತಿ 'ಶೃಂಗಾರಮಖಿಲ ಸೃಷ್ಟಿಯ ಸಂಘಟಕಂ' ಎಂಬ ಮನ್ನಣೆಗೆ ಪಾತ್ರವಾಗಿರುವುದು. ಅದರ ಸವಿಯನ್ನು ಹದವರಿತು ಅನುಭವಿಸಿದ್ದೇ ಆದರೆ ಅದೇ 'ನಿಸ್ಸಂಗಕೆ ಜೀವವನು ಪಕ್ವಬಡಿಸುವುಪಾಯ'ವೂ ಆದೀತೆಂದು ಕವಿಗಳು ನೀಡುವ ಆಶ್ವಾಸನೆ 'ಭೋಗದ ತುತ್ತತುದಿಯೇ ವೈರಾಗ್ಯ' ಎಂಬ ನಂಬಿಕೆಯನ್ನೇ ನಮ್ಮ ನೆನಪಿಗೆ ತರುತ್ತದೆ.

ಈ ಪ್ರಥಮದಳದಲ್ಲಿ ಪ್ರಣಯದ ಪ್ರಾಧಾನ್ಯವನ್ನು ಬಗೆಬಗೆಯಾಗಿ ತಿಳಿಯಪಡಿಸಿ, ಜಗತ್ತಿಗೂ ಜೀವಿಗೂ ಇರುವ ಸಂಬಂಧವನ್ನು ನಿರ್ದೇಶಿಸಿ, ಆ ಮೂಲಕ ಬದುಕು ಹೇಗೆ ಹಸನಾಗಬಹುದೆಂಬುವನ್ನು ಕವಿಗಳು ಮನವರಿಕೆಮಾಡಿಕೊಟ್ಟಿರುವರು.

2

ಪೀಠಿಕಾಪ್ರಕರಣದಲ್ಲಿ ತಿಳಿಯಪಡಿಸಿರುವ ಕವಿಗಳ ಅಭಿಪ್ರಾಯಕ್ಕೆ ನಮ್ಮ ಮಹರ್ಷಿಗಳೂ, ಪಾಶ್ಚಾತ್ಯಕವಿಗಳೂ ಎಷ್ಟರಮಟ್ಟಿಗೆ ಬೆಂಬಲವಾಗಿದ್ದಾರೆಂಬುದನ್ನು ವಿವರಿಸುವುದೇ ಮುಂದಿನ ನಾಲ್ಕುದಳಗಳ ಸಾರಸರ್ವಸ್ವ. ಕೇವಲ ಭಾವಾವೇಶದಿಂದ ಹೊರಹೊಮ್ಮುವ ಕಾವ್ಯಕ್ಕೂ, ಚಿಂತನದಿಂದ, ಮಂಥನದಿಂದ ನವನೀತದಂತೆ ತೇಲಿಬರುವ ಕಾವ್ಯಕ್ಕೂ ಇರುವ ಅಂತರವೇನೆಂಬುದನ್ನು ಈ ಮುಂದಿನ ವಿಭಾಗಗಳಲ್ಲಿ ಸಹೃದಯರು ಮನಗಾಣಬಹುದು.

ಸೃಷ್ಟಿಯಲ್ಲಿನ ಸಮಸ್ತ ಜೀವಿಗಳನ್ನೂ ನಿಯಂತ್ರಿಸುವ ಪ್ರಣಯದ ಮೂಲವನ್ನು ಅರಿಯಲು ಹೊರಟ ಕವಿಗಳು ಜಗತ್ತಿನ ಮೂಲವನ್ನೇ ಮೊದಲು ಚಿತ್ರಿಸತೊಡಗುವರು. 'ಮೊದಲಿದ್ದುದೇನು ?' ಎಂಬ ಪ್ರಶ್ನೆ ಎಷ್ಟು ಸರಳವೋ ಅಷ್ಟೇ ಜಟಿಲವೂ ಆಗಿದೆ. ಕಂದಪದ್ಯದ ಕಂಪನ್ನೂ ಇಂಪನ್ನೂ ಹಿಂದಿನ ಪ್ರಕರಣದಲ್ಲಿ ಮೆರೆದ ಕವಿಗಳು ಇಲ್ಲಿ ಆಧುನಿಕ ಸರಳರಗಳೆಯ ಸರಣಿಯಲ್ಲಿ ತಮ್ಮ ಅಮೂಲ್ಯ

ವಾದ ಅಭಿಪ್ರಾಯಗಳನ್ನು ನಿರರ್ಗಳವಾಗಿ ನಿರೂಪಿಸಿರುವರು. ಭಾಷೆ ಮತ್ತು ಭಾವಗಳು ಪರಸ್ಪರವಾಗಿ ಬೆರೆತರೆ ಎಷ್ಟು ಹಿತಕರವಾಗಿರಬಲ್ಲುದೆಂಬುದನ್ನು ಇಲ್ಲಿ ಅನುಭವಿಸಬಹುದು. ತಂತ್ರ ಹಳೆಯದಾಗಲಿ, ಹೊಸದಾಗಲಿ, ಹೇಳುವ ಕವಿ ಕುಶಲನಾಗಿದ್ದರೆ ಅದು ತನಗೆ ತಾನಾಗಿಯೇ ಯಶಸ್ವಿಯಾಗಬಲ್ಲುದು.

ವೇದಾಂತಿಯಾದವನು ಕೇಳುವ ಪ್ರಶ್ನೆಯನ್ನೇ ಕವಿಯಾದವನು ಕೇಳಿಕೊಂಡು ಉತ್ತರಿಸಿದಾಗ ಅದು ಎಂಥ ಕಾವ್ಯವಾಗಬಹುದೆಂಬುದನ್ನು ಈ ವಿಭಾಗದ ಮೊದಲಲ್ಲಿಯೇ ಕಾಣಬಹುದು.

ಏನು ಮೊದಲೆಲ್ಲಕಂ ? ಮೊದಲಿದ್ದುದೇನು ?
ಏನು ಸೃಷ್ಟಿಯೊಳಾದಿ ? ಏನದರ ಮೂಲಂ ?
ಬಾನಿತ್ತೆ ನೆಲನಿತ್ತೆ ನೀರೆಲರ್ ಬೆಳಕಿತ್ತೆ
ಕಾಣಲ್ಕದೇನಿತ್ತು ? ಕಾಣಲಿದ್ದವರಾರ್ ?

ಇದೀಗ ಪ್ರಶ್ನೆಗಳ ಸುರಿಮಳೆ. ಉತ್ತರಿಸಲು ಎಂಥವರಾದರೂ ತತ್ತರಿಸುವಂತಿದೆ. ಆದರೆ ಜಿಜ್ಞಾಸುವಾದ ಕವಿ ಋಷಿದೃಷ್ಟಿಸದೃಶವಾದ ತನ್ನ ಅಂತಃಚಕ್ಷುವಿನಿಂದ ಇದಕ್ಕೆ ಉತ್ತರವನ್ನು ಕಂಡುಕೊಳ್ಳುವನು.

ರೂಪಿಲ್ಲ, ರಂಗಿಲ್ಲ, ನೋಳ್ಪವನುಮಿಲ್ಲ
ತಾಪಿಲ್ಲ ತಣುವಿಲ್ಲ ಸೋಕುವನುಮಿಲ್ಲ
ಏನಿತ್ತೊ ಏನಿಲ್ಲವೊ ತಿಳಿಯಲರಿದು
ನಾನು ನೀನೆಂದೆಂಬ ಭಾವನೆಗಮರಿದು
ಎಲ್ಲ ಶೂನ್ಯಪ್ರಾಯಮೆಲ್ಲಿಮುಮಮೇಯಂ
ಎಲ್ಲ ಸತ್ತಾಮಾತ್ರಮೆಲ್ಲಮುವ್ಯಕ್ತಂ
ಇದು ಸೃಷ್ಟಿಪೂರ್ವ ಶುದ್ಧಬ್ರಹ್ಮವೇಕ
ಉದಿಸಿತದರಿಂ ಲೋಕ ಸಂತತಿಯನೇಕ

ಶುದ್ಧಬ್ರಹ್ಮನ ಈ ನೀರವ ನಿಷ್ಪಂದ ನಿಶ್ಚಲಿತ ಸ್ಥಿತಿ ತುಸುಮಾತ್ರವೇ ಅಲುಗಲು ಎಲ್ಲವೂ ಮಾರ್ಪಟ್ಟಿತು.

ಅಲುಗಿತದು ಚಲಿಸಿದಂತಾಯ್ತು ನಿಶ್ಚಲಿತದಲಿ
ಮಲಗಿ ನಿದ್ರಿಪನೆಡದೆ ಬಲಕೆ ಹೊರಳಿದವೊಲ್
ನಿಶಿ ನಿದ್ದೆಬಿಟ್ಟು ಕಣ್ತೆರೆದಂತೆ ಹೊಳಪಾಯ್ತು
ಮಸಕಿನಲಿ ನಸುಬೆಳಕು ಹೊಂಬೆಳ್ಪುಕೆಂಪು
ವರ್ಣವರ್ಣಗಳಾಗಿ ರಂಗು ನೂರ್‌ನೂರಾಯ್ತು
ಪೂರ್ಣದಲಿ ಖಂಡಗಳು, ಗಾಢದಲಿ ಛಿದ್ರ

ಈ ಬ್ರಹ್ಮಚಲನದೊಂದಿಗೆ ಆಕಾರ ಊಕಾರ ಮಕಾರತ್ರಯ ಸಮನ್ವಿತವಾದ ಓಂಕಾರ ಕೇಳಿ ಬಂದಂದೇ ತಡ, ಸೃಷ್ಟಿ ಅವತರಿಸಿತು. ಆ ಮೂಲನಾದವೆ ವಿರಾಡೆನಿಸಿ

ಆದಿಯೂ ಅನಾದಿಯೂ ಆದ ಪುರುಷನ ಅಂತಃಶಕ್ತಿಯೇ ಜಗತ್ಪ್ರಕೃತಿಯಾಗಿ ಪ್ರಕಾಶಿತವಾಯಿತು. ನಮ್ಮ ಆರ್ಷೇಯ ಜ್ಞಾನದಿಂದ ಸಂಸ್ಕೃತವಾದ ಮನಸ್ಸು ಕಾವ್ಯಕ್ರಿಯೆಗೆ ತೊಡಗಿದಾಗ ಅದು ಎಷ್ಟು ಭವ್ಯವಾಗಿ ಪರಿಣಮಿಸಬಲ್ಲುದೆಂಬುದನ್ನು ಡಿ.ವಿ.ಜಿ. ಅವರ ಈ ನಿರೂಪಣೆಯಿಂದ ಗ್ರಹಿಸಬಹುದು. ಮಸಕುಮಸಕಾದ ಸೃಷ್ಟಿಯ ಉದಯವನ್ನು ಸಹ ತಮ್ಮ ಸರಳವಾದ ಮಾತುಗಳಲ್ಲಿಯೇ ವಿಷಯಪ್ರೌಢಿಮೆಗೆ ಊನವಾಗದಂತೆ ಇಲ್ಲಿ ಚಿತ್ರಿಸಿರುವುದು ಶ್ಲಾಘ್ಯವಾದುದು.

ಆ ಆದಿಪುರುಷನಲ್ಲಿ ಒಂದೊಂದಾಗಿ ಆಶೆ ಆಕಾಂಕ್ಷೆಗಳು ಅಂಕುರಿಸಲು ಆತನು ಅಂತರ್ಮುಖಿಯಾಗಿ ಚಿಂತಿಸತೊಡಗಿದನು. 'ಏಕಾಕಿನಿಲಲೆ ? ಸಂಗಾತಿಯನು ಕೊಳಲೆ? ಸಾಕೆ ಸಪ್ಪೆಯ ಬಾಳು ? ಬೇಕೆ ಸಾಹಸಿಕೆ ? ಒರ್ವನಿರೆ, ನಾನೊಡೆಯನಾದೊಡಾರೆ-ನ್ನಾಳು ? ಇರ್ವರಾಡಲ್ಪಹುದು ಕಾದಾಡಲುಂ ಬಹುದು, ಒಂಟಿತನ ನೀರಸತೆ, ಇರ್ವರಿರೆ ವಿರಸ, ಎಂತಹುದು ಬಾಳ್ವೆಗೊಡನಾಡಿಯಿಂ ಸರಸ ?' ಎಂದು ಪೂರ್ವಾಪರಗಳನ್ನು ಕುರಿತು ಚೆನ್ನಾಗಿ ತರ್ಕಿಸಿ,

ಮಂದಿಯೆರಡೊಂದು ಬಾಳ್—ಇದು ತರ್ಕಸಿದ್ಧಾಂತ
ದ್ವಂದ್ವ ತನುವೊಳ್ ಜೀವವೊಂದೆನಿಸಬೇಕು
ಮಂದಿಯೆರಡಿರೆ ಸರಸಂ, ಒಂದಾಗಲಭಯಂ
ದ್ವಂದ್ವದಿಂ ಕೇಳಿಯದ್ವಯದಿಂದೆ ಶಾಂತಿ.

ಎಂದು ನಿರ್ಧರಿಸುವನು. ಆದಿಪುರುಷನ ಈ ಶುಭ ನಿರ್ಧಾರವೇ ಪುಂಸ್ತ್ರೀ ಜೀವರಾಶಿಗೆ ಮೂಲಬೀಜವಾಯಿತು.' ಪುಂಸ್ತ್ರೀ ವಿಲಕ್ಷಣಾಕರ್ಷಣಾತ್ಮಕ ದೇಹಯಂತ್ರ ಯುಗ್ಮದ ಜಾತಿಜಾತಿಗಳನಂತಂ ಸೃಷ್ಟಿಗೈದ ಜಗತ್ಸೃಷ್ಟಿಕರ್ತನಾ ತಾಂ ಪ್ರವಿಷ್ಟನಾದಂ ಜಂತುಜಾತಿಕೋಟಿಗಳೊಳ್, ಇಂತಾಯ್ತು ತಂತುಮಯಮೆಲ್ಲಂ ಪ್ರಪಂಚಂ, ಅಂತಸ್ಥ ಮೆಲ್ಲರಲಿ ಸೃಷ್ಟಿಕರ್ತಾಂಶಂ,' ಎಂಬ ವರ್ಣನೆಯಲ್ಲಿ ಎಂತಹ ವೈಜ್ಞಾನಿಕ ದೃಷ್ಟಿ ಹುದು ಗಿದೆಯೆಂಬುದನ್ನು ಪರಿಶೀಲಿಸಬಹುದು. ಅವಿಭಾಜ್ಯದ ವಿಭಜನೆಯಿಂದ ಜೀವರಾಶಿ ಉತ್ಪತ್ತಿಯಾಯಿತೆಂಬ ವೈಜ್ಞಾನಿಕ ತತ್ತ್ವಕ್ಕೂ ಮಿಗಿಲಾಗಿ ಇಲ್ಲಿನ ಜಿಜ್ಞಾಸೆ ಋಷಿವಾಕ್ಯ ಸಮ್ಮತವೆನ್ನಿಸಿ ವಿಚಾರಪ್ರದವಾಗಿದೆ. ಪ್ರಣಯದ ರಹಸ್ಯವನ್ನು ಭೇದಿಸಲು ಹೊರಟ ಕವಿಗಳು ಅದರ ಮೂಲವನ್ನು ಇಲ್ಲಿ ಗುರುತಿಸಿ, ಅದರ ಪ್ರಭಾವವೆಂತಹುದೆಂಬು ದನ್ನು ಮುಂದೆ ಘೋಷಿಸುವರು.

ಲೈಂಗತಂತ್ರವ ಬಿಟ್ಟೊಡೆಂತು ಜಗವಿರ್ಪ್ಪಂ?
ಶೃಂಗಾರವಿರದ ಬಾಳೆಂತು ಮೆಚ್ಚಿಕ್ಕುಂ?
ಬ್ರಹ್ಮಸಂಕಲ್ಪ ಸಂಸಾಧಕಂ ಕಾಮಂ
ಕಾಮರಾಜ್ಯಂ ಬ್ರಹ್ಮರಾಸಿಕ್ಯ ವಿಭವಂ.
ಸೃಷ್ಟಿಯೊಳ್ ಕಾಮಮಿಂತೆಲ್ಲಕಂ ಪ್ರಥಮಂ
ಇಷ್ಟನೆಲ್ಲರ್ಗ್ಗ ಮೆಲ್ಲರೊಳಿಷ್ಟ ಮೂಲಂ

ಇಲ್ಲಿನ ಒಂದೊಂದು ನುಡಿಯೂ ಹೃದಯವನ್ನು ಮಿಡಿಯುವಂತಿವೆ. ಶಕ್ತಿಯುತನಾದ ಕವಿಯ ಕೈಯಲ್ಲಿ, ಸಂಸ್ಕಾರದಿಂದ ಪರಿಶುದ್ಧವಾದ ಮನಸ್ಸುಳ್ಳ ರಸಿಕನ ಕೈಯಲ್ಲಿ ಎಂತಹ ಗುಹ್ಯವಸ್ತುವೂ ಹೇಗೆ ಗ್ರಾಹ್ಯವಾಗಬಲ್ಲುದೆಂಬುದಕ್ಕೆ ಇದು ಉತ್ತಮ ನಿದರ್ಶನ. ಮನಶ್ಶಾಸ್ತ್ರದ ಮೊಗವಾಡವನ್ನಿಟ್ಟುಕೊಂಡು ಜುಗುಪ್ಸಾವಹವಾದ ತಮ್ಮ ಚಿತ್ತವಿಕಾರಗಳನ್ನೂ ಮನಸ್ಸಿನ ಮಾಲಿನ್ಯಗಳನ್ನೂ ಹಸಿಹಸಿಯಾಗಿ ಮುಂದಿಡುತ್ತಿರುವ ಇಂದಿನ ಕೆಲವು ಕವಿಗಳ ಸರಣಿಗೂ, ನಮ್ಮ ಋಷಿವಾಕ್ಯಗಳ ಅಂತರ್ಯವನ್ನು ಪರಿಗ್ರಹಿಸಿ ಪರಿಪಕ್ವವಾದ ಮನಸ್ಸಿನಿಂದ ಕಾಮದ ಪ್ರಭುತ್ವವನ್ನು ಪ್ರಸ್ತಾಪಿಸಿರುವ ಮೇಲಿನ ಹಿರಿಯಕವಿಗಳ ಸಂವಿಧಾನಕ್ಕೂ ಎಷ್ಟು ಅಂತರವಿದೆಯೆಂಬುದನ್ನು ವಿಚಾರಮತಿಗಳಾದ ವಿಮರ್ಶಕರು ಕಾಣಬಹುದು. ಸ್ವಾನಂದದ ಸವಿಗಾಗಿಯೇ ಬ್ರಹ್ಮನು ತನ್ನ ಒಡಲಿನಿಂದ ನಾನಾತ್ಮವನ್ನು ಪಡೆದು ರಮಿಸುವನು. ಈ ಲೀಲೆಯ ಸಲುವಾಗಿಯೇ ಲೈಂಗತಂತ್ರವು ಆತನಿಂದಲೇ ನಿರ್ಮಾಣವಾಯಿತು, ಶೃಂಗಾರರಸಾನಂದವೇ ಈ ಲೀಲೆಯ ಪರಮಲಕ್ಷ್ಯ.

ಈ 'ಬ್ರಹ್ಮಭೋಜನಕೆ ತತ್ಪ್ರಕೃತಿ ನಾನಾದ್ರವ್ಯ ಸಂಮಿಶ್ರದಿಂ ಪಚಿಸಿದೂಟ ಸೌಂದರ್ಯಂ'. ಶೃಂಗಾರದ ಸಂವರ್ಧನೆಯಲ್ಲಿ ಸೌಂದರ್ಯದ ಪಾತ್ರ ತುಂಬಾ ಹಿರಿದಾದುದು. ಸ್ತ್ರೀ-ಪುರುಷರ ಸಮಾಗಮಕ್ಕೆ ಕಾಮನು ಕೈಗೊಳ್ಳುವ ಕಾರ್ಯದಲ್ಲಿ ಶೃಂಗಾರ ಮತ್ತು ಸೌಂದರ್ಯಗಳು ಪರಸ್ಪರ ಪೋಷಕದ್ರವ್ಯಗಳಂತೆ ವರ್ತಿಸುತ್ತವೆ. 'ಶೃಂಗಾರ-ರವಿಕಿರಣದಿಂ ಹೃದಯ ಹಿಮ ಕರಗಿ ಗಂಗೆವೋಲ್‌ಪರಿದು ಬಹುಜನಕೆ ಶುಭಮಕ್ಕುಂ' ಎಂಬ ಕವಿಗಳ ಉಕ್ತಿ ತುಂಬ ಅರ್ಥಗರ್ಭಿತವಾದದ್ದು. ಸಂಸಾರ, ಸಮಾಜ, ರಾಷ್ಟ್ರ ಮೊದಲಾದ ಸಮಸ್ತ ಸಾಮೂಹಿಕ ಜೀವನವು ಈ ಶೃಂಗಾರದ ಪ್ರೇರಣೆಯಿಂದ ನಡೆಯುತ್ತದೆ, ದಾಂಪತ್ಯದ ನಯವಾದರೂ ಏನು ?

ಪೆಣ್ಣರ್ಧ ಗಂಡರ್ಧಮೊಂದಲದು ಪೂರ್ಣೈಕ
ಕಣ್ಣೆರಡರೊರ್ನೋಟವಿರ್‍ದ್ಬಾಯ ನುಡಿತ
ಒಂದಡಿಗೆಯಿಂದಿರ್ವರೂಟ ದಾಂಪತ್ಯನಯ
ಒಂದು ಮೂಗೆರಡುಸಿರನುಸಿರುವ ಪ್ರಾಣ
ಅನ್ಯೋನ್ಯರುಚಿತೆಯಿನನೇಕನಹುದೇಕ
ಭಿನ್ನಗಳ್ ಅಭಿನ್ನಂಗಗಳ್ ಅಂಗಜನ ಕೃಪೆಯಿಂ.

ಒಂದು ಎರಡಾದ ಮೇಲೆ, ಆ ಎರಡೂ ಮತ್ತೆ ಒಂದಾಗಿ ಬಾಳುವಂತೆ ನಿರ್ವಹಿಸುವುದೇ ದಾಂಪತ್ಯ. ಈ ಕ್ರಿಯೆಯಲ್ಲಿ ಶೃಂಗಾರದ್ದೇ ಮೇಲುಗೈ. ಇದಕ್ಕಾಗಿಯೇ ಕವಿಗಳು 'ಅಂತಹುದು ಶೃಂಗಾರಜೀವಕೆ ಸದುಪಕಾರ, ಜಂತುಮಲಗಳ ತೊಳೆವ ತೀರ್ಥಕಾಸಾರ' ಎಂದು ಅದಕ್ಕೆ ಉನ್ನತವಾದ ಸ್ಥಾನವನ್ನು ಕೊಟ್ಟಿದ್ದಾರೆ. ಸ್ತ್ರೀಪುರುಷರಿಬ್ಬರೂ ಒಡಗೂಡಿ ಬಾಳುವ ತತ್ತ್ವವನ್ನೂ ಮಹತ್ತ್ವವನ್ನೂ ಕವಿಗಳು ಮೇಲಿಂದ ಮೇಲೆ ಮನಸೆಳೆಯುವಂತೆ ಪ್ರತಿಪಾದಿಸಿರುತ್ತಾರೆ.

ಇರ್ವರಿಂದೊಂದು ಬಾಳ್, ಒಂದಡಿಗೆಯೀರೂಟ
ನಿರ್ವಹಿಸಲಿಂತಭಯ ಸರಸಮಿರ್ವರ್ಗಂ
ಲಿಂಗಯುಗ್ಮತೆಯದಕೆ, ದಾಂಪತ್ಯವದರಿಂದೆ,
ಶೃಂಗಾರಮಿರ್ವರಂ ಬಿಗಿವ ಸುಮಮಾಲೆ.
ಸೌಂದರ್ಯಮದನು ಪೋಷಿಪ ಸುಧಾರಸವೃಷ್ಟಿ
ದ್ವಂದ್ವದೇಕೀಕಾರಕ ಸ್ಪರ್ಶರತ್ನಂ
ಪ್ರೇಮಲಾವಣ್ಯ ಕಾಮುಗಳ ಜನನಿ ಪ್ರಕೃತಿ
ರಾಮಣೀಯಕಮಾತೆ, ಸದ್ವಸ್ತುಜಾತೆ.

ಈ ಪ್ರಕೃತಿ ಮಾಯಾವಿಯಲ್ಲವೇ ? ಆಕೆ ಭೋಗಾಪೇಕ್ಷೆಯನ್ನು ಕೆರಳಿಸಿ ನಮ್ಮ ಅಧ್ಯಾತ್ಮಿಕ ಶ್ರೇಯಸ್ಸಿಗೆ ಭಂಗತರುವಳಲ್ಲವೇ ? ಎಂಬ ಪ್ರಶ್ನೆಗಳಿಗಾದರೂ ಕವಿಗಳು ಬಹಳ ಒಪ್ಪುವಂತಹ ಉತ್ತರವನ್ನೇ ಕೊಡುವರು. ಮುಕ್ತಿ ಸಂಪಾದನೆಗೆ ಭಕ್ತಿ, ವಿರಕ್ತಿಗಳು ಹೇಗೆ ಸಾಧನಗಳೋ ರಕ್ತಿಯೂ ಸಹ ಹಾಗೆಯೇ ನೆರವಾಗಬಲ್ಲುದು. ಅದಕ್ಕಾಗಿ 'ಹೆದರದಿರ್, ಪ್ರಕೃತಿ ಕೇಡಿಗಳಲ್ಲ, ಪಗೆಯಲ್ಲ, ಎದುರಿಸವಳನು ನಯದೆ. ದುಷ್ಟೆಯುವಳಲ್ಲ. ವಿವಿಧ ವಸ್ತುಗಳ ಭಂಡಾರನಾಯಕಿಯುವಳು, ಸುವಿವೇಕವುಳ್ಳ ರಿಂಗವಳಿಂ ಸಹಾಯಂ' ಎಂದು ಭರವಸೆಯನ್ನು ಕೊಡುವರು. ಒಳ್ಳೆಯುದು ಕೆಟ್ಟದ್ದನ್ನು ಬೇರ್ಪಡಿಸಿ ನೋಡುವ ವಿವೇಕ ನಮ್ಮಲ್ಲಿದ್ದರೆ ಸಾಕು. 'ಧಾರ್ಮಿಕನ ಶೃಂಗಾರ ಜೀವಕ್ಕೆ ಸಂಸ್ಕಾರ, ಮರ್ಮವರಿತ ಪ್ರೇಮವಾತ್ಮವಿಸ್ತಾರ' ಎಂಬ ನಿಲುವಿಗೆ ಬಂದು ನಿಲ್ಲುವರು. ನಮ್ಮ ಅಂತಸ್ಸತ್ವ ಮಲಿನವಾಗದೆ ಬೆಳೆದದ್ದೇಆದರೆ 'ಒಳಿತು' ಜಗ ಮೊಳಿತು ಸೊಗ ಸೊಗಸೆಲ್ಲಮೊಳಿತು'.

ಈ ರೀತಿ ಈ ಎರಡನೆಯ ದಳದಲ್ಲಿ ಕವಿಗಳು ಒಂದಾಗಿ ಉಳಿದು ನೊಂದು ಬೇಯುವುದಕ್ಕಿಂತಲೂ ಎರಡಾಗಿ ಬೆಳೆದು ಬದುಕಿ ಬಾಳಿ ಮತ್ತೆ ಆ ಬ್ರಹ್ಮ ಪದವಿಯನ್ನು ಪಡೆಯಲು ಶ್ರಮಿಸುವುದು ಶ್ರೇಯಸ್ಕರವಾದುದೆಂಬ ಅಮೋಘ ತತ್ತ್ವವನ್ನು ಬಹಳ ಮಾರ್ಮಿಕವಾಗಿಯೇ ನಿರೂಪಿಸಿರುತ್ತಾರೆ. ಜಗತ್ಸೃಷ್ಟಿಯ ರಹಸ್ಯವನ್ನೇ ಈ ದೃಷ್ಟಿಯಿಂದ ಪರಿಶೀಲಿಸಿ ನಮಗೆ ತಿಳಿವನ್ನುಂಟುಮಾಡಿರುತ್ತಾರೆ.

3

ಈವರೆಗೆ ಕವಿಗಳು ಯಾವ ತತ್ತ್ವವನ್ನು ಪ್ರತಿಪಾದಿಸುತ್ತಾರೆಯೋ ಅದನ್ನೇ ಮತ್ತೆ ಮತ್ತೆ ಮನನ ಮಾಡಿ, ನಮ್ಮ ಮನಸ್ಸನ್ನು ಪ್ರವೃತ್ತಪರವಾಗುವಂತೆ 'ಜಗದ್ವಿಕಾಸ' ಎಂಬ ಈ ಮೂರನೆಯ ವಿಭಾಗದಲ್ಲಿ ಅಣಿಗೊಳಿಸುವರು. ಸೀಸಪದ್ಯಗಳನ್ನು ಹೋಲುವಂತಿರುವ ಈ ಬಿಡಿಕವಿತೆಗಳ ಧಾಟಿ ಡಿ.ವಿ.ಜಿ. ಅವರಿಗೆ ಬಹಳ ಹಿಂದಿನಿಂದಲೂ ತುಂಬ ಪ್ರಿಯವಾದದ್ದು. ಅವರಿಂದ ರಚಿತವಾಗಿರುವ 'ವಸಂತ

ಕುಸುಮಾಂಜಲಿ' ಎಂಬ ಕವನ ಸಂಕಲನದಲ್ಲಿಯೇ ಇದರ ಸಾರ್ಥಕ ಪ್ರಯೋಗವನ್ನು ಕಾಣಬಹುದು.

ಹಿಂದಿನ ಪ್ರಕರಣದ ಮುಖ್ಯಾಂಶಗಳನ್ನು ಪುನಃ ಪುನಃ ಬಿಡಿಬಿಡಿಯಾಗಿ ಪರಿಶೀಲಿಸುವುದರಿಂದ ಅಲ್ಲಿ ಸೂಚ್ಯವಾಗಿದ್ದ ಎಷ್ಟೋ ಸಂಗತಿಗಳು ಇಲ್ಲಿ ಮತ್ತಷ್ಟು ಸ್ಪಷ್ಟವಾಗುವುವು. ಒಂದೊಂದು ಪದ್ಯದಲ್ಲಿಯೂ ಮೊದಲಿನ ಎಂಟು ಪಂಕ್ತಿಗಳಲ್ಲಿ ವಿಷಯದ ಹರಹನ್ನು ತೋರಿಸಿಕೊಟ್ಟು, ಉಳಿದ ನಾಲ್ಕು ಪಂಕ್ತಿಗಳಲ್ಲಿ ಅದರ ತಿರುಳನ್ನು ಹಿಡಿದಿಟ್ಟು ಹೇಳುವ ಈ ಕಲೆ ಇಂಗ್ಲಿಷಿನ 'ಸಾನೆಟ್' ಪದ್ಯಬಂಧವನ್ನೇ ಹೋಲುತ್ತದೆ. ಸ್ತ್ರೀಪುರುಷರ ಪರಸ್ಪರಾಕರ್ಷಣೆಯ ಮರ್ಮವನ್ನರಿತು ಆ ಮೂಲಕ ಆತ್ಮಶೋಧನೆಯನ್ನು ಕಂಡುಕೊಳ್ಳುವವನೇ ರಸಿಕನೆಂದೂ, 'ಕಾಮಕಿಂಕರನಲ್ತು ಕಾಮಜಿದ್ಯೋಗಿ ಜಾತಂ' ಎಂದೂ ಹೇಳುವ ಮಾತೇ ಉಚಿತವಾಗಿದೆ. ಲಿಂಗಾಕರ್ಷಣೆ ಪ್ರಕೃತಿ ನಿಯಮವೆಂಬ ತತ್ವವನ್ನು ಒಪ್ಪಿಕೊಂಡು ಅದಕ್ಕೆ ಪ್ರೇರಕವಾದ ಶೃಂಗಾರ ಆಯಾ ಜೀವಿಯ ಗುಣಕ್ಕನುಸಾರವಾಗಿ ಹೇಗೆ ಮಾರ್ಪಡುವುದೆಂಬುದನ್ನೂ, ಅದನ್ನು ಭೋಗಿಸುವ ವಿಧಾನಕ್ಕನುಗುಣವಾಗಿ ಅದರ ಫಲಿತಾಂಶ ಹೇಗೆ ಬೇರೆಬೇರೆಯಾಗುವುದೆಂಬುದನ್ನೂ ಹೀಗೆ ತಿಳಿಯಹೇಳಿರುತ್ತಾರೆ,

ಸಾತ್ವಿಕನ ಶೃಂಗಾರ ಚಿತ್ತಕ್ಕೆ ಸಂಸ್ಕಾರ
ಜೀವಿತೋನ್ನತಿಗಮದು ಸರಸನಯಕಂ
ರಾಜಸನೊಳಿಂದ್ರಿಯಾವೇಶ ಸಂರಂಭಮದು
ತಾಮಸನೊಳದು ಮೃಗಾವೇಶರಭಸಂ
ಸಂಸ್ಕೃತನ ರಾಸಿಕ್ಯದಿಂದಾತ್ಮದೃಷ್ಟಿ ಲಾಭಂ
ದೈಹಿಕಾತುರದೆ ಜೀವಂ ಪಶುಪ್ರಾಯಮಕ್ಕುಂ
ರಸದ ಮೂಲಸ್ಥಲಂ ಬ್ರಹ್ಮಸ್ವಭಾವಮಲ್ತೆ
ವಿಶ್ವಮೇ ಬ್ರಾಹ್ಮಿಕಾನಂದರಸಬಿಂದುವಲ್ತೆ.

ಈ ವಿಚಾರ ಸರಣಿಯಲ್ಲಿ ಕಾಮ ಪ್ರೇಮಗಳ ಅಂತರವೇನೆಂಬುದನ್ನು ನಾವು ಮನಗಾಣಬಹುದು. ಇಂದ್ರಿಯ ಲೋಲುಪ್ತಿಗೂ ಇಂದ್ರಿಯಶಮನಕ್ಕೂ ಇರುವ ಸೂಕ್ಷ್ಮ ವ್ಯತ್ಯಾಸವನ್ನು ನಾವಾಗಿ ಊಹಿಸಿಕೊಳ್ಳಬಹುದು. ಉಚ್ಚನೀಚಗಳೆರಡೂ ಜೀವಿಯ ಅಭಿಲಾಷೆಯನ್ನು ಅವಲಂಬಿಸಿರುತ್ತದೆ. ಒಂದೇ ಸೌಂದರ್ಯ ಆತ್ಮವಿಸ್ಮಾರಕವೂ ಆಗಬಹುದು. ಆತ್ಮಸಂಸ್ಮಾರಕವೂ ಆಗಬಹುದು. ಆದ್ದರಿಂದ ಸೌಂದರ್ಯವೆಂಬುದು ಸ್ವಭಾವತಃ ಕೆಡುಕಲ್ಲ. ಅದನ್ನು ಬಳಸಿಕೊಳ್ಳುವವನ ವಿವೇಕ ಬಹು ಮುಖ್ಯವಾದದ್ದು. ಕವಿಗಳು ಈ ಬಗ್ಗೆ ಹೇಳಿರುವ ಮಾತುಗಳು ಮುತ್ತಿನಂತಿವೆ.

ಸೌಂದರ್ಯವೊಂದು ಜೀವಪರೀಕ್ಷಣ ಪ್ರಕಾರಂ
ಮೂರ್ಖಿಂಗದುನ್ಮಾದಕರ ಮೋಹ ಮದ್ಯಪಾನಂ

ಸೂಕ್ಷ್ಮದರ್ಶಿಗೆ ಹೃದಯಸಂಸ್ಕಾರ ಕಾವ್ಯಗಾನಂ
ಜೀವಜೀವಾನ್ಯೋನ್ಯ ಪಾವಕಂ ಪ್ರೇಮದಾಹಂ

ಈ ನಾಲ್ಕು ಪಂಕ್ತಿಗಳಲ್ಲಿ ಒಂದು ಪಂಕ್ತಿ ಪೂರ್ವಿನ ಅಪವ್ಯಯಕ್ಕೆ ಮೀಸಲಾಗಿದ್ದರೆ, ಉಳಿದ ಮೂರು ಪಂಕ್ತಿಗಳು ಅದರ ಸದ್ವಿನಿಯೋಗದ ಬೆಲೆಯೇನೆಂಬುದನ್ನು ತಿಳಿಸಲು ಮುಡಿಪಾಗಿವೆ. ಆದಿಪುರುಷನ ಅಪೇಕ್ಷೆಯಂತೆ 'ಸೌಂದರ್ಯ ಶೃಂಗಾರ ಸಿಂಧುಕಲ್ಲೋಲದಲಿ ಸಿಲುಕಿ ಹೊರಳಾಡುತ್ತಿದೆ ಜೀವಕೋಟಿ'. ಯಾರು ಎಚ್ಚರ ತಪ್ಪದೆ ಈ ಸಮುದ್ರ ತರಂಗಗಳ ಮೇಲೆ ಈಜಾಡಬಲ್ಲರೋ ಅಂಥವರನ್ನು ಆದಿಪುರುಷನು 'ತೀರಕೆಳೆದು ಕಾಯ್ವಂ'. ಉಳಿದವರನ್ನು 'ಮತ್ತೆ ನೀರಾಟಕ್ಕೆ ನೂಕಿ ನಲಿವಂ'. ವಿವೇಕದ ಕೀಲಿ ಕೈ ಮಾನವನ ಪಾಲಿಗೇ ಸೇರಿದುದಾಗಿದೆ. ಸೌಂದರ್ಯದ ಏಳು ಬೀಳುಗಳು ಹೇಗೆ ಆಯಾ ಮಾನವನ ಗುಣಕ್ಕೆ ಬದ್ಧವಾಗಿವೆಯೋ ಹಾಗೆಯೇ ಶೃಂಗಾರದ ನೀಚೋಚ್ಚ ಸ್ಥಿತಿಗತಿಗಳೂ ಮಾನವನ ಗುಣವನ್ನೇ ಆಶ್ರಯಿಸಿ ವರ್ತಿಸುವುವು. ಸಾಕ್ಷಾತ್ ಈಶ್ವರನೇ ಕಾಮದಿಂದ ಮುಕ್ತನಾಗಲಿಲ್ಲವೆಂದಮೇಲೆ ಮಾನವನನ್ನು ಅದಕ್ಕೆ ಅತೀತನೆಂದು ಭಾವಿಸುವುದು ಉಚಿತವಾಗಲಾರದು. 'ಮಾನವಾಂತಃಕರಣ ಗೂಢಪ್ರವೃತ್ತಿಗಳ ಬಹುಚಿತ್ರರೂಪಕಂ ಕಾಮರಂಗಂ' ಎಂಬ ಹೇಳಿಕೆಯನ್ನು ಯಾರೂ ನಿರಾಕರಿಸುವಂತಿಲ್ಲ. ಸೌಂದರ್ಯದ ಆಕರ್ಷಕ ಶಕ್ತಿಗೆ ಸಿಕ್ಕ ಬದುಕು ಕ್ಷಣಕಾಲ ತತ್ತರಿಸುವಂತೆ ಕಂಡುಬಂದರೂ ತನ್ನ ಆತ್ಮಬಲದಿಂದ ಅದು ತೇರ್ಗಡೆಯಾದದ್ದೇ ಆದರೆ ಆ ಪುಣ್ಯಜೀವಿ ಹೇಗೆ ವಿಶ್ವಪತಿಯ ಕೃಪಾಕಟಾಕ್ಷಕ್ಕೆ ಪಾತ್ರನಾಗುವನೆಂಬುದನ್ನು ಹೀಗೆ ಸಮರ್ಥಿಸಿರುವರು.

ಸೌಂದರ್ಯದನುಭೂತಿ ಜೀವಿಗೊಂದುಚಿತ ಶಿಕ್ಷೆ
ಗೃಹ್ಯತಾಪತಿತಿಕ್ಷೆಯಾತ್ಮಸಂಯಮ ಪರೀಕ್ಷೆ
ಪ್ರಣಯರಾಗೋದ್ವೀಕ್ಷೆ, ವಿಶ್ವಸಾಂತತ್ಯ ರಕ್ಷೆ
ವಿಧಿದತ್ತ ಮಧುಭಿಕ್ಷೆ, ವಿಶ್ವಪತಿ ಹಸಿತವೀಕ್ಷೆ.

ಚಿತ್ತಪರಿಪಾಕಕ್ಕೆ ಸೌಂದರ್ಯಮಧು ದೈವದತ್ತವಾದ ಅನುಗ್ರಹವೆಂಬ ಭಾವನೆ ಉತ್ಕೃಷ್ಟವಾದುದು. ವಿಚಾರಗರ್ಭಿತವಾದ ಶೈಲಿ ಹೇಗೆ ಸೂತ್ರಪ್ರಾಯವಾಗಿರಬಹುದೆಂಬುದಕ್ಕೆ ಡಿ.ವಿ.ಜಿ. ಅವರ ಇಂತಹ ಪದ್ಯಖಂಡಗಳನ್ನು ನೋಡಬಹುದು. ಒಂದೊಂದು ಶಬ್ದವನ್ನೂ ಮಲುಕು ಹಾಕಿದಂತೆಲ್ಲ ಅವರ ಸಾರ ವಿಸ್ತಾರವಾಗುತ್ತ ಹೋಗುತ್ತದೆ.

ಇಲ್ಲಿಂದ ಮುಂದೆ ಕವಿಗಳ ದೃಷ್ಟಿ ಕಾಮ-ಯಮರಿಬ್ಬರ ಕಡೆಗೆ ಏಕಕಾಲವಲ್ಲಿ ಹರಿಯುವುದು. ಸೃಷ್ಟಿ, ಸ್ಥಿತಿ, ಲಯಗಳಿಗೆ ಹೇಗೆ ತ್ರಿಮೂರ್ತಿಗಳನ್ನು ನಾವು ಹೊಣೆಗಾರರನ್ನಾಗಿ ಭಾವಿಸುತ್ತೇವೆಯೋ ಹಾಗೆಯೇ ಜನನ-ಮರಣಗಳಿಗೆ ಸಂಕೇತಸ್ವರೂಪರಾಗಿರುವ ಕಾಮ-ಯಮರಿಬ್ಬರನ್ನು ಕವಿಗಳು ಸಮಸಮನಾಗಿ ಕಂಡು, ಅವರ ಹಿರಿಮೆ

ಯನ್ನು ಪ್ರತಿಪಾದಿಸುವ ಇಲ್ಲಿನ ಕ್ರಮ ತುಂಬ ವಿಚಾರಪ್ರದವಾಗಿದೆ. ಈ ಈರ್ವರನ್ನು ಒಂದೇ ತಕ್ಕಡಿಯಲ್ಲಿಟ್ಟು ಹೇಗೆ ತೂಗುತ್ತಾರೆಂಬುದನ್ನು ಮೊದಲು ನೋಡೋಣ.

ಸುಂದರಂ ಕುಪಕಮೇಂ, ಕಾಮನಂ ಕೊಲುವಮೇಂ
ಯಮನ ಶರಣೆನುವಮೇಂ, ನ್ಯಾಯಮೆಂತು?
ಜೀವನಂ ಜೀವಿಗಾತ್ಮ ಪ್ರಗತಿಯವಕಾಶ
ಪಾಶವತೆಯಿಂ ದೈವಪದಕೆ ಯಾತ್ರೆ
ಕಾಮಯಮರಿರ್ವರಿಂದಹುದದರೊಳುಪಕಾರ-
ಮುತ್ಸಾಹಮೋರ್ವನಿಂ, ನಿಯತಿಪೆರನಿಂ
ವಿಷಯರುಚಿ ಪಾಥೇಯಮ್ ಔಷಧಂ ಭವತಾಪ-
ಮನ್ಯೋನ್ಯಸಾಪ್ಯಮವು ಜೀವಹಿತದೊಳ್
ಸೌಂದರ್ಯಸರಸಗಳ್ ಬ್ರಹ್ಮಸುಖವಾರ್ಧಿಕಣಗಳ್
ಮೃಗಜೀವಿಗದು ಮದ್ಯಮ್, ಅದು ಶುದ್ಧಮತಿಗೆ ತೀರ್ಥಂ
ಪ್ರಕೃತಿರಾಜ್ಯದಿ ಕುಸುಮಶರ ದಂಡಧರರಮಾತ್ಯರ್
ಮಸ್ಸಿಪ್ಪನಿರ್ವರಂ ಪ್ರಕೃತಿಶೃಂಖಲೆಯ ಕಳೆವಂ

ಕವಿಗಳು ಹೇಳುವಂತೆ ಜೀವಿಯ ಏಳಿಗೆಗೆ ಇಬ್ಬರೂ ಎರಡು ತಟಗಳಿದ್ದಂತೆ. ಕಾಮನು ಪ್ರಚೋದನಕಾರಣನೆನ್ನಿಸಿದರೆ ಯಮನು ನಿಯಂತ್ರಣಕಾರಣನಾಗುತ್ತಾನೆ. ಜನನ ಮರಣಗಳು ಹೇಗೆ ಪರಸ್ಪರ ಪೂರಕವಾದುವೋ ಹಾಗೆಯೇ ಕಾಮ-ಯಮರಿಬ್ಬರೂ ನಮಗೆ ವಂದನೀಯರು. ಅವರ ಅನುಗ್ರಹದಿಂದ ಜೀವಿಗೆ ದೈವತ್ವ ಲಭಿಸುವುದೆಂಬ ಆಲೋಚನೆ ಶ್ರೇಷ್ಠವಾದದ್ದು. ಪ್ರಕೃತಿಯ ಬಂಧನಕ್ಕೂ ಮೋಕ್ಷಕ್ಕೂ ಅವರ ನೆರವು ಅಗತ್ಯವೆಂಬ ಸೂಚನೆ ಇಲ್ಲಿ ಅಡಕವಾಗಿದೆ. ಈ ಸಮದೃಷ್ಟಿಯನ್ನು ಬೆಳಸಿಕೊಂಡ ಬಳಿಕ ಸ್ಮರನನ್ನು ನಿಂದಿಸುವುದಾಗಲಿ, ಮರಣಕ್ಕೆ ಅಂಜುವುದಾಗಲಿ, ಜನನವನ್ನು ಜರಿಯುವುದಾಗಲಿ ನಮಗೆ ಸಲ್ಲದು. ಆತ್ಮವಿಶ್ವಾಸದಿಂದ ಆತ್ಮೋನ್ನತಿಯಾಗುವಂತೆ ಪ್ರಕೃತಿಯ ತೆಕ್ಕೆಯಲ್ಲಿ ಸಿಕ್ಕಿ ಬಿದ್ದ ಜೀವ ತನ್ನ ಪೌರುಷದಿಂದ ತಲೆಯೆತ್ತಿ ನಿಲ್ಲಬೇಕಾಗುತ್ತದೆ. ಅಂಥ ಧೈರ್ಯವನ್ನೂ ಸ್ಥೈರ್ಯವನ್ನೂ ಕಂಡಾಗ ಪ್ರಕೃತಿಗೆ ಪರಮ ಸಂತೋಷವೇ ವಿನಾ ಪ್ರತೀಕಾರವೇನಿಲ್ಲ. 'ಪಾರಿತೋಷಕಮಿಹುದು ಪೌರ್ಷವಂಗೆ' ಎಂಬ ಕವಿಗಳ ಮಾತು 'ಬಲವಿದ್ದಲ್ಲಿ ಉಳಿವು' (Survival of the fittest) ಎಂಬ ವೈಜ್ಞಾನಿಕ ಸತ್ಯವನ್ನೇ ಪುಷ್ಟೀಕರಿಸುವಂತಿದೆ.

ಕಂದುಕ ಕ್ರೀಡನ ಸ್ಪರ್ಧೆ ಬಾಳೆಂದು ಬಗೆದು
ಬಂದುದನಿದಿರ್ಗೊಂಡು ಸೋಲ್ಗೆಲವ ಸಮದೆ ಕಂಡು
ಪೌರ್ಷಾತನಂ ಪ್ರಕೃತಿಯುಪಚರಿಪಳೊಪ್ಪಿ ನಲವಿಂ
ಜೀವಿತಮಶೇಷಾಮಧ್ಯಾತ್ಮ ಪ್ರಯೋಗರಂಗಂ

ಎಂಬ ನುಡಿಗಳಲ್ಲಿ ಬದುಕನ್ನು ಚೆಂಡಾಟಕ್ಕೆ ಹೋಲಿಸಿದ್ದೂ, ಅದು ಅಧ್ಯಾತ್ಮರೂಸಾಧನವೂ ಹೌದು ಎಂಬುದನ್ನು ನಾವು ಮರೆಯುವಂತಿಲ್ಲ.

ಲೈಂಗಿಕ ಆಕರ್ಷಣ ಆಸಕ್ತಿಗಳಿಂದ ಮೋಹ ತಾಪಗಳ ಜ್ವಾಲೆ ಮೇಲೇಳುವುದು ಸಹಜವಷ್ಟೇ. ಅವುಗಳ ಉಪಶಮನಕ್ಕೆ ಗೃಹಸ್ಥಧರ್ಮವೊಂದೇ ಸೂಕ್ತವಾದ ಸಾಧನ. "ಮೋಹ ಮಲಗಳ ಕಳೆದು ಜೀವಿಯನಂತಾತ್ಮ ಭಾವಕೆ ಮರಳ್ಚಿಪುದು ಗಾರ್ಹಧರ್ಮಂ," ಗಾರ್ಹಸ್ಥ್ಯ ಪೋಷಣೆಗೆ ಶೃಂಗಾರಮದರಿಂದೆ ಹೃದಯ ವಿಸ್ತರಮಹಂಕೃತಿ ವಿಕಷಣಂ" ಎಂದು ಕವಿಗಳು ಹಂತ-ಹಂತವಾಗಿ ಗೃಹಸ್ಥಾಶ್ರಮದ ಮೇಲ್ಮೆಯನ್ನು ಮನವರಿಕೆ ಮಾಡಿಕೊಡುವರು. ಅಷ್ಟೇ ಏಕೆ? ಬಾಹ್ಯವಿಕೃತಿಗೆ ಒಳಗಾಗದಂತೆ ನಿರ್ಮಲ ಅಂತರಂಗವುಳ್ಳ ಯೋಗಿಗೂ ಐಹಿಕ-ಬ್ರಾಹ್ಮಿಕಾನಂದಗಳೆರಡೂ ಫಲಿಸುವುದು ಎಂಬಲ್ಲಿ, ಐಹಿಕ ಸುಖವನ್ನು ಕಡೆಗಣಿಸುವುದು ಜಾಣತನವಲ್ಲವೆಂಬ ಧ್ವನಿ ಇಲ್ಲಿ ಕೇಳಿಬರುವಂತಿದೆ. ಈ ನಿಲುವಿನಿಂದ ಮಾರನನ್ನು ಕಾಣುವ ಕವಿಗಳ ಕಣ್ಣಿಗೆ ಅವನು ತುಂಬ ಉದಾರನಾಗಿಯೇ ತೋರಿಬರುತ್ತಾನೆ.

ಮಾರನಿಲ್ಲದ ಲೋಕ ನೀರಿರದ ಮೃಲ್ಲೋಕ
ಬರಿಯ ಬಿಡಿಬಿಡಿ ಮರಳ ಕಣಗಳೊಡ್ಡು
ಆರಿಗಾರೇನಲ್ಲಿ? ನಂಟಿಲ್ಲ ನೇಹಿಲ್ಲ
ಕೋರುವುಲಿಯಿರದೆ ಮಾರುಲಿಯುಮಿರದು
ಕಾಮನುದಿಸಲ್ ಪ್ರೇಮ ಮುದಿಪುದದಕಿದರಾಳು
ಮುನಿಸಂಜು ಕರುಬುಗಳ್ ಕೆಲದಿ ಮರುಕಂ
ನರ ಹೃದ್ರಸಂಗಳೊಳ್ ಮೊದಲರಸ ಶೃಂಗಾರ-
ಮದು ಸಕಲ-ಸಂಸಾರ-ವೃಕ್ಷಮೂಲಂ
ಜೀವಮುಕ್ತಾಪ್ರವಾಳ ಸಹಸ್ರದೊಳಗೆ ಪಾಯ್ಚು
ಬಾಂಧವ್ಯವೈಷಮ್ಯಗಳ ಚಿತ್ರಸರವ ಕಟ್ಟಿ
ಪ್ರಕೃತಿಗಾತ್ರವನಲಂಕರಿಸುವಂ ಕಾಮದೇವಂ
ಸೃಷ್ಟಿಶಕ್ತಿಗಳೊಳಾತಂ ಜ್ಯೇಷ್ಠನತಿ ಬಲಿಷ್ಠಂ

ಮಾರನ ಮಹೋನ್ನತಿಗೆ ಇದಕ್ಕಿಂತ ಹೆಚ್ಚಿನ ಮಾತುಗಳು ಬೇಕೆ? ಜೀವಿ ಜೀವಿಗಳನ್ನು ಒಂದುಗೂಡಿಸಿ ತಣಿಸಿ ತೃಪ್ತಿಪಡುವವನು ಅವನು! ಸಂಸಾರದ ಸಾರವೇ ಶೃಂಗಾರರಸವೆಂದ ಮೇಲೆ ಅದಕ್ಕೆ ಅಧಿದೇವತೆ ಕಾಮನೇ ಸರಿ. ಸೌಂದರ್ಯಸಾಗರದಲ್ಲಿ ಮೇಲೆದ್ದು ಬೀಳುತ್ತಿರುವ ಮೋಹ ತರಂಗಗಳಿಗೂ. ಕಾಮನ ಸುಳಿಗಳ ಸೆಳೆತಕ್ಕೂ ಸಿಕ್ಕಿ ತೊಳಲಾಡುತ್ತಿರುವ ಜೀವಕ್ಕೆ, ನೆಲೆಯಿಹುದೇ ಎಂಬ ಕವಿಗಳ ಪ್ರಶ್ನೆ ನಮ್ಮ ಮನಸ್ಸನ್ನು ಕೆಣಕುವಂತಿದೆ. 'ಮನಸಿಜನ ಮಾಯೆ ವಿಧಿ ವಿಳಸನದ ಸೆರೆಂಬಡೆಯೆ ಕೊಂದು ಕೂಗದೆ ನರರಂ' ಎಂಬ ಜನ್ನನ ಸುಪ್ರಸಿದ್ಧ ಉಕ್ತಿಯಂತೆಯೇ ಇಲ್ಲಿನ ಪ್ರಶ್ನೆಯೂ ನಮಗೆ ಸವಾಲಿನಂತೆ ತೋರಿಬರಬಹುದು. ಆದರೆ ಕವಿಗಳು ಈ ಸಮಸ್ಯೆಯನ್ನು ಬಿಡಿಸಲು ತಕ್ಕ ಪ್ರಯತ್ನವನ್ನು ಮಾಡಿರುವರು. ಜೀವಿಯು ಒಳಗಣ್ಣು ತೆರೆದಿದ್ದೇ ಆದರೆ ಮೇಲೆ ಹೇಳಿದ ಪ್ರಕ್ಷುಬ್ಧ ಸಾಗರದ ದಡವನ್ನೂ ಅದು ಕಾಣಬಲ್ಲುದೆಂದು ಕವಿಗಳಿಗೆ ತುಂಬು

ನಂಬಿಕೆಯಿದೆ. ಕಷ್ಟಕೋಟಲೆಗಳು ಕಂಗೆಡಿಸಿದಾಗಲೇ ಜೀವಿಗೆ ಜ್ಞಾನೋದಯವಾಗುವುದೆಂಬ ಸಂದೇಶವನ್ನು ಕವಿಗಳು ಹೀಗೆ ನಿರೂಪಿಸಿರುತ್ತಾರೆ.

ಜೀವಿಯುಂ ಕಷ್ಟದಂಕುಶದೊಳ್ತರಿಸಿದಂದು
ನಾನಾರು? ನೆಲೆಯೆತ್ತಲ್?—ಎಂದು ಬಗೆವಂ
ಕಡಲು ಪಿರಿದಾದೊಡೇಂ? ಕಿರಿಮೀನೆ ಮಿಗಿಲಲ್ತೆ?
ಮೀನಿಗಿರ್ಪೊಳಬೆಳಕು ಕಡಲಿಗಿಹುದೇಂ?
ಜೀವಿಯೊಳಗಣ್ಣು ತೆರೆಯಿಪುದು ಕಡಲಾಟದಲಸು
ಆಗಳಾ ಬೆಳಕಿಂದೆ ಮಾಯೆಯಿರುಳೊಡ್ತು ಪರಿಗುಂ
ಜೀವಿಯಾತ್ಮಸ್ವರೂಪಕೆ ಬರಲಸಾತ್ಮವಳಿಗುಂ
ಜಾಣನೀಸಾಡಿ ನಲಿದೆಚ್ಚರದೆ ದಡವ ಸೇರ್ವಂ

ಆತ್ಮಶಕ್ತಿಯ ಮುಂದೆ ಜೇರಾವ ಶಕ್ತಿಯೂ ಮಿಗಿಲಲ್ಲವೆಂಬ ಪ್ರಾಚೀನರ ವಿಶ್ವಾಸವೇ ಈ ನವೀನ ಕವಿಗಳ ಮಾತುಗಳಲ್ಲಿಯೂ ಮನೋಹರವಾಗಿ ಕೇಳಿಬರುತ್ತದೆ.

ಮುಖ್ಯವಾಗಿ ಶೃಂಗಾರ ರಾಜ್ಯದಲ್ಲಿಯೂ ಉಚ್ಚ ನೀಚ ಮಿಶ್ರಫಲಗಳನ್ನು ದೊರಕಿಸಿಕೊಡುವ ಮೂರು ಮಾರ್ಗಗಳುಂಟೆಂದು ಡಿ. ವಿ. ಜಿ. ಅವರ ಹೇಳಿಕೆ.

ಮಾರ್ಗಗಳ್ ಮೂರುಂಟು ಶೃಂಗಾರರಾಜ್ಯದಲಿ
ರಸಿಕಮುಂ ಪಾಶವಮುಮುಭಯ ಯುತಿಯುಂ
ಮನದ ಪ್ರಸನ್ನತೆಗೆ ಜೀವಸಖ್ಯಾರ್ಜನೆಗೆ
ಹೃದ್ರಸಂ ಪರಿಯಲದು ರಸಿಕರಕ್ತಿ
ನಯವಿವೇಕವ ತೊರೆದ ದೇಹೇಂದ್ರಿಯಾತುರದ
ನಿರ್ಲಜ್ಜತಾ ಘಸ್ಮರಂ ಮೃಗದ ವಿಧ್ರುತಿ
ಕಾಮಚಾಪಲಕಿನಿತು ಜೀವಬಂಧುತೆಗಿನಿತು
ಪ್ರಣಯ ನಿಯತಿಗಳೊಂದೆ ಮಿಶ್ರಸರಸಂ

ಅಂತಃಪರಿಷ್ಕಾರಕ್ಕೆ ಮೂಲಭೂತವಾದದ್ದು ರಸಿಕಶೃಂಗಾರ. ಇದು ಶ್ರೇಷ್ಠತಮವಾದದ್ದು. ಉಳಿದೆರಡರಲ್ಲಿ ವಿಶ್ರಫಲವನ್ನುಳ್ಳದ್ದು ಸಾಮಾನ್ಯವೆನ್ನಿಸ್ಸುತ್ತದೆ. ಪಶುಸಹಜವಾದ ಕಾಮವಂತೂ ಮಾನವನಿಗೆ ಎಂದೆಂದಿಗೂ ಭೂಷಣವಾಗಲಾರದು. ಆದ್ದರಿಂದ 'ಕಾಮಂ ವಿವೇಕಿಗಕ್ಕುಂ ಧರ್ಮಸಾಧ್ಯಕರಂ' ಎಂಬ ಈ ವಿಭಾಗದ ಕಡೆಯ ಪಂಕ್ತಿ ಮಾನವನ ಮೇಲ್ಮೆಗೆ ಅವನ ವಿವೇಕವೊಂದೇ ಪ್ರಧಾನವೆನ್ನುವುದನ್ನು ಮತ್ತೆ ಮತ್ತೆ ಸಾರಿ ಹೇಳುವಂತಿದೆ.

4

ಭಾರತೀಯ ಮಹರ್ಷಿಗಳ ಅನುಭವವು ಹೇಗೆ ಗ್ರಾಹ್ಯವೋ ಹಾಗೆಯೇ ಪಾಶ್ಚಾತ್ಯ ಕವಿಗಳ ದರ್ಶನವೂ ನಮಗೆ ಸಮ್ಮತವಾದಲ್ಲಿ ಅದನ್ನು ಸ್ವೀಕರಿಸಬಹುದೆಂಬ ಉದಾರ

ಮನಸ್ಸುಳ್ಳವರು ಡಿ. ವಿ. ಜಿ. ಅವರು. ಆದರೆ ಅದು ವಿದೇಶೀಯವೆಂದು ಮಾತ್ರವೇ ಮೋಹವಶರಾಗಿ ಒಡಂಬಡುವ ಸ್ವಭಾವವಲ್ಲ ಅವರದು. ಅವರು ಒಪ್ಪಿಕೊಂಡಿರುವ ತತ್ತ್ವಗಳಾದರೂ ಯಾವುವು? ಕೀಟ್ಸ್‌ಕವಿಯ ಸತ್ಯ ಸುಂದರ ತತ್ತ್ವ ಮತ್ತು ಷೇಕ್ಸ್‌ಪಿಯರನ ಪ್ರೇಮಾದ್ವೈತ ತತ್ತ್ವ. ಭರತಖಂಡದ ಪಾರಮಾರ್ಥಿಕ ಔನ್ನತ್ಯವನ್ನು ಮನಗಂಡ ವರು ಅದಕ್ಕೆ ಸರಿಸಮನಾದ ಭಾವನೆಗಳನ್ನು ಒಪ್ಪಿಯಾರೇ ವಿನಾ ಇಂದಿನ ಪೀಳಿಗೆಯ ವರಲ್ಲಿ ಮೇಲಿಂದ ಮೇಲೆ ಕಡಿಯುಬರುತ್ತಿರುವ ಅಧಮ ಆದರ್ಶಗಳ ಅಂಧಾನುಕರಣೆ ಅವರದಲ್ಲ.

ಕೀಟ್ಸ್‌ಕವಿಯ 'ಸತ್ಯವೇ ಸೌಂದರ್ಯ, ಸೌಂದರ್ಯವೇ ಸತ್ಯ' (Truth is Beauty, Beauty is Truth) ಎಂಬ ಸುಪ್ರಸಿದ್ಧವಾದ ಅನುಭವಸಿದ್ಧಾಂತವನ್ನು ಈ ಮೊದಲೇ ಡಿ. ವಿ. ಜಿ. ಅವರು ಮನಃಪೂರ್ವಕವಾಗಿ ಮೆಚ್ಚಿಕೊಂಡಿರುವ ಅಂಶವು ಅವರ 'ಬೇಲೂರಿನ ಶಿಲಾಬಾಲಕಿಯರು' ಎಂಬ ಉತ್ತಮೋತ್ತಮವಾದ ಕವನವನ್ನು ಓದಿ ರುವವರೆಲ್ಲರೂ ಬಲ್ಲರು. ಆ ಗಹನವಾದ ಹೇಳಿಕೆಯೊಂದನ್ನೇ ಇಲ್ಲಿ ಗಮನದಲ್ಲಿಟ್ಟು ಕೊಂಡು, ಅದನ್ನು ನಾವು ಜೀವನದಲ್ಲಿ ಹೇಗೆ ಮನಗಾಣಬಹುದೆಂಬುದನ್ನು ಈ ನಾಲ್ಕ ನೆಯ ವಿಭಾಗದಲ್ಲಿ ಪುಟ್ಟ ಪುಟ್ಟ ಕಂದಪದ್ಯಗಳ ಮೂಲಕ ವಿಶದಪಡಿಸಿರುವರು.

'ಕೀಟ್ಸನ ಭಾವಂಗಳೊಳಾನುತ್ಸಾಹಿತನಾದೊಡಂ ವಚಸ್ಸೌಂದರ್ಯದೋಳ್ ತತ್ತ್ವ ದೃಶಂ ನಾನಪ್ಪೆನೇ? ತತ್ಸಾರವ ವಿಶದಮೊರೆವುದೆನ್ನೀ ಯತ್ನಂ' ಎಂಬ ವಿಷಯಪ್ರವೇಶದ ಪಂಕ್ತಿಯ ಮೂಲಕವೇ ಡಿ. ವಿ. ಜಿ. ಅವರು ಈ ಬಗ್ಗೆ ಎಷ್ಟು ಎಚ್ಚರದಿಂದಿದ್ದಾರೆ ಎನ್ನು ವುದು ವಿದಿತವಾಗುವುದು. ಚಿತಾಭಸ್ಮವನ್ನೊಳಗೊಂಡ ಕರಂಡದ ಮೇಲಿನ ಚಿತ್ತಾಕರ್ಷಕ ವಾದ ಚಿತ್ರಗಳು ಆಂಗ್ಲಕವಿಯನ್ನು ಹೇಗೆ ಮನಸೆಳೆದವು ಎಂದು ವಿಸ್ಮಿತರಾಗಿ,

> ಚೋದ್ಯಂ ಕಲೆಯಾಕೃತಿಯಿದು
> ಮಧ್ಯದಿ ಮೃತಿ, ಸುತ್ತಲಿಹುದು ಜೀವೋಲ್ಲಾಸಂ
> ಉದ್ಯಾನದಿಂದೆ ಮಸಣವ
> ನುದ್ಯಾನವ ಮಸಣದಿಂದೆ ನೋಳ್ಪುದು ಜೀವಂ.

ಎಂದು ತಲೆತೂಗುವರು. ಸಾಮಾನ್ಯರಿಗೆ ಪರಸ್ಪರ ವಿರುದ್ಧವೆನಿಸುವ ಈ ಸಂಗತಿ ಯಿಂದಲೇ ನಿಷ್ಣಾತನಾದ ಕವಿ ಅವುಗಳ ಪರಸ್ಪರ ಸಂಬಂಧವನ್ನು ಕಲ್ಪಿಸಿಕೊಳ್ಳಬಲ್ಲನು. ಏಕೆಂದರೆ ಕವಿಗಳ ವಿಸ್ಮಯ ನಿವಾರಣೆಯಾದ ತರುವಾಯವೇ 'ಇದು ಸಿದ್ಧಾಂತಂ ಜೀವವ ಮದನನುಮಂತಕನು ಮಾಳ್ಪರ್ ಇರುಪಕ್ಕಗಳಿಂ' ಎಂಬ ತಮ್ಮ ಪೂರ್ವೋಕ್ತ ನಂಬಿಕೆ ಯನ್ನೇ ಇಲ್ಲಿಯೂ ಕಾಣುವರು. ನಮ್ಮ ಮನೋಧರ್ಮಕ್ಕೆ ಒಗ್ಗಿಬಂದ ಸಂಗತಿ ಅನ್ಯ ದೇಶದ್ದಾದರೂ ಬಾಧಕವಿಲ್ಲವೆಂಬ ದೃಷ್ಟಿ ಇಲ್ಲಿ ಪ್ರಕೃತವಾದದ್ದು. ಆ ವಿವೇಚನೆಯ ಆಶ್ರಯದಲ್ಲಿಯೇ ಕೀಟ್ಸ್ ಕವಿಯ ಈ ದರ್ಶನ ಹೇಗೆ ಅರಳಿರಬಹುದೆಂಬುದನ್ನು ಮುಂದೆ ಮುಂದೆ ಸಾಗಿದಂತೆಲ್ಲಾ ನಾವು ಮನಗಾಣಬಹುದು.

ಚೆಲುವು ದಿಟಂ, ದಿಟ ತಾಂ ಚೆಲು
ವಿಳೆಯೊಳ್ ನೀಂ ತಿಳಿವುದೆಲ್ಲಮಿನಿತನೆ, ಮತ್ತಂ
ತಿಳಿಯಲ್ವೇಹುದುಮಿನಿತನೆ
ಕಲೆಯುಲಿಯುವುದಿಂತು ಚಿತ್ರರೇಖಾಕೃತಿಯಿಂ

ಎಂಬ ಕಂದಪದ್ಯ ಕೀಟ್ಸ್‌ಕವಿಯ 'Beauty is truth, truth is beauty, that is all, ye know on earth and all ye need to know' ಎಂಬ ಇಂಗ್ಲೀಷ್ ಹೇಳಿಕೆಯ ತಿರುಳನ್ನು ಚಾಚೂ ತಪ್ಪದೇ ಒಳಗೊಂಡಿದೆ. ಪಾಶ್ಚಾತ್ಯನ ಹೇಳಿಕೆಯಾದರೂ ಕವಿಗಳು 'ಶ್ರುತಿಸಂಮ್ಮತಮಿದು ಮಹಾರ್ಷಸ್ಮೃತಿಸಮ್ಮತಮಿದು ಪುರಾಣ ಶಿಷ್ಟಾಚಾರದೃತಮಿದು ಸಮ್ಯಗ್ಜೀವನಮತಮಿದು ರಸ ರುಚಿಕರ ಧರ್ಮಮಿದು ಕೀಟ್ಸ್ಉದಿತಂ' ಎಂದು ಅದನ್ನು ಶಾಸ್ತ್ರಸಮ್ಮತವೆಂದು ಸಮರ್ಥಿಸುವ ಈ ಉತ್ಸಾಹ ಗಮನಾರ್ಹವಾದುದು. ಈ ತತ್ತ್ವ ವಿಶ್ಲೇಶಣೆಯಿಂದ ಕವಿಗಳು ಜೀವನದಲ್ಲಿ ಸತ್ಯ ಸೌಂದರ್ಯಗಳ ಪಾತ್ರವೇನೆಂಬುದನ್ನು ಅವುಗಳ ಸ್ವರೂಪವೇನೆಂಬುದನ್ನು ಅತ್ಯಂತ ಗಾಢವಾಗಿಯೇ ಪರ್ಯಾಲೋಚಿಸುವರು.

ಸತ್ಯ ಸೌಂದರ್ಯಗಳು ಬೇರೆ ಬೇರೆಯಲ್ಲವೆಂದೂ, ಸತ್ಯವು ರಹಸ್ಯಾತ್ಮಕವಾಗಿ ವರ್ತಿಸಿದರೆ, ಸೌಂದರ್ಯವು ಬಹಿರಂಗವಾಗಿ ಪ್ರಕಟವಾಗುವುದೆಂದೂ ಕವಿಗಳ ಅಭಿಪ್ರಾಯ. ಈ ಇರವನ್ನು ಎಷ್ಟೆಷ್ಟು ಬಗೆಗಳಿಂದ ವರ್ಣಿಸಲು ಸಾಧ್ಯವೋ ಅಷ್ಟಷ್ಟು ಪರಿಯಾಗಿ ಇಲ್ಲಿ ದೃಷ್ಟಾಂತಪೂರ್ವಕವಾಗಿ ತಿಳಿಯಹೇಳುವರು.

ಗಿರಿ ಸತ್ಯಂ, ತದ್ಗುಹೆಯಿಂ
ಹರಿವ ನದೀ ಚಿತ್ರ ವಕ್ರಗತಿ ಸೌಂದರ್ಯಂ
ಧರೆ ಸತ್ಯಂ ತದುಪಾಶ್ರಿತ
ನರನಾರೀ ರಾಗ ರಂಜನಂ ಸೌಂದರ್ಯಂ

ಬೀಜಂ ಸತ್ಯಂ ತದುದಿತ
ಭೂಜ ಲಸತ್ಪುಷ್ಪ ಪಲ್ಲವಂ ಸೌಂದರ್ಯಂ
ವಾಜಂ ಸತ್ಯಂ, ಭೋಕ್ತೃವಿ
ರಾಜತ್ತನುಕಾಂತಿ ಸೌಷ್ಠವಂ ಸೌಂದರ್ಯಂ

ತರಣಿಪ್ರಭೆ ಸತ್ಯಂ ತ
ದ್ವಿರಚಿತ ಪುರುಹೂತಚಾಪಛವಿ ಸೌಂದರ್ಯಂ

ಸತ್ಯಂ ಸೌಂದರ್ಯಂ ಶಿವ
ತತ್ತ್ವದ ಕಣ್ಣೆರಡು ಕಾರ್ಯಕರಣಗಳಿರಡಾ
ವಸ್ತುದ್ವಿತ್ವತೆ ಲೋಕ
ಸ್ವಸ್ತ್ಯರ್ಥಂ ನರಪರೀಕ್ಷೆ ಶಿಕ್ಷೆಗಳದರಿಂ

ಎಂದು ಊಹೆಗೆ ಎಟುಕದ್ದನ್ನು ಸೂಕ್ತವಾದ ಉದಾಹರಣೆಗಳಿಂದ ಗ್ರಹಿಸುವಂತೆ ಮಾಡಲು ತೊಡಗುವರು. ಒಟ್ಟಿನಲ್ಲಿ, ಸತ್ಯವು ಸ್ಥಾಯಿಯಾದರೆ ಸೌಂದರ್ಯವು ಸಂಚಾರಿ ಎನ್ನಿಸುತ್ತದೆ. ಮೊದಲನೆಯದು ಮೂಲ ಮೂರ್ತಿಯಾದರೆ ಎರಡನೆಯದು ಅದರ ಅಂಶವನ್ನು ಪ್ರಕಟಿಸುವ ಉತ್ಸವಮೂರ್ತಿ ಎನ್ನಬಹುದು. ಸತ್ಯಸೌಂದರ್ಯಗಳು ಹೀಗೆ ಪರಸ್ಪರ ಸಂಬಂಧಿಗಳೆಂದಮೇಲೆ ಅವುಗಳೆರಡೂ ಜೀವನಕ್ಕೆ ಸಹಕಾರಿಯೆಂದು ವಿದಿತವಾಗುತ್ತವೆ. 'ಸತ್ಯಂ ಧರ್ಮಕೆ ನೆಲೆಮನೆಯುತ್ತೇಜನಕಾರಿ ಜೀವನಕೆ ಸೌಂದರ್ಯಂ' ಎಂಬ ಮಾತಿನಲ್ಲಂತೂ ಈ ಗಹನವಾದ ವಿಚಾರ ಸುಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಈ ತಿಳಿವನ್ನು ಪಡೆದ ಮೇಲೆ 'ಸತ್ಯಂ ನೀರಸಮಿರೆ. ಸರಸತ್ವಂ ಬರಿಮಾಯೆಯಾಗೆ ಜೀವಕೆ ಗತಿಯೇಂ' ಎಂದು ಆ ಬಗ್ಗೆ ಶಂಕಿಸುವವರ ಮಾತನ್ನು ಈ ಮನಸ್ಸು ನಿರಾಕರಿಸುವುದೇ ವಿನಾ ಒಪ್ಪುವುದಿಲ್ಲ. 'ಸೌಂದರ್ಯಂ ಪುಸಿ ವಿಷಯಾನಂದಂ ಪರವರ್ಜ್ಯಂ' ಎಂಬ ಮಾತೂ ಹೀಗೆಯೇ ಅಗ್ರಾಹ್ಯವೆನ್ನಿಸಿ 'ಇಂದ್ರಿಯಗಣಾನುಭೂತ ದ್ವಂದ್ವಗಳಿಂ ಜೀವಶುದ್ಧಿ ಸತ್ಯವ ಕಾಣಲ್' ತಕ್ಕುದೆಂದು ಬಗೆಯುವರು.

ಈ ದ್ವಂದ್ವ ಸಂಗತಿಗಳ ಸಮನ್ವಯದೊಂದಿಗೆ ಕಾಮ-ಯಮರ ಸಮಾವೇಶವೂ ಈ ವಿಭಾಗದಲ್ಲಿ ಹಾಸು ಹೊಕ್ಕಾಗಿ ಹೆಣೆದುಕೊಂಡು ಬರುತ್ತದೆ.

ಕಾಮ-ಯಮರ್ ನರಜೀವನ
ಭೂಮಿಯನಾಳುವರು. ವಿಸ್ತರಿಸುವಂ ಕಾಮಂ
ಸೀಮೆಯ ವಿಧಿಸುವನು ಯಮಂ
ಸಾಮ್ಯದಿನಾದರಿಪನಿರ್ವರನುಮಂ ಜಾಣಂ

ಎಂಬ ಕಂದಪದ್ಯದಲ್ಲಿ ಈ ಎರಡು ಶಕ್ತಿಗಳ ಅಗ್ಗಳಿಕೆಯನ್ನೂ ಮತ್ತೆ ತಿಳಿಸುವರು. ಆಗಿಂದಾಗ್ಗೆ ಈ ಬಗ್ಗೆ ಆಲೋಚನೆ ನಡೆಸಿರುವುದರಿಂದ ಇಲ್ಲಿ ಒಂದೇ ವಿಚಾರ ಪುನಃ ಪುನಃ ಕಂಡುಬರುವುದು ಅನಿವಾರ್ಯ. ಒಂದಕ್ಕಿಂತ ಒಂದು ಉತ್ತಮವಾಗಿ ತೋರಿಬರುತ್ತದೆ. 'ಸ್ಥಿರ ಸತ್ಯಂ ಚರ ಸುಂದರಮೆರಡುಂ ಬೆರೆತಂದು ತತ್ತ್ವ ಪೂರ್ಣಾಕಾರಂ' ಎಂಬ ಕವಿಗಳ ಹೇಳಿಕೆಯನ್ನೇ ಮತ್ತೊಮ್ಮೆ ಓದಿದಾಗ ಅವರ ನಿಲುವು ಏನು ಎಂಬುದು ದೃಢವಾಗುವುದು. ಕಾಮ ಯಮರ ಪ್ರಸಂಗವಾದರೂ ಹೀಗೆಯೇ ಮೇಲಿಂದ ಮೇಲೆ ವಿಚಾರ ನಡೆದು,

ಪುರುಷಂಗಿರ್ವರು ಸತ್ಪದ
ಗುರುಗಳ್, ಮನ್ಮಥನದೊರ್ವನ್ ಒರ್ವಂ ಕಾಲಂ
ಹರುಷಕೆ ಕರೆವಂ ಮದನಂ
ಧರುಮಕೆ ಕರೆವಾತನಂತಕಂ. ಸಮರುಭಯರ್

ಎಂದು ನಮಗೆ ಮುಂದಿಟ್ಟು ಮಾಡಿಕೊಡುವರು.

ಅತ್ತ ಸತ್ಯ ಸೌಂದರ್ಯಗಳ ಮೌಲ್ಯವನ್ನರಿತು. ಇತ್ತ ಕಾಮ-ಯಮರ ಪಾತ್ರವನು ಗ್ರಹಿಸಿ ಜೀವನ ನಡೆದಿದ್ದೇ ಆದರೆ ಅದಕ್ಕಿಂತಲೂ ಹಿರಿದಾದ ಭಾಗ್ಯ ಬೇರೊಂದಿಲ್ಲ. 'ಪ್ರಣಯವನರಿಯದ ಜೀವಂ ತೃಣಜಲ ಲವಲೇಶ ಶೂನ್ಯ ಮರುತಲ ಸಿಕತಂ' ಎಂದು ಕಡೆಯಲ್ಲಿ ಈ ಎಲ್ಲದರ ಅನುಭೂತಿಗೂ ಪ್ರಣಯ ಎಂತಹ ಸಾಧನವಾದೀತೆಂಬುದನ್ನು ನೆನೆದರೆ, ಈ ಶೃಂಗಾರಮಂಗಳದಲ್ಲಿ ಈ ಜಟಿಲ ವಿಚಾರಗಳ ಪ್ರಸಕ್ತಿ ಎಷ್ಟು ಸಮ್ಮತ ವಾದುದೆಂದು ಅರಿವಾಗುವುದು.

ಮಥಿಸುತೆ ಪ್ರತ್ಯಯವ ಸಮು
ದ್ಧೃತ ನವನೀತವನು ಹಂಚಿ ಸತಿಸುತ ಪಿತರೊಳ್
ಸ್ವತೆಯಂ ಸವೆಯಿಪುಪಾಯವ
ರತಿಪತಿಯಲ್ಲದೊಡದಾರು ಸಾಧಿಸಬಲ್ಲರ್

ಎನ್ನುವಲ್ಲಿ ಮದನನ ಮೇಲ್ಮೆ ಮಿಗಿಲಾಗುತ್ತದೆ. 'ಸತ್ಯಾಶ್ರಿತ ಸೌಂದರ್ಯಾಸಕ್ತನ ನೆಂದೆಂದುಮಂಟದಿನಿಸುಂ ಪಾಪಂ' ಎಂಬ ಆಶ್ವಾಸನೆ ಎಷ್ಟು ಮುಖ್ಯವೋ, 'ಸತ್ಯಶಿವ ಸುಂದರಂಗಳ್ ಪ್ರತ್ಯೇಕಗಳಲ್ತು, ವಸ್ತುವೇಕಂ ತ್ರಿಮುಖಂ' ಎಂಬ ಈ ವಿಭಾಗದ ಕಡೆಯ ಕಂದಪದ್ಯವೂ ಸಹ ಅಷ್ಟೇ ಅರ್ಥಗರ್ಭಿತವಾಗಿದೆ. ಪ್ರಕೃತ ವಿಭಾಗದಲ್ಲಿ ಒಟ್ಟು ೬೫ ಕಂದಪದ್ಯಗಳಿದ್ದು ಮೇಲೆ ಹೇಳಿರುವ ಎರಡು ದ್ವಂದ್ವಗಳ ಹಿರಿಮೆಯನ್ನು ಕವಿಗಳು ನಾನಾ ತೆರನಾಗಿ ಪ್ರತಿಪಾದಿಸಿರುತ್ತಾರೆ. ಒಂದೇ ವಿಷಯ ಪುನಃ ಪುನಃ ಪ್ರಸ್ತಾಪಿತ ವಾದರೂ ಸಾವಧಾನವಾಗಿ ಪರಿಭಾವಿಸಿದಾಗ ಅವೂ ಸಹ ವೈವಿಧ್ಯದಿಂದ ಕೂಡಿ ಪ್ರಿಯ ವಾಗಬಲ್ಲವು.

5

ಪ್ರಣಯ ಪ್ರಪಂಚದಲ್ಲಿ ಪಕ್ಷಿಗಳನ್ನು ಸಂಕೇತಗಳನ್ನಾಗಿ ಬಳಸಿಕೊಳ್ಳುವುದು ಒಂದು ಸಾಮಾನ್ಯವಾದ ಪದ್ಧತಿಯಷ್ಟೆ. ಕವಿಗಳಿಗೆ ಪಾಶ್ಚಾತ್ಯರ ಫೀನಿಕ್ಸ್ ಸಂಕೇತ ಮನಸ್ಸನ್ನು ಸೆಳೆಯಲು, ಅದರ ಬಗ್ಗೆ ರಚಿತವಾಗಿರುವ ಷೇಕ್ಸ್‌ಪಿಯರ್ ಕವಿಯ ಕವನ ವೊಂದರಿಂದ (The phoenix and the turtle) ಸ್ಫೂರ್ತಿ ಪಡೆದು ಆ ಮೂಲಕ 'ಪ್ರೇಮಾದ್ವೈತ' ಎಂಬ ತತ್ತ್ವವನ್ನು ಇಲ್ಲಿ ಬಹಳ ಸೂಕ್ಷ್ಮವಾಗಿ ಪ್ರತಿಪಾದಿಸಿರುವರು. 'ಫೀನಿಕ್ಸ್' ಪಕ್ಷಿಯ ಪ್ರಸಂಗವೇ ಬಹುಚೋದ್ಯ. ಅದು ಏಕಮೇವಾದ್ವಿತೀಯದ ಸಂಕೇತ. ಅದು ಏಕಾಕಿಯಾಗಿ ಐನೂರು ವರ್ಷಗಳು ಬಾಳಿ, ತನಗೆ ತಾನೇ ಚಿತೆಯಲ್ಲಿ ಭಸ್ಮವಾಗಿ, ಮತ್ತೆ ಅದೇ ಬೂದಿಯಿಂದ ಜನ್ಮ ತಾಳಿ ಬರುವ ಅದರ ಕಥೆ ತುಂಬ ಕುತೂಹಲಕಾರಿ ಯಾಗಿದೆ. ಷೇಕ್ಸ್‌ಪಿಯರನ ನಿರೂಪಣೆಯಲ್ಲಿ ಈ ಅಭೇದ್ಯವಾದ ಅಸಹಜತೆಗೆ ಸ್ವಲ್ಪ ಸ್ವಾಭಾವಿಕತೆಯ ಸ್ಪರ್ಶವಿರುವುದರಿಂದ ಪ್ರಕೃತ ಕವಿಗಳು ಈ ಇಂಗ್ಲಿಷ್ ಕವಿಯ ಮಾರ್ಪಾಟನ್ನು ಗ್ರಹಿಸಿ ಆ ವಸ್ತುವನ್ನು ನಮ್ಮ ದೇಶದ ವಾತಾವರಣಕ್ಕೆ ತಕ್ಕಂತೆ

ಅಳವಡಿಸಿರುವರು. ಕವಿಗಳೇ ತಮ್ಮ ಸೂಚನೆಯಲ್ಲಿ ಪ್ರಸ್ತಾಪಿಸಿರುವಂತೆ ರಾಮಾಯಣದ ಕ್ರೌಂಚ ಪಕ್ಷಿಗಳ ಪ್ರಸಂಗವೂ, ಮೇಘದೂತದ ಪಾರಿವಾಳದ ಪ್ರಶಂಸೆಯೂ ಘನವಾದ ಮಹಾಕವಿ ನಿದರ್ಶನಗಳೇ ಸರಿ. ಇದಲ್ಲದೆ ಪ್ರಣಯದ ಸೊಲ್ಲು ಸುಳಿದ ಕೂಡಲೆ ಚಕ್ರವಾಕವನ್ನು ಹೆಸರಿಸದ ಭಾರತೀಯ ಕವಿಗಳಿಲ್ಲ.

ಪ್ರಕೃತದಲ್ಲಿ ಪಾರಿವಾಳ ಮತ್ತು ಕ್ರೌಂಚ ಪಕ್ಷಿಗಳು ಪರಸ್ಪರ ಪ್ರೇಮದಿಂದ ದಂಪತಿಗಳಾಗಿ ಬಾಳಿ ಬದುಕಿದವು ಎಂಬ ಕವಿಕಲ್ಪನೆಯನ್ನು ಒಪ್ಪಿಕೊಂಡು, ಅವುಗಳ ಆತ್ಮಾರ್ಪಣೆ ಎಷ್ಟು ಉಜ್ವಲವಾದುದು ಎಂಬುದನ್ನು ಇಲ್ಲಿ ಪರಿಶೀಲಿಸಬೇಕಾಗಿದೆ. ಪಾರಿವಾಳವು ಗಂಡಿಗೆ ಪ್ರತಿನಿಧಿಯಾದರೆ, ಕ್ರೌಂಚವು ಹೆಣ್ಣಿಗೆ ಪ್ರತಿನಿಧಿ. ವಾಸ್ತವವಾಗಿ ಎರಡೂ ಬೇರೆ ಬೇರೆಯ ಪಕ್ಷಿಜಾತಿಗಳೆನ್ನಿಸಿದರೂ ಪ್ರಣಯ ಪ್ರಪಂಚದಲ್ಲಿ ಅವು ಅದ್ವೈತ ಸಿದ್ಧಿಯನ್ನು ಸಂಪಾದಿಸುವುದು ಚೋದ್ಯವೆನ್ನಿಸುತ್ತದೆ. ಜೀವಂತವಾಗಿದ್ದ ಕಾಲದಲ್ಲಿ ಅವು ಒಟ್ಟಿಗೆ ಹೇಗೆ ಬಾಳಿದವೋ ಮರಣದಲ್ಲಿಯೂ ಹಾಗೆಯೇ ಒಡಗೂಡಿ ಅಳಿದುವು ಎಂಬುದೇ ಅವುಗಳ ಪ್ರಶಸ್ತಿಗೆ ಕಾರಣ. ಆದ್ದರಿಂದ ಆ ಪಕ್ಷಿದ್ವಯಗಳನ್ನು ಕುರಿತ ಪ್ರಶಂಸೆ ಇಲ್ಲಿ ಚರಮಗೀತೆಯಾಗಿ ಕೇಳಿಬರುತ್ತದೆ.

> ಕ್ರೌಂಚಿಯುಂ ಪಾರಾವತನುಮೇಕವಾಗಿ
> ಪಂಚಶರಯಜ್ಞಕಾಹುತಿಯ ಚರುವಾಗಿ
> ಭಸ್ಮರೂಪದಿ ಸೊಗವ ಕಂಡರದು ಪುಣ್ಯಂ
> ಸ್ವಾತ್ಮಾರ್ಪಣೆಯ ಭಾಗ್ಯವಾಂತವನೆ ಧನ್ಯಂ

ಎಂಬಲ್ಲಿ ಅವುಗಳನ್ನು ಕುರಿತ ಕವಿಸ್ತುತಿ ಸ್ವವಿದಿತವಾಗುತ್ತದೆ. ಅವುಗಳು ತೋರ್ಕೆಗೆ ಎರಡಾಗಿದ್ದರೂ, ಕ್ಷಣಕಾಲವಾದರೂ ಅಗಲಿರಲಿಲ್ಲವೆಂಬ ಭಾವನೆಯನ್ನು ಕವಿಗಳು ವ್ಯಕ್ತಪಡಿಸುವ ವಿಧಾನ ವಿಶಿಷ್ಟವಾಗಿದೆ. 'ಎಣಿಸಲೆರಡಾದೊಡಮದಲ್ತು ಬೇರೆತನ ಪ್ರಣಯದೊಳ್ ಗಣಿತಕಾಗಿತ್ತಿಲ್ಲಿ ಮರಣ' ಎಂಬ ಪಂಕ್ತಿಗಳೇನೋ ಷೇಕ್ಸ್‌ಪಿಯರಿನ 'Two distincts, division none, number there in love was slain' ಎಂಬ ವಾಕ್ಯಗಳ ಯಥಾವತ್ತಾದ ಅನುವಾದವೇ ಸರಿ. 'ಬೇರೆ ಜನಿಸಿದ ಹೃದಯಗಳ್ ಆವೇನ ಭಿನ್ನಂ ದೂರಮಿರ್ಪಂ ನಡುವೆ ತಾಣಮಣಮಿಲ್ಲಂ' ಎಂಬಲ್ಲಿ ಎರಡರ ಹೆಸರೇ ಅಳಿಸಿಹೋಗಿತ್ತು ಎಂಬ ಸೂಚನೆಯೂ. 'ಒಂದು ಸ್ವಭಾವಕಿಂತೆರಡು ಹೆಸರಾಗಲ್‌ದ್ವಂದ್ವಮೇನಲ್ತು ಅದ್ವಂದ್ವಮುಮದಲ್ತು' ಎಂಬಲ್ಲಿ ಏಕವೇ ಅನೇಕವಾಗಲು ಅದು ಕೇವಲ ತಾತ್ಕಾಲಿಕ ಸ್ಥಿತಿ ಎಂಬ ಸಲಹೆಯೂ ಸ್ಫುರಿಸುತ್ತವೆ. ಪರಿಶುದ್ಧವಾದ ಪ್ರಣಯವು ತನ್ನ ಪರಕಾಷ್ಠೆಯ ಸ್ಥಿತಿಯನ್ನು ಮುಟ್ಟಿದಾಗ ಅದೂ ಸಹ ನಮ್ಮ ವೇದಾಂತದಂತೆಯೇ ಗುಹ್ಯತರವಾಗುವುದೆಂಬುದಕ್ಕೆ ಕವಿಗಳ ಈ ಪ್ರೇಮಾದ್ವೈತ ಪ್ರಕರಣವು ಒಳ್ಳೆಯ ನಿದರ್ಶನವಾಗಿದೆ. 'ಈಯೈಕಮತ್ಯಮೇ ದ್ವಿತ್ವಸಾರ್ಥಕ್ಯಂ ಅಯಿತದರಿಂದುಭಯಜೀವಿತಂ ಸಫಲಂ' ಎಂಬ

ವಾಕ್ಯ 'ಓಪರ್ ಓಪರೊಳ್ ಒಡಸಾಯಲ್ ಪಡೆದರ್, ಇನ್ನವೇಂ ಸೈಪ್ರೊಳಪೇ' ಎಂಬ ಪಂಪನ ಸುಪ್ರಸಿದ್ಧವಾದ ವಾಕ್ಯವನ್ನೇ ಸ್ಮರಣೆಗೆ ತರುತ್ತದೆ.

ಪಕ್ಷಿದಂಪತಿಗಳ ಶ್ರಾದ್ಧಗೀತಕ್ಕೆ ಅವುಗಳಂತೆಯೇ ಪವಿತ್ರವಾದ ಪಕ್ಷಿಗಳ ಬಳಗವನ್ನೇ ಕವಿಗಳು ಆಹ್ವಾನಿಸುವರು. ಶುಕ, ಪಾರಿವಾಳ, ಗೊರವಂಕ, ಹಂಸೆ, ಕೋಗಿಲೆ, ಚಕ್ರವಾಕ ಮೊದಲಾದುವುಗಳಲ್ಲಿ ಬಹುಮಟ್ಟಿಗೆ ಪ್ರತಿಯೊಂದೂ ನಮ್ಮ ಪ್ರಣಯ ಪ್ರಸಂಗಗಳಲ್ಲಿ ಈಗಾಗಲೇ ಸ್ಥಾನವನ್ನು ಗಳಿಸಿವೆ. ಕಾಗೆ, ಗೂಗೆ, ಗಿಡಗ, ಡೇಗೆ ಮತ್ತು ಹದ್ದುಗಳನ್ನು ಬಹಿಷ್ಕರಿಸಿ, ನಿಷ್ಠುರದಿಂದ ನುಡಿಯುವ ಕವಿಯ ದೃಷ್ಟಿ ಜನಜನಿತವಾದ ನಂಬಿಕೆಗೆ ಅನು ಸಾರವಾಗಿದೆಯೆಂಬ ಅಂಶವನ್ನು ನಾವು ಮರೆಯಬಾರದು.

ಕೇವಲ ಹದಿನಾರು ಪದ್ಯಗಳಿರುವ ಈ ವಿಭಾಗದಲ್ಲಿ ಹನ್ನೊಂದು ಪದ್ಯಗಳು ಪಾರಿವಾಳ ಮತ್ತು ಕ್ರೌಂಚ ಪಕ್ಷಿಗಳ ದಾಂಪತ್ಯದ ಗುಣಗಾನಕ್ಕೆ ಮೀಸಲಾಗಿದ್ದರೆ, ಕಡೆಯ ಐದು ಪದ್ಯ ಗಳು ಅವುಗಳ ಅಂತ್ಯಕ್ಕಾಗಿ ವ್ಯಕ್ತಪಡಿಸಿರುವ ಚರಮ ಗೀತೆಯಾಗಿವೆ. ದುಃಖವುಕ್ಕಿ ಬಂದಾಗ ಮನಸ್ಸು ಎಷ್ಟು ನಿರಾಶಾಮಯವಾಗುತ್ತದೆ ಎಂಬುದಕ್ಕೆ 'ಸಕಲಮ್ ಅಂಗಾರಪ್ರವಿಷ್ಟಂ' 'ಪ್ರೇಮಕ್ಕೆ ಸಮಾಪ್ತಿ ಸುಡುಗಾಡು' 'ಸತ್ಯ ಸುಂದರಗಳ್ಗೆ ಮಸಣ' ಎಂಬ ತೀಕ್ಷ್ಣವಾದ ವಾಕ್ಯಗಳಲ್ಲಿ ವ್ಯಕ್ತವಾಗುತ್ತವೆ. ಆದರೂ 'ಸನ್ನಿಯನೊ ಚನ್ನುವನೊ ಬಲ್ಲರ್ ಈ ಬೂದಿ ಕುಂಪಕ್ಕೆ ಬರುವರ್ ಹಕ್ಕಿ ಜತೆ ಹರಕೆಯನುಚಿರ್ವರ್' ಎಂಬ ಕಡೆಯ ನುಡಿಯಲ್ಲಿ ಆದ ರ್ಶದ ಧ್ವನಿ ಕೇಳಿ ಬಂದು ಆ ಹಕ್ಕಿಗಳ ಸಾವು ಸುಕೃತಫಲವೇ ಸರಿ ಎನ್ನಿಸುವುದು, ಕವಿ ಗಳೇ ವಿಜ್ಞಾಪಿಸಿಕೊಂಡಿರುವಂತೆ,

> ತಾರಗೆ ಧ್ರುವಂ ಪ್ರೇಮದಾಗಸದೊಳಿನಿಪಾ
> ಪಾರಾವತ-ಕ್ರೌಂಚ ದಾಂಪತ್ಯ ಜಸವ
> ಚರಮಗೀತೆಯ ಪಾಡುಗಿಂತು ಸರಸಜನಂ
> ಕರುಣಾರ್ದ್ರ ಹೃದಯರಿಂಗದು ಸಮಾಧಾನಂ

ಎಂದು ನಾವು ದನಿಗೂಡಿಸುವುದರಿಂದ ಅವುಗಳ ಅಮರಪ್ರೇಮಕ್ಕೆ ಕಾಣಿಕೆಯನ್ನು ಸಲ್ಲಿಸಿ ದಂತಾಗುವುದು.

ಇತರ ನಾಲ್ಕು ವಿಭಾಗಗಳಂತಲ್ಲದೆ, ಇಲ್ಲಿನ ನಿರೂಪಣೆಯಲ್ಲಿ ಒಂದು ಸಮಗ್ರ ತೆಯೂ ಏಕೈಕ ದೃಷ್ಟಿಯೂ ವ್ಯಕ್ತವಾಗುತ್ತದೆ. ಒಂದೊಂದು ಪದ್ಯವೂ ಪರಸ್ಪರ ಪೂರ ಕವಾಗಿ ಒಂದು ನಿರ್ದಿಷ್ಟವಾದ ವಸ್ತುವನ್ನು ಸಮರ್ಥಿಸುತ್ತದೆ. ಷೇಕ್ಸ್‌ಪಿಯರ್ ಬರೆದ ಕವನದೊಂದಿಗೆ ಹೋಲಿಸಿ ನೋಡಿದರೆ ಇಲ್ಲಿನ ರಚನೆ ಎಷ್ಟರಮಟ್ಟಿಗೆ ಅದನ್ನು ಅವ ಲಂಬಿಸಿದೆಯೆಂಬುದು ವಿದಿತವಾಗುವುದು.

6

ಪ್ರಣಯದ ವಿವಿಧಾಂಶಗಳನ್ನು ಬೇರೆ ಬೇರೆಯವರ ನಿದರ್ಶನಗಳನ್ನಿತ್ತು ಈವರೆಗೆ ಸಮೀಕ್ಷಿಸಿದ ಕವಿಗಳು ಇಲ್ಲಿ ಅನಾಮಧೇಯನೊಬ್ಬನ ಹೆಸರಿನಲ್ಲಿ, ಅದರಿಂದ ವಂಚಿತನಾದವನ ಬಾಳು ಎಷ್ಟು ದುರ್ಭರವಾದುದೆಂಬುದನ್ನು ತಿಳಿಸುತ್ತಾರೆ. ಪ್ರಣಯಿಗಳು ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡು ಪರಸ್ಪರವಾಗಿ ಪ್ರೀತಿಸಿ ಬಾಳುವುದು ಮಹಾಭಾಗ್ಯ. ಇಲ್ಲದಿದ್ದಲ್ಲಿ ಆ ಎದೆಗಳ ಯಾತನೆ ಹೇಳತೀರದು. ಇಂತಹ ವಿಷಮ ಪರಿಸ್ಥಿತಿಯನ್ನು ಚಿತ್ರಿಸಿರುವ ಭರ್ತೃಹರಿಯ ಪದ್ಯವೊಂದನ್ನು ಕವಿಗಳು ಹೀಗೆ ತರ್ಜುಮೆ ಮಾಡಿರುತ್ತಾರೆ:

ನಾನೊಲಿದಳಿಗಿಲ್ಲೊಲವೆನ್ನೊಳ್ ಅವಳ್
ಜಾನಿಪಳನ್ಯನನ್ ಅವನನ್ಯಳನು
ಧಿಕ್ಕವಳಿಗಂ ಅವನಿಗಂ ಅಂಗಜಗಂ
ಧಿಕ್ಕೃತಂ ಇನ್ನೊವರ್ಳಿಗಂ ನನಗಂ

ಹಲವರು ಮನ್ಮಥನನ್ನು ತೆಗಳುವವರೂ ಉಂಟು. ಅಂಥವರ ವರ್ತನೆಯನ್ನು ಕವಿಗಳು ಖಂಡಿಸುವುದಲ್ಲದೆ,

ಹರ ನಿನ್ನ ಸುಟ್ಟಿಂದದೇನಾಯ್ತು ಮರೆತರೇಂ
ವರಿಸುಮೆಯನೆಂದವನ ಸುರರೆಳಸಲಿಲ್ಲೇಂ?
ಇರಲಿ ಶಾಸ್ತ್ರದ ವಚನ ಶುಷ್ಕ ಪುಸ್ತಕ ಕಥನ;
ಪರಿಕಿಸಲಿ ಶಾಸ್ತ್ರಿಗಳು ಲೋಕಜೀವಿತವ,

ಹೃದಯದೊಳದನಿಗೆ ಕಿವಿಗುಡಲಿ ಶಾಸ್ತ್ರಿಗಳಿನಿತು.
ಕೆದಕಿ ನೋಡಲಿ ಋಷಿಚರಿತ್ರೆಗಳನವರಿನಿತು
ಶುಕನ ಪೂರ್ವಿಕರಾರು? ಕೌಶಿಕನ ತಪವೇನು?
ದ್ವಿಕಳತ್ರನಲ ಯಾಜ್ಞವಲ್ಕ್ಯ ಯೋಗೀಶ್ವರನು'!

ರಾಮನೇಂ ಕೃಷ್ಣನೇಂ ಇಂದ್ರನೇಂ ಚಂದ್ರನೇಂ
ರಾಮೆಯರ ನೆನೆಯದ ಪುರಾಣವೊಂದಿಹುದೇಂ?

ಪ್ರಣಯದ ಪ್ರಭಾವವು ಎಷ್ಟು ಗಾಢವಾದುದೆಂಬುದನ್ನು ನಿದರ್ಶನಪೂರ್ವಕವಾಗಿ ಸ್ಪಷ್ಟಪಡಿಸುತ್ತಾರೆ. ಮುಖ್ಯವಾಗಿ ಸೃಷ್ಟಿಯಲ್ಲಿ ಸ್ಮರನ ಸಾಮರ್ಥ್ಯ ಅಜೇಯವೆಂಬಂತೆ ತೋರಿಬರುತ್ತದೆ. ಅವರಿವರ ಅಂತರಂಗವನ್ನು ಕೆಣಕುವುದು ಹಾಗಿರಲಿ. ಇಲ್ಲಿ ಅನಾಮಧೇಯನು ತನ್ನ ಹೃದಯವನ್ನೇ ಹೀಗೆ ತೆರೆದು ತೋರುವನು.

ಹಿಂದೆ ನಾನೊಮ್ಮೆ ಕಾಷಾಯಕ್ಕೆ ಮನಸೋತು
ಮಂದರಾದ್ರಿಯ ದಾರ್ಢ್ಯವೆನ್ನಮನವೆಂದು

ಇಂದ್ರಿಯಂಗಳ ಗಾಳಿಗದು ಕದಲದೆಂದು
ಕಂದರ್ಪ ನಿನ್ನ ದರ್ಪವನು ನಾ ಮರೆತು
ನೈರಾಶ್ಯವನೆ ಭಸ್ಮರುದ್ರಾಕ್ಷಿಯೆಂದೆಣಿಸಿ
ವೈರಾಗ್ಯದಾಭಾಸವನೆ ಸತ್ಯವೆಂದೆಣಿಸಿ

ಶಿವಯತಿಯ ಬೇಡಿದೆನು ಸಂನ್ಯಾಸವರಕಾಗಿ
ಜವನಾಗ ಕದ್ದೊಯ್ದನೆನ್ನಿರವೊಳೊಂದರೆಯ
ಅಂದಿನಿಂ ಕುಂಟುತಿಹೆನಿಳೆಯೊಳೊಕ್ಕಾಲಾಗಿ
ಅಂದಿನಿಂದಲೆ ನಿನ್ನ ದುರ್ನಿವಾರ್ಯತೆಯರಿವು

ಈ ಆತ್ಮಕಥೆ ಯಾರ ಮನಸ್ಸನ್ನಾದರೂ ಕರಗಿಸುವಂತಹುದು.

ಅಗಲಿಕೆಯಲ್ಲಿ ಅನಂಗನ ಪ್ರಭಾವ ತುಂಬ ತೀಕ್ಷ್ಣವಾದದ್ದೇ ಸರಿ. ಈ ದುಃಖವನ್ನು ಮರೆಸಿಕೊಂಡು, ಅನಾಮಧೇಯನು ಹೇಳುವ ಮದನನ ಮಹಿಮೆ ಮನಮೆಚ್ಚುವಂತಿದೆ. ಅವನ ಚೇಷ್ಟೆ ವರ್ಣಿಸಲಳವಲ್ಲ. ಎಂತೋ ಏನೋ ಮೋಹವನ್ನು ಕವಿಸುವನು. ಅವನ ಪಾಶದಲ್ಲಿ ಸಿಕ್ಕಿಬಿದ್ದು ದಾಸರಾದವರ ಸ್ಥಿತಿ ಸೋಜಿಗವಾದುದೇ ಸರಿ. ಅವನ ವರ್ಣನೆ ಇಂತಿದೆ.

ಕವಿಸುತ್ತೆ ನೀಂ ಕಣ್ಗೆ ಮೋಹಮಯ ಪಟಲವನು
ಜಿವರ ಪರಿಮಳವೆನಿಪೆ, ಜೊಲ್ಲ ಸುಧೆಯೆನಿಪೆ,
ಕೃಶತೆಯನು ಲತೆಯೆನಿಪೆ, ಮಸಿಯ ಶಾಮಲವೆನಿಪೆ
ಕಿಸವಾಯ ಹಸಿತವೆನ್ನಿಪೆ ಕಂಪುಮುರಸಿ,
ಎಂತಿರ್ದೊಡಂತು ಸೊಗ ನಿನ್ನಾಣತಿಗಳಂತೆ
ಗ್ರಂಥಿಯಲಿ ನೀಂ ಕಟ್ಟಿದರ್ ಕುರುಡರಂತೆ

ಮನ್ಮಥನ ಮಾಯಾವಿಲಾಸ ಇಷ್ಟಕ್ಕೇ ಮುಗಿಯುವುದಿಲ್ಲ. ಅವನು ಕಾಣದೆಡೆಯಿಲ್ಲ: ತೋರದ ಸಂಭ್ರಮವಿಲ್ಲ. 'ಗಾಣದೆತ್ತಿನ ಪಾಡು ನೀನಿಲ್ಲದಿಹ ಬೀಡು' ಎಂದು ನೀರಸವಾದ ಬದುಕಿನ ಯಾಂತ್ರಿಕತೆಯನ್ನು ಚಿತ್ರಿಸಿ ಸೃಷ್ಟಿಯ ರೀತಿನೀತಿಗಳಿಗೆಲ್ಲ ಅವನು ಹೊಣೆ ಎನ್ನುವರು. 'ಸೌಂದರ್ಯ ಘನ ನೀನು, ಸೃಷ್ಟಿಗರ್ಭವೆ ನೀನು, ಇಂದ್ರಿಯಾಧಿಪ ನೀನು, ಎಲ್ಲೆಡೆಯು ನೀನು' ಎಂದು ಕೊಂಡಾಡಿ, ಸುತ್ತಮುತ್ತಲಿನ ಪ್ರಕೃತಿಯ ಚೆಲುವಿನಲ್ಲೆಲ್ಲ ಅವನ ನೆಲೆಯನ್ನು ಗುರುತಿಸಿ ತೋರುವರು.

ಅಂತು ನಿನ್ನಿಂದೆಲ್ಲ ಜಂತುಗಳ ಕೆಳೆ ಜಗಳ
ಕಾಂತ ಕಾಂತೆಯರಾಟ, ವಿರಹಿತರ ಕಾಟ;
ಅಂತು ಸಂಸಾರತಂತುವಿನ ತಿರಿ ತೊಡಕುಗಳು
ಕಂತು, ನಿನ್ನಿಂ ಜಗತ್ಸಂತತಿಯ ಧಾರೆ

ಎಂಬುದಾಗಿ ಮನ್ಮಥನ ಮಹಾತ್ಮೆಯನ್ನು ಬಗೆಬಗೆಯಾಗಿ ತಿಳಿಸಿ ವಿಶದಪಡಿಸುವರು.

ಸ್ಮರನು ಸರ್ವದಾ ಸುಖವನ್ನೇ ನೀಡುವನೆಂದೂ ಹೇಳುವಂತಿಲ್ಲ. ಅವನ ಗೆಯ್ಮೆಯಲ್ಲಿ ಅಹಿತದ ಕಾವೂ ಉಂಟು. ಈ ಮುಖವನ್ನು ಸಹ ಇಲ್ಲಿ ಕಾಣಬಹುದು. 'ಸುಖನಾರ್ಗ್ಗೊ, ನೀನಸುಖನಾರ್ಗ್ಗೊ ತಿಳಿವುದು ಕಷ್ಟ, ಮುಖದಿ ನಗು ಕರದೊಳಸಿಯು ದುವೆ ನಿನ್ನೊಗಟು' ಎಂದು ಪೀಠಿಕೆ ಹಾಕಿ, ಕವಿಗಳು ಮನ್ಮಥನ ಮೂಲಕ ಆಗಬಹುದಾದ ವಿರಸವನ್ನೆಲ್ಲ ವಿವರಿಸುವರು. ಭರ್ತೃಹರಿಯು ಹೇಳಿದಂತೆ ಪ್ರೇಮಿಗಳು ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳದಿದ್ದರೆ ಅದಕ್ಕಿಂತ ಹೆಚ್ಚಿನ ಹಾನಿ ಬೇರೊಂದಿಲ್ಲ. ದಾರ ಸಿಕ್ಕು ಸಿಕ್ಕಾದಂತೆ ಬಾಳು ಜಟಿಲವಾದೀತು. ಆ ಸೊಟ್ಟನ್ನು ತಿದ್ದಲು ಬೇರಾರಿಂದಲೂ ಸಾಧ್ಯವಿಲ್ಲ. ಅದಕ್ಕಾಗಿ ಕವಿಯು ಕೋರಿಕೆಯಾದರೂ ಇಷ್ಟೆ. 'ಶರಲಕ್ಷ್ಯಸಮತೆಯನು. ಅಧಿಕಾರ ಮಿತಿಯಂ'' 'ಸುಮಬಾಣ ಸಮಬಾಣನಾಗು ನೀನುಭಯರೊಳು' ಎಂದು ಬಿಡಿಸಿ ಹೇಳುವರು. ಮನ್ಮಥನು ಪಂಚಬಾಣನಾದುದರಿಂದ ಅವನನ್ನು ಅಸಮಬಾಣನೆಂದು ಕರೆವುದು ರೂಢಿಯಷ್ಟೆ. ಅದಕ್ಕಾಗಿ 'ನರನ ನೀನಿರಿದು ನಾರಿಯ ನಿರಿಯದಿರಬೇಡ, ಸರಿಸಮದಿ ಸಮಸಮಯ ನೋಯಿಸಿರ್ವರನು' ಎಂದು ಕೇಳಿಕೊಳ್ಳುವರು. ಎಲ್ಲಿ ಈ ರೀತಿಯಾದ ಸರಿಸಮನಾದ ಹೃದಯಸ್ಪಂದನವುಂಟೋ ಅಲ್ಲಿ ದಾಂಪತ್ಯ ತುಂಬ ಹದವಾಗಿರುತ್ತದೆ. 'ಸಮದಿ ನೀನಿರುವ ಕಡೆ ಸಮುಚಿತದ ದಾಂಪತ್ಯ, ವಿಮಲ ಧರ್ಮಗಳಲ್ಲಿ ನೆಮ್ಮದಿಗಳಲ್ಲಿ' ಎಂಬ ಮಾತುಗಳು ಅಮೃತಪ್ರಾಯವಾದುವು.

ಕವಿಗಳ ಎರಡನೆಯ ವಿನಂತಿಯಾದರೂ ಇಷ್ಟೇ ಘನವಾದದ್ದು. ಪರವಸ್ತುವಿನ ಅರಿವನ್ನು ಮರಸದಂತೆ ರಕ್ಷಿಸು ಎಂಬ ಪ್ರಾರ್ಥನೆ ಉಚಿತವೇ ಸರಿ. ಹಾಗಾಗುವ ಸಂದರ್ಭದಲ್ಲಿ 'ಕಾಮ, ಆತ್ಮವನು ಮರೆಯಿಸದೆ ಅಂತರಂಗದಿ ಬೆಂಕಿ ಹೊಗೆಗಳೇಳಿಸದೆ ಕಾಂತೆಯೆನಗನುವಿರದೊಡುಪಸಂಹರಿಸು ಶರವ. ಶಾಂತಿಗನುವಿರು ಚಿರಕೃತಾಂತನಾಗದೆ ನೀಂ' ಎಂದು ಹೇಳಲೂ ಹಿಂತೆಗೆಯುವವರಲ್ಲ. ಕಾಮನಿಗೂ ಯಮನಿಗೂ ಇರುವ ಅಂತರವನ್ನು ಹೇಳುವ ರೀತಿಯೂ ಸ್ವಾರಸ್ಯವಾಗಿದೆ. 'ಕ್ಷಣವೊಂದರಲಿ ಬಂದು ಕೊಂಡೊಯ್ವನಂತಕನು. ದಿನದಿನದಿ ಚಣಚಣದಿ ಕೊಲ್ಲುವನು ನೀನು' ಎಂಬ ಹೇಳಿಕೆ ಅರ್ಥವತ್ತಾಗಿದೆ. 'ಮಿತಿಯೊಳಿರೆ ಹಿತ ನೀನು, ಪರಮಹಿತಕಾಗಿ ಮಿತಿ' ಎಂದು ವಿಜ್ಞಾಪಿಸಿಕೊಂಡು ಉದ್ರೇಕದಿಂದ ಮನಸ್ಸು ಪಲ್ಲಟವಾಗದಂತೆ ಕಾಪಾಡಬೇಕೆಂದು ಕೋರುವರು. ಜೀವನದಲ್ಲಿ ಪ್ರಣಯದ ಸ್ಥಾನ ಎಷ್ಟು ಗಹನ ಮತ್ತು ಎಷ್ಟು ಸ್ವಾದು ಎಂಬುದು ಕವಿಗಳ ಈ ಎರಡು ಆಶಯಗಳಲ್ಲಿ ಅಡಕವಾಗಿದೆ.

ಇಂಥ ಅಮೂಲ್ಯವಾದ ವಿಚಾರಸರಣಿಯಿಂದ ತುಂಬಿ ತುಳುಕುತ್ತಿರುವ ಈ ಪ್ರಸಂಗವನ್ನು ಕವಿಗಳು ಬಹಳ ಪ್ರಶಂಸನೀಯವಾಗಿಯೇ ಮುಗಿಸುತ್ತಾರೆ, 'ನಮಿಪೆನೋ ಭಾವಜನೆ ಭಾವವಿಕೃತಿಯ ಶಮಿಸು ನಮಿಪೆನೋ ಕಾಯಜನೆ ಕಾಯಕವ ದಮಿಸು' ಎಂದು ಮೊದಲಾಗುವ ಈ ಕಟ್ಟಕಡೆಯ ಕೋರಿಕೆ. ಕಾಮನ ಮೇಲ್ಮೆ

ಯನ್ನೆಲ್ಲ ಮನವಾರೆ ಒಪ್ಪಿಕೊಂಡು 'ನರ್ಮಗುರುವೊಲು ಬಂದು ಧರ್ಮಗುರು ವಾಗೆಯೇಂ ? ಮರ್ಮಜ್ಞ ನೀನೊಲಿಯೆ ನೆಮ್ಮದಿಯದೆನಗೆ' ಎಂದು ತುದಿಮುಟ್ಟು ವುದು. ಅನಾಮಧೇಯನ ಸಾಕ್ಷ್ಯದಲ್ಲಿ ಕಂಡುಬರುವ ಸ್ವಾನುಭವ ಪ್ರಮಾಣ ತುಂಬ ವಿಶಿಷ್ಟವಾದುದು. ಅದು ಮನಸ್ಸನ್ನು ಒಲಿಸುವುದು ಮಾತ್ರವಲ್ಲದೆ, ಆಯಾ ಮಾತುಗಳನ್ನು ಕುರಿತು ಚಿಂತಿಸಿದಂತೆಲ್ಲ ಅಂತರಂಗವು ಪರಿಪಕ್ವವಾಗುವಂತೆ ನೆರ ವಾಗುವುದು.

ಪ್ರಣಯದಂತಹ ಬೃಹತ್ತಾದ ವಿಷಯವನ್ನು ಈ ಪುಟ್ಟ ಪುಸ್ತಕದಲ್ಲಿ ಅಡಗಿ ಸಿಟ್ಟು ಹೇಳಿರುವ ಕವಿಯ ಕೌಶಲವೇ ನಮ್ಮನ್ನು ಬೆರಗುಮಾಡುವಂತಹುದು. ಅದರ ವಿರಾಡ್ರೂಪವನ್ನು ವಿವಿಧ ದೃಷ್ಟಿಗಳಿಂದ ವಿಶ್ಲೇಷಿಸಿರುವ ವಿಧಾನವೂ ವಿಶಿಷ್ಟ ವಾದದ್ದು. ಕವಿಗಳೇ ಸೂಚಿಸಿರುವಂತೆ ಪ್ರಣಯವನ್ನು ಕುರಿತ ಈ ಸಾಕ್ಷ್ಯಪಂಚಕ ಗಳು ಮಹರ್ಷಿಗಳ ಪಾರಮಾರ್ಥಿಕ ದೃಷ್ಟಿಯಿಂದ ಮೊದಲ್ಗೊಂಡು ಮಹಾಕವಿಗಳ ಐಹಿಕ ಮೌಲ್ಯದವರೆಗೆ ವ್ಯಾಪಿಸಿದೆ. ಯಾವ ದೃಷ್ಟಿಕೋನದಿಂದ ಕಂಡರೂ ಪರಿ ಶುದ್ಧವಾದ ಪ್ರಣಯಕ್ಕೆ ಪ್ರಕೃತಿಯಲ್ಲಿ ಪ್ರಥಮ ಸ್ಥಾನವೇ ಸಲ್ಲುತ್ತದೆ. ಅದರ ವಿಕೃತ ಸ್ವಭಾವವನ್ನು ಹೋಗಲಾಡಿಸಿದ್ದೇ ಆದರೆ ಅದು ಅಪರಂಜಿಯಂತೆ ಅತ್ಯ ಮೂಲ್ಯವಾದುದು. ಪ್ರಣಯವನ್ನು ಕುರಿತ ಈ ಜಿಜ್ಞಾಸೆ ಆವೇಶಪ್ರಧಾನವಾದು ದಲ್ಲ. ಚಿಂತನಪ್ರಧಾನವಾದುದು. ಆದುದರಿಂದಲೇ ಈ ಚಿಕ್ಕ ಕವನ ಸಂಕಲನ ದಲ್ಲಿ ಹೆಜ್ಜೆ ಹೆಜ್ಜೆಗೂ ಸ್ಫಟಿಕದಂತಹ ಸೂಕ್ತಿಗರ್ಭಿತವಾದ ಸಾಲುಗಳು ರಾಶಿ ರಾಶಿ ಯಾಗಿ ದೊರೆಯುತ್ತವೆ. ಡಿ.ವಿ.ಜಿ. ಅವರ ಶೈಲಿಯಲ್ಲಿ ನಮ್ಮ ಚಂಪೂಕವಿಗಳ ಪ್ರೌಢಿಮೆಯೂ ಷಟ್ಪದೀಕವಿಗಳ ಲಾಲಿತ್ಯವೂ ಸಂದರ್ಭೋಚಿತವಾಗಿ ಕೂಡಿಕೊಂಡು ಬರುತ್ತವೆ. ಇದೇ ಲೇಖಕರ 'ಸಂಸ್ಕೃತಿ' ಎಂಬ ಮತ್ತೊಂದು ಪುಟ್ಟ ಪುಸ್ತಕ ಹೇಗೆ ವಿಚಾರಸಂಪತ್ತಿನಿಂದ ಒಂದು ಮಾಣಿಕ್ಯಕೋಶವೆನ್ನಿಸಿದೆಯೊ ಹಾಗೆಯೇ ಪ್ರಣಯದ ತಿರುಳನ್ನು ಕುರಿತ ಈ ಪುಟ್ಟ ಪುಸ್ತಕ ಒಂದು ರತ್ನಮಂಜೂಷದಂತಿದೆ.

ಅನುಭೂತ್ಯಾಭಾಸ: ಒಂದು ಅಲಂಕಾರ

ಎಂ. ವಿ. ಸೀತಾರಾಮಯ್ಯ

I

ಕನ್ನಡದ ಅಲಂಕಾರಶಾಸ್ತ್ರ ಗ್ರಂಥಗಳೆಲ್ಲವೂ ಸಂಸ್ಕೃತದವನ್ನು ಅವಲಂಬಿಸಿ ರಚಿತವಾದವು. ಸಂಸ್ಕೃತ ಆಲಂಕಾರಿಕರು ಹೇಳದಿರುವ ಅಲಂಕಾರವನ್ನು ಕನ್ನಡದವರು ಪ್ರಾಯಿಕವಾಗಿ ಹೇಳಿಲ್ಲ.[1] ಸಂಸ್ಕೃತದಲ್ಲಿ ಅಲಂಕಾರಗಳ ಸಂಖ್ಯೆ ಕಾಲಕಾಲಕ್ಕೆ ಬೆಳೆಯುತ್ತ ಬಂದು, 'ಕುವಲಯಾನಂದ'ದಲ್ಲಿ 120 ಕ್ಕೆ ಏರಿದೆ. ಪ್ರತಿಭಾಶಾಲಿಗಳಾದ ಕವಿಗಳು ಹೊಸ ಅಲಂಕಾರಗಳನ್ನು ಸೃಷ್ಟಿಸಬಲ್ಲರು: ಹಾಗೆಯೇ, ಮೇಧಾವಿಗಳಾದ ಲಾಕ್ಷಣಿಕರು ಹಿಂದಿನವರು ಗುರುತಿಸದಿದ್ದ ಹೊಸ ಅಲಂಕಾರಗಳನ್ನು ಕಾವ್ಯಗಳಲ್ಲಿ ಗುರುತಿಸಿ, ಅವಕ್ಕೆ ಉಚಿತವಾದ ಹೆಸರುಗಳನ್ನು ಕೊಡಬಲ್ಲರು. ಹೀಗೆ ಹೆಚ್ಚುತ್ತ ಬಂದಿದೆ ಅಲಂಕಾರಗಳ ಸಂಖ್ಯೆ. ಕನ್ನಡ ಆಲಂಕಾರಿಕರಲ್ಲಿ ಪ್ರಾಚೀನನಾದ ನಾಗವರ್ಮನು 'ಕಾವ್ಯಾವಲೋಕನ'ದಲ್ಲಿ 60 ಅಲಂಕಾರಗಳನ್ನು ವಿವರಿಸಿದ್ದಾನೆ; ಅರ್ವಾಚೀನನಾದ ತಿರುಮಲಾರ್ಯನು 'ಅಪ್ರತಿಮವೀರಚರಿತ'ದಲ್ಲಿ ಹೇಳಿರುವವು 120.

ಈಗ ನಾವು ವಿವರಿಸ ಹೊರಟಿರುವ 'ಅನುಭೂತ್ಯಾಭಾಸ' ಎಂಬ ಅಲಂಕಾರ ಲಕ್ಷಣನಿರೂಪಣೆಯ ದೃಷ್ಟಿಯಿಂದ, ಹೆಸರಿನ ಮಟ್ಟಿಗೆ, ಹೊಸದು. ಸಂಸ್ಕೃತ ಮತ್ತು ಕನ್ನಡ ಕಾವ್ಯಗಳಲ್ಲಿ ಇದಕ್ಕೆ ಲಕ್ಷ್ಯಗಳು ಧಾರಾಳವಾಗಿ ದೊರಕುತ್ತವೆ. ಪ್ರಸಿದ್ಧವಾದ ಒಂದೆರಡು ಅಲಂಕಾರಗಳ ಲಕ್ಷ್ಯಗಳಲ್ಲಿ ಇದರ ಛಾಯೆಯನ್ನು ಗುರುತಿಸಬಹುದು[2]; ಸೂಕ್ಷ್ಮವಾಗಿ ಪರಿಶೀಲನೆಮಾಡಿದರೆ, ಬೇರೆಯ ಅಲಂಕಾರಗಳ ಲಕ್ಷ್ಯಗಳಲ್ಲಿಯೂ ಕಂಡುಬಂದೀತು. ಆದರೆ, ನಮಗೆ ತಿಳಿದಮಟ್ಟಿಗೆ, ಈ ಅಲಂಕಾರವ (ಮುಂದೆ ವಿವರಿಸುವ) ಲಕ್ಷಣವನ್ನು ಪೂರ್ತಿ ಪ್ರತಿನಿಧಿಸುವ ಅಲಂಕಾರ ಯಾವ ಅಲಂಕಾರಶಾಸ್ತ್ರಗ್ರಂಥದಲ್ಲಿಯೂ ಉಕ್ತವಾಗಿಲ್ಲ.

---

[1] ದಂಡಿ ಭಾಮಹರನ್ನು ಅನುಸರಿಸಿರುವ ಶ್ರೀವಿಜಯನು ಕವಿರಾಜಮಾರ್ಗದಲ್ಲಿ ಧ್ವನ್ಯಲಂಕಾರವನ್ನು ಅವರು ಹೇಳಿರುವ 35 ಅಲಂಕಾರಗಳ ಜೊತೆಗೆ 36ನೆಯ ಅಲಂಕಾರವಾಗಿ ಹೊಸದಾಗಿ ಸೇರಿಸಿದ್ದಾನೆ. ಇದು ಅಲಂಕಾರ ಹೌದೇ ಅಲ್ಲವೇ ಎಂಬ ಬಗೆಗೆ ವಿದ್ವಾಂಸರಲ್ಲಿ ಚರ್ಚೆ ನಡೆದಿದೆ. ಕವಿರಾಜಮಾರ್ಗದ ತೃತೀಯ ಪರಿಷ್ಕೃತ ಮುದ್ರಣದ ಟಿಪ್ಪಣಿ ಭಾಗದಲ್ಲಿ ಇದರ ಕೂಲಂಕಷವಾದ ವಿಚಾರ ವಿಮರ್ಶೆಯನ್ನು ನೋಡಬಹುದು.

[2] ಕನ್ನಡ ಕೈಪಿಡಿಯಲ್ಲಿ ಅಪಹ್ನುತಿ, ಸಮಾಸೋಕ್ತಿ—ಈ ಅಲಂಕಾರಗಳ ಲಕ್ಷ್ಯಗಳನ್ನು ನೋಡಿ.

ಈ ಅಲಂಕಾರವನ್ನು ಪಾಶ್ಚಾತ್ಯ ಕವಿತೆಯಲ್ಲಿ ಮೊದಲು ಗುರುತಿಸಿ, ಅದಕ್ಕೆ Pathetic Fallacy (ಅನುಭೂತ್ಯಾರೋಪಣ ದೋಷ) ಎಂದು ನಾಮಕರಣ ಮಾಡಿದವನು ಪ್ರಸಿದ್ಧ ಆಂಗ್ಲ ಲೇಖಕನೂ ಕಲಾವಿಮರ್ಶಕನೂ ಆದ ಜಾನ್ ರಸ್ಕಿನ್ (ಕ್ರಿ.ಶ. 1819–1900). ಈತ ತನ್ನ Modern Painters ಎಂಬ ಅನೇಕ ಸಂಪುಟಗಳ ಬೃಹದ್ಗ್ರಂಥವಲ್ಲಿ, ವರ್ಣಚಿತ್ರಗಳಲ್ಲಿ ಪ್ರಕೃತಿನಿರೂಪಣೆ (treatment of nature) ಹೇಗಿರಬೇಕೆಂಬುದನ್ನು ಪ್ರತಿಪಾದಿಸುವ ಸಂದರ್ಭದಲ್ಲಿ, ಕಾವ್ಯಪ್ರಪಂಚದಲ್ಲಿ ಅದು ಹೇಗೆ ವಿಶಿಷ್ಟಸ್ವರೂಪವನ್ನು ಪಡೆಯಬಲ್ಲದು ಎಂದು ತುಲನೆಮಾಡಿ ಹೇಳುವಾಗ ಈ ಅಲಂಕಾರ ವಿಚಾರವನ್ನು ಸೂಕ್ಷ್ಮವಾಗಿ ವಿವೇಚನೆಮಾಡಿದ್ದಾನೆ[3]. ಕನ್ನಡ ವಿಮರ್ಶಾ ಸಾಹಿತ್ಯದಲ್ಲಿ ಇದರ ವಿಷಯ ಪ್ರಸ್ತಾವಕ್ಕೆ ಬಂದಿದ್ದರೂ, ವಿಸ್ತಾರವಾದ ವಿಚಾರ ವಿಮರ್ಶೆ ನಡೆದಂತೆ ಕಂಡು ಬರುವುದಿಲ್ಲ[4].

2

ರಸ್ಕಿನ್ ಎತ್ತಿಕೊಂಡಿರುವ ಚರ್ಚೆ ಪ್ರಕೃತಿನಿರೂಪಣೆಗೆ ಸಂಬಂಧಪಟ್ಟದ್ದಾದರೂ, ಮೂಲಭೂತವಾಗಿ ಕಲೆಯ ಅಭಿವ್ಯಕ್ತಿಯಲ್ಲಿ ಸತ್ಯದ ಸ್ವರೂಪ ಹೇಗಿರಬೇಕು ಎಂಬುದನ್ನು ಕುರಿತಿದೆ. ಈ ನಿಟ್ಟಿನಲ್ಲಿ ಕೆಲವು ತತ್ತ್ವಶಾಸ್ತ್ರಜ್ಞರು ಪದಾರ್ಥಗುಣಗಳನ್ನು 'ವಸ್ತುನಿಷ್ಠ' (Objective) ಮತ್ತು 'ವ್ಯಕ್ತಿನಿಷ್ಠ' (Subjective) ಎಂದು ವಿಭಜಿಸುವುದನ್ನು ರಸ್ಕಿನ್ ಒಪ್ಪುವುದಿಲ್ಲ. ಈ ತತ್ತ್ವಶಾಸ್ತ್ರಜ್ಞರ ಅಭಿಪ್ರಾಯದ ಮೇರೆಗೆ, ಒಂದು ನೀಲಿಯ ಪದಾರ್ಥದ (ಉದಾ.. ಆಕಾಶ) 'ನೀಲಿ' ಎಂದರೆ ಅದು ನೋಟಕನ ಚಕ್ಷುರಿಂದ್ರಿಯಕ್ಕೆ ಅನುಭವವಾಗುವ ವಿಷಯವೆ ಹೊರತು ಪದಾರ್ಥದಲ್ಲಿಯೇ ಆ ಗುಣ ಇಲ್ಲ. ನೋಟಕನ ಇಂದ್ರಿಯಾನುಭವಕ್ಕೆ ಅನುಗುಣವಾಗಿ ಸಿದ್ಧಿಸುವ ಇಂಥ ಗುಣ 'ವ್ಯಕ್ತಿನಿಷ್ಠ'. ಪದಾರ್ಥಗಳ ಇನ್ನು ಕೆಲವು ಗುಣಗಳು ನೋಟಕನ ದರ್ಶನಾನುಭವವನ್ನು ಅಪೇಕ್ಷಿಸದೆ, ಅವುಗಳಲ್ಲಿ ಸದಾ ಇದ್ದೇ ಇರುತ್ತವೆ; ಉದಾ.. ಒಂದು

---

[3] **Modern Painters,** Vol. iii, pt. 4, 1856. ಈ ಗ್ರಂಥದ ಪ್ರಸಕ್ತ ಭಾಗವನ್ನು Of the Pathetic Fallacy ಎಂಬ ಪ್ರತ್ಯೇಕ ಲೇಖನವಾಗಿ The World's Classics ಗ್ರಂಥಮಾಲೆಯ English Critical Essays (Nineteenth Century) ಎಂಬ ಸಂಪುಟದಲ್ಲಿ (Humphrey Milford, Oxford University Press, 1920; pp. 378-397) ಪ್ರಕಟಿಸಿದೆ.

[4] 1926ರಷ್ಟು ಹಿಂದೆಯೇ 'ಕರ್ಣಾಟಕ ಸಾಹಿತ್ಯದಲ್ಲಿ ಪ್ರಕೃತಿವರ್ಣನೆ' ಎಂಬ ತಮ್ಮ ಲೇಖನದಲ್ಲಿ ದಿ|| ಡಿ. ಎಲ್. ನರಸಿಂಹಾಚಾರ್ಯರು Pathetic Fallacy ಯ ವರ್ಣನಾ ವಿಧಾನವನ್ನು ಪ್ರಸ್ತಾಪಿಸಿದ್ದಾರೆ; ಆದರೆ ವಿವರಿಸುವ ಪ್ರಯತ್ನಮಾಡಿಲ್ಲ. ಈ ಲೇಖನ ಕ. ಸಾ. ಪರಿಷತ್ಪತ್ರಿಕೆಯಲ್ಲಿಯೂ (1928). ಈಚೆಗೆ ಡಿ. ವಿ. ಕೆ. ಮೂರ್ತಿಯವರು ಪ್ರಕಟಿಸಿರುವ ದಿವಂಗತರ 'ಟೀಕೆಗಳು—ಲೇಖನಗಳು' (1971) ಎಂಬ ಗ್ರಂಥದಲ್ಲೂ ಪ್ರಕಟವಾಗಿದೆ.

ಪದಾರ್ಥದ ಗುಂಡಾಕಾರ ಇಲ್ಲವೆ ಚೌಕಾಕಾರ. ಇಂಥ ಗುಣ 'ವಸ್ತುನಿಷ್ಠ'. ರಸ್ಕಿನ್ ಈ ಭೇದಗಳನ್ನು ಅಲ್ಲಗಳೆದು, ನೀಲಿಯ ಗುಣ ಕಣ್ಣಿನ ಮೇಲೆ ಒಂದು ಪದಾರ್ಥ ಬೀರುವ ಪರಿಣಾಮ-ಪ್ರಭಾವವಲ್ಲ, ಆ ಪದಾರ್ಥದಲ್ಲಿಯೇ ಅಂತರ್ಗತವಾಗಿರುವ, ನೀಲಿಯ ಭಾವನೆಯನ್ನು ಉಂಟುಮಾಡುವ ಶಕ್ತಿ, ಎಂದು ವಾದಿಸುತ್ತಾನೆ. ನಾವು ನೋಡಲಿ ಬಿಡಲಿ, ಆಕಾಶ ಸ್ವಭಾವತಃ ನೀಲಿ; ನಾವು ಮುಟ್ಟಲಿ ಬಿಡಲಿ, ಕಲ್ಲು ಕಠಿನ; ಗುಂಡುಕಲ್ಲು ಯಾವಾಗಲೂ ಗುಂಡು. ದೈವಸೃಷ್ಟಿಯಲ್ಲಿ ಪದಾರ್ಥಗಳ ದ್ರವ್ಯ ಕಣಗಳ ಸಂಯೋಜನೆ ಇರುವುದೇ ಹಾಗೆ. ಒಂದು ಮಾತಿನಲ್ಲಿ, ನಮ್ಮ ಇಂದ್ರಿಯಾನುಭವವೆಲ್ಲ 'ವಸ್ತುನಿಷ್ಠ' ಎಂಬುದು ಆತನ ನಿಲುವು. ಆದರೆ, 'ವಸ್ತುನಿಷ್ಠ', 'ವ್ಯಕ್ತಿನಿಷ್ಠ' ಎಂಬ ಪ್ರಯೋಗಕ್ಕೇ ಅವನ ವಿರೋಧವಿದೆ. ಪದಾರ್ಥಗಳು 'ಇರುವುದು ಹೀಗೆ', ನಮಗೆ 'ಕಾಣುವುದು ಹೀಗೆ' ಎಂದು ಸರಳವಾಗಿ ತಿಳಿಸಬೇಕೆಂದು ಆತನ ಅಪೇಕ್ಷೆ. ಈ ನಿಲುವಿನ ಆಧಾರದ ಮೇಲೆ ಪದಾರ್ಥಗಳ ತೋರಿಕೆಯನ್ನು (Appearance) ಅವನು ಹೀಗೆ ವಿಶ್ಲೇಷಿಸುತ್ತಾನೆ: ಒಂದು, ಸರ್ವಸಾಧಾರಣವಾಗಿ ಕಂಡುಬರುವ ಪದಾರ್ಥಗಳ ಸರಿಯಾದ, ಯಥಾರ್ಥವಾದ ತೋರಿಕೆ (ಯಥಾರ್ಥ ದರ್ಶನ, ಇದರ ಫಲವೇ ಯಥಾರ್ಥಜ್ಞಾನ); ಇನ್ನೊಂದು, ನಮ್ಮ ಭಾವಾವೇಶಕ್ಕೋ ಚಿಂತನಶೀಲವಾದ ಊಹಾಕಲ್ಪನೆಗೋ ಒಳಗಾಗಿ ಕಂಡುಬರುವ ಪದಾರ್ಥಗಳ ಹುಸಿತೋರಿಕೆ (ಮಿಥ್ಯಾದರ್ಶನ, ಇದರ ಫಲವೆ ಮಿಥ್ಯಾಜ್ಞಾನ). ಅವನ ಹೇಳಿಕೆಯಂತೆ, ಎರಡನೆಯ ಬಗೆಯದು, 'ನಾವು ಕಾಣುವ ನೋಟ ಅಥವಾ ದರ್ಶನ: ವಸ್ತುವಿನ ನೈಜ ಸ್ವಭಾವಕ್ಕೆ ಸಂಬಂಧಪಟ್ಟದ್ದಲ್ಲ'[5]. ಈ ಎರಡನೆಯ ಬಗೆಯದಕ್ಕೆ ಅವನು ಕೊಡುವ ನಿದರ್ಶನ:

---

5 Appearance (ತೋರಿಕೆ, ಕಾಣ್ಕೆ), Reality (ವಾಸ್ತವತೆ, ವಸ್ತುಸ್ವಭಾವ), Truth (ಸತ್ಯ) — ಇವು ತಾತ್ತ್ವಿಕವಾಗಿ ಬೇರೆಬೇರೆ ಪ್ರಮಾಣಗಳಿಂದ ಸಿದ್ಧಿಸುವ ನಮ್ಮ ಜ್ಞಾನದ ಪ್ರಮೇಯಗಳು. ಇವುಗಳ ವಿಚಾರ ವಿಮರ್ಶೆ ತುಂಬ ಜಟಿಲವಾದುವು; ತತ್ತ್ವಶಾಸ್ತ್ರದ Epistemology ಎಂಬ ಜ್ಞಾನಮೀಮಾಂಸೆಯ ಕ್ಷೇತ್ರಕ್ಕೆ ಸೇರಿದ್ದು. ಇಲ್ಲಿ ಈ ವಿಷಯದ ಪ್ರಸ್ತಾವ ಪ್ರಕೃತವೂ ಅಲ್ಲ, ಸಾಧ್ಯವೂ ಅಲ್ಲ. ವಿಷಯದಲ್ಲಿ ಕುತೂಹಲವುಳ್ಳವರು ಡಾ॥ ಎಸ್. ಎಲ್. ಭೈರಪ್ಪನವರ 'ಸತ್ಯ ಮತ್ತು ಸೌಂದರ್ಯ' ಎಂಬ ಗ್ರಂಥದಲ್ಲಿ ಸಂಬಂಧಪಟ್ಟ ಅಧ್ಯಾಯಗಳನ್ನು ಅವಲೋಕಿಸಬಹುದು. ಈ ಲೇಖನದಲ್ಲಿ 'ಸತ್ಯ' ಎಂಬ ಮಾತನ್ನು 'ಇಂದ್ರಿಯ ಗೋಚರ ಸತ್ಯ' ಅಥವಾ 'ಲೋಕಸತ್ಯ' ಎಂಬ ಸಾಮಾನ್ಯಾರ್ಥದಲ್ಲಿ ಬಳಸಿದೆ. ಈ ಸ್ಥೂಲವಾದ ಅರ್ಥದಲ್ಲಿ 'ಸತ್ಯ', 'ವಸ್ತುಸ್ಥಿತಿ' — ಎರಡೂ ಒಂದೇ ಎನ್ನಬಹುದು. ಕಲಾವಿಷಯದಲ್ಲಿ ರಸ್ಕಿನ್ ಆದರ್ಶವಾದಿಯಾದರೂ, ವಾಸ್ತವತೆಯನ್ನು (Realism) ಒಪ್ಪಿಕೊಂಡವನು. ಅರಿಸ್ಟಾಟಲನ ಅನುಕರಣವಾದ (Theory of imitation) ದಲ್ಲಿ ವಾಸ್ತವತೆಯ ಪ್ರಶ್ನೆ ಏಳುತ್ತದೆ. ಪ್ಲೇಟೋ ಕಲೆ ಪ್ರಕೃತಿಯ ನಕಲು (copy) ಎಂದಾಗ, ಅದು ಬಹುಮಟ್ಟಿಗೆ ವಸ್ತುನಿಷ್ಠ; ಅರಿಸ್ಟಾಟಲನ ಅನುಕರಣತತ್ತ್ವದ ಪ್ರಕಾರ ಕಲೆ ವಸ್ತುಸ್ವರೂಪದ ಕಾಲ್ಪನಿಕ ನಿರೂಪಣೆ ಆದದ್ದರಿಂದ, ವ್ಯಕ್ತಿನಿಷ್ಠ.

The spendthrift crocus, bursting through the mould
Naked and shivering, with his cup of gold.

ಈ ಕವಿತೆಯ ಪಂಕ್ತಿ "ತುಂಬ ಚೆಲುವಾಗಿದೆ. ಆದರೂ ಶುದ್ಧ ಅಸತ್ಯ" ಎಂಬುದು ರಸ್ಕಿನ್ನನ ಟೀಕೆ. ಎಲ್ಲ ಕಲೆಗಳಲ್ಲಿಯೂ ಅಸತ್ಯವಾದದ್ದು ಎಂದಿಗೂ ಹಿತಕರವಲ್ಲ. ಉಪಯುಕ್ತವಲ್ಲ. ಸಂತೋಷದಾಯಕವಲ್ಲ ಎಂಬುದು ಅವನು ಪ್ರಸಕ್ತ ಗ್ರಂಥದಲ್ಲಿ ಮಂಡಿಸಿರುವ ವಾದ. ಸೋಜಿಗದ ಸಂಗತಿ ಎಂದರೆ, ಈ ಕವಿತೆಯ ಸಾಲಿನಲ್ಲಿ ಅಸತ್ಯವಿದ್ದರೂ ಸಂತೋಷಜನಕ ಅಂಶ ಇದೆ ಎನ್ನುತ್ತಾನೆ; ನಮಗೆ ಪ್ರಿಯವಾದ ಕವಿತೆಯ ತುಂಬೆಲ್ಲ ಇಂಥ ದೋಷ — 'ಅಸತ್ಯವಾದ ಸೌಂದರ್ಯಾಂಶ' ಹೇರಳವಾಗಿದೆ. ಅದು ಹಾಗಿರುವುದರಿಂದಲೇ ಅದನ್ನು ನಾವು ಅಷ್ಟೊಂದು ಮೆಚ್ಚಿಕೊಳ್ಳುತ್ತೇವೆ — ಎಂದು ಒಪ್ಪುತ್ತಾನೆ.

ಮೇಲಿನ ಪದ್ಯಪಂಕ್ತಿಯಲ್ಲಿ ಅವನು ಕಾಣುವ ಅಸತ್ಯ ಇದು : ಕ್ರೋಕಸ್ 'ದುಂದುಗಾರ ವ್ಯಕ್ತಿ' (spendthrift) ಅಲ್ಲ: ಅದೊಂದು (ಕೇಸರಿ ಜಾತಿಯ) ತಾಳಿಕೆಯ ಸಾಮರ್ಥ್ಯವುಳ್ಳ ಗಿಡ. ಅದರ ಬಣ್ಣ ಹೊಂಬಣ್ಣವಲ್ಲ, ಕೇಸರಿ ಬಣ್ಣ. ಇಲ್ಲಿ ಕವಿ ಬೇಕೆಂದೇ ಕ್ರೋಕಸ್ ಬಗೆಗೆ ತಾನು ಕಲ್ಪಿಸಿಕೊಂಡದ್ದನ್ನು ನಿರೂಪಿಸಿದ್ದಾನೆ: ತಾನು ಹೇಳುವುದನ್ನು ಓದುಗರು ನಂಬಬೇಕೆಂದು ಅತ ನಿರೀಕ್ಷಿಸುವುದಿಲ್ಲ, ಇದು ಒಂದು ಬಗೆಯ ದೋಷ (fallacy).

ಕವಿಕಲ್ಪನೆ ಕೂಡ ಲೋಕಸತ್ಯವನ್ನು ಅವಲಂಬಿಸಿರಬೇಕು ಎಂಬ ಅಭಿಪ್ರಾಯವನ್ನು ಸಾಮಾನ್ಯವಾಗಿ ಒಪ್ಪಬಹುದು. ಕವಿ ಅದನ್ನು ಉತ್ಪ್ರೇಕ್ಷೆಮಾಡಬಹುದು, ಅತಿಶಯಿಸಿ ಹೇಳಬಹುದು : ಅತ್ಯುಕ್ತಿಯಾಗಿ ಉಲ್ಲೇಖಿಸಬಹುದು. ಬಳಕೆಮಾತಿನಲ್ಲಿ ಕೂಡ ಈ ಬಗೆಯ ಉಕ್ತಿಗೆ ಅವಕಾಶವುಂಟು. ಸ್ವಲ್ಪ ಕೆಂಪು ಛಾಯೆಯುಳ್ಳ ಸಂಪಗೆಯನ್ನು 'ಕೆಂಡಸಂಪಗೆ' ಎನ್ನುವುದಿಲ್ಲವೇ ? (ಇದರಲ್ಲಿ ಕೆಂಡದ ಕೆಂಪೂ ಇಲ್ಲ, ಸುಡುವ ದಾಹವೂ ಇಲ್ಲವೇ ಇಲ್ಲ). ಮೂಗು ಸ್ವಲ್ಪ ಬಾಗಿದ್ದರೆ ಗಿಣಿಮೂಗು, ಗರುಡ ಮೂಗು : ಮನುಷ್ಯ ತೆಳ್ಳಗಿದ್ದರೆ ಬಡಕಲು ಕಡ್ಡಿ : ಸ್ಥೂಲಕಾಯನಾದರೆ ಘೇಂಡಾಮೃಗ, ಆನೆಯಮರಿ. ಕಲ್ಪನಾಜೀವಿಯಾದ ಕವಿಯನ್ನು ಕೇಳಬೇಕೇ ? 'ನಿಯತಿಕೃತನಿಯಮರಹಿತ'ವಾದ ಕವಿಪ್ರತಿಭೆ ಲೋಕೋತ್ತರವಾದ ಕಾಣ್ಕೆಯನ್ನೂ ಅದಕ್ಕನುಗುಣವಾದ ನಿರ್ಮಾಣಶಕ್ತಿಯನ್ನೂ ಹೊಂದಿರುವುದರಲ್ಲಿ ಆಶ್ಚರ್ಯವೇನು ? ಸಾಮಾನ್ಯರಿಗೆ ಚಿಟ್ಟೆ ಚಿಟ್ಟೆಯಾಗಿ ಕಾಣುತ್ತದೆ : ಕವಿಗೆ ಅದು 'ಹಾರುವ ಹೂ'ವಾಗಿ ಕಾಣುತ್ತದೆ. ಕಂಡದ್ದನ್ನು ಕಂಡಹಾಗೆ ತಿಳಿಸದೆ 'ಬಳಸುದಾರಿ'ಯಲ್ಲಿ ತಿಳಿಸುವುದೆ 'ವಕ್ರೋಕ್ತಿ'. ಈ ಬಗೆಯ 'ವಕ್ರೋಕ್ತಿ' ಅಥವಾ 'ವಕ್ರತೆ' (obliquity)ಯಿಂದಲೇ ಕಾವ್ಯದ

ಸೌಂದರ್ಯ[6]. ಈ ಪ್ರಕರಣದಲ್ಲಿ ರಸ್ಕಿನ್‌ನ ವಾದವನ್ನು ಒಪ್ಪಿಕೊಳ್ಳುತ್ತ, ಇಲ್ಲಿ "ನೈಸರ್ಗಿಕ ಸತ್ಯಾಂಶದ ಕಾಲ್ಪನಿಕ ನಿರೂಪಣೆ ಅಸಮರ್ಪಕ; ಏಕೆಂದರೆ, ಅದಕ್ಕೆ ನೈಜತೆಯ ಆಧಾರವಿಲ್ಲ. ಕವಿತೆ ಸತ್ಯದ ಸಾಮಗ್ರಿಯಿಂದ ನಿರ್ಮಿತವಾಗಿಲ್ಲ, ಅದನ್ನು ದುರ್ವಿನಿಯೋಗಮಾಡಿಕೊಂಡಿದೆ" ಎಂದು ಹಡ್ಸನ್ ಮಾಡಿರುವ ಟೀಕೆ ಒಪ್ಪತಕ್ಕದ್ದು.[7]

ಮೇಲಿನ ಚರ್ಚೆ 'ಕಾವ್ಯಸತ್ಯ'ಕ್ಕೆ ಸಂಬಂಧ ಪಟ್ಟದ್ದು. ಈ ವಿಷಯವಾಗಿ ಕನ್ನಡದಲ್ಲಿಯೂ ಸಾಕಷ್ಟು ವಿವೇಚನೆ ನಡೆದಿರುವುದರಿಂದ, ಅದನ್ನು ಇಲ್ಲಿ ಬೆಳಸುವುದು ಅಪ್ರಕೃತ.[8] ಲೌಕಿಕದೃಷ್ಟಿಯಿಂದ 'ಅಸತ್ಯ' ಎನ್ನುವುದಕ್ಕೂ ಕಾವ್ಯದ ಬೆಲೆ ಬರುವ ಸಂದರ್ಭಗಳುಂಟು. ಪೌರಾಣಿಕ ವಿಷಯುಗಳನ್ನೂ, ಅತಿಮಾನುಷ ಅಮಾನುಷ ಮುಂತಾದ ಅಲೌಕಿಕ ಸಂಗತಿಗಳನ್ನೂ ನಿರೂಪಿಸುವಾಗ ಕವಿ ಅಸತ್ಯದ ಆಧಾರದಮೇಲೆಯೇ ತನ್ನ ಸುಂದರವಾದ ಕಾವ್ಯಸೌಧವನ್ನು ನಿರ್ಮಿಸುತ್ತಾನೆ. ಕವಿಯ ಈ ಅಸಾಧಾರಣ ಮಹಿಮೆಯನ್ನು ಕೊಂಡಾಡುವ ನೇಮಿಚಂದ್ರನ "ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ...ಕಟ್ಟಿದರ್ ಕವಿಗಳ್ ಕೃತಿಬಂಧದೊಳ್" (ಲೀಲಾವತಿ: 1-11), "ಕಾಷ್ಠಮಂ ಕೊನರಿಪರ್ ಕಲ್ಲಲ್ಲಿ ನಾರೆತ್ತುವರ್" (ಅದೇ: 1-13) ಎಂಬ ಮಾತುಗಳು ಪ್ರಸಿದ್ಧವಾಗಿವೆ. ಕಾವ್ಯಲೋಕವನ್ನು ಪ್ರವೇಶಿಸಿದಾಗ ನಮ್ಮ "ವಿಚಾರಶೀಲವಾದ ನಂಬಿಕೆಗಳನ್ನು ಅಥವಾ ಕಾವ್ಯಜಗತ್ತಿನ ಬಗೆಗೆ ನಾವು ತಳೆಯಬಹುದಾದ ಅಪನಂಬಿಕೆಗಳನ್ನು ಅಮಾನತ್ತಿನಲ್ಲಿಟ್ಟು, ತತ್‌ಕ್ಷಣಕ್ಕೆ ತಡೆಹಿಡಿದು" (Suspended disbelief) ಕಾವ್ಯಲೋಕದ ಪ್ರಜೆಯಾಗಿ ಪ್ರವೇಶಿಸಬೇಕೆಂಬ ಕೋಲ್

---

6 ಉಪಮೆ, ರೂಪಕ, ಪ್ರತಿಮೆ, ಪ್ರತೀಕ—ಇವೇ ವಕ್ರೋಕ್ತಿಯ ಕಾವ್ಯಭಾಷೆ. ಎಲ್ಲ ಅಲಂಕಾರಗಳೂ ವಕ್ರೋಕ್ತಿಯೆ. ಕವಿ ತಾನು ವಾಸ್ತವ ಪ್ರಪಂಚದಲ್ಲಿ ಕಂಡ ವಸ್ತುವನ್ನು—ತನಗೆ ಹೇಗೆ ಕಂಡಿತು ಎಂಬುದನ್ನು ತಿಳಿಸಲು—ಎಂದರೆ ಆದರ ಸ್ವರೂಪವನ್ನು ಮಾತಿನಲ್ಲಿ ಪಡಿಮೂಡಿಸಲು ಹವಣಿಸುತ್ತಾನೆ. ಎಂದರೆ, ಕಂಡ ವಸ್ತುವಿನ ಕಾಣ್ಕೆಯನ್ನು ಪ್ರತಿರೂಪದ (ಪ್ರತಿರೂಪ, ಪ್ರತೀಕ, ಪ್ರತಿಮೆ—ಇವುಗಳ ನಡುವೆ ಸ್ವಲ್ಪ ವ್ಯತ್ಯಾಸವನ್ನು ಗುರುತಿಸಬಹುದು) ಮೂಲಕವೇ ವರ್ಣಿಸಬೇಕು. ಅವನ ಮನಸ್ಸಿನಲ್ಲಿ ಅನೇಕ ಪ್ರತೀಕಗಳು ಹುದುಗಿಕೊಂಡಿರುತ್ತವೆ. ಈ ಪ್ರತೀಕಗಳ ಭಂಡಾರವೇ ಅವನ ಅನುಭವ. ಈ ಅನುಭವಭಂಡಾರದಿಂದ ಕಾವ್ಯನಿರ್ಮಾಣಾವಸರದಲ್ಲಿ ಮೂಡಿದ ಪ್ರತೀಕ (ಅಥವಾ ಪ್ರತಿಮೆ) ವರ್ಣಿಸುವ ವಿಷಯಕ್ಕೆ ಯಾವುದಾದರೂ ಒಂದು ಬಗೆಯಲ್ಲಿ ಸಾದೃಶ್ಯಸಂಬಂಧ ಹೊಂದಿರಬೇಕು: ಕವಿ ಉದ್ದೇಶಿಸಿರುವ ವರ್ಣ್ಯವಿಷಯ ಅವನು ಬಳಸುವ ಪ್ರತಿಮೆಯ ನೆರವಿನಿಂದ ಸಹೃದಯರ ಅನುಭವಕ್ಕೂ ಬರುವಂತಿರಬೇಕು. 'ಹಾರುವ ಹೂವು' ಎಂದಾಗ 'ಚಿಟ್ಟೆ' ಎಂದು ಬೋಧೆಯಾಗುತ್ತದೆ. ಹೂವಿಗೆ ಜೀವ ಬಂದರೆ, ಹೂವು ಬೇರೆಯಲ್ಲ. ಚಿಟ್ಟೆ ಬೇರೆಯಲ್ಲ. ಹೂವು—ಚಿಟ್ಟೆಗಳ ಸಾದೃಶ್ಯಸಂಬಂಧಕ್ಕೆ ಸತ್ಯದ ಆಧಾರವಿದೆ: ಹಗುರು, ವರ್ಣರಂಜನೆ, ಕೋಮಲತ್ವ, ಚಿತ್ರಾಕೃತಿ. ಇವೆಲ್ಲ ಸತ್ಯ. 'ಹಾರುವ ಹೊನ್ನಿನ ರೇಕು' ಎಂದರೆ ಅಸತ್ಯವಾಗುತ್ತದೆ—ಕಾವ್ಯದೃಷ್ಟಿಯಿಂದ ಕೂಡ.

7 W. H. Hudson — An Introduction to the Study of Literature, 2nd. Edn., 1927 : pp. 104-105.

8 ನೋಡಿ : 'ಕಾವ್ಯ ಸತ್ಯ', ಎಸ್. ವಿ. ಪರಮೇಶ್ವರ ಭಟ್ಟ: 'ಸಂಭಾವನೆ'.

ರಿಜ್ ಕವಿಯ ಮಾತನ್ನೂ ಇಲ್ಲಿ ನೆನೆಯಬಹುದು. ಅಲೌಕಿಕ, ಅಮಾನುಷ, ಅಥವಾ ಅತಿಮಾನುಷ ಸಂಗತಿಗಳು ಮಾತ್ರವಲ್ಲದೆ ಲೌಕಿಕ ಸಂಗತಿಗಳ ನಿರೂಪಣೆಯಲ್ಲಿಯೂ ಕವಿ ಅನುಸರಿಸುವುದು 'ಅಸತ್ಯ'ವಾದ ವಿಧಾನ. ಕವಿ "ಗಿಡಗಂಟೆಯಾ ಕೊರಳೊಳಗಿಂದ ಹಕ್ಕಿಗಳ ಹಾಡು ಹೊರಟಿತು" ಎಂದಾಗ, ಚಂದ್ರನನ್ನು "ಬಡವರ ಲಾಂದ್ರ" ಎಂದಾಗ, ಅಸತ್ಯವಾಗಿ ಕಾಣುವ ವಾಚ್ಯಾರ್ಥವನ್ನು ಹಿಡಿದರೆ, ಕವಿ ತಿಳಿಸುವುದು ಸುಳ್ಳು : ಗಿಡಗಂಟೆಗೆ ಕೊರಳಿಲ್ಲ, ಚಂದ್ರ ಲಾಂದ್ರ ಅಲ್ಲ. ವ್ಯಂಗ್ಯವನ್ನು ಗ್ರಹಿಸಿದರೆ, ಹಕ್ಕಿಗಳು ಗಿಡದ ಎಲೆಮರೆಯಲ್ಲಿ ಅಡಗಿರುವುದರಿಂದ ಗಿಡ ಹಾಡುವಂತೆ ಭಾಸವಾಗುತ್ತಿತ್ತು[9]. ಉರಿಸುವುದಕ್ಕೆ ಹಣತೆಯೂ ಇಲ್ಲದ ಬಡವರ ಪಾಲಿಗೆ ಶುಕ್ಲಪಕ್ಷದಲ್ಲಿ ಚಂದ್ರನ ಬೆಳಕೇ ಆಧಾರ, ಎಂಬ ಸತ್ಯಸಂಗತಿಗಳೇ ಗ್ರಹಿಕೆಗೆ ಬರುತ್ತವೆ. ಗಿಡ-ಹಕ್ಕಿಗಳ ಸಂಬಂಧ, ಚಂದ್ರ-ಲಾಂದ್ರಗಳ ಸಾದೃಶ್ಯ—ಇವು ಸತ್ಯ ಸಂಗತಿಗಳು. ಸತ್ಯಾಂಶ ಲವಲೇಶವೂ ಇಲ್ಲದ "ನೀರೊಳಗಿರ್ದುಂ ಬೆಮರ್ತನುರಗಪತಾಕಂ" ಎಂಬ ರನ್ನನ ಉಕ್ತಿಯ ಧ್ವನಿಪ್ರಾಚುರ್ಯಕ್ಕೆ ಅಸತ್ಯವೇ ಮೂಲಾಧಾರ! ಅನೇಕವೇಳೆ ಅಸತ್ಯವೇ ಕಾವ್ಯಧ್ವನಿಯ ಜೀವಾಳ ಎನ್ನಬಹುದು. ಹೀಗಿರುವಾಗ, ಮೇಲೆ ಗಮನಿಸಿದಂತಹ ಉಕ್ತಿವೈಚಿತ್ರ್ಯಗಳನ್ನು ರಸ್ಕಿನ್ ದೋಷ ಅಥವಾ ತಪ್ಪು ಎಂದು ಕರೆದದ್ದೇ ತಪ್ಪು. ಅವನ ತರ್ಕಬುದ್ಧಿ ಇಂಥ ಉಕ್ತಿವಿಧಾನವನ್ನು ಒಪ್ಪುವುದಿಲ್ಲ; ಅವನ ಹೃದಯದ ಕಣ್ಣು ಅದರ ಸೌಂದರ್ಯವನ್ನು ಗುರುತಿಸುತ್ತದೆ. ರಸ್ಕಿನ್ನನ ಹೇಳಿಕೆಯ ಅಸಂಬದ್ಧತೆ ಇರುವುದು ಇಲ್ಲಿ.

3

ಇಲ್ಲಿಯ ವರೆಗಿನ ಪರಿಶೀಲನೆ, ಲೋಕದಲ್ಲಿ ಇರುವ ವಸ್ತುಗಳನ್ನು ಯಥಾರ್ಥವಲ್ಲದ ರೀತಿಯಲ್ಲಿ ನಿರೂಪಿಸುವ 'ಅಸತ್ಯ'ದ ದೋಷದ ಬಗೆಗೆ ರಸ್ಕಿನ್ನನ ದೃಷ್ಟಿ ಏನೆಂಬುದನ್ನು ಕುರಿತದ್ದು.

ಲೋಕಾನುಭವ ಸಾಲದೆಯೊ ಶಾಸ್ತ್ರಜ್ಞಾನ ಕೊರತೆಯಾಗಿಯೊ ಪ್ರತಿಭಾದಾರಿದ್ರ್ಯದಿಂದಲೋ ಕವಿ ನಿಸರ್ಗಲೋಕದ ವಾಸ್ತವ ಸಂಗತಿಗಳನ್ನು ವಸ್ತುಸ್ಥಿತಿಗೆ ವಿರುದ್ಧವಾಗಿರುವಂತೆ ನಿರೂಪಿಸುವ ಸಂಭವವೂ ಉಂಟು. ಭಾಮಹಾದಿ ಭಾರತೀಯ ಕಾವ್ಯಮೀಮಾಂಸಕರು ಕಾವ್ಯದೋಷ ಪ್ರಕರಣದಲ್ಲಿ ಈ ಸಂದರ್ಭಗಳನ್ನು ಕೂಲಂಕಷವಾಗಿ ವಿವೇಚನೆ ಮಾಡಿರುತ್ತಾರೆ. ಈ ವಿಷಯವಾಗಿ ಇಷ್ಟು ಶಾಸ್ತ್ರೀಯವಾದ ಪರಿಶೀಲನೆ ಪಾಶ್ಚಾತ್ಯ ಕಾವ್ಯ

9. ಈ ಉಕ್ತಿಗೆ ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರರ ವ್ಯಾಖ್ಯಾನ ಹೀಗೆ : "ಉದಯದಲ್ಲಿ ಹಕ್ಕಿಗಳು ಹಾಡುವುದನ್ನು 'ಗಿಡಗಂಟೆಯ ಕೊರಳಿನಿಂದ ಸ್ವರ ಹೊರಟಿದೆ' ಎಂದು ಇವರು ವರ್ಣಿಸಿದ್ದಾರೆ. ಹಾಡುವ ಹಕ್ಕಿ ಗಿಡಗಂಟೆಯ ಕೊರಳು. ಉದಯದಲ್ಲಿ ಗಿಡ ಪಡುವ ಆನಂದವನ್ನು ಹಕ್ಕಿಯ ಹಾಡು ಹೊರಸೂಸುತ್ತದೆ. ಇಂಥ ಮಾತಿನಲ್ಲಿ ಮಿಗಿಲಾದ ಚಾತುರ್ಯ ಮಾತ್ರ ಇಲ್ಲ. ಪ್ರಕೃತಿಯನ್ನು ಕುರಿತ ವಿಲಕ್ಷಣ ಭಾವನೆಯಿದೆ. ವರ್ಣನೆಯ ಚಾತುರ್ಯವೆಂದು ಕಾಣುವ ಈ ಉಕ್ತಿಭಂಗಿ ಭಾವನೆಯ ಫಲ" (ಬೇಂದ್ರೆಯವರ 'ನಾದಲೀಲೆ'ಯ ಮುನ್ನುಡಿ.)

ಮೀಮಾಂಸೆಯಲ್ಲಿ ಕಂಡುಬರುವುದಿಲ್ಲ. ಅವುಗಳ ಪ್ರಸ್ತಾವ ಇಲ್ಲಿ ಅನಗತ್ಯ. "ಅವುದಶೇಷ ಲೋಕ-ವಿಷಯ ಸ್ಥಿತಿಯಲ್ತು ಬಿಳಾಗವಪಾರ್ಥಮುಂ ಭಾವಿಪೊಡಲ್ತು", ಅಂಥದರ ನಿರೂಪಣೆ "ಸತ್ಕವಿಪರಂಪರೆಯಿಂ ಪರಿಗೀತಮಾಗಿ"—ಕಾವ್ಯದೋಷ ಎನ್ನಿಸಿಕೊಳ್ಳದೆ 'ಕವಿಸಮಯ' ಎಂಬ ಉಕ್ತಿವಿಧಾನವಾಗಿಯೇ ಪರಿಗಣಿತವಾಗಿದೆ. ಪ್ರಪ್ರಥಮವಾಗಿ ಒಬ್ಬ ಕವಿಯ ಸುಂದರಕಲ್ಪನೆ ಬರು ಬರುತ್ತ ಕವಿಗಳ ಕೈಯಲ್ಲಿ ಸವಕಲು ನಾಣ್ಯವಾಗಿ ಬೆಲೆ ಕಳೆದು ಕೊಳ್ಳಬಹುದಾದರೂ, ಸತ್ಕವಿಯೊಬ್ಬನ ಕೈಲಿ ಅದಕ್ಕೊಂದು ಹೊಸ ಬೆಲೆಯೇ ಹೇಗೆ ಬರುತ್ತದೆ ಎಂಬುದು ಕಾವ್ಯದ ಒಂದು ಸೋಜಿಗ. ಕವಿಸಮಯವೆಲ್ಲ ಸುಳ್ಳಿನ ಕಂತೆ ಎನ್ನುವುದೂ ಸಲ್ಲದು. ಅನೇಕ ಕವಿಸಮಯಗಳ ಮೂಲವನ್ನು ಅರಸಿಕೊಂಡು ಹೊರಟರೆ, ಕವಿಸಮಯದ ಬಳ್ಳಿಯ ಸತ್ಯಾಂಶಬೀಜ ಗೋಚರಿಸಬಹುದು.[10] ಇದು ಹೇಗಾದರೂ ಇರಲಿ. ಕವಿಸಮಯದಲ್ಲಿ 'ಅಸದಾಖ್ಯಾತಿ' ಎಂದರೆ ಇಲ್ಲದೆ ಇರುವುದನ್ನು ಇರುವಂತೆ ವರ್ಣಿಸುವ ವಿಭಾಗವೇ ಇರುವುದು ಗಮನಾರ್ಹ. ಈ ಬಗೆಯ ಅಸತ್ಯದ ನಿರೂಪಣೆ ರಸ್ಕಿನ್ನನ ಗಮನಕ್ಕೆ ಬಂದಿದ್ದರೆ ಅವನು ಏನು ಹೇಳುತ್ತಿದ್ದನೋ! ನಮ್ಮ ಪ್ರಾಚೀನ ಕಾವ್ಯ ಭಂಡಾರದಲ್ಲಿ 'ಕವಿಸಮಯ' ಕೂಡ ಸುಂದರವಾದ ಕವಿತೆ ಎನ್ನುವ ಮಟ್ಟಕ್ಕೆ ಏರಿರುವ ನೂರಾರು ನಿದರ್ಶನಗಳನ್ನು ಆಯ್ದುಕೊಡಬಹುದು. ಚಂದ್ರನನ್ನು ರಾಹು ನುಂಗುವ ಸಂಗತಿ ಪುರಾಣಪ್ರಸಿದ್ಧ; ನಮ್ಮ ಜನದ ನಂಬಿಕೆಯಲ್ಲಿ (ಚಂದ್ರಗ್ರಹದ ಮೇಲೆ ಮನುಷ್ಯ ಕಾಲಿಟ್ಟ ಇಂದಿನ ದಿನದಲ್ಲಿ ಕೂಡ) ಚಿರಸ್ಥಾಯಿ; ಕವಿಸಮಯ ಕೂಡ. ಪಂಪನ ಕಾಲಕ್ಕೇ ಸವೆದ ನಾಣ್ಯ. ಆದರೆ, ಪಂಪನ "ಪೊದಟ್ಟಿ ತೋರ ಮಲ್ಲಿಗೆಯ ತುಱುಂಬು ರಾಹು ತವೆ ನುಂಗಿದ ಚಂದ್ರನನೊಯ್ಯನೊಯ್ಯನಂದುಗುಳ್ವವೊಲೊಪ್ಪಿರಲ್" (ಪಂಪಭಾರತ: vii-87) ಎಂಬ ಉಪಮಾಲಂಕಾರದಲ್ಲಿ ಈ ಸವಕಲುನಾಣ್ಯ ಕವಿತೆಗೆ ಎಂಥ ಸೌಂದರ್ಯದ ಬೆಲೆ ನೀಡಿದೆ! ಅಥವಾ ಜನ್ನನ ಈ ಪದ್ಯ :

ಇಂತೆಂಬುದುಮಾ ಕುವರನ
ದಂತಪ್ರಭೆಯೆಂಬ ಶೀತಕರನುದಯದಘ-
ಧ್ವಾಂತೌಘ ಮಧುಪಮಾಲಿಕೆ
ಯಂ ತೊಲಗಿಸೆ ಮುಗಿದುದವನ ಕರಸರಸಿರುಹಂ.

(ಯಶೋಧರ ಚರಿತೆ: i–80)

ಹಲ್ಲಿನಕಾಂತಿ - ಚಂದ್ರೋದಯ, ಅಘ - ಧ್ವಾಂತ (ಪಾಪ-ಕತ್ತಲೆ). ಚಂದ್ರೋದಯ — ಕಮಲ ಮುಚ್ಚಿಕೊಳ್ಳುವುದು, ಅದರಲ್ಲಿನ ದುಂಬಿಗಳು ಹೊರಬರುವುದು : ಈ ಕವಿ ಸಮಯ ಸಮುಚ್ಚಯ ಸಾಧಿಸಿರುವ ಪರಿಣಾಮರಮಣೀಯತೆ ಅಸಾಧಾರಣ. ಸೂರ್ಯೋ

10. ಡಾ॥ ಜಿ. ಎಸ್. ಶಿವರುದ್ರಪ್ಪನವರ 'ಕವಿಸಮಯ' ಎಂಬ ಮನೋಜ್ಞವಾದ ಲೇಖನವನ್ನು ನೋಡಿ : ಪ್ರೊ॥ ಡಿ. ಎಲ್. ನರಸಿಂಹಾಚಾರ್ಯರಿಗೆ ಒಪ್ಪಿಸಿದ ಸಂಭಾವನಾ ಗ್ರಂಥ 'ಉಪಾಯನ' ದಲ್ಲಿ.

ದಯವಾದಾಗ ಕಮಲ ಅರಳಿದುವು ಎಂಬ ನಿರ್ಜೀವ ಉಕ್ತಿಯನ್ನು "ತರಣಿ ತೆಗೆದನು ತಾವರೆಯ ಬಾಗಿಲಿನ ಬೀಯಗವ" ಎಂಬ ವಕ್ರೋಕ್ತಿಯಾಗಿಸಿ ಕುಮಾರವ್ಯಾಸ ಎಂಥ ಕವಿತೆಯ ಮೋಡಿ ಮಾಡಿಬಿಟ್ಟಿದ್ದಾನೆ!

4

ಇನ್ನು, ಪ್ರಸ್ತುತ ವಿಷಯಕ್ಕೆ ಸಂಬಂಧಪಟ್ಟಂತೆ — ಎಂದರೆ, Pathetic Fallacy ಗೆ ಸಂಬಂಧಪಟ್ಟಂತೆ — ಕವಿಸಮಯ ಹೇಗೆ ಒದಗಿ ಬಂದಿದೆ ಎಂಬುದನ್ನು ಗಮನಿಸ ಬಹುದು.

ಕವಿಸಮಯ ಭಾರತೀಯ ಸಾಹಿತ್ಯದಲ್ಲಿ ಎಂದಿನಿಂದಲೂ ಇದ್ದದ್ದೆ. ಕಾವ್ಯಶಾಸ್ತ್ರ ದಲ್ಲಿ ಅದಕ್ಕೊಂದು ಗಣ್ಯವಾದ ನೆಲೆಯನ್ನು ಕಲ್ಪಿಸಿದ ಕೀರ್ತಿ ರಾಜಶೇಖರನದು. ಅವ ನನ್ನು ಅನುಸರಿಸಿ ಕನ್ನಡ ಕಾವ್ಯಮೀಮಾಂಸೆಯಲ್ಲಿ ಮೊತ್ತಮೊದಲಿಗೆ ಕವಿಸಮಯ ಪ್ರಕ ರಣವನ್ನು ಅಳವಡಿಸಿದವನು ಕಾವ್ಯಾವಲೋಕನಕಾರ ನಾಗವರ್ಮ. ಈ ಪ್ರಕರಣದಲ್ಲಿ ನಾಗ ವರ್ಮನ ಹೆಚ್ಚುಗಾರಿಕೆ ಎಂದರೆ, (ಇತರ ಪ್ರಕರಣಗಳಲ್ಲಿ ಹೇಗೋ ಹಾಗೆ) ಕನ್ನಡ ಕಾವ್ಯಗಳಿಂದ ಆಯ್ದು ಲಕ್ಷ್ಯಪದ್ಯಗಳನ್ನು ಕೊಟ್ಟಿರುವುದು. Pathetic Fallacy ಎಂಬ ಉಕ್ತಿವೈಚಿತ್ರ್ಯವನ್ನು ಮೊದಲು ಗುರುತಿಸಿದ ರಸ್ಕಿನ್ ಅದನ್ನು ಅಲಂಕಾರ ಎಂಬಂತೆ ವಿವರಿಸಿದ; ಅವನಿಗಿಂತ ಸುಮಾರು ಏಳುನೂರು ವರ್ಷಗಳಷ್ಟು ಹಿಂದೆಯೆ — ರಾಜ ಶೇಖರ ಗಮನಿಸದಿದ್ದುದನ್ನು ತಾನು ಗಮನಿಸಿ—ಅದೇ ಉಕ್ತಿವೈಚಿತ್ರ್ಯವನ್ನು ಕವಿ ಸಮಯ ದಲ್ಲಿ ಸೇರಿಸಿದ ನಾಗವರ್ಮ. ಕಾಲದೃಷ್ಟಿಯಿಂದ ಮೊದಲಿಗನಾದ ಇವನ ಸೂತ್ರವನ್ನು ಪರಿಶೀಲಿಸಿ, ಬಳಿಕ ರಸ್ಕಿನ್ನನ ಪ್ರತಿಪಾದನೆಯನ್ನು ಗಮನಿಸಬಹುದು.

ನಾಗವರ್ಮನು ಕವಿಸಮಯದ ಅಧಿಕರಣವಲ್ಲಿ ಅಸದಾಖ್ಯಾತಿ, ಸದಕೀರ್ತನಂ, ನಿಯಮಾರ್ಥಂ, ಐಕ್ಯಂ ಎಂದು ನಾಲ್ಕು ಪ್ರಕಾರಗಳಾಗಿ ಕವಿಸಮಯವನ್ನು ವಿಂಗಡಿಸಿ, ಪ್ರತಿ ಪ್ರಕಾರದಲ್ಲೂ ಜಾತಿ, ದ್ರವ್ಯ, ಕ್ರಿಯೆ, ಗುಣ — ಇವುಗಳಿಗೆ ಅನುಗುಣವಾಗಿ ಲಕ್ಷ್ಯ ಗಳನ್ನು ಕೊಟ್ಟಿದ್ದಾನೆ. 'ಐಕ್ಯ' ಪ್ರಕರಣದಲ್ಲಿ ಈ ನಾಲ್ಕು ವಿಧದ ಉಪವಿಭಾಗಗಳಿಗೂ ಲಕ್ಷ್ಯಗಳನ್ನು ಕೊಟ್ಟ ಮೇಲೆ, ಈ ಕೆಳಗಿನ ಸೂತ್ರವನ್ನು ಹೇಳಿದ್ದಾನೆ.

ಅನುಗತಮಪ್ಪಂತಿರೆ ಚೇ —
ತನಧರ್ಮಗಳನಚೇತನಾರ್ಥಂಗಳೊಳಂ

ಸ್ತನನಯನಾದಿಯೊಳಂ ದ್ವಿ-
ತ್ವನಿಷ್ಟಮುಂ [11]ಜಾತಿಯುಂ ವಿವರ್ಣಿಪರರೆಬರ್
(ಕಾವ್ಯಾವಲೋಕನ : ಸೂ. 234; ಪ. 932)

ಇಲ್ಲಿ ನಮಗೆ ಪ್ರಕೃತವಾದದ್ದು ಪದ್ಯದ ಪೂರ್ವಾರ್ಧ. ಅದರ ಆಶಯವನ್ನು ಹೀಗೆ ವಿವರಿಸಬಹುದು:

"ಚೇತನಗಳ (ಎಂದರೆ ಜೀವಿಗಳ) ದ್ವಿತ್ವ ನಿಷ್ಠವಾದ (ಎಂದರೆ ದ್ವಿಸಂಖ್ಯಾಸೂಚಕವಾದ?) ಜಾತಿ ವಾಚಕ ಧರ್ಮಗಳನ್ನು ಅಚೇತನ (ಎಂದರೆ ಜೀವವಿಲ್ಲದ, ಜಡ) ಪದಾರ್ಥಗಳ ವಿಷಯದಲ್ಲಿಯೂ ಕೆಲವರು (ಎಂದರೆ ಕೆಲವು ಕವಿಗಳು) (ಲಾಕ್ಷಣಿಕರು?) ವರ್ಣಿಸುವರು."

ಇದಕ್ಕೆ ಲಕ್ಷ್ಯ:

ತೋಳಘಟ್ಟಣೆಗುಚ್ಚಳಿಸುತ್ತುಂ ಸೂಸುವ ಶೀಕರವಾರಿ ಮು।ಕ್ತಾಳಿಯಿಂದಭಿಷೇಕಮ
ಗೆಯ್ವಂತೊಪ್ಪೆ ಕಳಿಂದಜೆಯುಂ ಮನೋ। ಲೀಳೆಯಿಂ ಪುಗೆ ತನ್ನದಿ ಕೃಷ್ಣಂಗಾಟಿಸಿದಂತಿರೆ
ಲೋಲಕ। ಲ್ಲೋಳ ಕೋಮಲ ಹಸ್ತದೆ ಪೊಯ್ದಳ್ ಮುಂದಲೆಯುಂ ಕಮಲಾಕ್ಷನಾ.॥

ಕೃಷ್ಣನು ಯಮುನಾನದಿಯನ್ನು ಪ್ರವೇಶಿಸಿ ಅದನ್ನು ತೋಳುಗಳಿಂದ ಬಡಿಯುತ್ತಿದ್ದಾನೆ. ಅವನ ತೋಳ ಬಡಿತದಿಂದ ಮೇಲಕ್ಕೆದ್ದು ಹಾರುತ್ತಿದ್ದ ನೀರ ತುಂತುರು ಹನಿಗಳು (ಬೆಳ್ಳಗಿದ್ದದ್ದರಿಂದ) ಮುತ್ತಿನ ರಾಶಿಯಿಂದ (ಯಮುನೆ ಅವನಿಗೆ) ಅಭಿಷೇಕ ಮಾಡುವಂತೆ ಕಾಣುತ್ತಿದೆ. ಕೃಷ್ಣನು ಮನಸ್ಸಿನ ಉಲ್ಲಾಸದಿಂದ ನದಿಯ ಒಳಬಳಕ್ಕೆ ಹೋಗಲು, ನದಿ ಕೃಷ್ಣನನ್ನು ಪ್ರೇಮಿಸಿ ಬಯಸಿದ ರೀತಿಯಲ್ಲಿ. ತನ್ನ ಚಂಚಲವಾದ ಕೋಮಲವಾದ ಅಲೆಯಂಗೈಗಳಿಂದ ಕಮಲಾಕ್ಷನ ಮುಂದಲೆಯನ್ನು ಹೊಯ್ದಳು.

---

11 ತೃತೀಯ ಮುದ್ರಣದ ಪಾಠ : ಪಾಠಾಂತರವಿಲ್ಲ; ಮುದ್ರಣ ದೋಷ ಎಂದು ಕಾಣುತ್ತದೆ. 'ದ್ವಿತ್ವನಿಷ್ಠಮುಂ' ಎಂದು ತಿದ್ದಿಕೊಂಡಿದೆ. ಪದ್ಯದ ದ್ವಿತೀಯ ಪಾದದಲ್ಲಿ ಛಂದಸ್ಸು ಕೆಟ್ಟಿರುವುದರಿಂದ 'ತನ ಧರ್ಮಂಗಳ...' ಎಂದು ತಿದ್ದಿಕೊಳ್ಳಬೇಕು. ಬಹುಶಃ ಇದೂ ಮುದ್ರಣ ದೋಷವೆ. 'ದ್ವಿತ್ವನಿಷ್ಠಮುಂ ಜಾತಿಯುಂ' ಎಂಬಲ್ಲಿ ಅರ್ಥ ವಿವರಣೆ ಸಂದಿಗ್ಧವಾಗಿದೆ. 'ಸ್ತನನಯನಾದಿಯೊಳಂ' ಎಂಬಲ್ಲಿ ಏಕವಚನವಿದ್ದರೂ ಜಾತಿವಾಚಕವಾಗಿ ಸ್ತನದ್ವಯ, ನಯನ ದ್ವಯ ಎಂದೇ ಅರ್ಥಮಾಡಬೇಕು. ಇಂಥ ದ್ವಿತ್ವನಿಷ್ಠ ಜಾತಿ ವಾಚಕಗಳಲ್ಲಿ ಏಕವಚನ ಪ್ರಯೋಗ ಕವಿಸಮಯ ಎಂದು ಕವಿಯ ಅಭಿಪ್ರಾಯ ಎಂದು ಕಾಣುತ್ತದೆ. ಮೇಲಿನ ಲಕ್ಷ್ಯಪದ್ಯದಲ್ಲಿ 'ಲೋಲಕಲ್ಲೋಲ' ಅನೇಕ; ಕೋಮಲ ಹಸ್ತ ಒಂದೇ (ಏಕವಚನ): ಅಚೇತನವಾದ ಅನೇಕ ಅಲೆಗಳ ಬಗ್ಗೆ ಹಸ್ತದ್ವಯದ ಆರೋಪಣವಾಗಿದೆ. ಎಂದಮೇಲೆ, ಅಚೇತನ ಪದಾರ್ಥಗಳನ್ನು ಸಚೇತನವಾಗಿ ವರ್ಣಿಸುವಾಗ —ಕರ್ಣದ್ವಯ, ನಯನ ದ್ವಯ, ಭುಜದ್ವಯ, ಕರದ್ವಯ, ಹಸ್ತದ್ವಯ, ಪಾದದ್ವಯ, ಇವುಗಳ ಕಾರ್ಯಧರ್ಮಗಳನ್ನು ಮಾತ್ರ ಆರೋಪಿಸಬಹುದು ಎಂದಾಯಿತು; ಚೇತನಾರೋಪಣದ ವ್ಯಾಪ್ತಿಯನ್ನು ಮಿತಗೊಳಿಸಿದಂತಾಯಿತು.

ಈ ಪದ್ಯದಲ್ಲಿ, ಅಭಿಷೇಕಗೆಯ್ಯುವುದು, ಕೃಷ್ಣನನ್ನು ಬಯಸುವುದು, ಅವನ ಮುಂದಲೆಯನ್ನು ಪೊಯ್ಯುವುದು —ಇವೆಲ್ಲ ಪ್ರಣಯಾಸಕ್ತ ಸ್ತ್ರೀಜಾತಿಗೆ ಸಹಜವಾದ ಧರ್ಮಗಳು; ಈ ಧರ್ಮಗಳನ್ನು ಅಚೇತನವಾದ ನದಿಗೆ ಆರೋಪಿಸಿದೆ. ಪ್ರಕೃತಿಯನ್ನು ಪ್ರಕೃತಿಮಾತೆ ಎಂದೂ ಅದರ ಭಾಗಗಳಾದ ಗಿಡ, ಮರ, ಬೆಟ್ಟ, ನದಿ, ಮುಂತಾದುವನ್ನು ದೇವತೆಗಳೆಂದೂ ಭಾವಿಸುವ ಭಾರತೀಯ ಮನೋಧರ್ಮಕ್ಕೆ ಇಂಥ ಕಾವ್ಯಸಂದರ್ಭಗಳಲ್ಲಿ ಚೇತನಾರೋಪಣದ ಕಾವ್ಯಸೌಂದರ್ಯ ಗೋಚರಿಸದೆಯೂ ಹೋಗಬಹುದು. ಇಂಥ ಪರಿಸ್ಥಿತಿಯಲ್ಲಿ, ಈ ಬಗೆಯ ಕಾವ್ಯಸಂದರ್ಭವನ್ನು ಒಂದು ಉಕ್ತಿವೈಚಿತ್ರ್ಯ ಎಂದು ಗುರುತಿಸಿರುವುದು ನಾಗವರ್ಮನ ಸೂಕ್ಷ್ಮದೃಷ್ಟಿಗೆ ನಿದರ್ಶನ. ಈ ಪದ್ಯದ ಉತ್ಪ್ರೇಕ್ಷಾಲಂಕಾರವೂ ನದಿಯ ಮೂರ್ತೀಕರಣವೂ (Personification) ಚೇತನಾರೋಪಣದ ಭಾವವನ್ನು ಸ್ವಲ್ಪಮಟ್ಟಿಗೆ ತಗ್ಗಿಸಿವೆ. ಈ ಅಂಶ ರಸ್ಕಿನ್ನನ ಲಕ್ಷಣವಿವರಣೆಯನ್ನೂ, ಅವನು ಕೊಡುವ ನಿದರ್ಶನಗಳನ್ನೂ ಪರಿಶೀಲಿಸುವುದರಿಂದ ಸ್ಪಷ್ಟವಾಗುತ್ತದೆ.

5

ಈ ಹಿಂದೆಯೇ ಉಲ್ಲೇಖಿಸಿರುವ 'ಮಿಥ್ಯಾದರ್ಶನ'ಕ್ಕೆ ಸಂಬಂಧಪಟ್ಟ 'ದೋಷ'ಕ್ಕೆ ಮಾತ್ರ ರಸ್ಕಿನ್ Pathetic Fallacy ಎಂಬ ಅಲಂಕಾರದ ವ್ಯಾಪ್ತಿಯನ್ನು ಸೀಮಿತಗೊಳಿಸಿರುವುದು. ಅವನು 'ಅಲಂಕಾರ' (Figure of speech) ಎಂಬ ಮಾತನ್ನು ಉಪಯೋಗಿಸದಿದ್ದರೂ, ಸುಂದರವೆನಿಸುವ ಈ ಬಗೆಯ ಉಕ್ತಿವೈಚಿತ್ರ್ಯ ಕಾವ್ಯೋಚಿತ ಎಂದು ಹೇಳಿ, ಅದಕ್ಕೊಂದು ಹೆಸರನ್ನೂ ಕಲ್ಪಿಸಿ, ತನ್ನ ಆಶಯವನ್ನು ದೃಷ್ಟಾಂತಪಡಿಸುವ ಲಕ್ಷ್ಯಗಳನ್ನೂ ಕೊಟ್ಟಮೇಲೆ, ಈಚಿನ ಪಾಶ್ಚಾತ್ಯ ಸಾಹಿತ್ಯ ವಿದ್ವಾಂಸರು ಅದನ್ನು ಒಂದು ಅಲಂಕಾರವೆಂದೇ ಪರಿಗಣಿಸುತ್ತ ಬಂದಿರುವುದು ಯಥೋಚಿತವಾಗಿದೆ[12].

---

12 i) "All possibilities of figurative expression are exhausted by these two, the subjective and objective poles. The first form was called by Ruskin the 'Pathetic Fallacy'. — *Theory of Literature* : Rene Welleck & Austin Warren , 1948, p. 210.

ii) "We have a theory of 'animating imagery', of romantic anthropomorphism, what Ruskin termed the 'Pathetic Fallacy' (and one may echo the term without the least hint of derogation), the fallacy, the fiction of portraying the face of nature so as to invest it with reflections of our own mind and feelings." — *Literary Criticism : A short History* by William K. Wimsatt, Jr. & Cleanth Brooks, IBH Indian Edn., 1964, p. 400.

iii) "P. fallacy : ಪ್ರಕೃತಿಗೆ ಮಾನವ ಮನೋಭಾವಗಳನ್ನು ಆರೋಪಿಸುವ ಅಲಂಕಾರ." — Eng.-Kan. Dictionary, Mysore University, 1947, p. 845.

ಈ ಅಲಂಕಾರವನ್ನು ರಸ್ಕಿನ್ ವಿವರಿಸಿರುವುದು ಹೀಗೆ: "....in this chapter, I want to examine the nature of the other error, that which the mind admits when affected strongly by emotion. Thus for instance, in Acton Locke —

> They rowed her in across the rolling foam —
> The cruel, crawling foam.

The state of mind which attributes to these characters of a living creature[13] is one in which the reason is unhinged by grief. All violent feelings have the same effect. They produce in us a falseness in all our impressions of external things, which I would generally characterize as the 'Pathetic Fallacy'.

"ಈ 'ದೋಷ'ವನ್ನು ನಾವು ಸಾಧಾರಣವಾಗಿ ಕಾವ್ಯೋಚಿತ ವರ್ಣನೆಯ ಒಂದು ಶ್ರೇಷ್ಠ ಲಕ್ಷಣ ("eminently a character of poetical description") ಎಂದು ಎಣಿಸುವುದಲ್ಲದೆ, ಈ ಬಗೆಯ ನಿರೂಪಣೆ ಭಾವಾವೇಶನಿಷ್ಠವಾದ ಕವಿಮನೋಧರ್ಮಕ್ಕೆ ಸಹಜವಾದದ್ದು" ಎಂಬ ಅಭಿಪ್ರಾಯವನ್ನು ರಸ್ಕಿನ್ ಪುರಸ್ಕರಿಸುತ್ತಾನೆ. ಆದರೆ, ಆಳವಾಗಿ ಪರಿಶೀಲಿಸಿದರೆ, ಮಹೋನ್ನತ ಕವಿಗಳು ಈ ಬಗೆಯ ಮಿಥ್ಯಾನಿರೂಪಣೆಗೆ ಅವಕಾಶಕೊಡುವುದಿಲ್ಲವೆಂದೂ, ಎರಡನೆಯ ದರ್ಜೆಯ ಕವಿಗಳು ಮಾತ್ರ ಅಂಥದರಲ್ಲಿ ನಲಿಯುತ್ತಾರೆಂದೂ ಹೇಳುತ್ತಾನೆ. ರಸ್ಕಿನ್ ಒಟ್ಟಿನ ಮೇಲೆ ಈ ವಿಚಾರವಿಮರ್ಶೆಯಲ್ಲಿ ಸೂಕ್ಷ್ಮದೃಷ್ಟಿಯನ್ನು ಹರಿಸಿದ್ದಾನೆ ಎನ್ನುವುದರಲ್ಲಿ ಸಂದೇಹವಿಲ್ಲ. ಡಾಂಟೆ, ತನ್ನ ಮಹಾಕಾವ್ಯದಲ್ಲಿ, ಎಕಿರಾನ್ (Acheron) ನದೀತಟದಿಂದ ಕೆಳಕ್ಕೆ ಬೀಳುತ್ತಿದ್ದ ಪ್ರೇತಾತ್ಮಗಳನ್ನು "ರೆಂಬೆಯಿಂದ ಉದುರುವ ಒಣ ಎಲೆಗಳು" ("as dead leaves flutter from a bough") ಎಂದು ವರ್ಣಿಸಿರುವುದನ್ನು — "He gives the most perfect image possible of their utter lightness, feebleness, passiveness, and scattering agony of despair, without, however, for an instant losing his own

---

13 ಇಲ್ಲಿ ರಸ್ಕಿನ್ living creature ಎಂದು ಸ್ಪಷ್ಟವಾಗಿ ಹೇಳಿರುವುದರಿಂದ, ಪ್ರಕೃತಿಗೆ ಮಾನವ ಭಾವ ಮಾತ್ರವಲ್ಲದೆ ಇತರ ಪ್ರಾಣಿಗಳ ಗುಣ ಸ್ವಭಾವಗಳನ್ನು ಆರೋಪಿಸುವುದೂ ಈ ಅಲಂಕಾರದ ವ್ಯಾಪ್ತಿಗೆ ಸೇರುತ್ತದೆ. ಮನುಷ್ಯನ ಹಾಗೆ ಪ್ರಾಣಿಗಳಿಗೂ ಸುಖದುಃಖಾದಿ ಅನುಭವಗಳುಂಟು. ಆದ್ದರಿಂದ, ನಾಗವರ್ಮ ಉಪಯೋಗಿಸಿರುವ 'ಚೇತನಧರ್ಮ' ಎಂಬ ಮಾತು ಇಲ್ಲಿಗೆ ತುಂಬ ಉಚಿತ.

clear perception that these are *souls*, and those are *leaves* ; he makes no confusion of one with the other" ಎಂದು ಮುಕ್ತಕಂಠದಿಂದ ಹೊಗಳಿ, ಕೋಲ್‌ರಿಜ್ ಕವಿಯ "The one red leaf, the last of its clan, that dances as often as dance it can" — ಎಂಬ ಕವಿತೆಯ ಸಾಲನ್ನು ಕುರಿತು, "he has a morbid, that is to say, a so far false, idea about the leaf : he fancies a life in it, and will, which there are not ; confuses its powerlessness with choice, its fading death with merriment, and the wind that shakes it with music" ಎಂದು ಕಟುವಾಗಿ ಟೀಕಿಸುತ್ತಾನೆ.[14] ಆದರೂ, ಮುಂದುವರಿದು, "Here, however, there is some beauty, even in the morbid passage" ಎಂದು ಕವಿತೆಯ ಚೆಲುವನ್ನು ಅವನು ಒಪ್ಪಿಕೊಂಡಿರುವುದು ಗಮನಾರ್ಹವಾಗಿದೆ. ಹೀಗೆ ಒಪ್ಪಿಕೊಳ್ಳಲು ಕಾರಣ, ಕೋಲ್‌ರಿಜ್‌ನ "ಮಿಥ್ಯಾದೋಷದಲ್ಲಿ ಅಸಾಂಗತ್ಯ ಇಲ್ಲ" ಎನ್ನುವುದು. ("Coleridge's fallacy has no discord in it.") "ಈ ಮಿಥ್ಯಾದೋಷದಿಂದ ನಾವು ಪಡೆಯುವ ಆನಂದಕ್ಕೆ ಕೂಡ ಯಾವುದಾದರೂ ಒಂದು ಬಗೆಯಲ್ಲಿ ನಮಗೆ ಸತ್ಯದ ಸ್ವರೂಪವೇ ಮಾರ್ಗದರ್ಶಕ" ಎಂಬುದು ಆತನ ಸಿದ್ಧಾಂತ. ("....the spirit of truth must guide us in some sort, even in our enjoyment of fallacy").[15]

ಒಟ್ಟಿನಲ್ಲಿ, ಕವಿ ತನ್ನ ಭಾವಾವೇಶಕ್ಕೆ ಸಂಪೂರ್ಣವಾಗಿ ವಿವಶನಾದಾಗ ಮಿಥ್ಯಾದರ್ಶನ ಫಲವಾದ 'ಅನುಭೂತಿ ದೋಷ' ಸಂಘಟಿಸುವುದೆಂದೂ, ಭಾವಾವೇಶವನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಂಡು ವಿಚಾರಶಕ್ತಿಯನ್ನು ಕಳೆದುಕೊಳ್ಳದೆ ಕಾವ್ಯರಚನೆ

---

14 ಕೋಲ್‌ರಿಜ್ ಕವಿಯ ಚೇತನಾರೋಪಣದಲ್ಲಿ ಅಡಗಿರುವ ಸತ್ಯಾಂಶವನ್ನು ರಸ್ಕಿನ್ ಗ್ರಹಿಸಿದಂತೆ ತೋರುವುದಿಲ್ಲ. ಎಲೆಯ ಕೊನೆಯ ಗಳಿಗೆ (ಅವಸಾನ) ಸಮೀಪಿಸಿದೆ, ದಿಟ; ಆದರೂ ಗಾಳಿಗೆ ಅಲುಗುತ್ತಲೆ ಇದೆ; 'ಹೇಗೂ ಕಾಲ ಮುಗಿಯಿತು, ಚೇತನವಿರುವವರೆಗೂ ಕುಣಿದು ಬಿಡೋಣ' ಎಂದು ಎಷ್ಟು ಸಲ ಸಾಧ್ಯವೋ ಅಷ್ಟು ಸಲ ಕುಣಿಯುತ್ತಿದೆ ಎಂದು ವರ್ಣಿಸಿರುವುದು ಸರಿ ಎಂದು ನಮ್ಮ ಗ್ರಹಿಕೆ. ದೀಪ ಆರುವ ಮುನ್ನ ಹೆಚ್ಚು ಪ್ರಕಾಶಗೊಳ್ಳುವ ಹಾಗೆ ಎಲೆ ಉದುರುವ ಮುನ್ನ ಹೆಚ್ಚು ಉಲ್ಲಾಸದಿಂದ ಕುಣಿಯಿತು ಎಂದು ಸಂಭಾವನೆ ಮಾಡುವುದರಲ್ಲಿ ತಪ್ಪಿಲ್ಲ. ಸಸ್ಯಗಳಿಗೂ ಮಾನವರ ಹಾಗೆಯೆ ಸಂವೇದನಾಶಕ್ತಿ ಉಂಟೆಂದು ಈಚೆಗೆ ವಿಜ್ಞಾನ ಸ್ಥಾಪಿಸಿದೆ.

15 ರಸ್ಕಿನ್ ಕಾವ್ಯ ಸೌಂದರ್ಯವನ್ನು ಗುರುತಿಸಿದ್ದರೂ, ಲೋಕಸತ್ಯವೇ ಸೌಂದರ್ಯದ ಲೇಪ ಹೊಂದಿ ಕಾವ್ಯಸತ್ಯ ಎನಿಸಿಕೊಳ್ಳುವುದನ್ನು ಖಚಿತವಾಗಿ ಗ್ರಹಿಸದೆ ಪೇಚಾಟಕ್ಕೆ ಸಿಲುಕಿರುವುದು ಸ್ಪಷ್ಟವಾಗಿದೆ.

ಮಾಡುವಾಗ ಸತ್ಯಕ್ಕೆ ಚ್ಯುತಿ ಬಾರದಂತೆ, ಆದರೂ ಭಾವಪೂರ್ಣವಾಗಿ ವರ್ಣಿಸುವನೆಂದೂ ರಸ್ಕಿನ್ ಸಿದ್ಧಾಂತಿಸುತ್ತಾನೆ. ಮೊದಲ ರೀತಿಯ ಕವಿಯ ಕಣ್ಣಿಗೆ ಒಂದು ಪ್ರಿಮ್ ರೋಸ್ ಹೂವು ನೆಲದ ನಕ್ಷತ್ರವಾಗಿ ಕಾಣಬಹುದು, ಕನ್ಯೆಯಾಗಿ ಕಾಣಬಹುದು; ಎರಡನೆಯ ರೀತಿಯ ಕವಿಗೆ ಅದು ಎಂದೂ ಹೂವೇ. ಒಟ್ಟಿನಲ್ಲಿ ಅವನ ಆಶಯ ಇಷ್ಟು: ಒಂದು ಅಚೇತನವಸ್ತುವನ್ನು ವಸ್ತುವಾಗಿ ಕಾಣಬೇಕು; ಕವಿ ಅದಕ್ಕೆ ಹೋಲಿಕೆ ಕೊಡಲಿ, ಅದನ್ನು ಉತ್ಪ್ರೇಕ್ಷೆ ಮಾಡಿ ಹೇಳಲಿ. ಕಾವ್ಯನಿರೂಪಣೆಯಲ್ಲಿ ಇದು ಉತ್ತಮ ಪಕ್ಷ. ಮಾನವ ಸಹಜ ಭಾವಗಳನ್ನು ಅದಕ್ಕೆ ಸುಸಂಗತವಾಗಿ ಆರೋಪಿಸಿ ನಿರೂಪಿಸುವುದು ಮಧ್ಯಮ ಪಕ್ಷ; ಅಸಂಗತವಾಗುವಂತೆ ಆರೋಪಿಸಿ ನಿರೂಪಿಸುವುದು ಅಧಮ ಪಕ್ಷ. ಹೇಗೇ ಆದರೂ, ಈ ಅನುಭೂತಿಯ ಆರೋಪಣೆಯ ದೋಷ ದೋಷವೆ. ಕವಿಯ ಮನೋಜಾಡ್ಯದ (morbidity) ಚಿಹ್ನೆ – ಎಂಬುದು ರಸ್ಕಿನ್ನನ ದೃಢವಾದ ಅಭಿಪ್ರಾಯ. ತೀವ್ರವಾಗಿ ಭಾವಾವೇಶಕ್ಕೆ ಒಳಗಾದರೂ ಅದನ್ನು ಹತೋಟಿಯಲ್ಲಿಟ್ಟುಕೊಳ್ಳುವುದೇ ಶ್ರೇಷ್ಠ ಕವಿಯ ಲಕ್ಷಣ ಎಂದು ಆತನ ಮತ.

ಸಾಧಾರಣ ಮಟ್ಟದ ಕಾವ್ಯದಲ್ಲಿ ಚೇತನಾರೋಪಣ ಎರಡು ವಿಧಗಳಲ್ಲಿ ಕಂಡುಬರುತ್ತದೆ ಎಂದು ರಸ್ಕಿನ್ ತಿಳಿಸುತ್ತಾನೆ. ಕವಿಯ ಸ್ವಂತ ಅನುಭೂತಿಯಲ್ಲಿಯೇ ಕಂಡುಬರುವುದು ಒಂದು; ಇದು ಕವಿಯ ಸಾಮಾನ್ಯದರ್ಜೆಯ ಕುರುಹು. ಕವಿ ಕಲ್ಪಿಸಿದ ಪಾತ್ರಗಳ ಅನುಭೂತಿಯಲ್ಲಿ ಸ್ಫುರಿಸುವುದು ಇನ್ನೊಂದು; ಪಾತ್ರದ ಅನುಭೂತಿ ನೈಜವಾದುದೇ ಅಲ್ಲವೆ ಎಂಬುದರ ಮೇಲೆ ಅದು ಗ್ರಾಹ್ಯವೇ ಅಗ್ರಾಹ್ಯವೇ ಎಂಬುದು ನಿರ್ಧಾರವಾಗುತ್ತದೆ, ಅವನ ಪ್ರಕಾರ.

6

ಮೇಲ್ಕಂಡ ಎರಡು ವಿಧಗಳಿಗೂ ನಮ್ಮ ಕಾವ್ಯಗಳಿಂದ ಒಂದೆರಡು ಉದಾಹರಣೆಗಳನ್ನು ತೆಗೆದುಕೊಂಡು ರಸ್ಕಿನ್ನನ ಅಭಿಪ್ರಾಯಗಳ ಸಾಧುತ್ವವನ್ನು ಪರಿಶೀಲಿಸಬಹುದು:

ಪಂಪಭಾರತದಲ್ಲಿ ಪಾಂಡುವಿನ ಮರಣದ ಸನ್ನಿವೇಶ: "ವಿಷವಲ್ಲಿಯನಪ್ಪಿದಂತೆ ತಳ್ತ ಸಲ್ಲಳ ಮೃದು ಮೃಣಾಳ ಕೋಮಳ ಬಾಹು ಪಾಶಂಗಳೆ ಯಮಪಾಶಂಗಳ್" ಆದುವಷ್ಟೆ. ಈ ಬಗೆಯ ಮರಣಕ್ಕೆ ಮುನಿಶಾಪ ಕಾರಣ ಎನ್ನುವುದು ನಿಜವಾದರೂ, ಆ ಕ್ಷಣದಲ್ಲಿ ಮಾದ್ರಿಯ ಮೇಲೆ ಮೋಹವುಂಟಾಗುವಂತೆ ಮಾಡಿದ್ದು ವಸಂತಮಾಸ. ಈ ವಸಂತವನ್ನು ಗಜವೆಂದು ರೂಪಕಮಾಡಿ, ಅದರಲ್ಲಿ ಮಾರಕಚೈತನ್ಯವನ್ನು ಆರೋಪ ಮಾಡಿರುವುದು ಸಂದರ್ಭೋಚಿತವಾಗಿದೆ: "ಕೋಡುಗೊಂಡು ಪರಿವತ್ತು ವಸಂತಗಜಂ ವಿಯೋಗಿಯಂ" (ಪಂ. ಭಾ., ii—42). ಮತ್ತಗಜವನ್ನು ಎದುರಿಸಬಲ್ಲವರು ಯಾರು? ಜನ್ನನ ಯಶೋಧರಚರಿತ್ರೆಯಲ್ಲಿ, ಮಾರಿ ಗುಡಿಯ ಮುಂದೆ ನಡೆಯುತ್ತಿದ್ದ ಪಶುವಧೆಯ

ವರ್ಣನೆಯಲ್ಲಿ ಈ ಮಾತು ಬರುತ್ತದೆ: "ಮಾರ್ದನಿಯಿಂದಂ ಕೂಡೆ ಬನಂ ಅೞ್ತುದು, ಉರ್ವರೆ ಬೀಡೆಯಿಂ ಎರ್ದೆಯೊಡೆದುದು" (i-29). ಪ್ರಾಣಿಗಳ ನೋವಿನ ಚೀತ್ಕಾರ ವನದಲ್ಲಿ ಮಾರ್ದನಿಸಿ, ಆ ಮಾರ್ದನಿಯ ಮೂಲಕ ವನ ಅತ್ತಿತು; ಭೂಮಿ ಬಿರುಕುಬಿಟ್ಟು, ಅದರ ಎದೆ(ದುಃಖದಿಂದ)ಒಡೆದು ಹೋಯಿತು. ಅಚೇತನಗಳು ಕೂಡ ಆ ಪ್ರಾಣಿಗಳ ದುಃಖದಲ್ಲಿ ಸಹಾನುಭೂತಿ ತೋರುತ್ತಿದ್ದುವು ಎಂದಮೇಲೆ, ಪ್ರಾಣಿಹಿಂಸೆಯ ಘೋರ ಎಷ್ಟು ಅವರ್ಣನೀಯ[16] ಎಂಬುದು ಅತ್ಯಂತ ಪರಿಣಾಮಕಾರಿಯಾಗಿ ಧ್ವನಿತವಾಗಿದೆ. ಪಂಪಭಾರತದ ಉದಾಹರಣೆಯಲ್ಲಿ ಕವಿಸಮಯವಿದೆ; ಇಲ್ಲಿ ಅದು ಗೌಣ. ಜೈಮಿನಿಭಾರತದಲ್ಲಿ, ಲಕ್ಷ್ಮಣ ಸೀತೆಯನ್ನು ಕಾಡಿನಲ್ಲಿ ಬಿಟ್ಟುಹೋದ ಸಂದರ್ಭದಲ್ಲಿ ಮೂರ್ಛೆಹೋಗಿದ್ದ ಸೀತೆಯನ್ನು ಕಂಡು —"ಕೂಡೆ ವೃಕ್ಷಲತೆಗಳ್ ಬಾಡಿ ಕೊರಗುತಿರ್ದುವು ಶೋಕಭಾರದಿಂ; ಕಲ್ಗಳುಂ ಕರಗುತಿರ್ದುವು" ಎಂಬ ವರ್ಣನೆಯಲ್ಲಿಯೂ, ಚಂಡಾಲರು ಚಂದ್ರಹಾಸನನ್ನು ಕಾಡಿನಲ್ಲಿ ಬಿಟ್ಟುಹೋದ ಸಂದರ್ಭದಲ್ಲಿ—"ಬಾಲಕನ ರೋದನದ ಕೂಡೆ ಬನದೇವಿಯರ್ ಅಗ್ನಿ ಜಲ ಭೂ ಗಗನ ವಾಯು ರವಿ ಶಶಿಗಳೆಣ್ದೆಸೆವೆಣ್ಗಳು ಗಾಳಿ ತೀಡಿದೊಡೆ ಭೋರೆಂಬ ತರುಲತೆಗಳಿಂ ಗೋಳಿಟ್ಟರ್, ಅಡವಿಯ ಚರಾಚರಂಗಳ ಜೀವಜಾಲಂಗಳುರೆ ಮರುಗುತಿರ್ದುವು" ಎಂದು ವರ್ಣಿಸುವಾಗಲೂ, ವರ್ಣನೆ ವಸ್ತುನಿಷ್ಠ; ಅನುಭೂತಿ ಕವಿಯದೇ; ಅದನ್ನು ಅಚೇತನ ವಸ್ತುಗಳಲ್ಲಿ ಆರೋಪಣ ಮಾಡುವ ಮೂಲಕ, ದುಃಖಸನ್ನಿವೇಶದ ಗಾಢತೆಯನ್ನು ನಮಗೆ ಅರಿವು ಮಾಡಿಕೊಡುತ್ತಿದ್ದಾನೆ, ಲಕ್ಷ್ಮೀಶ.

ಹಳಗನ್ನಡ ಕಾವ್ಯಕ್ಕೆ ಮಾತ್ರ ವಿಶಿಷ್ಟವಾದದ್ದಲ್ಲ ಈ ಉಕ್ತಿವೈಚಿತ್ರ್ಯ; ಹೊಸಗನ್ನಡ ಕವಿತೆಯಲ್ಲೂ ಧಾರಾಳವಾಗಿ ಕಂಡುಬರುತ್ತದೆ. ಇಲ್ಲಿ ಕವಿಯ ಸ್ವಂತ ಅನುಭೂತಿ ನೇರವಾಗಿ ಪರಿಚಯವಾಗುತ್ತದೆ ನಮಗೆ. ಈ ಉದಾಹರಣೆಗಳನ್ನು ಗಮನಿಸಬಹುದು:

...ಬಹುದೂರದ ಪಡುವಣ
ದೆಸೆಯ ದಿಗಂತದೊಳಾಗಲೆ ಮುಳುಗಿದ
ಸೂರ್ಯನ ಕೆಂಪನು ತಳೆದಿರುವಂಚಿನ
ಕಿರಿಯ ಮುಗಿಲ್ಗಳ ಮೊತ್ತವು ಚಲಿಸದೆ
ಜಪಮಾಡುತಲಿದೆ ....
ಅವರೆಯ ತೊಗರಿಯ ಹೊಲಗಳು ಕೂಡ
ಯಾವುದೊ ಮಂತ್ರವನುಸುರುತಲಿರುವುವು.
ಎಲ್ಲವು ಸಂಧ್ಯಾಯೋಗಿನಿಯೆಡೆಯಲಿ
ದೀಕ್ಷೆಯ ಕೈಕೊಳ್ಳುತಲಿವೆ! ....

('ನವಿಲು', ಕು. ವೆಂ. ಪು: 'ಕುಕ್ಕನ ಹಳ್ಳಿಯ ಕೆರೆಯಾಚೆ')

16 ಈ ಎರಡು ಉಕ್ತಿಗಳನ್ನೂ ಸುಲಭವಾಗಿ ಉತ್ಪ್ರೇಕ್ಷಾಲಂಕಾರವಾಗಿ ಹೇಳಬಹುದಾಗಿತ್ತು. ಆಗ , ಸಹಾನುಭೂತಿಯಲ್ಲಿ ಇಷ್ಟು ತೀವ್ರತೆ ಇರುತ್ತಿರಲಿಲ್ಲ.

ಇಲ್ಲಿ ಕವಿ ಶಾಂತವಾದ ಸಂಧ್ಯಾಕಾಲದಲ್ಲಿ ತಾನು ಅನುಭವಿಸಿದ ಶಾಂತಿಯನ್ನೇ ಅಚೇತನ ವಸ್ತುಗಳಿಗೆ ಆರೋಪಿಸಿದ್ದಾನೆ. ಕವಿಯ ಶಾಂತಿಗೆ ನಿಸರ್ಗವೇ ಪ್ರೇರಕಶಕ್ತಿಯಾಗಿದ್ದುದರಿಂದ, ಯಾವ ಕಡೆಯಿಂದ ಶಾಂತಿ ದೊರಕಿತೋ ಅಲ್ಲಿಗೇ ಸೇರಿದಂತೆ ವರ್ಣಿಸುವುದರಲ್ಲಿ ಕವಿಯ ಮನೋಜಾಡ್ಯ ಏನಿದೆ ?

ಕುವೆಂಪು ಅವರ 'ಉಷೆಯು ನಿಶೆಯ ಚುಂಬಿಸೆ' ಎಂಬ ಕವನದಲ್ಲಿ — "ಎಲೆಯ ಹಸುರು ತೊಟ್ಟಿಲಲ್ಲಿ ಹನಿಯ ಹಸುಳೆ ನಗುತಿರೆ" ಎಂಬ ಚಿತ್ರದ ಸೊಬಗನ್ನು ಲೋಕ ಸತ್ಯದ ದೃಷ್ಟಿಯಿಂದ ವಿಮರ್ಶೆಮಾಡಿದರೆ, ಕಾವ್ಯಕ್ಕೆ ಅನ್ಯಾಯ ; ನಮಗೆ ಅಲೌಕಿಕ ಆನಂದದ ನಷ್ಟ.

ಬೇಂದ್ರೆಯವರ 'ಬೆಳುದಿಂಗಳು ನೋಡಾ' ಕವನದಲ್ಲಿನ ತೂಕಡಿಸುವ ಗಾಳಿಯ ಈ ಚಿತ್ರದ ಚೆಲುವನ್ನು ಪರಿಭಾವಿಸಿ:

ಮರಮರದ ಗೊನೀಗೆ ಕೂತು
ಹಾರಿ ಮೈ ಸೋತು
  ತೆಪ್ಪಗ ಗಾಳಿ
  ತೆಪ್ಪಗ ಗಾಳಿ

ತೂಕಡಸತದ ತಾನೀಗ
ಜಂಪು ಬಂಧಾಂಗ
ಜಂಪು ಬಂಧಾಂಗ
  ಇದು ಅದರ ತುಪ್ಪಳ ಗೂಡ
  ಬೆಳುದಿಂಗಳ ನೋಡ

ಇದೇ ಗಾಳಿಯನ್ನು ನಟನಾಗಿ, ವಿಟನಾಗಿ, ರೂಪಕಮಾಡಿ ಕುಣಿಸಾಡಿಸಿರುವ ಕವನಗಳುಂಟು. ಪಂಜೆಯವರ ತೆಂಕಣ ಗಾಳಿಯಾಟವನ್ನು ಓದುವಾಗ ಪಟಿಂಗನೊಬ್ಬನ ಚೇಷ್ಟೆಗಳ ಚಿತ್ರ ಕಣ್ಣಿಗೆ ಕಟ್ಟುತ್ತದೆಯೇ ಹೊರತು ಬರಿಯ ಗಾಳಿಯ ಬೀಸಾಟವಲ್ಲ. ಶ್ರೀನಿವಾಸರ 'ತೆಂಗಾಳಿ' ಯಂತಹ ಕವನವನ್ನು ನಿರ್ಮಿಸಲು — ಅದರ ಸೊಬಗನ್ನು ಅರಿಯಲು —ಕ್ಯಾಮೆರಾ ಕಣ್ಣಿಂತಹ ಚರ್ಮಚಕ್ಷುಸ್ಸು ಸಮರ್ಥವೇ? ಆ ಕವನದಲ್ಲಿ ಮೂರ್ತೀಭವಿಸಿರುವ ನಿಸರ್ಗದ ಒಳಸತ್ತ್ವವನ್ನು —ಒಳತತ್ತ್ವವನ್ನು —ಪರಮಾತ್ಮ ಪ್ರತೀಕವನ್ನು ಕವಿಯ ಮರ್ಮಚಕ್ಷುಸ್ಸು— ಒಳ ಒಳಗಣ್ಣು —ಮಾತ್ರ ಕಂಡು, ನೋಡಿ, ಮೂಡಿಸಬಲ್ಲದು.

ಈಗಿನ ಕಾಲದ 'ನವ್ಯ' ದೃಷ್ಟಿಯ ವಿಚಾರಶೀಲ ವಾಚಕರೂ ವಿಮರ್ಶಕರೂ ನಮ್ಮ ಪ್ರಾಚೀನ ಕನ್ನಡ ಕವಿಗಳನ್ನೂ ಮೇಲೆ ಉದಾಹರಿಸಿರುವ ಆಧುನಿಕ ಕವಿಗಳನ್ನೂ 'ರೊಮ್ಯಾಂಟಿಕ್' ಲೋಕದ ಕನಸುಗಾರರು —ಆದರ್ಶೀಕರಣಲೋಲರು —ಎಂದು ಭಾವಿಸಿ

Pathetic Fallacy ಯಂತಹ ಉಕ್ತಿವಿಧಾನಕ್ಕೆ ಮನ್ನಣೆ ಕೊಡದಿರಬಹುದು. ಆದರೆ, ಇಂಗ್ಲೀಷ್ ಮತ್ತು ಕನ್ನಡ 'ನವ್ಯ' ಕಾವ್ಯದಲ್ಲಿಯೇ ಇಂತಹ ನಿದರ್ಶನಗಳು ನೂರಾರನ್ನು ಆಯ್ದುಕೊಡಬಹುದು ಎಂಬ ಸಂಗತಿ ಗಮನಾರ್ಹ. ಇಂಗ್ಲೀಷ್ 'ನವ್ಯ' ಕವಿಗಳಲ್ಲಿ ಅಗ್ರಗಣ್ಯನಾದ ಟಿ. ಎಸ್. ಎಲಿಯಟ್ಟನ ಈ ಸಾಲುಗಳ ಸೌಂದರ್ಯವನ್ನು ಸತ್ಯದೃಷ್ಟಿಗೆ ದೂರ ಎಂದು ಕಡೆಗಣಿಸಲು ಸಾಧ್ಯವೇ ?

> The yellow fog that rubs its back upon window-
> pans,
> The yellow smoke that rubs its muzzle on the win-
> dow-panes
> Licked its tongue into the corners of the evening,
> Lingered upon the pools that stand in drains,
> Let fall upon its back the soot that falls from chimneys,
> Slipped by the terrace, made sudden leap,
> And seeing that it was a soft October night,
> Curled once about the house, and fell asleep.

ಇನ್ನು ಪಾತ್ರಗಳ ಮುಖಾಂತರ ಅಚೇತನ ವಸ್ತುಗಳಲ್ಲಿ ಚೇತನವನ್ನೂ ಅನುಭೂತಿಯನ್ನೂ ಆರೋಪಣಮಾಡುವ ಈ ಅಲಂಕಾರವಿಧಾನವನ್ನು ಪರಿಶೀಲಿಸಬಹುದು.

ಪ್ರಕೃತಿ ವರ್ಣನೆಯಲ್ಲಿ ವಾಲ್ಮೀಕಿ ಭಾರತೀಯ ಕವಿಗಳಿಗೆ ಮಾರ್ಗದರ್ಶಕರಾಗಿದ್ದಾರೆ ಎನ್ನಬಹುದು. ಅವರ ವರ್ಣನೆಗಳಲ್ಲಿ ಸಾಮಾನ್ಯವಾಗಿ, ರಸ್ಕಿನ್ ಮಹಾಕವಿಗಳಲ್ಲಿ ಕಂಡುಬರುತ್ತದೆ ಎಂದು ಹೇಳುವಂತಹ ವಸ್ತುನಿಷ್ಠೆಯನ್ನು ಕಾಣುತ್ತೇವೆ. ಅಷ್ಟೇ ಪ್ರಮಾಣದಲ್ಲಿ ಮಾನವನಿಗೂ ಪ್ರಕೃತಿಗೂ ಇರುವ ನಿಕಟ ಸಂಬಂಧದ ಸೂಕ್ಷ್ಮದರ್ಶನವೂ ಅವರಿಗುಂಟು. ಕಿಷ್ಕಿಂಧಾಕಾಂಡದಲ್ಲಿ ರಾಮಚಂದ್ರನ ಸೀತಾವಿರಹ ಶೋಕವನ್ನು ಪ್ರಕೃತಿ ವ್ಯಾಪಾರವ್ಯಾಜದಿಂದ ಉದ್ದೀಪನಗೊಳ್ಳುವಂತೆ ಮಾಡಿ, ಅನ್ಯಾದೃಶವಾದ ವರ್ಣನಾ ಕೌಶಲವನ್ನು ಮೆರೆದಿದ್ದಾರೆ. ರಾಮ ದುಃಖದಲ್ಲಿ ಮುಳುಗಿದ್ದರೆ, ಪ್ರಕೃತಿ ವಸಂತದ ಆನಂದದಲ್ಲಿ ರಮಣೀಯವಾಗಿದೆ. ರಾಮನೇ ವಸಂತ ವರ್ಣನೆಯ ವಕ್ತಾರ, ಅವನ ಬಾಯಲ್ಲಿ "ಕ್ರೂರಶ್ಚೈತ್ರವನಾನಿಲಃ", "ಅಶೋಕಶ್ಶೋಕವರ್ಧನಃ", ಎಂಬ ಮಾತುಗಳನ್ನು ಆಡಿಸಿ, (ರಸ್ಕಿನ್ ಉದಾಹರಿಸಿರುವ Cruel foam ಎಂಬ ಉಕ್ತಿಯನ್ನು ಇಲ್ಲಿ ನೆನೆಯಬಹುದು) ಪ್ರಕೃತಿಯಲ್ಲಿ ಕ್ರೌರ್ಯಾರೋಪಣಮಾಡಿ, ರಾಮನ ದುಃಖದ ಅವಸ್ಥೆಯನ್ನೂ ಆಳವನ್ನೂ ವಾಲ್ಮೀಕಿ ತಿಳಿಸಿದ್ದಾರೆ.

ಪಾತ್ರಗಳ ಮೂಲಕ ಅಚೇತನ ವಸ್ತುಗಳಲ್ಲಿ ಚೇತನಾರೋಪಣ ಮಾಡುವುದಕ್ಕೆ ಕಾಳಿದಾಸನ 'ಮೇಘಸಂದೇಶ' ಒಂದು ಉತ್ತಮ ನಿದರ್ಶನ. ಅಚೇತನವಾದ ಮೇಘವು

ಸಂದೇಶವನ್ನು ಒಯ್ಯಬಲ್ಲದೆ ಎಂಬ ಸಂದೇಹವೋ ಕುಹಕದ ಪ್ರಶ್ನೆಯೋ ಸಹೃದಯ ವಾಚಕರ ಮನಸ್ಸಿನಲ್ಲಿ ಸಹಜವಾಗಿ ಮೂಡಬಹುದು ಎಂದು ನಿರೀಕ್ಷಿಸಿಯೇ ಕಾವ್ಯದ ಮೊದಲಲ್ಲಿ ಕವಿ ಯಕ್ಷನಿಂದ ಈ ಮಾತು ಆಡಿಸಿದ್ದಾನೆ:

"ಕಾಮಾರ್ತರಾದವರು ಚೇತನಾಚೇತನದೆ
ಕೃಪಣರೆಂಬುದು ನೋಡೆ ಸಹಜಮಲ್ತೆ'

(ಎಸ್. ವಿ. ಪರಮೇಶ್ವರಭಟ್ಟರ ಅನುವಾದ)

'ಕಾಮಾರ್ತ' ಎಂಬ ಪದದ ಸ್ಥಾನದಲ್ಲಿ ದುಃಖಾರ್ತ, ಕ್ರೋಧವಶ ಮುಂತಾದ ತೀವ್ರಭಾವವನ್ನು ಸೂಚಿಸುವ ಪದಗಳನ್ನು ಇಟ್ಟು, ಭಾವವಶರಾದವರು ಚೇತನಾಚೇತನ ಭೇದ ವಿವೇಕವನ್ನು ಕಳೆದುಕೊಂಡಿರುತ್ತಾರೆ ಎಂದು ಸಾಮಾನ್ಯವಾಗಿ ಹೇಳಬಹುದು. ಎಲ್ಲ ಸಂದರ್ಭಗಳಲ್ಲೂ ಇದು ಕಾವ್ಯದ ಪಾತ್ರಗಳಿಗೆ ಅನ್ವಯಿಸುವ ಮಾತು; ಕವಿಗಲ್ಲ.

ಸೀತಾವಿರಹದಿಂದ ದುಃಖಾರ್ತನಾಗಿದ್ದ ರಾಘವ ಹೇಗೆ ಚೇತನಾಚೇತನ ಭೇದ ವಿವೇಕವನ್ನು ಕಳೆದುಕೊಂಡಿದ್ದನು ಎಂಬುದನ್ನು ನಾಗಚಂದ್ರ ಹೃದಯಂಗಮವಾಗಿ ಚಿತ್ರಿಸಿದ್ದಾನೆ:

ಕಳಹಂಸಾಲಸಯಾನೆಯುಂ ಮೃಗಮದಾಮೋದಾಸ್ಯನಿಶ್ವಾಸೆಯುಂ
ತಳಿರೇ ತಾವರೆಯೇ ಮದಾಳಿಕುಳಮೇ ಕನ್ನೈದಿಲೇ ಮತ್ತಕೋ—
ಕಿಳಮೇ ಕಂಡಿರೆ ಪಲ್ಲವಾಧರೆಯನಂಭೋಜಾಸ್ಯೆಯಂ ಭೃಂಗಕುಂ—
ತಳೆಯುಂ ಕೈರವನೇತ್ರೆಯುಂ ಪಿಕರವಪ್ರಖ್ಯಾತೆಯ ಸೀತೆಯುಂ.[17]

ಯಕ್ಷನೂ ರಾಮನೂ ಚೇತನಾಚೇತನ ವಿಷಯದಲ್ಲಿ ಕೃಪಣರಾಗಿದ್ದರು ಎಂದು ತಿಳಿಸಿ, ಅವರ ಭಾವಾನುಭೂತಿಯ ವ್ಯಾಕುಲತೆಯನ್ನು ಪರಿಚಯಮಾಡಿಕೊಡುವುದಕ್ಕಾಗಿ ಕವಿಗಳು ಚೇತನಾರೋಪಣವನ್ನು ಭಾವಾಭಿವ್ಯಕ್ತಿಯ ಒಂದು ಸಾಧನವಾಗಿ ಬಳಸಿಕೊಂಡರು ಎಂಬ ಕಾರಣದಿಂದ, ರಸ್ಕಿನ್ ಭಾವಿಸಿರುವಂತೆ, ಅವರನ್ನು ವಿವೇಕಕೃಪಣರು ಎಂದು ತಿಳಿಯ ಸಲ್ಲದು.

---

[17] ಹಂಸೆ, ತುಂಬಿ, ಕೋಗಿಲೆ—ಇವು ಅಚೇತನಗಳಲ್ಲ. ಅಚೇತನ ವಸ್ತುಗಳನು ಕುರಿತಾಗ ಚೇತನಾರೋಪಣ ಮತ್ತು ಅನುಭೂತ್ಯಾರೋಪಣವನ್ನೂ, ತಿರ್ಯಗ್ಜಂತುಗಳನ್ನು ಕುರಿತಾಗ ಕೇವಲ ಅನುಭೂತ್ಯಾರೋಪಣವನ್ನೂ ಸಂಭಾವನೆ ಮಾಡಬೇಕು. ಆದರೆ. ಅನುಭೂತಿ ಚೇತನಸಾಪೇಕ್ಷವಾದ್ದರಿಂದ, ಎಲ್ಲ ಸಂದರ್ಭಗಳಿಗೂ ಅನುಭೂತ್ಯಾರೋಪಣ ಎಂಬ ವ್ಯಾಪಕಾರ್ಥದ ಪದವನ್ನು ಬಳಸಬಹುದು.

7

ತಾನು ಗುರುತಿಸಿದ ಉಕ್ತಿವೈಚಿತ್ರ್ಯ ದೋಷಯುಕ್ತ ಎಂದು ರಸ್ಕಿನ್ನಿಗೆ ಕಂಡಿತು. ಆದ್ದರಿಂದಲೇ ಅದಕ್ಕೆ ಅವನು Pathetic Fallacy (ಅನುಭೂತ್ಯಾರೋಪಣ ದೋಷ, ಎಂದು ನಾಮನಿರ್ದೇಶಮಾಡಿ, ಸುಂದರವಾಗಿಯೂ ಇರುವುದರಿಂದ ಅಲಂಕಾರ ಎಂದೂ ಭಾವಿಸಿದ. ಯಾವುದೇ ಅಲಂಕಾರದ ಅನುಚಿತಪ್ರಯೋಗ ದೋಷವಾಗಬಹುದೇ ಹೊರತು ಅಲಂಕಾರವೇ ಹೇಗೆ ದೋಷವಾದೀತು? ತನ್ನ ಹೇಳಿಕೆಯಲ್ಲಿ ಪೂರ್ವಾಪರವಿರೋಧ ವನ್ನು ಅವನು ಗಮನಿಸಿದಂತೆ ಕಾಣುವುದಿಲ್ಲ. ಮೇಲಿನ ಕಾವ್ಯಪ್ರಯೋಗಗಳಲ್ಲಿ ಮಾನವಸಹಜವಾದ ಭಾವಾನುಭೂತಿ ಅಚೇತನ ವಸ್ತುಗಳಲ್ಲಿ 'ಇರುವಂತೆ ಕಾಣು ತ್ತದೆ'ಯೇ ಹೊರತು 'ನಿಜವಾಗಿ ಇಲ್ಲ' ಎಂಬುದನ್ನು ಕವಿಗಳೂ ಬಲ್ಲರು; ನಾವೂ ಬಲ್ಲೆವು. ಚೇತನಾರೋಪಣಮಾಡಿ ಕವಿತಾರಚನೆ ಮಾಡುವಾಗ ಸಾಮಾನ್ಯಕವಿಗಳು ಮಾತ್ರ ಮನೋ ಜಾಡ್ಯಕ್ಕೆ ಪಕ್ಕಾಗಿರುತ್ತಾರೆ, ಎಂಬ ರಸ್ಕಿನ್ನನ ವಾದವನ್ನು ಒಪ್ಪುವುದಕ್ಕಾಗುವುದಿಲ್ಲ. ಆದ್ದರಿಂದ, ಈ ಉಕ್ತಿವೈಚಿತ್ರ್ಯವನ್ನು Oliver Wendell Holmes ಎಂಬ ಲೇಖಕ Sympathetic illusion ಎಂದು ಕರೆದಿರುವುದು ಉಚಿತವಾಗಿದೆ.[18] ಇದು illusion (ಭ್ರಾಂತಿ, ಆಭಾಸ, ತೋರಿಕೆ) ಹೊರತು ಎಂದಿಗೂ fallacy (ದೋಷ) ಅಲ್ಲ. ಅವ ನನ್ನು ಅನುಸರಿಸಿ ಇದನ್ನು ನಾವು **ಅನುಭೂತ್ಯಾಭಾಸ** ಅಥವಾ **ಚೇತನಾರೋಪಣ** ಎಂದು ಕರೆಯಬಹುದು. ಪಾಶ್ಚಾತ್ಯ ವಿಮರ್ಶಕರು ಇದನ್ನು ಒಂದು ಅಲಂಕಾರ ಎಂದು ಈಗಾಗಲೇ ಪರಿಗಣಿಸಿರುವುದರಿಂದ ನಾವೂ ಇದನ್ನು ಹಾಗೇ ಪರಿಗಣಿಸಲಡ್ಡಿಯಿಲ್ಲ ರಸ್ಕಿನ್ನನ ವಾದವನ್ನೂ ಸಿದ್ಧಾಂತಗಳನ್ನೂ ನಾವು ಸಂಪೂರ್ಣವಾಗಿ ಒಪ್ಪಲಾಗದಿದ್ದರೂ ಕಾವ್ಯಸೌಂದರ್ಯವಿಶೇಷವೊಂದನ್ನು ಮೊತ್ತಮೊದಲಿಗೆ ಪೃಥಕ್ಕರಿಸಿ ತೋರಿಸಿ ಕೊಟ್ಟದ್ದಕ್ಕಾಗಿ ಅವನು ಸಹೃದಯರ ಮನ್ನಣೆಗೆ ಪಾತ್ರ. ಅವನಿಗಿಂತ ಮುಂಚೆಯೇ ಈ ಚೇತನಾರೋಪಣವನ್ನು ಅಲಂಕಾರ ಎಂದು ಹೇಳದಿದ್ದರೂ ಕವಿಸಮಯ ಪ್ರಕರಣ ದಲ್ಲಿ ಉಲ್ಲೇಖಿಸಿದ ನಾಗವರ್ಮನೂ ಸ್ಮರಣೀಯ.

---

18 *Life of Emerson,* chap. xiv. (ನೋಡಿ: Introduction to the study of Literature, W. H. Hudson, p 107)

ವ್ಯಕ್ತಿಯ ಪ್ರವೃತ್ತಿಗಳು ಮತ್ತು ವಿನ್ಯಾಸಗಳು

ಎಸ್. ಕೆ. ರಾಮಚಂದ್ರರಾವ್

ವ್ಯಕ್ತಿಯ ಪ್ರವೃತ್ತಿಗಳನ್ನು ಕುರಿತು ಮನಃಶಾಸ್ತ್ರ ಅಧ್ಯಯನವನ್ನು ನಡೆಸುತ್ತದೆ; ಸಮಾಜದ ರಚನೆ, ಪ್ರಕಾರ, ಪ್ರವೃತ್ತಿಗಳನ್ನು ಕುರಿತು ಸಮಾಜಶಾಸ್ತ್ರವೂ, ವ್ಯಕ್ತಿಯ ಸಾಮಾಜಿಕ ನೆಲೆ ಮತ್ತು ಸಾಂಸ್ಕೃತಿಕ ವಿಕಾಸಗಳನ್ನು ಕುರಿತು ಮಾನವಶಾಸ್ತ್ರವೂ ಅಧ್ಯಯನ ವನ್ನು ನಡೆಸುತ್ತವೆ. ಮೂರು ಶಾಸ್ತ್ರಗಳೂ ಬೇರೆಬೇರೆಯಾಗಿಯೇ ಬೆಳೆದು, ಒಂದು ಘಟ್ಟದಲ್ಲಿ ಬೆರೆಯಬೇಕಾಗಿ ಬಂದಿದೆ. ಮೂರು ಅಧ್ಯಯನಗಳ ಕ್ಷೇತ್ರ ಒಂದೇ ಆಗಿರುವುದು ಇದಕ್ಕೆ ಕಾರಣ. ವ್ಯಕ್ತಿಗಳಿಲ್ಲದ ಸಮಾಜ ಹೇಗೆ ಅಸಂಭವವೋ ಹಾಗೆಯೇ ಸಾಮಾಜಿಕ ಪ್ರವೃತ್ತಿಯಿಲ್ಲದ ವ್ಯಕ್ತಿಯೂ ದುರ್ಲಭ. ವ್ಯಕ್ತಿಯ ವಿಕಾಸದಲ್ಲಿ ಸಮಾಜವು ಪ್ರಮುಖವಾದ ಪಾತ್ರವನ್ನು ವಹಿಸುವಂತೆಯೇ ಸಮಾಜದ ಬೆಳವಣಿಗೆಯ ಲ್ಲಿಯೂ ವೈಯಕ್ತಿಕ ಪ್ರವೃತ್ತಿಗಳು ಮುಖ್ಯ. ವ್ಯಕ್ತಿಯು ಸಮಾಜದ ಸಂಕೋಚ ಎನ್ನಬಹು ದಾದರೆ ಸಮಾಜವು ವ್ಯಕ್ತಿಯ ವಿಕ್ಷೇಪ ಎನ್ನಬಹುದು. ಹೀಗಾಗಿ ವ್ಯಕ್ತಿಯ ಪ್ರವೃತ್ತಿಗಳ ಲ್ಲಿಯೂ ಸಾಮಾಜಿಕ ಪ್ರವೃತ್ತಿಗಳಲ್ಲಿಯೂ ಪ್ರಬಲವಾದ ಸಂಬಂಧ, ಸಾದೃಶ್ಯಗಳಿವೆ ಎಂಬುದು ಮೇಲೆ ಹೇಳಿದ ಮೂರೂ ಶಾಸ್ತ್ರಗಳು ಬೇರೆಬೇರೆಯಾಗಿ ಕಂಡುಕೊಂಡ ವಿವರ. ಇವು ಈಚೆಗೆ ಬೆರೆಯತೊಡಗಿರುವುದರ ಹಿನ್ನೆಲೆ ಇದೇ.

ಮನುಷ್ಯನು ತನ್ನ ಬದುಕಿನ ಯಶಸ್ಸಿಗಾಗಿ ಮತ್ತು ಸಾರ್ಥಕ್ಯಕ್ಕೆಂದು ಸಮಾಜವನ್ನು ಸೃಷ್ಟಿಮಾಡಿ, ತನಗೆ ಅನುಕೂಲವಾಗುವಂತೆ ಮತ್ತು ತನ್ನ ಮೂಲಭೂತ ಪ್ರವೃತ್ತಿಗಳಿಗೆ ತೃಪ್ತಿಯಾಗುವಂತೆ ಅದರ ಕಟ್ಟುಪಾಡುಗಳನ್ನು ರೂಪಿಸುತ್ತಾನೆ. ಮನುಷ್ಯನಲ್ಲಿ ಸಾಮಾಜಿಕ ಪ್ರವೃತ್ತಿಯೂ ಪ್ರಕೃತಿಸಿದ್ಧವಾಗಿಯೇ ಇದೆಯಷ್ಟೆ. ಪ್ರಪಂಚದಲ್ಲಿ ಮನುಷ್ಯ ಇರುವೆಡೆಯಲ್ಲೆಲ್ಲ ಸಮಾಜವೂ ಅದರ ಪ್ರಮುಖ ಪ್ರಕಾರಗಳೂ ಸಮಾನ ವಾಗಿಯೇ ಇವೆ. ಪ್ರಾಚೀನವಾದ, ಅಸಭ್ಯವೆನಿಸಿದ ಜನಾಂಗಗಳನ್ನು ಮಾನವಶಾಸ್ತ್ರಜ್ಞರು ಅಧ್ಯಯನ ಮಾಡುವಾಗ ಸಭ್ಯಸಮಾಜದಲ್ಲಿರುವ ವಿವರಗಳನ್ನೇ ಕಂಡುದು ಅವರಿಗೆ ಆಶ್ಚರ್ಯವೆನಿಸಿತು. ಅಂಥ ಜನಾಂಗಗಳಲ್ಲಿಯೂ ವೈಯಕ್ತಿಕ, ಸಾಮಾಜಿಕ ಪ್ರಯೋಜನ ಗಳಿರುವ ಸಂಘ ಸಂಸ್ಥೆಗಳಿರಬಹುದೆಂದು ಅವರು ನಿರೀಕ್ಷಿಸಿರಲಿಲ್ಲ. ವಿವಾಹವಿಧಿಗಳು, ದಾಂಪತ್ಯಧರ್ಮ, ಮಕ್ಕಳಲಾಲನೆ-ಪೋಷಣೆ, ಆರ್ಥಿಕವ್ಯವಸ್ಥೆ, ಸಮಾಜರಚನೆ, ಧಾರ್ಮಿಕ ದೃಷ್ಟಿ, ಸಮರಸಿದ್ಧತೆ, ಚಿಕಿತ್ಸಾಪದ್ಧತಿ ಮೊದಲಾದ ಹತ್ತಾರು ವಿವರಗಳು ಮಾನವ ಜನಾಂಗಗಳಿಗೆಲ್ಲ ಸಮಾನವಾದುವು; ದೇಶ, ಕಾಲ ಎನ್ನುವ ಗಣನೆ ಇಲ್ಲಿ ಬರುವುದಿಲ್ಲ.

ಆವರಣಕ್ಕೆ ಅನುಗುಣವಾಗಿ ಸಂದರ್ಭಕ್ಕೆ ಸರಿಯಾಗಿ ಈ ವಿವರಗಳಲ್ಲಿ ಆಕೃತಿ, ವೈವಿಧ್ಯವಿರುತ್ತದೆ, ನಿಜ; ವಿಕಾಸವೆನ್ನಬಹುದಾದ ಮಾರ್ಪಾಟು ಇರುತ್ತದೆಯೆನ್ನುವುದೂ ನಿಜ. ಆದರೆ ಸ್ವಭಾವದಲ್ಲಿಯಾಗಲೀ, ಮೂಲಪ್ರಯೋಜನದಲ್ಲಿಯಾಗಲೀ ವೈವಿಧ್ಯವಿಲ್ಲ.

ಮನುಷ್ಯನೆನ್ನುವ ಪ್ರಾಣಿಯು ಭೂಗೋಳದ ಮೇಲೆ ಅವತರಿಸಿ ತನ್ನ ಬದುಕನ್ನು ಮುಂದರಿಸಿಕೊಂಡು ಹೋಗುವ ಸಮಸ್ಯೆಯನ್ನು ಎದುರಿಸಿದಾಗ ಸಮಷ್ಟಿಜೀವನವು ಒಂದು ಸಂವಿಧಾನವೆನ್ನುವುದರ ಅರಿವಾಯಿತು. ಒಂದೇ ಸಂಕುಲಕ್ಕೆ ಸೇರಿದ ಜೀವಿಗಳು ಒಟ್ಟಾರೆ ಇರುವುದು ಮನುಷ್ಯರಲ್ಲಿಯೇ ಮೊಟ್ಟಮೊದಲು ಕಾಣಿಸಿಕೊಳ್ಳುವ ಪ್ರವೃತ್ತಿಯೇನಲ್ಲ; ಮೇಲ್ತರದ ಸಸ್ತನಿಜೀವಿಗಳಲ್ಲಿ ಈ ಪ್ರವೃತ್ತಿಯನ್ನು ಕಾಣಬಹುದು. ವ್ಯಕ್ತಿಯು ಸ್ವತಂತ್ರವಾಗಿ ಜೀವನವನ್ನು ನಿರ್ವಹಿಸುವುದು ಕಷ್ಟವಾದಾಗ ಗೋಷ್ಠಿಯಲ್ಲಿ ಸೇರಿದರೆ ಅದು ಆಲಂಬನೆಯಾಗುತ್ತದೆ. ಆದರೆ ಆಗ ಗೋಷ್ಠಿಗೆ ವಿಶಿಷ್ಟವಾದ ಅಸ್ತಿತ್ವವೊಂದು ಒದಗಿಬಂದು, ವ್ಯಕ್ತಿಯ ನೆಲೆಯನ್ನು ಮೀರಿ ಕೆಲಸಮಾಡಲಾರಂಭಿಸುತ್ತದೆ. ವ್ಯಕ್ತಿಯಿಲ್ಲದೆ ಗೋಷ್ಠಿಯಿಲ್ಲವಾದರೂ ಗೋಷ್ಠಿಯು ವ್ಯಕ್ತಿಯನ್ನು ನಡೆಸುವ, ಬಿಗಿಹಿಡಿಯುವ, ಮಾರ್ಪಡಿಸುವ ಸಾಮರ್ಥ್ಯವನ್ನು ಪಡೆದು ಗೋಷ್ಠಿಯಿಲ್ಲದೆ ವ್ಯಕ್ತಿಯಿಲ್ಲ ಎಂತಾಗುತ್ತದೆ. ಗೋಷ್ಠೀಪ್ರಪದನವು ವ್ಯಕ್ತಿಯ ಮೂಲಪ್ರವೃತ್ತಿಯೇ ಎಂಬುದನ್ನು ಮರೆಯಬಾರದು. ಮನುಷ್ಯರ ಗೋಷ್ಠಿಯನ್ನೇ ನಾವು ಸಮಾಜ ಎನ್ನುವುದು.

ಸಮಾಜವೇನು ಮರದ ಮೇಲೆ ಬಿಡುತ್ತದೆಯೇ? ಆಕಾಶದಿಂದ ಉದುರುತ್ತದೆಯೆ? ತಾನಾಗಿ ಸ್ವಯಂಭುವಿನಂತೆ ಆವಿರ್ಭಾವವಾಗುತ್ತದೆಯೇ? ಮನುಷ್ಯರು ಒಬ್ಬೊಬ್ಬರಲ್ಲಿಯೂ ಸಮಾಜದ ಕಲ್ಪನೆಯಿದ್ದರೇ ಸಮಾಜವಾಗುವುದು; ಸಮಾಜ ಇರುವುದು ನಮ್ಮ ಹೊರಗಲ್ಲ, ಒಳಗೆ. ಒಳಗಿರುವ ಸಮಾಜಕ್ಕೆ ಹೊರಗಿನ ಕಟ್ಟುಪಾಡುಗಳನ್ನು ಬಿಗಿದು ಸಂಸ್ಕೃತಿಯ ಸಾಮಗ್ರಿಗಳಿಂದ ಅದಕ್ಕೆ ಮೂರ್ತವೆನ್ನಬಹುದಾದ ರೂಪವನ್ನು ಸಿದ್ಧಪಡಿಸುತ್ತೇವೆ. ನಾವೇ ರೂಪಿಸಿಕೊಂಡ ಸಮಾಜಕ್ಕೆ ನಾವೇ ಬದ್ಧರಾಗಿ ಅದು ನಮ್ಮನ್ನು ನಡೆಯಿಸುತ್ತದೆ ಎನ್ನುವಂತೆ ನಡೆದುಕೊಳ್ಳುತ್ತೇವೆ. ನಾವೇ ಕೈಯಾರೆ ಮಾಡಿಟ್ಟುಕೊಂಡ ದೇವತಾಮೂರ್ತಿಗೆ, ವಿಗ್ರಹಕ್ಕೆ, ನಾವೇ ಮಣಿಯುವಂತೆ; ಧ್ಯಾನಮೂರ್ತಿಯನ್ನು ಶಿಲಾಪ್ರತೀಕದಂತೆ ಕಲ್ಪಿಸಿಕೊಳ್ಳುವಂತೆ. ಸಮಾಜಕ್ಕೆ ಭೌತಿಕವಾದ ಅಸ್ತಿತ್ವವಿಲ್ಲ, ಅದಕ್ಕಿರುವುದು ಮಾನಸಿಕವಾದ ಅಸ್ತಿತ್ವ, ಕಾಲ್ಪನಿಕಸತ್ವ. ಹಾಗೆಂದಮಾತ್ರಕ್ಕೆ ಅದು ಕ್ರಿಯಾಶೀಲವಲ್ಲವೆಂದಾಗಲೀ ದುರ್ಬಲವೆಂದಾಗಲೀ ಬಗೆಯಬಾರದು. ಎಷ್ಟು ಬಲಶಾಲಿಯಾದ ವ್ಯಕ್ತಿಯಾಗಲೀ ಅವನನ್ನು ನಿಗ್ರಹಿಸುವ, ಎಷ್ಟು ಬುದ್ಧಿಶಾಲಿಯಾದ ವ್ಯಕ್ತಿಯಾಗಲೀ ಅವನನ್ನು ನಿರ್ದೇಶಿಸುವ ಸಾಮರ್ಥ್ಯ ಅದಕ್ಕುಂಟು.

ಈ ಅನ್ಯೋನ್ಯಾಶ್ರಯಸಂಬಂಧ ಸ್ವಾರಸ್ಯವಾದುದು. ಸಮಾಜವು ವ್ಯಕ್ತಿಯ ಕಲ್ಪನೆಯನ್ನು ಅನುಮೋದನೆಯನ್ನು ಪ್ರಪದನವನ್ನು ಅವಲಂಬಿಸಿರುವಂತೆಯೇ ವ್ಯಕ್ತಿಯು ಸಮಾಜದ ಒತ್ತಾಸೆಯನ್ನೂ ಸಂರಕ್ಷಣೆಯನ್ನೂ ಮಾರ್ಗದರ್ಶನವನ್ನೂ ಅಪೇಕ್ಷಿಸುತ್ತಾನೆ.

ಈ ಸಂಬಂಧವನ್ನು ವಿವೇಚಿಸುವಾಗ ಮನಃಶಾಸ್ತ್ರ, ಸಮಾಜಶಾಸ್ತ್ರ, ಮಾನವಶಾಸ್ತ್ರಗಳು ಒಟ್ಟಾಗಿಯೇ ಕೆಲಸಮಾಡಬೇಕಾಗುತ್ತದೆ. ಈ ಕ್ಷೇತ್ರದಲ್ಲಿ ಅಧ್ಯಯನವನ್ನು ಆರಂಭಿಸಿದ ಕೀರ್ತಿ ವಿಲಿಯಂ ಹಾಲ್ಸಿ ರಿವರ್ಸ್ (1864-1922) ಎಂಬ ಮನೋವಿಜ್ಞಾನಿಗೆ ಸೇರುತ್ತದೆ. ಪ್ರತಿಭಾಶಾಲಿ ವೈದ್ಯನಾದ ಈತನು ಆಲ್‌ಫ್ರೆಡ್ ಹಾಡ್ಡನ್ ಎಂಬ ಮಾನವಶಾಸ್ತ್ರಜ್ಞನಿಂದ ಪ್ರಚೋದಿತನಾಗಿ ಟೋರಿಸ್ ಸ್ಟ್ರೇಟ್ಸ್ ಪ್ರವಾಸವನ್ನು ಕೈಕೊಂಡಾಗ ಈ ಅಧ್ಯಯನದಲ್ಲಿ ಆಸಕ್ತಿಮೂಡಿತು. ಮುಂದೆ ಮೆಲನೀಶಿಯ ದ್ವೀಪಗಳಲ್ಲಿ ವಾಸಮಾಡಿ ಅಲ್ಲಿನ ಪ್ರಾಚೀನ ಜನಾಂಗಗಳ ಜೀವನ ಪದ್ಧತಿಗಳ ಪರಿಚಯವನ್ನು ಪಡೆದು ಸಾಂಸ್ಕೃತಿಕವಿಕರಣವಾ ದ (Diffusionism) ವನ್ನು ಪ್ರತಿಪಾದಿಸಿದನು. ಈತನು ಸಿಗ್ಮಂಡ್‌ಫ್ರಾಯ್ಡನ ಮನೋವಿಶ್ಲೇಷಣ ಸಿದ್ಧಾಂತಕ್ಕೆ ಒಲಿದಿದ್ದವನು; ಈ ಸಿದ್ಧಾಂತದ ವಿವರಗಳನ್ನು ಮಾನವಶಾಸ್ತ್ರದ ಅಧ್ಯಯನದಲ್ಲಿ ಅಳವಡಿಸಿಕೊಂಡನು.

ಆದರೆ ರಿವರ್ಸ್ ತನ್ನ ಸಂಶೋಧನೆಗಳಲ್ಲಿ ಫ್ರಾಯ್ಡನ ಸಿದ್ಧಾಂತದ ಅನುಪಯುಕ್ತತೆಯನ್ನು ಅರಿತುಕೊಂಡು ಸಿದ್ಧಾಂತದ ಮುಖ್ಯವಿವರವಾದ ಲೈಂಗಿಕಕಾಮುವನ್ನು ನಿರಾಕರಿಸಿ ತನ್ನದೇ ಆದ ವಾದವೊಂದನ್ನು ಮುಂದಿಟ್ಟನು. ಪ್ರಾಚೀನ ಜನರು ತಮ್ಮ ಭಾವನಾ ವಿಧಾನಗಳನ್ನು ಸಾಂಕೇತಿಕವಾಗಿ ನಾಟಕದಂತೆ ನಡೆಸುತ್ತಾರೆಂದು ರಿವರ್ಸ್ ಅಭಿಪ್ರಾಯಪಟ್ಟು, ಈ ಮಾನವಶಾಸ್ತ್ರವು ಪ್ರಾಚೀನಪದ್ಧತಿಗಳನ್ನು ಅಥವಾ ವಿಧಿಗಳನ್ನು ಅಧ್ಯಯನ ಮಾಡುವಾಗ ಪದರಪದರವಾಗಿ ಸಾಂಕೇತಿಕ ವಿವರಗಳನ್ನು ವಿಂಗಡಿಸಿ ಮೂಲಭೂತವಾದ ಸಾಂಕೇತಿಕ ತಾತ್ಪರ್ಯವನ್ನು ಕಂಡುಹಿಡಿಯಬಹುದೆಂದು ಸೂಚಿಸಿದನು. ರಿವರ್ಸ್‌ನಿಂದ ಪರೋಕ್ಷವಾಗಿ ಸ್ಫೂರ್ತಿಯನ್ನು ಪಡೆದು ಫ್ರಾಯ್ಡನೇ ಮಾನವಶಾಸ್ತ್ರದ ಅಧ್ಯಯನದಲ್ಲಿ ತೊಡಗಿದನು. ಫ್ರಾಯ್ಡ್ನ ಗುಂಪಿನಿಂದ ಕಾರ್ಲ್ ಯೂಂಗ್ ದೂರ ಹೋದ ತರುಣದಲ್ಲಿಯೇ ಫ್ರಾಯ್ಡನು ಫ್ರೇಜರ್ ಎಂಬ ಸುಪ್ರಸಿದ್ಧ ಮಾನವಶಾಸ್ತ್ರಜ್ಞನ Totemism and Exogamy (1910) ಎಂಬ ಗ್ರಂಥವನ್ನು ಓದಿ ಈ ಕ್ಷೇತ್ರದಲ್ಲಿ ಆಸಕ್ತಿಯನ್ನು ತಳೆದಿದ್ದನು. ರಾಬರ್ಟ್‌ಸನ್ ಸ್ಮಿತ್ (1846-1894) ಎಂಬ ಇನ್ನೊಬ್ಬ ಮಾನವಶಾಸ್ತ್ರಜ್ಞನು ಬರೆದಿದ್ದ Religion of the Semites (1889) ಫ್ರಾಯ್ಡನ ಮೇಲೆ ವಿಶೇಷವಾದ ಪ್ರಭಾವವನ್ನು ಮೂಡಿಸಿತು.

ಆ ಸುಮಾರಿಗೆ ವಿಲ್‌ಹೆಲ್ಮ್ ವೂಂಡ್ಟ್ ಎಂಬ ಪ್ರಾಯೋಗಿಕಮನೋವಿಜ್ಞಾನಿಯು Volkerpsychologie (1912) ಎಂಬ ಸಾಮಾಜಿಕ ಮನಃಶಾಸ್ತ್ರದ ಉದ್ಗ್ರಂಥವನ್ನು ಸಿದ್ಧಗೊಳಿಸಿ ಸಮಾಜಜೀವನದಲ್ಲಿ ಅಡಗಿರುವ ಮಾನಸಿಕತತ್ತ್ವಗಳ ವಿವೇಚನೆಯೊಂದನ್ನು ನಡೆಸಿದ್ದನು. ರಿವರ್ಸ್‌ಗಿಂತ ಮೊದಲೇ ಮಾನವಶಾಸ್ತ್ರದಲ್ಲಿ ಮನಃಶಾಸ್ತ್ರದ ಅಗತ್ಯವನ್ನು ಅರಿತುಕೊಂಡ ಮೇಧಾವಿ ಇವನು. ಈತನು ಪ್ರಾಚೀನ ಜನಾಂಗಗಳ ವಿಧಿನಿಷೇಧವನ್ನು ಚರ್ಚಿಸುತ್ತಾ 'ಟಾಬೂ' ಎಂಬ ಪದವನ್ನು ಬಳಸಿ ಅದು 'ಪವಿತ್ರ' ಮತ್ತು 'ಅಶುಚಿ' ಎಂಬ ವಿರುದ್ಧ ಅರ್ಥಗಳನ್ನೊಳಗೊಂಡಿದೆಯೆಂದು ತೋರಿ

ಸಿದ್ದನು; ಇದು ರಾಬರ್ಟ್ಸ್‌ಸನ್ ಸ್ಮಿತ್‌ನಿಂದಲೂ ದೃಢಪಟ್ಟಿದ್ದಿತು. ಇದು ಫ್ರಾಯ್ಡನ ಕುತೂಹಲವನ್ನು ಕೆರಳಿಸಿತು. ವೂಂಡ್ಟ್ ಪ್ರತಿಪಾದನೆ ಅವನಿಗೆ ಹಿಡಿಸಿ, ಫ್ರೇಜರ್‌ನ ಟೋಟೆಮ್ ಪದ್ಧತಿಯೂ ಕುಲದಿಂದ ಹೊರಗೆ ಮದುವೆ ನಡೆಯುವ ಸಂಪ್ರದಾಯ (ಎಕ್ಸೋಗಮಿ)ವೂ ವಿಭಿನ್ನ ಪ್ರಸಂಗಗಳೆನ್ನುವ ವಾದವನ್ನು ನಿರಾಕರಿಸಿದನು. ತನ್ನ ಚಿಂತನೆಯ, ಆಲೋಚನೆಯ, ಪರಾಮರ್ಶೆಯ ಫಲವಾಗಿ Totem and Taboo ಎಂಬ ಗ್ರಂಥವನ್ನು ಸಿದ್ಧಪಡಿಸಿದನು. ಇದು ಮನೋವಿಶ್ಲೇಷಣವು ಮಾನವ ಶಾಸ್ತ್ರದಲ್ಲಿ ಮಾಡಿದ ಮೊಟ್ಟಮೊದಲ ಪ್ರಯೋಗ.

ಆದರೆ ಇದು ಮಾನವಶಾಸ್ತ್ರದಲ್ಲಿ ಅಂಥದೇನು ಕ್ರಾಂತಿಯನ್ನು ಒಡನೆಯೇ ಉಂಟುಮಾಡಲಿಲ್ಲ. ಅದರ ಆಂಗ್ಲ ಅನುವಾದವು 1920 ರಲ್ಲಿ ಅಮೆರಿಕದಲ್ಲಿ ಪ್ರಕಟ ವಾದಾಗ ಕ್ರೋಯರ್‌ಬರ್ ಎಂಬ ಸುಪ್ರಸಿದ್ಧ ಮಾನವಶಾಸ್ತ್ರಜ್ಞನು ಅದರ ವಿಮರ್ಶೆ ಮಾಡಿದನು. ಫ್ರಾಯ್ಡನ ವಾದಗಳನ್ನೆಲ್ಲ ಕ್ರೋಯರ್‌ಬರ್ ಒಪ್ಪಿಕೊಳ್ಳಲಿಲ್ಲವಾದರೂ ಅವನ ವಿಮರ್ಶೆ ಮಾನವಶಾಸ್ತ್ರಜ್ಞರ ಆಸಕ್ತಿಯನ್ನು ಸೆಳೆಯಿತು; ಮಾನಸಿಕ ವಿವರಗಳ ಅಧ್ಯಯನ ಅಗತ್ಯವೆಂದು ಅವರಿಗೆ ಮನದಟ್ಟಾಯಿತು. ಸಾಮಾಜಿಕ ವ್ಯವಸ್ಥೆಯಲ್ಲಿ ವ್ಯಕ್ತಿಯ ಲೈಂಗಿಕಪ್ರವೃತ್ತಿ ಏಕೈಕವೆಂದು ಯಾರೂ ಒಪ್ಪಿಕೊಳ್ಳದಿದ್ದರೂ ಅದು ಮುಖ್ಯವಾದುದೆಂದು ಸ್ಪಷ್ಟವಾಯಿತು.

ಎಮಿಲ್ ಡುರ್ಕ್‌ಹೈಮ್ (1858-1911) ಆ ಯುಗದ ಸಮಾಜಶಾಸ್ತ್ರಜ್ಞರಲ್ಲಿ ಪ್ರಸಿದ್ಧನಾಗಿದ್ದವನು. ವಿದ್ಯಾರ್ಥಿದೆಶೆಯಲ್ಲಿ ವೂಂಡ್ಟ್‌ನ ಸಹಾಧ್ಯಾಯಿಯಾಗಿದ್ದ ಈತನಿಗೆ ಮನಃಶಾಸ್ತ್ರದಲ್ಲಿ ಆಸಕ್ತಿಯಿದ್ದುದು ಆಶ್ಚರ್ಯವೇನಲ್ಲ. ಮುಂದೆ ಪ್ರಸಿದ್ಧನಾದನಂತರ ಮನಃಶಾಸ್ತ್ರದ ಬಗ್ಗೆ ಅವನಿಗೆ ತಾತ್ಸಾರಭಾವನೆ ಬೆಳೆದುಬಂದಿತಾದರೂ ಮಾನಸಿಕವಿವರ ಗಳ ಕೂಲಂಕಷವಾದ ಅಧ್ಯಯನ ಅವನಿಂದ ನಡೆಯಿತು. ಪ್ರಾಚೀನ ಸಮಾಜದಲ್ಲಿ ಆತ್ಮಕಲ್ಪನೆಯನ್ನು ಕುರಿತು ಆತನು ನಡೆಸಿದ ಅನ್ವೇಷಣೆಯಿಂದ ಗೋಷ್ಠಿಯ ಆಧಿಕ್ಯ ಸ್ಪಷ್ಟವಾಯಿತು. ಇಡೀ ಗುಂಪಿನ ಭಾವನೆಗಳೂ ಕಲ್ಪನೆಗಳೂ ವ್ಯಕ್ತಿಯ ನಡವಳಿಕೆಯನ್ನೂ ಚಿಂತನಾಪ್ರಕಾರಗಳನ್ನೂ ನಿರ್ದೇಶಿಸುತ್ತವೆ. ವ್ಯಕ್ತಿಯ ಚೇತನವು ಗುಂಪಿನ ಚೇತನದ ಒಂದು ಭಾಗವಷ್ಟೆ; ಅವನ ವೈಯಕ್ತಿಕ ಆತ್ಮಕ್ಕಿಂತ ದಿಟವಾದುದು 'ಗುಂಪಿನ' ಆತ್ಮ'. 'ಸಂಘಾತ ಆತ್ಮ' (collective soul). ಈ ಆತ್ಮವು ಕೇವಲ ತತ್ತ್ವವಾಗಿರದೆ 'ಆತ್ಮಸಾಕ್ಷಿಯಾಗಿ', 'ಅಂತಃಪ್ರೇರಣೆ'ಯಾಗಿ, 'ಅಂತಃಕರಣ'ವಾಗಿ (collective conscience) ಕೆಲಸಮಾಡುತ್ತದೆ. ಕಾರ್ಯೋನ್ಮುಖವಾದ ಈ ಸಂಘಾತ ಆತ್ಮತತ್ತ್ವವನ್ನು ಕುರಿತು ವ್ಯಕ್ತಿಯು ಚಿಂತನೆ ನಡೆಸುವಾಗ ಧರ್ಮ ಸಿದ್ಧವಾಗುತ್ತದೆ. ಧರ್ಮವೆಂದರೆ ಗುಂಪಿನ ವ್ಯವಹಾರ; ವೈಯಕ್ತಿಕ ನಂಬಿಕೆಗಳೆಲ್ಲ ಇಡೀ ಗುಂಪಿನ ನಿರ್ಣಾಯಕ ನೆಲೆಯಲ್ಲಿ ಒಂದು ಸಂಸ್ಥೆ (ಚರ್ಚ್)ಯ ಅಂಗಗಳಾಗಿ ಕೆಲಸಮಾಡುವುದೇ ಧರ್ಮವೆನಿಸಿಕೊಳ್ಳುತ್ತದೆ.

ಹೀಗೆ ವ್ಯಕ್ತಿಯನ್ನು ಮೀರಿ ನಿಂತ ಒಂದು ತತ್ತ್ವ ಸಮಾಜವನ್ನು ನಡೆಸುತ್ತದೆ. ವ್ಯಕ್ತಿಯ ವರ್ತನೆಗೆ ಮೂಲಪ್ರವೃತ್ತಿ ಸಮಾಜದಿಂದಲೇ ದೊರೆಯುವುದು, ಎಂದು ಡುರ್ಕ್‌ಹೈಮ್ ವಾದಿಸಿದಾಗ ಮಾನವ ಶಾಸ್ತ್ರಜ್ಞರು ಮನಃಶಾಸ್ತ್ರದ ಮುಖ್ಯಪ್ರಮೇಯ ಗಳನ್ನು ಮತ್ತೊಮ್ಮೆ ಪರಿಶೀಲಿಸಬೇಕಾಯಿತು. ವ್ಯಕ್ತಿಗೆ ತನ್ನದೇ ಆದ ಪ್ರವೃತ್ತಿಗಳೇ ಇಲ್ಲವೆನ್ನುವ ವಾದವನ್ನು ರಾಬರ್ಟ್‌ಲೋವಿ ಮತ್ತಿತರರು ತಿರಸ್ಕರಿಸಿದರಾದರೂ ಡುರ್ಕ್‌ಹೈಮ್‌ನ ಪ್ರಭಾವದಿಂದ 'ಸಂಘಾತಪ್ರವೃತ್ತಿ' ಗಳ ಬಗ್ಗೆ ವಿಚಾರ ಬೆಳೆಯಿತು. ಮುಂದೆ 'ಸಮಷ್ಟಿಮನಃಶಾಸ್ತ್ರ'ದ ಪ್ರಯೋಜನವು ಮಾನವಶಾಸ್ತ್ರದಲ್ಲಿ ಒದಗುವುದಕ್ಕೆ ಡುರ್ಕ್‌ಹೈಮ್ ಕಾರಣಪುರುಷನಾದನು. ಈತನ ಪ್ರಭಾವವನ್ನು ಅಳವಡಿಸಿಕೊಂಡ ಲೂಸಿಯಂ ಲೆವಿ-ಬ್ರೂಲ್ (1856-1919) ಪ್ರಾಚೀನ ಮನುಷ್ಯನ ಮನಸ್ಸು ಗುಂಪಿನ ಪಡಿಯಚ್ಚಿನಲ್ಲೇ ಕೆಲಸ ಮಾಡುವುದೆಂದೂ, ವ್ಯಕ್ತಿಯ ಚೇತನ ವಿಶಿಷ್ಟವಾದುದಲ್ಲ ವೆಂದೂ, ಧಾರ್ಮಿಕ ವಿಧಿಗಳಲ್ಲಿ ಪಾಲ್ಗೊಳ್ಳುವಾಗ ಒದಗಿದ ಭಾವತರಂಗಗಳು ಗುಂಪಿನ ಪ್ರತಿಯೊಬ್ಬ ವ್ಯಕ್ತಿಯ ನಡವಳಿಕೆಯನ್ನೂ ನಿರ್ದೇಶಿಸುವುದೆಂದೂ ಸೂಚಿಸಿದನು.

ಆಧುನಿಕ ಮನುಷ್ಯನಂತೆ ಪ್ರಾಚೀನಮನುಷ್ಯ ವಿಚಾರಪರನಲ್ಲ. ವಿಚಿಕಿತ್ಸೆಯಾಗಲೀ ಸಂಶಯವಾಗಲೀ ಅವನಲ್ಲಿ ಇರುವುದಿಲ್ಲ. ಅವನ ಪ್ರಪಂಚದಲ್ಲಿ ಪ್ರಮುಖವಾದುದು 'ಸಾಮೂಹಿಕ ಪ್ರತಿಮೆಗಳು' (collective representations). ಅವನು ಯಾವುದಾದರೊಂದು ವಸ್ತುವನ್ನು ನೋಡಿದೊಡನೆ ಅವನ ಮನಸ್ಸಿನಲ್ಲಿ ಅದರ ವಿಚಾರವಾಗಿ ಇಡೀ ಗುಂಪಿನ ಭಾವನೆಗಳು, ಪೂರ್ವಗ್ರಹಗಳು, ಭಾವಗಳು ನಂಬಿಕೆಗಳು ಸೇರಿಕೊಂಡು ಬರುತ್ತವೆ. ತರ್ಕಬದ್ಧವಾದ ವಿಚಾರಸರಣಿ ಮನುಷ್ಯನಲ್ಲಿ ಮೂಡುವ ಮೊದಲು ಇರುವಂಥ ಆಲೋಚನಾವಿಧಾನ (prelogical thinking) ಪ್ರಾಚೀನಮನುಷ್ಯರದ್ದು; ಅದು ಭಾವಗಳನ್ನು ಅವಲಂಬಿಸಿಯೇ ಇರುತ್ತದೆ. ಲೆವಿ-ಬ್ರೂಲ್‌ನ ಈ ವಿಚಾರಸರಣಿ ಮನಃಶಾಸ್ತ್ರ. ಮಾನವಶಾಸ್ತ್ರ. ಸಮಾಜಶಾಸ್ತ್ರಗಳ ಸಮನ್ವಯದಲ್ಲಿ ಮತ್ತೊಂದು ದಿಟ್ಟಹೆಜ್ಜೆ.

ಡುರ್ಕ್‌ಹೈಮ್‌ನ ಪ್ರಭಾವವನ್ನು ತಳೆದ ಇನ್ನೊಬ್ಬ ಮಾನವ ಶಾಸ್ತ್ರಜ್ಞ ರ್‍ಯಾಡ್‌ಕ್ಲಿಫ್-ಬ್ರೌನ್ (1881–1955) ರಿವರ್ಸ್‌ನ ಬಳಿ ವಿದ್ಯಾರ್ಥಿಯಾಗಿದ್ದು ಮನಃಶಾಸ್ತ್ರದ ಮುಖ್ಯ ಪ್ರಮೇಯಗಳನ್ನು ತಿಳಿದಿದ್ದನು. ಸಾಮೂಹಿಕವಾದ ಭಾವ ಗಳು ಧಾರ್ಮಿಕವಿಧಿಯಲ್ಲಿ ಅಭಿವ್ಯಕ್ತಿಯಾಗುತ್ತವೆ ಎಂದು ಅವನ ವಾದ. ಧಾರ್ಮಿಕ ವಿಧಿಯಲ್ಲಿ ಅನಿವಾರ್ಯವಾಗಿ ಇರುವ ಭೌತಿಕಪದಾರ್ಥವು (ಟೋಟೆಮ್. ಫೆಟಿಷ್. ವಿಗ್ರಹ, ಪ್ರತೀಕ) ಇಡೀ ಗುಂಪನ್ನು ಪ್ರತಿನಿಧಿಸುತ್ತದೆ. ವ್ಯಕ್ತಿಯು ಗುಂಪಿನೊಂದಿಗೆ ಹೊಂದಿಕೊಳ್ಳುವ ಸಂವಿಧಾನ ಇದು. ಸಂಸ್ಕೃತಿ ಎಲ್ಲವೂ ಹೊರಗಿನ ಪರಿಸರದೊಂದಿಗೆ ವ್ಯಕ್ತಿಯ ಹೊಂದಾಣಿಕೆ ಅಷ್ಟೆ; ಪರಿಸರದ ಅಗತ್ಯವಿದ್ದಂತೆ ವ್ಯಕ್ತಿಯ ವರ್ತನೆ ಮಾರ್ಪಡು ತ್ತದೆ. ರ್‍ಯಾಡ್‌ಕ್ಲಿಫ್-ಬ್ರೌನ್‌ನ ಈ ನಿಲುವು ಮನಃಶಾಸ್ತ್ರದ ಪ್ರಮುಖ

ವಾದೊಂದು ದೃಷ್ಟಿಯನ್ನು ಅಳವಡಿಸಿಕೊಂಡಿತು; ಅದರಿಂದಾಗಿ ಮಾನವ ಶಾಸ್ತ್ರದ ಆಧುನಿಕ ಪರಿಚ್ಛೇದ ಆರಂಭವಾಯಿತು.

ಹೊರಗಿನ ಪ್ರಚೋದನೆಗೆ ವ್ಯಕ್ತಿಯ ಪ್ರತಿಕ್ರಿಯೆ ಮನುಷ್ಯನ ಎಲ್ಲ ವ್ಯವಹಾರಕ್ಕೂ ಮೂಲಭೂತವಾದುದು ಎನ್ನುವ ಸಿದ್ಧಾಂತವನ್ನು ನಿಷ್ಠುರವಾಗಿ ಮಂಡಿಸಿದ ಜಾನ್ ಬ್ರೋಡಸ್ ವಾಟ್ಸನ್ (1919ರ ಸುಮಾರು) ಅವನಿಗೆ ಮೊದಲೇ ಈ ವಿಚಾರವಾಗಿ ಸಂಶೋಧನೆಗಳನ್ನು ನಡೆಸಿ ಇನ್ನಷ್ಟು ಖಂಡಿತವಾದ ನಿರ್ಣಯಕ್ಕೆ ಬಂದಿದ್ದ ಐವಾನ್ ಪಾವ್‌ಲೋವ್ (1900ರ ಸುಮಾರು), ರಿವರ್ಸ್‌ನೊಂದಿಗೆ ಟೋರೆಸ್ ಸ್ಟ್ರೇಟ್ಸ್ ಪ್ರವಾಸದಲ್ಲಿ ಪಾಲುಗೊಂಡಿದ್ದ ವಿಲಿಯಂ ಮೆಕ್‌ಡೂಗಲ್ ಮೊದಲಾದ ಮನಃಶಾಸ್ತ್ರಜ್ಞರ ವಿಚಾರಸರಣಿಗಳು ಮಾನವಶಾಸ್ತ್ರದಲ್ಲಿಯೂ ಸಮಾಜಶಾಸ್ತ್ರದಲ್ಲಿಯೂ ಪ್ರಭಾವವನ್ನು ಬೀರಲಾರಂಭಿಸಿದುವು. ಈ ವರ್ತನಾವಾದಿ ಪ್ರಭಾವಗಳನ್ನು ತನ್ನ ದೃಷ್ಟಿಯಲ್ಲಿ ಅಳವಡಿಸಿಕೊಂಡು ಪ್ರಸಿದ್ಧನಾದ ಬ್ರೋನಿಸ್ಲಾ ಮೆಲಿನೌಸ್ಕಿ (1884-1942) ಹೊಸದೊಂದು ಮಾನವಶಾಸ್ತ್ರಸಂವಿಧಾನವನ್ನು ಬಳಕೆಗೆ ತಂದನು. ಸಮಾಜದ ಯಾವುದಾದರೊಂದು ಸಂಸ್ಥೆಯನ್ನು ಅಧ್ಯಯನಮಾಡುವಾಗ ಅದರ ಎಲ್ಲ ಪ್ರಕಾರ ಗಳಲ್ಲಿರುವ ಪರಸ್ಪರ ಪ್ರಭಾವವನ್ನು ಪರಿಗಣಿಸಬೇಕು; ಆ ಸಂಸ್ಥೆಗೆ ಮೂಲಭೂತವಾಗಿರುವ ಸಾಮಾಜಿಕ ಮತ್ತು ಮಾನಸಿಕ ವಿವರಗಳನ್ನು ಅಧ್ಯಯನಮಾಡಬೇಕು. ಈತನು ಸಮಾಜದ ಕೌಟುಂಬಿಕಜೀವನ, ಲೈಂಗಿಕಪ್ರವೃತ್ತಿ, ಸ್ವಪ್ನಗಳು, ಪುರಾಣಕತೆಗಳು ಮೊದಲಾದ ವಿವರಗಳನ್ನೆಲ್ಲ ಪರಿಶೀಲಿಸಿದನು. ಈತನು ಫ್ರಾಯ್ಡನ ಮನೋವಿಶ್ಲೇಷಣಾ ವಾದದಲ್ಲಿ ಆಸಕ್ತನಾಗಿದ್ದು ಮಾನವನ ಸಾಮಾಜಿಕ ಜೀವನದಲ್ಲಿ ಅದರ ವಿವರಗಳನ್ನು ಗುರುತಿಸಲೆತ್ನಿಸಿದನು. ಮನೋವಿಶ್ಲೇಷಣದ ಲೋಪದೋಷಗಳನ್ನು ಆತನು ತಿಳಿಯ ಪಡಿಸಿ, ತಾನು ವರ್ತನಾವಾದಿ (behaviourist) ಯೆಂದು ಸ್ಪಷ್ಟಪಡಿಸಿದನು.

ಈತನ ನಿಲುವು ಡುರ್ಕ್‌ಹೈಮ್ ನಿಲುವಿಗೆ ವಿರುದ್ಧವಾದುದು. ಪ್ರಾಚೀನ ಮನುಷ್ಯನಲ್ಲಿ ಸಾಂಘಿಕ ಪ್ರಜ್ಞೆಯೇ ಮುಖ್ಯವೆಂದು ಮೆಲಿನೌಸ್ಕಿ ಒಪ್ಪಲಿಲ್ಲ. ಸಮಾಜದಲ್ಲಿ ರುವ ಸಾಂಸ್ಕೃತಿಕ ವಿನ್ಯಾಸಗಳು ವ್ಯಕ್ತಿಯ ಎಳೆತನದಲ್ಲಿಯೇ ಅನುಕೂಲಿತ ಅನುಕ್ರಿಯೆ (conditioning) ಯಂತೆ ಮೂಡಿಬರುತ್ತದೆ; ಸಾಮಾಜಿಕವಾದ ಪ್ರಜ್ಞೆಯೆನ್ನು ವುದು ವಾಸ್ತವವಲ್ಲ ಎಂದು ಈತನ ವಾದ. ಮಾನವಶಾಸ್ತ್ರಜ್ಞರು ಜೀವಂತ ಸಾಮಾಜಿಕ ವಿವರಗಳನ್ನು ಅಧ್ಯಯನಮಾಡಬೇಕೆಂಬ ಈತನ ಆಗ್ರಹ ಫಲಪ್ರದವಾಯಿತು. ಈತನ ಶಿಷ್ಯರಾದ ಆಶ್ಲಿ ಮಾಂಟೆಗು, ಶಪೀರೋ, ಇವಾನ್ಸ್-ಪ್ರಿಚರ್ಡ್ ಮೊದಲಾ ದವರು ಈ ದೃಷ್ಟಿಯನ್ನು ಪ್ರತಿಪಾದಿಸುತ್ತಾ ಬಂದಿದ್ದಾರೆ. ಸಾಂಸ್ಕೃತಿಕ ವಿವರಗಳ ಬಳಕೆ ಮತ್ತು ತಾತ್ಪರ್ಯ ಇವನ್ನೂ ಸಂಸ್ಥೆಗಳನ್ನೂ ಅವುಗಳ ಜೀವಂತ ನೆಲೆಯಲ್ಲಿಯೇ ಅಧ್ಯ ಯನಮಾಡಬೇಕೆಂಬ ಈ ದೃಷ್ಟಿಯನ್ನು 'ಕ್ರಿಯಾವಾದ' (functionism) ಎನ್ನು

ತ್ತಾರೆ. ಬದುಕನ್ನು ಒಡೆದು, ವಿವರಗಳನ್ನು ಬೇರೆ ಬೇರೆಯಾಗಿ ಅಧ್ಯಯನ ಮಾಡುವುದರಿಂದ ವಸ್ತುಸ್ಥಿತಿಯ ಅರಿವಾಗುವುದು ಕಷ್ಟವೆಂದು ಈ ದೃಷ್ಟಿ ಸ್ಪಷ್ಟಪಡಿಸಿತು.

ಇದರಿಂದಾಗಿ ಮಾನವಶಾಸ್ತ್ರದಲ್ಲಿ ಸಮಷ್ಟಿವಾದವು ಬೆಳೆಯತೊಡಗಿತು. ಮನಃಶಾಸ್ತ್ರದಲ್ಲಿ ಮ್ಯಾಕ್ಸ್ ವೆರ್ತೈಮೆರ್ (ಜನನ 1880), ವೊಲ್ಫ್‌ಗಾಂಗ್ ಕೊಯ್ಲರ್ (1887-), ಕುರ್ತ್ ಕಾಫ್ಕಾ (ಜ. 1886) ಇವರು ಫ್ರಾಂಕ್‌ಫುರ್ಟ್‌ನಲ್ಲಿಯೂ ಬರ್ಲಿನ್‌ನಲ್ಲಿಯೂ ಒಟ್ಟಿಗೆ ಸಂಶೋಧನೆಗಳನ್ನು ನಡೆಸಿ 1920 ರ ಸುಮಾರಿಗೆ 'ಸಮಷ್ಟಿವಾದ' ವೆಂಬ ಮನಃಶಾಸ್ತ್ರ ಶಾಖೆಯೊಂದನ್ನು ಪ್ರವರ್ತಿಸಿದ್ದರು. Gestalt ಎನ್ನುವ ಹೆಸರಿನಿಂದ ಪ್ರಸಿದ್ಧವಾದ ಈ ವಾದದಲ್ಲಿ ಆಕೃತಿ (shape, form) ಗೆ, ಅದು ತಳೆಯುವ ವಿನ್ಯಾಸಗಳಿಗೆ, ವ್ಯೂಹಗಳಿಗೆ (patterns) ಹೆಚ್ಚು ಪ್ರಾಮುಖ್ಯ, ವಿವರಗಳನ್ನು ಕೂಡಿದರೆ ವಸ್ತುವಾಗದು; ವಸ್ತುವಿನಲ್ಲಿ ವಿವರಗಳನ್ನು ಮೀರಿದ, ವಿವರಗಳಿಂದ ಬೇರೆಯಾದ, ಆದರೆ ವಿವರಗಳಿಗೆ ಅರ್ಥವನ್ನೂ ಸಾರ್ಥಕ್ಯವನ್ನೂ ಒದಗಿಸುವ ಒಂದು ಸಮಾಕೃತಿ ಅಥವಾ ಸಮಷ್ಟಿ (configuration) ಇರುತ್ತದೆ. ಪ್ರಕೃತಿಯಲ್ಲಿಯೂ, ಮನುಷ್ಯನ ವ್ಯಕ್ತಿತ್ವದಲ್ಲಿಯೂ, ಅವನ ವ್ಯವಹಾರದಲ್ಲಿಯೂ, ಸಮಷ್ಟಿಯೇ ತತ್ತ್ವ, ವಿವರಗಳನ್ನು ವಿಶಿಷ್ಟವಾದ ರೀತಿಯಲ್ಲಿ ಸಂಸ್ಕರಿಸಿ ಅಂಶಕ್ಕಿಂತ ಪೂರ್ಣವೇ ದಿಟವಾದುದೆಂದು ಕಾಣಿಸಿ ತಾನು ಕೆಲಸ ಮಾಡುತ್ತದೆ. ವ್ಯಕ್ತಿಯಲ್ಲಿ ಕೆಲವು ಒತ್ತಡಗಳಿದ್ದು, ಈ ಒತ್ತಡಗಳು ಒಂದು ಕ್ರಮದಲ್ಲಿ ಸೇರಿ, ಸಮಷ್ಟಿಯು ನಿರ್ದಿಷ್ಟವಾಗುವಂತೆ, ಪರಿಪೂರ್ಣವಾಗುವಂತೆ ಸಾಧಿಸುತ್ತವೆ; ಈ ಒತ್ತಡ ಸಂಘಾತಗಳೇ ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುವುದು. ಹೀಗೆ ಸಮಷ್ಟಿಯು ಮೂಲಭೂತವಾದ ಪ್ರವೃತ್ತಿ. ವೂಂಡ್ಟ್‌ನ ದೃಷ್ಟಿಗೂ ವಾಟ್ಸ್‌ನ ವರ್ತನಾವಾದದ ದೃಷ್ಟಿಗೂ ವಿರುದ್ಧವಾದ ಸಮಷ್ಟಿದೃಷ್ಟಿ ಮನಃಶಾಸ್ತ್ರ ಕ್ಷೇತ್ರದಲ್ಲಿ ಒಂದು ಆಂದೋಳನವನ್ನೇ ಉಂಟುಮಾಡಿತು. ಆದರೆ ಮಾನವಶಾಸ್ತ್ರದಲ್ಲಿ ಇದರ ಪ್ರಭಾವ ನಿಧಾನವಾಗಿಯೇ ಒದಗಿತೆನ್ನಬಹುದು.

ಒಂದು ಜನಾಂಗದ ನಡವಳಿಕೆಯಲ್ಲಿ ಒಟ್ಟಾರೆ ಅದಕ್ಕೆ ವಿಶಿಷ್ಟವಾದ ಗುಣವೊಂದು ಇದೆಯೆಂದು ಎಡ್ವರ್ಡ್ ಸಪಿರ್ (1884–1939) ಆಲೋಚಿಸಿದ್ದನು: ಅವನಿಗೆ ಮನಃಶಾಸ್ತ್ರಸಿದ್ಧಾಂತಗಳಲ್ಲಿ ತುಂಬ ಆಸಕ್ತಿಯಿದ್ದಿತು. ಸಾಂಸ್ಕೃತಿಕವಾಗಿ ಒಂದಾದ ಗುಂಪು ಸಾಂಪ್ರದಾಯಿಕವಾದ ಮತ್ತು ಮೂಲ ಪ್ರವೃತ್ತಿಗಳಿಗೆ ಸೇರಿದ ಆಕೃತಿಯೊಂದನ್ನು ತಳೆದಿರುವುದೆಂದು ಆತನ ವಾದ. ಈ ದಿಕ್ಕಿನಲ್ಲಿ ವಿಚಾರಸರಣಿಯನ್ನು ಮುಂದುವರಿಸಿದಾಕೆ ರುತ್ ಬೆನಿಡಿಕ್ಟ್ (1887-1948). ಸಪಿರ್ ಮತ್ತು ಮಾರ್ಗರೆಟ್ ಮೀಡ್ ಇಬ್ಬರೂ ಇದಕ್ಕೆ ಅನುಕೂಲವಾದ. ಮನಃಶಾಸ್ತ್ರಶುದ್ಧವಾದ ಭೂಮಿಕೆಯನ್ನು ಸಿದ್ಧಪಡಿಸಿದ್ದರು. ಹಲವಾರು ಬಣ್ಣಬಣ್ಣದ ನೂಲುಗಳಿಂದ ನಿರ್ದಿಷ್ಟವಾದೊಂದು ವಿನ್ಯಾಸವನ್ನು ನೇಯುವಾಗ ಬೇರೆ ಬೇರೆ ಬಣ್ಣಗಳಾಗಲೀ, ಬೇರೆಬೇರೆ ದಾರವ

ಎಳೆಗಳಾಗಲೀ ಅವರಲ್ಲಿ ಕಾಣದೆ ತಟ್ಟನೆ ಒಟ್ಟಾರೆ ವಿನ್ಯಾಸವೇ ಎದ್ದು ಕಾಣುವಂತೆ ಹಲವಾರು ವಿವರಗಳು ಸೇರಿದ್ದರೂ ಒಂದು ಸಂಸ್ಕೃತಿಯಲ್ಲಿ ವಿನ್ಯಾಸವೇ ಗೋಚರ ವಾಗುತ್ತದೆ ಎಂದು ಬೆನಿಡಿಕ್ಟ್ ಸೂಚಿಸಿದಳು. ಈ ವಿನ್ಯಾಸವನ್ನು ಆಕೆ ಸಮಾಕೃತಿ ಅಥವಾ ಸಮಷ್ಟಿ (configuration) ಎಂದೇ ಕರೆದಳು. ವಿವರಗಳನ್ನೆಲ್ಲ ಒಂದೊಂದಾಗಿ ಪಟ್ಟಿಮಾಡಿದರೆ ಈ ವಿನ್ಯಾಸ ಸ್ಪಷ್ಟವಾಗುವುದಿಲ್ಲ. ವ್ಯಕ್ತಿಯ ವ್ಯವಹಾರದ ವಿವರಗಳಿಗೂ ಆತನ ವ್ಯಕ್ತಿತ್ವಕ್ಕೂ ಇರುವ ಸಂಬಂಧವೇ ಗುಂಪಿನ ವರ್ತನೆಗಳಿಗೂ ವಿನ್ಯಾಸಕ್ಕೂ ಇರುವ ಸಂಬಂಧ. ಸಮಷ್ಟಿಮನಃಶಾಸ್ತ್ರದ ಪ್ರಭಾವ ಆಕೆಯ ಮೇಲೆ ಎಷ್ಟಿತ್ತೆಂಬುದು ಆಕೆಯ Patterns of Culture (1934) ಎನ್ನುವ ಗ್ರಂಥದಿಂದ ಸ್ಪಷ್ಟವಾಗುತ್ತದೆ. ಸಂಸ್ಕೃತಿಯ ಸಮಾಕೃತಿಯು ಅದರ ಅಂಗಭೂತವಾದ ವಿವರಗಳ ಮೊತ್ತಕ್ಕಿಂತ ಮಿಗಿಲಾದುದು ಎನ್ನುವಲ್ಲಿ ಬೆನಿಡಿಕ್ಟ್ ಮತ್ತು ಡುರ್ಕ್‌ಹೈಮ್ ಇಬ್ಬರೂ ಒಂದೇ ನಿಲುವನ್ನು ತಳೆದಿದ್ದಾರೆ.

ವ್ಯಕ್ತಿಗಳಿಂದಲೇ ಸಂಸ್ಕೃತಿಯಾಗಿರುವುದು ನಿಜ; ಯಾವೊಂದು ಸಂಸ್ಕೃತಿಯಲ್ಲಿಯೂ ವ್ಯಕ್ತಿಗಳಿಲ್ಲದೆ ಆಗುವುದಿಲ್ಲ. ಆದರೆ ಗುಂಪಿನಲ್ಲಿ ಈ ವ್ಯಕ್ತಿಗಳು ಕಲೆಯುವಾಗ ವ್ಯಕ್ತಿಗಳಲ್ಲಿಲ್ಲದ ಗುಣವಿಶೇಷವೊಂದು ಸೇರಿಕೊಂಡು ಬರುತ್ತದೆ. ಸಾಮಾಜಿಕಸಂಬಂಧ ಗಳಲ್ಲಿ ವ್ಯಕ್ತಿಗಳನ್ನು ಮೀರಿದ ವಿನ್ಯಾಸಗಳನ್ನು ಕಾಣಬಹುದು. ಈ ವಿನ್ಯಾಸಗಳು ವ್ಯಕ್ತಿಗಳ ಪ್ರವೃತ್ತಿಗಳನ್ನು ಕೂಡ ಮಾರ್ಪಡಿಸಬಲ್ಲುವು, ಬಿಗಿಹಿಡಿಯಬಲ್ಲವು. ಸಾಮಾಜಿಕವಿನ್ಯಾಸಗಳಿಗೂ ವ್ಯಕ್ತಿಯ ಪ್ರವೃತ್ತಿಗಳಿಗೂ ಇರುವ ಸಂಬಂಧ ಮಾನವ ಶಾಸ್ತ್ರದಲ್ಲಿಯೂ ಸಮಾಜಶಾಸ್ತ್ರದಲ್ಲಿಯೂ ಅಧ್ಯಯನಕ್ಕೆ ಬಂದಿತು; 'ಸಂಸ್ಕೃತಿಯ ಸಮಾಕೃತಿ' ಎನ್ನುವ ಕಲ್ಪನೆಯಲ್ಲಿ ವ್ಯಕ್ತಿಗಿರುವ ಮೌಲ್ಯ ಮುಖ್ಯವಾಯಿತು. ಸಂಸ್ಕೃತಿಯ ಅಧ್ಯಯನವನ್ನು ವ್ಯಕ್ತಿಪ್ರಮುಖವಾಗಿ ವ್ಯವಸ್ಥೆ ಮಾಡಿದವರಲ್ಲಿ ಇರ್ವಿಂಗ್ ಹಾಲೊವೆಲ್ (ಜನನ 1892) ಮತ್ತು ಕ್ಲುಕ್‌ಹೋನ್ (1905–1951) ಇವರು ಪ್ರಸಿದ್ಧರು.

ಕ್ಲುಕ್‌ಹೋನ್ ಬರೆದ Children of the People (1947) ನಲ್ಲಿ ಮಕ್ಕಳ ಬೆಳವಣಿಗೆ ಮತ್ತು ವ್ಯಕ್ತಿತ್ವದ ಅಧ್ಯಯನ ಮಾನವಶಾಸ್ತ್ರದಲ್ಲಿ ಎಷ್ಟು ಅಗತ್ಯ ಎಂಬ ವಿಚಾರವಿದೆ. ಮನಃಶಾಸ್ತ್ರಪದ್ಧತಿಗಳನ್ನು ಬೆಳೆಸಿಕೊಂಡು ಪ್ರಾಯೋಗಿಕಮಾನವ ಶಾಸ್ತ್ರ ಮೈದಳೆಯುವುದು ಆತನ Mirror of Man (1949) ನಲ್ಲಿ ಸ್ಪಷ್ಟವಾಗಿದೆ. ಹಾಗೆಯೇ ಮನಃಶಾಸ್ತ್ರದ ರೋರ್‌ಷಾಕ್ ಪರೀಕ್ಷೆಯಂಥ ವ್ಯಕ್ತಿತ್ವ ಪರೀಕ್ಷಾ ವಿಧಾನಗಳನ್ನು ಬಳಸಿಕೊಂಡು ಮನುಷ್ಯನ ಅಹಮಿಕೆ (ego) ಮತ್ತು ಸ್ವಪ್ರಜ್ಞೆ (self-awareness) ಯ ವಿವರವಾದ ವಿಶ್ಲೇಷಣೆ ಹಾಲೋವೆಲ್‌ನ Culture and Experience (1955) ನಲ್ಲಿ ಬರುತ್ತದೆ.

ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಪ್ರತಿಕ್ರಿಯೆಯೂ ತನ್ನ ಸ್ಥಾನಮಾನ, ಕರ್ತವ್ಯಬುದ್ಧಿಗಳನ್ನವಲಂಬಿಸಿರುತ್ತದೆ. ವ್ಯಕ್ತಿಗೆ ತಾನು ಯಾರು ಎನ್ನುವ ಅರಿವೂ,

ತನ್ನ ಪಾತ್ರವೇನು ಎನ್ನುವ ಪ್ರಜ್ಞೆಯೂ ಒದಗಿಬಂದರೆ ತನಗೆ ಸಂಬಂಧಿಸಿದ ಇತರ ವ್ಯಕ್ತಿಗಳ ಪ್ರಚೋದನೆಗಳಿಗೆ ಸೂಕ್ತವಾದ ಪ್ರತಿಕ್ರಿಯೆಗಳನ್ನು ಮಾಡುತ್ತಾನೆ. ನಿಯತ ವಾದ ಕಾಲದಲ್ಲಿ, ನಿರ್ದಿಷ್ಟವಾದ ದೇಶದಲ್ಲಿ ವ್ಯಕ್ತಿಗೆ ತನ್ನ ಅರಿವು ಆಗುವುದೇ ಸಾಮಾಜಿಕ ಜೀವನದಲ್ಲಿ ಮುಖ್ಯವಿವರ. ಇದು ಹಾಲೋವೆಲ್ ನಿಲುವು. ಇದು ಮಾನವ ಶಾಸ್ತ್ರದಲ್ಲಿ ಸಮಸಾಮಯಿಕವಾದ ವಿಚಾರಸರಣಿ.

ಮನಃಶಾಸ್ತ್ರಕ್ಕೂ ಮಾನವಶಾಸ್ತ್ರಕ್ಕೂ ಸಂಬಂಧವಿರಬಾರದೆಂದು ವಾದಿಸಿದ ಮಾನವ ಶಾಸ್ತ್ರಜ್ಞರೂ ಇದ್ದರು; ಇವರಲ್ಲಿ ಲೂಯಿ ಕ್ರೋಯೆಬರ್ (ಜ.1876) ಪ್ರಮುಖ. ಮೊದಲು ಮನೋವಿಶ್ಲೇಷಣದಲ್ಲಿ ಆಸಕ್ತನಾಗಿದ್ದ ಈತನು ಮನಃಶಾಸ್ತ್ರದ ಬಗ್ಗೆ ಇಷ್ಟು ಉಗ್ರಮನೋಭಾವವನ್ನು ತಳೆದುದಕ್ಕೆ ಕಾರಣ ತಿಳಿದು ಬಂದಿಲ್ಲ. ಆದರೆ ಸಾಮಾನ್ಯವಾಗಿ ಮನಃಶಾಸ್ತ್ರದ ಸಂಶೋಧನೆಗಳು ಮಾನವ ಶಾಸ್ತ್ರಕ್ಕೆ ಅನುಕೂಲ ವಾಗಿವೆಯೆಂಬ ಭಾವನೆಯೇ ಪ್ರಚಲಿತವಾಗಿರುವುದು. ರಾಲ್ಫ್ ಲಿಂಟನ್ (1897-1957) ಹೇಳಿದಂತೆ ಮಾನವಶಾಸ್ತ್ರಜ್ಞನು ಎಲ್ಲ ಸಂವಿಧಾನಗಳನ್ನೂ ಬಳಸ ಬೇಕು; ಒಂದು ಶಾಸ್ತ್ರದ ಎಲ್ಲೆಯನ್ನು ಮೀರಿ ಇನ್ನೊಂದು ಶಾಸ್ತ್ರಕ್ಕೆ ಪ್ರವೇಶಮಾಡಲು ಹಿಂಜರಿಯಬಾರದು. ಲಿಂಟನ್ ಬರೆದ The Study of Man (1936) ಈ ದೃಷ್ಟಿಗೆ ಉತ್ತಮ ನಿದರ್ಶನ. ಮನಃಶಾಸ್ತ್ರದ ಸಂವಿಧಾನಗಳನ್ನೇ ವಿಶೇಷವಾಗಿ ಬಳಸಿ ಕೊಂಡು, ಆ ಶಾಸ್ತ್ರದ ಸಿದ್ಧಾಂತಗಳನ್ನೇ ಮುಂದೆ ಮಾಡಿಕೊಂಡು ಅಧ್ಯಯನವನ್ನು ನಡೆಸಿದ ಮಾನವ ಶಾಸ್ತ್ರಜ್ಞರು ಕೊಟ್ಟಿರುವ ಕೊಡುಗೆ ಅಪಾರವಾದುದು.

ಇಂಥವರಲ್ಲಿ ಮಾರ್ಗರೆಟ್ ಮೀಡ್ (ಜ. 1903), ಗೆಸ ರೋಹೀಮ್, ಅಬ್ರಾಂ ಕಾರ್ಡಿನರ್, ಎರಿಕ್ ಎರಿಕ್ಸನ್ ಮೊದಲಾದವರನ್ನು ಹೆಸರಿಸಬಹುದು. ಇವರೆಲ್ಲ ಫ್ರಾಯ್ಡನ ಮನೋವಿಶ್ಲೇಷಣವಾದಕ್ಕೆ ಒಲಿದವರು. ರೋಹಿಮ್ ಎಂಬ ವೈದ್ಯನು 1932ರಲ್ಲಿ ಪ್ರಾಚೀನ ಜನಾಂಗಗಳ ಅಧ್ಯಯನಕ್ಕೆ ನೆರವಾಗಲು ಮಾನಸಲೇಖ (Psychograph) ಸಂವಿಧಾನವನ್ನು ಸಿದ್ಧಪಡಿಸಿದನು. ಈತನಿಂದ ಪ್ರಭಾವಿತಳಾದ ಮೀಡ್ ಫ್ರಾಯ್ಡನ ಸಿದ್ಧಾಂತಗಳ ಮೂಲಕ ಸಮೋಆ ದ್ವೀಪದಲ್ಲಿ ಅಧ್ಯಯನ ನಡೆಸಿ Coming of Age in Samoa ಎನ್ನುವ ಗ್ರಂಥವೊಂದನ್ನು 1928ರಲ್ಲಿ ಪ್ರಕಟಿಸಿದಳು. ಫ್ರಾಯ್ಡನ ಪಟ್ಟಶಿಷ್ಯನಾದ ಎ. ಎ. ಬ್ರಿಲ್ ಈ ಗ್ರಂಥವು ಮನಃಶಾಸ್ತ್ರಕ್ಕೆ ದೊಡ್ಡ ಕೊಡುಗೆಯೆಂದು ಪ್ರಶಂಸಿಸಿದನು. ಆಕೆಯ ಇನ್ನೊಂದು ಪ್ರಸಿದ್ಧಗ್ರಂಥವೆಂದರೆ Sex and Temperament in Primitive Societies (1935). ವ್ಯಕ್ತಿಯ ವ್ಯಕ್ತಿತ್ವಕ್ಕೂ ಸಮಾಜದ ಸಂಸ್ಕೃತಿಗೂ ಇರುವ ನೆಂಟನ್ನು ಕುರಿತು ಚರ್ಚಿಸುವಾಗ ಮೀಡ್ ಮನಃಶಾಸ್ತ್ರ-ಮಾನವ ಶಾಸ್ತ್ರಗಳ ಸಂಗಮದ ಸಾಧ್ಯತೆಯನ್ನೂ ಪ್ರಯೋಜನವನ್ನೂ ಎತ್ತಿತೋರಿಸಿದ್ದಾಳೆ. ಕಾರ್ಡಿನರ್ ಸಾಂಸ್ಕೃತಿಕ ವಿನ್ಯಾಸಗಳು ವ್ಯಕ್ತಿಯ ಮೇಲೆ ಬೀರುವ ಪ್ರಭಾವವನ್ನು ಕುರಿತು ಚರ್ಚಿಸಿ The Individual and his Society (1939) ಎನ್ನುವ

ಗ್ರಂಥವನ್ನು ಬರೆದಿದ್ದಾನೆ. ಇಲ್ಲಿಯೂ ಮನಃಶಾಸ್ತ್ರವು ಮಾನವಶಾಸ್ತ್ರಕ್ಕೆ ನೆರವಾಗಿರುವುದನ್ನು ಕಾಣಬಹುದು.

ಅಂತೂ ವ್ಯಕ್ತಿಯ ಪ್ರವೃತ್ತಿಗಳನ್ನು ಪ್ರಮುಖವಾಗಿ ತಿಳಿಯಲೆತ್ನಿಸುವ ಮನಃಶಾಸ್ತ್ರವು ಸಮಾಜದ ವಿನ್ಯಾಸಗಳನ್ನು ಅರಿಯದಿದ್ದರೆ, ಅಥವಾ ಸಾಮಾಜಿಕ ವಿನ್ಯಾಸಗಳನ್ನೇ ಮುಖ್ಯವಾಗಿ ವಿಚಾರಮಾಡುವ ಮಾನವಶಾಸ್ತ್ರವು ವ್ಯಕ್ತಿಯ ಮೂಲಭೂತ ಪ್ರವೃತ್ತಿಗಳನ್ನೂ ಪ್ರತಿಕ್ರಿಯೆಗಳನ್ನೂ ಅರಿಯದಿದ್ದರೆ ಎರಡೂ ಶಾಸ್ತ್ರಗಳೂ ಬೆಳೆಯುವುದು ಕಷ್ಟ. ಇದಿಷ್ಟೇ ಮನಶ್ಶಾಸ್ತ್ರದ ಕ್ಷೇತ್ರ, ಇದು ಸಮಾಜಶಾಸ್ತ್ರದ ವಿಷಯ, ಇದು ಮಾನವ ಶಾಸ್ತ್ರಕ್ಕೆ ಸೇರಿದುದು ಎಂದು ವಿವರಗಳನ್ನು ವಿಂಗಡಿಸುವುದು ಕೃತಕವಾಗುತ್ತದೆ, ಸಾರ್ಥಕವಾಗುವುದಿಲ್ಲ. ಮಾನವಶಾಸ್ತ್ರದ ಬೆಳವಣಿಗೆಯಿಂದಲೂ ಇದು ಸ್ಪಷ್ಟವಾಗಿದೆ, ಮನಃಶಾಸ್ತ್ರದ ಬೆಳವಣಿಗೆಯಿಂದಲೂ ಸ್ಪಷ್ಟವಾಗಿದೆ. ವ್ಯಕ್ತಿ–ಸಮಾಜ–ಸಂಸ್ಕೃತಿ ಇವು ಮೂರೂ ಒಂದೇ ಪ್ರಸಂಗದ ಮೂರು ಮುಖಗಳು; ಮೂರು ಪರಸ್ಪರವಾಗಿ ಸಂಬದ್ಧವಾದುವು. ಒಂದೊಂದು ಮುಖವನ್ನೇ ಪ್ರತ್ಯೇಕವಾಗಿ ಅಧ್ಯಯನ ಮಾಡುವುದು ಅನುಕೂಲವೆನಿಸಿದರೂ ಕೊಂಚಮಟ್ಟಿಗೆ ಸಾಧ್ಯವೆನಿಸಿದರೂ ವಾಸ್ತವವಾಗಿ ಸಲ್ಲದು. ಮೂರನ್ನೂ ಒಟ್ಟಿಗೆ ನೋಡುವ ಜಾಣತನ ಈಗೀಗ ಅಗತ್ಯವೆನಿಸಿದೆ. ಈ ಜಾಣತನವನ್ನು ಕಲಿಸಿಕೊಡುವ ಶಾಸ್ತ್ರವೊಂದೂ ಆಧುನಿಕ ಪ್ರಪಂಚದಲ್ಲಿ ಸಿದ್ಧವಾಗುತ್ತಿದೆ. ಶಾಸ್ತ್ರಕ್ಕೊಂದು ಹೆಸರು ಬೇಕೆಂದರೆ ಕ್ಲಿಷ್ಟವಾದರೂ ಸೂಚ್ಯವಾದ ಮಾನವ-ಮನೋ-ಸಮಾಜಶಾಸ್ತ್ರ (Anthropo-psycho-sociology) ಎನ್ನಬಹುದು. ಹೆಸರಿಗಿಂತಲೂ ಸಂವಿಧಾನ ಮುಖ್ಯ: ಅನುಸಂಧಾನದ ಮನೋವೃತ್ತಿ ಮುಖ್ಯ.

ಮನುಷ್ಯನನ್ನು ಅವನ ವೈಯಕ್ತಿಕ ನೆಲೆಯಲ್ಲಿಯೂ, ಸಾಮಾಜಿಕ ನೆಲೆಯಲ್ಲಿಯೂ ಸಾಂಸ್ಕೃತಿಕ ನೆಲೆಯಲ್ಲಿಯೂ ಪರಿಶೀಲಿಸುವಾಗ ಮೂರೂ ನೆಲೆಗಳಿಗೆ ಸಮಾನವಾದ ಪ್ರವೃತ್ತಿಗಳನ್ನೂ ವಿನ್ಯಾಸಗಳನ್ನೂ ಕಂಡುಹಿಡಿಯಬೇಕು. ಹೀಗಾದರೆ ಮಾತ್ರ ಮನುಷ್ಯನ ಸಮಗ್ರ ಸ್ವರೂಪದ, ಅದರ ಸಮಾಕೃತಿಯ ಪರಿಚಯವಾದೀತು. ಮನುಷ್ಯನನ್ನು ಕುರಿತು ಈಗ ನಡೆಯುತ್ತಿರುವ ಎಲ್ಲ ವಿಭಿನ್ನಶಾಸ್ತ್ರಗಳ ಅಧ್ಯಯನಗಳ ಗುರಿಯೂ ಇದೇ ಅಲ್ಲವೇ?

[ಇಲ್ಲಿ ಪ್ರಸ್ತಾಪಮಾಡಿರುವ ಮಹನೀಯರ ಹೆಸರುಗಳ ಮೂಲ ಆಂಗ್ಲರೂಪವನ್ನು ಲೇಖನದಲ್ಲಿ ಬಂದಿರುವಕ್ರಮದಲ್ಲಿಯೇ ಕೊಡಲಾಗಿದೆ.:

William Halsey Rivers; Alfred Hadden; Sigmund Freud; Carl Jung; Robertson Smith; Wilhelm Wundt; Frazer; Emile Durkheim; Robert Lowie; Lucien Levi-Bruhl; Radcliffe-

Brown; John B. Watson; Ivan Pavlov; William McDougall; Bronislaw Malinowski; Max Wertheimer; Wolfgang Kohler; Kurt Koffka; Edward Sapir; Ruth Benedict; Margaret Mead; Irwing Hallowel; Clyde Kluckhohn; Louis Kroeber; Ralph Linton; Geza Roheim; Abram Kardiner; Erik Erikson.]

ನ್ಯಾಯಶಾಸ್ತ್ರ ಮತ್ತು ಸಾಮಾಜಿಕ ವಿಜ್ಞಾನಗಳು

ಟಿ. ಕೆ. ತುಕೋಳ್

ಹಾರ್ಲನ್ ಫಿಸ್ಕ್ ಸ್ಟೋನ್ (Harlon Fisk Stone) ಹೇಳಿದಂತೆ "ನ್ಯಾಯಶಾಸ್ತ್ರ ಎನ್ನುವುದು ಮಾನವರಿಂದ ಮಾನವೀಯ ಉದ್ದೇಶಗಳಿಗಾಗಿ ಸೃಷ್ಟಿಯಾದ ಒಂದು ಮಾನವ ವ್ಯವಸ್ಥೆ." ಈ ದೃಷ್ಟಿಯಿಂದ ಪರಿಭಾವಿಸಿದಾಗ ನ್ಯಾಯಶಾಸ್ತ್ರ ಒಂದು ದೇಶವೋ ಜನಾಂಗವೋ ತಲೆಮಾರಿನಿಂದ ತಲೆಮಾರಿಗೆ ನಡೆದುಬಂದ ಸಂಸ್ಕೃತಿ ಪ್ರವೃತ್ತಿ ಅಭ್ಯಾಸ ಅಭಿಪ್ರಾಯಗಳ ಒಂದು ಅಂಗ. ಎಲ್ಲ ಮಾನವ ಚಟುವಟಿಕೆಗಳಿಗೂ ಸಂಬಂಧಿಸುವ ಕಾರಣ ಅದು ಆರ್ಥಿಕ ಮತ್ತು ಶೈಕ್ಷಣಿಕ ವ್ಯವಸ್ಥೆಗಳನ್ನೇ ಅಲ್ಲದೆ ಜೀವನದ ಇತರ ವ್ಯವಸ್ಥೆಗಳನ್ನೂ ಪ್ರತಿಬಿಂಬಿಸುತ್ತದೆ. ನ್ಯಾಯಶಾಸ್ತ್ರದ ಸಾಮಾಜಿಕ ನಿಲುವುಗಳ ಪ್ರತಿಪಾದನೆಯಲ್ಲಿ ಅಗ್ರೇಸರನಾದ ಪ್ರೊ. ರಾಸ್ಕೋ ಪೌಂಡ್ (Roscoe Pound) ಅದನ್ನು "ರಾಜಕೀಯವಾಗಿ ಸಂಘಟಿತವಾದ ಒಂದು ಸಮಾಜ, ವ್ಯವಸ್ಥಿತವಾಗಿ ಕ್ರಮವತ್ತಾಗಿ ಬಳಸುವ ಒಂದು ಶಕ್ತಿ" ಎಂದು ಸೂತ್ರಿಸಿದ್ದಾನೆ. ಮಾನವ ಜೀವನದಂತೆ ನ್ಯಾಯಶಾಸ್ತ್ರವೂ ಚಲನಶೀಲವಾದದ್ದು. ಪ್ರೊ. ಸೆಲ್‌ಡಮ್ ಅಮಾಸ್ (Seldom Amoss) ಅವರು ತಮ್ಮ 'ನ್ಯಾಯ ವಿಜ್ಞಾನ' (The Science of Law) ಎಂಬ ಪುಸ್ತಕದಲ್ಲಿ ನ್ಯಾಯಶಾಸ್ತ್ರದ ಒಳಗತಿಗಳನ್ನೂ ಒಲವುಗಳನ್ನೂ ಕೆಳಗಿನ ಮಾತಂಗಳಲ್ಲಿ ಪರಿಣಾಮಕಾರಿಯಾಗಿ ಸೂಚಿಸಿದ್ದಾನೆ. "ನ್ಯಾಯವ್ಯವಸ್ಥೆ ಎರಡು ರೀತಿಗಳಲ್ಲಿ ಅಸ್ತಿತ್ವಕ್ಕೆಬರುತ್ತದೆ; ಒಂದನ್ನು ಮೇಲುಮುಖವಾದದ್ದೆಂದೂ ಮತ್ತೊಂದನ್ನು ಕೆಳಮುಖವಾದದ್ದೆಂದೂ ವಿವರಿಸಬಹುದು. ಇವುಗಳಲ್ಲಿ ಮೊದಲಿನದು ಯಾವುವೋ ಕೆಲವು ಸ್ಥಳಗಳಲ್ಲಿಯೋ ಅಥವಾ ಕೆಲವು ವಿಶಿಷ್ಟ ಪರಿಸ್ಥಿತಿಗಳಲ್ಲಿಯೋ ಇಲ್ಲವೆ ಕೆಲವು ವೃತ್ತಿ ಉದ್ಯೋಗಗಳಲ್ಲಿ ತೊಡಗಿಯೋ ಇರುವ ಜನವರ್ಗಗಳು ತಮ್ಮ ಪದ್ಧತಿಗಳಿಂದ ತಾವೇ ತಾವಾಗಿ ರೂಪಿಸಿಕೊಂಡದ್ದು. ಎರಡನೆಯದು ಸರ್ವೋಚ್ಚ ರಾಜಕೀಯಶಕ್ತಿಯಿಂದ ಅಥವಾ ಅದಕ್ಕೆ ಅಧೀನವಾಗಿದ್ದು ಈ ಕೆಲಸಕ್ಕೇ ನಿಯೋಜಿತವಾದ ಸಂಸ್ಥೆಯ ಅಧಿಕಾರದಿಂದ ಜನಗಳ ಮೇಲೆ ವಿಧಿಸಲ್ಪಟ್ಟದ್ದು. ಸಾಂಪ್ರದಾಯಿಕ ನ್ಯಾಯವ್ಯವಸ್ಥೆ ಅನೇಕ ವರ್ಷಗಳಿಂದ ಬಳಕೆಯಲ್ಲಿರುವ ಖಚಿತವಾದ ಏಕರೀತಿಯ ಪದ್ಧತಿಗಳ ನಡವಳಿಕೆಗಳ ಮತ್ತು ಆಚರಣೆಗಳ ಸ್ವರೂಪದ ಮೇಲೆ ರೂಪಿತವಾದದ್ದು. ಎರಡನೆಯ ರೀತಿಯ ನ್ಯಾಯವ್ಯವಸ್ಥೆ ಒಂದು ರಾಜಕೀಯ ಸಂಸ್ಥೆ ಅಥವಾ ಪ್ರಭುಶಕ್ತಿಯ ಮೂಲಕ ಪಡೆದ ಅಧಿಕಾರದಿಂದ ವಿಧಿಸಲ್ಪಟ್ಟು ಹೊರಗಿನಿಂದ ದತ್ತವಾದದ್ದು; ನಿಶ್ಚಯತೆ, ಏಕರೂಪತೆ ಅದರ ಗುಣಧರ್ಮಗಳು. ಸಾಂಪ್ರದಾಯಿಕ

ನ್ಯಾಯಶಾಸ್ತ್ರ ಅನೇಕ ವರ್ಷಗಳಿಂದ ಅಸ್ತಿತ್ವದಲ್ಲಿದ್ದ ರೂಢಿಗಳಿಂದ ರೀತಿನೀತಿಗಳಿಂದ ನಡ ವಳಿಕೆಗಳಿಂದ ರೂಪಗೊಂಡದ್ದು. ಈ ರೀತಿ ನ್ಯಾಯಶಾಸ್ತ್ರದ ಬಹುಭಾಗ ಜನತೆಯಿಂದಲೇ ಜನ್ಮವೆತ್ತುತ್ತದೆ. ಇನ್ನುಳಿದ ಕೆಲವಂಶ ಮಾತ್ರ, ಸರ್ಕಾರದಿಂದ ಅಥವಾ ನ್ಯಾಯಾ ಧೀಶರ ತೀರ್ಪುಗಳಿಂದ ರೂಪುವಡೆಯುತ್ತದೆ, ದೇಶದಿಂದ ದೇಶಕ್ಕೆ ವ್ಯತ್ಯಸ್ತಗೊಳ್ಳುತ್ತದೆ. ಈ ವ್ಯತ್ಯಾಸವನ್ನೇ ಸಾಮಾಜಿಕವಿಜ್ಞಾನಗಳಾಗಿ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಾರೆ. ಆಧುನಿಕ ಸಮಾಜದಲ್ಲಿ ನ್ಯಾಯಶಾಸ್ತ್ರ ಸಾಮಾಜಿಕ ನಿಯಂತ್ರಣದ ಒಂದು ಪ್ರಬಲ ಸಾಧನ. ಇದು ಕಾನೂನುಗಳ ಉಪಯೋಗವನ್ನು ಒಳಗೊಂಡಿದ್ದು, ಆ ಕಾನೂನುಗಳನ್ನು ನ್ಯಾಯಾ ಲಯ ಅಥವಾ ಸರ್ಕಾರದ ಕಾರ್ಯನಿರ್ವಾಹಕ ಶಾಖೆಗಳು ವಿವರಿಸುತ್ತವೆ.

ಈ ಶತಮಾನದ ಆರಂಭ ಭಾಗದಲ್ಲಿ ಯುರೋಪಿನಲ್ಲಿ ನ್ಯಾಯಶಾಸ್ತ್ರ ಸಾಮಾ ಜಿಕ ಸ್ವರೂಪದ ಬೆಳವಣಿಗೆಯಾದರೆ ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಕಾನೂನಿನ ವ್ಯವಹಾರಭಾಗದಲ್ಲಿ ಉದ್ಭವಿಸುವ ಸಂಸ್ಥೆಗಳನ್ನು ಅಭ್ಯಾಸಮಾಡುವ ಸಂಪ್ರದಾಯ ವೊಂದು ರೂಪುಗೊಂಡಿತು. ಇದು ಸಾಮಾಜಿಕ ನ್ಯಾಯ ಮೀಮಾಂಸೆಯ ಬೆಳವಣಿಗೆಗೆ ಕಾರಣವಾಯಿತು. ಮೊದಲನೆಯದು ಸಮಾಜಶಾಸ್ತ್ರವನ್ನು ನ್ಯಾಯಶಾಸ್ತ್ರಕ್ಕೆ ಸಂಬಂಧಿ ಸಿದ ಸಾಮುದಾಯಿಕ ಜೀವನ ಕುರಿತು ಅಧ್ಯಯನ ಮಾಡಿದರೆ, ಎರಡನೆಯದು ಮಾನವ ಜೀವನದಲ್ಲಿ ಸಾಮೂಹಿಕ ಹೊಂದಾಣಿಕೆಯ ಸಂಬಂಧದಲ್ಲಿ ನ್ಯಾಯತತ್ವವನ್ನು ಅಭ್ಯಾಸಮಾಡಿತು. ಮೊದಲಿನದು ಸಮಾಜವಿಜ್ಞಾನಕ್ಕೆ ಹೆಚ್ಚು ಗಮನ ಕೊಟ್ಟರೆ ಎರಡನೆಯದು ನ್ಯಾಯವಿಜ್ಞಾನಕ್ಕೆ ಹೆಚ್ಚು ಗಮನ ಸಲ್ಲಿಸಿತು.

ಈ ಶತಮಾನದ ಮೊದಲಪಾದದ ಕೊನೆಯವರೆಗೆ ನ್ಯಾಯವಿಜ್ಞಾನ ರಾಜಕೀಯ ಮುತ್ಸದ್ದಿಗಳಿಗೆ ಮತ್ತು ನ್ಯಾಯವಾದಿಗಳಿಗೆ ಮಾತ್ರ ಸಂಬಂಧಿಸಿದ ಒಂದು ಪ್ರತ್ಯೇಕ ಕ್ಷೇತ್ರವಾಗಿ ಪರಿಗಣಿತವಾಗಿತ್ತು. ನ್ಯಾಯವಿಜ್ಞಾನದ ಪರಿಚಯವಿಲ್ಲದವರೆಲ್ಲ ಅದೇ ನಿದ್ದರೂ ನ್ಯಾಯತಂತ್ರದಲ್ಲಿ ಪರಿಣತರಾದ ಜನಕ್ಕೇ ಮೀಸಲಾದ ಪ್ರತ್ಯೇಕ ಕ್ಷೇತ್ರವೆಂದು ಭಾವಿಸಿದ್ದೇ ಅದಕ್ಕೆ ಕಾರಣ. ಪ್ರಸಿದ್ಧ ನ್ಯಾಯತತ್ವಜ್ಞರಾದ ರೂಸೋ ಪೌಂಡ್ ಮತ್ತು ಕಾರ್ಲ್ ಲಿವೆಲಿನ್ (Karl Llewellyn) ಇಬ್ಬರೂ ನ್ಯಾಯಶಾಸ್ತ್ರವನ್ನು ಸಾಮಾಜಿಕ ವಿಜ್ಞಾನಗಳ ಬೆಳಕಿನಲ್ಲಿ ಅಭ್ಯಾಸಮಾಡುವುದು ಅಗತ್ಯವೆಂದೂ, ಹಾಗೆ ಮಾಡಿದಲ್ಲಿ ಅದರ ತಾತ್ವಿಕಬೆಳವಣಿಗೆ ಮತ್ತು ಪರಿಣಾಮಕಾರೀ ವಿಧಾನಗಳು ವ್ಯಾವಹಾರಿಕ ಸಮಸ್ಯೆಗಳ ಸ್ವರೂಪವನ್ನು ನಿರ್ಣಯಿಸಿ ಇತ್ಯರ್ಥಪಡಿಸಲು ತುಂಬ ಸಹಾಯಕವಾಗುವುವೆಂದೂ ಪ್ರತಿಪಾದಿಸಿದರು. ನ್ಯಾಯಶಾಸ್ತ್ರವನ್ನು ಪ್ರತ್ಯೇಕತೆಯಲ್ಲಿ (in isolation) ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲವೆಂದೂ ಅದು ಸಮಾಜ ದಿಂದಲೇ ಹುಟ್ಟಿ ಬೆಳೆದುದಾದ್ದರಿಂದ ಸಾಮಾಜಿಕ ವಿಜ್ಞಾನಗಳ ಜೊತೆಗೆ ಅದನ್ನು ಅಭ್ಯಾಸ ಮಾಡಬೇಕೆಂದೂ ಅವರು ಒತ್ತಿಹೇಳಿದರು. ಆಲಿವರ್ ವೆಂಡೆಲ್ ಹೋಮ್ಸ್ (Oliver Wendell Holmes Jr.) ಹೇಳಿದಂತೆ "ನ್ಯಾಯಶಾಸ್ತ್ರದ ಜೀವಾಳ ತರ್ಕ

ವಲ್ಲ; ಅದು ಅನುಭವ". ಆದ್ದರಿಂದ ನ್ಯಾಯಶಾಸ್ತ್ರ ರಾಜಕೀಯ. ಸಾಮಾಜಿಕ, ಆರ್ಥಿಕ ಮತ್ತು ಭೌಗೋಳಿಕ ಆಸಕ್ತಿ ಮೊದಲಾದುವನ್ನು ಗಮನಿಸುತ್ತದೆ ಮತ್ತು ನಿರ್ದಿಷ್ಟ ಗುರಿಗಳ ಸಾಧನೆಗಾಗಿ ಅವುಗಳನ್ನು ವರ್ಗೀಕರಿಸುತ್ತದೆ. ಈ ಸಂಬಂಧದಲ್ಲಿ ರಾಜ್ಯ (State) ಒಂದು ನಿಯಂತ್ರಣ ಶಕ್ತಿಯಾಗಿ ವರ್ತಿಸಿ ಅಂಥ ಆಸಕ್ತಿಗಳನ್ನು ಗುರುತಿಸಿ ಮನ್ನಿಸುತ್ತದೆ.

ಸಾಮಾಜಿಕ ವಿಜ್ಞಾನಗಳ ಮತ್ತು ನ್ಯಾಯಶಾಸ್ತ್ರದ ಪರಸ್ಪರ ಸಂಬಂಧದ ಅಭ್ಯಾಸಕ್ಕೆ ಇಷ್ಟೊಂದು ಮಹತ್ವ ಕೊಡುತ್ತಿರುವುದರ ಕಾರಣವೆಂದರೆ ಸಾಮಾಜಿಕ ವಿಜ್ಞಾನಗಳ ಸಂಪೂರ್ಣ ಜ್ಞಾನವು ನ್ಯಾಯಶಾಸ್ತ್ರ ಮತ್ತು ಸಮಾಜದ ಪರಸ್ಪರ ಸಂಬಂಧವನ್ನು ಸರಿಯಾಗಿ ತಿಳಿದುಕೊಳ್ಳಲು ಸಹಾಯವಾಗುತ್ತದೆ.

ಆಧುನಿಕ ಪ್ರಜಾಪ್ರಭುತ್ವ ಸರ್ಕಾರಗಳು ನ್ಯಾಯಶಾಸ್ತ್ರವನ್ನು ಸಾಮಾಜಿಕ ನಿಯಂತ್ರಣದ ಒಂದು ಸಾಧನವೆಂದು ಬಳಸುತ್ತಿವೆ. ನ್ಯಾಯಶಾಸ್ತ್ರದ ತಿಳುವಳಿಕೆಗೆ ಸಾಮಾಜಿಕ ಶಾಸ್ತ್ರಗಳ ಜ್ಞಾನವು ಅವಶ್ಯವೆಂದು ಹೇಳುವವರು, ಸಾಮಾಜಿಕ ಬದಲಾವಣೆ ಗಳು ಮತ್ತು ನ್ಯಾಯಶಾಸ್ತ್ರದ ಪ್ರಮೇಯಗಳು ವಿಶಿಷ್ಟ ಸಾಮಾಜಿಕ ,ಆರ್ಥಿಕ, ಮಾನಸಿಕ ಮತ್ತು ಇನ್ನಿತರ ಅಂಶಗಳ ಪರಿಣಾಮಗಳ ಮೇಲೆ ಹೇಗೆ ಅವಲಂಬಿಸಿವೆಯೆಂದು ಅಭ್ಯಾಸ ಮಾಡಲು ಯತ್ನಿಸುತ್ತಾರೆ.

ನ್ಯಾಯಶಾಸ್ತ್ರ ಮತ್ತು ಸಮಾಜಗಳನ್ನು ಕುರಿತ ನಮ್ಮ ಅಭ್ಯಾಸದಲ್ಲಿ ಮಾನವ ಶಾಸ್ತ್ರ, ಸಮಾಜವೈದ್ಯ, ಮನಶ್ಯಾಸ್ತ್ರ, ನೀತಿಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಭೂಶಾಸ್ತ್ರದಂಥ ಸಾಮಾಜಿಕ ಶಾಸ್ತ್ರಗಳೇ ಅಲ್ಲದೆ ಇನ್ನೂ ಆಧುನಿಕ ವಿಷಯಗಳಾದ ಜನಾಂಗಸ್ಥಿತಿವಿವರಣೆ (Demography), ಸಮಾಜಶಾಸ್ತ್ರ, ಮನೋವೈದ್ಯ ಮತ್ತು ಸಾಮಾಜಿಕ ಸಂಖ್ಯಾಶಾಸ್ತ್ರಗಳಂಥ ಎಲ್ಲ ಶಾಸ್ತ್ರಗಳ ಆಂತರಿಕ ಸಂಬಂಧದ ಪ್ರಭಾವವನ್ನು ಗ್ರಹಿಸ ಬೇಕಾಗುತ್ತದೆ. ನ್ಯಾಯವ್ಯವಸ್ಥೆಯ ವೈಜ್ಞಾನಿಕ ಬೆಳವಣಿಗೆಗೆ ಮತ್ತು ಸಮಾಜ ಹಿತದ ಸಲುವಾಗಿ ಅದನ್ನು ಪರಿಣಾಮಕಾರಿಯಾಗಿ ಬಳಸಬೇಕಾದಲ್ಲಿ, ಹಿಂದಿನ ಮತ್ತು ಇಂದಿನ ನ್ಯಾಯ ಸಮಸ್ಯೆಗಳ ಸಂಬಂಧದಲ್ಲಿ, ಮೇಲೆ ಹೇಳಿದ ವಿಷಯಗಳ ಅಗತ್ಯವಾದ ತಿಳಿವಳಿಕೆ ಯನ್ನು ಪಡೆದಿರಬೇಕು.—ಇಂಥ ಒಂದು ಅಭ್ಯಾಸ ನ್ಯಾಯಶಾಸ್ತ್ರದ ಸ್ಥಿರತೆ ಮತ್ತು ಸಾಮಾಜಿಕ ಬದಲಾವಣೆಗಳು, ಸಾಮಾಜಿಕ, ಆರ್ಥಿಕ ಮತ್ತು ಮನೋವೈಜ್ಞಾನಿಕ ಅಂಶಗಳ ಮೇಲೆ ಹೇಗೆ ಅವಲಂಬಿಸಿವೆ ಎಂದು ತಿಳಿಯಲು ಸಹಾಯಮಾಡುತ್ತದೆ. ಈ ಅರ್ಥದಲ್ಲಿ ಇತಿಹಾಸದ ಅಭ್ಯಾಸವೂ ಸಹ ಅಧಿಕಾರಸ್ಥ ಶಕ್ತಿಗಳ ನ್ಯಾಯವಿತರಣೆ ಮತ್ತು ಅಂಥ ಶಕ್ತಿಗಳ ವಿರುದ್ಧ ಪ್ರಜಾಸಮೂಹದ ಹೋರಾಟ ಆಕಾಂಕ್ಷೆಗಳನ್ನು ಪ್ರತಿನಿಧಿಸುವ ಸಮಾಜ ಮತ್ತು ಆಗಿನ ನ್ಯಾಯಶಾಸ್ತ್ರ ಇವುಗಳ ನಡುವಿನ ಸಂಬಂಧದ ಮೇಲೆ ಬೆಳಕು ಬೀರುತ್ತದೆ. ಹೀಗೆ ನೋಡಿದಾಗ ಇತಿಹಾಸ ಜನ ಸಾಮಾನ್ಯವಾಗಿ ಭಾವಿಸುವಂತೆ ಕೇವಲ ರಾಜರ ಮತ್ತು ಅವರ ಯುದ್ಧಗಳಿಗೆ ಸಂಬಂಧಿಸಿದ ಗತಘಟನೆಗಳ

ಮಾಲಿಕೆಯಾಗಿರದೆ ನಾಗರಿಕತೆಯ ಭವಿಷ್ಯಕ್ಕೆ ದಾರಿ ತೋರಬಲ್ಲ ವರ್ತಮಾನದ ತಿಳಿವಳಿಕೆಗೆ ಸಹಾಯಮಾಡುತ್ತದೆ.

ಆದ್ದರಿಂದ ನ್ಯಾಯಶಾಸ್ತ್ರ ಮತ್ತು ಸಮಾಜಗಳೆರಡನ್ನೂ ನ್ಯಾಯ ಮೀಮಾಂಸೆಯ ಕಕ್ಷೆಯಲ್ಲಿ ನಿಕಟ ಸಂಬಂಧವುಳ್ಳ ವಿಷಯಗಳೆಂದು ಭಾವಿಸಿ ಅಭ್ಯಾಸಮಾಡುವುದು ಅಗತ್ಯ. ನ್ಯಾಯವಾದಿ ಮತ್ತು ಸಮಾಜಶಾಸ್ತ್ರಜ್ಞರಿಬ್ಬರೂ ಒಂದು ಸಮಸ್ಯೆಗೆ ಸಂಬಂಧಿಸಿದಂತೆ ತಮ್ಮ ತಮ್ಮ ಕ್ಷೇತ್ರಗಳ ವಿಷಯಗಳನ್ನು ಪರಸ್ಪರ ವಿನಿಮಯ ಮಾಡಿ ಕೊಂಡು ಹೊಂದಾಣಿಕೆಯುಳ್ಳ ಸಾಮಾನ್ಯವಾದ ಪ್ರವೃತ್ತಿಗಳನ್ನು ಕಂಡುಕೊಳ್ಳಬಹುದು. ಹೀಗೆ ಮೇಲೆ ಹೇಳಿದ ರೀತಿಯಲ್ಲಿ ಇತರ ಶಾಸ್ತ್ರಗಳನ್ನು ನ್ಯಾಯಶಾಸ್ತ್ರದ ಜೊತೆಗೆ ಅಧ್ಯಯನ ಮಾಡುವುದು ನ್ಯಾಯಶಾಸ್ತ್ರದ ವಿದ್ಯಾರ್ಥಿಗೆ ಮಾತ್ರವಲ್ಲದೆ, ಇತರ ವಿಷಯಗಳ ಅಭ್ಯಾಸಿಗೂ ಉಪಯುಕ್ತವಾದುದು.

ನ್ಯಾಯಶಾಸ್ತ್ರದ ಬೆಳವಣಿಗೆಯ ಮೇಲೆ ಸಾಮಾಜಿಕ ವಿಜ್ಞಾನಿಗಳು ಬೀರಿದ ತೀರ ನಿಕಟವಾದ ಮತ್ತು ಸ್ವರೂಪವನ್ನೇ ನಿಯಂತ್ರಿಸಿದ ಪ್ರಭಾವವನ್ನು ಕುರಿತು ಕೆಲವು ಮಾತು ಹೇಳಿದರೆ ಅದು ಅಪ್ರಸ್ತುತವಾಗಲಾರದು.

ಬಹಳ ಪ್ರಾಚೀನವಾದ ಈಜಿಪ್ಟ್, ಮೆಸಪೊಟೇಮಿಯಾ, ಹೀಬ್ರೂ ಮತ್ತು ಹಿಂದೂ ನ್ಯಾಯಪದ್ಧತಿಗಳಿಗೆ ಸ್ಫೂರ್ತಿ ದೊರೆತದ್ದಾಗಲೀ, ರೂಪ ಸಿಕ್ಕಿದ್ದಾಗಲೀ ಆ ದೇಶಗಳಲ್ಲಿ ಪ್ರಚಲಿತವಾಗಿದ್ದ ಬೇರೆ ಬೇರೆ ಮತಗಳಿಂದ. ಮತಧರ್ಮಗಳು ಮತ್ತು ಜ್ಞಾನ ಸಮಾಜದ ಮೇಲೆ ವಿವಿಧ ಮಟ್ಟಗಳಲ್ಲಿ ಪರಿಣಾಮ ಬೀರಿದವು, ಮತ್ತು ಅವೆಲ್ಲ ಇದುವರೆಗೆ ಸಮಾಜದ ಮೇಲೆ ಪರಿಣಾಮ ಮಾಡುತ್ತಲೇ ಇವೆ.

ನ್ಯಾಯ ವಿಷಯಕ (jural) ಸಂಬಂಧದಲ್ಲಿ ಬದಲಾವಣೆಗಳುಂಟು ಮಾಡುವುದರಲ್ಲಿ ಅವುಗಳ ಪಾತ್ರ ಮಹತ್ವದ್ದಾಗಿದೆ. ಧರ್ಮವು ಆದಿಕಾಲದ ಸಮಯದಲ್ಲಿ ಸಾಮಾಜಿಕ ಅಭಿಪ್ರಾಯಗಳನ್ನೂ ಸಂಸ್ಥೆಗಳನ್ನೂ ಕಟ್ಟುವಲ್ಲಿ ಬೀರಿದಪರಿಣಾಮವನ್ನು ಇಂದು ಬೀರುತ್ತಿಲ್ಲ ಎಂಬುದರಲ್ಲಿ ಸಂದೇಹವೇ ಇಲ್ಲ.

ಕೆಲವು ಸಮಾಜಗಳಲ್ಲಿ ಮತಧರ್ಮ ಈಗಲೂ ಪ್ರಭಾವಕಾರಿಯಾದ ಶಕ್ತಿಯಾಗಿ ಉಳಿದಿದೆ. ಮುಸ್ಲಿಂ ರಾಷ್ಟ್ರಗಳಲ್ಲಿ ಈಗಲೂ ನ್ಯಾಯಶಾಸ್ತ್ರವು ಇಸ್ಲಾಂ ಧರ್ಮದೊಡನೆ ಅಧಿಕವಾಗಿ ಸಂಬಂಧ ಪಡೆದಿದೆ. ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಲ್ಲಿ ನ್ಯಾಯಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಸರ್ ಹೆನ್ರಿ ಮೆಯ್ನ್ (Henry Mayne) ಎಂಬ ವಿದ್ವಾಂಸನು ಜಗತ್ತಿನ ಅನೇಕ ನ್ಯಾಯವ್ಯವಸ್ಥೆಗಳ ಅಧ್ಯಯನ ಮಾಡಿ ತನ್ನ ವಿಶಿಷ್ಟತೆಯನ್ನು ತೋರಿದ್ದಲ್ಲದೆ 1861ರಲ್ಲಿ ಪ್ರಾಚೀನ ಭಾರತೀಯ ನ್ಯಾಯಶಾಸ್ತ್ರ (Ancient Indian Law) ಗ್ರಂಥವನ್ನು ಪ್ರಕಟಿಸಿ ಸಾಮಾಜಿಕ ನ್ಯಾಯ ತತ್ವದ ಬೆಳವಣಿಗೆಗೆ ದಾರಿ ತೆರೆದ. ಪ್ರಸಿದ್ಧ ಮಾನವಶಾಸ್ತ್ರಜ್ಞರಾದ ಮ್ಯಾಕ್ಸ್

ಗ್ಲಕ್‌ಮ್ಯಾನ್ (Max Gluckman) ರಂಥವರು ಪ್ರಶಂಸಿಸಿರುವ ಈ ಪುಸ್ತಕದಲ್ಲಿ ಹೆನ್ರಿ ಮೆಯ್ನ್ 'ಹಂತ ಹಂತಗಳಲ್ಲಿ ಸಾಮಾಜಿಕ ಬೆಳವಣಿಗೆ' ಎಂಬ ತನ್ನ ವಿಶಿಷ್ಟ ಸಿದ್ಧಾಂತವನ್ನು ಮಂಡಿಸಿದ್ದಾನೆ. ಬೇರೆ ಬೇರೆ ಸಮಾಜಗಳಲ್ಲಿ ನ್ಯಾಯಶಾಸ್ತ್ರದ ಬೆಳವಣಿಗೆಯ ರೀತಿಯನ್ನು ಕುರಿತು ಸ್ವಾರಸ್ಯಕರವಾದ ಮತ್ತು ಮನವರಿಕೆ ಮಾಡಿಕೊಡುವ ರೀತಿಯಲ್ಲಿ ಅವನು ತನ್ನ ಸಿದ್ಧಾಂತಗಳನ್ನು ಮಂಡಿಸಿದ್ದಾನೆ. ಅಲ್ಲದೆ ಬೇರೆ ಬೇರೆ ದೇಶಗಳಲ್ಲಿ ನೆಲೆಸಿದ ಬೇರೆ ಬೇರೆ ಜನಾಂಗಗಳಿಗೆಲ್ಲ ಸಾಮಾನ್ಯವಾದ ಕೆಲವು ಸಾಮಾಜಿಕ ಬೆಳವಣಿಗೆಯ ಹಂತಗಳನ್ನು ಪ್ರಸ್ತಾಪಿಸಿದ್ದಾನೆ. ಬೇರೆ ಬೇರೆ ವರ್ಗಗಳ ಬುಡಕಟ್ಟುಗಳ (tribes) ಕ್ರಮ ಕ್ರಮೇಣವಾದ ವಿಕಾಸದಿಂದಾಗಿ ಒಂದು ಕೇಂದ್ರೀಕೃತ ಸರ್ಕಾರ ಹೇಗೆ ಅಸ್ತಿತ್ವಕ್ಕೆ ಬಂತೆಂಬುದನ್ನು ಮತ್ತು ಹೇಗೆ ಅವು ವ್ಯಕ್ತಿಸ್ವಾತಂತ್ರ್ಯದ ಮೇಲೆ, ಜನಗಳ ಆಸ್ತಿ ಪಾಸ್ತಿಗಳ ಮೇಲೆ ಪ್ರಭಾವ ಬೀರತೊಡಗಿದವೆಂಬುದನ್ನು ಅವನು ತರ್ಕಬದ್ಧವಾಗಿ ವಿವರಿಸಿ ಕೆಲವು ಸಾಮಾನ್ಯ ಸೂತ್ರಗಳನ್ನು ನಿರೂಪಿಸಿದ್ದಾನೆ. ಕುಟುಂಬಗಳು ಹೇಗೆ ಬುಡಕಟ್ಟುಗಳಾದವು; ಒಂದು ಜನಾಂಗ ಮತ್ತೊಂದು ಜನಾಂಗದ ವಿರುದ್ಧ ತೋರಿದ ಪ್ರತೀಕಾರದ ಬುದ್ಧಿ ಹೇಗೆ ಒಂದು ಚಲಾವಣೆಯ ನ್ಯಾಯಶಾಸ್ತ್ರದ (Law of enforcement) ಸೃಷ್ಟಿಗೆ ದಾರಿಮಾಡಿತು ಎನ್ನುವುದನ್ನೂ ಅವನು ವಿವರಿಸಿದ್ದಾನೆ. ಒಂದು ಬುಡಕಟ್ಟು ಮತ್ತೊಂದರೊಡನೆ ಕಾದಾಡಿ ಗೆದ್ದು, ಹಾಗೆ ಗೆದ್ದ ಜನ ಆ ಪ್ರದೇಶದಲ್ಲಿಯೋ ಅಥವಾ ಬೇರೊಂದು ಸ್ಥಳದಲ್ಲಿಯೋ ತಾವು ಗೆದ್ದವರನ್ನು ಆಳುವ ಒಂದು ನಿಯಂತ್ರಣವ್ಯವಸ್ಥೆಯನ್ನು ಸ್ಥಾಪಿಸಿ, ಅದರ ಫಲವಾಗಿ ಸಮಾಜ ಬುಡಕಟ್ಟಿನ ಸ್ವರೂಪದಿಂದ ಪ್ರಾದೇಶಿಕ ಸ್ವರೂಪವನ್ನು ಪಡೆದು ರಾಜಕೀಯ ಶಕ್ತಿಯ ಪ್ರಾದುರ್ಭಾವವಾದದ್ದು—ಇವೆಲ್ಲವನ್ನೂ ಹೆನ್ರಿ ಮೆಯ್ನ್ ಪ್ರಸ್ತಾಪಿಸುತ್ತಾನೆ. ಪ್ರಾಚೀನ ನ್ಯಾಯಶಾಸ್ತ್ರದಲ್ಲಿ ಧರ್ಮದ ಪಾತ್ರವೇ ಉಳಿದ ಎಲ್ಲಕ್ಕಿಂತ ಹಿರಿದಾಗಿತ್ತೆಂಬುದನ್ನು ಮತ್ತು ಪ್ರಾಚೀನ ಸಮಾಜದಲ್ಲಿದ್ದ ಕುಲಪಾಲಕ ವ್ಯವಸ್ಥೆಯ ಪ್ರಾಬಲ್ಯವನ್ನು ಕುರಿತು ಅವನು ನಿರೂಪಿಸಿದ ಸಿದ್ಧಾಂತಗಳು ಇಂದಿಗೂ ಸಿಂಧುವಾಗಿವೆ. ಮಾತ್ರವಲ್ಲ, ಐತಿಹಾಸಿಕ ನ್ಯಾಯಮೀಮಾಂಸೆಯಲ್ಲಿ ಪರಿಣತರಾದ ವಿದ್ವಾಂಸರ ಸಮ್ಮತಿ ಪಡೆದಿದೆ. ನ್ಯಾಯ, ಅನ್ಯಾಯ, ಸರಿ, ತಪ್ಪು, ಮಾತ್ಸರ್ಯ, ಮೋಸ ಇತ್ಯಾದಿ ಪದಗಳನ್ನು ನಾವು ಬಳಸುವುದನ್ನು ಗಮನಿಸಿದಾಗ ನ್ಯಾಯಶಾಸ್ತ್ರದ ಮೇಲೆ ನೀತಿಶಾಸ್ತ್ರವು ಬೀರಿರುವ ಪ್ರಭಾವ ಎಂಥದೆಂಬುದು ಇಂದಿಗೂ ತಿಳಿಯಬಹುದಾಗಿದೆ.

ಅರ್ಥವ್ಯವಸ್ಥೆ ನ್ಯಾಯಶಾಸ್ತ್ರದ ಮೇಲೆ ಪ್ರಭಾವ ಬೀರುತ್ತದೆಯೆಂಬುದು ಎಲ್ಲ ಆಧುನಿಕ ಶಾಸನವಿಧಿಗಳಲ್ಲೂ ಕಾಣುತ್ತದೆ. ಅದರಲ್ಲೂ ಭಾರತದ ಶಾಸನ ವಿಧಿಗಳಲ್ಲಿ ಇದು ಸ್ಪಷ್ಟವಾಗಿ ತೋರುತ್ತದೆ. ಯಂತ್ರ ಕೈಗಾರಿಕೆಯೇ ಪ್ರಧಾನವಾದ ನಗರಗಳ ಪ್ರಾದುರ್ಭಾವ ಕಳೆದ ಶತಮಾನದ ಉತ್ತರಾರ್ಧದಲ್ಲಿ ಯೂರೋಪ್ ರಾಷ್ಟ್ರಗಳಲ್ಲಿ ಬೆಳೆದ ನ್ಯಾಯಶಾಸ್ತ್ರಕ್ಕೆ ಹೊಸಬಣ್ಣವನ್ನು ಹೊಸ ವಿಷಯಗಳನ್ನು ಒದಗಿಸಿತು.

ಇದೇ ಹೊತ್ತಿಗೆ ಇಂಗ್ಲೆಂಡಿನಲ್ಲಿ ಬೆಂಥಾಮ್ (Bentham) ತನ್ನ ಪ್ರಸಿದ್ಧ ತತ್ತ್ವವೊಂದನ್ನು ಮಂಡಿಸಿದ. ನೈತಿಕವಾದ ಮತ್ತು ನ್ಯಾಯಸಂಬಂಧವಾದ ಎಲ್ಲ ನಿಯಮಗಳನ್ನೂ ಉಪಯುಕ್ತತೆಯ ಏಕಮೇವ ಮಾನದಿಂದ ಅಳೆಯಬೇಕೆನ್ನುವುದೇ ಆ ತತ್ತ್ವ. ಅಧಿಕ ಜನರಿಗೆ ಅಧಿಕ ಹಿತವನ್ನುಂಟುಮಾಡಬಲ್ಲ ಉಪಯುಕ್ತತೆಯ ಮಾನದಿಂದಲೇ ಎಲ್ಲ ನಿಯಮಗಳನ್ನೂ ಅಳೆಯಬೇಕೆಂಬುದೇ ಹೊಸ ದೃಷ್ಟಿ ಇದರದ್ದು. ಪ್ರಯೋಜನ ಪ್ರಧಾನವಾದ ಈ ಸಿದ್ಧಾಂತವನ್ನು ರಾಜ್ಯತತ್ತ್ವಜ್ಞರು ಮತ್ತು ದಾರ್ಶನಿಕರು ಮನಃ ಪೂರ್ವಕವಾಗಿ ಒಪ್ಪದೆ ಹೋದರೂ, ನ್ಯಾಯಶಾಸ್ತ್ರದ ರಾಜಕೀಯ ಬೆಳವಣಿಗೆಯನ್ನು ಮತ್ತು ಸಮಸ್ತ ಮನುಷ್ಯಕೃತಿಗಳ ನೀತಿನಿರ್ಣಯವನ್ನು ಪರೀಕ್ಷಿಸುವ ಸಲುವಾಗಿ ಆಸ್ಟಿನ್ (Austene) ಈ ತತ್ತ್ವವನ್ನು ಅಂಗೀಕರಿಸಿದ. ಇತ್ತೀಚೆಗೆ ನ್ಯಾಯಶಾಸ್ತ್ರದ ಬೆಳವಣಿಗೆಯ ರೀತಿ, ಧರ್ಮ ಮತ್ತು ನೀತಿಗಳಿಗಿಂತ ಹೆಚ್ಚಾಗಿ ಅರ್ಥ ವ್ಯವಸ್ಥೆಯಿಂದ ಪರಿಣಾಮಗೊಂಡಿದೆಯೆಂಬುದನ್ನು ಜಾರ್ಜಸ್ ಗುರ್‌ವಿಚ್ (Georges Gurvitch) ತನ್ನ "ನ್ಯಾಯಶಾಸ್ತ್ರದ ಸಾಮಾಜಿಕ ಸ್ವರೂಪ" (Sociology of Law) ಎಂಬ ಗ್ರಂಥದಲ್ಲಿ ಕೆಳಕಂಡಂತೆ ಒತ್ತಿ ಹೇಳಿದ್ದಾನೆ: "ಧರ್ಮ ಮತ್ತು ನೀತಿಗಳಿಗಿಂತ ಹೆಚ್ಚಾಗಿ ನ್ಯಾಯಶಾಸ್ತ್ರವು ಒಂದು ಪ್ರದೇಶದ ಸಾಮಾಜಿಕ ಜೀವನದಲ್ಲಿ ಬೇರುಗೊಂಡ ಸಾಮೂಹಿಕ ಶಕ್ತಿಗಳು, ಜನತೆ, ವಿಷಯಗಳು—ಇಂಥ ಬಾಹ್ಯಸತ್ಯಗಳೊಡನೆ ಸಂಬಂಧಿಸಿ ಕೊಂಡಿರುತ್ತದೆ. ಇವು ವಿಶೇಷವಾಗಿ ನ್ಯಾಯಶಾಸ್ತ್ರದ ಕ್ಷೇತ್ರದಲ್ಲಿ ಸಾಮೂಹಿಕ ಸೃಷ್ಟಿ ಕ್ರಿಯೆಗಳಿಗೆ ಪ್ರಬಲ ತಡೆಯೊಡ್ಡುತ್ತವೆ. ಇದು ನ್ಯಾಯಶಾಸ್ತ್ರ ಮತ್ತು ಅರ್ಥವ್ಯವಸ್ಥೆ ಗಳ ಸಂಬಂಧದ ಸಮಸ್ಯೆಗೆ, ಎಂದರೆ ನ್ಯಾಯಶಾಸ್ತ್ರದ ರೂಪಾಂತರದಲ್ಲಿ ಮತ್ತೊಂದು ವಿಷಯ ವಹಿಸಿದ ಪಾತ್ರದ ವಿಶ್ಲೇಷಣೆಗೆ ನಮ್ಮನ್ನು ಕರೆದೊಯ್ಯುತ್ತದೆ." ಸ್ವಾತಂತ್ರ್ಯೋ ತ್ತರ ಭಾರತದಲ್ಲಿ ಜಾರಿಗೆ ಬಂದ ಕಾನೂನುಗಳನ್ನು ಅಭ್ಯಾಸ ಮಾಡುವುದರ ಮೂಲಕ ನ್ಯಾಯಸಂಬಂಧವಾದ ವ್ಯವಹಾರಗಳಿಗೂ ಅರ್ಥವ್ಯವಸ್ಥೆಗೂ ಇರುವ ನಿಕಟ ಸಂಬಂಧ ವನ್ನು ತಿಳಿಯಬಹುದು. ಆರ್ಥಿಕ ವ್ಯವಸ್ಥೆಯ ಪ್ರಭಾವದಿಂದ ರೂಪಗೊಂಡ ಶಾಸ್ತ್ರವೇ ನ್ಯಾಯಶಾಸ್ತ್ರವೆಂದು ಬಗೆದಿರುವ ರಶಿಯಾದೇಶದಲ್ಲಿ, ಇದಕ್ಕಿಂತಲೂ ಎದ್ದು ಕಾಣುವ ಉದಾಹರಣೆಗಳನ್ನು ಕಾಣಬಹುದು. ಯಂತ್ರೋದ್ಯಮಗಳಿಗೆ ಸಂಬಂಧಿಸಿದ ನ್ಯಾಯನಿಯ ಮಗಳು ದಿನೇ ದಿನೇ ಬೆಳೆಯುತ್ತಿರುವ ಭಾರತದಂಥ ರಾಷ್ಟ್ರಗಳಲ್ಲಿ ಅರ್ಥವ್ಯವಸ್ಥೆಯ ತಿಳಿವಳಿಕೆ ಹಣದ ಅಪಮೌಲ್ಯ, ಸ್ವರ್ಣನಿಯಂತ್ರಣ, ಬ್ಯಾಂಕುನಿಯಮಗಳು ಮುಂತಾದ ದ್ರವ್ಯಧೋರಣೆಗಳನ್ನು ಅರಿಯಲು ಸಹಾಯಮಾಡುತ್ತದೆ.

ಔದ್ಯೋಗಿಕ ಕ್ರಾಂತಿ ದೇಶದ ಸಾಮಾಜಿಕ ರಚನೆಯನ್ನೇ ಬದಲಾಯಿಸಿದೆ: ಜನರ ನಡುವೆ ಹೊಸಬಗೆಯ ಸಾಮಾಜಿಕ, ರಾಜಕೀಯ ಸಮಸ್ಯೆಗಳನ್ನು ಸೃಷ್ಟಿಸಿದೆ. ಬಂಡವಾಳ ಮತ್ತು ಶ್ರಮಜೀವನ (labour) ಕೈಗಾರಿಕೋದ್ಯಮಿಗಳ ಮತ್ತು ಆಡಳಿತಗಾರರ ಗಮನವನ್ನು ಹೆಚ್ಚಾಗಿ ಸೆಳೆದಿವೆ. ಅಲ್ಲದೆ ಇಂದಿನ ವಿಚಾರನೀತಿಯಲ್ಲಿ ವ್ಯವಸಾಯಕ್ಕಿಂತ

ಔದ್ಯೋಗಿಕ ಉತ್ಪನ್ನ ಮತ್ತು ಸಾರಿಗೆಗಳಿಗೆ ಹೆಚ್ಚಿನ ಪ್ರಾಶಸ್ತ್ಯ ದೊರೆತಿದೆ. ಕಾರ್ಮಿಕರ ಆಸೆ ,ಆಕಾಂಕ್ಷೆಗಳು ಮತ್ತು ಬಂಡವಾಳಶಾಹಿಯು ಮೇಲಿನ ನಿರ್ಬಂಧಗಳು ಸೃಷ್ಟಿಸಿದ ಹೊಸಶಕ್ತಿಗಳ ನಿಯಂತ್ರಣದ ಸಂಬಂಧದಲ್ಲಿ ಶಾಸನವಿಧಿಗಳು ಹೇಗೆ ಪ್ರಬಲವಾದ ಪ್ರಚೋದನೆಯನ್ನು ತೋರಿವೆ ಎಂಬುದನ್ನು ಇಲ್ಲಿ ಪುನರ್ವಿಚಾರಿಸುವ ಅಗತ್ಯವಿಲ್ಲ. ಒಮ್ಮೆ ನ್ಯಾಯಮೂರ್ತಿ ಬ್ರಾಂಡೀಸ್ "ಅರ್ಥಶಾಸ್ತ್ರ ಮತ್ತು ಸಮಾಜಶಾಸ್ತ್ರಗಳನ್ನು ಅಧ್ಯಯನ ಮಾಡಿರದ ನ್ಯಾಯವಾದಿ ಬಹುತರ ಜನಶತ್ರು ಆಗುವ ಸಂಭವವಿದೆ" ಎಂದು ಹೇಳಿದರು. ಅರ್ಥಶಾಸ್ತ್ರ ಮತ್ತು ಸಮಾಜಶಾಸ್ತ್ರದ ತಿಳಿವಳಿಕೆ ಇಲ್ಲದೆ ನ್ಯಾಯಶಾಸ್ತ್ರದ ಆಳವಾದ ಪರಿಚಯ ಹೇಗೆ ಅಸಾಧ್ಯ ಎನ್ನುವುದನ್ನು ಒತ್ತಿ ಹೇಳುವುದು ಅವರ ಉದ್ದೇಶವಾಗಿರಬೇಕು.

ರಾಜಕೀಯವಿಧಿಗಳು, ಆಡಳಿತ ವಿಧಿಗಳು, ನಾಗರಿಕ ಹಕ್ಕುಗಳು. ನ್ಯಾಯವ್ಯವಸ್ಥೆ— ಇವುಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಅರಿಯಲು ರಾಜ್ಯಶಾಸ್ತ್ರದ ಜ್ಞಾನವು ಸಹಾಯ ಮಾಡುತ್ತದೆ. ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಪ್ರಜಾರಾಜ್ಯಗಳು ಸ್ಥಾಪನೆಯಾಗಿದ್ದು ಅವು ರಾಜ್ಯ ಮತ್ತು ಪ್ರಜೆಯ ಸಂಬಂಧ, ವ್ಯಕ್ತಿಸ್ವಾತಂತ್ರ್ಯ ಮತ್ತು ಆಸ್ತಿಯ ಹಕ್ಕು ಇವುಗಳ ಸಮಸ್ಯೆ ಕುರಿತು ನಮ್ಮ ವಿಚಾರದ ರೀತಿಯನ್ನೇ ಬದಲಿಸಿವೆ.

ಸ್ವತಂತ್ರ ಭಾರತದಲ್ಲಿ ಶಾಸನವಿಧಿಗಳ ಸಂಖ್ಯೆ ವಿಪರೀತವೆನ್ನುವುದು ಸಾಮಾನ್ಯವಾಗಿ ಕೇಳಿಬರುವ ದೂರಾಗಿದೆ. ನಮ್ಮ ರಾಜ್ಯಾಂಗದ ನಿರ್ದೇಶದಂತೆ, ಅಧಿಕಾರಸ್ಥಿತವಾದ ಸರ್ಕಾರ ಕಲ್ಯಾಣರಾಜ್ಯವನ್ನು ಸ್ಥಾಪಿಸುವ ಧ್ಯೇಯ ಹೊಂದಿದೆ ಎಂಬುದರಲ್ಲಿ ಇದಕ್ಕೆ ತೃಪ್ತಿಕರವಾದ ಉತ್ತರವಿದೆ. ಆಸ್ತಿಯ ಏಕಸ್ವಾಮ್ಯದ ವಿಧಾನಗಳನ್ನು ನಿವಾರಿಸುವ ಅನೇಕ ವಿಧಿಗಳು, ಭೂಸುಧಾರಣಾವಿಧಿ, ವಂಶದತ್ತವಾದ ಹಕ್ಕುಗಳ ರದ್ದಿಯಾತಿ— ಇವೆಲ್ಲ ವಂಶೀಯ ಹಕ್ಕು ಬಾಧ್ಯತೆಗಳ ಆಧಾರದ ಮೇಲೆ ನಿಂತ ಅಂತಸ್ತು. ಮಟ್ಟಗಳನ್ನು ನಿವಾರಿಸಿ ಸಮಾಜದಲ್ಲಿ ಸಮತೆಯನ್ನು ಸೃಷ್ಟಿಸುವ ಪ್ರಯತ್ನವನ್ನು ತೋರ್ಪಡಿಸುತ್ತವೆ. ನ್ಯಾಯಮೂರ್ತಿ ಕಾರ್ಡೋಜ್ (Cardoz) ಹೇಳಿದಂತೆ "ಸಮಾಜದ ಕಲ್ಯಾಣ ಸಾಧನೆಯೇ ನ್ಯಾಯಶಾಸ್ತ್ರದ ಕಾರ್ಯ". ಆಧುನಿಕ ಭಾರತದಲ್ಲಿ ಜಾರಿಗೆ ತಂದ ಕಾನೂನು ಗಳ ಗುರಿಯೇ ಅದು. ಸಾಮಾಜಿಕ ಅಗತ್ಯಗಳಿಗೂ ಬದಲಾಗುತ್ತಿರುವ ಜನಾಭಿಪ್ರಾ ಯಗಳಿಗೂ ನ್ಯಾಯ-ವ್ಯವಸ್ಥೆ ತೋರುವ ಪ್ರತಿಕ್ರಿಯೆಯಾಗಲಿ ಇಲ್ಲವೆ ಶಾಸನ ರಚನೆ ಯಾಗಲಿ ನಮ್ಮ ರಾಜ್ಯಾಂಗ ಮುಂದಿಟ್ಟಿರುವ ಆದರ್ಶಗಳಿಂದ ವಿಶೇಷ ಉತ್ತೇಜನ ಪಡೆಯುತ್ತಿವೆ. ಆ ಉದ್ದೇಶಗಳ ಸಾಧನೆಗಾಗಿಯೇ ಸಾಮಾಜಿಕ ಮತ್ತು ಆರ್ಥಿಕ ಹೊಂದಾಣಿಕೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ.

ಒಂದು ಸಮಾಜದ ಆರ್ಥಿಕ, ಸಾಮಾಜಿಕ, ರಾಜಕೀಯ. ಧಾರ್ಮಿಕ ಮತ್ತು ನೈತಿಕ ವಿಷಯಗಳ ತಿಳಿವಳಿಕೆ ಬೇರೆ ಬೇರೆ ಕಾಲಗಳಲ್ಲಿ ನಡೆಯುವ ಶಾಸನ ರಚನೆಯ ತರ್ಕ ಮತ್ತು ನಿಲುವುಗಳನ್ನು ಅರಿಯಲು ಹೇಗೆ ಸಹಾಯಮಾಡುತ್ತದೆ

ಯೆಂಬುದನ್ನು ನಾನು ಈಗ ಹೇಳಿದ ಕೆಲವು ಮಾತುಗಳು ಸೂಚಿಸಬಲ್ಲವು. ಬದಲುತ್ತಿರುವ ಜಗತ್ತಿನೊಡನೆ ನ್ಯಾಯಶಾಸ್ತ್ರದ ಸ್ವರೂಪವು ಹೇಗೆ ಬದಲುತ್ತಿದೆಯೆನ್ನುವುದನ್ನು ತಿಳಿಸಲು ಅವು ಸಹಾಯ ಮಾಡುತ್ತವೆ. ಒಂದು ಸಮಾಜದ ಹಲವು ಆಸಕ್ತಿಗಳ ನಡುವಿನ ಘರ್ಷಣೆ, ಆ ಸಮಾಜದಲ್ಲಿರುವ ವ್ಯಕ್ತಿಗಳೆಲ್ಲರ ಪರಸ್ಪರ ಸಂಬಂಧಗಳನ್ನು ಹಾರ್ದಿಕಗೊಳಿಸುವ ಕಾರ್ಯದ ಅವಶ್ಯಕತೆಯನ್ನು ತೋರಿಸುತ್ತದೆ. ಅಧಿಕಾರದಲ್ಲಿರುವ ಸರ್ಕಾರ ಇಂತಹ ಸಂಬಂಧಗಳನ್ನು ನಿಯಂತ್ರಿಸುವ ಕಾನೂನಿನ ಬಲದಿಂದ ಅನೇಕ ಗುಂಪುಗಳಿಗೆ ಸೇರಿದ ವ್ಯಕ್ತಿಗಳ ನಡುವೆ ಹೊಂದಾಣಿಕೆ ಮತ್ತು ಸತ್ವವನ್ನು ಕಾಪಾಡಿಕೊಂಡು ಬರುತ್ತದೆ.

ಯಾವಾವುದೋ ಕಾರಣಗಳಿಂದಾಗಿ ನಮ್ಮ ದೇಶದಲ್ಲಿ ನ್ಯಾಯಶಾಸ್ತ್ರವನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಲಾಗುತ್ತಿದೆ. ಇತರ ಸಾಮಾಜಿಕ ವಿಜ್ಞಾನಗಳೊಡನೆ ಅದಕ್ಕಿರುವ ಸಂಬಂಧದ ಬಗ್ಗೆ ಪ್ರಾಮುಖ್ಯತೆಯನ್ನು ಕೊಡಲಾಗುತ್ತಿಲ್ಲ. ಅಮೆರಿಕದ ಸಂಯುಕ್ತ ಸಂಸ್ಥಾನಗಳ ಸರ್ಕಾರ ಈ ವಿಷಯದಲ್ಲಿ ಮುಂದೆ ನಿಂತು ಕೆಲಸ ಮಾಡುತ್ತಿರುವುದು ಸ್ಫೂರ್ತಿದಾಯಕ ಸಂಗತಿಯಾಗಿದೆ. ಅಮೆರಿಕದಲ್ಲಿ ನ್ಯಾಯಶಾಸ್ತ್ರವನ್ನು ಬೋಧಿಸುವ ತರಗತಿಗಳಲ್ಲಿ ನ್ಯಾಯಶಾಸ್ತ್ರದ ಸಾಮಾಜಿಕ ಸ್ವರೂಪ ಮತ್ತು ಕಾರ್ಯಪದ್ಧತಿಗಳಿಗೆ ಹೆಚ್ಚು ಗಮನ ಕೊಡಲಾಗುತ್ತಿದೆ. ನಾವು ಇಲ್ಲಿ ವಿವೇಚಿಸುತ್ತಿರುವಂಥ ವಿಷಯವನ್ನು ಕುರಿತು ಅನೇಕ ವಿಚಾರ ಸಂಕಿರಣಗಳನ್ನು ಎರಡನೆಯ ಮತ್ತು ಮೂರನೆಯ ವರ್ಷದ ವಿದ್ಯಾರ್ಥಿಗಳ ಸಲುವಾಗಿ ನಡೆಸಲಾಗುತ್ತಿದೆ. ಯೇಲ್ ವಿಶ್ವವಿದ್ಯಾಲಯದ ನ್ಯಾಯಶಾಸ್ತ್ರದ ಕಾಲೇಜುಗಳಲ್ಲಿ ನ್ಯಾಯಶಾಸ್ತ್ರದ ಅಧ್ಯಯನಕೆ ಸಂಬಂಧಿಸಿದಂತೆ ಸಮಾಜಶಾಸ್ತ್ರ, ಅರ್ಥಶಾಸ್ತ್ರ ಮತ್ತು ಇನ್ನಿತರ ಸಾಮಾಜಿಕ ವಿಜ್ಞಾನಗಳ ಅಧ್ಯಯನದ ಅವಕಾಶವನ್ನು ಒದಗಿಸಲಾಗಿದೆ. ಅಲ್ಲಿ ಇಂಥ ಅಧ್ಯಯನಕ್ಕೆ ಉತ್ತೇಜನ ನೀಡುವ ಅಂಶವೆಂದರೆ ಸ್ಥಾಪಿತ ನಿಧಿಗಳಿಂದ ಸಂಶೋಧನ ವೇತನಗಳನ್ನು ಉದಾರವಾಗಿ ನೀಡುವ ಪದ್ಧತಿ. ಕಳೆದ ದಶಕದಲ್ಲಿ ಭಾರತದಲ್ಲಿ ಸ್ಥಾಪಿತವಾದ ಭಾರತೀಯ ನ್ಯಾಯ ಸಂಸ್ಥೆ (Indian Law Institute) ಈ ದಿಕ್ಕಿನಲ್ಲಿ ಕೆಲಸ ಮಾಡುತ್ತಿದೆ. ಅಲ್ಲಿನ ಉತ್ತೇಜಕ ವಾತಾವರಣದಲ್ಲಿ ಬ್ರಿಟಿಷ್ ಮತ್ತು ಅಮೆರಿಕನ್ ವಿದ್ವಾಂಸರಿಂದ ಸ್ಫೂರ್ತಿ ಪಡೆದ ನಮ್ಮ ವಿದ್ವಾಂಸರು ಸಾಮಾಜಿಕ, ರಾಜಕೀಯ ವ್ಯವಸ್ಥೆಗಳ ಜೊತೆ ನ್ಯಾಯಶಾಸ್ತ್ರವನ್ನು ಅಧ್ಯಯನ ಮಾಡುವ ಕ್ಷೇತ್ರದಲ್ಲಿ ಆಸಕ್ತಿ ಕೆರಳಿಸುವ ಹೊಸ ದಾರಿಗಳನ್ನು ತೆರೆಯುತ್ತಿದ್ದಾರೆ. ಅಮೆರಿಕದ ಸಾಂಸ್ಕೃತಿಕ ಕೇಂದ್ರವು ಭಾರತದ ನ್ಯಾಯಶಾಸ್ತ್ರದ ಉಪನ್ಯಾಸಕರ ಸಂಘದೊಡನೆ ಸೇರಿ ಉದಾರ ರೀತಿಯಲ್ಲಿ ನಡೆಸುತ್ತಿರುವ ಇಂಥ ಸೆಮಿನಾರುಗಳು ನಮ್ಮ ನ್ಯಾಯಶಾಸ್ತ್ರದ ಕಾಲೇಜುಗಳಲ್ಲಿ ಸಾಮಾಜಿಕ ವಿಜ್ಞಾನಗಳ ಅಧ್ಯಯನವನ್ನು ಆರಂಭಿಸಲು ಪ್ರೇರಿಸುತ್ತವೆ. ಅದರಿಂದ ನಮ್ಮ ವಿದ್ಯಾರ್ಥಿಗಳಿಗೆ ನ್ಯಾಯಶಾಸ್ತ್ರದ ತಿಳಿವಳಿಕೆ ಸಮಗ್ರವೂ ಅರ್ಥಪೂರ್ಣವೂ ಆಗುತ್ತದೆ.

[ಅನು: ಎನ್. ಎಸ್. ಎಲ್. ಭಟ್ಟ]

ಇಂಟರ್‌ಫೆರಾನ್

ಎಂ. ಷಡಕ್ಷರಸ್ವಾಮಿ

[ಪ್ರಾಣಿಗಳಿಗೆ ವೈರಸ್ ರೋಗ ತಾಕಿದಾಗ ಅವುಗಳ ಜೀವಕಣಗಳಲ್ಲಿ ಉತ್ಪತ್ತಿಯಾಗುವ ಒಂದು ಸಸಾರಜನಕ ವಸ್ತು ಇಂಟರ್‌ಫೆರಾನ್. ಇದು ಪ್ರಾಣಿಗಳನ್ನು ವೈರಸ್ ರೋಗಗಳಿಂದ ಸಾಮಾನ್ಯವಾಗಿ ತಡೆಗಟ್ಟುವ ಒಂದು ಮುಖ್ಯವಸ್ತು]

ಮನುಷ್ಯನಿಗೆ ಬರುವ ಹಲವು ರೋಗಗಳಿಗೆ ವೈರಸ್‌ಗಳು ಕಾರಣ. ಕ್ಯಾನ್ಸರ್. ಕಾಮಾಲೆ, ಅಂಗಗಳನ್ನು ಊನಮಾಡುವ ಕಾಯಿಲೆ. ಆಗಾಗ್ಗೆ ಕಾಡಿಸುವ ಇನ್‌ಫ್ಲ್ಯುಯೆನ್ಸ, ಸಾಧಾರಣವಾಗಿ ಬರುವ ನೆಗಡಿ ಇವುಗಳೆಲ್ಲವೂ ವೈರಸ್‌ಗಳಿಂದುಂಟಾಗುವ ರೋಗಗಳು. ಈ ರೋಗಗಳನ್ನು ತಡೆಗಟ್ಟಲು ಮೂರು ಪರಿಣಾಮಕಾರಿಯಾದ ಮಾರ್ಗಗಳಿವೆ. ಇವುಗಳಲ್ಲಿ ಎರಡು ಬಹಿರಂಗವಾದವು, ಇನ್ನೊಂದು ಅಂತರಿಕವಾದದ್ದು. ಸಿಡುಬು ಹಾಕುವುದು ಮತ್ತು ರಾಸಾಯನಿಕ ಚಿಕಿತ್ಸೆ ಇವೆರಡು ಆಗಲೇ ಎಲ್ಲರಿಗೂ ಗೊತ್ತಿರುವ ವಿಧಾನಗಳು. ಆದರೆ ದೇಹಕ್ಕೆ ವೈರಸ್‌ಗಳ ಆಕ್ರಮಣವನ್ನು ತಡೆಗಟ್ಟುವ ಅಂತರಿಕವಾದ ವಿಶೇಷ ಶಕ್ತಿ ಇದೆ ಎಂಬುದೇ ಮೂರನೆಯದು. ಸಿಡುಬು ಹಾಕುವ ಕ್ರಮದಲ್ಲಿ ಸಿಡುಬು ಹಾಲನ್ನು ದೇಹಕ್ಕೆ ಪ್ರಯೋಗಿಸುತ್ತಾರೆ. ನಾಶಪಡಿಸಿದ ಅಥವಾ ನಿಸ್ಸತ್ವಗೊಳಿಸಿದ ವೈರಸ್‌ಗೆ ಸಿಡುಬು ಹಾಲು (Vaccine) ಎಂದು ಕರೆಯುವರು. ಈ ಹಾಲು ದೇಹವನ್ನು ಪ್ರವೇಶಿಸಿದಾಗ ದೇಹದಲ್ಲಿ ನಿರ್ದಿಷ್ಟವಾದ ಪ್ರತಿವಿಷವಸ್ತು (Antibody) ಜನಿಸಿ ಆ ವೈರಸ್ಸಿನ ಪ್ರತಿವಿಷಜನಕಕ್ಕೆ (Antigen) ಎದುರಾಳಿಯಾಗಿ ನಿಲ್ಲುವುದು. ವೈರಸ್‌ಗಳಿಂದ ಅನೇಕ ವಿಧವಾದ ರೋಗಗಳುಂಟಾಗುವುದರಿಂದ ಅವುಗಳನ್ನು ತಡೆಗಟ್ಟಲು ಬೇರೆ ಬೇರೆ ಬಗೆಯ ಸಿಡುಬು ಹಾಲು ಬೇಕಾಗಬಹುದು. ಅಷ್ಟು ವಿಧವಾದ ಸಿಡುಬು ಹಾಲುಗಳನ್ನು ತಯಾರಿಸುವುದು ಸುಲಭ ಸಾಧ್ಯವಲ್ಲ. ಎರಡನೆಯ ಮಾರ್ಗವಾದ ರಾಸಾಯನಿಕ ಚಿಕಿತ್ಸೆಯಲ್ಲಿ ಏಕಾಣು ಜೀವಿಗಳಿಂದ (Bacteria) ಉಂಟಾಗುವ ಅನೇಕ ರೋಗಗಳನ್ನು ಯಶಸ್ವಿಯಾಗಿ ಗುಣಪಡಿಸುವ ಹಾಗೆ ವೈರಸ್‌ನಿಂದುಂಟಾಗುವ ರೋಗಗಳನ್ನು ಯಶಸ್ವಿಯಾಗಿ ಗುಣಪಡಿಸುವ ರಾಸಾಯನಿಕಗಳಿಲ್ಲ. ಹೊಸದಾಗಿ ಬೆಳಕಿಗೆ ಬಂದಿರುವ ಮೂರನೆಯ ವಿಧಾನದ ಪರಿಚಯವೇ ಈ ಲೇಖನದ ಉದ್ದೇಶ. ಈ ವಿಧಾನದಲ್ಲಿ ದೇಹಕ್ಕೆ ಇರುವ ಈ ವಿಶೇಷ ಶಕ್ತಿಯ ಸ್ವರೂಪವೇನು.ಅದು ಉತ್ಪತ್ತಿಯಾಗುವ ರೀತಿಗಳೇನು

ಮತ್ತು ಅದು ವೈರಸ್‌ಗಳನ್ನು ಎದುರಿಸುವ ಅಥವಾ ನಾಶಪಡಿಸುವ ಬಗೆಗಳೇನು ಎಂಬುದನ್ನು ಅರಿಯುವುದು ಅವಶ್ಯಕವಾಗಿದೆ. ಈ ಶಕ್ತಿಯನ್ನು ಕುರಿತು ಸಂಕ್ಷೇಪವಾಗಿ ವಿವರಿಸುವುದಾದರೆ ಇದು ಕಶೇರುಕ ಪ್ರಾಣಿಗಳ ಜೀವಕಣಗಳಲ್ಲಿರುವ ಒಂದು ಸಸಾರ ಜನಕವಸ್ತು. ಇದನ್ನೆ ಇಂಟರ್‌ಫೆರಾನ್ ಎಂದು ಕರೆಯಲಾಗಿದೆ.

ಒಂದು ವೈರಸ್ಸು ದೇಹವನ್ನು ಹೊಕ್ಕಾಗ ಮತ್ತೊಂದು ವೈರಸ್ಸಿನ ಬೆಳವಣಿಗೆಗೆ ಅಡ್ಡಿಯಾಗುವುದೆಂಬುದನ್ನು ಬಹಳ ವರ್ಷಗಳ ಹಿಂದೆಯೇ ಕಂಡು ಹಿಡಿದಿದ್ದರು. 1935 ರಲ್ಲಿ ರಾಕ್‌ಫೆಲ್ಲರ್ ಫೌಂಡೇಷನ್ನಿನ ಮೆರಿಡಿತ್ ಹಾಪ್‌ಕಿನ್ಸ್ ಎಂಬ ವಿಜ್ಞಾನಿಯು ಘೋರವಾದ ಯಲ್ಲೋ ಫೀವರ್ ವೈರಸ್ ಸೋಂಕಿದ ಕೋತಿಗೆ ಏಕಕಾಲದಲ್ಲಿ ನಿಸ್ಸತ್ವ ಗೊಳಿಸಿದ ವೈರಸ್ಸನ್ನು ಪ್ರಯೋಗಿಸಿದಾಗ ಕೋತಿಯನ್ನು ಸಾವಿನಿಂದ ಸಂರಕ್ಷಿಸುವುದೆಂದು ತೋರಿಸಿದನು. ಎರಡು ವರ್ಷಗಳ ನಂತರ ಇಂಗ್ಲೆಂಡಿನ ಫಿಂಡ್ಲೆ ಮತ್ತು ಮೆಕ್ಕಲಂ ಎಂಬ ವಿಜ್ಞಾನಿಗಳು ರಿಫ್ಟ್ ವ್ಯಾಲಿ ಫೀವರ್ (Rift valley fever) ವೈರಸ್ಸಿ ನಿಂದುಂಟಾಗುವ ಮಾರಕ ರೋಗವನ್ನು ಯಲ್ಲೋ ಫೀವರ್ ವೈರಸ್ ಹತೋಟಿಗೆ ತರಬಹುದೆಂದು ಕಂಡುಹಿಡಿದರು. ಈ ರಕ್ಷಣೆಯು ನಿಸ್ಸತ್ವಗೊಳಿಸಿದ ಒಂದು ವೈರಸ್ ತಾನು ಪ್ರಬಲ ಸ್ಥಿತಿಯಲ್ಲಿರುವಾಗ ಉಂಟುಮಾಡುವ ರೋಗವನ್ನಲ್ಲದೆ ಇತರ ವೈರಸ್ ಗಳಿಂದಲೂ ಉಂಟಾಗುವ ರೋಗವನ್ನು ತಡೆಗಟ್ಟಬಲ್ಲದೆಂಬುದನ್ನು ತೋರಿಸಿತು. ಇದನ್ನು "ವೈರಸ್ ಅತಿಕ್ರಮಣ" (Virus interference) ಎಂದು ಕರೆದರು. ಅವರು ಜೀವಕಣಗಳ ಒಳಗೆ ನುಗ್ಗುವ ಅಂದರೆ ಒಂದು ವಿಧವಾದ ವೈರಸ್ ಇನ್ನೊಂದು ವಿಧವಾದ ವೈರಸ್ ಒಳಗೆ ನುಗ್ಗುವ ಹಾಗೆ ತಡೆಗಟ್ಟುವುದೆಂದು ಊಹಿಸಿದರು. ಕೆಲ ವರ್ಷಗಳನಂತರ ಈ ವೈರಸ್ "ಅತಿಕ್ರಮಣ" ಸರ್ವಸಾಮಾನ್ಯವೆಂದು ತಿಳಿದುಬಂದಿತು. ವೈರಸ್‌ಗಳನ್ನು ಸೂಕ್ಷ್ಮ ಶಾಖದಿಂದ ಅಥವಾ ನೀಲ ಲೋಹಿತಾತೀತ (Ultra-violet) ಕಿರಣಗಳಿಂದ ನಾಶಪಡಿಸಬಹುದು. ಇವು ಈ ಸ್ಥಿತಿಯಲ್ಲೂ ಬೇರೆ ವೈರಸ್‌ಗಳ ಬೆಳವಣಿಗೆ ಯನ್ನು ತಡೆಯಬಲ್ಲುವೆಂಬುದನ್ನು ಕಂಡು ಹಿಡಿದರೂ 'ವೈರಸ್ಸಿನ ಅತಿಕ್ರಮಣ' ಒಂದು ಮರ್ಮವಾಗಿಯೇ ಉಳಿಯಿತು.

ಇದನ್ನರಿಯಲು ಮೊದಲ ಪ್ರಯೋಗಗಳಲ್ಲಿ ಕೋಳಿ ಮರಿಯ ಭ್ರೂಣದ ಮೇಲೆ ಇನ್‌ಫ್ಲುಯೆನ್ಸ ವೈರಸ್‌ಗಳನ್ನು ಸೋಂಕಿಸಿದರು. ಅನಂತರ ಸಾಕಿ ವೃದ್ಧಿ ಗೊಳಿಸಿದ ಜೀವಾಣುರಾಶಿಗಳನ್ನು ಉಪಯೋಗಿಸಿದರು. 1957ರಲ್ಲಿ ಎ. ಐಸಾಕ್ ಮತ್ತು ಜೆ. ಲಿಂಡ್‌ಮನ್ ಎಂಬ ಆಂಗ್ಲ ವಿಜ್ಞಾನಿಗಳು ಜೀವಕಣಗಳು ಬೆಳೆಯುವ ಪದಾರ್ಥದಲ್ಲಿ ಶಾಖದಿಂದ ಕೊಂದ ಇನ್‌ಫ್ಲುಯೆನ್ಸ ವೈರಸ್ಸನ್ನು ಸೇರಿಸಿದರು. ಹೀಗೆ ಕಣಗಳು ವೃದ್ಧಿಯಾದನಂತರ ಅವುಗಳನ್ನು ಬೇರ್ಪಡಿಸಿ ಬಂದ ದ್ರಾವಣವು ಇತರ ವೈರಸ್‌ಗಳ ಸೋಂಕಿನಿಂದ ಸಂರಕ್ಷಿಸುವ ಗುಣ ಹೊಂದಿರುತ್ತವೆ ಎಂಬುವನ್ನು ಕಂಡು ಹಿಡಿದರು. ಅನಂತರ ಆ ದ್ರಾವಣದಿಂದ ವೈರಸ್ ರೋಗನಾಶಕ ಪದಾರ್ಥವನ್ನು

ಬೇರ್ಪಡಿಸಿ ಅದಕ್ಕೆ 'ಇಂಟರ್‌ಫೆರಾನ್' ಎಂಬ ಹೆಸರನ್ನು ಕೊಟ್ಟರು. ಇತರ ಪ್ರಯೋಗಗಳು ಬೇರೆ ಬೇರೆ ಜೀವಕಣಗಳಲ್ಲಿ ಇಂಟರ್‌ಫೆರಾನ್ ತಯಾರಾಗುವುದನ್ನೂ ಮತ್ತು ಅದು ವೈರಸ್ ರೋಗಗಳನ್ನು ಪ್ರತಿಭಟಿಸುವುದನ್ನೂ ಸ್ಥಿರ ಪಡಿಸಿದುವು. ಸಾಮಾನ್ಯವಾಗಿ ನಮ್ಮ ಶರೀರದಲ್ಲಿ ಇಂಟರ್‌ಫೆರಾನ್ ಜನಿಸಿ ವೈರಸ್ ವಿರುದ್ಧ ಕಾರ್ಯಾಚರಣೆ ನಡೆಸುವುದು. ಉದಾಹರಣೆಗೆ, ಮೆಕ್ಸಿಕೋ ದೇಶದ ಮಕ್ಕಳಿಗೆ ಪೋಲಿಯೋ ವ್ಯಾಕ್ಸಿನ್ ಕೊಟ್ಟಾಗ ಯಾವ ಪರಿಣಾಮವೂ ಆಗಲಿಲ್ಲ. ಅನಂತರ ಆ ಮಕ್ಕಳ ಕರುಳಿನಲ್ಲಿ ಇನ್ನೊಂದು ವಿಧವಾದ ವೈರಸ್ ಇರುವುದೆಂಬ ಅಂಶವು ಕಂಡು ಬಂದಿತು. ಇದರಿಂದ ಪೋಲಿಯೋ ವ್ಯಾಕ್ಸಿನ್‌ನಿಂದ ಯಾವ ಪರಿಣಾಮವೂ ಆಗಲಿಲ್ಲ. ಈ ಕಾರಣದಿಂದಲೋ ಏನೋ ಪೋಲಿಯೋ ಕಾಯಿಲೆ ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯೀಕರಣ ಕಡಿಮೆ ಮಟ್ಟದಲ್ಲಿರುವ ದೇಶಗಳಲ್ಲಿ ಬಹಳ ವಿರಳ. ಬ್ರಿಟನ್ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಈ ರೋಗವು ಹೆಚ್ಚಾಗಿ ಕಂಡು ಬರುವುದು. ಎಲ್ಲಿ ಕೆಳದರ್ಜೆ ವೈರಸ್‌ಗಳಿಗೆ ಅವಕಾಶವಿರುವುದೋ ಅಲ್ಲಿ ಪ್ರಬಲವಾದ ವೈರಸ್‌ಗಳಿಗೆ ಆಶ್ರಯ ದೊರೆಯುವುದಿಲ್ಲ.

ವೈರಸ್‌ಗಳ ಸೋಂಕಿನಿಂದ ಜೀವಕಣಗಳಲ್ಲಿ ಉತ್ಪಾದನೆಯಾದ ಒಂದು ಸಸಾರ ಜನಕ ವಸ್ತು ಇಂಟರ್‌ಫೆರಾನ್ . ಇದು ವೈರಸ್ ಸೋಂಕು ತಾಕದ ಜೀವಕಣಗಳನ್ನು ರಕ್ಷಿಸುತ್ತದೆ. ಸಾಕಿ ವೃದ್ಧಿಗೊಳಿಸಿದ ಜೀವಾಣುರಾಶಿಗಳಲ್ಲಿ ಜನಿಸಿದ ಇಂಟರ್‌ಫೆರಾನ್‌ನ ಅಣುತೂಕ ಸುಮಾರು ೨0.000. ಶಿಥಿಲವಾಗಿರದ ಪ್ರಾಣಿಗಳಲ್ಲಿ 90.000ದವರೆಗೂ ಅಣುತೂಕವಿರುವ ಇಂಟರ್‌ಫೆರಾನ್ ಇರುವುದೂ ಉಂಟು. ಇಂಟರ್‌ಫೆರಾನ್ ಅನೇಕ ಸಸಾರಜನಕಗಳಿಗಿಂತ ಹೆಚ್ಚಾಗಿ ಆಮ್ಲ ಮತ್ತು ಪ್ರತ್ಯಾಮ್ಲ ಕ್ರಿಯೆಯನ್ನು ನಿರೋಧಿಸುತ್ತದೆ. ಬೇರೆ ಬೇರೆ ಪ್ರಾಣಿಗಳ ಜೀವಕಣಗಳಲ್ಲಿ ಉತ್ಪತ್ತಿಯಾದ ಇಂಟರ್ ಫೆರಾನ್‌ಗಳ ಗುಣಗಳಲ್ಲಿ ಸ್ವಲ್ಪ ವ್ಯತ್ಯಾಸವು ಕಂಡು ಬರುವುದು.

ಇಂಟರ್‌ಫೆರಾನ್ ಎಲ್ಲಾ ವಿಧದ ವೈರಸ್‌ಗಳ ಎದುರು ಬಿರುಸಾಗಿ ಕಾರ್ಯಾಚರಣೆ ನಡೆಸುವುದು. ಈ ಕಾರ್ಯಾಚರಣೆಯಲ್ಲಿ ಇದಕ್ಕೆ ವಿಶಾಲವಾದ ಅನುಬಿಂಬವಿದೆ (Broad spectrum). ಆದರೆ ಇದು ಒಂದು ವರ್ಗದ ಪ್ರಾಣಿಗಳಲ್ಲಿ ಮಾತ್ರ ತನ್ನ ಗುಣ ವನ್ನು ತೋರಬಲ್ಲದು. ಅಂದರೆ ಕೋಳಿಮರಿಯ ಇಂಟರ್‌ಫೆರಾನ್ ಕೋಳಿಮರಿಯ ಜೀವ ಕಣಗಳನ್ನು ಮಾತ್ರ ರಕ್ಷಿಸುವುದು. ಬೇರೆ ಜೀವಕಣಗಳನ್ನು ರಕ್ಷಿಸಲಾರದು. ಆದರೂ ಕೋತಿಯ ಇಂಟರ್‌ಫೆರಾನ್ ಮನುಷ್ಯನ ಜೀವಕಣದಲ್ಲಿರುವ ವೈರಸ್ಸನ್ನು ನಿಗ್ರಹಿಸಬಲ್ಲದು. ಇಂಟರ್‌ಫೆರಾನ್‌ನ ಇನ್ನೊಂದು ಮುಖ್ಯವಾದ ಗುಣವೆಂದರೆ ಅದನ್ನು ಪ್ರಾಣಿಯ ಮೇಲೆ ಪ್ರಯೋಗಿಸಿದಾಗ ಅದು ಇತರ ಸಸಾರಜನಕಗಳಂತೆ ಪ್ರತಿವಿಷವಸ್ತುವಿನ ಉತ್ಪಾದನೆಗೆ ನೆರವಾಗುವುದಿಲ್ಲ. ಆದ್ದರಿಂದ ಇಂಟರ್‌ಫೆರಾನನ್ನು ಮನುಷ್ಯನ ಅಥವಾ ಪ್ರಾಣಿಗಳ ಮೇಲೆ ದುಷ್ಪರಿಣಾಮವಿಲ್ಲದೆ ಪ್ರಯೋಗಿಸಬಹುದು.

ಮೇಲೆ ಹೇಳಿದಂತೆ ಯಾವುದೇ ವೈರಸ್ ಪ್ರಾಣಿಯ ಜೀವಕಣವನ್ನು ಸೋಂಕಿದರೆ ಆ ಜೀವಕಣದಲ್ಲಿ ಇಂಟರ್‌ಫೆರಾನ್ ಜನಿಸುವುದು. ಹಾಗೆ ಉತ್ಪಾದನೆಯಾದ ಇಂಟರ್ ಫೆರಾನ್‌ನ ಪರಿಣಾಮ ಭಿನ್ನ ಭಿನ್ನವಾಗಿರುವುದೇ ಅಲ್ಲದೆ ವೈರಸ್ಸಿನ ಘೋರತೆಗೆ ಅನುಗುಣ ವಾಗಿರುವುದು. ಘೋರ ಪಂಗಡದ ಕ್ರಿಮಿಗಳಿಗಿಂತ ಅಘೋರ ಪಂಗಡದ ವೈರಸ್ ಹೆಚ್ಚು ಇಂಟರ್‌ಫೆರಾನ್ ಉತ್ಪತ್ತಿಮಾಡುವುದು. ಪ್ರಾಣಿಗಳಲ್ಲಿ ಗುಲ್ಮ, ರಕ್ತದ ಶ್ವೇತ ಕಣ, ದುಗ್ಧರಸಗಳ ಜೀವಕಣಗಳಲ್ಲಿ ಮಿಕ್ಕ ಅಂಗಗಳ ಜೀವಕಣಗಳಿಗಿಂತ ಹೆಚ್ಚು ಇಂಟರ್‌ಫೆರಾನ್ ಜನಿಸುವುದು. ಕೆಲವು ಅಂಗಗಳಲ್ಲಿ ಇಂಟರ್‌ಫೆರಾನ್ ಉತ್ಪತ್ತಿ ಯಾಗುವುದೇ ಇಲ್ಲ. ಆದರೆ ಮನುಷ್ಯನಲ್ಲಿ ಇಂಟರ್‌ಫೆರಾನ್ ಉತ್ಪತ್ತಿಯಾಗುವುದಿಲ್ಲ ಎಂಬುದು ಸ್ಪಷ್ಟವಾಗಿಲ್ಲ ಮತ್ತು ಇದು ಉತ್ಪತ್ತಿಯಾಗುವುದಕ್ಕೆ ವೈರಸ್ಸೇ ಪ್ರೇರಕ ವಾಗಿರಬೇಕೆಂಬ ನಿಯಮವೂ ಇಲ್ಲ. ಏಕೆಂದರೆ ಪೆನಿಸಿಲಿಯಂ ಗುಂಪಿಗೆ ಸೇರಿದ ಕೆಲವು ಅಣಬೆಗಳಿಂದ ತೆಗೆದ ಸಾಂದ್ರ ದ್ರವ್ಯವು ಜೀವಾಣುಗಳು ವೃದ್ಧಿಯಾಗುವ ಪದಾರ್ಥದಲ್ಲಿ ಮತ್ತು ಶಿಥಿಲವಾಗದ ಪ್ರಾಣಿಗಳಲ್ಲಿ ಇಂಟರ್‌ಫೆರಾನ್ ಉತ್ಪತ್ತಿಯಾಗಲು ಸಹಾಯ ಮಾಡುವುದು. ಅನಂತರ ಈ ಅಣಬೆಗಳಿಗೆ ಕೆಲವು ವೈರಸ್‌ಗಳು ಸೋಂಕಿರುವುದನ್ನು ಕಂಡುಹಿಡಿದರೂ ಸಾಂದ್ರದ್ರವ್ಯದ ಮೂಲತತ್ವ ಎರಡೆಳೆ (ಆರ್. ಎನ್. ಎ.) (double helical RNA) ಎಂದು ಗೊತ್ತಾಯಿತು. ವಾಸ್ತವಿಕವಾಗಿ ಯಾವುದಾದರೂ ಹೊರ ನ್ಯೂಕ್ಲಿಯಿಕ್ ಆಮ್ಲ ಇಂಟರ್‌ಫೆರಾನ್ ಉತ್ಪತ್ತಿಗೆ ಪ್ರೇರಕವಾಗಿರುತ್ತದೆ. ವೈರಸ್ ನ್ಯೂಕ್ಲಿಯಿಕ್ ಆಮ್ಲ ಇತರ ನ್ಯೂಕ್ಲಿಯಿಕ್ ಆಮ್ಲಗಳಿಗಿಂತ ಹೆಚ್ಚು ಇಂಟರ್ ಫೆರಾನ್ ಉತ್ಪಾದನೆಗೆ ಪ್ರೇರಕವಾಗಿರುತ್ತೆ. ಏಕೆಂದರೆ ಮೊದಲನೆಯವು ಜೀವಕಣ ಗಳನ್ನು ಎರಡನೆಯದಕ್ಕಿಂತ ಸುಲಭವಾಗಿ ಪ್ರವೇಶಿಸುತ್ತವೆ. ಸ್ವಾಭಾವಿಕ ಅಥವಾ ಕೃತಕ ಎರಡೆಳೆ ಆರ್. ಎನ್. ಎ. ಗಳು ಇಂಟರ್‌ಫೆರಾನ್ ಉತ್ಪತ್ತಿಗೆ ಪ್ರೇರಕವಾಗುವುವು ಎಂದು ಅನಂತರ ಗೊತ್ತಾಯಿತು. ಆದರೆ ಎಲ್ಲ ಒಂಟಿ ಎಳೆ ಆರ್. ಎನ್. ಎ. ಮತ್ತು ಎರಡೆಳೆ ಡಿ. ಎನ್. ಎ. ಗಳು ಉತ್ಪತ್ತಿಗೆ ಸಾಧಕವಾಗುವುದಿಲ್ಲ. ಒಂಟಿ ಎಳೆ ಆರ್. ಎನ್. ಎ. ಇಂಟರ್‌ಫೆರಾನ ಉತ್ಪತ್ತಿಮಾಡುವ ಮೊದಲು ದ್ವಿಗುಣವಾಗಿ ಎರಡೆಳೆ ಆರ್. ಎನ್. ಎ. ಆಗುವುದು. ಆದರೆ ಆರ್. ಎನ್. ಎ. ಯಾಗಲಿ ಅಥವಾ ಡಿ. ಎನ್. ಏ. ಯಾಗಲಿ ಇರುವ ಎಲ್ಲ ವೈರಸ್ಸುಗಳು ಇಂಟರ್‌ಫೆರಾನ್‌ನ ಉತ್ಪತ್ತಿಗೆ ಪ್ರೇರಕವಾಗುವುವು.

ಇಂಟರ್‌ಫೆರಾನೇ ನೇರವಾಗಿ ಯಾವ ವೈರಸ್ಸನ್ನೂ ಚುರುಕಾಗಿ ಎದುರಿಸಲಾರದೆಂಬ ನಂಬಿಕೆ ಇದೆ. ಅದು ಯಾವ ಜೀವಕಣದಲ್ಲಿ ಉತ್ಪತ್ತಿಯಾಯಿತೋ ಆ ಜೀವಕಣವನ್ನು ತೊರೆದು ವೈರಸ್ ಸೋಂಕದೆ ಇರುವ ಬೇರೆ ಜೀವಕಣವನ್ನು ಪ್ರವೇಶಿಸುತ್ತದೆ. ಈ ರೀತಿ ಪ್ರವೇಶಿಸಿದ ಇಂಟರ್‌ಫೆರಾನ್ ಇತರ ವೈರಸ್ ಉತ್ಪತ್ತಿಯನ್ನು ತಡೆಗಟ್ಟುತ್ತದೆ. ಇವರ ಕಾರ್ಯಾಚರಣೆ ಸ್ವಾರಸ್ಯಕರವಾಗಿದೆ. ಇದು ಜೀವಕಣಗಳಲ್ಲಿ ಸಸಾರಜನಕ ವಸ್ತುಗಳ ಅಥವಾ ನ್ಯೂಕ್ಲಿಯಿಕ್ ಆಮ್ಲಗಳ ಸಂಶ್ಲೇಷಣೆಗೆ ಅಡ್ಡಿ ಮಾಡುವುದಿಲ್ಲ. ಆದರೆ ಅದು

ವೈರಸ್‌ಗಳ ಪ್ರತಿಕೃತಿಯಾಗುವಿಕೆಯನ್ನು ನಿಲ್ಲಿಸುತ್ತದೆ. ಇದು ಕೆಲವು ವಿಧಾನಗಳಿಂದಾಗಬಹುದು. ಇಂಟರ್‌ಫೆರಾನ್ ಒಂದು ಹೊಸ ಸಸಾರಜನಕವಸ್ತು ಉತ್ಪತ್ತಿಯಾಗಲು ಸಹಾಯವಾಗಬಹುದು. ಈ ಹೊಸವಸ್ತು ತಾನಾಗಿಯೇ ಅಥವಾ ಇಂಟರ್‌ಫೆರಾನ್‌ನಲ್ಲಿ ಕೆಲವು ಬದಲಾವಣೆಮಾಡಿ ವೈರಸ್ ಪ್ರತಿಕೃತಿಯನ್ನು ನಿಲ್ಲಿಸುತ್ತದೆಂದು ಊಹಿಸಲಾಗಿದೆ. ಕ್ಯಾನ್ಸರ್ ಜೀವಕಣ ಮತ್ತು ಎಳೆಯ ಭ್ರೂಣದ ಮೇಲೆ ಇಂಟರ್‌ಫೆರಾನ್ ಫಲಕಾರಿಯಾಗುವುದಿಲ್ಲ. ಆದ್ದರಿಂದಲೇ ಗರ್ಭಿಣಿಯರಿಗೆ ಮೊದಲು ಮೂರು ತಿಂಗಳಲ್ಲಿ ಜರ್ಮನ್ ಸಿಡುಬು ರೋಗ ಬಂದರೆ ಕೆಲವು ವೇಳೆ ಅಂಗ ವಿಕಲರಾದ ಮಕ್ಕಳು ಹುಟ್ಟುವರು. ಮೂರು ತಿಂಗಳು ಕಳೆದ ಮೇಲೆ ಈ ರೋಗ ಗರ್ಭಿಣಿಯರಿಗೆ ಬಂದರೆ ಹುಟ್ಟುವ ಮಕ್ಕಳ ಮೇಲೆ ಇದರಿಂದ ಯಾವ ದುಷ್ಪರಿಣಾಮವೂ ಆಗುವುದಿಲ್ಲ.

ಮನುಷ್ಯನು ವೈರಸ್ ಸೋಂಕಿನಿಂದ ಗುಣಮುಖನಾಗಲು ಅನೇಕ ರೀತಿಗಳಿವೆ. ಪ್ರತಿವಿಷವಸ್ತುವಿನ ಉತ್ಪಾದನೆಯಾಗಿ ಪುನಃ ಸೋಂಕು ತಾಗದಂತೆ ತಡೆಗಟ್ಟುವುದು ಒಂದು ಬಹು ಮುಖ್ಯವಾದ ಅಂಶ. ಸೋಂಕಿನ ಮೊದಲ ಹಂತದಲ್ಲಿ ಜನಿಸಿದ ಇಂಟರ್‌ಫೆರಾನ್ ಸೋಂಕು ಜಾಡ್ಯದಿಂದ ಗುಣಮುಖಮಾಡಲು ಹೆಚ್ಚಾಗಿ ನೆರವಾಗುವುದು. ಇಂಟರ್‌ಫೆರಾನ್ ಸ್ಥಳೀಯ ಜೀವಕಣಗಳನ್ನೂ ಮತ್ತು ರಕ್ತ ಪರಿಚಲನೆಯ ಮೂಲಕ ಬೇರೆ ಅಂಗಗಳ ಜೀವಕಣಗಳನ್ನೂ ರಕ್ಷಿಸುವುದು. ಇಂಟರ್‌ಫೆರಾನ್ ಪ್ರಾಣಿಗಳಿಗೆ ಕೊಟ್ಟಾಗ ಅದು ರಕ್ತ ಪರಿಚಲನೆಯಿಂದ ಕೆಲವು ನಿಮಿಷಗಳಲ್ಲಿ ಮಾಯವಾಗಿ ದೇಹದ ಎಲ್ಲಾ ಭಾಗಗಳನ್ನು ಆವರಿಸಿಕೊಳ್ಳುವುದು.

ಇಂಟರ್‌ಫೆರಾನ್ ಮನುಷ್ಯನನ್ನು ವೈರಸ್ ಸೋಂಕಿನಿಂದ ರಕ್ಷಿಸಲು ಬಹು ವಿಧಗಳಲ್ಲಿ ಉಪಯುಕ್ತವಾದುದು. ಅದು ಅನೇಕ ವಿಧವಾದ ವೈರಸ್‌ಗಳನ್ನು ಎದುರಿಸುತ್ತದೆ. ಶ್ವಾಸಕೋಶದ ಕಾಯಿಲೆ ಮೊದಲಾದ ಹಲವು ಅಂಟು ಜಾಡ್ಯಗಳನ್ನು ತಡೆಗಟ್ಟಬಲ್ಲದು. ಇದರ ನಂಜಿನಿಂದ ರಕ್ತ ಕ್ಷಯಿಸುವುದಿಲ್ಲ. ಪ್ರತಿವಿಷವಸ್ತು ಹುಟ್ಟಲು ಪ್ರಚೋದಿಸುವುದಿಲ್ಲ ಮತ್ತು ಅದನ್ನು ಆಗಾಗ್ಗೆ ರೋಗಿಗೆ ಕೊಡಬಹುದು. ಸಾಮಾನ್ಯವಾಗಿ ಇದನ್ನು ಶೀತಾವರಣದಲ್ಲಿಡಬೇಕಾದರೂ ಘನೀಭವಿಸಿದ ನಂತರ ಇದನ್ನು 4° ಶಾಖದಲ್ಲಿ ಬಹಳ ದಿವಸಗಳವರೆಗೂ ಇಡಬಹುದು. ಇದನ್ನು ಅಧಿಕ ಪ್ರಮಾಣದಲ್ಲಿ ಉತ್ಪಾದಿಸಲು ಇರುವ ತೊಂದರೆಯೇ ಇದನ್ನು ಮನುಷ್ಯರ ಮೇಲೆ ಪ್ರಯೋಗಿಸಲು ಇರುವ ಮುಖ್ಯ ಆತಂಕವಾಗಿದೆ. ಮನುಷ್ಯನಲ್ಲಿ ಪರಿಣಾಮಕಾರಿಯಾಗುವ ಇಂಟರ್‌ಫೆರಾನ್‌ನನ್ನು ಮನುಷ್ಯನ ಅಥವಾ ಕೋತಿಯ ಜೀವಕಣಗಳಿಂದ ಮಾತ್ರ ತಯಾರಿಸಬೇಕಾಗುವುದು.

ಈ ಸಮಸ್ಯೆಯನ್ನು ಬಗೆಹರಿಸಲು ಇರುವ ಮಾರ್ಗ ಅನ್ಯ ವಸ್ತುಗಳನ್ನು ಮನುಷ್ಯನ ಜೀವಕಣಗಳಲ್ಲಿ ಸೇರಿಸಿ ಜೀವಕಣಗಳೇ ಇಂಟರ್‌ಫೆರಾನನ್ನು ಹೆಚ್ಚು ಹೆಚ್ಚಾಗಿ ಉತ್ಪಾದಿಸುವಂತೆ ಮಾಡುವುದು. ಇವುಗಳಲ್ಲಿ ಅತ್ಯಂತ ಪರಿಣಾಮಕಾರಿಯಾದ ವಸ್ತುವೆಂದರೆ ಒಂದು

ಕೃತಕ ಆರ್. ಎನ್. ಎ. (ಪಾಲಿ ಐ. ಸಿ.). ಈ ವಸ್ತುವನ್ನು ಅತ್ಯಲ್ಪ ಪ್ರಮಾಣದಲ್ಲಿ ಸೇರಿಸಿದಾಗ ಶರೀರದ ಹೊರಗಿರುವ ಜೀವಕಣ ಮತ್ತು ಪ್ರಾಣಿಗಳಲ್ಲಿ ಇಂಟರ್‌ಫೆರಾನ್‌ನ ಉತ್ಪಾದನೆಗೆ ಸಹಾಯವಾಗುವುದು. ಪಾಲಿ ಐ. ಸಿ. ಉಪಯೋಗ ದಿಂದ ಪ್ರಯೋಗಶಾಲೆಯ ಪ್ರಾಣಿಗಳಲ್ಲಿ ವೈರಸ್ ಜಾಡ್ಯ ಹರಡುವಿಕೆ ಮತ್ತು ಅದರಿಂದಾಗುವ ಸಾವುಗಳನ್ನು ತಡೆಹಿಡಿಯಲು ಸಾಧಕವಾಗಿದೆ. ಇದನ್ನು ರೋಗ ನಿರೋಧನೆ ಮತ್ತು ಚಿಕಿತ್ಸೆ ಈ ಎರಡು ಕಾರ್ಯಾಚರಣೆಗೂ ಉಪಯೋಗಿಸಬಹುದು ಪ್ರಯೋಗ ಶಾಲೆಯ ಪ್ರಾಣಿಗಳಿಗೆ ಸಾವನ್ನುಂಟು ಮಾಡುವಷ್ಟು ವೈರಸ್ ಕೊಟ್ಟು, ಅದರ ಜೊತೆಗೆ ಪಾಲಿ ಐ. ಸಿ. ಯನ್ನು ಸೋಂಕು ಅಂಟಿದ ಎರಡನೆಯ ದಿವಸದ ಮೇಲೆ ಕೊಟ್ಟ ಪರಿಣಾಮದಿಂದ ಪ್ರಾಣಿ ಸಾಯಲಿಲ್ಲ. ಕೆಲವು ಪ್ರಯೋಗಗಳನ್ನು ಮಾನವ ರೋಗಿಗಳ ಮೇಲೂ ಮಾಡಿದ್ದಾರೆ. ಫಲಿತಾಂಶವು ಉತ್ತೇಜನಕಾರಿಯಾಗಿದೆ. ಪಾಲಿ ಐ. ಸಿ. ಯಿಂದ ಪ್ರಾಣಿಗಳಲ್ಲಿ ಗೆಡ್ಡೆಗಳ ಬೆಳವಣಿಗೆಗೆ ಅಡಚಣೆ ಕಂಡು ಬಂದರೂ ಕ್ಯಾನ್ಸರ್ ರೋಗ ಗ್ರಸ್ತರ ಮೇಲೆ ಯಾವ ಪರಿಣಾಮವೂ ಕಂಡು ಬಂದಿಲ್ಲ. ಆದರೂ ಪಾಲಿ ಐ. ಸಿ. ಯಿಂದ ಕ್ಯಾನ್ಸರ್‌ರೋಗ ನಿವಾರಣೆಗೆ ಸೂಕ್ತವಾದ ಔಷಧಿಯನ್ನು ಇನ್ನು ಮುಂದಾದರೂ ಕಂಡುಹಿಡಿಯಬಹುದೆಂಬ ಭರವಸೆ ಇದೆ.

ಇಂಟರ್‌ಫೆರಾನ್ ಉಪಯೋಗದಲ್ಲಿ ಒಂದು ಮುಖ್ಯವಾದ ಅಂಶವನ್ನು ಗಮನ ದಲ್ಲಿಟ್ಟುಕೊಳ್ಳಬೇಕು; ಏನೆಂದರೆ ಇದರ ಪರಿಣಾಮ ಪ್ರತಿವಿಷವಸ್ತುವಿನಂತಲ್ಲದೆ ಕೇವಲ ಕೆಲವು ದಿವಸಗಳವರೆಗೆ ಮಾತ್ರ ಇರುತ್ತದೆ. ಆದ್ದರಿಂದ ಚಿಕಿತ್ಸೆಗಾಗಿ ಇದನ್ನು ಪದೇ ಪದೇ ಉಪಯೋಗಿಸುತ್ತಲೇ ಇರಬೇಕು.

ಕೊನೆಯದಾಗಿ ಇಂಟರ್‌ಫೆರಾನ್‌ನ ರಚನಾಕ್ರಮ ಮತ್ತು ಕಾರ್ಯಾಚರಣೆಗಳ ಬಗ್ಗೆ ತಿಳಿದುಕೊಳ್ಳುವ ವಿಷಯ ಬಹಳವಿದ್ದರೂ ಅದು ಪ್ರಾಣಿಗಳನ್ನು ಸ್ವಾಭಾವಿಕವಾಗಿ ರಕ್ಷಿಸುವ ಒಂದು ಬಹು ಮುಖ್ಯವಾದ ಅಂಶವೆಂದು ಹೇಳಬಹುದು. ಅಲ್ಲದೆ ಮಾನವನ ರೋಗಗಳ ಮೇಲೆ ನಡೆವ ಹೋರಾಟಕ್ಕೆ ಇದು ಒಂದು ಪ್ರಬಲವಾದ ಚಿಕಿತ್ಸಾಯುಧ ವೆನ್ನುವುದರಲ್ಲಿ ಸಂಶಯವಿಲ್ಲ.

ಹೆಂಗಸರ ರೋಗಗಳು

ಡಿ. ಎಸ್. ಶಿವಪ್ಪ

ಮೈಯಲ್ಲಿ ಕಾವಿನ ಮೇಲಿನ ಹತೋಟಿ ಗಂಡಸಿಗಿಂತಲೂ ಹೆಂಗಸಿನಲ್ಲೇ ಚೆನ್ನಾಗಿದೆ. ಆದ್ದರಿಂದಲೇ. ಸೆಕೆಯಿನ್ನಾಗಲಿ. ಚಳಿಯಿನ್ನಾಗಲಿ ಹೆಂಗಸು ಚೆನ್ನಾಗಿ ತಡೆದುಕೊಳ್ಳಬಲ್ಲಳು. ಸಾಮಾನ್ಯವಾಗಿ, ಗಾತ್ರದಲ್ಲಿ ಗಂಡಿಗಿಂತಲೂ ಹೆಣ್ಣು ಸಣ್ಣವಳಾದರೂ, ಸ್ನಾಯು, ಕೊಬ್ಬುಗಳ ಪ್ರಮಾಣದಲ್ಲಿ ಕೊಬ್ಬೇ ಹೆಚ್ಚಿರುವುದು. ಮೈ ಮನಸ್ಸುಗಳ ಏಳುಬೀಳು, ಸವೆತಗಳನ್ನು ಹೆಂಗಸಿನಂತೆ ಗಂಡಸು ತಡೆದುಕೊಳ್ಳಲಾರ. ಶಸ್ತ್ರಕ್ರಿಯೆಯಿಂದ ಹೆಂಗಸರಿಗಿಂತಲೂ ಗಂಡಸರೇ ಸುಸ್ತು ಬೀಳುವರು. ಎಷ್ಟೋ ರೋಗಗಳನ್ನು ತಡೆದುಕೊಳ್ಳುವ ಬಲ ಹೆಂಗಸರಿಗೇ ಹೆಚ್ಚಾಗಿದೆ. ಮೈ ನೆರೆದ ಮೇಲೂ ಹೆಣ್ಣಿನ ಇಡೀ ಮೈ ಸ್ನಾಯುಬಲ ಎಂದಿಗೂ ಗಂಡಸಿನವರ ಸಮಕ್ಕೆ ಬರದು. ಅವಳ ಮೂಳೆ, ಸ್ನಾಯುಗಳು ಕೇವಲ ಬಲಕ್ಕಾಗಿ ರಚನೆಯಾಗಿಲ್ಲ. ಇದರಿಂದಲೇ ಹೆಣ್ಣು ಕೈಗೊಳ್ಳುವ ಕೆಲಸಗಳೂ ಚಟುವಟಿಕೆಗಳೇ ಬೇರೆ. ಗಂಡಿನ ಸ್ನಾಯು ಬಲ ಮಿಗಿಲಾಗಿದ್ದರೂ, ಕುಶಲತೆಯಿಂದ ಸ್ನಾಯುಗಳನ್ನು ನಿಯಂತ್ರಿಸುವುದರಲ್ಲಿದೆ ಹೆಣ್ಣಿನ ಹೆಚ್ಚುಳಿಕೆ. ಇದು ಜೀವಿ ರಚನೆಯಲ್ಲೇ ಹೀಗೆ ಬಂದಿದೆಯೋ ನಮ್ಮ ಆಚಾರ. ಸಂಪ್ರದಾಯಗಳಿಂದ ಆಗಿರುವುದೋ ಗೊತ್ತಿಲ್ಲ.

ಗಂಡಸಿಗಿಂತ ಸುಮಾರು ಆರುವರುಷಗಳು ಹೆಚ್ಚು ಕಾಲ ಹೆಂಗಸು ಬದುಕುವಳು. ಈ ಕಾಲಾವಧಿ ಹೆಚ್ಚುತ್ತಲೇ ಇದೆ. ಗಂಡಸರಿಗಿಂತ ಹೆಂಗಸರೇ ಹೆಚ್ಚಾಗಿ ಕಾಯಿಲೆ ಬೀಳುವರಾದರೂ ಗಂಡಸರಿಗಿಂತ ಚೆನ್ನಾಗಿ ತೇರ್ಗಡೆಯಾಗುವರು. ಸಿಹಿಮೂತ್ರ ರೋಗ ಇದಕ್ಕೆ ಹೊರತು. ರೋಗಕ್ಕೆ ಬಲಿಯಾಗುವುದರಲ್ಲೂ ಗಂಡಸರದೇ ಮೇಲುಗೈ. ಸಾವಿನ 64 ಕಾರಣಗಳಲ್ಲಿ 57ರಲ್ಲಿ ಹೆಂಗಸರಿಗಿಂತ ಗಂಡಸರು ಬಲಿಯಾಗುವುದೇ ಹೆಚ್ಚು. ರೋಧವಸ್ತುಗಳು (ಆಂಟಿಬಾಡೀಸ್) ರಕ್ತದಲ್ಲಿ ಸಾಕಷ್ಟಿರುವುದೇ ರೋಗ ತಡೆವ ಬಲಕ್ಕೆ ಮುಖ್ಯ ಕಾರಣ. ಮೈಯಲ್ಲಿ ಇವು ತಯಾರಾಗಲು ಗ್ಯಾಮ ಗ್ಲಾಬ್ಯುಲಿನ್ ಬೇಕೇ ಬೇಕು. ಇದರ ಕೊರೆ ಗಂಡಸರಲ್ಲಿ ಮಾತ್ರ ತೋರುವುದು. ಇದೇ ರೀತಿಯಾಗಿ, ಕುಸುಮ ರೋಗ (ಹೀಮೋಫಿಲಿಯ), ಬಣ್ಣಗುರುಡುತನ, ತಲೆಮಾರಿನ ಸ್ನಾಯು ಕುಪುಷ್ಟಿಗಳ ತೆರನ ಹಲವು ಕೊರೆಗಳು ಹೆಂಗಸರನ್ನು ಕಾಡುವುದೇ ಇಲ್ಲ.

ಗಂಡು ಹೆಣ್ಣುಗಳ ವ್ಯತ್ಯಾಸಗಳಿಗೆ ಮುಖ್ಯಕಾರಣ ಚೋದನಿಕಗಳು (ಹಾರ್ಮೋನ್ಸ್) ಗಂಡಿನ ತಡ್ಡು ಸ್ಟಿರೋನ್ (ಟೆಸ್ಟೊಸ್ಟಿರೋನ್), ಹೆಣ್ಣಿನ ಬಿದಿಜನಕಗಳು (ಈಸ್ಟ್ರೊ

ಜನ್ಸ್) ರಸಾಯನಿಕ ಅಣುಗಳಾಗಿ ಒಂದನ್ನೊಂದು ಹೋಲುತ್ತವೆ. ಹೆಣ್ಣು, ಗಂಡು ಇಬ್ಬರಲ್ಲೂ ಎರಡು ಲಿಂಗಗಳಿಗೂ ವಿಶಿಷ್ಟವಾಗಿರುವ ಇವೆರಡೂ ಇರುವುದು ನಿಸರ್ಗದ ದೊಡ್ಡ ಸೋಜಿಗ; ಪ್ರಮಾಣಗಳು ಮಾತ್ರ ಬೇರೆ. ಬೆದೆಜನಕ ಹೆಂಗಸಿಗೆ ತಾಳ್ಮೆ ನೆಮ್ಮದಿ ನೀಡಿದರೆ, ತಡ್ನುಸ್ಟಿರೋನ್ ಗಂಡಿನಲ್ಲಿ ಚುರುಕೇಳಿಸುತ್ತದೆ. ಜೀವಸ್ತುಕರಣ (ಮೆಟಬಾಲಿಸಂ), ನಾಡಿಬಡಿತ, ಉಸಿರಾಟಗಳ ವೇಗ ಹೆಂಗಸರಲ್ಲಿ ನಿಧಾನ. ಎಷ್ಟೋ ಚೋದನಿಕಗಳ ಆಗುಹೋಗುಗಳಿಗೆ ಕಾರಣವಾದ ಈಲಿ (ಯಕೃತ್ತು) ಹೆಂಗಸಿನಲ್ಲಿ ಮತ್ತಷ್ಟು ಚೆನ್ನಾಗಿ ಅನುಕೂಲವಾಗಿ ಕೆಲಸಮಾಡುವಂತೆ ತೋರುವುದು.

ಮುಟ್ಟು ಮತ್ತದರ ಅರ್ಥದ ವಿಚಾರವಾಗಿ, ಮಾನಸಿಕವಾಗೂ ಭಾವನೆಯಲ್ಲೂ ಹುಡುಗಿಗೆ ಎಷ್ಟೇ ಚೆನ್ನಾಗಿ ತಿಳಿಸಿ ಕೊಟ್ಟಿರಲಿ ಅವಳ ನಡೆವಳಿಕೆಯ ಮೇಲೆ ಮುಟ್ಟಾಗು ವುದು ಅಗಾಧ ಪರಿಣಾಮ ತೋರುವುದು. ಕೆಲವು ನಾಡುಗಳಲ್ಲಿ ಮೈ ನೆರೆಯಿತೆಂದರೆ ಮುಂದೆ ಮಕ್ಕಳನ್ನು ಹೆರುವಳೆಂದು ಬಹುಮಂದಿಗೆ ಮಂದಟ್ಟು ಮಾಡಿರರು. ಹುಟ್ಟಿ ನಿಂದಲೂ ಮೊದಾಮೊದಲು ಅವಳ ಅಂಗರಚನೆ, ನಿಜಗೆಲಸಗಳಲ್ಲಿ ಹೆಣ್ಣು ಬೇರೆ ಎಂದು ತೋರುವ ಆ ಕಾಲ ಅವಳ ನಡವಳಿಕೆಯಮೇಲೆ ಅಪಾರ ಪರಿಣಾಮ ತೋರಿಯೇ ತೋರುವುದು. ಚೋದನಿಕಗಳ ಸುರಿತ ಮಾಸಚಕ್ರದಲ್ಲಿ ಏರಿಳಿವುದೆನ್ನುವುದಂತೂ ಗಂಡಸಿನೊಂದಿಗಿರುವ ಹೆಚ್ಚಿನ ವ್ಯತ್ಯಾಸವೇ. ಗಂಡಸಲ್ಲಿ ಇಂತಹ ತಾಳಬದ್ಧತೆ ಇಲ್ಲ.

ಮುಟ್ಟು ಸುರಿವುದು ನಿಂತ ಮೇಲೆ ಬೆದೆಜನಕದ ಪ್ರಮಾಣ ತೀರ ಇಳಿದು ಹೋಗಿ ಮೈಯಲ್ಲಿ ಉಳಿದ ಯಾವ ಅಂಗೆಲಸಗಳ ಮೇಲೂ ಏನೇನೂ ಪ್ರಭಾವ ಕಾಣದಾಗುತ್ತದೆ. ಆಮೇಲೆ ಇದರ ಸುರಿಕೆಯೂ ಚಟುವಟಿಕೆಯೂ ಏರುತ್ತಾ ಬಂದು ಮುಂದಿನ ಮುಟ್ಟಿಗೆ ಇನ್ನೂ 14 ದಿನಗಳಿರುವ ಹಾಗೇ, ಅಂಡಾಣುನೆರೆತದ (ಅವ್ಯುಲೇಷನ್) ಹೊತ್ತಿಗೆ ತುತ್ತುದಿಗೇರಿರುವುದು. ಆ ಹೊತ್ತಿನಲ್ಲಿ ಬಹುಮಟ್ಟಿಗೆ ಯಾರಿಗೂ ತೊಂದರೆಗಳಾಗವು. ಮುಟ್ಟಿನಲ್ಲಿ ಆಗುವಂತೆ ಒಡಲಲ್ಲಿ ಚಳುಕಾಗಬಹುದು. ಆದರೆ ಕೆಲವರಲ್ಲಂತೂ ಕರುಳುವಾಳುರಿತದಲ್ಲಿ (ಅಪೆಂಡಿಸೈಟಿಸ್) ಆಗುವಷ್ಟೇ ಜೋರಾಗಿ ನೋವು, ಚುಳುಕು ಏಳಬಹುದು. ನೂರಕ್ಕೆ 60 ಹೆಂಗಸರಲ್ಲಿ ಆ ಹೊತ್ತಿನಲ್ಲಿ ಸಣ್ಣ ತೊಟ್ಟು ರಕ್ತ ಗರ್ಭದಿಂದ ಬೀಳಬಹುದು. ಆಗ ಬೆದೆಜನಕದ ಪ್ರಭಾವ ಬಹಳವಾಗಿದ್ದು, ಮೊಲೆಯ ಸಾಗುನಾಳ ಗಳು ಜೋರಾಗಿ ಬೆಳೆಯುತ್ತವೆ. ಚರ್ಮ, ಮೂಳೆಗಳು ಬೆಳೆವುವು. ಮೈಯಲ್ಲಿರುವ ಎಲ್ಲ ನಯ ಸ್ನಾಯುಗಳೂ ಕುಗ್ಗುವಂತಿರುವುವು. ಗರ್ಭಕೋಶದೊಳ್ಪರೆ (ಎಂಡೊ ಮೆಟ್ರಿಯಂ) ಅತಿಯಾಗಿ ಬೆಳೆಯುತ್ತದೆ. ಹೀಗೆ ಇನ್ನು ಎಷ್ಟೋ ಬದಲಾವಣೆಗಳು ತೋರಿಬರುತ್ತವೆ.

ಅಂಡಾಣು ನೆರೆತದ ಹೊತ್ತಿನಲ್ಲಿ ಬಸಿರಣಿಕ (ಪ್ರೊಜೆಸ್ಟಿರೋನ್) ರಸದ ಪ್ರಭಾವವೂ ಕಂಡುಬರುವುದು. ಅಂಡಾಣು ನೆರೆದ ಕೂಡಲೆ ಬೆದೆಜನಕದ ಸುರಿತ ಕೆಲವು ದಿನಗಳು

ತಗ್ಗಿದ್ದು ಮತ್ತೆ ಮುಟ್ಟಾಗುವ ಹೊತ್ತಿಗೆ ಹೆಚ್ಚುತ್ತಾ ಹೋಗುವುದು. ಈ ಬೆದೆಜನಕ, ಬಸಿರಣಿಕ ಎರಡು ಚೋದನಿಕಗಳೂ ಮೈಯಲ್ಲಿ ನೀರೂ ಉಪ್ಪೂ ಉಳಿವಂತೆ ಮಾಡಿ, ಕೆಲವರು ಹೆಂಗಸರಲ್ಲಿ ಮುಟ್ಟಿನ ಹಿಂದಿನ ವಾರದಲ್ಲಿ ಕೈಕಾಲುಗಳೂ ಮೊಗವೂ ಊದಿ ಕೊಂಡು ಕೆಲವು ಕಿಲೋಗ್ರಾಂಗಳಷ್ಟು ತೂಕ ಹೆಚ್ಚಬಹುದು. ಈ ಚೋದನಿಕಗಳ ಕೊಂಚ ಪ್ರಭಾವ ಕೇಂದ್ರದ ನರದ ಮಂಡಲದ ಮೇಲೂ ಇರುವುದಾದರೂ ಮುಟ್ಟುಮುನ್ನಿನ ಬಿಗುಪಿನ ಲಕ್ಷಣಕೂಟಕ್ಕೆ (ಪ್ರಿಮೆನ್‌ಸ್ಟ್ರುಯಲ್ ಟೆನ್ಷನ್ ಸಿಂಡ್ರೋಂ) ಇದೇ ಮುಖ್ಯ ಕಾರಣ ಎನ್ನುವುದುಂಟು.

ಅಂತೂ, ಮುಟ್ಟಾಗುವ ಹಿಂದಿನ ವಾರದಲ್ಲಿ ತಮ್ಮಲ್ಲಾಗುವ ವ್ಯತ್ಯಾಸಗಳನ್ನು ಹೆಂಗಸರು ಒಂದಿಲ್ಲೊಂದು ರೀತಿಯಲ್ಲಿ ಅನುಭವಿಸುವರು. ನಾಲ್ವರಲ್ಲಿ ಒಬ್ಬರು ಇಂತಹ ವ್ಯತ್ಯಾಸಗಳನ್ನು ತಡೆಯಲಾರದೆ ವೈದ್ಯ ಚಿಕಿತ್ಸೆಗಾಗಿ ಬರುವರು. ಮುಟ್ಟಾಗುವ ಮುಂಚಿನ 6-7 ದಿನಗಳಲ್ಲಿ ಮೊಲೆಗಳನ್ನು ಮುಟ್ಟಿದರೆ ನೋಯುವಂತಾಗಿ, ಹೊಟ್ಟೆ ಉಬ್ಬರಿಸಿಕೊಂಡು, ಕೈ, ಉಂಗುರ, ಕಾಲುಮುಚ್ಚೆಗಳು ಬಿಗುವಾಗಿ, ಮೈ ತೂಕ ಸದ್ಯಕ್ಕೆ ಹೆಚ್ಚಿ, ಮನೋಭಾವಗಳೂ ಏರುಪೇರಾಗುತ್ತವೆ. ಮುಟ್ಟಿಗೆ ಮುನ್ನ ಮನಗುಂದಿ, ರೇಗಾಟ, ಕೆರಳು, ಸಿಂಡರಿಸಿಕೆ, ಮನದ ಚಂಚಲತೆ, ನಿರಾಸಕ್ತಿ, ತಲೆನೋವುಗಳು ಮತ್ತಿತರ ನಡವಳಿಕೆಯ ವ್ಯತ್ಯಾಸಗಳು ತೋರುವುವು. ಕೆಲವರಂತೂ ಸಿಡಿಮಿಡಿಗೊಳ್ಳುವರು. ಒಮ್ಮೊಬ್ಬ ಹೆಂಗಸಿನ ಮನೋದುರ್ಬಲತೆ ಆಗ ಮಿತಿಮೀರುತ್ತದೆ. ಇದರ ಪರಿಣಾಮ ವೇನೂ ಕಡೆಗಣಿಸುವಂತಿಲ್ಲ. ಹೆಂಗಸರು ಬಹುವಾಗಿ ಆತ್ಮಹತ್ಯೆ ಮಾಡಿಕೊಳ್ಳುವುದು ಈ ವಾರದಲ್ಲೇ. ಮನೆಯವರು,ಗಂಡ, ಮಕ್ಕಳೊಂದಿಗಿನ ಸಂಬಂಧದಲ್ಲೂ ಮನಸ್ತಾಪ, ಮುನಿಸುಗಳು ಏಳುವುದೂ ಆಗಲೇ. ಹೆಂಗಸಿನಿಂದಾಗುವ ಕೆಲಸವನ್ನೂ ಚೆನ್ನಾಗಿ ಅಳೆದು ದಾಗಿದೆ. ಕೆಲಸದಲ್ಲಿರುವ ಮಹಿಳೆ ಮುಟ್ಟು ಮುನ್ನಿನ ಒಂದು ವಾರದಲ್ಲಿ ಬಹಳ ತಪ್ಪು ಗಳನ್ನು ಮಾಡುವಳು.

ಮುಟ್ಟಿನ ವಿಚಾರದಲ್ಲಿ ಹೆಂಗಸಿನ ನಡವಳಿಕೆಯನ್ನು ಬದಲಾಯಿಸುವ ಹಲವಾರು ತೊಡಕುಗಳಿರುತ್ತವೆ. ಆ ಹೊತ್ತಿನಲ್ಲಿ ಕೆಳಹೊಟ್ಟೆಯಲ್ಲಿ ಚುಳುಕುಗಳು, ಮಲಗಟ್ಟು, ಏನೂ ಇಲ್ಲದ ತಲೆ ನೋವುಗಳು, ಓಕರಿಕೆ, ಹಸಿವಿನ ವಿಕಾರಗಳು, ಜೊತೆಗೆ ಮುಟ್ಟು ಸುರಿ- ತದ ಘಟನೆಗಳು ಸತಾಯಿಸುತ್ತವೆ. ಬೇರೆಬೇರೆ ಸಮಾಜ, ಸಂಸಾರಗಳಲ್ಲಿ ಸಹಜವಾಗಿ ಆಗುವ ಮುಟ್ಟಿನ ವಿಚಾರವಾಗಿರುವ ಭಾವನೆಗಳು ತೊಡಕಿನವು, ಬೇರೆ ಬೇರೆ, ಅಲ್ಲದೆ ಬದ ಲಾಗುತ್ತಿರುವುವು. ಮುಟ್ಟಾಗುತ್ತಿರುವ ಹೆಣ್ಣು ಮೈಲಿಗೆ ಕೆಲವು ಕೆಟ್ಟ ರಸಗಳನ್ನು ವಿಷ ಗಳನ್ನು ಹೊರ ಸೂಸುತ್ತಿರುವಳೆಂದೂ ನಂಬುವವರೂ ಇದ್ದಾರೆ. ಇನ್ನು ಕೆಲವರು ಹೆಂಗಸರಿಗೆ ಮುಟ್ಟು ಜೋರಾಗಿ ಸುರಿಯುತ್ತಿದ್ದರೆ ಮನಸ್ಸಿಗೆ ಸಮಾಧಾನ. ಆದರೆ, ಚೆನ್ನಾದ ಒಳ್ಳೆಯ ರಕ್ತ ಮುಟ್ಟಿನಲ್ಲಿ ಅಷ್ಟೊಂದು ಸುರಿಯುವುದರಿಂದ ಹೆಣ್ಣು ರಕ್ತಕೊರೆ

(ಅನೀಮಿಯ) ಅನುಭವಿಸುವುದು ವೈದ್ಯನಿಗೇ ಗೊತ್ತು. ಅಂತೂ ಮುಟ್ಟಿನಿಂದ ಹೆಣ್ಣಿನ ಚಟುವಟಿಕೆಗಳು, ನಡೆವಳಿಕೆಗಳಲ್ಲಿ ಬಹಳ ವ್ಯತ್ಯಾಸಗಳಾಗುತ್ತವೆ.

ಇನ್ನೊಂದು ವಿಚಾರದಲ್ಲಿ ಹೆಣ್ಣು ಪುಣ್ಯವಂತೆ. ಯಾವ ರೋಗವೇ ಆಗಲಿ ಹೆಣ್ಣನ್ನು ಅಷ್ಟಾಗಿ ಕಾಡಿಸದು. ಮೈ ನೆರೆದ ಮೇಲೆ ಹೆಣ್ಣಿನ ಜೀವಿತ ಕಾಲ ಗಂಡಿನದಕ್ಕಿಂತಲೂ ಹೆಚ್ಚುತ್ತಾ ಹೋಗುವುದು. ಇದಕ್ಕೆ ಮುಖ್ಯ ಕಾರಣ, ಹೆಣ್ಣಿನ ಚೋದನಿಕ ರಸಗಳು. ಹೆಣ್ಣಿನ ಮುಟ್ಟುತೀರುವ (ಮೀನೊಪಾಸ್) ಮುಂಚಿನ ದಶಕದಲ್ಲಿ, ಗುಂಡಿಗೆಯ ಕಿರೀಟಕ ಧಮನಿ (ಕಾರೊನೆರಿ ಆರ್ಟರಿ) ರೋಗ 10 ಗಂಡಸರಿಗೆ ಒಬ್ಬಳನ್ನು ಕಾಡ ಬಹುದು ಅಷ್ಟೆ. ಆದರೆ, ಮುಟ್ಟುತೀರುವ ಆದಮೇಲೆ ಬೆದೆಜನಕದ ಪ್ರಭಾವ ತೀರ ಕುಂದಿದಾಗ, ಗಂಡಿನಷ್ಟೇ ಹೆಣ್ಣೂ ಈ ರೋಗಕ್ಕೆ ಬಲಿಯಾಗುವಳು. ಇದರಿಂದಲೇ ಗುಂಡಿಗೆ ಧಮನಿ ರೋಗದ ಗಂಡಸರಿಗೆ ಬೆದೆಜನಕವನ್ನು ಕೊಟ್ಟಾಗ ಎಷ್ಟೋ ಅನುಕೂಲ ವಾದರೂ ಹೆಣ್ಣಿನ ಗುಣಗಳನ್ನು ಗಂಡಿನಲ್ಲಿ ಹೊರಗಾಣಿಸುವ ಬೇಡದ ಇತರ ಪರಿಣಾಮ ಗಳು ಹೆಚ್ಚಿದ್ದರಿಂದ ಹಾಗೆ ಕೊಡುವುದನ್ನು ನಿಲ್ಲಿಸಬೇಕಾಯಿತು. ಗಂಡಸಿಗೆ ಮಾರಕವಾಗುವ ಕೊಬ್ಬಿನ ಕೆಡುಕು ಹೆಣ್ಣಿಗೆ ತಟ್ಟದಂತೆ ತಡೆವುದು ಈ ಬೆದೆಜನಕ.

ಗಂಡಸರನ್ನೂ ಕಾಡುವ ಕೆಲವು ಸಾಮಾನ್ಯ ರೋಗಗಳೊಂದಿಗೆ ಹೆಣ್ಣಿಗೇ ಮೀಸಲಾದುವು ಕೆಲವಿವೆ. ಇವು ಬಹು ಮಟ್ಟಿಗೆ ಹೆಣ್ಣಿನ ವಿಶೇಷ ಜನನಾಂಗಗಳಿಗೆ ಹತ್ತುವವು. ಜನನಾಂಗಗಳಲ್ಲೂ ಅವುಗಳ ಸುತ್ತಮುತ್ತಲೂ ತಲೆದೋರುವುದ ರಿಂದ ಹೆಣ್ಣಿನ ಉಳಿವು ಬಾಳಿನ ಹೆಚ್ಚಳಿಕೆಗೆ ಜನನಾಂಗಗಳು ಎಷ್ಟು ಮುಖ್ಯವೆಂದು ಗೊತ್ತಾ ಗುವುದು. ಹಿಂದಿನ ಕಾಲದಲ್ಲಿ ಕಾರಣ ಗೊತ್ತಿರದಿದ್ದ ಕೆಲವು ರೋಗಗಳು ಹೆಣ್ಣಿನ ಜನನಾಂಗಗಳಲ್ಲೇ ಮೊಳೆವುವೆಂಬ ಕುರುಡು ನಂಬುಗೆಗಳೂ ಇದ್ದವು. ಉನ್ಮಾದ ರೋಗ ಇದರ ಒಂದು ಉದಾಹರಣೆ. ಹಿಸ್ಟೀರಿಯ (ಉನ್ಮಾದ ರೋಗ) ಹೆಸರು ಗ್ರೀಕಿನ ಹಿಸ್ಟೆರ ದಿಂದ (ಗರ್ಭ ಕೋಶ) ಬಂದಿದೆ. ಕೆಲವೇಳೆ ಹೆಣ್ಣಿನ ಈ ಜನನಾಂಗಗಳ ರೋಗದಿಂದ ಪುಕ್ಕಲು ಮನೋರೋಗ ಏಳುವುದಾದರೂ ಗಂಡಸರಲ್ಲೂ ಉನ್ಮಾದರೋಗಕ್ಕೆ ಇದೇ ಕಾರಣ ಹೇಳುವಂತಿಲ್ಲ.

ವೈದ್ಯ ವಿಜ್ಞಾನದಲ್ಲಿ ಹೆಂಗಸರ ರೋಗಗಳ ಹೆಚ್ಚಳಿಕೆಯಿಂದ ಆವೇ ಹೆರಿಗೆಶಾಸ್ತ್ರ, ಹೆಂಗಸರ ರೋಗ ಶಾಸ್ತ್ರಗಳೆಂಬ ದೊಡ್ಡ ಶಾಖೆಗಳಾಗಿ ಬೆಳೆದಿವೆ. ಹೆರಿಗೆ ಒಂದು ರೋಗವಲ್ಲ. ಬಸುರಿ ರೋಗಿಯಲ್ಲ. ಹೆಂಗಸಿನ ಸಹಜ ಅಂಗೆಲಸಗಳಲ್ಲಿ ಅದೂ ಒಂದು. ಈ ನಿಸರ್ಗದತ್ತ ಕೆಲಸವನ್ನು ಸುಸೂತ್ರವಾಗಿ ಆಗಮಾಡಿಸಲು, ಬಸುರಿಯಲ್ಲಿ ಕೊರೆಯಾದ ಹೆಂಗಸಿಗೆ ವಿಶಿಷ್ಟವಾದ ಅಂಶಗಳನ್ನು ಒದಗಿಸಿ, ಹೆರಿಗೆ ಸರಾಗವಾಗಿ ನಡೆವಂತೆ ನೆರವಾಗಿ, ಹುಟ್ಟಿದ ಕೂಸು ಆರೋಗ್ಯವಾಗಿರುವಂತೆ ನೋಡಿಕೊಳ್ಳುವುದೇ ಹೆರಿಗೆ ಶಾಸ್ತ್ರದ ಮುಖ್ಯಗುರಿ.

ಗಂಡು ಹೆಣ್ಣುಗಳ ನಡುವೆ ದೊಡ್ಡ ವ್ಯತ್ಯಾಸ ಒಂದಿದೆ. ಹೆಣ್ಣು ಬಸಿರಾಗಬಲ್ಲಳು; ಗಂಡಿಗೆ ಎಂದಿಗೂ ಸಾಧ್ಯವಿಲ್ಲ. ಗಂಡಿನ ಪಾತ್ರ ಕ್ಷಣಿಕವಾದ್ದು; ಹೆಣ್ಣಿನದು ನವಮಾಸ ಗಳಿಗೆ ಕಡಮೆಯಿಲ್ಲದಷ್ಟು ನೀಳ ಕಾಲದ್ದು. ಈ ಹೊತ್ತಿನಲ್ಲಿ ಅವಳ ಇಡೀ ಮೈಯಲ್ಲಿ ಅಪಾರ ಬದಲಾವಣೆಗಳಾಗುತ್ತವೆ. ಓಕರಿಕೆಯಾಗಿ ಊಟ, ತಿಂಡಿ, ಪಾನೀಯಗಳು ಸೇರದೆ, ಮೈ ತೂಕ ಹೆಚ್ಚುತ್ತಾ ಹೋಗುವುದು. ನಡಿಗೆಯಲ್ಲಿ ಸಮತೋಲ ತಪ್ಪಿ ಕಷ್ಟಪಡುವಳು. ದುಡಿವ ಬಲ ಕುಗ್ಗುವುದು. ದಿನಗೆಲಸಗಳೇ ಬೆಟ್ಟಗಳಾಗಿ ತೋರುತ್ತವೆ. ಬೇರೆಯವರ ನೆರವಿಗಾಗಿ ಕೈಯೊಡ್ಡುವಳು. ಕೊನೆಯದಾಗಿ ಬಸಿರಿನ ಕಷ್ಟಗಳು ಸಂತಸಗಳ ಅಸಾಧಾರಣ ಆನಂದದ ಅನುಭವ ಪಡೆವವಳು ಹೆಣ್ಣು. ಬಸಿರು, ಹೆರಿಗೆಗಳ ಅನುಭವ ಹೆಂಗಸಿನ ಮೇಲೆ ತೋರುವ ಪರಿಣಾಮ ಅಗಾಧ, ಕೊನೆಯಿಲ್ಲದ್ದು. ಹೆಣ್ಣಿನ ಮನಸ್ಸಿಗಾಗುವ ಈ ಅನುಭವವನ್ನು ಯಾವ ಮನಶ್ಶಾಸ್ತ್ರ ಪಟುವೂ ಪೂರ್ತಿ ತಿಳಿದಿರಲಾರ. ಆದರೆ, ಹೆಣ್ಣು ಏನು, ಏಕೆ, ಹೇಗೆ ಕೆಲಸ ಮಾಡುವಳು, ಅವಳ ಮನೋಭಾವ-ಇವುಗಳ ಮೇಲೆ ಹೆಣ್ಣಿನ ಅಂಗರಚನೆ, ಅಂಗೆಲಸಗಳ ಪ್ರಭಾವ ಹೇಳತೀರದು. ಹೆಣ್ಣಿನಲ್ಲಿ ಸಾವು, ಕಾಯಿಲೆಗಳ ಎದುರಾಗಿ ಬಸಿರು ಒಂದು ಹಿರಿಯ ವಿಮೆಯ ಹಾಗಿರುವುದು. ಬಸುರಿಯಲ್ಲಿ ಕ್ಷಯರೋಗವಿದ್ದರೂ ಹೆರಿಗೆ ಆಗುವ ತನಕ ಅಣಗಿರುವುದು. ಆಕಸ್ಮಿಕಗಳ ಹೊರತಾಗಿ, ಬಸುರಿಯ ಸಾವಂತೂ ಬಲು ಅಪರೂಪ. ಬಸುರಿಯ ಆರೈಕೆ, ಹೆರಿಗೆ, ಬಾಣಂತನಗಳಲ್ಲಿ ಏರುಪೇರಾದುದರ ಪರಿಣಾಮವೇ ಬಹುಪಾಲು ಹೆಂಗಸರ ರೋಗಗಳು ಎನ್ನಬಹುದು. ಮದುವೆ ಇಲ್ಲದವರಲ್ಲೂ ಮಕ್ಕಳಾಗ ದವರಲ್ಲೂ, ಹುಡಿಗಿಯರಲ್ಲೂ, ಬಸಿರು ಹೆರಿಗೆಗಳಾದರೆ ಎಂದೂ ಕಾಣದಿದ್ದ ರೋಗ ಗಳೂ ಕಾಣಿಸಿಕೊಳ್ಳಬಹುದು. ಹೆಂಗಸರ ರೋಗಪಟು ಇವೆರಡರಲ್ಲೂ ಪರಿಣತ ನಾಗಿರುವನು.

ತಾಯ್ತನದ ಮಿತಿ ಹೆಣ್ಣಿನ ಇಡೀ ನಡವಳಿಕೆ ವ್ಯಕ್ತಿತ್ವಗಳ ಮೇಲೆ ಅಪಾರ ಪ್ರಭಾವ ಬೀರುತ್ತದೆ. ಮನಶ್ಶಾಸ್ತ್ರಪಟುಗಳು ಇದನ್ನು ಆಳವಾಗಿ ಅರಿಯಲು ಯತ್ನಿಸಿರುವರು. ಅಲ್ಲದೆ, ಮುಟ್ಟು ನಿಲ್ಲುತ್ತ ಬಂದ ಹಾಗೆಲ್ಲ, ಹೆಣ್ಣಿನ ಮೈಯ ಅಂಗೆಲಸಗಳೆಲ್ಲ ಏರು ಪೇರಾಗುತ್ತವೆ. ಬೆದೆಜನಕದ ಪ್ರಭಾವದಿಂದ ಮೈಯಲ್ಲಿ ನಡೆಯುತ್ತಿದ್ದ ಕೆಲಸಗಳೆಲ್ಲ ಇಳಿಮೊಗವಾಗುವುವು. ಜನನಾಂಗಗಳು, ಮೊಲೆಗಳು, ಚರ್ಮ, ಮೂಳೆ ಇತ್ಯಾದಿಗಳಲ್ಲಿ ಇದು ಹೆಚ್ಚಾಗಿ ತೋರುತ್ತದೆ. ಇದೇ ಹೊತ್ತಿನಲ್ಲಿ ಅಂಡಾಶಯಗಳನ್ನು ಚೋದಿಸಲು ತೆಮಡಿಕ (ಪಿಟುಯಿಟರಿ) ಗ್ರಂಥಿಯ ಲಿಂಗ ಗ್ರಂಥಿಪಾಲಕ (ಗೊನಾಡೊಟ್ರೋಫಿಕ್) ರಸವನ್ನು ಹೆಚ್ಚೆಚ್ಚಾಗಿ ಸುರಿಸುವುದು. ಇದರೊಂದಿಗೆ ಬೆದೆಜನಕ ಉಳಿದ ಚೋದನಿಕ ಗಳೊಂದಿಗೆ ಸಾಧಿಸಿದ್ದ ಸಮತೋಲ ಏರುಪೇರಾಗುವುದು. ಹೀಗೆ, ಅಡ್ರಿನಲ್ ಗ್ರಂಥಿ ಎಂದಿನ ಹಾಗೇ ಚುರುಕಾಗಿದ್ದು, ಹೆಣ್ಣಿನಲ್ಲೂ ಗಂಡಿನ ಗುಣಗಳನ್ನು ತೋರುವ ಪುಂಜನಕ ಗಳನ್ನು (ಅಂಡ್ರೋಜನ್ಸ್) ಸುರಿಸುತ್ತಲೇ ಇರುವುದು.

ಹೆಣ್ಣಿನ ಹೆಚ್ಚಿನ ಗುಣಗಳಿಗೆ ಮುಖ್ಯ ಕಾರಣವಾದ ಬಿದೆಜನಕದ ಸುರಿಕೆ ನಿಂತು ಹೋದಂತೆಲ್ಲ, ಮೊಗದಮೇಲೆ ಬೇಡದೆಡೆ ದೊರಗೂದಲು ಬೆಳೆವುದು (ಹಿರ್ಸುಟಿಸಂ): ಮೊಡವೆಗಳು ಏಳುವುವು; ಚರ್ಮದ ಎಂದಿನ ನಯ ನುಣುಪು. ಹೊಳಪು ಕಳೆದು. ಹೆಣ್ಣಿನ ಅಂಗಗಳು ತುಂಬಿರುವ ತೋರಿಕೆ ಇಲ್ಲವಾಗಿ, ಮೊಲೆಗಳು ಬತ್ತಿಹೋಗಿ, ಕೆಲವೇಳೆ ತಲೆಗೂದಲು ಬೆಳಸೂ ತಗ್ಗುವುದು. ಬಿದೆಜನಕ ರಸದ ಕುಗ್ಗುವಿಕೆಯು ಮಟ್ಟದಂತೆ, ಹಲವಾರು ಮುಟ್ಟುತೀರುವೆಯ ಲಕ್ಷಣಗಳನ್ನು ಅನುಭವಿಸಬಹುದು. ಇದ್ದಕಿದ್ದಹಾಗೆ ಮೈ ಬಿಸಿಯೇರಿಕೆ, ರಾತ್ರಿ ಹೊತ್ತು ಮೈ ಬೆವರಿಕೆ ಕಾಡಬಹುದು. ಇದರೊಂದಿಗೇ ಮನಸ್ಸಿನ ಚಂಚಲತೆ, ರೇಗಾಟ ಕೂಗಾಟಗಳು. ಮನಗುಂದುವ. ಮಂಕುತನ, ಅಳು, ಸಿಡುಕು ಇವೆಲ್ಲ ಹೆಚ್ಚುತ್ತವೆ. ಯೋನಿನಾಳದಲ್ಲೂ ಕಂಕೋಶದಲ್ಲೂ (ಬ್ಲಾಡರ್) ಒಳ್ಪರೆ (ಎಂಡೋತೀಲಿಯಂ) ಕೆರಳಬಹುದು. ತಲೆನೋವುಗಳಂತೂ ಆಗಾಗ್ಗೆ ಕಾಡುತ್ತವೆ. ಬಿದೆಜನಕ ರಸದ ಸುರಿಕೆ ಪೂರ್ತಿ ನಿಂತುಬಿಟ್ಟರಂತೂ. ಗುಂಡಿಗೆಯ ಕಿರೀಟಕ ಧಮನಿ ರೋಗ, ಧಮನಿಪೆಡಸಣೆ (ಆರ್ಟೆರಿಯೊಸ್ಕ್ಲೀರೋಸಿಸ್), ಮೂಳೆಗಳ ಮೆತುವೆ ಇತ್ಯಾದಿ ತೀವ್ರವಾದ ಜೀವಸ್ತುಕರಣದ (ಮೆಟಬಾಲಿಕ್) ರೋಗ ಗಳಿಗೆ ಹೆಣ್ಣು ಆ ಹಂತದಲ್ಲಿ ಈಡಾಗುವಳು.

ಮುಟ್ಟುತೀರುವ ಆದವರಲ್ಲಿ. ಎಲ್ಲಕ್ಕಿಂತಲೂ ಹೆಚ್ಚಿನದಾಗಿ. ವಯಸ್ಸಾದಂತೆಲ್ಲ ಹೆಚ್ಚುವ ಮಾನಸಿಕ ಬೀಳುವೆ, ಇನ್ನೂ ಬೇಗನೆ ತಲೆದೋರುವುದು. ಬಿದೆಜನಕ ಮದ್ದುಗಳನ್ನು ಕೊಡುವುದರಿಂದ ಇದನ್ನು ಕೊಂಚಮಟ್ಟಿಗೆ ಕೆಲಕಾಲ ಶಮನಮಾಡಬಹುದು. ಮುಟ್ಟುತೀರುವೆ ಆದ ಮೇಲಿನ ಬಿದೆಜನಕದ ಕೊರೆರೋಗವೋ ಸಹಜವೋ ಎಂಬ ಶಂಕೆಯಿದೆ. ಒಟ್ಟಿನಲ್ಲಿ, ಸಾಧಾರಣವಾಗಿ ಹೀಗಾಗುವುದು ರೋಗವಲ್ಲವೆಂದೇ ಬಹು ಮಂದಿಯ ಅಭಿಪ್ರಾಯ. ಆದರೆ ನೂರಕ್ಕೆ 25 ಹೆಂಗಸರಿಗೆ ಅವರ ಉಳಿದ ಬಾಳಿನುದ್ದಕ್ಕೂ ಬಿದೆಜನಕಗಳು ಬೇಕಾಗುತ್ತವೆ.

ಹೆಂಗಸರಲ್ಲೂ ಕೆಲವು ಗಡ್ಡೆಗಳು, ಗಂತಿಗಳೂ ಏಳುವುವು. ಚಿಕಿತ್ಸೆ ಇಲ್ಲವಾದರೆ ಮಾರಕವಾಗುವ ಏಡಿಗಂತಿಗಳು (ಕ್ಯಾನ್ಸರ್) ಹೆಣ್ಣಿನಲ್ಲಿ ಹೆಚ್ಚಾಗಿ ಮೊಲೆಗಳಲ್ಲೂ. ಎರಡನೆಯದಾಗಿ ಗರ್ಭಕೋಶದಲ್ಲೂ ಏಳುತ್ತವೆ. ಗರ್ಭಕೋಶದಲ್ಲಿ ಬೆಳೆವ ಗ್ರಂಥಿ ಗಳಲ್ಲೆಲ್ಲ ತಂತುಗಂತಿಗಳೇ (ಫೈಬ್ರಾಯ್ಡ್ಸ್) ತೀರ ಸಾಮಾನ್ಯ. ಮಕ್ಕಳಿಲ್ಲದವರಲ್ಲೇ ಇವು ಹೆಚ್ಚು. ಏಡಿಗಂತಿಗಳ ಹಾಗೆ ಇವು ಮಾರಕವಲ್ಲ. ಆದರೂ ಸಾಕಷ್ಟು ಕೀಟಲೆ ಮಾಡುವುವು. ಗರ್ಭಕೋಶದ ಏಡಿಗಂತಿ ಮುಕ್ಕಾಲುಪಾಲು ಗರ್ಭಗೊರಳಲ್ಲೇ ಅಂಕುರಿಸುವುದು.

ಗಂತಿ, ಗಡ್ಡೆ, ಏಡಿಗಂತಿ ಏಳುವ ಲಕ್ಷಣಗಳು ಕಂಡ ಕೂಡಲೆ ವೈದ್ಯರಿಗೆ ತೋರುವು ದಾದರೆ, ಅವನ್ನು ಬುಡಮಟ್ಟ ಕಿತ್ತುಹಾಕುವುದೇ ಚೆನ್ನಾದ ನಿವಾರಣೋಪಾಯ. ಆದರೆ ಏನೋ ಗಂತಿ ಬೆಳೆದಿದೆಯೆಂದು ಅಸಡ್ಡೆ ತೋರುವವರೇ ಹೆಚ್ಚು ಮಂದಿ.

ಏಡಿಗಂತಿ ಬೆಳೆದುಬಿಟ್ಟ ಮೇಲೆ ತೆಗೆಯಲು ಕೈಹಾಕುವುದರಿಂದ ಪ್ರಾಣಾಪಾಯ ಏರುತ್ತದೆ. ವಿಕಿರಣ, ರೇಡಿಯಂ ಚಿಕಿತ್ಸೆಗಳಿಂದ ತತ್ಕಾಲಕ್ಕೆ ಶಮನ ಮಾಡಬಹುದಷ್ಟೆ. ಮುಟ್ಟಾಗುವ ಕಾಲಗಳ ಹಿಂದುಮುಂದು, ರಕ್ತಸುರಿತದಲ್ಲಿ ಏರುಪೇರು ಆದಾಗ ಕೂಡಲೇ ವೈದ್ಯಪರೀಕ್ಷೆಗೆ ಒಳಗಾಗಬೇಕು. ಏಡಿಗಂತಿ ಚೆನ್ನಾಗಿ ಬೆಳೆದು ಹರಡಿಕೊಳ್ಳುವ ತನಕ ನೋವೇ ತೋರದಿರುವುದು. ನೋವು ಕಂಡ ಮೇಲೆ ಏನೂ ಮಾಡಲು ಕೈಹಾಕಲಾಗದಷ್ಟು ಕೈ ಮೀರುತ್ತದೆ.

ಹುಟ್ಟಿನಿಂದಲೇ ಬರುವವನ್ನು ಬಿಟ್ಟರೆ, ಹೆರಿಗೆಯಲ್ಲೋ ಆಮೇಲೋ ಕಿಬ್ಬೊಟ್ಟೆಯ ತಳಹಾಸು ಹರಿದು ಹೋಗಿ ದುರ್ಬಲವಾಗಿ ಸಡಿಲಬಿದ್ದುದರಿಂದ ಗರ್ಭಕೋಶವೂ ಯೋನಿಯೂ ಜೋತುಬಿದ್ದು ಹೊರಕ್ಕೆ ಇಳಿಬೀಳುವುದೊಂದು ಬಾಣಂತನ ಕಳೆದವಳ ಫಜೀತಿ. ಹಿಂದೆ, ಗರ್ಭಕೋಶವನ್ನು ಎತ್ತಿಟ್ಟಿರಲು ಯೋನಿಸಂಕವನ್ನು (ಪೆಸರಿ) ಬಳಸುತ್ತಿದ್ದರು. ಆದರೀಗ ಸರಳ ಶಸ್ತ್ರಕ್ರಿಯೆಯಿಂದ ಚೆನ್ನಾಗಿ ಸರಿಪಡಿಸಬಹುದು. ಬಸಿರು, ಹೆರಿಗೆ, ಮೈಯಿಳಿತ, ಬಾಣಂತನಗಳಲ್ಲೇ ಹೆಂಗಸರ ಬಹುಪಾಲು ರೋಗಗಳು ಏಳುವುದರಿಂದ ಬಸುರಿಯ ಆರೈಕೆ ಚೆನ್ನಾಗಿದ್ದಲ್ಲಿ ಬಹಳ ರೋಗಗಳನ್ನು ತಡಗಟ್ಟಬಹುದು. ಬಸುರಿಯ ಇಡೀ ಮೈಯಲ್ಲಿ ಬದಲಾವಣೆಗಳಾಗುತ್ತವೆ. ಸಣ್ಣ ಪುಟ್ಟ ಇರಸುಮುರಸು ಗಳಲ್ಲೆ ಎಚ್ಚೆತ್ತು ಚೆನ್ನಾಗಿ ಪಾಲಿಸಬೇಕು. ಬಾಣಂತನದಲ್ಲಿ ಸಾಕಷ್ಟು ಬಿಡುವು, ಆರಾಮು, ಪುಷ್ಟಿಕರ ಆಹಾರ, ವ್ಯಾಯಾಮಕ್ಕಾಗಿ ಓಡಾಟಗಳಿರಬೇಕು.

ಮೂತ್ರನಾಳ, ಯೋನಿ ಹೊರಕ್ಕೆ ಕಂಡಿ ತೆರೆದುಕೊಂಡು ಮೋಟಾಗಿರುವುದರಿಂದ ಹೆಂಗಸಿನ ಜನನಾಂಗಗಳಿಗೆ ಸೋಂಕು ಹತ್ತುವುದು ಸರಾಗ, ಸುಲಭ. ಹೆರಿಗೆ, ಮೈ-ಇಳಿತಗಳಲ್ಲಂತೂ ಇಲ್ಲಿ ಸೋಂಕು ನೆಲೆಸುವುದು ಇನ್ನೂ ಸುಲಭ. ನಮ್ಮಲ್ಲಿ ಮಲ ಮೂತ್ರ ವಿಸರ್ಜನೆಯಾದ ಮೇಲೆ ನೀರಿಂದ ತೊಳೆದುಕೊಳ್ಳುವಾಗ ಗುದದ ಮೇಲಿನ ಮಲ ಯೋನಿ, ಮೂತ್ರನಾಳಗಳಿಗೂ ತಾಕುವುದರಿಂದ ಮೂತ್ರ ಮಂಡಲದಲ್ಲಿ ಸೋಂಕು ಹತ್ತುವುದು ಸಾಮಾನ್ಯ. ಮೇಹರೋಗಗಳು ಕೂಡ ಆ ಭಾಗಗಳಿಗೆ ಸರಾಗವಾಗಿ ತಾಕಿ ಅಂಟುವುವು. ಅಲ್ಲಿನ ಲೋಳ್ಪರೆಯ (ಮ್ಯುಕೋಸ್) ಮೂಲಕ ಪರಮಾ (ಗೊನೋರಿಯ) ರೋಗದ ಜೀವಾಣುಗಳು ತೂರಿ ನೆಲೆಯೂರಿಬಿಟ್ಟರೆ ಚಿಕಿತ್ಸೆಯಿಂದ ವಾಸಿ ಮಾಡುವುದು ತುಂಬಾ ಕಷ್ಟ. ಪರಮಾ ರೋಗ ಇಡೀ ಜನನಾಂಗಗಳಿಗೆ ಹರಡಿ ಹುಣ್ಣಾಗಿಸಿ ಕೀವು ಸುರಿಸುತ್ತ, ಕುರುಗಳಾಗಿ ಒಡೆದುಕೊಂಡು ಯೋನಿ, ಗರ್ಭಕೋಶ, ಗರ್ಭನಾಳ, ಅಂಡಾಶಯ ಎಲ್ಲವನ್ನೂ ಕೆಡಿಸುತ್ತದೆ. ಮಕ್ಕಳಾಗದಿರಲು ಪರಮಾ ರೋಗ ಬಲು ಸಾಮಾನ್ಯ ಕಾರಣ. ಕೆಲವೇಳೆ ಇಡೀ ಅಂಗ ಭಾಗಗಳನ್ನೇ ತೆಗೆದು ಹಾಕಬೇಕಾಗುವುದು. ಪರಮಾ ಹತ್ತಿದ ಹೆಂಗಸಿನ ಆರೋಗ್ಯವೂ ಕೆಟ್ಟಿರುತ್ತದೆ.

ಮೇಹರೋಗಗಳು ಹತ್ತದಂತೆ, ಹುಡುಗಿಯರು ಹೆಂಗಸರ ನೀತಿ ನಡವಳಿಕೆಗಳು, ರೋಗದ ತಿಳಿವಳಿಕೆ ಚೆನ್ನಾಗಿರಬೇಕು. ಇನ್ನೂ ಮುಖ್ಯವಾಗಿ ರೋಗ ಅಂಟಿದಕೂಡಲೆ


ಚಿಕಿತ್ಸೆ ಆಗುವುದಾದರೆ, ಒಬ್ಬರಿಂದೊಬ್ಬರಿಗೆ ಹರಡುವುದು ತಪ್ಪುವುದು. ಹೆಂಗಸಿನಲ್ಲಿ ಮೇಹರೋಗ ಇದ್ದರೂ ಹೊರಗಾಣದಿರಬಹುದು, ನಿಧಾನವಾಗಿ ಕಾಣಿಸಿಕೊಳ್ಳಬಹುದು. ಹೊರಗೆ ತೋರಿದರೂ ರೋಗದ ಲಕ್ಷಣಗಳು ಜೋರಾಗಿರವು. ಮೇಹರೋಗ ಪರಿಣತರಿಂದ ಬೇಗನೆ ರೋಗದ ಪತ್ತೆಯಾಗಿ ಸೋಂಕಿಗೆ ಈಡಾದ ಎಲ್ಲರ ಚಿಕಿತ್ಸೆ ಆಗಬೇಕು. ಹೆಂಗಸರಲ್ಲಿ ಪರಮಾ ರೋಗ ಜನನಾಂಗಗಳ ಆಳಕ್ಕೆ ನುಗ್ಗಿ ಹರಡಿ ಹಾಳುಗೆಡವಲು ಕೆಲವು ವಾರಗಳೇ ಹಿಡಿಯುವುದರಿಂದ ಎಳೆಯದರಲ್ಲೇ ಚಿಕಿತ್ಸೆ ಕೈಗೊಳ್ಳುವುದನ್ನು ಎಷ್ಟು ಒತ್ತಿ ಹೇಳಿದರೂ ಸಾಲದು.

ಭಾರವಾದ ನೀರು ಮತ್ತು ಅಣುಕಾರಕಗಳು


ವಿ. ಚೆಲುವರಾಜ ಅಯ್ಯಂಗಾರ್

ನಾವು ಬಳಸುವ ನೀರು ಸಂಯುಕ್ತವಸ್ತು. ಇದು ಜಲಜನಕ ಮತ್ತು ಆಮ್ಲಜನಕಗಳ ಸಂಯೋಗದಿಂದ ಉಂಟಾಗಿರುತ್ತದೆ. ಎರಡು ಜಲಜನಕದ ಅಣುಗಳು ಒಂದು ಆಮ್ಲಜನಕದ ಅಣುವಿನೊಡನೆ ಸೇರಿ ನೀರಾಗಿರುತ್ತದೆ (H_2O). ಇಲ್ಲಿನ ಜಲಜನಕವು ಸಾಧಾರಣವಾದದ್ದು. ಇದನ್ನು H ಅಥವಾ $H^1{}_1$ ಎಂದು ಕರೆಯುತ್ತಾರೆ.

ಜಲಜನಕದ ಅಣುಕೇಂದ್ರದಲ್ಲಿ ಒಂದು ಪ್ರೋಟಾನ್ ಇರುತ್ತದೆ. (ಪ್ರೋಟಾನ್ ಎಂಬುದು ಧನವಿದ್ಯುತ್ತುಳ್ಳ ಮೂಲಕಣ). ಇದರ ಸುತ್ತ ಎಲೆಕ್ಟ್ರಾನ್ ಎಂಬ ಋಣ ವಿದ್ಯುತ್ತಿನ ಕಣವು ಸುತ್ತುತ್ತಿರುತ್ತದೆ. ಜಲಜನಕದ ಅಣು ಸಂಖ್ಯೆ 1 ಮತ್ತು ಅಣು ತೂಕ 1. (ಅಣುಸಂಖ್ಯೆ ಎಂಬುದು ಅಣುಕೇಂದ್ರದ ಪ್ರೋಟಾನ್ ಸಂಖ್ಯೆಯನ್ನು ಸೂಚಿಸುತ್ತದೆ. ಅಣು ತೂಕವೆಂಬುದು ಕೇಂದ್ರದಲ್ಲಿನ ಪ್ರೋಟಾನ್ ಮತ್ತು ನ್ಯೂಟ್ರಾನ್‌ಗಳ ಸಂಖ್ಯೆಯನ್ನು ಸೂಚಿಸುತ್ತದೆ. ನ್ಯೂಟ್ರಾನ್ ಎಂಬುದು ವಿದ್ಯುತ್ತಿಲ್ಲದ ಮೂಲಕಣ. ಇದರ ತೂಕವು ಪ್ರೋಟಾನ್ ತೂಕಕ್ಕೆ ಸಮ.)



ಸಾಧಾರಣ ಜಲಜನಕ



ಭಾರವಾದ ಜಲಜನಕ

ಮತ್ತೊಂದು ಬಗೆಯ ಜಲಜನಕವು ವಿಜ್ಞಾನಿಗಳ ಗಮನಕ್ಕೆ ಬಂದಿದೆ. ಇದೇ 'ಡ್ಯೂಟೀರಿಯಂ' ಅಥವ 'ಭಾರವಾದ ಜಲಜನಕ'. ಇದು ಜಲಜನಕದ ಐಸೊಟೋಪ್ ಅಥವ ಸಮಸ್ಥಾನೀಯ — ಅಂದರೆ ಅದೇ ಅಣು ಸಂಖ್ಯೆ ಮತ್ತು ಬೇರೆ ಅಣುತೂಕವುಳ್ಳದ್ದು. ಇದರ ಕೇಂದ್ರದಲ್ಲಿ ಒಂದು ಪ್ರೋಟಾನ್ ಮತ್ತು ಒಂದು ನ್ಯೂಟ್ರಾನ್ ಸಹ ಇರುತ್ತವೆ. ಇದರ ಅಣುಸಂಖ್ಯೆ 1 ಮತ್ತು ಅಣುತೂಕ 2. 1931 ರಲ್ಲಿ ಹೆಚ್. ಸಿ. ಉರೇ ಎಂಬವನು ಇದನ್ನು ಕಂಡು ಹಿಡಿದುದಾಗಿ ಘೋಷಿಸಿದನು.

ಅವನು 4000 ಮಿಲಿ ಲೀಟರ್ ದ್ರವ ಜಲಜನಕವನ್ನು ಸುಮಾರು 1 ಮಿಲಿ ಲೀಟರ್‌ಗೆ ಭಟ್ಟಿ ಇಳಿಸಿದಾಗ ಅದರ ರೋಹಿತ ಮತ್ತು ದ್ಯುತಿ ಗುಣಗಳು ಬೇರ್ಪಟ್ಟಿದ್ದವೆಂದು ತಿಳಿದು ಬಂದಿತು. ಈ ವಸ್ತುವಿಗೆ 'ಡಾಯಿಟೀರಿಯಂ' ಎಂದು ಹೆಸರಾಯಿತು. ಇದರ ಆಕ್ಸೈಡಿಗೆ 'ಭಾರವಾದ ನೀರೆಂದು' ಕರೆಯಲಾಯಿತು. ಡಾಯಿಟೀರಿಯಂನ್ನು H^2_1 ಅಥವ D ಎಂದು ಸೂಚಿಸುವುದು ವಾಡಿಕೆ. ಇದು ಸಾಧಾರಣ ಜಲಜನಕದ ಸುಮಾರು ಎರಡರಷ್ಟು ತೂಕ ಹೊಂದಿರುತ್ತದೆ.

ಭಾರವಾದ ನೀರು


ಇದು ಡಾಯಿಟೀರಿಯಂ ಮತ್ತು ಆಮ್ಲಜನಕಗಳ ಸಂಯೋಗದಿಂದ ಉತ್ಪತ್ತಿಯಾದದ್ದು. ಇದು ಸಾಧಾರಣ ನೀರಿಗಿಂತ ಸುಮಾರು ಶೇಕಡ 10 ರಷ್ಟು ಹೆಚ್ಚು ತೂಕವುಳ್ಳದ್ದು. ನಾವು ಪ್ರತಿದಿನ ಬಳಸುವ ನೀರಿನಲ್ಲಿ ಇದು ಅತ್ಯಲ್ಪ ಪ್ರಮಾಣದಲ್ಲಿ — ಅಂದರೆ ಸುಮಾರು ಶೇಕಡ .015 ರಷ್ಟು ಮಾತ್ರ — ಬೆರೆತಿರುತ್ತದೆ. ಸಮುದ್ರದ ನೀರಿನಲ್ಲಾದರೋ ಇದರ ಪ್ರಮಾಣವು ಸ್ವಲ್ಪ ಹೆಚ್ಚಿರುತ್ತದೆ. ಸಾಧಾರಣ ನೀರಿಗೂ ಭಾರವಾದ ನೀರಿಗೂ ಇರುವ ಹಲವು ಭೌತವ್ಯತ್ಯಾಸಗಳೆಂದರೆ — ಸಾಂದ್ರತೆ. ಕುದಿಯುವ ಬಿಂದು. ಮತ್ತು ಹೆಪ್ಪುಗಟ್ಟುವ ಬಿಂದುಗಳಲ್ಲಿ. ಇವುಗಳನ್ನು ಕೆಳಗಿನ ಪಟ್ಟಿಯಿಂದ ಕಾಣಬಹುದು.

	ಸಾಧಾರಣ ನೀರು	ಭಾರವಾದ ನೀರು
ಸಾಂದ್ರತೆ	1	1.1079 ಗ್ರಾಂ/C.C.
ಕುದಿಯುವ ಬಿಂದು	100°C.	101.42°C
ಹೆಪ್ಪುಗಟ್ಟುವ ಬಿಂದು	0°C.	3.820°C

ಅಣುವಿಭಜನೆಯು (Atomic fission) ಕಂಡುಹಿಡಿಯಲ್ಪಡುವವರೆಗೆ ಭಾರವಾದ ನೀರಿಗೆ ಅಷ್ಟಾಗಿ ಪ್ರಾಮುಖ್ಯತೆ ದೊರಕಲಿಲ್ಲ. ನಂತರ ಇದರ ಉಪಯೋಗವು ಬೆಳಕಿಗೆ ಬಂದಿತು.

ಅಣುವಿಭಜನೆ


ಅಣುವಿಭಜನೆಯೆಂಬುದು ಯುರೇನಿಯಂ 235 (U 235) ಎಂಬ ಸಮಸ್ಥಾನೀಯದೊಡನೆ ನಡೆಸಬಹುದಾದ ಒಂದು ಮುಖ್ಯ ಕ್ರಿಯೆ. ಸಾಧಾರಣ ಯುರೇನಿಯಂನಲ್ಲಿ (U 238) ಈ ಸಮಸ್ಥಾನೀಯವು ಬಹು ಅಲ್ಪ ಪ್ರಮಾಣದಲ್ಲಿ— ಅಂದರೆ ಶೇಕಡ 0.7 ರಷ್ಟು ಮಾತ್ರ ಬೆರೆತಿರುತ್ತದೆ. ಯುರೇನಿಯಂ 235 ಮಂದವಾದ ನ್ಯೂಟ್ರಾನ್‌ಗಳಿಂದ ಬಡಿದಾಗ ಅದು ಇಬ್ಭಾಗವಾಗಿ ಸೀಳಿ ಅಪಾರ ಶಕ್ತಿಯು ಹೊರಬೀಳುತ್ತದೆ. ಇದಕ್ಕೆ 'ಅಣುವಿಭಜನೆ' ಎಂದು ಹೆಸರು. ಈ ಕ್ರಿಯೆಯಲ್ಲಿ ಮತ್ತೆ ಮೂರು ನ್ಯೂಟ್ರಾನ್‌ಗಳು ಬಿಡುಗಡೆ ಹೊಂದುವುದರಿಂದ ಶ್ರೇಣಿ ಕ್ರಿಯೆಯುಂಟಾಗಿ ಅಪಾರ ಶಕ್ತಿಯು ಹೊರಬೀಳುತ್ತದೆ. ಇದೇ ಅಣುಶಕ್ತಿ. ಇದನ್ನು ಹತೋಟಿಗೆ



ಅಣು ವಿಭಜನೆ

ತರದಿಪ್ಪಲ್ಲಿ ಈ ಶಕ್ತಿಯು ಕ್ಷಣಮಾತ್ರದಲ್ಲಿ ಹೊರಬಿದ್ದು ಸ್ಫೋಟನೆಗೆ ಕಾರಣವಾಗುತ್ತದೆ (ಅಣುಬಾಂಬಿನಲ್ಲಿದ್ದಂತೆ). ಈ ಕ್ರಿಯೆಯನ್ನು ಹತೋಟಿಯಲ್ಲಿರಿಸಿದರೆ ಶಕ್ತಿಯ ಬಿಡುಗಡೆಯನ್ನು ನಿಯಂತ್ರಿಸಿ ಅದನ್ನು ಉಪಯುಕ್ತ ಬಳಕೆಗಳಿಗೆ ತಂದುಕೊಳ್ಳಬಹುದು. ಇದನ್ನು ನಡೆಸಿಕೊಡುವ ಸಾಧನಗಳಿಗೆ ಅಣುಕಾರಕ (Atomic reactor) ಗಳೆಂದು ಹೆಸರು. ಯುರೇನಿಯಂ ಎಂಬುದೇ ಇವರ ಇಂಧನ. ಅಣು ಶಕ್ತಿಯಿಂದ ವಿದ್ಯುತ್ತನ್ನು ಉತ್ಪಾದಿಸಬಹುದು. ಇಂತಹ ಕೇಂದ್ರಗಳಿಗೆ ಅಣು ವಿದ್ಯುತ್ ಕೇಂದ್ರಗಳೆಂದು ಹೆಸರು. ತಾರಾಪುರ, ಕೋಟ ಮತ್ತು ಕಲ್ಪಾಕಂಗಳಲ್ಲಿ ಇಂತಹ ಅಣುವಿದ್ಯುತ್ ಕೇಂದ್ರಗಳು ರೂಪುಗೊಳ್ಳುತ್ತಿವೆ.

ವಿಭಜನೆಯಿಂದ ಬರುವ ನ್ಯೂಟ್ರಾನ್‌ಗಳು ಹೆಚ್ಚು ವೇಗ ಉಳ್ಳವು. ಅವು U 235 ಕ್ಕೆ ಸಿಲುಕದಂತೆ ತಪ್ಪಿಸಿಕೊಳ್ಳಬಹುದು. ಅಲ್ಲದೆ U 238 ರಿಂದ



ಅಣುಕಾರಕ

ಸೆಳೆಯಲ್ಪಡಬಲ್ಲವು. ಆದ್ದರಿಂದ ನ್ಯೂಟ್ರಾನ್‌ಗಳನ್ನು ನಿಧಾನಗೊಳಿಸುವುದು ಅವಶ್ಯಕ. ಇದನ್ನು ನಡೆಸಿ ಕೊಡುವ ವಸ್ತುಗಳಿಗೆ 'ಮಂದಕಾರಕ' ಗಳೆಂದು ಹೆಸರು (Moderators). ಗ್ರಾಫೈಟ್ ಮತ್ತು ಭಾರವಾದ ನೀರು ಮಂದಕಾರಕಗಳು. ಇವು ನ್ಯೂಟ್ರಾನ್‌ಗಳನ್ನು ನಿಧಾನಿಸಬೇಕೇ ವಿನಃ ಬಹುವಾಗಿ ಹೀರಿ ಬಿಡಬಾರದು.

1942 ರಲ್ಲಿ ಎನ್ರಿಕೋ ಫರ್ಮಿ ಎಂಬುವನು ತನ್ನ ಸಂಗಡಿಗರೊಡನೆ ರಚಿಸಿದ ಪ್ರಥಮ ಅಣುಕಾರಕದಲ್ಲಿ ಗ್ರಾಫೈಟನ್ನು ಮಂದಕಾರಕವಾಗಿ ಉಪಯೋಗಿಸಲಾಯಿತು. ನಂತರ ಇತರ ಹಲವು ವಸ್ತುಗಳು ಬಳಕೆಗೆ ಬಂದವು. ಈ ಪೈಕಿ ಸಾಧಾರಣ ನೀರು. ಭಾರವಾದ ನೀರು ಮತ್ತು ಬೆರಿಲಿಯಂ ಎಂಬವು ಹಲವು.

ಮಂದಕಾರಕದ ಆಯ್ಕೆ

ಹಲವು ಅಣುಕಾರಕಗಳು ಭಾರವಾದ ನೀರನ್ನು ಮಂದಕಾರಕವಾಗಿ ಉಪಯೋಗಿಸುತ್ತವೆ. ಮತ್ತೆ ಹಲವು ಸಾಧಾರಣ ನೀರನ್ನು ಬಳಸುವುದುಂಟು. ಇಂಟರ್ ನ್ಯಾಷನಲ್ ಜನರಲ್ ಎಲೆಕ್ಟ್ರಿಕ್ ಕಂಪೆನಿಯವರಿಂದ ತಯಾರಾಗುತ್ತಿರುವ ತಾರಾಪುರದ ಅಣು ವಿದ್ಯುತ್ ಕೇಂದ್ರವು ಸಾಧಾರಣ ನೀರನ್ನು ಮಂದಕಾರಕವಾಗಿ ಬಳಸುತ್ತದೆ. ಕೋಟ ಮತ್ತು ಕಲ್ಪಾಕಂ ಯೋಜನೆಗಳಿಗಾದರೋ ಭಾರವಾದ ನೀರು ಬಳಕೆಗೆ ಬರಲಿದೆ. ಈ ಆಯ್ಕೆಯು ಇಂಧನವನ್ನು ಅನುಸರಿಸಿದುದು.

ಅಣುಕಾರಕದ ಇಂಧನದಲ್ಲಿ U 235 ರ ಅಂಶ ಹೆಚ್ಚಿದ್ದಷ್ಟು ನ್ಯೂಟ್ರಾನಿನ್ ಬಿಡುಗಡೆಯು ಹೆಚ್ಚುತ್ತದೆ. ಆಗ ಸಾಧಾರಣ ನೀರನ್ನು ಬಳಸಬಹುದು. ಸ್ವಾಭಾವಿಕ ಯುರೇನಿಯಂನ್ನು ಉಪಯೋಗಿಸುವಾಗ ನ್ಯೂಟ್ರಾನ್‌ಗಳು ಅಲ್ಪವಾಗಿರುವುದರಿಂದ ಭಾರವಾದ ನೀರನ್ನು ಬಳಸುವುದು ಉತ್ತಮ. ಭಾರವಾದ ನೀರು ಹೆಚ್ಚು ನ್ಯೂಟ್ರಾನ್ ಗಳನ್ನು ಹೀರುವುದಿಲ್ಲ. ಸಾಧಾರಣ ನೀರಾದರೋ ಹೆಚ್ಚು ಹೀರುತ್ತದೆ. ಆದ್ದರಿಂದ ಸಾಧಾರಣ ಯುರೇನಿಯಂನೊಡನೆ ವಿಭಜನೆಯು ಸ್ವತಃ ಸಿದ್ಧತೆ ಪಡೆಯಬೇಕಾದರೆ ಭಾರವಾದ ನೀರನ್ನು ಬಳಸಬೇಕು.

ತಾರಾಪುರದಲ್ಲಿ ಉಪಯೋಗಿಸಲ್ಪಡುವ ಯುರೇನಿಯಂ ಸಮೃದ್ಧಿತವಾದದ್ದು (Enriched); ಅಂದರೆ ಇದರಲ್ಲಿ U 235 ರ ಅಂಶ ಹೆಚ್ಚಿರುತ್ತದೆ. ಇದನ್ನು ಅಮೆರಿಕದಿಂದ ಆಮದು ಮಾಡಿಕೊಳ್ಳಬೇಕು. ನಮ್ಮಲ್ಲಿ ಯುರೇನಿಯಂನ್ನು ಸಮೃದ್ಧಿಗೊಳಿಸುವ ಅನುಕೂಲತೆಗಳು ಸಾಲದು. ಅಲ್ಲದೆ ನಮ್ಮ ದೇಶದ ಯುರೇನಿಯಂ ಸಂಪತ್ತು ಅಲ್ಪವಾದದ್ದು. ಆದ್ದರಿಂದ ಮುಂದೆ ಬರಲಿರುವ ಅಣು ವಿದ್ಯುತ್ ಯೋಜನೆಗಳು ಸ್ವಾಭಾವಿಕ ಯುರೇನಿಯಂಅನ್ನೇ ಬಳಸುವಂತಿರಬೇಕು. ಇದಕ್ಕೆ ಭಾರವಾದ ನೀರಿನ

ಮುಂದ ಕರಣವೇ ಅನುಕೂಲವಾಗಿ ಕಂಡುಬಂದಿದೆ. ಫ್ರಾಂಚೆಯಲ್ಲಿ ನಡೆಸಿದ ಸಂಶೋಧನೆಗಳು ಭಾರವಾದ ನೀರನ್ನೇ ರಾಜಾಸ್ಥಾನ ಮತ್ತು ಮದರಾಸಿನ ಅಣುಕಾರಕಗಳಿಗೆ ಸಿಫಾರಸು ಮಾಡಿವೆ.

ಇತರ ಉಪಯೋಗಗಳು

ಭಾರವಾದ ನೀರು ಇತರ ಕ್ಷೇತ್ರಗಳಲ್ಲಿಯೂ ಉಪಯೋಗ ಪಡೆದಿದೆ. ಇದರ ಅಂಗವಸ್ತುವಾದ ಡಾಯಿಟೀರಿಯಂ ಎಂಬುದು 'ಸಂಯೋಜನೆಯ ಕಾರಕ' ಗಳಲ್ಲಿಯೂ (Fusion reactors) ಪ್ರಮುಖ ಪಾತ್ರ ವಹಿಸಲಿದೆ. ಇವು ಜಗತ್ತಿನ ಶಕ್ತಿದಾಹಕ್ಕೆ ಬಹುಮಟ್ಟಿಗೆ ಉತ್ತರಕೊಡಬಲ್ಲವು. ಭಾರವಾದ ನೀರಿನಿಂದ ಡಾಯಿಟೀರಿಯಂ ಉಳ್ಳ ವಸ್ತುಗಳ ಕ್ರಿಯಾ ವಿವರಗಳನ್ನು ತಿಳಿಯಬಹುದು. ಮತ್ತು ಆಲ್ಕೋಹಾಲುಗಳ ಕ್ರಿಯಾ ದರವನ್ನು ಹೆಚ್ಚಿಸುವ ಹತೋಟಿ ಕ್ರಿಯೆಗಳನ್ನು ಗುರ್ತಿಸಬಹುದು. ಭಾರವಾದ ನೀರು ಉಪಯುಕ್ತಕರವಾದ ಪರಿಶೋಧನಾ ಸಾಧಕ. ಅಲ್ಲದೆ ಲಿಥಿಯಂ ಮತ್ತು ಬೆರಿಲಿಯಂಗಳ ಮೇಲೆ ಡಾಯಿಟ್ರಾನ್‌ಗಳ ಬಡಿತದಿಂದ ಉಂಟಾಗುವ ನ್ಯೂಟ್ರಾನ್ ಕಿರಣಗಳು ಕೃತಕ ವಿಭಜನೆಯ (Artifical disintegration) ವೀಕ್ಷಣೆಗೆ ಬಹು ಉಪಯುಕ್ತವಾದವು.

ಉತ್ಪತ್ತಿ

ಭಾರವಾದ ನೀರಿನ ಉತ್ಪತ್ತಿ ಬಹು ಖರ್ಚಿನದು. ಅಣುಕಾರಕ ಕೇಂದ್ರದ ಶೇಕಡ 18 ರಷ್ಟು ವೆಚ್ಚವು ಭಾರವಾದ ನೀರೊಂದಕ್ಕೇ ತಗಲುತ್ತದೆಯೆಂದು ತಿಳಿದು ಬಂದಿದೆ. ಇದರ ಉತ್ಪಾದನೆಗೆ ನಾಲ್ಕು ಮುಖ್ಯ ವಿಧಾನಗಳಿವೆ: 1. ವಿದ್ಯುದ್ವಿಭಜನೆ 2. ನೀರನ್ನು ಭಟ್ಟಿ ಇಳಿಸುವಿಕೆ. 3. ಜಲಜನಕದ ಭಟ್ಟಿ ಇಳಿಸುವಿಕೆ ಮತ್ತು 4. ರಾಸಾಯನಿಕ ಬದಲಾವಣೆಯ ವಿಧಾನಗಳು.

ನೀರನ್ನು ವಿದ್ಯುತ್ತಿನಿಂದ ವಿಭಜಿಸಿದರೆ ಜಲಜನಕ ಮತ್ತು ಆಮ್ಲಜನಕಗಳು ಬರುತ್ತವೆಯಷ್ಟೆ. ಅದೇ ರೀತಿ ಭಾರವಾದ ನೀರನ್ನು ವಿಭಜಿಸಿದರೆ ಡಾಯಿಟೀರಿಯಂ ಮತ್ತು ಆಮ್ಲಜನಕಗಳು ಬರುತ್ತವೆ. ಸಾಧಾರಣ ಮತ್ತು ಭಾರವಾದ ನೀರಿನ ಮಿಶ್ರಣವನ್ನು ವಿಭಜಿಸಿದರೆ ಜಲಜನಕ ಮತ್ತು ಆಮ್ಲಜನಕಗಳು ಬಿಡುಗಡೆ ಹೊಂದಿ ಭಾರವಾದ ನೀರಿನ ಅಂಶವು ಹೆಚ್ಚುತ್ತದೆ. ಈ ಕ್ರಿಯೆಯನ್ನು ವಿವಿಧ ಹಂತಗಳಲ್ಲಿ ನಡೆಸಿದ್ದೇ ಆದರೆ ಸಾಕಷ್ಟು ಭಾರವಾದ ನೀರನ್ನು ಪಡೆಯಬಹುದು. ಈ ಕ್ರಮವು ಹೆಚ್ಚು ವೆಚ್ಚಕರ, ಏಕೆಂದರೆ ಹೆಚ್ಚು ಶ್ರಮದಿಂದ ಬಹು ಅಲ್ಪಪ್ರಮಾಣದ ಭಾರವಾದ ನೀರನ್ನು ಮಾತ್ರ ಪಡೆಯಬಹುದು.

ಭಟ್ಟಿ ಇಳಿಸುವಿಕೆಯ ವಿಧಾನದಲ್ಲಿ ಸಾಧಾರಣ ಮತ್ತು ಭಾರವಾದ ನೀರನ್ನು ಕಾಯಿಸಿದಾಗ, ಸಾಧಾರಣ ನೀರು ಹೆಚ್ಚು ಹೆಚ್ಚಾಗಿ ಆವಿಯಾಗಿ ಹೋಗುತ್ತದೆ.

ಹಿಂದೆ ಭಾರವಾದ ನೀರು ಉಳಿದುಕೊಳ್ಳುತ್ತದೆ. ಈ ಕ್ರಿಯೆಯನ್ನು 'ಭಿನ್ನರೀತಿಯ ಭಟ್ಟಿ ಇಳಿಸುವಿಕೆ' ಯೆಂಬ (Fractional distillation) ಮತ್ತೊಂದು ಕ್ರಮದಿಂದ ನಡೆಸಿದಲ್ಲಿ ಹೆಚ್ಚು ಪರಿಣಾಮಕಾರಿಯಾಗಬಲ್ಲದು.

ಜಲಜನಕ ಮತ್ತು ಡಾಯಿಟೀರಿಯಂ ದ್ರವಗಳ ಮಿಶ್ರಣವನ್ನೂ ಸಹ ಇದೇ ರೀತಿ ಭಟ್ಟಿ ಇಳಿಸಬಹುದು.

ರಾಸಾಯನಿಕ ಬದಲಾವಣೆಯ ವಿಧಾನಗಳಲ್ಲಾದರೋ ಜಲಜನಕವನ್ನು ಹೊಂದಿರುವ ಎರಡು ವಸ್ತುಗಳು ಅವಶ್ಯಕ. ಉದಾಹರಣೆ. ನೀರು ಮತ್ತು ಹೈಡ್ರೋಜನ್ ಸಲ್ಫೈಡ್. ಇದರಲ್ಲಿ 1 ಕಿ.ಗ್ರಾಂ ಭಾರವಾದ ನೀರನ್ನು ಪಡೆಯಲು 30.000 ಲೀಟರ್ ವಸ್ತುವನ್ನು ಒದಗಿಸಬೇಕಾಗುತ್ತದೆ.

ಭಾರತದಲ್ಲಿ ನಂಗಲ್ ಎಂಬಲ್ಲಿ ಭಾರವಾದ ನೀರಿನ ತಯಾರಿಕೆಯ ಕೇಂದ್ರವು ಸ್ಥಾಪಿತವಾಗಿದೆ. ಡಾ|| ಹೆಚ್. ಜೆ. ಭಾಭಾ ಅವರ ನೇತೃತ್ವದಲ್ಲಿ ಈ ನಿರ್ಣಯವು ರೂಪುಗೊಳಿಸಲ್ಪಟ್ಟಿತು. ಇದು ವರ್ಷಕ್ಕೆ 14,500 ಕಿ.ಗ್ರಾಂ ಭಾರವಾದ ನೀರನ್ನು ಉತ್ಪಾದಿಸಬಲ್ಲದು. 1962ರ ಆಗಸ್ಟಿನಲ್ಲಿ ಇದು ಕೆಲಸ ಮಾಡಲು ಪ್ರಾರಂಭಿಸಿತು. ಇಲ್ಲಿನ ವಿಧಾನವೆಂದರೆ ವಿದ್ಯುದ್ವಿಭಜನೆ ಮತ್ತು ಜಲಜನಕದ ಭಟ್ಟಿ ಇಳಿಸುವಿಕೆ. ಇದರಿಂದ ತಯಾರಿಸಲ್ಪಟ್ಟ ಭಾರವಾದ ನೀರು ಭಾರತದ ಸಿರಸ್ (CIRUS) ಮತ್ತು ಜರ್ಲಿನ (ZERLINA) ಎಂಬ ಅಣುಕಾರಕಗಳಿಗೆ ಒದಗಿಸಲ್ಪಟ್ಟಿದೆ.

ಭಾರವಾದ ನೀರಿನ ನಿಖರತೆಯು ಅತಿ ಹೆಚ್ಚಿನ ಮಟ್ಟದ್ದಾಗಿರಬೇಕು. ಇದು ಶೇಕಡ 99.8 ಕ್ಕಿಂತ ಕೆಳಗಿಳಿದರೆ ಇದರ ಕ್ರಿಯಾ ಸಾಮರ್ಥ್ಯವು ಕೆಡುತ್ತದೆ. ದುರ್ಬಲಗೊಂಡ ಇಂತಹ ಭಾರವಾದ ನೀರನ್ನು ಪುನಃ ಬಲಗೊಳಿಸುವುದು ಅವಶ್ಯಕ. ಟ್ರಾಂಬೆಯಲ್ಲಿ ಇಂತಹ ಬಲಗೊಳಿಸುವ ಯಂತ್ರಗಳಿವೆ.

ಭಾರತವನ್ನು ಸೇರಿ ಪ್ರಪಂಚದಲ್ಲಿ ಐದು ಭಾರವಾದ ನೀರಿನ ದೊಡ್ಡ ದೊಡ್ಡ ತಯಾರಿಕಾ ಕೇಂದ್ರಗಳಿವೆ. ನಮ್ಮ ದೇಶದಲ್ಲಿ ಇದರ ತಯಾರಿಕೆಯನ್ನು ವರ್ಷಕ್ಕೆ 100 ಟನ್‌ಗಳಷ್ಟು ಹೆಚ್ಚಿಸುವ ಯೋಜನೆಯಿದೆ. ಆಗ ನಮ್ಮ ದೇಶವು ಅಣುಶಕ್ತಿಯ ಬಳಕೆಯಲ್ಲಿ ಮೈಲಿಗಲ್ಲೊಂದನ್ನು ಸ್ಥಾಪಿಸಿದಂತಾಗುತ್ತದೆ.

ಶ್ರೀರಂಗರ ಪ್ರಕೃತಿ-ಪುರುಷ

ಎಸ್. ಎಲ್. ಭೈರಪ್ಪ

ಶ್ರೀರಂಗರ ಈ ಕಾದಂಬರಿಯು 'ಪ್ರಕೃತಿ' 'ಪುರುಷ' ಎಂಬ ಎರಡು ಹೆಸರುಗಳಿಂದ ಎರಡು ಭಾಗಗಳಾಗಿ ಪ್ರಕಟವಾಗಿದ್ದರೂ ಇವೆರಡೂ ಒಂದೇ ಕಥೆಯ ಒಂದೇ ಕಾದಂಬರಿ.

ಕನ್ನಡದ ಉತ್ತಮ ಕಾದಂಬರಿಗಳಲ್ಲಿ ಇದಕ್ಕೆ ಇರುವ ವಿಶಿಷ್ಟ ಯೋಗ್ಯತೆಯು ಅದರ ಬೌದ್ಧಿಕ ಗುಣದಿಂದ ಬಂದುದೆನಿಸುತ್ತದೆ. ಸಾಂಖ್ಯದಾರ್ಶನಿಕರಿಂದ ಹೆಚ್ಚು ನಿಖರಗೊಂಡು. ಸ್ಪಷ್ಟವಾಗಿ ಮುಂದಿನ ಭಾರತೀಯ ದಾರ್ಶನಿಕ ವಿಚಾರಗಳಲ್ಲೆಲ್ಲಾ ಬೆರೆತು ಹೋಗಿರುವ ಪ್ರಕೃತಿ-ಪುರುಷ ಕಲ್ಪನೆಯು ಸಾಂಖ್ಯಮತವು ಸಿದ್ಧಾಂತದ ಆಕಾರ ತಳೆಯುವ ಮೊದಲೂ ಬೀಜರೂಪವಾಗಿ ಇತ್ತು. ಒಂದು ದೃಷ್ಟಿಯಿಂದ ನೋಡಿದರೆ ಇಡೀ ಭಾರತೀಯ ದರ್ಶನಶಾಸ್ತ್ರದ ಮೂಲ ಸಮಸ್ಯೆಯೇ ಈ ಎರಡು ಕಲ್ಪನೆಗಳಲ್ಲಿ ವ್ಯಕ್ತವಾಗಿದೆ. ಶ್ರೀರಂಗರ 'ಪ್ರಕೃತಿ' ಯ ಶಿರೋನಾಮೆಯ ಕೆಳಗೆ ಉದ್ಧರಿಸುವ

> ಮೂಲಪ್ರಕೃತಿರವಿಕೃತಿರ್ಮಹದಾದ್ಯಾಃ ಪ್ರಕೃತಿ ವಿಕೃತಯಃ ಸಪ್ತ।
> ಷೋಡಶಕಸ್ತು ವಿಕಾರೋ ನ ಪ್ರಕೃತಿರ್ನವಿಕೃತಿಃ ಪುರುಷಃ॥

ಮತ್ತು 'ಪುರುಷ' ದ ಶಿರೋನಾಮೆಯ ಕೆಳಗೆ ಉದ್ಧರಿಸುವ

> ರಂಗಸ್ಯ ದರ್ಶಯಿತ್ವಾ ನಿವರ್ತತೇ ನರ್ತಕೀ ಯಥಾ ನೃತ್ಯಾತ್।
> ಪುರುಷಸ್ಯ ತಥಾತ್ಮಾನಂ ಪ್ರಕಾಶ್ಯ ವಿನಿವರ್ತತೇ ಪ್ರಕೃತಿಃ॥

ಎಂಬ ಸಾಂಖ್ಯಕಾರಿಕೆಯ ಎರಡು ಶ್ಲೋಕಗಳು ಕಾದಂಬರಿಯ ಮೂಲ ಸಮಸ್ಯೆಯನ್ನು ಮೊದಲೇ ಸೂಚಿಸುತ್ತವೆ. ನ ಪ್ರಕೃತಿಃ ನ ವಿಕೃತಿಃ ಪುರುಷಃ : ಪುರುಷನು ಮೂಲ ಪ್ರಕೃತಿಯೂ ಅಲ್ಲ, ಅದರ ಪರಿಣಾಮ ರೂಪವೂ ಅಲ್ಲ; ನಿರ್ಲಿಪ್ತತೆಯೇ ಅವನ ಉಚ್ಚಸ್ಥಿತಿ. ಪ್ರಕೃತಿಯೂ ಅಷ್ಟೆ. ಪುರುಷನಿಗೆ ಅನುಭವವನ್ನು ನೀಡಿ ಆ ಮೂಲಕ ಅವನ ಗುಣವನ್ನು ಅವನಿಗೇ ಮನಗಾಣಿಸಿದ ಮೇಲೆ ತಾನೇ ನಿರ್ಗಮಿಸುತ್ತಾಳೆ; ಅವನ ತಂಟೆಗೆ ಬರುವುದಿಲ್ಲ.

ಒಂದೇ ಪರಿಸರದಲ್ಲಿ ಜೀವಿಸಿದರೂ ಪ್ರತಿಯೊಂದು ವ್ಯಕ್ತಿಯ ಅನುಭವವೂ ಸುಖದುಃಖಾದಿಗಳೂ ಬೇರೆ ಬೇರೆಯಾಗಿರುತ್ತವೆ. ಜೀವನ ಪ್ರವಾಹದಲ್ಲಿ ಒಂದೊಂದು ವ್ಯಕ್ತಿಯೂ ಕೇವಲ ಒಂದೊಂದು ಕಣ. ತನ್ನ ಸೀಮಿತ ಅನುಭವಕ್ಕೆ ದೊರೆಯುವಷ್ಟನ್ನು

ಮಾತ್ರ. ತನ್ನ ಸೀಮಿತ ವ್ಯಕ್ತಿಗತ ಸುಖದುಃಖಗಳಿಂದ, ದೂಷಿತ ದೃಷ್ಟಿಕೋಣದಿಂದ ಕಂಡು 'ನಾನು ತಿಳಿದಿದ್ದೇನೆ' ಎಂದು ಭಾವಿಸುವುದು; ಆ ಭಾವನೆಗೆ ತಕ್ಕಂತೆ ನಡೆಯುವುದೇ ಬಂಧನ. ತನ್ನ ಸೀಮಿತ ಅನುಭವದ ಆಚೆಗೂ ಜೀವನ ಪ್ರವಾಹವಿದೆ, ವಾಸ್ತವತೆಯು ತನ್ನ ವೈಯಕ್ತಿಕ ದೃಷ್ಟಿಗೆ ಸಿಲುಕಿದಷ್ಟು ವಿಶಾಲವಾದುದು ಎಂಬುದರ ಅರಿವೇ ಸ್ವಾತಂತ್ರ್ಯದ ಸ್ಥಿತಿ. ಪುರುಷರು ಅನೇಕ ಎಂಬುದಕ್ಕೆ ಸಾವಿರ ವಾದಗಳಲ್ಲಿ ಇದೂ ಒಂದು. ಈ ವಾದದ ತಿರುಳನ್ನು ಶ್ರೀರಂಗರು ಆಧುನಿಕ ಸಾಮಾಜಿಕ ಭಾಷೆಯಲ್ಲಿ ಒಂದು ಕಥೆಯ ಮೂಲಕ ಹೇಳಿದ್ದಾರೆ.

ಈ ಪ್ರಶ್ನೆಯನ್ನು ನಿದರ್ಶಿಸುವ ಒಂದು ಸಂದರ್ಭದಿಂದ ಪ್ರಾರಂಭವಾಗುವ ಕಾದಂಬರಿಯು ಅದೇ ಸಂದರ್ಭದಿಂದ ಮುಕ್ತಾಯವಾಗುತ್ತದೆ:

ಬಿ. ಕೆ. ರಾವ್ ಎಂಬ ಪೋಲೀಸು ಮೇಲಧಿಕಾರಿ. ಆರ್. ಜಿ. ಬಿಟ್ಟೂರ ಎಂಬ ಬ್ರಾಹ್ಮಣ ಈ ಮೇಲಧಿಕಾರಿಯಿಂದ ಆರಿಸಲ್ಪಟ್ಟು ಅವನ ಅಧೀನದಲ್ಲೇ ಕೆಲಸಕ್ಕೆ ಹಾಜರಾಗುತ್ತಾನೆ. ಅವನು ಸೇರಿದ ದಿನವೇ ಅಧಿಕಾರಿಯಿಂದ ಕರೆ ಬರುತ್ತದೆ. ತನ್ನ ಎದುರು ಬಂದು ನಿಂತ ಇವನನ್ನು ಅಧಿಕಾರಿ ಕೇಳುತ್ತಾನೆ:

"ಬಿಟ್ಟೂರಿನಿಂದ ಬಂದರೇನು?"

ರಾಗಣ್ಣ ಇಷ್ಟೊತ್ತು ಬಾಯಿತೆರದಿದ್ದರೂ ತಲೆಯನ್ನು ತೂಗಿಯೇ ಉತ್ತರಕೊಟ್ಟ.

'ಯಾರ ಪೈಕಿ ನೀವು?'

'ಬೆ—ಬೆ—ಅಲ್ಲ—ದೇಶಪಾಂಡೆ' ಎಂದ.

'ರಘುನಾಥರಾಯರಿಗೇನಾಗಬೇಕು?'

'ಅವರ ಮೊಮ್ಮಗ ನಾ.'

'ಅಂದ್ರೆ ಗುಂಡೇರಾಯರ ಮಕ್ಕಳು ನೀವು?'

'ಹ್—ಹೌದು'.

'ಹೀಗೋ? ಬಿಟ್ಟೂರನ್ನು ನಾನು ಚೆನ್ನಾಗಿ ಬಲ್ಲೆ' ಎನ್ನುತ್ತ ಸಾಹೇಬರು ಮುಂದಿನ ಕಾಗದಗಳನ್ನು ಎತ್ತಿಕೊಂಡರು.

ಆದರೆ ಈ ಸಾಹೇಬರು ಕಂಡ ಬಿಟ್ಟೂರು ಎಷ್ಟು? ಹತ್ತು ವರ್ಷದ ಹುಡುಗನಾಗಿದ್ದಾಗ ಒಂದು ನಡುರಾತ್ರಿಯಲ್ಲಿ ನಿದ್ದೆಮಾಡುತ್ತಿದ್ದ ಹುಡುಗನನ್ನು ಅವನ ಅಪ್ಪ ಎಬ್ಬಿಸಿ ಕರೆದುಕೊಂಡು ಬಂದು ಬಿಟ್ಟಿದ್ದ. ನಿದ್ದೆಗಣ್ಣಿನಲ್ಲಿ ಹಿಂದಿನ ಜೀವನವನ್ನು ಬಿಟ್ಟು ಮುಂದಿನ ಜೀವನಕ್ಕೆ ರಾತ್ರಿಯ ಕತ್ತಲಿನಲ್ಲಿ ನಡೆದು ಬಂದಿದ್ದ ನೆನಪಷ್ಟೇ ಅವನದು. ರಾಗಣ್ಣ ಅಥವಾ ಆರ್. ಜಿ. ಬಿಟ್ಟೂರನು ಕಂಡಿರುವುದೂ ಒಂದು ಅಂಶ ಮಾತ್ರ. "ಬಿಟ್ಟೂರು ಸಂತತವಾಗಿದೆ; ಬಿಟ್ಟೂರು ಪ್ರವಾಹವಾಗಿದೆ. ತಮ್ಮ ಕಣ್ಣಿಗೆ ಕಂಡ ಕೈಬೆರಳುಗಳಿಂದಿಳಿದ ಹನಿಗಳು ಮಾತ್ರ ಸೃಷ್ಟಿ ಎನ್ನಬಹುದೆ? ಬದಲಾಗಿಯೂ

ಬದಲಾಯಿಸಲಾರದ್ದ ಪ್ರವಾಹವಾಗಿದೆ ಸೃಷ್ಟಿ. ಮೂಲ ಪ್ರಕೃತಿಯಾಗಿದೆ ಪ್ರಪಂಚ.” ಈ ಇಬ್ಬರೂ ತಾವು ಬಿಟ್ಟೆವೆಂದು ಭಾವಿಸಿರುವ ಬೆಟ್ಟೂರಿನ ಹಿಂದಿನ ಕಥೆಯನ್ನು ಹೇಳುವ ಪರಿಕ್ರಮದಲ್ಲಿ ಕಾದಂಬರಿಯ ಬೆಳೆಯುವುದು ಮಾತ್ರವಲ್ಲ. ಇವರಿಬ್ಬರ ಪರಸ್ಪರ ಸಂಕೀರ್ಣ ಸಂಬಂಧವೂ ಆ ಮೂಲಕ ಸ್ಪಷ್ಟವಾಗುತ್ತದೆ. ತಮ್ಮ ಪರಸ್ಪರ ಸಂಬಂಧವು ಮಾತ್ರ ಅವರಿಬ್ಬರಿಗೂ ಕೊನೆಗೂ ತಿಳಿಯುವುದಿಲ್ಲ. ಕಾದಂಬರಿಯ ಬೆಳಕಿನಲ್ಲಿ ಅವರಿಬ್ಬರಲ್ಲಿಯೂ ಉಳಿಯುವ ಈ ಅಜ್ಞತೆಯು ಒಂದು ರೀತಿಯಲ್ಲಿ ಅರ್ಥಪೂರ್ಣವಾಗಿದೆ. 'ಬೆಟ್ಟೂರು' ಎಂಬ ಹೆಸರು ಸಹ ಜೀವನದ ಸಂತತ ಪ್ರವಾಹದಲ್ಲಿ ಒಂದೆ ಉಳಿದು ಮುಸುಕಾಗುತ್ತಿರುವ ಘಟ್ಟದ ನೆನಪನ್ನು ಧ್ವನಿಸುತ್ತದೆ.

ಬೆಟ್ಟೂರಿನ ದೇಶಪಾಂಡೆ ಮನೆತನದ ಒಂದೊಂದು ತಲೆಮಾರಿಗೂ ಒಂದು ಗಂಡು, ಒಂದು ಹೆಣ್ಣು ಮಾತ್ರ ಉಳಿಯುತ್ತವೆ. ಪ್ರತಿಯೊಂದು ತಲೆಮಾರಿನ ಹೆಣ್ಣು ವಿಧವೆಯಾಗಿ ತೌರಿನಲ್ಲೇ ಸೇರಿಕೊಳ್ಳುತ್ತಾಳೆ. ಯಥಾಕಾಷ್ಠಂ ಚ ಕಾಷ್ಠಂ ಎಂದು ಸದಾ ಯೋಚಿಸುವ ರಘುನಾಥರಾಯರ ಹಿಂದಿನ ತಲೆಮಾರಿನಲ್ಲಿಯೂ ಹೀಗೆಯೇ ಆಗಿತ್ತು. ಈಗ ಅವರ ತಂಗಿ ಸರಸ್ವತಿಯೂ ಹಾಗೆಯೇ ಆಗಿದ್ದಾಳೆ. ತಂಗಿಯ ಮಗಳು ಸುಬ್ಬಿಯನ್ನು ರಘುನಾಥರಾಯರ ಮಗ ಗುಂಡೇರಾಯನಿಗೆ ಕೊಟ್ಟು ಮದುವೆಯಾಗುತ್ತದೆ. ಒಂದು ಗಂಡು, ಒಂದು ಹೆಣ್ಣನ್ನು ಹಡೆದ ಮೇಲೆ ಸುಬ್ಬಿಯೂ ವಿಧವೆಯಾಗುತ್ತಾಳೆ. ಗುಂಡೇರಾಯನ ತಂಗಿ ಶಾಂತಳೂ ವಿಧವೆಯಾಗಿ ತೌರುಮನೆಯಲ್ಲಿ ಉಳಿದಿದ್ದಳು. ಸುಬ್ಬಿಯ ಮಗಳು ಸರಸಿ, ಸಹ ಮದುವೆಯ ಶಾಸ್ತ್ರ ಪೂರ್ತಿಯಾಗುವ ಮುನ್ನವೇ ಮನೆತನದ ಪರಂಪರೆಗೆ ತಕ್ಕಂತೆ ವಿಧವೆಯಾಗಿ ತೌರುಮನೆ ಸೇರುತ್ತಾಳೆ. ನಾವು ಕಾದಂಬರಿಯಲ್ಲಿ ಪ್ರತ್ಯಕ್ಷವಾಗಿ ಕಾಣುವುದು ಮೂರು ತಲೆಮಾರಿನ ವಿಧವೆಯರನ್ನು ಮಾತ್ರ. ರಘುನಾಥರಾಯರ ತಂಗಿ ಸರಸಿ; ಅವಳ ಮಗಳು ಸುಬ್ಬಿ ಮತ್ತು ರಘುನಾಥರಾಯರ ಮಗಳು ಶಾಂತಾ; ಸುಬ್ಬಿಯ ಮಗಳು ಸರಸಿ. ಒಂದೊಂದು ತಲೆಮಾರಿಗೂ ವೈಯಕ್ತಿಕ ಮತ್ತು ಸಾಮಾಜಿಕ ಅರಿವು ನಿಧಾನವಾಗಿ ಬದಲಾಯಿಸುತ್ತಾ ಹೋಗುತ್ತದೆ. ಕೊನೆಯ ಹುಡುಗಿ ಸರಸಿಗೆ ಪುನರ್ವಿವಾಹವಾಗುತ್ತದೆ.

ಪರಂಪರೆಯಿಂದಲೂ ಅದು ದೇಶಪಾಂಡೆ ಮನೆತನ. ಊರ ತೋಟಗಳ ತಳವಾರರು, ಹೊಲೆಯರೆಲ್ಲ ಅವರಲ್ಲಿ ಕೆಲಸಮಾಡುವುದಕ್ಕೆ ಹುಟ್ಟುವ ಕುಳಗಳು. ರಾಯರು ಚಿಕ್ಕ ಹುಡುಗನಾಗಿದ್ದಾಗ ಅವರಿಗಿಂತ ನಾಲ್ಕು ವರ್ಷಕ್ಕೆ ಹಿರಿಯನಾದ ಮನೆಯ ಆಳು ಹೊಲೆಯರ ಪರಸ್ಯಾ ಅವರನ್ನು ಮುಟ್ಟಿದ ಕಾರಣಕ್ಕಾಗಿ ಅವನ ಮೊಣಕೈ ಮುರಿದು ಇಂದಿಗೂ 'ಸಡಿಲಾಗುವ ಹಾಗೆ ಏಟು ಬಿದ್ದಿತ್ತು. ಹಾಗೆ ಹೊಡೆದದ್ದು ತಪ್ಪೆಂದು ರಾಯರು ಹುಡುಗನಾಗಿದ್ದಾಗ ಯೋಚಿಸಿದ್ದರಾದರೂ ವಯಸ್ಸು ಕಳೆದಹಾಗೆ ಅವರ ಬುದ್ಧಿಯೂ ಸಂಪ್ರದಾಯದ ಅಚ್ಚಿಗೆ ಹೊಂದಿಕೊಂಡು ಬಿಡುತ್ತದೆ. ಅವರ ಮಗ ಗುಂಡೇರಾಯ ಪರಸ್ಯಾನ ಸೊಸೆ ಗಂಗಿಯನ್ನು ಉಪಭೋಗಿಸುತ್ತಾ. ಹಾಗೆ ಉಪಭೋಗಿಸು

ವುದು ತನ್ನ ಹಕ್ಕು ಎಂದೇ ತಿಳಿಯುವ ಮಟ್ಟಕ್ಕೆ ಇಳಿಯುತ್ತಾನೆ. ಗುಂಡೇರಾಯನ ಮಗ ರಾಗಣ್ಣ ಆಶ್ರಮದಲ್ಲಿರುವ ಒಬ್ಬ ಹರಿಜನ ಕನ್ಯೆಯನ್ನು ವಿವಾಹವಾಗಲು ನಿಶ್ಚಯಿಸುತ್ತಾನೆ.

ತಲೆತಲಾಂತರದಿಂದಲೂ ರಾಯರ ಮನೆಯ ಎಂಜಲು ಎಲೆಯಲ್ಲಿ ಮಿಕ್ಕದ್ದನ್ನು ತಿನ್ನುವುದೇ ಹೊಲೆಯರ ರೂಢಿ. ಅವರಿಗೆ ಎಂಜಲು ಎಲೆಯಲ್ಲಿ ನೀಡುವುದು ಇವರ ಪದ್ಧತಿ. ಪರಸ್ಪರನಿಗೆ ಹಾಗೆ ತಿನ್ನುವುದು ಜಾತಿಧರ್ಮ. ಅವನ ಮಗ ಕಾಳ್ಯಾ ಮಾತ್ರ ಯುದ್ಧಕ್ಕೆ ಹೋಗಿ ಹೊರ ಜಗತ್ತನ್ನು ಕಂಡುಬಂದವನು. ಎಂಜಲು ತಿನ್ನಲು ಒಪ್ಪುವುದಿಲ್ಲ. ಗುಂಡೇರಾಯ ಎಂಜಲು ಮಾಡಿರುವ, ಮಾಡುತ್ತಿರುವ ತನ್ನ ಹೆಂಡತಿಯನ್ನು ಉಪಭೋಗಿಸಲು ಅವನಿಗೆ ತಿರಸ್ಕಾರವಾಗುತ್ತದೆ. ಈ ಪರಿಸರದಿಂದ ತಪ್ಪಿಸಿಕೊಂಡು ಹೊರಗೆ ಹೋಗದೆ ತನಗೂ ಮುಂದೆ ಬೆಳೆಯುವ ತನ್ನ ಮಗನಿಗೂ ಸ್ವಾತಂತ್ರ್ಯ ಮರ್ಯಾದೆಗಳಿಲ್ಲವೆಂದು ಯೋಚಿಸಿದ ಅವನು ಚಿಕ್ಕ ಹುಡುಗನನ್ನು ಕರೆದುಕೊಂಡು ಮುಂಬಯಿಗೆ ಹೊರಟು ಹೋಗುತ್ತಾನೆ. ಮುಂಬಯಿಯಲ್ಲಿ ಓದಿ ದೊಡ್ಡ ನೌಕರಿ ಪಡೆಯುವ ಅವನ ಮಗ ಧರಮನೇ ಗುಂಡೇರಾಯನ ಮಗ ರಾಜಣ್ಣನಿಗೆ ಇಂಟರ್‌ವ್ಯೂ ಮಾಡಿ ನೌಕರಿ ಕೊಡುವ, ಅವನ ದೊಡ್ಡ ಸಾಹೇಬನಾಗುತ್ತಾನೆ. ಬಿಟ್ಟೂರಿನಲ್ಲಿ ದೇಶಪಾಂಡೆ ಮನೆತನದ ದೊಡ್ಡಸ್ಥಿಕೆಯು ಮುರಿದು ಬಿದ್ದು. ವ್ಯಾಪಾರಕ್ಕೆ ಬಂದು ಸೇರಿದ ಮಾರವಾಡಿ ಶೇಟನು ಊರಿನ ಆರ್ಥಿಕ ನಿಯಂತ್ರಕನಾಗುತ್ತಾನೆ.

ಇಲ್ಲಿ ಬರುವ ಸ್ತ್ರೀ ಪಾತ್ರಗಳಲ್ಲಿ ಸಹ ಒಬ್ಬೊಬ್ಬರೂ ಪ್ರಕೃತಿ ತತ್ತ್ವದ ಒಂದೊಂದು ಅವಸ್ಥೆ ಅಥವಾ ಮೆಟ್ಟಲನ್ನು ಪ್ರತಿನಿಧಿಸುತ್ತಾರೆ. ಪೈಲ್ವಾನ್ ರಾಮಿಯ ಹೆಂಡತಿ ಚೆನ್ನಿ ಮತ್ತು ಗಂಗಿಯರು ಒಂದೇ ಅವಸ್ಥೆಗೆ ಸೇರಿದವರಾದರೂ ಗಂಗಿಯು ಚೆನ್ನಿಗಿಂತ ಹೆಚ್ಚು ಪ್ರಾತಿನಿಧಿಕ ಗುಣವುಳ್ಳವಳು. ರಘುನಾಥರಾಯರ ತಂಗಿ ಸರಸಿ ಸಂಪ್ರದಾಯಕ್ಕೆ ಹೊಂದಿಕೊಂಡ, ಹೆಚ್ಚು ಸ್ವಶಕ್ತಿಯನ್ನು ಪ್ರಕಟಿಸಿದ ವಿಧವೆ. ಅದೇ ಅವಳ ಮಗಳು ಸುಬ್ಬಿ ಮಕ್ಕಳಿಗಾಗಿ ತನ್ನನ್ನು ತಾನು ಗಂಡನಿಗೆ ಒಪ್ಪಿಸಿಕೊಂಡಳು. ಅವಳು ಗಂಡನ ವ್ಯಾಮೋಹದಿಂದ ಪೂರ್ತಿಯಾಗಿ ಸ್ವತಂತ್ರಳಲ್ಲದಿದ್ದರೂ ಭೋಗಕ್ಕಿಂತ ಮಾತೃತ್ವವೇ ಅವಳಿಗೆ ಪ್ರಧಾನ. ಅವಳ ನಾದಿನಿ ಶಾಂತಾಗೆ ಭೋಗದ ಆಸೆಯಿದೆಯಾದರೂ ಶಾಮಣ್ಣನ ಸಹವಾಸದಿಂದ ಅದನ್ನು ಮೆಟ್ಟಿ, ಮೇಲೆ ಏರಲು ಹೆಣಗುತ್ತಾಳೆ. ಸುಬ್ಬಕ್ಕನ ಮಗಳು ಸರಸಿ ಪ್ರಕೃತಿಯ ಸ್ತ್ರೀರೂಪದ ಮುಗ್ಧ ಮೋಹಕತೆ ಮತ್ತು ಬಯಕೆಗಳನ್ನು ಪ್ರತಿನಿಧಿಸುತ್ತಾಳೆ. ತನ್ನ ಸೋದರತ್ತೆ ಶಾಂತಕ್ಕನಿಗೆ ದೊರೆತಂತಹ ಶಾಮಣ್ಣ ಅವಳಿಗೆ ಸಿಕ್ಕಲಿಲ್ಲ: ಸುಧಾರಣಾವಾದಿ. ಆದರೆ ಪ್ರವೃತ್ತ ಭಾವನೆಗಳ ಶೀನು ದೊರೆಯುತ್ತಾನೆ. ಇಬ್ಬರ ಮದುವೆಯಾಗುತ್ತದೆ. ಶಾಮಣ್ಣನಂತಹ ಸಾತ್ವಿಕ ವ್ಯಕ್ತಿಯವನ ಶಿಷ್ಯಳಾಗಿ, ಅವನ ಸಹವಾಸದಲ್ಲಿ ಶಾಂತಾ ನಿವೃತ್ತ. ನಿರ್ಲಿಪ್ತ ಭಾವನೆಗಳನ್ನು ಬೆಳೆಸಿಕೊಂಡರೆ ಅವಳ ಸೊಸೆ ಸರಸಿಗೆ ಸುಲಭವಾಗಿಯೇ ಪ್ರವೃತ್ತ ಜೀವನ ಲಭ್ಯವಾಗುತ್ತದೆ.

ಇಷ್ಟನ್ನು ಸ್ಥೂಲವಾಗಿ ಕಾದಂಬರಿಯ ಕಥಾವಸ್ತು ಎನ್ನಬಹುದು. ಆದರೆ ಈ ಕಾದಂಬರಿಯ ರಚನೆ, ಕಥನವಿಧಾನ, ವಸ್ತುದ್ರವ್ಯಗಳಿಗೆ ಅನ್ವಯಿಸಿ ಹೇಳುವಾಗ ಕಥೆ ಎಂಬ ಮಾತನ್ನು ಒಂದು ವಿಶಿಷ್ಟ ರೀತಿಯಲ್ಲಿ ಅರ್ಥಮಾಡಿಕೊಳ್ಳಬೇಕು. ಒಂದಾದ ಮೇಲೆ ಒಂದರಂತೆ ಅಥವಾ ಒಂದರ ಒಳಗಿನಿಂದ ಮತ್ತೊಂದರಂತೆ ಹೊರಬರುವ ಘಟನೆಗಳು. ಕುತೂಹಲವನ್ನು ಕೆರಳಿಸಿಕೊಂಡು ಸಾಗುವ ಸನ್ನಿವೇಶಗಳು, ಸುಖಾತ್ಮಕ ಅಥವಾ ದುಃಖಾತ್ಮಕ ಎಂತಹ ಸಂದರ್ಭವಾದರೂ ಏಕಸಮನಾದ ರಂಜಕತೆಯನ್ನು ಒಸರಿಸುವ ಗುಣದಿಂದ ಕೂಡಿದ ನಿರೂಪಣೆಯನ್ನೇ ಕಥೆ ಎಂದು ಕರೆದರೆ ಅದು ಈ ಕಾದಂಬರಿಯಲ್ಲಿಲ್ಲ. 'ಪುರುಷ' ದ ಮುನ್ನುಡಿಯಲ್ಲಿ ಲೇಖಕರೇ ಹೇಳುವಂತೆ "ಕಾದಂಬರಿಯ ಕಥಾನಿರೂಪಣವು ಮೇಲೆ ಹೇಳಿದ ಮಾತುಗಳನ್ನೇ (ವಿಚಾರಗಳನ್ನೇ) ವ್ಯಕ್ತಿಗಳ — ಪಾತ್ರಗಳ — ದೃಷ್ಟಾಂತದಿಂದ ವಿವರಿಸಿದೆ".

ರಘುನಾಥರಾಯರ ಕಾಲದಿಂದ ಪ್ರಾರಂಭವಾಗಿ ಅವರ ಮೊಮ್ಮಗ ರಾಗಣ್ಣನ ತನಕ ಕಥೆಯು ಸಾಗಿದರೂ ಅದರಲ್ಲಿ ಬರುವ ಪ್ರತಿಯೊಂದು ಪಾತ್ರದ ವಿಶಿಷ್ಟ ಅಂತರಂಗ ವಿಚಾರ ಮತ್ತು ಭಾವನೆಗಳ ವಿವರಣೆಯೇ ಕಾದಂಬರಿಯ ಒಳತಿರುಳಾಗಿದೆ. ಇಂತಹ ವಿವರಣೆ ವಿಶ್ಲೇಷಣೆಗಳೇ ನಿರೂಪಣೆಯ ಪ್ರಧಾನ ಕ್ರಿಯೆಯಂತೆ ಸಾಗುವುದರಿಂದ ಕಥೆ ಎಂಬ ಸಮಷ್ಟಿಗತಿಗೆ ಬದಲಾಗಿ ಒಂದೊಂದು ಪಾತ್ರಗಳೂ ಒಂದೊಂದು ಮನೋ ವಿಶ್ಲಿಷ್ಟ. ವಿಚಾರವಿಶ್ಲಿಷ್ಟ ಚಿತ್ರಗಳಂತೆ ಒಡೆದು ನಿಲ್ಲುತ್ತವೆ. ಈ ರೀತಿಯ ಅಂತರಂಗ ವಿಶ್ಲೇಷಣೆ ಅಥವಾ ಚಿತ್ರಣದ ಪರಿಕ್ರಮದಲ್ಲಿ ನಮಗೇ ತಿಳಿಯದಂತೆ 'ಕಥೆ'ಯು ಮುಂದೆ ಸಾಗಿರುತ್ತದೆ. ಆದರೆ ಕಥೆಯು ಸಾಗುವುದು ಕಾದಂಬರಿಕಾರರ ದೃಷ್ಟಿಯಲ್ಲಿ ಸ್ವಲ್ಪವೂ ಇಲ್ಲ. ಅವರು ಗುರಿ ಇಟ್ಟಿರುವ ಉದ್ದೇಶ ಸ್ಪಷ್ಟವಾಗಿಯೂ ಬೇರೆಯದು ಎಂಬುದು ವಾಚಕರ ಅರಿವಿಗೆ ತಾನಾಗಿಯೇ ಬರುತ್ತದೆ. ಈ ರೀತಿಯ ನಿರೂಪಣಾ ಕ್ರಮಕ್ಕೆ ಸಾಹಿತ್ಯಿಕವಾಗಿ ಒಂದು ವಿಶೇಷ ಅನುಕೂಲವಿರುವಂತೆ ಬೇರೊಂದು ರೀತಿಯ ಅನನುಕೂಲವೂ ಇದೆ.

ಒಂದೇ ಪರಿಸರದಲ್ಲಿ ಜೀವಿಸಿದರೂ ಪ್ರತಿಯೊಂದು ವ್ಯಕ್ತಿಯ ಅನುಭವ, ವಿಚಾರ, ಭಾವನೆ ಮೊದಲಾದುವುಗಳು ಬೇರೆಬೇರೆಯಾಗಿರುತ್ತವೆ ಎಂಬ ಮೂಲ ತತ್ವವನ್ನು ಸ್ಪಷ್ಟವಾಗಿ ಮನಗಾಣಿಸಲು ಈ ರೀತಿಯ ನಿರೂಪಣಕ್ರಮವು ಸಮರ್ಪಕವಾಗಿದೆ ಎಂದು ತೋರುತ್ತದೆ. ವ್ಯಕ್ತಿವ್ಯಕ್ತಿಗಳ ನಡುವೆ ಉಂಟಾಗುವ ಕ್ರಿಯೆ ಪ್ರತಿಕ್ರಿಯೆಗಳ ಘಟನೆಗಿಂತ ಹೆಚ್ಚಾಗಿ ಕಾದಂಬರಿಕಾರರು ತೋರಿಸಬಯಸುವುದು ಈ ಕ್ರಿಯೆ ಪ್ರತಿಕ್ರಿಯೆಗಳ ಒಳಕಾರಣವನ್ನು; ವ್ಯಕ್ತಿಗಳ ಅಂತರಂಗವನ್ನು. ಎಷ್ಟೋ ವೇಳೆ ಬರೀ ಅಂತರಂಗ ವಿಶ್ಲೇಷಣೆಯನ್ನು ಅತ್ಯಂತ ಯಶಸ್ವಿಯಾಗಿ ಮಾಡಿದ ನಂತರ ಆ ಅಂತರಂಗದ ಪರಿಣಾಮವಾಗಿ ಉಂಟಾಗುವ ಬಾಹ್ಯ ಘಟನೆಯನ್ನು ರಸವೇ ಒಸರದಂತೆ ತೀರ ಸಾಧಾರಣ ರೀತಿಯಲ್ಲಿ ಹೇಳಿ ಮುಗಿಸುತ್ತಾರೆ. 'ಪುರುಷ'ದ ಹನ್ನೆರಡನೆಯ

ಅಧ್ಯಾಯದಲ್ಲಿ ಶೀನಿಯ ಅಂತರಂಗದ ಚಿತ್ರಣ ಸ್ಪಷ್ಟವಾಗಿ ರೂಪುಗೊಂಡಿದೆ. ತಂಗಿ ಸರಸ್ವತಿಯ ವೈಧವ್ಯ, ಪುನರ್ವಿವಾಹದ ಬಗೆಗೆ ರಾಗಣ್ಣನ ಮನೋಭಾವ ಸಹ ಅಷ್ಟೇ ಸ್ಪಷ್ಟವಾಗಿ ಮೂಡಿದೆ. ತಾಯಿ ಸುಬ್ಬಕ್ಕನ ಒಳಗೂ ತೆರೆದು ಕಾಣುತ್ತದೆ. ಆಗ ತಾನೆ ಯೌವ್ವನವು ವಿಕಸಿಸಿ ಆಶೆಯು ಬೆಳೆದು ತುಯ್ದಾಡುವ ಸರಸ್ವತಿಯ ಅಂತರಂಗ ಚಿತ್ರಣವಂತೂ ಕಾದಂಬರಿಕಾರರ ಅಂತರಂಗ ವರ್ಣನಾಶಕ್ತಿಗೆ ಒಂದು ಉದಾಹರಣೆ ಎನ್ನುವಷ್ಟು brilliant ಆಗಿ ಬಂದಿದೆ. ಇಡೀ ಅಧ್ಯಾಯವಿರುವುದು ಹರಯವು ಆಗತಾನೆ ಉಕ್ಕಲು ಪ್ರಾರಂಭವಾಗಿದ್ದ ವಿಧವೆ ಸರಸ್ವತಿಯನ್ನು ಶೀನಿ ಧೈರ್ಯವಾಗಿ ಮದುವೆಯಾದ ಎಂಬ ಸಂದರ್ಭದಲ್ಲಿ. ಈ ಸಂದರ್ಭಕ್ಕೆ ಸಂಬಂಧಿಸಿದ ಎಲ್ಲರೂ ಗೈದ ಕ್ರಿಯೆಪ್ರತಿಕ್ರಿಯೆಗಳ ಅಂತರಂಗವನ್ನು ಹೇಳುವುದಷ್ಟೇ ಲೇಖಕರಿಗೆ ಬೇಕಾಗಿರುವುದು. ಶೀನಿ ಸರಸ್ವತಿಯರಿಗೆ ಆದ ಮದುವೆಯ ಘಟನೆಯನ್ನು ಮಾತ್ರ ನೇರವಾಗಿ ಒಂದು ವಾಕ್ಯದಲ್ಲಿ ಎಲ್ಲಿಯೂ ಹೇಳಿಲ್ಲ. "ನನ್ನ ಪಾಲಿಗೆ ಸತ್ತಾಂಗ ಈ ಹುಚ್ಮುಂಡೇಗಂಡ" ಎಂದು ರಾಮಾಚಾರ್ರೂ ಮಗನ ಬಗೆಗೆ ಅಂದುಕೊಂಡರು — ಎಂಬ ಅಧ್ಯಾಯದ ಆರಂಭ ವಾಕ್ಯದಿಂದ ಈಗಾಗಲೇ ಶೀನು-ಸರಸ್ವತಿಯರ ಮದುವೆ ಆಗಿ ಹೋಗಿದೆ ಎಂದು ವಾಚಕರಿಗೆ ತಿಳಿಯುತ್ತದೆ. ಅಧ್ಯಾಯ ಆರಂಭವಾಗುವುದೂ ಇದೇ ವಾಕ್ಯದಿಂದ. ನಡುವೆ ಬರುವುದೆಲ್ಲವೂ ಸಂಬಂಧಿಸಿದ ಪಾತ್ರಗಳ ಅಂತರಂಗ ವಿಶ್ಲೇಷಣೆ; ಅರಳೆಯನ್ನು ಸ್ವಚ್ಛಮಾಡಿ ಎಳೆದೆಳೆದು ಬಿಡಿಸಿ ಇಟ್ಟಂತೆ.

ಶಾಮಣ್ಣ ಕಾಲೇಜು ಓದುತ್ತಿದ್ದವನು ಅದನ್ನು ಬಿಟ್ಟು ಹೊರಟ. ಅವನು ಬಿಟ್ಟೂರಿಗೆ ಬಂದದ್ದು ಆಕಸ್ಮಿಕ. ಅವನ ಊರಾವುದು, ಕಾಲೇಜು ಓದುತ್ತಿದ್ದ ಊರಾವುದು? ಇತ್ಯಾದಿ ಯಾವ ಸ್ಪಷ್ಟೀಕರಣವನ್ನೂ ಕೊಟ್ಟಿಲ್ಲ. ಇದರಿಂದ ಕಾದಂಬರಿಯ ಮೂರ್ತತೆಗೆ ಅರಕೆ ಎನಿಸುತ್ತದೆ. ಆದರೆ ಶಾಮಣ್ಣನ ಊರುಕೇರಿಗಳನ್ನು ನಿಶ್ಚಯಿಸದೆ ಹಾಗೆಯೇ ಬಿಡುವುದು ಅವನ ಪಾತ್ರದ ಅಂತರಾರ್ಥದ ದೃಷ್ಟಿಯಿಂದ ಅಗತ್ಯವಾಗಿದೆ. ಅವನ ಪಾತ್ರವನ್ನು ವಿವರವಾಗಿ ಚರ್ಚಿಸುವಾಗ ಈ ಅಂತರಾರ್ಥವನ್ನು ನಾವು ಗುರುತಿಸಬಹುದು. ಆದರೆ ಇಂತಹ ಅಂತರಾರ್ಥವನ್ನು ಕಾಯ್ದುಕೊಳ್ಳುವ ಆಗತ್ಯದಲ್ಲಿ ಕಾದಂಬರಿಯ ಮೂರ್ತತೆಯು ಮೂಡದೆ ಹೋಗುವ ಅಪಾಯಕಾರಿ ಸಂಭವವನ್ನು ನಾವು ಗುರುತಿಸಬಹುದು. ಪಾತ್ರಗಳು ಅಂತರಾರ್ಥದ ಪ್ರತೀಕವಾಗುವಾಗ, ಅರ್ಥವೇ ಪ್ರಧಾನವಾಗಿ ಪಾತ್ರದ ರಕ್ತಮಾಂಸದ ವಿವರಗಳು ಆ ಅರ್ಥವ್ಯಾಪ್ತಿಗೆ ಅಡಚಣೆಯಾಗುತ್ತವೆ. ಆಗ ರಕ್ತಮಾಂಸಗಳನ್ನು ಅನಿವಾರ್ಯವಾಗಿ ತ್ಯಾಗಮಾಡಬೇಕಾಗುತ್ತದೆ. ಆ ಮಟ್ಟಿಗೆ ಸಾಹಿತ್ಯಿಕ ಗುಣದ ನಷ್ಟವಾಗುವುದು ಅನಿವಾರ್ಯವೂ ಆಗುತ್ತದೆ.

ಈ ರೀತಿಯ ಬರಹದಲ್ಲಿ ಎರಡು ರೀತಿಯ ಸಾಹಿತ್ಯಿಕ ಅಪಾಯಗಳಿವೆ: ಅವು ಈ ಕಾದಂಬರಿಯಲ್ಲಿ ಅಲ್ಲಲ್ಲಿ ಇಣುಕುತ್ತವೆ: ಕಥೆಯ ಓಟವು ಮಂದವಾಗಿ ಚಲನೆಯು ಬೇರೊಂದು ರೀತಿಯನ್ನು ಪಡೆದು ಬಿಡುತ್ತದೆ. ವಾಚಕರು ತುಂಬ ಪ್ರೌಢವಾದ

ಬೌದ್ಧಿಕ ದೃಷ್ಟಿಯಿಂದ ಮಾತ್ರ ಕಾದಂಬರಿಯನ್ನು ಓದಬೇಕಾಗುತ್ತದೆ. ಬಿಡಿಯಾಗಿ ನೋಡಿದರೆ ಒಂದೊಂದು ಭಾಗವೂ ಅರ್ಥಪೂರ್ಣವಾಗಿ, ಧ್ವನಿಪೂರ್ಣವಾಗಿ ಕಾಣುವ ಕಾದಂಬರಿಯೂ ಇಡಿಯಲ್ಲಿ ಪಡೆಯಬೇಕಾಗಿದ್ದ ಗತಿಯನ್ನು ಪಡೆಯಲಿಲ್ಲವೆನಿಸುತ್ತದೆ. ಬುದ್ಧಿ, ವಿಶ್ಲೇಷಣೆ ಇತ್ಯಾದಿ ಗುಣಗಳು ಒಂದು ಸಾಹಿತ್ಯಕೃತಿಯ ಪಂಚಪ್ರಾಣಗಳಾದರೂ ಪಂಚಪ್ರಾಣಗಳ ಸಮಷ್ಟಿ ಪರಿಣಾಮವಾದ ಚಲನೆಯ ಸ್ಥಿತಿಗೆ ಜೀವವೆನ್ನುವಂತೆ ಸಾಹಿತ್ಯಕೃತಿಯ ಗತಿಯನ್ನು ಅಲಕ್ಷಿಸಿ ಸಾಹಿತ್ಯದ ಜೀವಂತತೆಯನ್ನು ನಿರೀಕ್ಷಿಸುವುದು ಕಷ್ಟವಾಗುತ್ತದೆ.

ಈ ಜಾತಿಯ ಬರಹದಲ್ಲಿ ಈ ಅಪಾಯದ ಸಂಭವವಿರುವುದು ನಿಜವಾದರೂ 'ಪ್ರಕೃತಿ-ಪುರುಷ' ದಲ್ಲಿ ಅದು ಬರೀ ಅಲ್ಲಲ್ಲಿ ಇಣುಕಿ ಹಾಕುತ್ತದೆ. ಕಾದಂಬರಿಯು ಮಾತ್ರ ಅಪಾಯಕ್ಕೆ ಪೂರ್ತಿ ಪಕ್ಕಾಗದೆ ತನ್ನ ಜೀವಂತತನವನ್ನು ಉಳಿಸಿಕೊಂಡು ಸಾಗುತ್ತದೆ; ನಿರೀಕ್ಷಿಸಬಹುದಾದ ಮಟ್ಟದ ಚಲನೆ ಇಲ್ಲದಿದ್ದರೂ ಈ ಕಾದಂಬರಿಯು ಇಂತಹ ಅಪಾಯದಿಂದ ಪಾರಾಗಿರುವ ಕಾರಣವನ್ನು ವಿವರಿಸುವ ಮೊದಲು ಈ ಸಾಹಿತ್ಯಿಕ ಸಮಸ್ಯೆಗೆ ಸಂಬಂಧಿಸಿದಂತೆ ಒಂದೆರಡು ಮಾತುಗಳನ್ನು ಇಲ್ಲಿಯೇ ಹೇಳ ಬಹುದು. ನಾವು ಮೇಲೆ ನೋಡಿದ ಶೀನು–ಸರಸ್ವತಿಯರ ಮದುವೆಯ ಸಂದರ್ಭ ಅಥವಾ ಘಟನೆಯಂತೆ ಈ ಕಾದಂಬರಿಯಲ್ಲಿ ಬರುವ ಎಷ್ಟೋ ಪ್ರಸಂಗಗಳನ್ನು ಹೇಳುವಾಗ ಕಾದಂಬರಿಕಾರರು ಅವು ನಡೆದು ಹೋಗಿರುವುದನ್ನು ಮೊದಲೇ ಹೇಳಿಬಿಡುತ್ತಾರೆ. ಅನಂತರ ಅವುಗಳು ನಡೆದು ಹೋದ ಕಾರಣವನ್ನು ವಿವರಿಸಲು ಪ್ರಾರಂಭಿಸುತ್ತಾರೆ. ಕಾರಣಪರಂಪರೆಯನ್ನು ಮೊದಲೇ ಹೇಳಿ ಅದರ ಪರಿಣಾಮವು ತನಗೆ ತಾನೇ ಮೂರ್ತ ವಾಗಿ ಕಣ್ಣುಮುಂದೆ ಘಟಿಸುವಂತೆ ಮಾಡಿದ್ದರೆ ಕುತೂಹಲವು ಒಂದೇಸಮನೆ ಉಳಿಯುತ್ತಿತ್ತು; ಓಟ ಅಥವಾ ಚಲನೆಯು ತನಗೆ ತಾನೇ ಸಾಧಿತವಾಗುತ್ತಿತ್ತು. ರಂಜಕತೆಗಾಗಿ ಸಲ್ಲದ ವಿವರಕ್ಕೆ ಹೋಗದೆಯೂ, ಬರವಣಿಗೆಯಲ್ಲಿ ಈಗ ಇರುವ ಬಿಗಿ ಮತ್ತು ಸಂಕ್ಷಿಪ್ತತೆಯನ್ನು ಕಳೆದುಕೊಳ್ಳದೆಯೂ ಕಾದಂಬರಿಯ ಓಟವು ಈಗ ಇರುವುದ ಕ್ಕಿಂತ ಹೆಚ್ಚಾಗುವಂತೆ ಮಾಡಬಹುದಿತ್ತು. ಹಾಗೆ ಮಾಡಿದ್ದರೆ ಅದರ ಯಾವ ಬೌದ್ಧಿಕ ಗುಣವೂ ನಷ್ಟವಾಗುತ್ತಿರಲಿಲ್ಲ.

ಇದೇ ರೀತಿ ಕೆಲವು ಸಂದರ್ಭಗಳಲ್ಲಿ ಎರಡು ಮೂರು ವಾಕ್ಯಗಳಲ್ಲಿ ಕೆಲವು ಬಾಹ್ಯವಸ್ತು ವಿವರಗಳನ್ನು ಕೊಟ್ಟಿದ್ದರೆ ಚಿತ್ರಣವು ಹೆಚ್ಚು ಸ್ಪಷ್ಟವೂ ಘನಿಷ್ಠವೂ ಆಗಿ ಈ ಘನಿಷ್ಠತೆಯು ಚಲನೆಗೆ ಪರ್ಯಾಯವಾಗಿ ಸಹಾಯಕವಾಗುತ್ತಿತ್ತು. ಬಿಟ್ಟೂರಿನ ಸ್ಪಷ್ಟಬಾಹ್ಯವರ್ಣನೆಯನ್ನಾಗಲೀ ರಘುನಾಥರಾಯರ ಮನೆಯ ಸ್ಪಷ್ಟ ವರ್ಣನೆಯನ್ನಾಗಲಿ ಲೇಖಕರು ಎಲ್ಲಿಯೂ ನೇರವಾಗಿ ಕೊಟ್ಟಿಲ್ಲ. ಗಂಗಿ ಗುಂಡಣ್ಣರು ಕೂಡುವ ಭಾವಿ, ಅದರ ಸುತ್ತಲಿನ ಗಿಡಮರಗಳ ಪರಿಸರವನ್ನು ಸಹ ಸಾಕಷ್ಟು ಸ್ಪಷ್ಟವಾಗಿ ಕೊಟ್ಟಿಲ್ಲ. ಶಾಮಣ್ಣ ಸ್ಥಾಪಿಸುವ ಆಶ್ರಮ, ಅದರ ಹತ್ತಿರದ ಹೂವಿನ

ತೋಟ. ಕಾಳ್ಯಾಭರಮರು ಅಷ್ಟು ವರ್ಷ ವಾಸಿಸುವ ಮುಂಬಯಿ ಇವುಗಳನ್ನು ಸ್ಪಷ್ಟ ವಾಗಿ ಕಾಣುವಂತೆ ಕೊಡಬಹುದಿತ್ತು; ಆಯಾ ಸಂದರ್ಭದ ಧ್ವನಿಗೆ ಪೋಷಕವೂ ಆಗುವಂತೆ ನೇರವಾಗಿಯೇ ಎರಡೆರಡು ವಾಕ್ಯಗಳಲ್ಲಿ ವರ್ಣಿಸಬಹುದಿತ್ತು. ಅಂತರಂಗದ ಮೇಲೆ ತಮ್ಮ ದೃಷ್ಟಿಯನ್ನು ಕೇಂದ್ರೀಕರಿಸುವಾಗ ಬಾಹ್ಯ ಆವರಣವು ಕನಿಷ್ಠ ವಿವರದಲ್ಲಿ ಮಾತ್ರ ಕಾಣಬೇಕೆಂಬ ನಿಯಮವಿಲ್ಲ. ಬಾಹ್ಯವಿವರವು ಅತಿಯಾದರೆ ಸಾಪೇಕ್ಷವಾಗಿ ಅಂತರಂಗ ವಿವರಣೆಯು ತನ್ನ ತೀವ್ರತೆಯನ್ನು ಕಳೆದುಕೊಳ್ಳುತ್ತದೆ ಎಂಬುದು ಸಾಮಾನ್ಯವಾಗಿ ನಿಜ. ಆದರೆ ಬಾಹ್ಯವಿವರಣೆಯನ್ನು ಅಂತರಂಗದ ತೀವ್ರತೆಗೆ ಸಹಾಯಕವಾಗುವಂತೆ ಬಳಸಿಕೊಳ್ಳಬಹುದು. ಅಷ್ಟೇ ಅಲ್ಲ ಬಾಹ್ಯವಿವರವು ಕನಿಷ್ಠ ಮಿತಿಗಿಂತ ಕಡಿಮೆಯಾದರೆ ಅಂತರಂಗ ವಿವರಗಳು ನೆಲೆ ತಪ್ಪುವ ಸಂಭವವುಂಟು.

ಅಲ್ಲಲ್ಲಿ ಇಂತಹ ಅಪಾಯಕ್ಕೆ ಪಕ್ಕಾದರೂ ಈ ಕಾದಂಬರಿಯು ತನ್ನ ಮೂರ್ತತೆಯನ್ನು ಕೆಲವುಮಟ್ಟಿಗೆ ಸಾಧಿಸಿಕೊಂಡಿರುವ ಕಾರಣವು ಲೇಖಕರ ವಸ್ತುನಿಷ್ಠೆಯೇ ಆಗಿದೆ. ಪಾತ್ರಗಳು ಪರಸ್ಪರ ಮಾತನಾಡುವಾಗ ಮಾತ್ರವಲ್ಲದೆ ತಮ್ಮ ಆಲೋಚನೆಯನ್ನು ಸಹ ತಮಗೆ ಸಾಧ್ಯವೆನಿಸುವ ರೀತಿಯಲ್ಲಿ ಸಹಜವೆನಿಸುವ ಭಾಷೆಯಲ್ಲಿಯೇ ಮಾಡುತ್ತವೆ. ಕುಸ್ತಿಗೆಲ್ಲುವ ಗಂಡು ಕಟ್ಟುನಿಟ್ಟು ಬ್ರಹ್ಮಚರ್ಯದಿಂದ ಇರಬೇಕೆನ್ನಲು ಗುಂಡೇರಾಯಿ "ಹನುಮಪ್ಪನ ಊರ ಹೊರಗ ಯಾಕ ಇಟ್ಟಿರತಾರ ಈಗ ನನಗೆ ತಿಳೀತು ನೋಡು..." ಎನ್ನುವಂತಹ ಆಡು ಮಾತು, ಕಾಳ ಆಡುವ "ಹಳ್ಳೀ ಊರ ಹೊಲೆಯ ಆಗಿ ಹುಟ್ಟಿದ್ದಕ ಮಂದೀ ಎಂಜಲ ಅನ್ನ ಉಂಡೀನಿ, ಆದರೆ ಮಂದೀ ಎಂಜಲಹೆಣ್ಣಾ ಭೋಗಿಸ್ತೀನಿ ಅಂತ ತಿಳಿದಿದ್ದರ—ಅಬ್ಬ!........." ಎಂಬ ನುಡಿ, "ಎಲೆ ನಿನ ಹಕ್ಕು! ಹೆಂಡ್ತಿ ಅಂದ್ರ ಹೊಲಾನ, ಮನೀನ ಪರದೇಶದಾಗ ಇದ್ದು ಹಕ್ಕು ನಡಿಸಾಕ".

"ಥೂ ಇದರ! ಇದೇನೊ ಯಿಲಾಯ್ತು ಹೆಂಡ ಕಾಣ್ತೇತಿ! ಹಾಗಲ ಕಾಯೀದು ಮಾಡ್ಯಾರೋ ಏನೋ! ಥೂ!" ಎಂದು ಮತ್ತೆ ಕೆಳಗಿಟ್ಟ.

ಇಂತಹ ಭಾಷೆಯೇ, ಅಂತರಂಗದ ವಿಚಾರಕ್ಕೆ ಮೂರ್ತತೆಯನ್ನೂ ಚಿತ್ರತೆಯನ್ನೂ ಕೊಟ್ಟಿದೆ. ಗುಂಡಣ್ಣ ಸತ್ತಮೇಲೆ ಗಂಗಿ ಆಶ್ರಮದಲ್ಲಿರುತ್ತಾಳೆ. ಅವಳ ಹತ್ತಿರಕ್ಕೆ ಈಗ ಊರಿನಲ್ಲಿ ಯಾರೂ ಬರುವುದಿಲ್ಲ. ಶಾಮಣ್ಣನಿಗಾಗಿ ಪ್ರಯತ್ನಿಸಿಯೂ ಅವಳು ಸೋಲುತ್ತಾಳೆ. ಕೊನೆಗೆ ಮುಂಬಯಿಯ ಸೂಳೆಗೇರಿಯಲ್ಲಿ ದಂಧೆ ಮಾಡಿಯಾದರೂ ತನ್ನ ಶರೀರದ ಹಸಿವು ತೀರಿಸಿಕೊಳ್ಳಲು ಹೊರಟು ಹೋಗುತ್ತಾಳೆ. ಮುಂಬಯಿಗೆ ಹೋಗುವ ಮುನ್ನ ಅವಳ ಮನಸ್ಸಿನ ಒಳಗನ್ನು ಲೇಖಕರು ಅವಳ ಮಾತಿನಲ್ಲಿಯೇ ಅವಳ ಕೃತಿಯ ಮೂಲಕವೇ ಚಿತ್ರಿಸುತ್ತಾರೆ:

'ಹಿಂದಿನ ಕಾಲ ಹೋಯ್ತು' ಎನ್ನುವುದು ಗಂಗಿಗೆ ಮಾತ್ರ ಪ್ರತ್ಯಕ್ಷ ಅನುಭವ ವಾದಂತಾಯಿತು....... 'ಈಟೊಂದು ದಿನದ ಎಂತೆಂತಾ ಗಂಡ್ಸು ಹೇಳಿಧಾಂಗ

ಕುಣೀತೇತಿ' ಎಂಬುವದಕ್ಕಾಗಿ ಕ್ರಮೇಣ ಗಂಡಸಿನ ಬಗ್ಗೆ ಒಂದು ತಿರಸ್ಕಾರ ಭಾವನೆಯೂ ಮೂಡಿತ್ತು......ಶಾಂತಾ ಶಾಮಣ್ಣ ಬೇರೆ ಬೇರೆ ಕೋಣೆಯಲ್ಲಿ ಮಲಗಿದರೂ ಅವರನ್ನು ಶಂಕಿಸಿ 'ಇದ್ರೇನಾತು? ಹಿಂದಾಗಡೆ ತಂತಮ್ಮ ಹಾಸಿಗೆ ವ್ಯಾಗ ಮಲಗಿ ಕೋಳಾಕ ಬರೋದಿಲ್ಲೇನು?' ಎಂದು ತನ್ನೊಳಗೆಯೆ ಸರಕಾರಿ ವಕೀಲನಂತೆ ಆರೋಪಿ ಯನ್ನು ಸವಾಲಿಸುವಳು. 'ಅದೂ್ರ ವಮ್ಮ ಪತ್ತೆ ಹಚ್ಚಕೇ ಬೇಕು' ಎಂದು ಹಟವನ್ನು ತೊಟ್ಟಳು. ಗಂಡು ಹೆಣ್ಣು ರಾತ್ರಿಯ ಸಮಯದಲ್ಲಿ ಒಂದೆಡೆ ಸೇರಿದರೆ 'ಅದರ ಹೊರ್ತು ಮತ್ತೇನಿರತೈತಿ?' ಎಂದೇ ಆಕೆಯ ತರ್ಕ-ಸಿದ್ಧಾಂತ............

"ನಸಿಕಿನಾಗ ನೀವೇನೊ ಹಿಂದಕ್ಕ ಮಾಡಿಕೊಂಥಾಗ ಕೇಳಿಸಿತು ಅದಕ್ಕಂದ್ನಿ" ಎಂದು ಶಾಂತಳನ್ನು ಕೇಳುತ್ತಾಳೆ. ವಿಧವೆ ಸರಸ್ವತಿಯ ಸುಪ್ತ ಬಯಕೆಯನ್ನು ಹೊಡೆದೆಬ್ಬಿಸುವ ಕೆಲಸ ಮಾಡುವುದರಲ್ಲಿಯೇ ಅವಳು ಒಂದು ತೆರನಾದ ಬದಲಿ ತೃಪ್ತಿ ಕಾಣುತ್ತಾಳೆ. ಕೊನೆಗೆ "ಮುದಿಕೀ ಹಾಂಗ ಹಳೇಕತೆ ಹೇಳೋದಕ್ಕಿಂತ ಖರೇನೆ ಮುದಿಕಿ ಆಗೋದರಾಗ ಸುಖಪಡು, ಗಂಗೀ" ಎಂದು ತನಗೆ ತಾನೇ ಹೇಳಿಕೊಂಡು ಮುಂಬಯಿ ಗೆಂದು ಹೊರಟು ಹೋಗಿದ್ದಳು. ಜಾಗತಿಕ ರಾಜಕಾರಣ ಗಂಗಿಗೆ ಉದ್ಯೋಗವನ್ನು ಒದಗಿಸಿ ಕೊಟ್ಟಿತು.

ಪಾತ್ರದ ಅಂತರಂಗ ವಿಶ್ಲೇಷಣೆಗೆ ತೊಡಗಿದಾಗ. ಅದೂ ಈ ರೀತಿಯ ವಿಚಾರ ಪ್ರಧಾನ ಕಾದಂಬರಿಯಲ್ಲಿ, ವಿಶ್ಲೇಷಣೆಯು ಲೇಖಕನ ಕ್ರಿಯೆಯಾಗಿ ಉಳಿದು ಪಾತ್ರವೂ ಅಲ್ಲಿಯತನಕ ಮೂಕವಾಗಿ ಹಿಂದೆ ಉಳಿಯುವ ಅಪಾಯವಿದೆ. ಲೇಖಕನು ಕಂಡ ವೈಚಾರಿಕ ದರ್ಶನವು ಪಾತ್ರಗಳ ಮೂರ್ತಕ್ರಿಯೆ, ವರ್ತನೆಗಳ ಮೂಲಕ ಕಾಣಿಸದೆ ಬೇರೆಯಾಗಿ ಉಳಿಯುವುದೇ ಈ ಅಪಾಯದ ಕಾರಣ. ಆದರೆ 'ಪ್ರಕೃತಿ-ಪುರುಷ' ದಲ್ಲಿ ಇಂತಹ ದೋಷವು ಎಲ್ಲಿಯೂ ಕಾಣಿಸುವುದಿಲ್ಲ. ನಾವು ಈಗ ತಾನೆ ನೋಡಿದ ಗಂಗಿಯ ಯೋಚನೆ ಮತ್ತು ವರ್ತನೆಗಳು ಅವಳವೇ. ತಾನೆಂದರೆ ಗಂಡಸರು ಬಾಯಿ ಬಿಡುತ್ತಿದ್ದ ಕಾಲದಲ್ಲಿ ಅವಳಿಗೆ ಗಂಡಸಿನ ಮೇಲೆ ತಿರಸ್ಕಾರವೇನೋ ಇತ್ತು. ಆದರೆ ಈಗ ಯಾರೂ ಮಾತನಾಡಿಸದೆ ಇರುವುದರಿಂದ ಅವಳ ಜೀವ ತಪಗುಟ್ಟುತ್ತಿದೆ. ಯಾವುದೇ ಗಂಡು ಹೆಣ್ಣಿನ ಸಂಬಂಧವನ್ನು ಬೇರೆ ರೀತಿಯಲ್ಲಿ ಕಲ್ಪಿಸಿಕೊಳ್ಳುವುದು ಅವಳ ವ್ಯಕ್ತಿತ್ವದ ಹೊರಗಿನ ಮಾತು. ಅವಳು ಸರಸ್ವತಿಯೊಡನೆ ಆಡುವ ಮಾತುಗಳು ಸರಸ್ವತಿಯ ಬಯಕೆಯನ್ನು ಕವರಿಸುವುದು ಮಾತ್ರವಲ್ಲ. ಗಂಗಿಯ ಹಸಿದ ಮನಸ್ಸನ್ನೂ ತೋರಿಸುತ್ತದೆ. ಇದೆಲ್ಲವೂ ಗಂಗಿಗೆ ಸಹಜವಾದ ರೀತಿಯಲ್ಲಿ. ಅವಳಿಗೆ ಸಹಜವಾದ ಮಾತಿನಲ್ಲಿ ಚಿತ್ರಿತವಾಗಿದೆ.

ಮನೋವಿಶ್ಲೇಷಣೆಯ ಹೆಸರಿನಲ್ಲಿ ಮನಶ್ಶಾಸ್ತ್ರೀಯ ಸಿದ್ಧಾಂತಗಳು ಹೇಳುವ ವಿಧಾನ ತಂತ್ರಗಳಿಗೆ ಬಲಿ ಬೀಳುವುದು ಹಲವು ಶಕ್ತಿಹೀನ ಲೇಖಕರ ದಾರಿಯಾಗಿದೆ.

ಈ ಕಾದಂಬರಿಯ ಪಾತ್ರಗಳನ್ನು ಮನಶ್ಶಾಸ್ತ್ರೀಯವಾಗಿ ಸಹ ಯಾರು ಬೇಕಾದರೂ ಅರ್ಥಮಾಡಿಕೊಳ್ಳಬಹುದು. ಆದರೆ ಶ್ರೀರಂಗರ ಅಂತರಂಗ ವಿಶ್ಲೇಷಣೆ ಮಾತ್ರ ಮೂರ್ತ ಅನುಭವದ ಗಟ್ಟಿಕಲ್ಲನ್ನು ಬಿಟ್ಟು ಯಾವುದೊಂದು ಶಾಸ್ತ್ರದ ಅಮೂರ್ತ ಸೂತ್ರಗಳನ್ನು ಹಿಡಿದು ಹೊರಟಿಲ್ಲ. ನಾವು ಮೇಲೆ ನೋಡಿದ ಗಂಗಿಯ ಮನೋಚಿತ್ರಣವು ಈ ಮಾತನ್ನು ಸ್ಪಷ್ಟ ಪಡಿಸುತ್ತದೆ. ಬರೀ ಗಂಗಿಯಲ್ಲಿ ಮಾತ್ರವಲ್ಲ, ಉಳಿದ ಎಲ್ಲ ಪಾತ್ರಗಳ ಒಳಗಿನ ವರ್ಣನೆಯಲ್ಲಿಯೂ ಈ ಮಾತಿನ ಸತ್ಯವು ಕಾಣುತ್ತದೆ.

ಬರೆಹದ ವಸ್ತುನಿಷ್ಠೆಗೆ ಬೇಕಾದಂತಹ ಭಾಷೆಯು ಈ ಕಾದಂಬರಿಯಲ್ಲಿ ಹೇಗೆ ಬಂದಿದೆ ಎಂಬುದನ್ನೂ ನಾವು ನೋಡಬೇಕು. ಭಾಷೆಯನ್ನೇ ಪ್ರತ್ಯೇಕ ಸಂಗತಿ ಎಂದು ಭಾವಿಸಿ ಬಹು ದೂರ ನೋಡಲು ಸಾಧ್ಯವಿಲ್ಲ. ಸಂವಹನ ಕ್ರಿಯೆಯನ್ನು ಅತ್ಯಂತ ಸಮರ್ಪಕವಾಗಿ ಮಾಡಿ ತನ್ನ ಪ್ರತ್ಯೇಕ ಅಸ್ತಿತ್ವವನ್ನು ಎತ್ತಿಕಾಣಿಸದಂತೆ ಮರೆಯಾಗುವುದೇ ಸಫಲ ಭಾಷೆಯ ಗುಣ. "ಪ್ರಕೃತಿ-ಪುರುಷ' ದಲ್ಲಿ ಸಂವಹಿತವಾಗಿರುವ ವಿಚಾರವು ಯುಗಯುಗಾಂತರಗಳಲ್ಲಿಯೂ ಸತ್ಯವಾಗಿರುವ ಮಾನವ ಸ್ವಭಾವಕ್ಕೆ ಸಂಬಂಧಿಸಿದುದು. ಈ ಸತ್ಯವು ತನ್ನ ಸಂಕೀರ್ಣ ರೀತಿಗಳಲ್ಲಿ ಹೇಗೆ ಸಮಕಾಲೀನ ಸಾಮಾಜಿಕ ವ್ಯವಸ್ಥೆ ಮತ್ತು ಪದ್ಧತಿಗಳಲ್ಲಿ ಸಿಕ್ಕಿ ವಿಕೃತವಾಗುತ್ತಿದೆ ಎಂಬುದನ್ನು ತೋರಿಸುವುದೇ ಕಾದಂಬರಿಯ ವಿಚಾರದ ಬಹು ಮುಖ್ಯ ಕೆಲಸವಾಗಿದೆ. ಗಂಗಿಯಿಂದ ಹಿಡಿದು ಶಾಂತಳವರೆಗೆ ಶಾಮಣ್ಣನಿಂದ ಹಿಡಿದು ಭರಮನವರೆಗೆ ಹಲವು ಬಗೆಯ ಸಂಸ್ಕಾರ, ಬೌದ್ಧಿಕ ಬೆಳವಣಿಗೆಗಳ ಪಾತ್ರಗಳ ಒಳಗನ್ನು ಅವುಗಳಿಗೆ ಸಹಜವೆನಿಸುವ ಭಾಷೆಯಲ್ಲಿ ಅಭಿವ್ಯಕ್ತಿಸುವುದು ಮಾತ್ರವಲ್ಲದೆ ಈ ಪಾತ್ರಗಳ ಕ್ರಿಯೆಯನ್ನು ಕಾದಂಬರಿಕಾರರು ತಮ್ಮ ಭಾಷೆಯಲ್ಲಿ ವಿವರಿಸುವ ಸನ್ನಿವೇಶಗಳೂ ಈ ಕೃತಿಯ ಉದ್ದಕ್ಕೂ ಇವೆ. ಕಾದಂಬರಿಕಾರರೂ ನೇರವಾಗಿ ನಿರೂಪಿಸುವ ಭಾಷೆಯೇ ಬೇರೆ. ಪಾತ್ರಗಳ ಭಾಷೆಯೇ ಬೇರೆ. ಹೀಗೆ ಇರುವುದು ಈ ಕಾದಂಬರಿಗೇ ವಿಶಿಷ್ಟವಾದ ಸಮಸ್ಯೆಯಲ್ಲ. ನಾಟಕವೊಂದನ್ನುಳಿದು ಇತರ ಕಥಾಪ್ರಕಾರಗಳಾದ ಕಾದಂಬರಿ, ಸಣ್ಣಕಥೆ, ವ್ಯಕ್ತಿಚಿತ್ರಣ ಮೊದಲಾದುವು ಗಳಲ್ಲೆಲ್ಲ ಈ ಸಮಸ್ಯೆಯು ಕಾಣಿಸಿಕೊಳ್ಳುತ್ತದೆ. ಆದರೆ ನಾವು ಇಲ್ಲಿ ನೋಡಬೇಕಾಗಿರು ವುದು ಪ್ರಸಕ್ತ ಕಾದಂಬರಿಯಲ್ಲಿ ಭಾಷೆಯ ಬಳಕೆ ಹೇಗೆ ಆಗಿದೆ ಎಂಬುದನ್ನು.

ಗಂಗಿಯ ಪಾತ್ರಕ್ಕೆ ಅನ್ವಯಿಸಿ ನಾವು ನೋಡಿದ ಸಂದರ್ಭದಲ್ಲಿ ಪಾತ್ರಗಳ ಸಹಜ ಭಾಷೆಯ ಉಪಯೋಗವನ್ನು ಗಮನಿಸಿರುವುದರಿಂದ ಉಳಿದ ರೀತಿಯ ಪ್ರಸಂಗ ಗಳಲ್ಲಿ ಲೇಖಕರು ಎಂತಹ ಭಾಷೆಯನ್ನು ಬಳಸಿದ್ದಾರೆ ಎಂಬುದನ್ನು ಮಾತ್ರ ಇಲ್ಲಿ ವಿಶ್ಲೇಷಿಸಬಹುದು. ಪಾತ್ರಗಳದೇ ಭಾಷೆಯಾದಾಗ ಅದು ಆಯಾಪಾತ್ರಕ್ಕೆ ಸಹಜ ವಾದ ರೀತಿಯಲ್ಲಿ ಆದರೂ ಸಾಕಷ್ಟು ಅರ್ಥಸಂಕೀರ್ಣತೆಯೊಡನೆ ಬಂದಿದೆ. ಕೆಲ ವೊಮ್ಮೆಯಂತೂ ಸಾಕಷ್ಟು ರೂಪಕಮಯವಾಗಿ ಪುರಾಣ, ದರ್ಶನ ಶಾಸ್ತ್ರಗಳ ಅರ್ಥದ ಒತ್ತಾಸೆಯನ್ನು ಪಡೆದು, ಆದರೂ ಆಡುಮಾತಿನ ಸಹಜತೆಯಿಂದ

ಕೂಡಿವೆ. ಉದಾಹರಣೆಗೆ ಶೀನಿ ಮತ್ತು ರಾಗಣ್ಣನ ಈ ಸಂಭಾಷಣೆಯನ್ನು ನೋಡಬಹುದು. ತನ್ನ ತಂಗಿಯ ಮದುವೆ ಬೇಗ ಆಗಿ ಅವಳು ತಕ್ಷಣ ವಿಧವೆಯೂ ಆದುದಕ್ಕೆ ತನ್ನ ಜವಾಬ್ದಾರಿ ಏನು ಎಂಬ ಬಗೆಗೆ ರಾಗಣ್ಣ ಯೋಚಿಸುತ್ತಾನೆ.

"ಅಂದ್ರ. ಅವದ್ದೆಲ್ಲ ನಾನೇ ಬುದ್ಧಿಪೂರ್ವಕ ಮಾಡಿದ್ದು ಅಂತ ತಿಳಿದಿರೇನು, ಶ್ರೀನಿವಾಸರಾಯರ?"

"ಇಲ್ಲ—ನೀ ಬುದ್ಧಿಪೂರ್ವಕ ಮಾಡಿದ್ದಲ್ಲ. ಆ ಹಿಂದಿನ ಜನ್ಮದ ಕರ್ಮ ಇದೆಯಲ್ಲ? ಅದು ಒಂದು ಕೈಯೊಳಗ ಕಂದೀಲನ್ನೂ, ಇನ್ನೊಂದು ಕೈಯೊಳಗೆ ಬಡಿಗೆಯನ್ನೂ ಹಿಡಿದುಕೊಂಡು, ರಾತ್ರಿ ಬಂದು, ಬಾಗಿಲು ಬಡಿದು ನಿನ್ನನ್ನು ಎಬ್ಬಿಸಿ ಕರೆದುಕೊಂಡು ಹೋಯಿತು. ಪಾಪ! ನಿದ್ದೆಗಣ್ಣಿನೊಳಗೆ ನಿನಗೆ ಗೊತ್ತಿರಲಿಲ್ಲ, ಎಲ್ಲಿ ಹೋಗ್ತಿ, ಏನ್ಮಾಡ್ತೀ ಅಂತ ಪಾಪ!"

ಸಂಕ್ಷಿಪ್ತವಾಗಿ ಹೇಳಿದ ಈ ಎರಡು ಆಡುಮಾತು ಸಂಸ್ಕಾರ, ಕರ್ಮ, ಕರ್ಮವು ಆಡಿಸುವಾಗ ಮನುಷ್ಯನ ಜಾಗ್ರುತ ನಿಶ್ಚಯವು ಮಂಕಾಗುವುದು ಮೊದಲಾದ ಕಲ್ಪನೆಗಳನ್ನು ಚಿತ್ರವತ್ತಾಗಿ ವರ್ಣಿಸುವುದು ಮಾತ್ರವಲ್ಲದೆ ರಹಸ್ಯಮಯವಾದ ಅದರ ಶಕ್ತಿಯ ಎದುರು ಮನುಷ್ಯನ ಪ್ರತಿರೋಧಕ್ಕೆ ಯಾವ ಸಾಫಲ್ಯವೂ ಇಲ್ಲವೆಂಬುದನ್ನು "ಒಂದು ಕೈಯೊಳಗ ಕಂದೀಲನ್ನೂ ಇನ್ನೊಂದು ಕೈಯೊಳಗೆ ಬಡಿಗೆಯನ್ನೂ ಹಿಡಿದುಕೊಂಡು ರಾತ್ರಿ ಬಂದು ಬಾಗಿಲು ಬಡಿದು" ಕರೆದುಕೊಂಡು ಹೋಗುವ ಪೋಲೀಸನ ಅಥವಾ ಡಕಾಯಿತಿ ಗುಂಪೊಂದರ ಪ್ರತಿನಿಧಿಯ ಪ್ರತಿಮೆಯು ಚಿತ್ರಶಕ್ತಿಯಿಂದ ಸೂಚಿಸುತ್ತದೆ. ಇಷ್ಟೊಂದು ಶಕ್ತಿಪೂರ್ಣ, ಸಂಕೀರ್ಣ ಅರ್ಥವಿದ್ದರೂ ಇವೆರಡೂ ಕೇವಲ ಆಡು ಮಾತುಗಳು; ವಾಸ್ತವತೆಯ ವಾತಾವರಣಕ್ಕೆ ಹೊಂದಿಕೊಂಡು, ವಾಸ್ತವ ವಾತಾವರಣವನ್ನು ಸೃಷ್ಟಿಸಲು ಸಹಾಯಕವಾಗುವ ಸಹಜವಾದ ಮಾತುಗಳು.

ವಿವಿಧ ಸಂದರ್ಭಗಳಲ್ಲಿ ಲೇಖಕರ ನಿರೂಪಣ ಶೈಲಿಯು ಹೇಗೆ ಆಯಾ ಸಂದರ್ಭಕ್ಕೆ ತಕ್ಕಂತೆ ತನ್ನ ಕರ್ತವ್ಯವನ್ನು ನಿರ್ವಹಿಸುತ್ತದೆ ಎಂಬುದನ್ನು ಎರಡು ಮೂರು ಉದಾಹರಣೆಗಳಿಂದ ನೋಡಬಹುದು: ಸುಬ್ಬಿ–ಗುಂಡಣ್ಣರ ಮದುವೆಯಾದಾಗ "ಊರಿಗೆ ಊರೇ ಊಟಕ್ಕೆ ಆಮಂತ್ರಿತವಾಗಿತ್ತು. ಎಂದಿನಂತೆ ಪರಸ್ಯಾನಿಗೆ ತಾಜಾ ಅಡಿಗೆಯನ್ನೇ — ಆದರೆ ಎಂಜಲೆಲೆಗಳಲ್ಲಿ —ಬಡಿಸಿದರು. ಕಾಳ್ಯಾ ಎಲೆಗಳನ್ನು ಒಯ್ಯಲು ಬಂದಿರಲಿಲ್ಲ. ಅಪೇಕ್ಷಿಸಿಯೂ ಬಂದಿರಲಿಲ್ಲ." ಗುಂಡಣ್ಣ ಕಾಳ್ಯಾನ ಹೆಂಡತಿ ಗಂಗಿಯನ್ನು ಅಷ್ಟರಲ್ಲಿ ಉಪಭೋಗಿಸಿದ್ದಾನೆ. ಎಂಜಲಾದ ಹೆಂಡತಿಯ ಪ್ರಸಂಗದಲ್ಲಿ ಕಾಳನ ಮನಸ್ಸಿನಲ್ಲಿರುವ ತಿರಸ್ಕಾರ, ಕೋಪ, ಹತಾಶೆಗಳು ವಾಚಕರಿಗೆ ಈಗಾಗಲೇ ತಿಳಿದಿವೆ. ಪರಸ್ಯಾ ಇವರ ಮನೆಯ ಎಂಜಲೆಲೆಯಲ್ಲಿ ತಿನ್ನುವುದು ಸಾಧಾರಣ ಸಂಗತಿ. ಯುದ್ಧಕ್ಕೆ ಹೋಗಿ ಶಿಪಾಯಿಯಾಗಿದ್ದು ಹೊರ ಜಗತ್ತಿನಲ್ಲಿ ಅಸ್ಪೃಶ್ಯತೆಯಿಲ್ಲದೆ ಸಮಾನತೆಯನ್ನು ಕಂಡುಬಂದಿರುವ

ಕಾಳ್ಯಾ ಎಂಜಲೆಲೆಯನ್ನು ಒಯ್ಯಲು ಬಾರದಿರುವುದೂ ಅಷ್ಟೇ ಸಾಧಾರಣ. ಸಹಜ ಸಂಗತಿ, ಅವನ ಹೆಂಡತಿಯು ಅದೇ ಸಮಾರಾಧನೆಯ ಮದುವಣಿಗನಿಂದ ಎಂಜಲಾಗಿರುವುದನ್ನು ಪರ್ಯಾಯವಾಗಿ ಸಹ ಹೇಳದೆ ಈ ಸರಳ ವಾಕ್ಯಗಳು ಇಡೀ ಪ್ರಸಂಗದ ಹಿನ್ನೆಲೆ ಮತ್ತು ಮನೋಭಾವನೆಗಳನ್ನೇ ಅಲ್ಲದೆ,ಅವನ ಅಪ್ಪ ಪರಸ್ಯಾನ ಸ್ವಭಾವವನ್ನೂ ವ್ಯಕ್ತಪಡಿಸುತ್ತವೆ.

ಕಾಳ್ಯಾ ಬಂದ ಮೇಲೆ ಗುಂಡಣ್ಣ ಗಂಗಿಯರ ಸಂಬಂಧ ತಪ್ಪಿ ಹೋಗಿರುತ್ತದೆ. ಗಂಗಿಯನ್ನು ಮತ್ತೆ ಒಲಿಸಿಕೊಳ್ಳುವುದೇ ತಾನು ಕಾಳನಿಗೆ ಮಾಡಬಹುದಾದ ತಕ್ಕ ಶಿಕ್ಷೆ ಎಂದು ಯೋಚಿಸಿದ ಗುಂಡಣ್ಣ ಒಂದುದಿನ ಗಂಗಿಯ ಗುಡಿಸಲಿಗೆ ಬರುತ್ತಾನೆ. "ಹಿಂದೆ ಗುಡಿಸಲ ನೆರಳಿನಲ್ಲಿ ಗಂಗಿ ಕೂತಿದ್ದಳು; ಒಂದು ಕಣ್ಣು ಅಲ್ಲಿಯೇ ಸುತ್ತಲು ಮೇಯುವ ದನಗಳಮೇಲೆ, ಇನ್ನೊಂದು ಕಣ್ಣು ನೂಲುತ್ತಿರುವ ರಾಟೆಯ ಮೇಲೆ. ಬೇರೆ ಯಾರೂ ಇಲ್ಲದ್ದನ್ನು ಕಂಡು ಗುಂಡಣ್ಣನ ಹೃದಯ ನಗುತ್ತಲಿತ್ತು. ನೆರಳು, ಆಮೇಲೆ ಕಾಲುಸದ್ದು. ಗಂಗಿ ಓರೆಯಾಗಿ ನೋಡಿದಳು. ಓಹೊ—ಎಂದುಕೊಂಡಳು. ತಟ್ಟನೆ ತಲೆಯ ಮೇಲಿನ ಸೆರಗನ್ನು ಸಾವರಿಸಿಕೊಂಡು ಮುಖವನ್ನು ಇನ್ನಿಷ್ಟು ತಿರುಗಿಸಿದಂತೆ ಮಾಡಿ ಕುಳಿತಳು."

ಇವೂ ಸಾಧಾರಣ ಸಂಗತಿ, ಕ್ರಿಯೆಗಳನ್ನು ನಿರೂಪಿಸುವ ಸರಳ ವಾಕ್ಯಗಳೆ. ಮೊದಲ ವಾಕ್ಯವು ಗಂಗಿ ಕೂತಿದ್ದ ಸ್ಥಳ, ,ಭಂಗಿ, ಅವಳು ಮಾಡುತ್ತಿದ್ದ ಕೆಲಸಗಳನ್ನೇ ಅಲ್ಲದೆ ಅವಳ ಸುತ್ತ ಇರುವ ದನ ಮೇಯುವ ಬಯಲು ಮೊದಲಾದ ಆವರಣದ ವಿವರಗಳನ್ನೆಲ್ಲ ಸೂಚಿಸುತ್ತದೆ. "ಬೇರೆ ಯಾರೂ ಇಲ್ಲದ್ದನ್ನು ಕಂಡು"—ಎಂದು ಎರಡನೆಯ ವಾಕ್ಯವು ಪ್ರಾರಂಭವಾಗುವ ಮೊದಲೇ ಅಲ್ಲಿ ಬೇರೆ ಯಾರೂ ಇಲ್ಲವೆಂಬುದನ್ನು ಮೊದಲ ವಾಕ್ಯವೇ ಸೂಚಿಸಿರುತ್ತದೆ. "......ಗುಂಡಣ್ಣನ ಹೃದಯ ನಗುತ್ತಿತ್ತು. ನೆರಳು, ಆಮೇಲೆ ಕಾಲುಸದ್ದು." ವಿಟನ ಮನಸ್ಸಿಗೆ ಈ ಏಕಾಂತ ಸಂದರ್ಭದಿಂದ ಸಂತೋಷವಾಗುವುದನ್ನು ಹೇಳುವುದು ಮಾತ್ರವಲ್ಲ. ತನ್ನ ಬಯಕೆಯಹೆಣ್ಣಿನ ಗಮನವನ್ನು ಸೆಳೆಯಲು ಸಾಧಾರಣವಾಗಿ ವಿಟರು ಮಾಡುವುದನ್ನೇ ಅವನೂ ಮಾಡುತ್ತಾನೆ. ನೆರಳು ತಾನೆ ಬೀಳುವುದು. ಆದರೆ ಕಾಲುಸದ್ದು ಅವನು ಮಾಡುವುದು. ಅದು ನಡಿಗೆಯ ಸದ್ದಲ್ಲ. ಹೆಜ್ಜೆಯ ಸದ್ದಲ್ಲ. "ಗಂಗಿ ಓರೆಯಾಗಿ ನೋಡಿದಳು. ಓಹೊ—ಎಂದುಕೊಂಡಳು." ಗುಂಡಣ್ಣನನ್ನು ಅವಳೂ ಬಯಸುತ್ತಿರುವುದು. ಇಷ್ಟು ದಿನದ ನಂತರ ಇವನು ಬಂದಿದ್ದಾನೆ, ಆದರೆ ತಕ್ಷಣ ಅವನ ಇಚ್ಛೆಗೆ ಮಣಿಯದೆ ಸತಾಯಿಸಿ ತನ್ನ ಮಹತ್ವವನ್ನು ತೋರಿಸಿಕೊಳ್ಳಬೇಕು, ಅಥವಾ ಬೇರೆ ಏನಾದರೂ ವಸೂಲು ಮಾಡಬೇಕು, ಸ್ವಲ್ಪ ಬಿಗಿಯಾಗಿಯೇ ನಡೆದುಕೊಳ್ಳಬೇಕು-ಮೊದಲಾಗಿ ಈ ಸಂದರ್ಭದಲ್ಲಿ ತತ್‌ಕ್ಷಣ ಅವಳ ಒಳಗೆ ನಡೆದಿರಬಹುದಾದ ಸಂಕೀರ್ಣ ಭಾವನೆ. ಆಲೋಚನೆ ಮತ್ತು ಪ್ರತಿಕ್ರಿಯೆಗಳ ಸಂಯುಕ್ತತೆಯು "ಓಹೊ—ಎಂದುಕೊಂಡಳು" ಎಂಬ ಸಂಕ್ಷಿಪ್ತ ಬಿಡಿ ವಾಕ್ಯದಲ್ಲಿ ವ್ಯಕ್ತವಾಗುತ್ತದೆ. "ತಟ್ಟನೆ ತಲೆಯ ಮೇಲಿನ ಸೆರಗನ್ನು

ಸಾವರಿಸಿಕೊಂಡು" (ಈಗ ತಾನು ಗಂಡನ ಸಂಗಡವಿರುವ ಗರತಿ ಎಂಬುದನ್ನು ಅವನಿಗೆ ಅರ್ಥಮಾಡಿಸಲು) "ಮುಖವನ್ನು ಇನ್ನಿಷ್ಟು ತಿರುಗಿಸಿದಂತೆ ಮಾಡಿ (ವಾಸ್ತವವಾಗಿ ತಿರುಗಿಸಿ ಅಲ್ಲ) ಕುಳಿತಳು."

ಗದ್ಯವು ಪಡೆಯಬಹುದಾದ ಯಶಸ್ವಿರೂಪಗಳಲ್ಲಿ ಇದು ಒಂದು. ಒಡೆದು ಕಾಣುವ ರೂಪಕ, ಪ್ರತಿಮೆ ಮೊದಲಾದ ಯಾವ ಅಲಂಕಾರವೂ ಇಲ್ಲದೆ, ಆದರೆ ಈ ಅಲಂಕಾರಗಳ ಉದ್ದೇಶವಾದ ಅರ್ಥ ಸ್ಪಷ್ಟತೆಯನ್ನು ಅಷ್ಟೇ ಪರಿಣಾಮಕಾರಿಯಾಗಿ ಮಾಡುವುದೇ ಅಲ್ಲದೆ ಸಾಧಾರಣ ಬಾಹ್ಯಕ್ರಿಯಾವರ್ಣನೆಗಳಿಂದ ಆ ಕ್ರಿಯೆಯ ಒಳ ಅರ್ಥವನ್ನು ಸಂಕೇತಿಸುವ ಈ ಶೈಲಿಯನ್ನು ಗದ್ಯದ ಒಂದು ಪಕ್ವರೂಪವೆನ್ನಬಹುದು.

ಮಗನ ಮೇಜಿನಿಂದ ದುಡ್ಡು ಹೊಡೆದು. ಬಾಟಲಿ ಹೆಂಡ ಕುಡಿದು ಸೂಳೆಗೇರಿಗೆ ಹೋದಾಗ ಕಾಳ್ಯಾನ ಮನಸ್ಸಿನಲ್ಲಿ ಬರುವ ಆಲೋಚನೆ: "ಕಿಸೇದಾಗ ನೋಟು! ಮುಂದೆ ಗತಿ? ಮತ್ತ ಯಾರಾದ್ರೂ ಬಂದು ಇಲ್ಲೇ ನನ್ನ ಕೈ ಹಿಡಿದರ?... ಛೆ!, ಏಳೋ ನಿನ! ಈಟೊಂದು ಪುಕ್ಕ ಅದೀ ಅಂತೇ ಬೀದೀ ಬಸವೇರೂ ನಕ್ಕರು ಇದ್ಯಾತರ ಗಂಡಸು ಅಂತ......"

ಕಾಳ್ಯಾ ಕುಡಿದಿದ್ದಾನೆ. ಕುಡಿತವೇ ಅವನಿಗೆ ಧೈರ್ಯ ಕೊಟ್ಟಿದೆ. ಆದರೆ ತನ್ನಲ್ಲಿರುವುದು ಮಗನ ಮೇಜಿನಿಂದ ಕದ್ದ ನೋಟು ಎನ್ನುವ ನೆನಪಿನಿಂದ ಹೆದರಿಕೆಯೂ ಇದೆ. ಆದರೆ ತನ್ನ ಪೌರುಷದ. ಗಂಡಸು ವ್ಯಕ್ತಿತ್ವದ ನೆನಪು ತಕ್ಷಣ ಬರುತ್ತದೆ. ಇಲ್ಲಿ ಹೆಚ್ಚು ಸಂಕೀರ್ಣವಾದ ಯಾವ ವಿಚಾರವಾಗಲಿ ಅರ್ಥ ಕ್ಲಿಷ್ಟತೆಯಾಗಲಿ ಇಲ್ಲ. ಸರಳವಾದ ಭಾವನೆಗಳನ್ನು ಸರಳನಾದ ಹಳ್ಳಿಗನೊಬ್ಬನು ಅದೂ ಕುಡಿತದ ಪ್ರಭಾವ ದಲ್ಲಿ ತನಗೆ ತಾನೇ ಹೇಳಿಕೊಳ್ಳುವ ಮಾತು. ಕಾಳ ಎಂಬುವ ಈ ವ್ಯಕ್ತಿ ಮತ್ತು ಅವನು ಈಗಿರುವ ಸ್ಥಿತಿಯು ನಿಜವೇ ಆಗಿದ್ದರೆ ಅವನು ಇದೇ ಮಾತನ್ನು ಇದೇ ವಾಕ್ಯಗಳಲ್ಲಿಯೇ ಆಡುತ್ತಿದ್ದ.

ಹೀಗೆ ತಾನು ಅಭಿವ್ಯಕ್ತಿಸಬೇಕಾದ ವಿಷಯದ ಸರಳತೆ ಅಥವಾ ಸಂಕೀರ್ಣತೆಯ ಪ್ರಮಾಣಕ್ಕೆ ತಕ್ಕಂತೆ ತನ್ನ ಶಕ್ತಿ ಸ್ವರೂಪಗಳನ್ನು ವಿನ್ಯಾಸಗೊಳಿಸಿಕೊಂಡು. ತನ್ನ ಸ್ವರೂಪದ ಸರಳತೆಯನ್ನು ಮಾತ್ರ ಕಳೆದುಕೊಳ್ಳದೆ ಸಾಗಿರುವ ಈ ಕೃತಿಯ ಭಾಷೆಯು ಕನ್ನಡ ಕಾದಂಬರಿಗಳ ಶೈಲಿಯಲ್ಲಿ ವಿಶಿಷ್ಟವಾಗಿದೆ.

ಕೆಲವು ಕಡೆಗಳಲ್ಲಿ ಬರಹವು ದ್ವಿರುಕ್ತಿಯ ಅಥವಾ ಅತಿಉಕ್ತಿಯ ದೋಷಕ್ಕೆ ಒಳಗಾಗಿದೆ. ಇದನ್ನು ಎರಡು ಉದಾಹರಣೆಗಳಿಂದ ನಿದರ್ಶಿಸಬಹುದು:

ಪೈಲ್ವಾನ ರಾಮಪ್ಪ ಸೇಡಜಿಯ ಅಂಗಡಿಯಲ್ಲಿ ಇರುವಾಗ ಗಂಗಿ ಅಲ್ಲಿಗೆ ಬಂದು ಅವರಿಬ್ಬರೂ ಒಂದುಗೂಡುವ ಸನ್ನಿವೇಶದ ನಿರೂಪಣೆ ಹೀಗಿದೆ:

"ಗಂಗಿ ಸೆರಗನ್ನು ತಲೆಯ ಮೇಲೆ ಸಾವರಿಸಿಕೊಳ್ಳುತ್ತಾ 'ಚಿಮಣಿ'ಯನ್ನಿಡಲು ಬಾಗಿದಳು. ಸಾವಿರಾರು ವರ್ಷಗಳಾಚೆ ಹಿಂದೆ ಸರಿಯಿತು ಇತಿಹಾಸ: ಕತೆ ಒಂದೇ, ಕತೆ ಅದೇ; ಹೆಣ್ಣು, ಗಂಡು. ಆದರೂ ಸಾವಿರಾರು ವರ್ಷಗಳಾಚೆಯ ಕತೆಯಾಯಿತು: ಯಾಕೆಂದರೆ ಇಲ್ಲಿ ಯಾವ ನಿರ್ಬಂಧವಿದ್ದಿರಲಿಲ್ಲ. ಗಂಡು–ಹೆಣ್ಣು; ಇಡಿಯ ಜನ್ಮವನ್ನೆ ಒಂದು ವಿಶಿಷ್ಟ ಗಳಿಗೆಗಾಗಿ ಕಾಯುವುದರಲ್ಲಿ ಕಳೆಯುತ್ತಿರಬಹುದೆ? ಬಾಗಿದ ಹೆಣ್ಣಿನ ಮೈಯ ಮುಚ್ಚಿದ ಅಂಗಾಂಗಗಳು ಕಂಡೊಡನೆ ಎದುರಿದ್ದ ಗಂಡು ಸೃಷ್ಟಿ ಶಕ್ತಿಗೆ ಸಿಲುಕಿ ಪರ ವಶವಾಗುವುದು; ಅದೊಂದು ಕ್ಷಣ. ಆದರೆ ಆ ಒಂದು ಕ್ಷಣಕ್ಕಾಗಿ ಪ್ರಕೃತಿ - ಪುರುಷರ ಕಣ್ಣುಮುಚ್ಚಾಲೆ ನಡೆದಂತಿದೆ.

"ಅಯ್ಯ! ಸೇಡಜಿಯವರು ಬಂದಗಿಂದಾರು—" ಗಂಗಿ ತಡವರಿಸಿದಳು.

"ಇನ್ನ ಬಂದೇನು ಮಾಡ್ತಾನ? ಆಂ? ಹಹ; ಇಕ—ನೀ ಬಂದಿಲ್ಲ, ಉದ್ದರಿ ಒಯ್ಯುವುದಿಲ್ಲ. ಆಂ? ಏನ್ಮಾಡ್ತಾನ ಮಾಡ್ಲಿ ಸೇಡಜಿ?"

ಗಂಡು ಹೆಣ್ಣಿನ ಶಾರೀರಿಕ ಆಕರ್ಷಣೆ ಮೂಲ ಪ್ರಕೃತಿ ಪುರುಷರ ಆಕರ್ಷಣೆಯ ರೀತಿಗಳು ಅಥವಾ ಪುನರಾವರ್ತನೆ ಮಾತ್ರ ಎಂಬುದನ್ನು ಈ ಕಾದಂಬರಿಯಲ್ಲಿ ಗಂಡು ಹೆಣ್ಣಿನ ಸಂಬಂಧ ಬಂದ ಕಡೆಯಲ್ಲೆಲ್ಲ ಲೇಖಕರು ತೋರಿಸುತ್ತಾರೆ. ಹಾಗೆ ತೋರಿಸುವುದು ಕಥೆಯ ಮೂಲ ಕಲ್ಪನೆಯ ಒಂದು ಅವಿಭಾಜ್ಯ ಅಂಗ. ಆದರೆ ನಾವು ಮೇಲೆ ಉದ್ಧರಿಸಿದ ಉದಾಹರಣೆಯಲ್ಲಿ ಪ್ರಕೃತಿ-ಪುರುಷ ಸಂಬಂಧದ ಆದಿಸತ್ಯವನ್ನು ತೋರಿಸುವ ಉದ್ದೇಶವು ಬರವಣಿಗೆಯನ್ನು ಅತಿಯಾಗಿ ಬೆಳಸಿ ಅನಾವಶ್ಯಕ ವ್ಯಾಖ್ಯೆಯಲ್ಲಿ ಪರಿಣಾಮ ಗೊಳಿಸಿದೆ. "ರಾಮಪ್ಪನು ತನ್ನನ್ನು ದಿಟ್ಟಿಸಿ ನೋಡುವ ಸಮಯವನ್ನು ನಿರೀಕ್ಷಿಸಿ ಅದೇ ಕ್ಷಣಕ್ಕೆ 'ಚಿಮಣಿ'ಯನ್ನಿಡಲು ಬಾಗಿದಳು" ಎಂಬ ವಾಕ್ಯವಾದ ನಂತರ "ಸಾವಿರಾರು ವರ್ಷಗಳಾಚೆ ಹಿಂದೆ ಸರಿಯಿತು ಇತಿಹಾಸ" ಎಂಬುದರ ಬದಲು "ಲೆಕ್ಕ ಕಾಣದಷ್ಟು ಕಾಲದ ಹಿಂದೆ ಸರಿಯಿತು ಇತಿಹಾಸ" ಎಂದು ಈ ವಾಕ್ಯಗುಂಫನವ ಮುಂದೆ ಬರುವ ಎಲ್ಲ ವಾಕ್ಯಗಳನ್ನೂ ಕೈಬಿಟ್ಟು. "ಅಯ್ಯ! ಸೇಡಜೀಯವರು ಬಂದಗಿಂದಾರು' —ಗಂಗಿ ತಡವರಿಸಿದಳು"—ಎಂದು ಮುಂದುವರಿಸಿದ್ದರೆ ಕಥೆಯ ಕ್ರಿಯೆಯು ತಡವರಿಸದೆ ಮುಂದುವರೆಯುತ್ತಿದ್ದುದು ಮಾತ್ರವಲ್ಲ, ಅನಾವಶ್ಯಕ ವ್ಯಾಖ್ಯೆಯ ಭಾರಕ್ಕೆ ಸಿಲುಕದೆ ಅರ್ಥೋದ್ದೇಶವು ಇನ್ನೂ ಹೆಚ್ಚು ಸ್ಪಷ್ಟವೂ ಪರಿಣಾಮಕಾರಿಯೂ ಆಗುತ್ತಿತ್ತು.

'ಪ್ರಕೃತಿ' 'ಪುರುಷ' ಎರಡು ಭಾಗಗಳ ಅಂತ್ಯದಲ್ಲೂ ಭರಮ "ಬಿಟ್ಟೂರನ್ನು ನಾನು ಚೆನ್ನಾಗಿ ಬಲ್ಲೆ" ಎನ್ನುವ ಭಾಗ ಬರುತ್ತದೆ. ಇಲ್ಲಿ ಭರಮನೂ ಬಿಟ್ಟೂರನ್ನು ತಾನು ಬಲ್ಲೆನೆನ್ನುತ್ತಾನೆ. ತನಗೆ ಗೊತ್ತಿಲ್ಲದ ಬಿಟ್ಟೂರು ಇವನಿಗೇನು ಗೊತ್ತು? ಎಂದು ರಾಗಣ್ಣನೂ ಯೋಚಿಸುತ್ತಾನೆ. ಪ್ರತಿಯೊಬ್ಬನಿಗೂ ತನ್ನ ತನ್ನ ಅನುಭವದ ಆಂಶಿಕ ಬಿಂದು ಮಾತ್ರ ಗೊತ್ತಿದೆ; ಸಂತತವಾದ ಪ್ರವಾಹವನ್ನು ತಿಳಿದವನು ಯಾರೂ ಇಲ್ಲ

ಎಂಬ ತತ್ವವನ್ನು ಲೇಖಕರು ಸೂಚಿಸಬೇಕಾಗಿದೆ. ಅಷ್ಟಕ್ಕೆ 'ಪ್ರಕೃತಿ' ಭಾಗದ ಕೊನೆಯಲ್ಲಿ ಸುಮಾರು ಒಂದು ಪುಟಗಳತನಕ ಬರುವ

"ಹದಿನಾಲ್ಕು ವರ್ಷಗಳ ಹಿಂದಿನ ಕತೆ.

ಈಗಿನ ಯುವಕರಿಗೆ—ಬಿ. ರಾಮು (ಭರಮಪ್ಪ)ನಿಗೆ ಮತ್ತು ರಾಗಣ್ಣನಿಗ ತಿಳಿಯದ ಕತೆ. ಯಾರು ತಾವುದನ್ನು ಬಲ್ಲರು?"

ಇಷ್ಟು ಹೇಳಿ ನಿಲ್ಲಿಸಿದ್ದರೆ ಕಾದಂಬರಿಯ ಉದ್ದೇಶಾರ್ಥವು ಸ್ಪಷ್ಟವಾಗುತ್ತಿತ್ತು. ಆದರೆ ಮುಂದೆ ಬರುವ "ಮೇಲಿನ ನಾಲ್ಕಾರಡಿ ಎತ್ತರದ ತೆರೆಯನ್ನು ನೋಡಿ ಲೋಕಾಂತರ ಆಳವಾದ ಸಮುದ್ರವನ್ನು ಬಲ್ಲೆ ಎಂಬವನಿಗೆ ಯಾರು ಹೆದರುತ್ತಾರೆ?..." ಎಂದು ಮೊದಲಾಗಿ ಸಾಗುವ ಹತ್ತು ಹದಿನೈದು ಸಾಲುಗಳು ಅನಾವಶ್ಯಕ ತಾತ್ವಿಕ ಉದ್ಗಾರವೆನಿಸುತ್ತದೆ. 'ಪುರುಷ'ದ ಕೊನೆಗೂ ಸುಮಾರು ಇಪ್ಪತ್ತು ಸಾಲು ಇದೇ ವ್ಯಾಖ್ಯೆಯು ಇದೇ ಭಾಷೆಯಲ್ಲಿ ಬರುತ್ತದೆ:

"ಇಂದು ಬಿಟ್ಟೂರಿದೆ

ಹಿಂದು—ಬಿಟ್ಟೂರಿದ್ದಿತು,

ಮುಂದೂ—ಬಿಟ್ಟೂರು ಇದ್ದೇ ಇರುವುದು.

ತನಗಾಗಿಯೇ ಬಿಟ್ಟೂರು, ತನಗ ಗೊತ್ತಿದ್ದುದೆ ಬಿಟ್ಟೂರು ಎಂಬವರಿಗೇನು ಗೊತ್ತು?

ಒಂದು ಕ್ಷಣ ಬದುಕಿ. ಇನ್ನೊಂದು ಕ್ಷಣದಲ್ಲಿ ಇಲ್ಲದಂತಾಗುವ ಪ್ರಾಣಿ ಸಂತತ ವಾಗಿದ್ದ ಸೃಷ್ಟಿಯನ್ನು ಅರಿಯುವುದೆಂತು?......"

ಎಂದು ಸಾಗುವ ತಾತ್ತ್ವಿಕ ಪ್ರಶ್ನೆಗಳು 'ಬಿಟ್ಟೂರು' ಅದನ್ನು ಬಲ್ಲೆವೆನ್ನುವ ರಾಮು. ರಾಗಣ್ಣರ ಭಾವನೆಗಳ ಸಾಂಕೇತಿಕತೆಯನ್ನು ಮೊಂಡು ಮಾಡುತ್ತವೆ.

ಇಂತಹ ಅನಾವಶ್ಯಕ ಹಿಂಜಿಕೆ ಮತ್ತು ಪುನರುಕ್ತಿಗಳು ಬರೀ ಭಾಷೆಯ ದೋಷವಲ್ಲ. ಲೇಖಕರ ತತ್ತ್ವಪ್ರಜ್ಞೆಯು ಹಲವು ಕಡೆಗಳಲ್ಲಿ ಕಲಾಪ್ರಜ್ಞೆಯನ್ನು ಮರೆ ಮಾಡಿ ತಲೆ ಎತ್ತಿರುವ ಗುರುತುಗಳು. ಪುನಃ ಇಡೀ ಕಾದಂಬರಿಯನ್ನು ಓದಿ ಇಂತಹ ಸಾಲುಗಳನ್ನು ತೆಗೆದು ಹಾಕಿದರೆ ಸಾಕು. ಈ ದೋಷ ಪರಿಹಾರವಾಗುತ್ತದೆ.

ಈ ಕಾದಂಬರಿಯ ಒಂದೊಂದು ಪಾತ್ರಗಳೂ ಪ್ರಕೃತಿ–ಪುರುಷ ಸಂಬಂಧದ ಒಂದೊಂದು ಮುಖವನ್ನು ಪ್ರತಿನಿಧಿಸುತ್ತವೆ. ಒಂದು ದೃಷ್ಟಿಯಿಂದ ನೋಡಿದರೆ ಕೆಲವು ಹೆಣ್ಣು ಮತ್ತು ಗಂಡು ಪಾತ್ರಗಳಲ್ಲಿ ಒಂದು ರೀತಿಯ ಸಾಮ್ಯ ಕಂಡರೂ ಒಂದೊಂದೂ ಸಮಸ್ಯೆಯ ಒಂದು ವಿಶಿಷ್ಟ ಬಿಂದುವಿನಿಂದ ತನ್ನ ವ್ಯಕ್ತಿತ್ವವನ್ನು ಪಡೆಯು

ತ್ತದೆ. ಪರಸ್ಯಾನಿಗಿಂತ ಕಾಳನು ಬೇರೆ ಸಿಜ. ಪರಸ್ಯಾ ಸಂಪ್ರದಾಯಕ್ಕೆ ಪೂರ್ತಿಯಾಗಿ ಕಟ್ಟು ಬಿದ್ದು ಕೈಯ ಮಣಿಕಟ್ಟು ಮುರಿಸಿಕೊಂಡರೂ ಅದು ತನ್ನ ಜಾತಿಯವನಿಗೆ ತೀರ ಸಹಜವೆಂದು ಸ್ವೀಕರಿಸುತ್ತಾನೆ. ಮಗ ಕಾಳ್ಯಾ ಸಂಪ್ರದಾಯಕ್ಕೆ ವಿರೋಧವಾಗಿ ಹೊರಡುವ ವ್ಯಕ್ತಿ. ಆದರೆ ಅದನ್ನು ಪೂರ್ತಿಯಾಗಿ ಕಳಚಿ ಒಗೆಯುವ ವಿದ್ಯಾಭ್ಯಾಸವಾಗಲಿ ತಿಳಿವಳಿಕೆಯಾಗಲಿ ಇಲ್ಲದೆ ತನ್ನ ಜಾತಿಯ ಪ್ರತ್ಯೇಕತೆಯನ್ನು ನಂಬಿಯೇ ನಡೆಯುತ್ತಾನೆ. ಅವನ ಮಗ ಭರಮನಿಗೆ ವಿದ್ಯಾಭ್ಯಾಸವಾಗಿದೆ. ತಿಳಿವಳಿಕೆಯೂ ಇದೆ. ತನ್ನ ಹುಟ್ಟುಜಾತಿಯ ಹೆಸರಿನ ಮೈಲಿಗೆಯಿಂದಲೂ ದೂರವಾಗಬೇಕೆಂದು ಚಡಪಡಿಸುವ ಅವನಿಗೆ ಪೂರ್ತಿಯಾಗಿ ಹೊಸ ಸಂಸ್ಕಾರ ದೊರೆಯುವುದಿಲ್ಲ: ಸಮಾಜವು ಅದಕ್ಕೆ ಅವಕಾಶವನ್ನೂ ಕೊಡುವುದಿಲ್ಲ. ಎಷ್ಟೇ ತಿರಸ್ಕಾರವಿದ್ದರೂ ಮಾನಸಿಕವಾಗಿ ಜಾತಿಯ ವ್ಯವಸ್ಥೆಯನ್ನು ಒಪ್ಪುವುದೇ ಅವನಿಗೆ ದಿಕ್ಕಾಗುತ್ತದೆ. ಇಲ್ಲಿ ಕಾಳ ಮತ್ತು ಭರಮರಲ್ಲಿ ಎಷ್ಟು ಸಾಮ್ಯವಿದ್ದರೂ ಅವರವರ ಭಾವನೆ ಮತ್ತು ಅನುಭವದ ಕೇಂದ್ರ ಬಿಂದು ಬೇರೆ ಬೇರೆಯವೇ. ಇದರ ವಿವರವನ್ನು ನಾವು ಮುಂದೆ ನೋಡಬಹುದು.

ಹಾಗೆಯೇ, ರಾಯರ ಮಗಳು ಶಾಂತಾ, ತಂಗಿ ಸರಸಿ. ಅವಳ ಮಗಳು ಸುಬ್ಬಕ್ಕ, ಸುಬ್ಬಕ್ಕನ ಮಗಳು ಸರಸ್ವತಿ, ಎಲ್ಲರೂ ವಿಧವೆಯರೇ ಆದರೂ ಒಬ್ಬೊಬ್ಬರೂ ವೈಧವ್ಯಾ–ನುಭವದ ಬೇರೆ ಬೇರೆ ಮುಖಗಳನ್ನು ಪ್ರತಿನಿಧಿಸುತ್ತಾರೆ. ಹಾಗೆ ನೋಡಿದರೆ ಗಂಗಿ ಮತ್ತು ಚನ್ನಿಯರ ನಡುವೆ ಕಥಾತತ್ತ್ವದ ದೃಷ್ಟಿಯಿಂದ ಕ್ರಿಯಾತ್ಮಕವಾಗಿ ಹೆಚ್ಚು ವ್ಯತ್ಯಾಸ ಕಾಣುವುದಿಲ್ಲ. ರಾಯರು. ಗುಂಡಣ್ಣ. ಶಾಮಣ್ಣ. ರಾಗಣ್ಣರು ಸಮಸ್ಯೆಯ ಭಿನ್ನ ಮುಖಗಳನ್ನು, ಅನುಭವದ ಭಿನ್ನ ಬಿಂದುವನ್ನು ಪ್ರತಿನಿಧಿಸುತ್ತಾರೆ.

ಕಥೆ ಮತ್ತು ಪಾತ್ರಗಳಿಗಿರುವ ಸಂಬಂಧವು ಹೀಗೆಯೇ ಇರಬೇಕು ಎಂದು ಸಾಮಾನ್ಯ ನಿಯಮರೂಪದಲ್ಲಿ ಕ್ರೋಢೀಕರಿಸಿ ಹೇಳುವುದು ಸಾಧ್ಯವಿಲ್ಲದಿದ್ದರೂ ಕಥೆಯು ಪಾತ್ರಗಳ ಅನುಭವದ ಸಮಗ್ರತೆಯಲ್ಲಿ ಒಂದಾಗಿರುತ್ತದೆ. ಎಷ್ಟೋ ಸಂದರ್ಭದಲ್ಲಿ ಅನುಭವದ ಅಭಿವ್ಯಕ್ತಿಯೇ ಪ್ರಧಾನವಾಗಿ 'ಪಾತ್ರ' ಮತ್ತು 'ಕಥೆ' ಎಂದು ಪ್ರತ್ಯೇಕವಾಗಿ ಗುರುತಿಸಬಹುದಾದ ರೇಖೆಗಳು ಮಸುಕಾಗಿರುತ್ತವೆ. ಆದರೆ ಕಥಾ ತತ್ತ್ವ ಅಥವಾ ಸಮಸ್ಯೆಯೇ ಆಧಾರವಾಗಿರುವ ಕಥೆಯಲ್ಲಿ ಪಾತ್ರಗಳು ಮತ್ತು ಕಥೆ, ಪಾತ್ರಗಳ ಸಮಸ್ಯೆ ಮತ್ತು ಕಥಾವಸ್ತುಗಳೆರಡೂ ಸ್ಪಷ್ಟವಾಗಿ ಒಂದೇ ಆಗಿರುತ್ತವೆ. 'ಪ್ರಕೃತಿ-ಪುರುಷ'ವು ಈ ಜಾತಿಯ ಕಾದಂಬರಿಯಾದುದರಿಂದ ಪ್ರತಿಯೊಂದು ಪಾತ್ರದ ಸಮಸ್ಯೆ ಮತ್ತು ಅನುಭವವು ಸಮಗ್ರ ಕಥಾ ತತ್ತ್ವದ ವಿಶಿಷ್ಟ ಭಾಗಗಳಾಗುತ್ತವೆ ಇದೇ ಮಾತನ್ನು ಬೇರೆ ರೀತಿಯಲ್ಲಿ ಹೇಳಬೇಕಾದರೆ: ಪ್ರತಿಯೊಂದು ಪಾತ್ರದ ಸಮಸ್ಯೆ ಮತ್ತು ಅನುಭವಗಳನ್ನು ವಿವರಿಸದೆ ಈ ಕಾದಂಬರಿಯ ಕಥಾ ತತ್ತ್ವವನ್ನು ವಿವರಿಸುವುದು ಸಾಧ್ಯವಾಗುವುದಿಲ್ಲ.

ಪ್ರಕೃತಿಯ ಬಂಧನದಿಂದ ಮುಕ್ತವಾಗುವುದೇ ಉತ್ತಮ ಜೀವನದ ಉದ್ದೇಶ ಹಾಗೂ ಸ್ಥಿತಿ. ಇಲ್ಲಿ ಪ್ರಕೃತಿ ಮತ್ತು ಪುರುಷರೆಂದರೆ ಹೆಣ್ಣು ಗಂಡೆಂದು ಅರ್ಥ ಮಾಡಬಾರದು. ಪ್ರಕೃತಿಯನ್ನು ಹೆಣ್ಣೆಂದು ಕರೆದಿರುವುದು ಕೇವಲ ರೂಪಕವಾಗಿ. ಪರಸ್ಪರ ಕಾಮಾಕರ್ಷಣೆಯ ಮಟ್ಟದಲ್ಲಿ ಹೆಣ್ಣಿಗೆ ಗಂಡು ಪ್ರಕೃತಿ. ಗಂಡಿಗೆ ಹೆಣ್ಣು ಪ್ರಕೃತಿ. ಸಮಗ್ರ ಅರ್ಥದಲ್ಲಿ ಮಾನವ ಸಮಾಜವೇ ಪ್ರಕೃತಿಯು ಬಲೆ ಬೀಸುವ ರೂಪಗಳನ್ನು ತಳೆಯುತ್ತದೆ. ವೈಧವ್ಯವನ್ನು ಆರೋಪಿಸಿ ಹೆಣ್ಣನ್ನು ತುಳಿಯುವುದು ಪ್ರಕೃತಿಯ ಒಂದು ರೂಪವಾಗಿರುವಂತೆ ಹೊಲೆಯ, ಬ್ರಾಹ್ಮಣ, ಉಚ್ಚ, ನೀಚನೆಂದು ಜನ ಜೀವನವನ್ನು ಛಿದ್ರಮಾಡಿರುವ ನಂಬಿಕೆಗಳೆಲ್ಲವೂ ಪ್ರಕೃತಿಗೆ ಸೇರಿದುವೇ. ಜೀವನ ದಲ್ಲಿ ಪ್ರಕೃತಿಯು ಹಲವು ರೂಪದಲ್ಲಿ ತಲೆದೋರಿ ಬೆಳೆಯುತ್ತದೆ. ಸದಾ ಜಾಗ್ರತವಾಗಿದ್ದು ಅದಕ್ಕೆ ಬಲಿ ಬೀಳದೆ ಬಾಳುವುದೇ ಶುದ್ಧ ಪುರುಷಸ್ಥಿತಿ. ಪೈಲ್ವಾನ ರಾಮ ಸುತ್ತ ಊರಿನ ಜಟ್ಟಿಗಳನ್ನೆಲ್ಲಾ ಸೋಲಿಸಬೇಕೆಂಬ ಹುಚ್ಚಿಗೆ ಬಿದ್ದು ಮನೆಯಲ್ಲಿ ಹೆಂಡತಿಯ ಬಯಕೆಗಳನ್ನು ಅರಿಯದವನಾಗಿ ತನ್ನ ಸಂಸಾರವನ್ನು ಹಾಳುಮಾಡಿಕೊಂಡದ್ದು ಪ್ರಕೃತಿಗೆ ಬಲಿಯಾದ ಒಂದು ರೀತಿಯೆ.

ಪ್ರಕೃತಿಯ ಸಂಕೋಲೆಯು ಹಲವು ಹದಿನೆಂಟು ರೂಪಗಳಲ್ಲಿ ಭರತ ವರ್ಷದ ಸಮಾಜ ಜೀವನದಲ್ಲಿ ಬೆಳೆದು ನಿಂತಿದೆ. ಬಿಟ್ಟೂರು ರಘುನಾಥರಾಯರು ತಮ್ಮ ಅನುಭವದಲ್ಲಿಯೇ ಕಂಡಿರುವಂತೆ "ಬುದ್ಧಿ" ತಿಳಿಯುವ ಮುನ್ನ, ಹುಡುಗತನದಲ್ಲಿ ಹೊಲೆಯರ ಪರಸ್ಯಾನ ಸಂಗಡ ಆಡುತ್ತಿದ್ದರು. ಅವನು ಅಸ್ಪೃಶ್ಯನೆಂಬ ಅರಿವಾಗಲಿ, ಅಸ್ಪೃಶ್ಯತೆಯ ಕಲ್ಪನೆಯಾಗಲಿ ಆ ವಯಸ್ಸಿನಲ್ಲಿ ಅವರಿಗೆ ಇಲ್ಲ. ಆದರೆ ಅವನ್ನು ಕಂಡ ಅವರ ತಂದೆ ಈ ಹೊಲೆಯಹುಡುಗನ ಮುಂಗೈಮುರಿಯುವಂತೆ ಹೊಡೆಸಿದರು. ಈ ನೆನಪಿನ ನೋವು ರಾಯರಿಗೆ ಈಗಲೂ ಇದೆಯಾದರೂ ಕಾಲಕಳೆದಂತೆ ಅವರು ಮನೆತನದ ಜಾತಿ ಸಂಪ್ರದಾಯಕ್ಕೆ ಶರಣು ಹೋಗಿದ್ದಾರೆ. ಅವರ ಮತ್ತು ಪರಸ್ಯಾನ ಜೀವಿತಗಳು ಕೂಟದ ದಾರಿಗಳಂತೆ ಒಂದನ್ನೊಂದು ಕತ್ತರಿಸಿ ಹೋಗಿದ್ದವು. ಮುರಿದ ಕೈಮೂಳೆ ಇಂದಿಗೂ ಸರಿಯಾಗದಿದ್ದರೂ ಪರಸ್ಯಾನಿಗೆ ಇವರ ಬಗೆಗೆ ಭಕ್ತಿಯ ಹೊರತು ಬೇರೆ ಭಾವವಿಲ್ಲ. ಮನೆಯ ಪರಂಪರೆಯಲ್ಲಿ ಇದುವರೆಗೂ ನಡೆದು ಬಂದಿದ್ದ ಹಿರಿಯರ ಅಧಿಕಾರ ರಘುನಾಥರಾಯರ ಜೀವನದಲ್ಲಿ ದುರ್ಬಲವಾಗಿದೆ. ತಮ್ಮ ಮಗ ಹೊಲತಿ ಗಂಗೆಯೊಡನೆ ಸಂಬಂಧವಿಟ್ಟುಕೊಂಡಿದ್ದಾನೆಂಬುದು ತಿಳಿದಿದ್ದರೂ ಅವನ ಮುಂದೆ ಮಾತನ್ನೆತ್ತಲು ಅವರ ಮನಸ್ಸು ಹಿಂಜರಿಯುತ್ತದೆ. "ಅಂತೂ ದಿವಸ ಬದಲಾಗ್ತಾ ನಡೆದಾವ"—ಎಂಬುದನ್ನು ಅವರು ಈ ತಮ್ಮ ಅನುಭವದಲ್ಲಿಯೇ, ಹೊರಗಿನ ಯಾವ ಆಧಾರವೂ ಇಲ್ಲದೆ ಗುರುತಿಸುತ್ತಾರೆ.

ಸ್ಥಗಿತ ಪರಂಪರೆಯು ಮುಗಿದು ಬದಲಾವಣೆಯು ಪ್ರಾರಂಭವಾಗಿದೆ ಎಂಬುದನ್ನು ರಘುನಾಥರಾಯರ ಮನೆತನದ ಸ್ಥಿತಿಯ ಬದಲಾವಣೆಯು ತೋರಿಸುವಂತೆ ರಾಯರೇ

ಸ್ಪಷ್ಟವಾಗಿ ಒಪ್ಪಿಕೊಳ್ಳುತ್ತಾರೆ. ಊರಿನಲ್ಲಿ ಅವರ ಧಣಿತನ ಮುಗಿದು ಸೇಡಜಿಯು ಅಧಿಕಾರ ಪ್ರಾರಂಭವಾಗುವುದೇ ಹಳೆಯ ವ್ಯವಸ್ಥೆಯು ನಾಶವಾಗಿರುವುದಕ್ಕೆ ಗುರುತಾಗುತ್ತದೆ. ತನ್ನ ಸ್ಥಿತಿಯ ಬದಲಾವಣೆಗೆ ಅವರು ಒಳಗೇ ದುಃಖಪಟ್ಟುಕೊಂಡರೂ ಹೊಸದನ್ನು ಗುರುತಿಸಿ ಸ್ವೀಕರಿಸುವ ಮನಸ್ಸಿನ ಮುಕ್ತತೆ ಮತ್ತು ಧೈರ್ಯಗಳಿರುವುದರಿಂದ ಈ ಪಾತ್ರವು ತನ್ನ ಪರಿಮಾಣವನ್ನು ಬೆಳೆಸಿಕೊಳ್ಳುತ್ತದೆ. ಈ ಊರಿಗೆ ಬಂದ ಶಾಮಣ್ಣನಂತಹ ಸಾತ್ವಿಕ ಹುಡುಗನನ್ನು ಗುರುತಿಸಿ ಅವನನ್ನು ತಮ್ಮ ಮನೆಯಲ್ಲೇ ಇಟ್ಟುಕೊಳ್ಳುವುದೇ ಅಲ್ಲದೆ, ವಿಧವೆಯಾದ ಮಗಳು ಶಾಂತಾಳಿಗೆ ಅವನಿಂದ ಅವರು ವಿದ್ಯೆ ಕಲಿಸುತ್ತಾರೆ. ಕೊನೆಗೆ ಅವಳನ್ನು ಅವನಿಗೆ ಸ್ವಯಂಪ್ರೇರಣೆಯಿಂದ ಒಪ್ಪಿಸುತ್ತಾರೆ. "ಬೇಕಾದರೆ ನನಗೆ ಹುಚ್ಚೇ ಹಿಡೀತನ್ನು, ಬೇಕಾದರೆ ನಾ ಸುಧಾರಿಸಿದವ ಅನ್ನು, ಒಂದು ಮಾತು ಹೇಳ್ತೀನಿ ನಿನಗ. ಆಕೇನ್ನ ನಿನಗೆ ಒಪ್ಪಿಸ್ತೀನಿ; ಕುಡುಗೋಲು, ಕುಂಬಳಕಾಯಿ – ಎರಡನ್ನೂ ನಿನ್ನ ಕೈಯಾಗ ಇಟ್ಟೇನಿ; ಬೇಕಾದ ಹಾದಿ ನೀನು ಹಿಡಿಯಬಹುದು."

ಪ್ರವಾಹದಲ್ಲಿ ತೇಲುವ ಎರಡು ಕಟ್ಟಿಗೆಯ ತುಂಡುಗಳು ಕೆಲವೊಮ್ಮೆ ಒಂದಕ್ಕೊಂದು ಹತ್ತಿರ ಬಂದು ಕೆಲವು ಕಾಲದ ನಂತರ ಬೇರೆ ಬೇರೆ ಕೊಚ್ಚಿ ಹೋಗುವಂತೆ ಮನುಷ್ಯ ಮನುಷ್ಯರ ಸಂಬಂಧ ಎಂದು ಮಾತಿನಲ್ಲಿ ಹೇಳಿಕೊಳ್ಳುತ್ತಿದ್ದ ರಾಯರು ತಮ್ಮ ಅಂತ್ಯಕಾಲದಲ್ಲಿ ಈ ಮಾತಿನ ಒಳ ತತ್ತ್ವದ ವಿವರವನ್ನಲ್ಲದಿದ್ದರೂ ಭಾವವನ್ನಾದರೂ ಅನುಭವಿಸುತ್ತಾರೆ. ತಮ್ಮ ತರುವಾಯ ಶಾಂತ-ಶಾಮಣ್ಣರ ಮದುವೆ ಖಂಡಿತ ಎಂಬ ಅನಿಸಿಕೆಯಿಂದ ಶಾಂತಾಳ ಬಗೆಗೆ ಮನಸ್ಸಿನ ಆತಂಕವನ್ನು ಕಡಿಮೆ ಮಾಡಿಕೊಳ್ಳುತ್ತಿದ್ದರೂ 'ಅದನ್ನು ಈ ಕಣ್ಣಿಂದ ನೋಡೋ ಪಾಪ ಬ್ಯಾಡ' ಎಂಬ ಸಂಪ್ರದಾಯ ಸಂಕೋಲೆಯನ್ನು ಅವರು ಪೂರ್ತಿಯಾಗಿ ಕಳಚಿಹಾಕಲಾರರು. ಭರಮು ತಮ್ಮ ಮೊಮ್ಮಗ ರಾಗಣ್ಣನನ್ನು ಮುಟ್ಟಿದ್ದಕ್ಕಾಗಿ ರಾಯರು ಅವನಿಗೆ ಒಂದು ಕಲ್ಲನ್ನು ಬೀಸುತ್ತಾರೆ. ಆದರೆ ಮನಸ್ಸು ಇಲ್ಲದ್ದಕ್ಕಾಗಿ ಅದು ಗುರಿಗೆ ಹತ್ತಿರ ಕೂಡ ಹೋಗಿರಲಿಲ್ಲ. 'ಛೆ! ಇದೇನ್ಮಾಡ್ತೀನಿ ನಾನು ಹುಚ್ಚನ್ಹಾಂಗ?' ಎಂದುಕೊಂಡರು. ತಾವು ಚಿಕ್ಕವರಾಗಿದ್ದಾಗ ಪರಸ್ಯಾನ ಮುಂಗೈ ಮುರಿಯುವಂತೆ ಹೊಡೆಸಿದ್ದುದಕ್ಕಾಗಿ ತಮ್ಮ ತಂದೆಯ ಮೇಲೆ ಸಿಟ್ಟು ಬಂದಿದ್ದ ನೆನಪಾಗುತ್ತದೆ. 'ಬದಲಾಯಿಸಿದ್ದು ತಾನು! ಕಾಲವಲ್ಲ!' ಎಂಬ ಅರಿವು ಅವರಲ್ಲಿ ಮೂಡುತ್ತದೆ. ಆದರೆ "ಚಳಿ ಸೇರಿಕೊಂಡಂತೆ ರಾಯರ ಮೈ ಗಡಗಡ ನಡುಗಿತು." ಸಂಪ್ರದಾಯದ ಮೃತಪ್ರಾಯತೆಯನ್ನು ಅರಿತಿದ್ದರೂ ಅದನ್ನು ಮೊದಲಬಾರಿಗೆ ಬಿಡುವಾಗ ಆಗುವ ಗಾಬರಿ ಆತಂಕಗಳು ರಾಯರ ಪಾತ್ರದಲ್ಲಿ ಮೂರ್ತಿಮತ್ತಾಗಿ ಕಾಣುತ್ತವೆ. ಅಜ್ಜನ ಅರಿವಿನ ಮಟ್ಟವು ಮೊಮ್ಮಗ ಮುಟ್ಟುವ ಸುಧಾರಿತ ಮನೋಭಾವದ ನಾಂದಿಯಂತೆ ತೋರುತ್ತದೆ.

ನಾವು ಈ ಮೊದಲೇ ನೋಡಿದಂತೆ ಶಾಮಣ್ಣನ ಪಾತ್ರವು ಸಂಕೋಲೆಯಿಲ್ಲದ ಪುರುಷನ ಸಂಕೇತದಂತಿದೆ. ಕಾಲೇಜು ವಿದ್ಯೆಯಿಂದ ಒಳ ಅರಿವು ಮೂಡಲು

ಸಹಾಯವಾಗುವುದಿಲ್ಲವೆಂಬುದನ್ನು ಅರ್ಥಮಾಡಿಕೊಂಡು ಅವನು ಕಾಲೇಜು ಬಿಟ್ಟು ಹೊರಡುತ್ತಾನೆ. ಅವನು ಬಿಟ್ಟೂರಿಗೆ ಬರುವುದೂ ಆಕಸ್ಮಿಕವೇ. ಆಕಸ್ಮಿಕವಾದರೂ, ಅವನು ನೇರವಾಗಿ ಬಿಟ್ಟೂರಿಗೆ ಬಂದದ್ದು ತನಗಾಗಿಯೇ ಏನೋ ಎಂಬ ಅಸ್ಪಷ್ಟ ಭಾವನೆಯು ಶಾಂತಳಲ್ಲಿ ಮೂಡುತ್ತದೆ. ಅವಳು ಮಾಡುವ ಕೆಲಸವೆಲ್ಲ ಶಾಮಣ್ಣನಿಗಾಗಿ; ಅವನನ್ನು ಮೆಚ್ಚಿಸುವುದಕ್ಕಾಗಿ. ಬೇಸರವಾದರೆ ಕಥೆ ಬರಿ, ಎಂದು ಅವನು ಒಂದು ದಿನ ನಗೆಯಿಂದ ಹೇಳಿದರೆ ಅವಳು ಹಾಗೆಯೇ ಏನೋ ಬರೆಯಲೂ ಪ್ರಾರಂಭಿಸುತ್ತಾಳೆ. ಆಶ್ರಮದಿಂದ ಅವನು ಹೊರಗೆ ಹೋದರೆ ಅವಳು ಊಟಮಾಡುವುದಿಲ್ಲ. ಹೊರಗೆ ಅವನು ಕ್ಷೇಮವಾಗಿದ್ದಾನೆಯೋ ಇಲ್ಲವೋ ಎಂಬುದೇ ಚಿಂತೆ. ಅವಳು ಮಾಡುವುದೆಲ್ಲ ತನಗಾಗಿ ಎಂಬುದು ಶಾಮಣ್ಣನಿಗೆ ಗೊತ್ತಿದೆ. ಅವಳ ಶರೀರದ ಆಕರ್ಷಣೆಯೂ ಅವನಲ್ಲಿ ಸಾಕಷ್ಟಿದೆ. ಪರಸ್ಪರ ಆಕರ್ಷಣೆಯನ್ನು ಪರಸ್ಪರರು ಪ್ರತ್ಯಕ್ಷವಾಗಿ ತಿಳಿಯುವ, ಆ ಬಗೆಗೆ ಸೂಚ್ಯವಾಗಿ ಮಾತನಾಡುವ ಎಷ್ಟೋ ಸಂದರ್ಭಗಳೂ ಬರುತ್ತವೆ. ಇದೆಲ್ಲವೂ ಘಟಿಸಿರುವುದು, ಘಟಿಸುತ್ತಿರುವುದು ತನ್ನಿಂದಲಲ್ಲ ಎಂಬ ಜ್ಞಾನ ಅವನಿಗಿದೆ; ಆ ಮಟ್ಟಿಗೆ ಅವನು ಅಹಂಕಾರವನ್ನು ಗೆದ್ದಿದ್ದಾನೆ. ಆದರೆ ಶಾಂತಳ ಕೆಲಸವೆಲ್ಲ ತನಗಾಗಿ ನಡೆಯುತ್ತಿದೆ ಎಂಬ ಅರಿವು ಇರುವ ಮಟ್ಟಿಗೆ ಅವನು ಭೋಕ್ತೃತ್ವವನ್ನು ಬಿಟ್ಟಿಲ್ಲ. ಅದನ್ನೂ ಬಿಡುವ ತನಕ ಅವನು ಪುರುಷತ್ವದ ಪೂರ್ಣ ಸ್ಥಿತಿಯನ್ನು ಕಂಡು ಕೊಳ್ಳಲಾರ.

ಶಾಮಣ್ಣ ಮತ್ತು ಶಾಂತರ ಪಾತ್ರಗಳು ಕಾದಂಬರಿಯ ಬೌದ್ಧಿಕ ಎತ್ತರದ ಎರಡು ಸ್ತಂಭಗಳಂತೆ ನಿರ್ಮಿತವಾಗಿವೆ. ಅವಳು ವಿಧವೆ. ಆದರೆ ಅವರಿಬ್ಬರ ಮದುವೆಗೆ ಯಾವ ಆತಂಕವೂ ಇಲ್ಲ. ಹಾಗೆ ನೋಡಿದರೆ ಉಳಿದ ಎಲ್ಲರೂ ಅವರು ಮದುವೆಯಾಗು ವುದನ್ನೇ ನಿರೀಕ್ಷಿಸುತ್ತಿರುತ್ತಾರೆ; ಅಪೇಕ್ಷಿಸುತ್ತಾರೆ. ಜೈಲಿನಿಂದ ಬಿಡುಗಡೆಯಾಗಿ ಇಬ್ಬರೂ ಜೊತೆಯಲ್ಲಿ ಬಂದಾಗ ಅವರಿಬ್ಬರೂ ಮದುವೆಯಾಗಿರುವರೆಂದೇ ಎಲ್ಲರೂ ನಂಬುತ್ತಾರೆ. "ಆ ಹುಡುಗಿ ಗಂಡನ ನೆರಳಿನಾಗ ಸುದ್ದಾ ಇರಲಿಲ್ಲ!" ಆದುದರಿಂದ ಅವರಿಬ್ಬರ ಲಗ್ಗಿಣದ ಮೆರವಣಿಗೆ ಹೂಡಿಸಿ ಬಿಡೋಣ ಎಂದುಕೊಳ್ಳುತ್ತದೆ ಜನ. ಗಂಡು ಹೆಣ್ಣಿನ ಆಕರ್ಷಣೆಯಲ್ಲಿ ಶರೀರಾಕರ್ಷಣೆಯೂ ಒಂದು ಎಂಬುದು ಇಬ್ಬರಿಗೂ ಗೊತ್ತಿದೆ. ಬ್ರಹ್ಮಚರ್ಯವೆಂದರೆ ಸ್ತ್ರೀ ಸಂಗವನ್ನು ಬಿಡಲೇ ಬೇಕು ಎಂಬರ್ಥವಲ್ಲ— ಎಂದು ಶಾಮಣ್ಣನ ಆಧ್ಯಾತ್ಮಿಕ ಪ್ರೇರಕ ಗಾಂಧಿಯೇ ಹೇಳಿದ್ದರು. ಅವನು ಅವಳನ್ನು ಮದುವೆಯಾಗಿ, ಶರೀರದ ಬಯಕೆಯನ್ನು ತಣಿಸಿಕೊಂಡು ಆಶ್ರಮದ ಕೆಲಸವನ್ನು ಚ್ಯುತಿ ಇಲ್ಲದೆ ಮಾಡಬಹುದು. ಅವರಿಬ್ಬರ ವಿವಾಹವು ಅವನ ಒಪ್ಪಿಗೆಯನ್ನು ಮಾತ್ರ ಅವಲಂಬಿಸಿದೆ. ಆದರೂ ಒಂದು ರೀತಿಯ ಹಟದಿಂದ ಅವನು ಅದನ್ನು ನಿರಾಕರಿಸುತ್ತಾನೆ. ವಿಧವೆ ಸರಸ್ವತಿಯ ಮದುವೆ ಮಾಡಿಸುವವರೂ ಶಾಮಣ್ಣ ಶಾಂತರು; ರಾಗಣ್ಣ ಮೆಚ್ಚಿದ ಹರಿಜನರ ಹುಡುಗಿಯೊಡನೆ ಮದುವೆಗೆ ನೆರವಾಗುವವರೂ ಇವರೆ. ಎಲ್ಲ ವಿಧವಾದ ಸಾಮಾಜಿಕ ಸಂಪ್ರದಾಯದ ಸಂಕೋಲೆಯನ್ನು ಕಳಚಿಕೊಂಡು ನಿಂತವರು ಮಾತ್ರ ಮದುವೆಯಾಗುವುದಿಲ್ಲ ಎಂದರೆ ಶಾಮಣ್ಣ ಅದಕ್ಕೆ ಅವಕಾಶ ಕೊಡುವುದಿಲ್ಲ.

ಶಾಮಣ್ಣನು ಶಾಂತಳ ಪ್ರಿಯಕರ ಮಾತ್ರವಲ್ಲ. ಅವಳ ಗುರುವೂ ಅವನೆ. ಅವಳಿಗೆ ವಿದ್ಯೆ ಕಲಿಸಿದುದರಿಂದ ಅವಳ ಮನೋಭಾವವನ್ನು ತಿದ್ದಿ ಸಾಮಾಜಿಕ ಪರಂಪರೆಯ ಮಿಥ್ಯತ್ವವನ್ನು ತಿಳಿಸಿ ಅವಳ ಮನಸ್ಸು ಸ್ವಾತಂತ್ರ್ಯವನ್ನು ಪಡೆಯಲು ನೆರವಾಗುವವನು ಅವನೆ. ಆದರೆ ಅಷ್ಟಕ್ಕೇ ನಿಲ್ಲದೆ ಅವಳ ಸ್ವಾತಂತ್ರ್ಯ ಇನ್ನೂ ಹೆಚ್ಚಿನ ಮಟ್ಟದ್ದಾಗಬೇಕು; ತನ್ಮೂಲಕ ತನ್ನ ಸ್ವಾತಂತ್ರ್ಯವೂ ಉಳಿಯಬೇಕು ಎಂಬ ಧ್ಯೇಯ ಅವನದು. ಶಾಂತಾ ತನ್ನ ಮಕ್ಕಳನ್ನು ಹಡೆಯದೇ ಮಾತೃತ್ವದ ಮಟ್ಟಕ್ಕೆ ಏರುತ್ತಾಳೆ. ತಾವಿಬ್ಬರೂ ಮದುವೆಯಾದ ಗಂಡಹೆಂಡರಿಗಿಂತ ತೀರ ಭಿನ್ನವಾಗಿಯೂ ಇಲ್ಲ; ಆದರೆ ಗಂಡಹೆಂಡಿರಂತೆಯೂ ಇರುವುದಿಲ್ಲ. ಈ ಬಗೆಯ ಪರಸ್ಪರ ಸಖ್ಯವನ್ನು ಕಂಡುಕೊಂಡು ಶಾಂತಾ ಶಾಂತಿಯನ್ನು ಪಡೆಯುತ್ತಾಳೆ. "ಆದರೆ ಶಾಮಣ್ಣನ ಮನಸ್ಸಿನಲ್ಲಿ ಒಂದು ನಿರ್ಧಾರವಾಗಿತ್ತು. ಸುಬ್ಬಕ್ಕ-ಸರಸ್ವತಿ ಆಶ್ರಮಕ್ಕೆ ಬಂದಾಕ್ಷಣ ಶಾಂತಳ ಬಗ್ಗೆ ಅವನ ಮನೋವೃತ್ತಿ ನಿಶ್ಚಿತವಾಗಿತ್ತು. 'ಸೊಸೆ-ಮಕ್ಕಳು'. ಶಾಂತಳು ಈಗ ಮಿಕ್ಕ ಇಬ್ಬರಂತೆ ರಾಯರ ನಿಕ್ಷೇಪ ಎನ್ನಿಸಿದಳು. ಶಾಮಣ್ಣನ ಮನಸ್ಸು ಹಗುರಾಯಿತು. ಹೃದಯದಲ್ಲಿ ಶಾಂತಳು ಮಿಕ್ಕವರೊಡನೆ ಸೇರಿಕೊಂಡಳು: ತಾನೊಬ್ಬ ಹಿರಿಯ, ಉಳಿದವರೆಲ್ಲ—ಹೌದು, ಶಾಂತಳು ಬೇರೆಯಲ್ಲ. ಸುಬ್ಬಕ್ಕ-ಸರಸ್ವತಿ ಬೇರೆ ಅಲ್ಲ. ರಾಗಣ್ಣ ಬೇರೆ ಅಲ್ಲ—ಎಂದು ಕೊಂಡ."

ಶಾಮಣ್ಣ ಕೊನೆಗೂ ಪ್ರಕೃತಿಯಿಂದ ಮುಕ್ತನಾದ ಪುರುಷನಾಗುತ್ತಾನೆ. 'ತಾನೊಬ್ಬ ಹಿರಿಯ'-ಎಂದರೆ ಉಳಿದವರೆಲ್ಲರ ಯೋಗಕ್ಷೇಮವನ್ನು ನೋಡಿಕೊಳ್ಳುವುದು; ಆದರೆ ಉಳಿದ ಎಲ್ಲರೂ ಮತ್ತೊಬ್ಬರ 'ನಿಕ್ಷೇಪ' ಎಂಬಂತೆ ಅವರನ್ನು ಜೋಕೆ ಮಾಡುವುದೇ ವಿನಾ ಅದರಲ್ಲಿ ಮಮಕಾರವಿರಬಾರದು—ಎಂಬುದು ಅವನ ಆದರ್ಶ. ಶಾಂತಳು ತನ್ನದು ಎಂಬ ಸೃಷ್ಟಿಯ ಕರ್ತೃತ್ವಕ್ಕೆ ಒಳಗಾಗದೆ ಮಾತೃತ್ವವನ್ನು ಮುಟ್ಟುತ್ತಾಳೆ. ಸ್ತ್ರೀ ಪುರುಷರ ಸಮಾಜ ಜೀವನದಲ್ಲಿ ಪ್ರತಿಯೊಬ್ಬರೂ ಶಾಮಣ್ಣ ಶಾಂತರಂತಾಗುವುದು ಅಸಾಧ್ಯವಾದರೂ, ಅಪೇಕ್ಷಣೀಯವಲ್ಲದಿದ್ದರೂ ಇವರಿಬ್ಬರ ಪಾತ್ರಗಳು ಮುಟ್ಟುವ ಸ್ಥಿತಿಯು ಈ ಎರಡು ಜಾತಿಗಳ ಜೀವನಾದರ್ಶಗಳನ್ನು ಧ್ವನಿಸುತ್ತವೆ. ಹೀಗೆ ಪರಸ್ಪರರಿಂದ ಸ್ವತಂತ್ರವಾಗಿ ತಮ್ಮ ತಮ್ಮತನವನ್ನು ಕಂಡುಕೊಳ್ಳುವುದೇ ಪ್ರಕೃತಿ-ಪುರುಷರಿಬ್ಬರ ಜೀವನ ಧ್ಯೇಯವಾದರೂ ಅವರು ಎಂದೂ ಒಬ್ಬರೊಡನೊಬ್ಬರೂ ಸೇರದೆ ದೂರ ಇದ್ದರೆ ಜೀವನವೇ ಇರುವುದಿಲ್ಲ. ಪ್ರಗತಿಯೂ ಇರುವುದಿಲ್ಲ. "ಹುಡುಗಿ ತನ್ನಷ್ಟಕ್ಕೆ ತಾ ಸುಮ್ಮ ಕೂತರೆ ಸಾಕು"—ಎಂಬ ದೃಷ್ಟಿಯಿಂದ ರಾಯರು ಪ್ರಾರಂಭದಲ್ಲಿ ಶಾಂತಳು ಶಾಮಣ್ಣನಿಂದ ಕಲಿಯಲು ಒಪ್ಪಿಗೆ ನೀಡಿದ್ದರು. ಆದರೆ ಇದು ಅಷ್ಟು ಸರಳವಾದ ಮಾತಲ್ಲ. "ಶಾಂತಳಿಗೆ ಕಲಿಯಲು ಉತ್ಸಾಹ. ಶಾಮಣ್ಣನಿಗೆ ಕಲಿಸಲು ಉತ್ಸಾಹ: ಪರಸ್ಪರ ಪರಿಚಯ ಹೆಚ್ಚಿದಂತೆ ಪ್ರಗತಿಯ ವೇಗವೂ ಹೆಚ್ಚಾಯಿತು. ಇಬ್ಬರೂ ತಮಷ್ಟಕ್ಕೆ ತಾವು ಸುಮ್ಮನಿದ್ದರೆ ಉತ್ಸಾಹವಿರುತ್ತಿರಲಿಲ್ಲ. ಪ್ರಗತಿಯೂ ಕಂಡುಬರುತ್ತಿರಲಿಲ್ಲ".

ಇಲ್ಲಿ ಪ್ರಗತಿಯಾಗುವುದು ಇಬ್ಬರಿಗೂ. ಶಾಂತ ಕ್ರಮೇಣವಾಗಿ ತನ್ನ ಮೂಲ ಶಕ್ತಿಯ ಉಚ್ಚಮಟ್ಟವನ್ನು ಮುಟ್ಟುತ್ತಾಳೆ. ಶಾಮಣ್ಣ ಸಹ ಹೆಂಗಸಿನ ಸೆಳೆತ, ಅದರ ಸ್ವರೂಪಗಳನ್ನು ಅನುಭವಿಸಿ, ಅರಿತು ಅದರಿಂದ ಮುಕ್ತನಾಗಲು ಹೆಣಗಿ ಯಶಸ್ವಿಯಾಗುತ್ತಾನೆ. ಪುರುಷನ ಬಂಧವಿಮೋಚನೆಯೇ ಸಂಸಾರದ ಗುರಿಯಾದರೆ ತನ್ನ ಸೃಷ್ಟಿ ಶಕ್ತಿಯ ಸಿದ್ಧಿಯೇ ಪ್ರಕೃತಿಗೆ ಆಗುವ ಪ್ರಯೋಜನ. ಇದೇ ಪ್ರಗತಿ. ಪ್ರಗತಿಯ ಪರಿಣಾಮ ಮತ್ತು ಪ್ರಯೋಜನ ಅದರ ಕರ್ತೃಗಳಿಗೆ ಮಾತ್ರ ಸೀಮಿತವಾಗುವುದಿಲ್ಲ. ಶಾಮಣ್ಣ ಶಾಂತರು ಪಡೆಯುವ ಈ ಪ್ರಗತಿಯಿಂದಲೇ ಇಬ್ಬರೂ ಕೂಡಿ ಆಶ್ರಮವನ್ನು ಸ್ಥಾಪಿಸಿ ನಡೆಸುತ್ತಾರೆ. ಸರಸ್ವತಿ, ರಾಗಣ್ಣ, ಸುಬ್ಬಕ್ಕರೇ ಅಲ್ಲದೆ ಕಾಳ ಮೊದಲಾಗಿ ಪಲವರ ಪ್ರಗತಿಗೆ ಕಾರಣರಾಗುತ್ತಾರೆ. ಇಷ್ಟೆಲ್ಲ ಆಗಲು ಒಂದು ಅಂಶವು ಮುಖ್ಯವಾದುದು: ಶಾಮಣ್ಣನಿಗಿರುವಂತಹ ಅಂತರ್ನಿಹಿತಜ್ಞಾನವು ಗಂಡಿನಲ್ಲಿ ಮತ್ತು ಶಾಂತಳಲ್ಲಿ ಇರುವಂತಹ ಅಂತರ್ನಿಹಿತಜ್ಞಾನವನ್ನು ಪ್ರತಿಫಲಿಸುವ ಶಕ್ತಿಯು ಹೆಣ್ಣಿನಲ್ಲಿ ಇರಬೇಕು. ಇದಿಲ್ಲದೆ ನಡೆಯುವ ಗಂಡು ಹೆಣ್ಣಿನ ಕೂಡಿಕೆಯಿಂದ ಸಂಸಾರ ನಡೆಯುತ್ತದೆ. ವೇಗವಿರುತ್ತದೆ; ಆದರೆ ಪ್ರಗತಿಯಾಗುವುದಿಲ್ಲ.

ಜ್ಞಾನ ಪುರುಷನದು; ಪುರುಷನೇ ಜ್ಞಾನ. ತಾನು ಅಂಟಿದವನಲ್ಲ ಎಂಬ ಜ್ಞಾನವನ್ನು ಶಾಮಣ್ಣ ಸಾಧಿಸುತ್ತಾನೆ. ಶಾಂತ ಆ ಜ್ಞಾನವನ್ನು ಪ್ರತಿಫಲಿಸುವ ಸ್ಥಿತಿಯನ್ನು ಮುಟ್ಟುತ್ತಾಳೆ. ಶಾಮಣ್ಣ ಸಾಧಿಸಿದ ಜ್ಞಾನವನ್ನು ಅದರ ಮೂಲರೂಪದಲ್ಲಿ ಸಾಧಿಸಲಾರಳು. ಈ ದೃಷ್ಟಿಯಿಂದ ಈ ಕಾದಂಬರಿಯ ಮುಖ್ಯ ಗಂಡಸಿನ ಪಾತ್ರವು ಪುರುಷನನ್ನೂ ಮುಖ್ಯ ಹೆಂಗಸಿನ ಪಾತ್ರವು ಪ್ರಕೃತಿಯನ್ನೂ ಸಂಕೇತಿಸುತ್ತದೆ. ಆದರೆ ಶಾಂತಳ ಶರೀರ ಮಾತ್ರ ಹೆಣ್ಣಿನದು, ಅದರ ಒಳಗಿರುವುದೂ ಶಾಮಣ್ಣನದರಂತಹ ಪುರುಷನೇ ಎಂಬ ತಾತ್ತ್ವಿಕ ಅರ್ಥವು ಬೇರೊಂದು ರೀತಿಯಲ್ಲಿ ಇಡೀ ಕಾದಂಬರಿಯಲ್ಲಿ ವ್ಯಾಪಿಸಿದೆ. ಈ ದೃಷ್ಟಿಯಿಂದ ಶಾಮಣ್ಣನಿಗೆ ಶಾಂತ ಪ್ರಕೃತಿ; ಅವಳಿಗೆ ಅವನೂ ಪ್ರಕೃತಿಯೆ. ಪರಸ್ಪರರ ಪ್ರಕೃತಿ ತತ್ತ್ವದಿಂದ ಇಬ್ಬರ ಅನುಭವ ಮತ್ತು ತಿಳಿವಳಿಕೆಯೂ ಮಾಗುತ್ತದೆ. ಆದರೆ ಪರಸ್ಪರರ ಈ ತತ್ತ್ವದಿಂದ ಮುಕ್ತರಾಗಿ ಇಬ್ಬರೂ ಶುದ್ಧ ಪುರುಷರಾಗುವುದೇ ಜೀವನದ ಅಂತಿಮ ಧ್ಯೇಯ. ಈ ಅಂತಿಮ ತತ್ತ್ವಾರ್ಥದ ದೃಷ್ಟಿಯಿಂದ ಶಾಮಣ್ಣ ಏರಿರುವ ಎತ್ತರವನ್ನು ಶಾಂತ ಏರಿಲ್ಲ. ಅವಳು ಅವನ ಜ್ಞಾನವನ್ನು ಪ್ರತಿಫಲಿಸುವ, ಅವನ ಪ್ರಕೃತಿತತ್ತ್ವದ ಸಾತ್ತ್ವಿಕಸ್ವರೂಪದ ಸಂಕೇತವಾಗಿ ಮಾತ್ರ ನಿಲ್ಲುತ್ತಾಳೆ.

ಸೃಷ್ಟಿಯೇ ಪ್ರಕೃತಿಯ ಮೂಲ ಧ್ಯೇಯ ಎಂಬ ಮಾತು ಸುಬ್ಬಕ್ಕನ ಪಾತ್ರದಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಬೇರೆಯ ಹೆಂಗಸರನ್ನು ಹುಡಿಕಿಕೊಂಡು ಅಲೆಯುವ ಗುಂಡಣ್ಣನು ಹೆಂಡತಿ ಎಂಬ ಸುಖ್ಯವನ್ನು ಸುಬ್ಬಕ್ಕನಿಗೆ ಎಂದೂ ಮುಕ್ತವಾಗಿ ಕೊಡಲಿಲ್ಲ. ಗಂಡ ಅದೇ ತಾನೇ ತನ್ನ ಕೆನ್ನೆಗೆ ಹೊಡೆದು, "ಮದುವೆಯಾಗಿ ತಾನು ಕಾಣುತ್ತಿರುವ ಸುಖ ಯಾವುದು?"—ಎಂಬ ನಿರಾಶೆ ನುಡುತ್ತಿದ್ದರೂ "ಗಂಡ ಇಲ್ಲಿದ್ದರ ಗಂಡಸ-

ಮಗ—ಇವರೇ ಆಧಾರ ಹೆಂಗಸಿಗೆ" ಎನ್ನುವ ಮಾತು ಮನಸಿನಲ್ಲಿ ಮಿಂಚಿ "ಬ್ಯಾಗ ಒಂದು ಗಂಡಸಮಗ ಹುಟ್ಟಲಿ, ದೇವರ" ಎಂಬ ಉದ್ದೇಶದಿಂದ ತನ್ನನ್ನು ತಾನು ಗಂಡನಿಗೆ ಒಪ್ಪಿಸಿಕೊಳ್ಳುತ್ತಾಳೆ. ಎರಡು ಮಕ್ಕಳಾದ ಮೇಲೆ ಗಂಡನ ಸಂಪರ್ಕವನ್ನು ಖಡಾಖಂಡಿತವಾಗಿ ತಿರಸ್ಕರಿಸುತ್ತಾಳೆ. ಅವಳ ತಿರಸ್ಕಾರವು ಗಂಡನ ನಡತೆಗೆ ಪ್ರತೀಕಾರ ರೂಪವಾಗಿ ಬರುತ್ತದೆ ಎಂಬುದು ನಿಜ. ಮಕ್ಕಳಿಗಾಗಿ ಗಂಡನನ್ನು ಹತ್ತಿರ ಸೇರಿಸುವಾಗಲೇ ಅವಳಿಗೆ ಗಂಡನ ಮೇಲೆ ಈ ತಿರಸ್ಕಾರವಿತ್ತು. ಆದರೆ ಮಕ್ಕಳಿಗಾಗಿ ಈ ತಿರಸ್ಕಾರವನ್ನು ಹತ್ತಿಕ್ಕಿಕೊಳ್ಳುತ್ತಾಳೆ. ಕೊನೆಗೂ ಅವಳಲ್ಲಿ ಗಟ್ಟಿಯಾಗಿ ಉಳಿಯುವುದು ಮಾತೃತ್ವವೇ. ಶಾಂತಳಂತೆ ವಿಚಾರಮಾಡಿ ಸಂಪ್ರದಾಯವನ್ನು ಕಳಚಿಕೊಳ್ಳುವ ಧೈರ್ಯ ಅವಳಿಗಿರಲಿಲ್ಲ. ಮಗಳು ಸರಸ್ವತಿಯ ಪುನರ್ವಿವಾಹಕ್ಕೆ ಅವಳು ಒಪ್ಪುವುದು ಮಗಳ ಮೇಲಿನ ಕನಿಕರದಿಂದ. ಮಗ ಹರಿಜನರ ಹುಡುಗಿಯನ್ನು ಮದುವೆಯಾಗುವುದಾಗಿ ತಿಳಿದಾಗ ಮಕ್ಕಳ ಸುಖಕ್ಕಾಗಿ ತನ್ನ ಜೀವವನ್ನು ಬಿಡುವುದು ಪರಮ ಸುಖ ಎಂದು ಯೋಚಿಸುತ್ತಾಳೆ. ಅವಳಲ್ಲಿ ಕಾಣುವ ವಿವೇಕವೇನಿದ್ದರೂ "ನಿಸರ್ಗದಿಂದ ತಾಯ್ತನಕ್ಕೆ ಬಂದ ಬುದ್ಧಿವಂತಿಕೆ" ಯದು. ಮಕ್ಕಳಿಗೆ ಸುಖವಾಗುವುದಾದರೆ ಅವರು ಸಂಪ್ರದಾಯವನ್ನು ಬಿಡಬಹುದು. ಆದರೆ ಅದನ್ನು ತಾನು "ಕಣ್ಮುಟ್ಟ" ನೋಡದಿದ್ದರೆ ಸಾಕು; ಎಂದರೆ ಆ ಮಟ್ಟಿಗೆ ತನ್ನ ವೈಯಕ್ತಿಕ ಮಡಿ ಉಳಿಯಬೇಕು.

ಪುರುಷನ ಶುದ್ಧಜ್ಞಾನವನ್ನು ಪ್ರತಿಫಲಿಸುವುದರಿಂದ ತನ್ನಲ್ಲಿ ಬೆಳಗುವ ಅರಿವಿಲ್ಲದಿದ್ದರೂ ತಾಯ್ತನದಲ್ಲಿ, ಸೃಷ್ಟಿಯ ಉಚ್ಚ ಹಂತದಲ್ಲಿ ಸಹಜವಾಗಿಯೇ ಇರುವ ಪ್ರವೃತ್ತಿ ಜ್ಞಾನವು ಸುಬ್ಬಕ್ಕನಲ್ಲಿ ಇದೆ. ಗಂಗಿ ಸುಬ್ಬಕ್ಕನಿಗೆ ತದ್ವಿರುದ್ಧವಾಗಿದ್ದಾಳೆ. ಅವಳಿಗೆ ತಾಯ್ತನದ ಬಯಕೆಯೂ ಇಲ್ಲ. ಆ ಅನುಭವವು ಸಹಜವಾಗಿಯೇ ಕೊಡುವ ಪ್ರವೃತ್ತಿ ಮಟ್ಟದ ಜ್ಞಾನವೂ ಇಲ್ಲ. ಹೀಗಾಗಿ ಅವಳು ಪ್ರಕೃತಿಯ ಅವಿಕಸಿತ ಶಕ್ತಿ ಮತ್ತು ಗುಣಗಳಿಂದ ಕೂಡಿದ್ದಾಳೆ. ಕಾಮದ ಸಾಕಾರ ಮೂರ್ತಿಯಾದ ಅವಳು ಗಂಡಸನ್ನು ಅರ್ಥಮಾಡಿಕೊಳ್ಳುವುದೂ ಅದೇ ದೃಷ್ಟಿಯಿಂದ. ಸ್ತ್ರೀ ಪುರುಷರ ಸಂಬಂಧವು ಬೇರೆ ರೀತಿಯಲ್ಲಿ ಇರಬಹುದೆಂಬ ಕಲ್ಪನೆ ಸಹ ಅವಳಿಗೆ ಸಾಧ್ಯವಿಲ್ಲ. ಶಾಮಣ್ಣ, ಅವನ ಆಶ್ರಮದ ವಾತಾವರಣವು ಅವಳಿಗೆ ಬೇಸರ ತರಿಸಿ, ಹಸಿದ ಮೈ ಮನಸುಗಳಿಗೆ ಹುಚ್ಚು ಹಿಡಿಸುವಂತೆ ಮಾಡುತ್ತದೆ. ಊರಿನಲ್ಲಿ ಅವಳ ಹತ್ತಿರಕ್ಕೆ ಯಾರೂ ಬರುವುದಿಲ್ಲ; ಶರೀರದ ಹಸಿವನ್ನು ತೃಪ್ತಿಪಡಿಸಿಕೊಳ್ಳುವ ಬೇರೆ ಮಾರ್ಗ ಕಾಣದೆ ಮುಂಬಯಿಯ ಸೂಳೆಗೇರಿಗೆ ಹೋಗಿ ಸೇರುತ್ತಾಳೆ. ಅವಳು ಅಲ್ಲಿಗೆ ಹೋಗುವುದು ಜೀವನೋಪಾಯಕ್ಕಾಗಿಯಲ್ಲ. ಅಲ್ಲಿಗೆ ಸೇರಿದಾಗ ಅವಳ ವಯಸ್ಸು ನಲವತ್ತೈದಕ್ಕೆ ಕಡಮೆಯಾಗಿರಲಿಲ್ಲ. ಆದರೂ "ಸರಸ್ವತಿಗೆ ಆದ ಮದುವೆ ಅವಳ ಜೀವನವನ್ನು ಒಂದು ಬಗೆಯಿಂದ ಕೆಣಕಿತ್ತು. 'ಮುದುಕಿ ಹಾಂಗ ಹಳೇ ಕತೆ ಹೇಳೋದಕ್ಕಿಂತ ಖರೇನೇ ಮುದುಕಿ ಆಗೋದರಾಗ ಸುಕಪಡು ಗಂಗೀ' ಎಂದು ತನಗೆ ತಾನೇ ಹೇಳಿಕೊಂಡು ಮುಂಬಯಿಗೆಂದು ಹೊರಟು ಹೋಗಿದ್ದಳು".

ಅಲ್ಲಿ ಕಾಳನನ್ನು "ಭರಮ್ಯಾನ ಹಡದಾಕೆ ನಾ. ಅವ ನನ್ನ ಉಣ್ಣಿಸತಿದ್ದರ ನಾ ಯಾಕ ಈ ಧಂಧೆ ಮಾಡ್ತಿದ್ದೆ?" ಎಂದು ಅವಳು ಕೇಳುವುದು ಅವನನ್ನು ಕೆಣಕಿ ತಪ್ಪು ಹೊರೆಸುವುದಕ್ಕಾಗಿ ಎಂಬುದು ಸ್ಪಷ್ಟವಾಗುತ್ತದೆ. ದಂಧೆಯಲ್ಲಿ ಸಾಕಷ್ಟು ಗಳಿಕೆಯಾಗದೆ ಈಗ ಹಣದ ಅಡಚಣೆಯಾಗಿರಬಹುದು. ಆದರೆ ತಿನ್ನಲು ರೊಟ್ಟಿಯಿಲ್ಲದೆ ಅವಳು ಈ ದಂಧೆಗೆ ಓಡಿಬಂದವಳಲ್ಲ.

ಭರಮನನ್ನು ಹೆತ್ತ ತಾಯಿಯಾದರೂ ಅವನ ಲಾಲನೆಪಾಲನೆಯನ್ನು ಅವಳು ಎಂದೂ ಮಾಡಿದವಳಲ್ಲ. ತಾಯ್ತನಕ್ಕೆ ಅಂಟಿದ ಪಾವಿತ್ರ್ಯ ಮೊದಲಾದ ಯಾವ ಕಲ್ಪನೆಯೂ ಇಲ್ಲದಿದ್ದರೂ, ಗುಂಡಣ್ಣನಿಂದ ಆದ ಬಸಿರು, ಕಾಳನ ಹೊಡೆತಕ್ಕೆ ಸಿಕ್ಕಿ, ಸ್ರಾವವಾದಾಗ ಅವಳ ಮುಖದಲ್ಲಿ ಮುಗುಳ್ನಗೆ ಮೂಡುತ್ತದೆ. ಪ್ರಕೃತಿಯ ಈ ಮಟ್ಟದಲ್ಲಿ ಇರಬಹುದಾದ ಕುತಂತ್ರ, ಕೀಳು ಯೋಚನೆಗಳೆಲ್ಲ ಆನಗೆಯಲ್ಲಿ ಸೇರಿರುತ್ತವೆ. ಗುಂಡಣ್ಣ ಅವಳನ್ನು ಬಯಸಬೇಕು, ಅವಳು ಬೇಡಿದುದನ್ನು ತಂದೊಪ್ಪಿಸಿ ಅವಳ ಮುಂದೆ ಬಾಗಬೇಕು. ಅವನು ತನ್ನನ್ನು ತಿರಸ್ಕರಿಸಿ ನಡೆದು ಬೇರೆ ಹೆಣ್ಣನ್ನು ಹಿಡಿಯುವುದನ್ನು ಅವಳು ಸಹಿಸಲಾರಳು. ಅಂತಹ ಪ್ರಸಂಗ ಬಂದಾಗ ಕಾಳನನ್ನು ಬಹು ಉಪಾಯವಾಗಿ ಗುಂಡಣ್ಣನ ಎದುರು ಕಟ್ಟುತ್ತಾಳೆ.

ಗಂಗಿ ತನ್ನ ಮಟ್ಟಿಗೆ ಮಾತ್ರ ತಾನು ಕಾಮಜೀವಿಯಲ್ಲ: ಉಳಿದ ಜನಗಳ ಕಾಮ ಪ್ರಚೋದಕಳೂ ಸಹ. ಅವನನ್ನು ಅನೇಕ ವಿಧದಲ್ಲಿ ಹೋಲುವ, ಸರಿಗಟ್ಟುವ ಗುಂಡಣ್ಣನನ್ನು ಅವಳು ಮೊದಲ ಬಾರಿಗೆ ಎಳೆದಳೊ, ಗುಂಡಣ್ಣ ಅವಳನ್ನು ಎಳೆದನೋ ಎಂಬುದು ನಿಖರವಾಗಿ ಹೇಳಲಾಗದ ಪ್ರಶ್ನೆ. ಅವರಲ್ಲಿ ಯಾರು ಯಾರನ್ನೂ ಸೆಳೆಯಲಿಲ್ಲ. ಕಾಮದ ಆಟವು ಇವರಿಬ್ಬರನ್ನೂ ತಲ್ಲೀನವಾಗಿಸಿತು: ಒಂದು ಕಾಲದಲ್ಲಿ ತಾನೇ ತಿರಸ್ಕರಿಸುತ್ತಿದ್ದ ಪೈಲ್ವಾನ ರಾಮು ಅವಳಿಗೆ ಬೀಳುತ್ತಾನೆ. ಶಾಮಣ್ಣನನ್ನು ಪಡೆಯಲು ಪ್ರಯತ್ನಿಸುವ ಅವಳು ಶಾಮಣ್ಣ ಶಾಂತರ ಸಂಬಂಧವನ್ನು ವಿವರ ವಿವರವಾಗಿ ಪರೀಕ್ಷಿಸುತ್ತಾಳೆ. ಸರಸ್ವತಿಗೆ ಅವಳು ಹೇಳುವ ಸಮಾಧಾನವೆಲ್ಲ ಆ ಹುಡುಗಿಯ ಮನಸ್ಸಿನಲ್ಲಿ ಕಾಮೋದ್ದೀಪಗೊಳಿಸುವ ರೀತಿಯದೇ.

ಸೂಳೆಗೇರಿ ಎಂಬುದು ಒಂದು ವ್ಯವಸ್ಥಿತ ಕೇರಿಯಾಗಿರಬಹುದು; ಅಥವಾ ಸಣ್ಣ ಊರಿನಲ್ಲಿ ಗಂಗಿಯಂತೆ ಒಂದು ವ್ಯಕ್ತಿಯ ರೂಪದಲ್ಲಿರಬಹುದು. ಅವಳು ಕೊನೆಗೆ ಮುಂಬಯಿಯ ಕೇರಿಗೆ ಹೋಗಿ ಅಲ್ಲಿಯ ಮಹಾ ವ್ಯವಸ್ಥೆಯ ಒಂದು ಅಂಶವಾಗುವುದೂ ಒಂದು ರೀತಿಯಿಂದ ಅರ್ಥಪೂರ್ಣವಾಗಿದೆ. ಅವಳು ಗಂಡ ಕಾಳನಿಗೆ ಹೆಜ್ಜೆ ಹೆಜ್ಜೆಗೂ ಮಾಡಿರುವ ದ್ರೋಹಕ್ಕೆ, ಭರಮ ಅವನ ಮಗನಲ್ಲವೆಂದು ಹೇಳಿ ಅವನಿಗೆ ಕೊಡುವ ಕೊನೆಯ ಇರಿತಕ್ಕೆ ಕಾಳನು ಇವಳನ್ನು ಕೊಲ್ಲುವುದರ ವಿನಾ ಬೇರೆ ಪರಿಹಾರ ಕಾಣುವುದಿಲ್ಲ. ಸೂಳೆಗೇರಿಯ ಸದಸ್ಯಳಾಗುವುದು ಗಂಗಿಯ ಪಾತ್ರಕ್ಕೆ

ಅತ್ಯಂತ ಸಹಜವೂ ಅನಿವಾರ್ಯವೂ ಆದ ಅಂತ್ಯ. ಹೀಗೆ ಕೊಲೆಯಾಗುವುದು ಆ ಪಾತ್ರಕ್ಕೆ ಅನಿವಾರ್ಯವಲ್ಲವೆನಿಸುತ್ತದೆ. ಅವಳ ದೇಹತತ್ತ್ವವೇ ಅಂಥದು; ಅವಳು ಹಿಂದೆ ಮಾಡಿದುದು, ಈಗ ಸೂಳೆಗೇರಿಯಲ್ಲಿರುವುದು ಎಲ್ಲವೂ ಆ ತತ್ತ್ವಕ್ಕೆ ಅನುಗುಣವಾಗಿದೆ. ಅವಳು ಗಂಡನಿಗೆ ಮಾಡಿದ ದ್ರೋಹಕ್ಕೆ, ಅವನಿಂದಲೇ ಕೊಲೆಯಾಗುವುದಕ್ಕಿಂತ ಹೆಚ್ಚು ಉಚಿತವಾದ ಬೇರೆ ಯಾವ ಅಂತ್ಯ ಸಾಧ್ಯ? ಎಂಬ ಪ್ರಶ್ನೆ ಇಲ್ಲಿ ಏಳಬಹುದು.

ಈ ಪ್ರಶ್ನೆಯನ್ನು ಉತ್ತರಿಸುವಾಗ ಗಂಗಿ ಹಾದರಕ್ಕೆ ಬಿದ್ದ ಕಾರಣವಾವುದು? ಎಂಬುದಕ್ಕೂ ಉತ್ತರ ಹೇಳಬೇಕು. ಗುಂಡಣ್ಣ ಅವಳ ಮನೆತನದ ಧಣಿ. ಬೇಕೆಂದರೆ ಅವಳನ್ನು ಬಲಾತ್ಕರಿಸಲೂ ಬಹುದು ಎಂಬುದು ನಿಜವಾದರೂ ತನಗೆ ಇಷ್ಟವಿಲ್ಲದಿದ್ದರೆ ಅವನನ್ನು ನಿವಾರಿಸಿಕೊಳ್ಳುವುದು. ಅದರಲ್ಲಿಯೂ ಯಜಮಾನಿಕೆ ಎಲ್ಲ ದೊಡ್ಡದಣಿಯರ ಕೈಲೇ ಇದ್ದಾಗ, ಅವಳಿಗೆ ಕಷ್ಟವಾಗಿರಲಿಲ್ಲ. ಅವಳ ಶರೀರ ಗುಂಡಣ್ಣನಿಗೆ ಹೇಗೆ ಬೇಕೋ ಹಾಗೆ ಅವನಿಂದ ಹಣ ಮತ್ತು ಹೊಸ ಸೀರೆಗಳು ಅವಳಿಗೂ ಬೇಕು; ಹಾಗೆಯೇ ಶರೀರ ಸುಖವೂ ಬೇಕು. ಹೊಲೆಯರ ಹೆಂಗಸರೆಲ್ಲ ಗಂಗಿಯರಲ್ಲ. ಗಂಗಿಯ ಶರೀರ ಮತ್ತು ಮನೋಧರ್ಮವೇ ಬೇರೆಯಾದುದು. ಆದುದರಿಂದ ಅವಳಲ್ಲಿ ಮಾತೃತ್ವ ಸತೀತ್ವಗಳು ಇರದಿದ್ದರೆ ಆಶ್ಚರ್ಯವಿಲ್ಲ. ಗಂಗಿಯರಿರುವ ತನಕ (ಅಂಥವರು ಯಾವ ಕಾಲದಲ್ಲೂ ಇಲ್ಲದಿರುವುದಿಲ್ಲ), ಗುಂಡಣ್ಣನಂಥವರು ಇರುವತನಕ, ಯುದ್ಧ ಮೊದಲಾದುವು ನಡೆಯುವ ತನಕ ಸೂಳೆಗೇರಿ ಇದ್ದೇ ಇರುತ್ತದೆ. ಗಂಗಿ ಅಲ್ಲಿಗೆ ಸೇರಿದುದು ತರ್ಕಬದ್ಧವೂ ವಸ್ತುಬದ್ಧವೂ ಆಗಿದೆ. ಅಂಥವಳ ಕೊಲೆ ಯಾಕೆ ಆಗಬೇಕು?

ಗಂಗಿಯ ದೃಷ್ಟಿಯಿಂದ ಅವಳ ಕೊಲೆಯಾಗುವುದು ಅನಿವಾರ್ಯವಲ್ಲದಿದ್ದರೂ ಕಾಳನ ಪಾತ್ರದ ದೃಷ್ಟಿಯಿಂದ ಅದು ಅಗತ್ಯವೆನಿಸುತ್ತದೆ. ಇಷ್ಟು ದಿನ ತನಗೆ ತಪ್ಪಿ ನಡೆದು, ಊರಿನಲ್ಲಿ ತನ್ನ ಹೀನ ಅಪಮಾನಕ್ಕೆ ಕಾರಣಳಾಗಿ, ತಾನು ಊರನ್ನು ಬಿಟ್ಟು ಬರಲೂ ಕಾರಣಳಾದ ಅವಳನ್ನು ಅವನು ಮರೆಯಬಲ್ಲನಾಗಿದ್ದ. ಆದರೆ ಇಷ್ಟು ದಿನ ತನ್ನ ಆಶೆ ಭರವಸೆಯ ಕೇಂದ್ರವಾಗಿ ಮಾಡಿಕೊಂಡು ಬೆಳೆಸಿದ್ದ ಮಗನು ತನಗೆ ಹುಟ್ಟಿದವನೇ ಅಲ್ಲವೆಂದು ಅವನನ್ನು ಹೆತ್ತ ತನ್ನ ಹೆಂಡತಿಯೇ ಹೇಳಿದಾಗ ಅವಳನ್ನೂ, ಸಾಕಿ, ಸಲಹಿ ಪ್ರೀತಿಸಿ ಬೆಳೆಸಿದ ತನ್ನನ್ನು ನಿರಾಕರಿಸಿದ ಮಗನನ್ನೂ ಕೊಲ್ಲಬಯಸುವುದು ಕಾಳನಿಗೆ ತುಂಬ ಸಹಜವಾದುದು. ಮದ್ಯದ ಶಕ್ತಿ ಮತ್ತು ಆಘಾತಪೂರಿತ ಸುದ್ದಿ ಕಿವಿಯ ಮೇಲೆ ಬಿದ್ದ ಕ್ಷಣದ ಕಾವಿನಲ್ಲಿ ಅವನು ಗಂಗಿಯನ್ನು ಕೊಂದ. ಇವರಡೂ ಇಳಿದಿದ್ದುದರಿಂದ ಭರಮನನ್ನು ಕೊಲ್ಲಲಾಗಲಿಲ್ಲ. ಮದ್ಯವು ಅವನಿಗೆ ಸೂಳೆಗೇರಿಗೆ ಹೋಗುವ ಧೈರ್ಯವನ್ನು ಕೊಟ್ಟಿತ್ತು: ಗಂಗಿಯನ್ನು ಕೊಲ್ಲುವ ಧೈರ್ಯವೂ ಅದೇ ಮದ್ಯದಿಂದ ಬಂದಿತ್ತು. ಮದ್ಯವು ಅವಳನ್ನು ಕೊಲ್ಲುವ ಧೈರ್ಯವನ್ನು ಕೊಟ್ಟಿತೇ ವಿನಾ ನಿಶ್ಚಯವನ್ನು ನೀಡಿರಲಿಲ್ಲ. ನಿಶ್ಚಯ ಅವನ ಸಹಜ ಪ್ರಜ್ಞೆಯದೇ. ಕಾಳ ಶಾಮಣ್ಣನಲ್ಲ.

ಅವನಿಗೆ ಆಗಿರುವ ಅನ್ಯಾಯ ಸಾಮಾನ್ಯವಾದುದಲ್ಲ. ಕಾಳನೊಡನೆ ಗಂಗಿಯನ್ನು ನಿಲ್ಲಿಸಿ ನೋಡಿದಾಗ ಅವಳ ಪಾಪದ ಘೋರತೆ ಇನ್ನೂ ಎದ್ದು ಕಾಣುತ್ತದೆ. ಕಾಳ ಅವಳನ್ನು ಕೊಲ್ಲುವುದು ಸಹಜವೆಂದೇ ತೋರುತ್ತದೆ. ತಾನಿಲ್ಲದಾಗ ಅವಳು ಹಾದರ ಮಾಡಿದ್ದಳೆಂದು ತಿಳಿದಾಗ "ನಿನ್ನ ಕೊಲ್ಲೋದೇ? ಅವೂ ಯಾಳೆ ಬರ್‍ತೈತೆ" ಎಂದು ಹೇಳಿದ್ದ ಈ ಮಾತು ಮುಂದೆ ಇಪ್ಪತ್ತೈದು ವರ್ಷದ ನಂತರ ಆಗುವ ಅವಳ ನಿಜವಾದ ಕೊಲೆಯ ಪೂರ್ವಸಂಕೇತವಂತಿದೆ. ಇದು ಕೇವಲ ಸಾಹಿತ್ಯಿಕ, ನಾಟಕೀಯ ಪೂರ್ವ ಸಂಕೇತವಲ್ಲ. ಕಾಳನ ಪರಿಸ್ಥಿತಿಯಲ್ಲಿರುವ ಯಾವ ಗಂಡನ ಪ್ರಜ್ಞೆಯ ದಿಕ್ಸೂಚಿಯೂ ಹೌದು.

ಗಂಗಿಯನ್ನು ಕಾಳ ಕೊಲ್ಲುವುದು ಎಷ್ಟು ಸಹಜವೋ ರಾಮಿ ಗುಂಡಣ್ಣನನ್ನು ಕೊಲ್ಲುವುದು ಅಷ್ಟೇ ಸಹಜವಾದುದು. ಪೈಲವಾನನಾದುದರಿಂದ ರಾಮಿ ಕೊಲೆಯನ್ನು ಹೆಚ್ಚು ಘೋರವಾಗಿ ಮಾಡುತ್ತಾನೆ. ಕಾಳನಿಗೆ ಗಂಗಿ ಅಸಹನೀಯ ಪತಿದ್ರೋಹ ಮಾಡಿದ್ದರೆ ಗುಂಡಣ್ಣ ರಾಮಿಗೆ ಮಿತ್ರದ್ರೋಹ ಮಾಡಿದ್ದಾನೆ. ಕಾಳನ ಅಪಮಾನದ ಹೊಣೆಯೆಲ್ಲ ಗಂಗಿಯದಾದರೆ ರಾಮಿಯ ಅಪಮಾನದ ಕಾರಣವೆಲ್ಲ ಗುಂಡಣ್ಣನದು. ಇಬ್ಬರಿಗೂ ಹಲವು ವಿಧದಲ್ಲಿ ಹೋಲಿಕೆಯಿದ್ದರೂ ಗುಂಡಣ್ಣ ಗಂಗಿಗಿಂತ ನೀಚ. ಶಾರೀರಕ ಬಯಕೆಯ ಜೊತೆಗೆ ಕಾಮ ವ್ಯವಹಾರದಲ್ಲಿ ಚಾಣಾಕ್ಷತೆಯಿದ್ದರೂ ಗಂಗಿಗೆ ಗುಂಡಣ್ಣನಷ್ಟು ಬುದ್ಧಿಮತ್ತತೆಯೂ ಮತ್ಸದ್ದಿತನವೂ ಇಲ್ಲ. ರಾಮಿಗೆ ದ್ರಾಕ್ಷಿ ಬಾದಾಮಿಗನ್ನು ತಿನ್ನಿಸಿ ಕಣದಲ್ಲಿ ಕುಸ್ತಿಯನ್ನು ಗೆಲ್ಲುವ ಅವನ ಹುಚ್ಚನ್ನು ಊದಿಸಿ ಆ ಮೂಲಕ ಅವನ ಹೆಂಡತಿಯನ್ನು ಎಟಕಿಸಿಕೊಳ್ಳುವ ಮತ್ತು ಅದೇ ಪಟ್ಟಿನಲ್ಲಿ ಗಂಗಿಯೊಡನೆ ತನ್ನ ಕಾಮದಾಟಕ್ಕೆ ಅಡ್ಡಿಯಾಗಿ ಕಂಡಿದ್ದ ಅವಳ ಗಂಡನನ್ನು ರಾಮಿಯಿಂದ ಹೊಡೆಸಿ ಶಿಕ್ಷಿಸುವ ಕುತಂತ್ರವು ಅವನ ನೀಚತನದ ತೂಕವನ್ನು ಹೆಚ್ಚು ಮಾಡುತ್ತದೆ.

ಚೆನ್ನಿ ಗುಂಡಣ್ಣನ ತಂತ್ರಕ್ಕೆ ಬಲಿಬಿದ್ದು ನಂತರ ದಾರಿ ಕೆಟ್ಟಳೇ ಹೊರತು ಅವಳು ಗಂಗಿ ಗುಂಡಣ್ಣರೊಡನೆ ಹೋಲಿಕೆಗೆ ನಿಲ್ಲಬಲ್ಲ ನೀಚೆಯಲ್ಲ. ಚೆನ್ನಿಯಷ್ಟೇ ಸರಳ ಪಾತ್ರ ರಾಮಿ. ತನ್ನ ಹೆಂಡತಿಯನ್ನು ಹೀಗೆ ಮಾಡಿದ ಗುಂಡಣ್ಣನ ಸೂಳೆ ಗಂಗಿಯನ್ನು ಭೋಗಿಸುವ ಮೂಲಕ ಪ್ರತೀಕಾರಮಾಡಬೇಕೆಂದು ರಾಮಿ ಯೋಚಿಸುವುದು ಬುದ್ಧಿ ಸಾಲದವನ ತಂತ್ರ. ಅವನಿಗೆ ಹೆಣ್ಣಿನ ಸಹವಾಸ ಬೇಕಿತ್ತು. ಉಳಿದ ಹೆಂಗಸರೆಲ್ಲ ಅವನ ಗಂಡಸುತನವನ್ನು ಶಂಕಿಸುವಂತೆ ಅವನ ಹೆಂಡತಿಯೇ ಪ್ರಚಾರ ಮಾಡಿ ಊರುಬಿಟ್ಟು ಹೋಗಿದ್ದಳು. ಬೇರೆ ಯಾರೂ ಸಿಕ್ಕದ್ದಕ್ಕೆ ಅವನು ಗಂಗಿಯನ್ನು ಮುಟ್ಟಿದ. ಗುಂಡಣ್ಣನಿಗೆ ಈ ಮೂಲಕ ಪ್ರತೀಕಾರ ಮಾಡಿದೆನೆನ್ನುವುದೂ ಒಂದು ಕಾರಣವಿರಬಹುದು. ಆದರೆ ಗುಂಡಣ್ಣನ ಕೊಲೆ ಮಾಡಿದುದೇ ಅವನ ಪಾತ್ರಕ್ಕೆ ಅತ್ಯಂತ ಸಹಜವಾದ ಪ್ರತೀಕಾರ. ಗುಂಡಣ್ಣನ ಕೊಲೆಗೆ ಊರ ಇತರರ ಪ್ರೇರಣೆ ಕುಮ್ಮಕ್ಕೂ ಇದೆ. ಹಾಗೆ ನೋಡಿದರೆ ಊರಿನ ಇತರರ ಪ್ರೇರಣೆ ಸಹಕಾರವಿಲ್ಲದಿದ್ದರೆ ರಾಮಿ ಗುಂಡಣ್ಣನ ಕೊಲೆ ಮಾಡುತ್ತಿರಲಿಲ್ಲವೋ ಏನೋ!

ಕಾಳ ಮತ್ತು ರಾಮಿ ಇಬ್ಬರೂ ಮಾಡಿದ ಕೊಲೆಯು ಆಯಾ ಪಾತ್ರಗಳ ದೃಷ್ಟಿಯಿಂದ ಉಚಿತವೆನಿಸುತ್ತದೆ. ಆದರೆ ಗುಂಡಣ್ಣ ತನ್ನ ಪಾತ್ರದ ದೃಷ್ಟಿಯಿಂದಲೂ ಕೊಲೆಯಾಗಲು ಅರ್ಹನೆನಿಸುತ್ತಾನೆ. ಊರ ಹೆಣ್ಣುಮಕ್ಕಳನ್ನೆಲ್ಲ ಕೆಣಕುವ ಅವನನ್ನು ತೆಗೆದು ಹಾಕುವುದು ಸಾಮಾಜಿಕವಾಗಿಯೂ ಅಗತ್ಯವಾಗುತ್ತದೆ. ಹಾಗೆ ನೋಡಿದರೆ ಗಂಗಿಯ ಪಾತ್ರದ ದೃಷ್ಟಿಯಿಂದ ಅವಳ ಕೊಲೆಯು ಅಷ್ಟು ಅಗತ್ಯವೆನಿಸುವುದಿಲ್ಲ. ಆದರೆ ಒಂದು ಘಟನೆಯು ನಡೆದರೆ ಅದು ಸಕಲ ಮತ್ತು ಸಕಲರ ದೃಷ್ಟಿಯಿಂದಲೂ ಸಮರ್ಥನೀಯವಾಗುವುದು ಜೀವನದಲ್ಲಿಯಂತೆ ಸಾಹಿತ್ಯದಲ್ಲಿಯೂ ಸಾಧ್ಯವಿಲ್ಲ.

ಹಲವು ವಿಧದಲ್ಲಿ ಪ್ರತೀಕಾತ್ಮಕವಾಗಿರುವುದು ಮಾತ್ರವಲ್ಲದೆ ಕಾಳನ ಪಾತ್ರವು ಅತ್ಯಂತ ದುರಂತದಿಂದ ಕೂಡಿದೆ. ಪ್ರತಿಯೊಂದು ವ್ಯಕ್ತಿಯೂ ತನ್ನ ಮಟ್ಟಿಗೆ ತಾನು ಪುರುಷ. ಅವನ ಸಂಬಂಧದಲ್ಲಿ ಬರುವ ಇತರ ವ್ಯಕ್ತಿಗಳು, ಸಮಾಜಕಟ್ಟಳೆ, ಭೌತಿಕ ವಾತಾವರಣ ಮೊದಲಾದುವೆಲ್ಲವೂ ಪ್ರಕೃತಿಯ ರೂಪಗಳು. ಕಾಳನ ಜೀವನವನ್ನು ಹಿಂಡಿ ಕರುಳು ಕತ್ತರಿಸುವಂತಹ ದುರಂತಕ್ಕೊಯ್ಯುವ ಪ್ರಕೃತಿಯು ಕೂಡಿದ ಹೆಂಡತಿ. ಹುಟ್ಟಿದ ಜಾತಿ ಎರಡು ರೂಪಗಳಲ್ಲಿ ಕೆಲಸ ಮಾಡುತ್ತದೆ. ಎಂಜಲುಣಿಸುವುದೇ ಕೂಡಿದ ಹೆಂಡತಿಯ ದಾರಿಯಾದರೆ ಎಂಜಲೆಲೆಯಲ್ಲಿ ಹಾಕಿ ನೀಡಿದ್ದನ್ನು ತಿಂದು ಜೀವಿಸುವ ಸ್ಥಿತಿಯನ್ನು ಹುಟ್ಟಿದ ಜಾತಿಯು ಮೇಲೆ ಹೇರುತ್ತದೆ. ಇವೆರಡನ್ನೂ ತಿದ್ದಬೇಕೆಂದು ಅವನು ಶಕ್ತಿಮೀರಿ ಪ್ರಯತ್ನಿಸುತ್ತಾನೆ. ಆದರೆ ಎಂಜಲಾಗುವುದರಲ್ಲೇ ಸುಖಕಾಣುವ ಹೆಂಡತಿ ಎಷ್ಟು ಅಸುಧಾರಣೀಯಳೋ ಅಷ್ಟೇ ಅಸುಧಾರಣೀಯವಾಗಿದೆ ಅವನ ಜಾತಿಯ ಅಸ್ಪೃಶ್ಯತೆ. ಬೆನ್ನು ಸೆಟೆದು ನಿಲ್ಲಲು ಯತ್ನಿಸುತ್ತಾನೆ ಕಾಳ. ಆದರೆ ಅದು "ನಾಯಿಯ ಬಾಲದಂತೆ ಜನ್ಮಜನ್ಮಾಂತರ ಡೊಂಕಾಗಿದ್ದ ಅವನ ಬೆನ್ನು ಸೆಟೆದು ನಿಲ್ಲಲು ಯತ್ನಿಸುವಾಗ ಅದೊಂದು ಮೋಜಿ" ನಂತೆ ಕಾಣಿಸುತ್ತದೆ ಗುಂಡಣ್ಣ ನಂಥವರಿಗೆ.

ಹೆಣ್ಣು ವಿಶ್ವಾಸಕ್ಕೆ ಅಯೋಗ್ಯವಾದದ್ದೆಂದು ನಿರ್ಧರಿಸಿದ ಕಾಳ ಗಂಗಿಯನ್ನು ಸುಧಾರಿಸುವ ಪ್ರಯತ್ನವನ್ನೇ ಬಿಟ್ಟು ಅವಳನ್ನು ತನಗೆ ಮಗನನ್ನು ಕೊಟ್ಟವಳು ಎಂದು ಮಾತ್ರ ನೋಡುತ್ತಾನೆ. ದಿನ ಕ್ರಮೇಣ ಅವನ ಮನಸ್ಸು ತನ್ನ ಮಗನ ಕಡೆಗೆ ಹರಿಯುತ್ತದೆ. ತನ್ನ ಮಗನಾದರೂ "ಜನ್ಮಜನ್ಮಾಂತರಗಳ ಎಂಜಲು ಜೀವನ ಎನ್ನುವಂತೆ ಚರಿತಾರ್ಥವನ್ನು.........ನಡೆಸಕೂಡದು"—ಎಂದು ಮನಸ್ಸಿ ನಲ್ಲಿಯೇ ಹಟತೊಡುತ್ತಾನೆ.

ಶಾಮಣ್ಣನ ಹರಿಜನ ಸುಧಾರಣೆಯ ಉದ್ದೇಶದ ಪ್ರಾಮಾಣಿಕತೆಯನ್ನು ಕಾಳ ಪ್ರಾರಂಭದಲ್ಲಿ ಶಂಕಿಸಿದರೂ, ಅವನಂಥ ಅನುಭವವಿರುವವನು ಶಂಕಿಸುವುದೂ ಸಹಜವೇ. ಅನಂತರ ಸುಧಾರಣೆಯ ಒಳ ಅರ್ಥವನ್ನು ಅವನು ಶಾಮಣ್ಣನಿಗಿಂತ ಹೆಚ್ಚು ಆಳವಾಗಿ

ಅರಿಯುತ್ತಾನೆ, ಮತ್ತೊಬ್ಬರನ್ನು ದ್ವೇಷಿಸುವುದರಿಂದ ತನ್ನ ಜಾತಿಯವರು ಉತ್ತಮವಾಗುವುದಿಲ್ಲ. ತಮ್ಮ ಕೊಳಕು, ಕೆಟ್ಟತನಗಳನ್ನು ತೊಳೆದುಕೊಳ್ಳಬೇಕು, "ಕನ್ನಡಿ ಮುಂದ ನಿಲ್ಲಾಕಬೇಕು, ಸ್ವಂತದ ಕೆಟ್ಟ ಮೋತಿ ನೋಡಾಕ ಬ್ಯಾಡಾಂದ್ರ—" ಎಂದು ಯೋಚಿಸಿ ತನ್ನ ಜಾತಿಯವರನ್ನು ತಿದ್ದಲು ಶ್ರದ್ಧೆಯಿಂದ ಪ್ರಯತ್ನಿಸುತ್ತಾನೆ. ಮನೆಯಲ್ಲಿ ಹೆಂಡತಿ ಶುದ್ಧೆಯಾಗಿದ್ದರೆ ಅವನ ಪ್ರಯತ್ನಕ್ಕೆ ಯಶಸ್ಸು ದೊರೆಯುತ್ತಿತ್ತೇನೋ! ಆದರೆ ಮನೆಯಲ್ಲಿ ಹೆಂಡತಿಯನ್ನು ತಿದ್ದಲಾರದ ಇವನು ತಮ್ಮನ್ನು ತಿದ್ದಲು ಬಂದಿದ್ದಾನೆಂದು ಊರಿನ ಇತರರು ಆಡಿಕೊಳ್ಳುತ್ತಾರೆ. ಈ ಅಪಮಾನದಲ್ಲಿ ನರಳುತ್ತಿರುವಾಗಲೇ ಗುಂಡಣ್ಣನಿಂದ ಪ್ರೇರಿತವಾದ ರಾಮಿ ಅವನನ್ನು ಹಿಡಿದು ಹೊಡೆಯುತ್ತಾನೆ. ಅವನು ಗುಡಿಸಿಲಿಗೆ ಬೆಂಕಿ ಹಾಕುತ್ತಾನೆ. ಹೆಂಡತಿಯನ್ನಾಗಲಿ—ಜಾತಿಯನ್ನಾಗಲಿ ಸುಧಾರಿಸುವುದು ಸಾಧ್ಯವಿಲ್ಲ; ಹಟಮಾಡಿದರೆ ತನ್ನ ಮತ್ತು ಮಗನ ಜೀವ ಉಳಿಯುವುದಿಲ್ಲ ಎಂಬ ಮನವರಿಕೆಯಾದ ಅವನು ಮಗನೊಡನೆ ಊರುಬಿಟ್ಟು ಮುಂಬಯಿಗೆ ಹೊರಟು ಬರುತ್ತಾನೆ.

ಮಗನನ್ನು ಸಾಕಿ ವಿದ್ಯಾವಂತನನ್ನಾಗಿ ಮಾಡಲು ಕಾಳ ಪಡುವ ಕಷ್ಟ ಅಷ್ಟಿಷ್ಟಲ್ಲ. ಬಿಟ್ಟೂರಿನ ನೆನಪೂ ಮಗನಿಗೆ ಬರದಂತೆ ಇಡುತ್ತಾನೆ. ಈ ಪ್ರಯತ್ನದಲ್ಲಿ, ಅವನಿಗೆ ತಿಳಿಯದಂತಹ, ಒಂದು ಸ್ಪಷ್ಟ ತತ್ತ್ವವಿದೆ. ಸಂಪ್ರದಾಯವು ಶಾಪವಾಗಿರುವಾಗ ಅದನ್ನು ತಿದ್ದುವುದು ಅಸಾಧ್ಯವಾದಾಗ ಅದರಿಂದ ದೂರ ಹೋಗುವುದೊಂದೇ ಮಾರ್ಗ. ಆದರೆ ಎಲ್ಲಿ ಹೋದರೂ ಬೆನ್ನು ಬಿಡದೆ ಬಲೆ ಬೀಸುವಷ್ಟು ವಿಶಾಲವೂ ಶಕ್ತಿಯುತವೂ ಆಗಿದೆ ಸಂಪ್ರದಾಯ. ಜಾತಿ ಪದ್ಧತಿಯನ್ನು ಬಿಟ್ಟು ಮಗನಿಗೆ ಇಂಗ್ಲಿಷ್ ಕಲಿಸಿದರೆ ಮುಂದೆ ಒಳ್ಳೆಯದಾದೀತೇ ಎಂಬ ಅವನ ಶಂಕೆಯು ಅವನ ಭವಿಷ್ಯದ ಸಂಕೇತ ಮಾತ್ರವಲ್ಲದೆ ಸಂಪ್ರದಾಯವನ್ನು ಬಿಡುವಾಗ ಎಲ್ಲರಿಗೂ ಆಗುವ ಪ್ರವೃತ್ತಿ ಮಟ್ಟದ ಭಯವನ್ನೂ ತೋರಿಸುತ್ತದೆ.

ತನ್ನ ಮಗ ತಾನು ಬೆವರು ಸುರಿಸಿ ಗಳಿಸಿದ್ದುದರಿಂದಲೇ ಮುಂದೆ ಬರಬೇಕೆಂಬ ಆಶೆಗೆ ಧಕ್ಕೆ ತರುತ್ತದೆ, ಸರ್ಕಾರದವರು ಉಚಿತವಾಗಿ ಕೊಡುವ ಸ್ಕಾಲರ್‌ಶಿಪ್ಪು. ನೀನು ಗಳಿಸಿದ್ದು ನನಗಿನ್ನು ಬೇಡವೆಂದು ಮಗ ಹೇಳಿದಾಗ ಕಾಳನಿಗಾಗುವ ನೋವು ಅಸಹನೀಯವಾದುದು. ನಮ್ಮ ಬೆವರಿನಿಂದಲೇ ನಾವು ಮುಂದೆ ಬರಬೇಕೆಂಬುದು ಕಾಳನ ತತ್ತ್ವ; ಸ್ಕಾಲರ್‌ಶಿಪ್ಪು ಭರಮನನ್ನು ಅವನ ಜಾತಿಯಿಂದ ಇನ್ನೂ ದೂರ ದೂರ ಒಯ್ಯುತ್ತದೆ.

ಒಂದು ದೃಷ್ಟಿಯಿಂದ ಭರಮನು ಕಾಳನ ಪಾತ್ರದ ವಿಸ್ತರಣೆ ಎನ್ನಬಹುದು. ಎಂಜಲು ತಿನ್ನುವುದರ ವಿರುದ್ಧ. ಎಲ್ಲರಂತೆ ತಾನೂ ಬೆನ್ನು ಸೆಟೆದು ನಿಲ್ಲಬೇಕೆಂಬ ಆಶೆಯಿಂದ ಕಾಳ ಅವನ ಅಪ್ಪನ ಮೇಲೆ ಸಿಡಿಮಿಡಿಗುಟ್ಟುತ್ತಿದ್ದ. ವಿದ್ಯೆ, ಆಟ ಮೊದಲಾದ

ಅರ್ಹತೆಗಳಲ್ಲಿ ಉಳಿದವರಿಗೆ ಸರಿಸಮ ಮಾತ್ರವಲ್ಲದೆ ಎಲ್ಲರಿಗಿಂತ ಉತ್ತಮನಾಗಿದ್ದರೂ ತನ್ನನ್ನು ಕೀಳೆಂದು ಜನರು ಕಾಣುವುದರಿಂದ ಭರಮ ತನ್ನ ಜಾತಿಯ ಗುರುತನ್ನೇ ಮರೆಸಲು ಯತ್ನಿಸುತ್ತಾನೆ. ತನ್ನ ಭಾಷೆಯನ್ನು ತಿದ್ದಿಕೊಳ್ಳಲು ಅಪ್ಪನನ್ನು ತಿದ್ದಲು ಮಾಡುವ ಯತ್ನ, ಅಪ್ಪ ತಿದ್ದಿಕೊಳ್ಳಲು ಅಸಮರ್ಥನೆಂದು ತಿಳಿದಾಗ ಅವನನ್ನೇ ದೂರಮಾಡುವ ಅವನ ವರ್ತನೆ ಎಲ್ಲವೂ ಈ ಸಮಾನತೆಯ ಬಯಕೆಯ ಉಪಚಿಹ್ನೆಗಳು. ಅವನ ಜಾತಿಯ ಪ್ರಗತಿಗಿಂತ ಭರಮನ ಪ್ರಗತಿಯ ವೇಗ ತೀರಾ ಹೆಚ್ಚಾಯಿತು. ಈ ವೇಗಕ್ಕೆ ಕಾಳನಿಗೆ ಕಕ್ಕಾವಿಕ್ಕಿಯಾಗುತ್ತದೆ.

ಅವನು ಬಯಸಿದ್ದ. ಅವನ ದುಡ್ಡಿಗಾಗಿ ಆಗಾಗ್ಗೆ ಬಂದು ಶರೀರವನ್ನು ಕೊಡುತ್ತಿದ್ದ ಕಿರಿಸ್ತಾನರ ಹುಡಿಗಿ ಸಹ ಅವನನ್ನು ಮದುವೆಯಾಗಲು ಒಲ್ಲೆನೆಂದಾಗ ಅವನಿಗಾಗುವ ವ್ಯಥೆ ಕರುಳು ಕರಗಿಸುವಂಥದು. "ತಾನು ನಿಜವಾಗಿಯೂ ಅಸ್ಪೃಶ್ಯ ಎಂದು ಪಟ ಗುಟ್ಟುತ್ತ ಭರಮ ಕೋಣೆಯಲ್ಲಿ ಸುಳಿದಾಡತೊಡಗಿದ. ಪಂಜರದಲ್ಲಿ ಸಿಕ್ಕಿಬಿದ್ದ ಹುಲಿಯಂತಾಯಿತು ಅವನ ಸ್ಥಿತಿ. ಸಿಕ್ಕಿಬಿದ್ದುದು ಸಹನವಾಗದೆ ಹೊರಬೀಳಬೇಕೆಂಬ ಹಟ, ಹೊರಬೀಳಲು ಅಶಕ್ಯವಾದುದಕ್ಕೆ ಸಿಕ್ಕಿಬಿದ್ದುದರ ಅವಮಾನ. ಅಪಮಾನಕ್ಕಾಗಿ ಸಿಟ್ಟು, ಸಿಟ್ಟಿನಿಂದ ಹೆಚ್ಚು ನಿಷ್ಫಲ ಪ್ರಯತ್ನ. ಪ್ರಯತ್ನ ಹೆಚ್ಚಿಚ್ಚು ನಿಷ್ಫಲವಾದಂತೆ ಇನ್ನಿಷ್ಟು ಸಿಟ್ಟು, ಇನ್ನಿಷ್ಟು ಹಟ, ಹಟದಿಂದ ಪಂಜರಕ್ಕೆ ಹಾಯ್ದರೆ ಅದು ಎಷ್ಟು ಗಟ್ಟಿಯಾಗಿದೆ ಎಂಬುದನ್ನು ಕಂಡು ಮತ್ತೆ ಅವಮಾನ.

"ಅಯ್ಯೋ! ಇದರಿಂದ ಬಿಡುಗಡೆ ಇಲ್ಲವೇ ಎಂದು ಗಟ್ಟಿಯಾಗಿ ಎರಡೂ ಕೈಗಳಿಂದ ತಲೆಯನ್ನು ಹಿಡಿದು ಕೊಂಡು ಕುರ್ಚಿಯಲ್ಲಿ ಅಪ್ಪಳಿಸಿದ".

ಅವನು ಬೇಕಾದ ಸೂಟು, ನೆಹರುಶರ್ಟು, ಜೋದಪುರಿ ಕೋಟು ಧರಿಸಿ ಮುಂಬಯಿಯ ದೊಡ್ಡ ಹೋಟೇಲಿಗೆ ಹೋಗಿ ಊಟಮಾಡಬಲ್ಲ. ಟೈಲರನ ಮತ್ತು ಹೋಟಲಿನವನ ಮುಂದೆ ಮಾತ್ರ ಅವನಿಗೆ ಸಮಾನತೆ ಸಿಕ್ಕಿದೆ: ಜನಜೀವನದಲ್ಲಿ ಇಲ್ಲ.

ತನ್ನ ತಂದೆಯನ್ನು ತಿರಸ್ಕಾರದಿಂದ ಕಾಣುವ ರೀತಿಗೆ ಭರಮನ ಬಗೆಗೆ ಯಾರಿಗಾದರೂ ಜುಗುಪ್ಸೆ ಹುಟ್ಟುವುದು ಸಹಜ. ಅವನ ಈ ವರ್ತನೆಯು ನ್ಯಾಯವಾದುದಲ್ಲವಾದರೂ ಸಹಜವಾಗಿದೆ. ಅಸ್ಪೃಶ್ಯತೆ ಸುಧಾರಣೆಯ ಬಗೆಗೆ ಇದು ಒಂದು ಪಾಠವನ್ನು ತೋರಿಸುತ್ತದೆ. ಸರ್ಕಾರದ ಸ್ಕಾಲರ್‌ಶಿಪ್ಪು ಭರಮನಿಗೆ ಜೀವನೋಪಯೋಗಿ ವಿದ್ಯೆ, ನೌಕರಿಗಳನ್ನು ಕೊಟ್ಟಿತು. ಆದರೆ ಸಂಸ್ಕಾರವನ್ನು ಕೊಡಲಿಲ್ಲ. ಕೈಗೆಹಣ ಸಿಕ್ಕಿದ ತಕ್ಷಣ ಅವನು ಕುಡಿಯುವ ವಿದೇಶಿ ಹೆಂಡ, ಉಪಭೋಗಿಸುವ ಹುಡುಗಿಯರು ಇವೆಲ್ಲವೂ ಅವನನ್ನು ಗುಂಡಣ್ಣನ ಜಾತಿಗೆ ಸೇರಿಸುತ್ತವೆ. ಅಸ್ಪೃಶ್ಯತೆ ಹೋಗಬೇಕಾದರೆ ಸ್ಪೃಶ್ಯತೆಗೆ ತಕ್ಕ ಯೋಗ್ಯತೆ ಬರಬೇಕಾದುದೂ ಅಗತ್ಯ ಎಂಬ ಜ್ಞಾನದಿಂದ ಶಾಮಣ್ಣ ಮಾಡುವ ಪ್ರಯತ್ನವನ್ನು ಭರಮನ ವರ್ತನೆಯೊಡನೆ ಹೋಲಿಸಬೇಕು.

ತನ್ನ ಜಾತಿಯ ಜನರಲ್ಲಿಯೂ ತಪ್ಪಿದೆ. ಅದನ್ನು ಮೊದಲು ತಿದ್ದಬೇಕು ಎಂದು ಹೊರಡುವ ಕಾಳನ ಆಳವಾದ ಅರಿವು ಭರಮನಿಗೆ ಇಲ್ಲ. ಏಕೆಂದರೆ ಅವನಿಗೆ ಆಗಿರುವ ಪ್ರಗತಿ ಎಲ್ಲವೂ ಹೊರಗಿನ ಸಹಾಯದಿಂದ ಬಂದದ್ದು. ಶಾಮಣ್ಣನ ಆಶ್ರಮದ ಹರಿಜನ ಹುಡುಗಿಯೊಬ್ಬಳನ್ನು ಮದುವೆಯಾಗಲು ರಾಗಣ್ಣ ಬಯಸುವುದು, ಆ ಮದುವೆಗೆ ಶಾಮಣ್ಣ ಶಾಂತರೂ ಸಮ್ಮತಿಸುವುದು ಈ ಸಮಸ್ಯೆಗೆ ಪರಿಹಾರವನ್ನು ಸೂಚಿಸುತ್ತದೆ. ರಾಗಣ್ಣನಿಗೆ ಹೆಂಡತಿಯಾಗುವ ಸಂಸ್ಕಾರವು ಆ ಹುಡುಗಿಗೆ ಬಂದಿದೆ. ಅಂತೆಯೇ ಶಾಂತ ಶಾಮಣ್ಣರು ಈ ಮದುವೆಯನ್ನು ಪ್ರೋತ್ಸಾಹಿಸುತ್ತಾರೆ.

ಜಾತಿಯಿಂದ ಪೂರ್ತಿಯಾಗಿ ಹೊರಗೆ ಸಿಡಿಯುವ ಪ್ರಯತ್ನ ವಿಫಲವಾದಾಗ ಭರಮ ಅಪ್ಪನನ್ನು, ತನ್ಮೂಲಕ ತನ್ನ ಜಾತಿಯನ್ನು ಪುನಃ ಕಂಡುಕೊಂಡು ಅದರಲ್ಲಿ ಒಂದಾಗಲು ನಿಶ್ಚಯಿಸುತ್ತಾನೆ. ಆದರೆ ಅಷ್ಟರಲ್ಲಿ ಕಾಲ ಮೀರಿದೆ. ಅವನು ತನ್ನ ಬೇರನ್ನು ಕಳೆದುಕೊಂಡಿದ್ದಾನೆ. ಕಾಳನಲ್ಲಿರುವಷ್ಟು ತೀವ್ರವಲ್ಲದಿದ್ದರೂ ಭರಮನೂ ದುರಂತ ವ್ಯಕ್ತಿಯೇ.

ಕಾಳನ ಪಾತ್ರಕ್ಕೆ ಆಗುವ ಅಂತ್ಯವೂ ಅತ್ಯಂತ ಸಹಜವಾಗಿದೆ. ಮೊದಲಿನಿಂದಲೂ ಅನುಭವಿಸಿದ ಅಪಮಾನ, ದ್ವೇಷ, ತಿರಸ್ಕಾರಗಳು, ಅವನ ಸಕಲ ಆಸೆಭರವಸೆಗಳ ಆಸರವಾಗಿದ್ದ ಮಗನಿಂದಲೇ ನಿರಾಕರಿಸಲ್ಪಡುವುದು, ಕೊನೆಗೆ ಆ ಮಗನೂ ಸಹ ಗುಂಡಣ್ಣನಿಗೆ ಹುಟ್ಟಿದವನೆಂದು ತಿಳಿಯುವುದು, ಇಷ್ಟೆಲ್ಲ ಆದ ಮೇಲೆ ಅವನಿಗೆ ಹುಚ್ಚು ಹಿಡಿಯುವುದು ಸಹಜವೆ. ಅವನು ಅನುಭವಿಸುವ ಅನ್ಯಾಯದ ಮೂಲವಾಗಿರುವ ಸಮಾಜದ ಎಲ್ಲಾ ಹುಚ್ಚುಗಳ ಪ್ರತೀಕವಾಗಿದೆ ಅದು.

ಇಡೀ ಕಾದಂಬರಿಯ ಎಲ್ಲ ಪಾತ್ರಗಳ ಸೃಷ್ಟಿಯಲ್ಲೂ ಲೇಖಕರ ಅರ್ಥಗ್ರಹಣ ಶಕ್ತಿಯು ಸಾಹಿತ್ಯದ ವಸ್ತುನಿಷ್ಠೆಗೆ ಒಂದು ಮಾದರಿಯಾಗಿದೆ. ಗಂಗಿ ಗುಂಡಣ್ಣ ಚೆನ್ನಿಯರಂಥವರನ್ನು ಎಲ್ಲಿಯೂ ತಿರಸ್ಕರಿಸದೆ ಕಾಳ ಶಾಮಣ್ಣ ಶಾಂತ ಮೊದಲಾದವರನ್ನು ಪುರಸ್ಕರಿಸದೆ ಆಯಾ ಪಾತ್ರಗಳ ಔಚಿತ್ಯವನ್ನು ತೂಕತಪ್ಪದಂತೆ ಗುರುತಿಸಿದ್ದಾರೆ. ನಾವು ಮೊದಲೇ ನೋಡಿದಂತೆ ಈ ಕಾದಂಬರಿಯ ವಸ್ತು ಮತ್ತು ಪಾತ್ರಗಳೆರಡೂ ಅವಿಭಾಜ್ಯವಾಗಿ ಒಂದಾಗಿವೆ. ಪ್ರತಿಯೊಂದು ಪಾತ್ರವನ್ನೂ ಅರ್ಥಮಾಡಿಕೊಳ್ಳುವ ಪರಿಕ್ರಮದಲ್ಲಿಯೇ ನಾವು ಕಥಾವಸ್ತುವನ್ನು ಅರಿಯುತ್ತೇವೆ. ಲೇಖಕರ ಕಥಾದರ್ಶನವು ಆಳವಾದ ವೈಚಾರಿಕನ ಜೀವನ ದರ್ಶನವೇ ಆಗಿ ಪಾತ್ರಗಳು ಈ ದರ್ಶನ ನಾಟಕದ ಅಂಗಗಳಾಗಿರುವುದರಿಂದ ಅವುಗಳ ಒಳಗನ್ನು ಲೇಖಕರು ಅರ್ಥಮಾಡಿಕೊಂಡಿರುವುದು ಇಷ್ಟೊಂದು ವಸ್ತುನಿಷ್ಠವಾಗಿದೆ; ಅರ್ಥನಿಷ್ಠವಾಗಿದೆ. ಈ ವಸ್ತುನಿಷ್ಠೆ ಇರುವುದರಿಂದಲೇ ಲೇಖಕರು ಒಂದು ಸಮಸ್ಯೆಯ, ಒಂದು ಪಾತ್ರದ ಹಲವು ಮುಖಗಳನ್ನು ಕಾಣುತ್ತಾರೆ. ಹಲವು ಮುಖಗಳು, ಶಕ್ತಿಗಳ ಸೆಳೆತಕ್ಕೆ ಸಿಕ್ಕಿ, ಆ ಸೆಳೆತಗಳನ್ನು ಭರಿಸಿ ನಿಲ್ಲುವ ಅಥವಾ

ಅವುಗಳಿಂದ ತತ್ತರಿಸುವ ಕೇಂದ್ರಬಿಂದುಗಳಾಗುತ್ತವೆ ಪಾತ್ರಗಳು. ಕಾಳ ಮತ್ತು ಭರಮುರ ಪಾತ್ರಗಳಂತೂ ಈ ನಿಷ್ಠೆಯ ಅತ್ಯುಚ್ಚ ಉದಾಹರಣೆಗಳಾಗಿವೆ.

ನಾವು ಮೇಲೆ ನೋಡಿದ ಶಾಮಣ್ಣ, ಶಾಂತ, ಸರಸ್ವತಿ, ಗಂಗಿಯರ ಮನೋವಿಶ್ಲೇಷಣೆ ಮೊದಲಾದ ಸಂದರ್ಭಗಳಲ್ಲಿ ನಮ್ಮ ಅಂತರಂಗವನ್ನು ಮುಟ್ಟುವಷ್ಟು ಜೀವಂತವಾಗಿ ಪಾತ್ರಗಳು ಬೆಳೆಯುತ್ತವೆ. ಆದರೆ ಮತ್ತೆ ಕೆಲವು ಸಂದರ್ಭಗಳಲ್ಲಿ ಪಾತ್ರಗಳ ವರ್ತನೆಯನ್ನು ನಾವು ಇನ್ನೂ ಕಾಣಬೇಕೆಂದಾಗ ಲೇಖಕರು ಅಲ್ಲಿಯೇ ಮೊಟಕು ಮಾಡಿಬಿಡುತ್ತಾರೆ. ಉದಾಹರಣೆಗೆಂದು ಕಾಳನ ಅಂತ್ಯವನ್ನು ನೋಡಬಹುದು. ಅವನು ಗಂಗಿಯ ಕತ್ತು ಹಿಸುಕಿ ಓಡಿ ಬರುವುದಂತೂ ತುಂಬ ಸಹಜವಾಗಿದೆ. ಅನಂತರ ಅವನ ವರ್ತನೆಯನ್ನು ಸುಮಾರು ಎರಡು ಪುಟಗಳಲ್ಲಿ ಹೇಳಿ ಮುಗಿಸಿದ್ದಾರೆ. ವಾಚಕರ ಅಂತಃಕರಣವನ್ನು ತಟ್ಟುವ, ಅವನ ಪಾತ್ರದ ದುರಂತತೆಯ ತೀವ್ರತಮ ಸಂದರ್ಭ ಅದು. ಅದನ್ನು ಯಾಕೆ ಇಷ್ಟು ಶೀತಳವಾಗಿ ಹೇಳಿ ಮುಗಿಸಬೇಕಿತ್ತು? ಭಾವನೆಯ ಕಾವು ಏರಿದರೆ ವಸ್ತುನಿಷ್ಠೆ ನಷ್ಟವಾಗಬೇಕಿಲ್ಲ. ಹಾಗೆ ವಸ್ತುನಿಷ್ಠೆ ನಷ್ಟವಾದರೆ ಕಾವೇರಿದ ಭಾವನೆಯು ರಸವಲ್ಲದ ಭಾವ ದೌರ್ಬಲ್ಯದ ಗುರುತಾಗುತ್ತದೆ. ಆದರೆ ಲೇಖಕರು ಇಂತಹ ಹಲವು ಸಂದರ್ಭಗಳಲ್ಲಿ ಕಾವು ಏರುವುದಕ್ಕೇ, ಎಂದರೆ ಪಾತ್ರ ಮತ್ತು ಸಂದರ್ಭಗಳ ಜೀವಂತತೆಯು ಪೂರ್ಣವಾಗಿ ಮಿಡಿಯಲು ಅವಕಾಶವನ್ನೇ ಕೊಟ್ಟಿಲ್ಲ. ನಾವು ಈ ಮೊದಲೇ ನೋಡಿದಂತೆ ಲೇಖಕರು ಅಗತ್ಯವಾದುದಕ್ಕಿಂತ ಹೆಚ್ಚಾಗಿ ಬೌದ್ಧಿಕತೆಗೆ ಗಮನ ಕೊಟ್ಟು ಭಾವಗಳ ಬೆಳವಣಿಗೆಗೆ ಅಗತ್ಯವಾದಷ್ಟು ಗಮನಕೊಡದಿರುವುದೇ ಈ ದೋಷದ ಕಾರಣವೆಂದು ತೋರುತ್ತದೆ. ವಾಸ್ತವವಾಗಿ ಲೇಖಕರು ಬೌದ್ಧಿಕತೆಗೆ ಗಮನ ಕೊಟ್ಟಿರುವುದು ಹೆಚ್ಚು ಎನ್ನಲಾಗುವುದಿಲ್ಲ; ಆದರೆ ಭಾವದ ಬೆಳವಣಿಗೆಗೆ ನೀಡಿರುವ ಗಮನ ಹಲವು ಕಡೆಗಳಲ್ಲಿ ಸಾಲದು. ಕನ್ನಡದ ಕಾದಂಬರಿಗಳ ಸಾಮಾನ್ಯ ಹದಕ್ಕೆ ಹೋಲಿಸಿದರೆ ಈ ಕಾದಂಬರಿಯಲ್ಲಿ ಹೆಚ್ಚು ಬೌದ್ಧಿಕ ಅಂಶವಿರುವುದರ ಹಿನ್ನೆಲೆಯಲ್ಲಿ ಇದನ್ನು ಅತಿಬೌದ್ಧಿಕವೆಂದು ಆತುರದಿಂದ ತಪ್ಪಾಗಿ ನಿರ್ಣಯಿಸಲು ಹಲವು ಕಡೆಗಳಲ್ಲಿ ಸಾಕಷ್ಟು ಮಟ್ಟಕ್ಕೆ ಭಾವವು ಬೆಳೆಯದಿರುವುದೇ ಕಾರಣವಾಗುತ್ತದೆ.

'ಪ್ರಕೃತಿ' 'ಪುರುಷ' ಎರಡೂ ಒಂದೇ ಕಾದಂಬರಿ ಎಂದು ನಾವು ಪ್ರಾರಂಭದಲ್ಲಿಯೇ ಹೇಳಿದೆವು. "'ಪ್ರಕೃತಿ' ಯೊಳಗಿನ ಕತೆ ಇಲ್ಲಿ ಮುಂದೆ ಸಾಗಿದೆ" ಎಂದು ಲೇಖಕರೇ 'ಪುರುಷ' ದ ಮುನ್ನುಡಿಯಲ್ಲಿ ಹೇಳುತ್ತಾರೆ. ಆದರೆ ಮೊದಲನೆಯದು ಪ್ರಕಟವಾದ ಸುಮಾರು ಎರಡು ವರ್ಷದ ನಂತರ ಎರಡನೆಯದು ಪ್ರಕಟವಾಗಿದೆ. ಅದರ ಕಥೆಯು ಒಂದು ರೀತಿಯಲ್ಲಿ ಸ್ವಯಂಪೂರ್ಣವಾಗಿದೆ ಎಂದು ಭಾವಿಸಿ 'ಪ್ರಕೃತಿ' ಯನ್ನು ಪ್ರಕಟಿಸಿದಂತೆ ತೋರುತ್ತದೆ. ಪರಿಣಾಮವಾಗಿ 'ಪುರುಷ'ದ ಪ್ರಾರಂಭಕ್ಕೂ 'ಪ್ರಕೃತಿ'ಯ ಅಂತ್ಯಕ್ಕೂ ಅಷ್ಟು ಹೆಚ್ಚಿನ ಮೇಳ ಕಾಣುವುದಿಲ್ಲ. 'ಪುರುಷ' ದಲ್ಲಿ ಪಾತ್ರಗಳು ಕೆಲವು

ಬಾರಿ flash back ಮಾಡುವಾಗ ಆ ಸಂದರ್ಭಗಳು, ಎಷ್ಟೋ ವಿವರಗಳು 'ಪ್ರಕೃತಿ' ಯಲ್ಲಿ ಇಲ್ಲ. ಈ flash back ಸಂದರ್ಭಗಳು ನೆಲೆ ತಪ್ಪಿದಂತೆ ಕಾಣುತ್ತವೆ. ಒಂದೇ ಕಥೆಯನ್ನು ಬೇರೆ ಬೇರೆ ಅವಧಿಯಲ್ಲಿ ಬರೆಯುವ, ಹಾಗೆ ಬರೆದರೂ ಮೊದಲ ಅವಧಿಯಲ್ಲಿ ಬರೆದದ್ದನ್ನು ಮೊದಲೇ ಪ್ರಕಟಿಸಿದ್ದರೆ ಆಗುವ ಪರಿಣಾಮಗಳು ಇವು.

ಕನ್ನಡ ಕಾದಂಬರಿ ಲೇಖನದಲ್ಲಿ ಈ ಕಾದಂಬರಿಯ ಪ್ರಾಮುಖ್ಯ ಎರಡು ಬಗೆಯದು: ವಿಶಾಲವೂ ಆಳವೂ, ದಾರ್ಶನಿಕ ಮಟ್ಟದ್ದೂ ಆದ ವಿಚಾರ, ವಸ್ತು ನಿಷ್ಠೆಗಳಿಂದ ಕೂಡಿ ತನ್ನ ಮಟ್ಟಿಗೆ ತಾನು ಒಂದು ಮಹತ್ವದ ಕೃತಿಯಾಗಿದೆ. ಬೌದ್ಧಿಕ ಗುಣವು ಸಾಕಷ್ಟು ಬೆಳೆಯದ ಕನ್ನಡ ಕಾದಂಬರಿ ಲೇಖನದ ಪರಂಪರೆಯಲ್ಲಿ ಮಾರ್ಗ ದರ್ಶಕ ಕೃತಿಯಾಗಿದೆ. ಇದರ ಸಫಲಗುಣಗಳು ಎಂತೋ ದೋಷಗಳು ಸಹ ಪರಂಪರೆಗೆ ಮಾರ್ಗದರ್ಶನ ಮಾಡಲು ಸಹಾಯಕವಾಗುತ್ತವೆ.

ಪರ್ಣಾಶ್ರಮ

ಕೆ. ಎಸ್. ನಿಸಾರ್ ಅಹಮದ್

ಅಗ್ರಹಾರಯ್ಯನವರ ಶಹರುಮಧ್ಯದ ಮಾರ್ಕೆಟ್ ಬದಿಯ ಪ್ರಶಾಂತ
ಸರಳ ಏರ್‌ಕಂಡಿಷನ್ಡ್ ಪರ್ಣಕುಟಿಗೊಮ್ಮೆ ಹೋಗಿಬನ್ನಿ :
ಆ ಕಡೆಯಿಂದ ನೋಡಿದಿರೊ ದೇಗುಲ ಈ ಕಡೆಯಿಂದ ಇಗರ್ಜಿ
ಊ ಕಡೆಯಿಂದ ಮಸೀದಿ. ಅಥವ ಒಂದೆ ಎತ್ತರದಲ್ಲಿ ನಿಂತು
ಬೇರೆ ಬೇರೆ ಎತ್ತರದ ಮಂದಿ ವೀಕ್ಷಿಸಿದರೆ ಅವರವರ ಭಾವದಂತೆ
ಪರ್ಣಾಶ್ರಮದ ಚಹರೆಯಾವಿರ್ಭಾವ. ಇನ್ನು ಆಸುಪಾಸಿನ ಪವಿತ್ರತಾ
ವನ್ಯಶಾಂತಿ, ಸಾತ್ವಿಕಾಲಸ ಪರಿಸರ ಅವರ್ಣನೀಯ : ಅತ್ಯಾಧುನಿಕ
ಸ್ವಯಂಚಾಲಿತ ಗೇಟು ದಾಟಿದೊಡನೆ—ಶುದ್ಧ ಯೂರಿಯಾ
ಮಕ್ಕರಿಗಟ್ಟಲೆ ಮುಕ್ಕಿ ಕೊಬ್ಬಿದ ಅಪುಷ್ಪಿತ ಕಾಕಪಾ
ಲತೆಗಳ ನಡುವೆ ಸುಭಿಕ್ಷ ಸೂಸುವ, ಒದ್ದರಷ್ಟೇ ಕುಪ್ಪಳಿಕೆ
ಒಪ್ಪಿಸುವ ಮುಗ್ಧ ಹರಿಣಸಂಕುಲ; ಚಿಮ್ಮುತ್ತ ಬಂದು
ಸಂದರ್ಶಕರ ಕೈ ಜಪ್ತಿಮಾಡಿ, ಏನೂ ದಕ್ಕದಿದ್ದರೆ ಕಚ್ಚೆಗೇ
ಬಾಯಿಹಾಕುವ ಭೋಳೇ ಎಳೆಗರುಗಳು ; ಕರೆಯದಿದ್ದರೇನಂತೆ,
ವಿಭೂತಿ ಭಸ್ಮಗಳ ಕಚ್ಚಾಸಾಮಗ್ರಿ ಯಥೇಚ್ಛ ತಯಾರಿಸುವ
ಧರ್ಮಸೇವಾಭೀರು ಪುಣ್ಯಕೋಟಿಗಳು—ಅವುಗಳಲ್ಲೊಂದರ
ಕೆಚ್ಚಲಿಗೆ ಒಣತುಟಿಯೊತ್ತಿ ಆಗಂತುಕರಿಗೆ ಪೋಸು ಕೊಡುವ
ಅವನ್ಯಜನ್ಯ ಮರಿಹುಲಿಯ ಶಂಕರಭಯಂಕರದೃಶ್ಯ.
ಟಾಂಗಾ ನಿಂತೊಡನೆ ಶೇಂಗಾ ಖಾತ್ರಿಯಾಯ್ತೆಂದು ಮುಖ್ವಾಲು
ಕತ್ತರಿಸಿದ ಗರಿಯವಶೇಷ ಮೆರೆಸಿ ಪುಸಲಾಯಿಸುವ
ಅಡ್ನಕಸುಬಿ ಸುಂದರ ಮಯೂರಗಳು ; ಭೂತಬಲಿಪುಷ್ಟ
ಕಾಗೆಗಳಲ್ಲಿ ಬೆರೆತು ಕಾಕಾ ಕಲಿತ ಖಲಕಂಠ ಪರಪುಟ್ಟಗಳು :
ಕುಲಗೆಟ್ಟಮಂತದಂತೆ ಎಣಿಕೆಗೇ ಬಾರದ ಬರೀ ಅಸ್ತಿತ್ವವಾದಿ
ಸ್ತುತಿ ಪಾಠಕ ಪಂಡಿತವಕ್ಕಿಗಳು.
ನಗರದನಾಥಾಲಯದ ಕಲೋಪವಾಸಿ ಸುಪುತ್ರರು ಬರೆದು
ಅಶ್ರುಮುಕ್ಕರ್ಪಿಸಿದ ಮಾತೃದೇವೋಭವ. ಪಿತೃದೇವೋಭವದ
ವರ್ಣರಂಜಿತ ಫಲಕಗಳು ಎಲ್ಲೆಲ್ಲು.

ಪೂರ್ವಕ್ಕೆ, ಸೈರನ್ನಿನಂತೆ ನಿಡಿದಾದ ಹಾದಿ—
ಯಿಬ್ಬದಿಗೆ ವಿಸ್ತೃತರಾಮಣೀಯಕ ಶಾದ್ವಲ ವಣಶ್ರೀಯ ಮಧ್ಯೆ
ಯಾರಿಗೂ ಗೊತ್ತಾಗದಂತೆ ಬೆಳೆಸಿದ ಗಾಂಜಾಸಸಿಗಳು ;
ಅದಕ್ಕಂಟಿಕೊಂಡೇ, ಬಾಣಂತಿಯ ಪ್ರಸನ್ನತೆಯ ಮನಕ್ಕೆ ಮೂಡಿಸುವ,
ಅಕಾಲಫಲಶೋಭಿ ದ್ರಾಕ್ಷಾಲತೆಗಳು : ಪಕ್ಕದ ಒತ್ತುಯಂತ್ರದ ಬಳಿ
ಸೈಜುವಾರಿ ಬಾಟಲಿಗಳು, ಓಪನರುಗಳು. ಅಂಚುಗಟ್ಟಿದಂತೆ
ಕೊಳಚೆಯಿಂದ ಬಿಡಿಸಿಕೊಂಡೆದ್ದ ಉತ್ತುಂಗ ಶಿಷ್ಟ ನಾರಿಕೇಳ ತರುಗಳು :
ಅವಕ್ಕೆ ಕಟ್ಟಿದ ಮಡಕೆಗಳು. ಅಲ್ಲಲ್ಲಿ ಬಳ್ಳಿಮಾಡದ ಕರ್ಮಠ
ನೆರಳುಗಳಲ್ಲಿ ಪ್ಲೇಬಾಯ್ ಪತ್ರಿಕಾ ಲೀನ ಕಪೋಲಕೇಶೀ
ತೇಜಸ್ವಿ ವಿಶಿಖ ಕುಮಾರ ವಟುಗಳು ; ಸೃಷ್ಟಿಯ ಗುಹ್ಯಗರ್ಭ
ಭೇದಿಸುವ, ಚಿಂತಿಸುವ, ಚರ್ಚಿಸುವ ಅಪಧ್ಯಾನಮಗ್ನ ನಗ್ನ
ಜೋಡಿಗಳು; ಪರಹಸ್ತಾಕ್ಷರ ವಿದ್ಯಾಪ್ರವೀಣರ ನವನವ ಶೋಧಾಧ್ಯಯನಗಳು.
ಕೈಬಾಯಿ ಮತ್ತೊಂದು ಮಂಗುದೊಂದು
ತೊಳೆಯುವ, ಅದನ್ನೇ ಕುಡಿಯುವ, ಜಾತವಿಧಿ ಶ್ರಾದ್ಧಕ್ಕೆ ಬಳಸುವ
ಪ್ರತಿಬಿಂಬಹೀನ ಪರ್ಮೆಂಟಿಸಿದ ಪಾವನ ತೀರ್ಥದ ಮನೋಜ್ಞ
ಪುಷ್ಕರಿಣಿ ಹಿಂಬದಿಯ ತಗ್ಗಿನಲ್ಲಿ.

ಇತ್ತ ಸಿಮೆಂಟಿನಗ್ನಿಕುಂಡದಲಿ ಪೆಟ್ರೋಲು ಪ್ರಚೋದಿತ, ಡಾಲ್ಡಾರ್ಪಿತ
ಕಸಕುನಾತದ ಹಸಿಹಸೀ ಎಲುಬಿನ ಬಣ್ಣದ ಅನವದ್ಯ ಜ್ವಾಲೆಯ ಸುತ್ತ
ಅವಭೃತ ವಿಸ್ಮೃತ, ಅಖಾದ್ಯ ಭಕ್ಷಣತೃಪ್ತ ಅಜಪರು, ಚಳಿಕಾಯಿಸುವ
ವಿಜಾತರು, ತುಂಡುಬೀಡಿ ಹೊತ್ತಿಸಿಕೊಳ್ಳುವ ಪರಪೋಷಿಗಳು,
ಕೂರೆಹೆಕ್ಕುವ ನಿರ್ವಸಿತರು.

ಪರ್ಣಾಶ್ರಮ ಹೊಕ್ಕರೆ ಗೋತ್ರಪ್ರವರ,
ಭಿತ್ತಿಗೆ ಪ್ರಾಚೀನ ಶ್ಲೋಕರ ವರ್ಣರಂಜಿತ ಸಾಂಪ್ರತ ನವಮೂಸೆಗಳು,
ಹಾಗೆಯೇ ಪೂಜಾರಿಗೊಂದು, ಮೌಲ್ವಿಗೊಂದು, ಪ್ರೀಸ್ಟಿಗೊಂದು
ಅವರವರ ಸ್ಥಾನಮಾನಕ್ಕೆ, ಅಭ್ಯರ್ಚನಕ್ಕೆ ತಕ್ಕಂತೆ ಮೆತ್ತನೆಯ
ಸುಖಾಸನಗಳು—ಎದುರಿಗೇ, ಸಾಕ್ಷಾತ್ ಅಹಿಂಸಾವತಾರಿ ಕೃಷ್ಣಾಜಿನಸ್ಥ
ಪರಮ ಪೂಜ್ಯ ಶ್ರೀಶ್ರೀಶ್ರೀ ಅಗ್ರಹಾರೇಶ್ವರಾನಂದಜೀಯವರ ಅಕ್ರೂರಮುದ್ರೆ.
ಮುಂದಕ್ಕೆ, ಪೂಜ್ಯರ ಕಡೆಯಿಂದ ಈಕ್ಷಿಸಿದರೆ ಸಿಂಹಾಸನ,
ಇತರರ ಕಡೆಯಿಂದ ಕಮೋಡಿನ ಅನುಮಾನಗಾಢವಾಗಿಸುವ
ಪೀಠೋಪಕರಣಕ್ಕಂಟಿದ ಜನತಾಜನಾರ್ದನ ಬೋರ್ಡಿಗೆದುರಾಗಿ
ಏರಿಂಡಿಯಾ ರಾಜನ ಯುವರ್ಸ್‌ಫೆಯಿತ್‌ಫುಲಿ ಭಂಗಿ. ಮತ್ತೂ ಒಳಗೆ

ಡಿ. ಡಿ. ಟಿ. ಫೆನಾಯಿಲ್ ಸಂಪ್ರೋಕ್ಷಣಕ್ಕೂ ಮೋಕ್ಷ ಸಿಕ್ಕದ ಪಾಪಿ
ಸಾಧುಜೀವಿಗಳ ಕಣ್ಮರೆಯ ಸಾಂಕ್ರಾಮಿಕಜಾಡ್ಯದ ಪ್ರಯೋಗಶಾಲೆಯಾದ
ಒಳಗೋಣೆ ಕತ್ತಲಲಿ ಗಂಧತೇಯುವ, ದರ್ಭೆ ರಚಿಸುವ, ಹತ್ತಿ
ಹೊಸೆಯುವ ಹುಟ್ಟಾಬ್ರಹ್ಮಚಾರಿಗಳ ಜೊತೆಗೇ ಕೂಳು ಬೇಯಿಸುವ
ಹೊರಗಾದ ಸಾಲಂಕೃತ ಫಲಿತ ವಿತಂತುಗಳು.

ಕತ್ತಲೊಂದಿಗೇ ಚಟುವಟಿಕೆ ಗಲಿಬಿಲಿ ಚಿತ್ರಸ್ಥ ;
ಆಗಿದು ಪಾನಪ್ರಸ್ಥಾಶ್ರಮ : ಟ್ರೇಡ್ ಯೂನಿಯನ್ ಶುರುವಾಗುತ್ತೆ ;
ಕಷ್ಟಮರ್ಸಿಗೆ ಹಂಗಾಮವೋ ಹಂಗಾಮ. ಮಹರಾಯ ಯಾರಿದು?
ಮಡದನೊ ಗಂಡತಿಯೊ ಎಂದು ಗುರುತಿಸದಂಥ ಬೆಡ್‌ಲೈಟಿನ
ಮೈಲಿಗೆ ಬೆಳಕಲ್ಲಿ ನೀತಿಭಾವನೆ ಮಾನಿನಿಯ ಮಾಂಗಲ್ಯದಷ್ಟೇ
ತೆಳ್ಳಗಾಗುತ್ತೆ. ಹಗಲ ತಿಜೋರಿಯ ಕಪ್ಪುಹಣ
ಕತ್ತಲಲಿ ಬೆಳ್ಳಗಾಗುತ್ತೆ. ಗೆದ್ದಲು ಹಿಡಿದ ದಿವ್ಯದ್ರುಮದ
ಶಾಖೆ, ಗೊಡ್ಡಾದ ಸುರಭಿಯ ನೆಣಗೆಚ್ಚಲು ಕೂಸುಗಳ
ಸಮಾನಾಂತರದ ಕೂಗುಗಳಿಗೆ ಸಾಂತ್ವನ ನೀಡುತ್ತವೆ;
ಚಿನ್ನದುಂಗುರದ ಪರಿಣತ ಬೆರಳು ಹಸಿದಮಿದು ಹೊಟ್ಟೆಯ
ತೀಡುತ್ತವೆ. ಪುತ್ರೋತ್ಸವವಾಗುತ್ತಿದ್ದಂತೆ ಒಳಗಲ್ಲಿ, ಇಲ್ಲಿ,
ಆಚೆ, ಈ ಸನಾತನ ಅಶ್ವಸ್ಥವೃಕ್ಷದಡಿಯಲ್ಲಿ
ಶಬ್ದವಾಗದಂತೆ ಅರ್ಚಕರು ಮೌಲ್ವಿಗಳು, ಪ್ರೀಸ್ಟರು
ಗುಣಿತೋಡುತ್ತಾರೆ. ಅಗ್ರಹಾರಯ್ಯ ನಿರ್ದೇಶಿಯಾಗಿ,
ಜೊತೆಗೇ ಜಪಮಣಿ ಎಣಿಸುತ್ತ ಮಂತ್ರೋಚ್ಚಾರದಲ್ಲಿ
ರಾತ್ರಿ ದಾಟುತ್ತಾರೆ............

ಆಶ್ರಮ, ಇತ್ತ ಕತ್ತಲೂ ಅಲ್ಲದ, ಅತ್ತ ಬೆಳಕೂ ಅಲ್ಲದ
ಮುಹೂರ್ತದಲ್ಲಿ, ಸಾತ್ವಿಕ ತಟಸ್ಥತೆಯಿಂದ ಮಿಕಿಮಿಕಿ ನೋಡುತ್ತದೆ.
ಅಂದಹಾಗೆ ಮರೆತಿದ್ದೆ, ಇಂಥ ಪುಣ್ಯಕುಟಿ ಮೊನ್ನೆತಾನೇ
ಮಾರ್ಟ್‌ಗೇಜಾಗಿದೆಯಂತೆ ವಾಲ್‌ಸ್ಟ್ರೀಟಿನ ದಳ್ಳಾಳಿಯೊಬ್ಬನಿಗೆ...

'ಕೆಟ್ಟಕಣ್ಣು' [Evil Eye]

ತೀ. ನಂ. ಶಂಕರನಾರಾಯಣ

"Sit down before fact as a little child, be prepared to give up every preconceived notion, follow humbly wherever and to whatever abysses nature leads, or you shall learn nothing"

— THOMAS HUXLEY

I

ಕೆಲವು ಜನರ ಕಣ್ಣು ಒಳ್ಳೆಯದಲ್ಲ; ಅವರ ನೋಟ ಹಾನಿಕಾರಕ; ಅಂತಹವರ ದೃಷ್ಟಿ ಬಿದ್ದರೆ ಊಟಮಾಡುತ್ತಿರುವ ವ್ಯಕ್ತಿಗಳಿಗೆ, ಎಳೆಯ ಮಕ್ಕಳಿಗೆ, ಬಸುರಿಯರಿಗೆ, ಬಾಣಂತಿಯರಿಗೆ ವಾಂತಿಯಾಗುತ್ತದೆ, ಊಟ ಸೇರುವುದಿಲ್ಲ, ಹೊಟ್ಟೆ ನೋವು ಬರುತ್ತದೆ; ಹಾಲು ಕೊಡುತ್ತಿರುವ ಹಸುಗಳ, ಎಮ್ಮೆಗಳ ಕೆಚ್ಚಲಿನ ಮೇಲೆ ಇಂತಹ ಜನರ ದೃಷ್ಟಿ ಬಿದ್ದರೆ ಹಾಲಿನ ಬದಲು ರಕ್ತ ಬರುತ್ತದೆ; ಕೆಲವು ಸಲ ಈ ಪ್ರಾಣಿಗಳು ಕುಡಿಯುತ್ತಿರುವ ಕರುಗಳನ್ನೇ ಝಾಡಿಸಿ ಒದೆಯುತ್ತವೆ; ಕೆಚ್ಚಲು ಮುಟ್ಟಲು ಅವಕಾಶ ಕೊಡುವುದಿಲ್ಲ; ಹಾಲು ಕರೆಯಲು ಪ್ರಯತ್ನಿಸಿದರೂ ಹಾಲು ಬರುವುದೇ ಇಲ್ಲ; ಅಕಸ್ಮಾತ್ ಹಾಲು ಕೊಟ್ಟರೂ ಈ ಹಾಲನ್ನು ಕಾಯಿಸಿದರೆ ಮನೆಯಲ್ಲಿ ಯಾರೂ ನಿಲ್ಲುವಂತಿಲ್ಲ — ಅಷ್ಟು ಕೆಟ್ಟವಾಸನೆ ಉಂಟಾಗುತ್ತದೆ. ಸುಂದರವಾದ ಮಕ್ಕಳನ್ನು, ಮದುಮಕ್ಕಳನ್ನು ಅತಿಯಾಗಿ ಹೊಗಳಿದರೆ ಹೊಗಳಿಸಿಕೊಂಡವರಿಗೆ ಕೆಡುಕಾಗುತ್ತದೆ. ಕೆಟ್ಟಕಣ್ಣು ಕೆಲವರಿಗೆ ಹುಟ್ಟಿನಿಂದಲೇ ಇರುತ್ತದೆ; ಮತ್ತೆ ಕೆಲವರಿಗೆ ಅಸೂಯೆ ಹೆಚ್ಚಾದಾಗ ಈ ಶಕ್ತಿ ಅವರಲ್ಲಿ ಬೆಳವಣಿಗೆ ಹೊಂದುತ್ತದೆ; ಹುಟ್ಟಿನಿಂದಲೇ ಕೆಟ್ಟಕಣ್ಣನ್ನು ಹೊಂದಿದವರಿಗೆ ಕೋಪ ಮತ್ತು ಅಸೂಯೆ ಹೆಚ್ಚಾದಾಗ ಕೆಟ್ಟಕಣ್ಣಿನ ಶಕ್ತಿಯೂ ಹೆಚ್ಚಾಗುತ್ತದೆ. ಮೆಳ್ಳೆಗಣ್ಣುಳ್ಳವರಲ್ಲಿ ಕೆಟ್ಟಕಣ್ಣಿನ ಶಕ್ತಿ ಹೆಚ್ಚಾಗಿ ಉಂಟು. ನಾಯಿ, ನರಿ ಮೊದಲಾದ ಪ್ರಾಣಿಗಳಿಗೂ ಕೆಟ್ಟ ಕಣ್ಣುಂಟು. ಇಂತಹ ಕೆಟ್ಟಕಣ್ಣಿನ ಪ್ರಭಾವ ಕಡಮೆಯಾಗಲೆಂದು, ಪ್ರಭಾವವನ್ನು ಸಂಪೂರ್ಣವಾಗಿ ತಡೆಗಟ್ಟಲೆಂದು ಮೂರು ಸಾರಿ ಉಗುಳುವುದು. ನೆಟ್ಟಿಗೆ ಮುರಿಯುವುದು, ಆರತಿ

---

[1] Quoted by G. N. M. Tyrrel : Personality of Man (Pelican Series, 1946)

ಎತ್ತುವುದು, ನೀವಳಿಸುವುದು ಮೊದಲಾದ ಸರಳ ಪರಿಹಾರಗಳಿಂದ ಮಂತ್ರಹಾಕಿಸುವುದು, ಯಂತ್ರ ಕಟ್ಟಿಸುವುದು ಮೊದಲಾದ ಸಂಕೀರ್ಣ ಪರಿಹಾರಗಳನ್ನೂ ಜನ ಕಂಡುಕೊಂಡು ಪ್ರಯೋಗಿಸುತ್ತಿದ್ದಾರೆ. ಇಂತಹ ನಂಬಿಕೆಗಳನ್ನು, ಇಂತಹ ಪರಿಹಾರ ಕ್ರಮಗಳನ್ನು ನಮ್ಮ ದಿನನಿತ್ಯದ ಜೀವನದಲ್ಲಿ ನಮ್ಮ ಸುತ್ತಲ ಸಮಾಜದಲ್ಲಿಯೇ ಕಾಣುತ್ತೇವೆ. ಈ ಕೆಟ್ಟಕಣ್ಣಿನ ಪ್ರಭಾವವನ್ನು ನಮ್ಮಲ್ಲಿ 'ದೃಷ್ಟಿದೋಷ' ಎಂದೂ ಕರೆಯುವುದುಂಟು. ಕೆಲವರು ಕೆಟ್ಟಕಣ್ಣಿಗೆ ವಿಶೇಷ ಹೆದರುತ್ತಾರೆ; ಇನ್ನು ಕೆಲವರು ಸ್ವಲ್ಪ ಹೆದರುತ್ತಾರೆ; ಮತ್ತೆ ಕೆಲವರು ಹೊರಗೆ ತಾವು ಹೆದರುವುದಿಲ್ಲವೆಂದು ತೋರಿಕೆ ಮಾಡಿದರೂ ಒಳಗೊಳಗೇ ಹೆದರಿ ಪರಿಹಾರಗಳನ್ನು ಬಳಸಿ ಈ ಪ್ರಭಾವವನ್ನು ಕಳೆದುಕೊಳ್ಳಲು ಯತ್ನಿಸುತ್ತಾರೆ.[2]

ಇಂತಹ ನಂಬಿಕೆಗಳು ಕರ್ನಾಟಕದಲ್ಲಿ ಮಾತ್ರವಲ್ಲ, ಭಾರತದಲ್ಲಿ ಮಾತ್ರವಲ್ಲ, ಪ್ರಪಂಚದ ಬಹುಪಾಲು ದೇಶಗಳಲ್ಲಿ ಪ್ರಚಲಿತವಾಗಿವೆ;[2] ಈ ತಲೆಮಾರಿನಲ್ಲಿ ಮಾತ್ರವಲ್ಲದೆ ತಲೆತಲಾಂತರಗಳಿಂದ ಸಾಗಿಬಂದಿವೆ; ವಿದ್ಯಾವಂತರು, ಅವಿದ್ಯಾವಂತರು, ನಾಗರೀಕರು, ಜನಪದರು ಮೊದಲಾದ ಎಲ್ಲಾ ಸಾಮಾಜಿಕ ವರ್ಗಗಳಲ್ಲಿಯೂ ಬೇರೆ ಬೇರೆ ಮಟ್ಟದಲ್ಲಿ ಉಳಿದುಬಂದಿವೆ; ಆದಿವಾಸಿಗಳಂತೂ ಕೆಟ್ಟಕಣ್ಣಿನ ಪ್ರಭಾವದಲ್ಲಿ ಸಂಪೂರ್ಣ ನಂಬಿಕೆ ಇಟ್ಟಿದ್ದರು; ಪರಿಹಾರಕ್ಕೆ ಬೇಕಾದ ಬೇರೆ ಬೇರೆಯ ಕ್ರಮಗಳನ್ನೂ ಅನುಸರಿಸುತ್ತಿದ್ದರು. ಅವರಿಗೆ ಅದು ಮೂಢನಂಬಿಕೆ (superstition) ಎಂಬ ಭಾವನೆ ಇರಲಿಲ್ಲ.

ಆದರೆ ಇಂದು ಕಾಲ ಬದಲಾಗಿದೆ. ವಿಜ್ಞಾನದ ಪ್ರಭಾವದಿಂದ ಮಾನವ ಹೆಚ್ಚು ವಿಚಾರಪರನಾಗಿದ್ದಾನೆ; ಮೊದಲಿನಂತೆ ಕಣ್ಣುಮುಚ್ಚಿಕೊಂಡು ಯಾವುದನ್ನೂ ನಂಬುವುದಿಲ್ಲ. ಇಂದಿನ ವಿದ್ಯಾವಂತರಿಗೆ ಕೆಟ್ಟಕಣ್ಣಿನಲ್ಲಿ ನಂಬಿಕೆ ಇಡುವುದು ಶುದ್ಧ ಮೂರ್ಖತನ ಎಂಬ ಭಾವನೆಯೂ ಬಂದಿದೆ; ಇಷ್ಟಾದರೂ ಇಂದೂ ಸಹ ಪ್ರತಿಯೊಬ್ಬರೂ ಪ್ರಜ್ಞಾಪೂರ್ವಕವಾಗಿಯಾಗಲಿ, ಅಪ್ರಜ್ಞಾಪೂರ್ವಕವಾಗಿಯಾಗಲಿ ಒಂದಲ್ಲ ಒಂದು ಘಟ್ಟದಲ್ಲಿ ಕೆಟ್ಟಕಣ್ಣಿಗೆ ಹೆದರುತ್ತಾರೆ.

ಕೆಟ್ಟ ಪ್ರಭಾವ ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಗೆ ಬಗೆಬಗೆಯ ಮಾಧ್ಯಮಗಳಲ್ಲಿ ಆಗಲು ಸಾಧ್ಯ. ಮಾತಿನ ಮೂಲಕ, ಸ್ಪರ್ಶದ ಮೂಲಕ, ಮನಸ್ಸಿನ ಮೂಲಕ ಈ ಪ್ರಭಾವ ಉಂಟಾಗಬಹುದಾದರೂ ಕಾಲಾನುಕಾಲದಿಂದ ಜನ ಕಣ್ಣಿನ ಮಾಧ್ಯಮದಲ್ಲಿ

---

2 ಇದಕ್ಕೆ ಅಪವಾದವಾಗಿರುವ, ಅಂದರೆ ಕೆಟ್ಟಕಣ್ಣಿನಲ್ಲಿ ನಂಬಿಕೆ ಹೊಂದಿಲ್ಲದಿರುವ, ಜನಾಂಗಗಳೂ ಉಂಟು. ಸಿಲೋನಿನಲ್ಲಿರುವ ವೆಡ್ಡಾ (Vedda) ಜನಾಂಗ ಇದಕ್ಕೆ ಉತ್ತಮ ಉದಾಹರಣೆ. ವಿವರಗಳಿಗೆ ನೋಡಿ: C. G. Seligman & Brenda Z. Seligman: The Veddas (1969), p. 191.

ನಂಬಿಕೆ ಇಟ್ಟಿರುವುದು ಆಶ್ಚರ್ಯ ಎನಿಸಬಹುದಾದರೂ ವಿಚಾರ ಮಾಡಿದಾಗ ತೀರ ಸಹಜವಾದುದು ಎಂಬ ಭಾವನೆ ಬರುತ್ತದೆ. ಉಳಿದ ಅಂಗಗಳಿಗಿಂತ ಜನ ಕಣ್ಣಿಗೆ ಹೆಚ್ಚು ಮಹತ್ವ ಕೊಟ್ಟಿದ್ದಾರೆ; ಕಣ್ಣಿನ ನೋಟಕ್ಕೆ ಹೆಚ್ಚು ಗಮನಕೊಟ್ಟಿದ್ದಾರೆ. ಕಣ್ಣಿನ ನೋಟ ನೋಡುವ ವ್ಯಕ್ತಿಯ ಮನಸ್ಸಿನ ಭಾವನೆಗಳನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಇದರಿಂದಾಗಿ ಮನಸ್ಸಿನ ಭಾವನೆಗಳ, ಅಭಿವ್ಯಕ್ತಿಯಲ್ಲಿ ಉಳಿದೆಲ್ಲ ಅಂಗಗಳಿಗಿಂತ ಕಣ್ಣು ಪ್ರಮುಖ ಪಾತ್ರ ವಹಿಸುತ್ತದೆ. ಕಣ್ಣು ಇಷ್ಟರಮಟ್ಟಿನ ಪ್ರಧಾನಪಾತ್ರ ವಹಿಸುವುದರಿಂದ, ಒಬ್ಬ ವ್ಯಕ್ತಿಯಿಂದ ಕೆಟ್ಟಪ್ರಭಾವ ಆಗಬಹುದಾದರೂ ಅದು ಕಣ್ಣಿನ ನೋಟದ ಮೂಲಕ ಆಗಲು ಸಾಧ್ಯ ಎಂಬ ನಂಬಿಕೆ ಸಹಜವಾಗಿಯೇ ಉಂಟಾಯಿತು ಎಂದು ಹೇಳಬಹುದು.[3]

ಜನರ ಇಂದಿನ ಅನೇಕ ನಂಬಿಕೆಗಳಿಗೆ ಕೆಟ್ಟಕಣ್ಣಿನ ಕಲ್ಪನೆ ಮೂಲ; ಅನೇಕ ಆಚರಣೆಗಳಿಗೆ ಕೆಟ್ಟಕಣ್ಣಿನ ಪ್ರಭಾವದ ಪರಿಹಾರಗಳ ಕಲ್ಪನೆ ಕಾರಣವಾಗಿದೆ. ಇದರಿಂದ ಕೆಟ್ಟಕಣ್ಣಿನ ಕಲ್ಪನೆ ಇಂದಿನ ನಂಬಿಕೆ, ಸಂಪ್ರದಾಯ ಮತ್ತು ಆಚರಣೆಗಳಲ್ಲಿ ಬಲವಾಗಿ ಬೇರುಬಿಟ್ಟಿದೆ ಎಂದು ಹೇಳಬಹುದು. ಕೆಟ್ಟಕಣ್ಣಿನ ಸ್ವರೂಪದ ಬಗ್ಗೆ ಪ್ರಪಂಚದಾದ್ಯಂತ ಜನರಲ್ಲಿ ಸಾಮಾನ್ಯವಾಗಿ ಪ್ರಚಲಿತವಾಗಿರುವ ನಂಬಿಕೆಗಳಾವುವು, ಅದಕ್ಕೆ ಅವರು ಕಂಡುಕೊಂಡಿರುವ ಪರಿಹಾರಗಳೇನು ಎಂಬುದನ್ನು ತಿಳಿಯುವುದು ಅಗತ್ಯ. ಇದರಿಂದ ನಮ್ಮ ಅನೇಕ ನಂಬಿಕೆಗಳಿಗೆ, ಸಂಪ್ರದಾಯಗಳಿಗೆ ಮತ್ತು ಆಚರಣೆಗಳಿಗೆ ಸೂಕ್ತವಾದ ವಿವರಣೆ ಕೊಡಲು ಸಾಧ್ಯವಾಗುತ್ತದೆ. ಇದರ ಜೊತೆಯಲ್ಲಿಯೇ ಕೆಟ್ಟಕಣ್ಣಿಗೆ ಸಂಬಂಧಿಸಿದ ವಿವರಗಳಲ್ಲಿ ಮೂಢನಂಬಿಕೆ ಎಷ್ಟು, ವೈಜ್ಞಾನಿಕ ಸತ್ಯ ಎಷ್ಟು ಎಂಬುದರ ವಿಚಾರವಾಗಿಯೂ ಸಂಶೋಧನೆ ನಡೆಸುವುದು ಅಗತ್ಯವಾಗಿದೆ. ಇದರಿಂದ ಈ ಬಗ್ಗೆ ಜನರಲ್ಲಿರುವ ಕೆಲವು ಅನಗತ್ಯವಾದ, ಅತಿಯಾದ, ಗಾಬರಿ ಅತಂಕಗಳನ್ನು ಕಡಮೆಮಾಡಲು ಸಾಧ್ಯವಾದೀತು. ಈ ಎಲ್ಲ ಕಾರಣಗಳಿಂದ ಈ ಸಂಬಂಧವಾದ ಅಧ್ಯಯನ ಎರಡು ಮಟ್ಟಗಳಲ್ಲಿ ನಡೆಯಬೇಕಾಗಿದೆ.

1. ವಿವರಣಾತ್ಮಕ ಅಧ್ಯಯನ (Descriptive study)
2. ವಿಶ್ಲೇಷಣಾತ್ಮಕ ಅಧ್ಯಯನ (Analytical study)

ವಿವರಣಾತ್ಮಕ ಅಧ್ಯಯನಕ್ಕೆ ಬೇಕಾದ ವಿವರಗಳನ್ನು ಪುರಾಣವಿಜ್ಞಾನ (Mythology), ಜಾನಪದ (Folklore) ಮತ್ತು ಮಾನವವಿಜ್ಞಾನ (Anthropology) ಗಳಿಂದ ಸಂಗ್ರಹಿಸಬಹುದು. ವಿಶ್ಲೇಷಣಾತ್ಮಕ ಅಧ್ಯಯನಕ್ಕೆ ಮನೋವಿಜ್ಞಾನ (Phychology) ಮತ್ತು ಪರಾಮನೋವಿಜ್ಞಾನ (Parapsychology) ಗಳನ್ನು ಆಶ್ರಯಿಸ

---

3 Major H. R. Brown: Evil Eye, The Quarterly Journal of Mythic Society, Vol I, No. 2, p. 28.

ಬೇಕಾಗುತ್ತದೆ. ಅಧ್ಯಯನಕ್ಕೆ ಜಟಿಲವಾಗಿರುವ ಈ ಕ್ಷೇತ್ರದಲ್ಲಿ ಮೇಲ್ಕಂಡ ಎರಡೂ ಅಧ್ಯಯನ ಕ್ರಮಗಳಿಂದ, ನಾಲ್ಕೂ ಶಾಸ್ತ್ರಗಳ ನೆರವಿನಿಂದ ಕೆಟ್ಟಕಣ್ಣಿನ ವಿಚಾರದಲ್ಲಿ ಸಾಧ್ಯವಾದಷ್ಟು ಸ್ಪಷ್ಟವಾದ ಕಲ್ಪನೆ ಮೂಡಿಸುವ ಪ್ರಯತ್ನಮಾಡಲಾಗಿದೆ.

2

ಕೆಟ್ಟಕಣ್ಣಿಗೆ ಸಂಬಂಧಿಸಿದ ವಿವರಗಳನ್ನು ಕಲೆಹಾಕುವಾಗ ಮೂರು ಮುಖ್ಯ ಅಂಶಗಳನ್ನು ಗಮನಿಸಬೇಕಾಗುತ್ತದೆ : ಮೊದಲನೆಯದಾಗಿ ಕೆಟ್ಟಕಣ್ಣಿನ ಪರಿಣಾಮದ ಸ್ವರೂಪ; ಎರಡನೆಯದಾಗಿ ಕೆಟ್ಟಕಣ್ಣು ಉಳ್ಳ ಜನರ ವ್ಯಕ್ತಿತ್ವದ ಸ್ವರೂಪ; ಮೂರನೆಯದಾಗಿ ಕೆಟ್ಟಕಣ್ಣಿನ ಪ್ರಭಾವವನ್ನು ತಡೆಯಲು ಪ್ರಚಲಿತವಾಗಿರುವ ಪರಿಹಾರಗಳ ಸ್ವರೂಪ. ಇವುಗಳ ವಿವರಣೆಗೆ ಮೊದಲು ಕೆಟ್ಟಕಣ್ಣು ಪುರಾಣಗಳಲ್ಲಿ ಮತ್ತು ಅಲ್ಲಿಂದೀಚೆಗೆ ಹೇಗೆ ತನ್ನ ಅಸ್ತಿತ್ವವನ್ನು ಸಮರ್ಥಿಸಿಕೊಂಡಿದೆ ಎಂಬುದನ್ನೂ ನೋಡಬಹುದು.

ಭಾರತ, ಈಜಿಪ್ಟ್, ಗ್ರೀಸ್, ರೋಮ್ ಮೊದಲಾದ ದೇಶಗಳ ಪುರಾಣಗಳಲ್ಲಿ (myths) ಕೆಟ್ಟಕಣ್ಣಿನ ಪ್ರಸ್ತಾಪವಿದೆ; ಕೆಲವು ನೇರವಾಗಿ ಕೆಟ್ಟಕಣ್ಣಿಗೆ ಸಂಬಂಧಿಸಿದ ವಿವರಗಳು ದೊರೆಯದಿದ್ದರೂ ಕಣ್ಣಿನ ಶಕ್ತಿ ಎಷ್ಟಿದೆ ಎಂಬುದನ್ನು ಕುರಿತ ವಿವರಗಳು ಸಾಕಷ್ಟು ದೊರೆಯುತ್ತವೆ. ಭಾರತೀಯ ಪುರಾಣಗಳಲ್ಲಿ ಈಶ್ವರನ ಹಣೆಗಣ್ಣು ಪ್ರಸಿದ್ಧವಾದುದು; ತಪಸ್ಸುಮಾಡುತ್ತಿರುವ ಋಷಿಗಳು ಕೋಪಗೊಂಡು ಕಣ್ಣುತೆರೆದರೆ ಆಗುವುದೇನೆಂಬುದು ಎಲ್ಲರಿಗೂ ತಿಳಿದ ವಿಷಯ; ದೇವತೆಗಳನ್ನು ಕೆರಳಿಸಿದರೆ, ಅವರ ಕಣ್ಣಿನ ದೃಷ್ಟಿ ಮಾನವರ ಮೇಲೆ ಬಿದ್ದು ತುಂಬ ಕೆಡುಕು ಉಂಟಾಗುತ್ತದೆ ಎಂಬುದಕ್ಕೆ ಪುರಾಣಗಳಲ್ಲಿ ಸಾಕಷ್ಟು ಆಧಾರಗಳಿವೆ. ಭಾರತದ ಪ್ರಾಚೀನ ಬರಹಗಳಲ್ಲಿ, ಅದರಲ್ಲಿಯೂ ಅಥರ್ವಣ ವೇದದಲ್ಲಿ ಕೆಟ್ಟಕಣ್ಣಿನ ಪ್ರಸ್ತಾಪವಿರುವುದು ಮಾತ್ರವಲ್ಲದೆ ಅದನ್ನು ತಡೆಯಲು ಪಠಿಸಬೇಕಾಗಿರುವ ಮಂತ್ರಗಳು (charms). ಪರಿಹಾರಕ್ಕೆ ಬೇಕಾದ 'ಯಂತ್ರ'ಗಳು (amulets) ಉಲ್ಲೇಖಗೊಂಡಿವೆ.[4]

ಈಜಿಪ್ಟಿನ ಪುರಾಣಗಳ ಪ್ರಕಾರ ದೇವತೆಗಳ ಮತ್ತು ಮಾನವರ ಸೃಷ್ಟಿಕರ್ತನಾದ ತಾಹ್(Ptah) ದೇವರು ತನ್ನ ಕಣ್ಣಿನಿಂದ ದೇವತೆಗಳನ್ನೂ ಬಾಯಿನಿಂದ ಮಾನವರನ್ನೂ ಸೃಷ್ಟಿಸಿದನೆಂದು ಪ್ರತೀತಿಯಿದೆ.

ಈಜಿಪ್ಟಿನ ಜನರಿಂದ ಅನೇಕ ನಂಬಿಕೆಗಳನ್ನೂ ಸಂಪ್ರದಾಯಗಳನ್ನೂ ಸ್ವೀಕರಿಸಿದ ಗ್ರೀಕರ ಪುರಾಣಗಳಲ್ಲಿ ಕೆಟ್ಟಕಣ್ಣಿನ ಪ್ರಸ್ತಾಪವಿದೆ. ತನ್ನ ನೋಟದಿಂದಲೇ ಜನರನ್ನು

[4] Ibid, pp. 59-60.

ಕಲ್ಲು ಮಾಡುವ ಶಕ್ತಿಹೊಂದಿದ್ದ ಗಾರ್ಗನ್ ಮೆಡೂಸಾ (Gorgon Medusa) ಈ ಪುರಾಣಗಳಲ್ಲಿ ಪ್ರಸಿದ್ಧಳು. ಗ್ರೀಕ್ ದೇವತೆಗಳಲ್ಲಿ ಜೂನೋ (Juno) ದೇವತೆಗೆ ಕೆಟ್ಟಕಣ್ಣು ಇತ್ತೆಂದೂ, ತನಗಾಗದವರಿಗೆ ತೊಂದರೆ ಮಾಡಲು ಇದರ ಉಪಯೋಗ ವಾಗುತ್ತಿತ್ತು; ಕೆಟ್ಟಕಣ್ಣಿನ ಪ್ರಭಾವದಿಂದ ತಪ್ಪಿಸಿಕೊಳ್ಳಲು ಮರ್ಕ್ಯುರಿ (Mercury) ದೇವತೆ ಅನೇಕ ರಕ್ಷಣೆಗಳ ಸಮೇತ ಹೋಗಬೇಕಾಗಿತ್ತೆಂದೂ ಗ್ರೀಕ್ ಪುರಾಣಗಳಿಂದ ತಿಳಿದುಬಂದಿದೆ.[5]

ಪ್ರಾಚೀನ ರೋಮನ್ನರು ವರ್ಜಿಲನ ಕಾಲದಿಂದಲೂ ಕೆಟ್ಟಕಣ್ಣಿನಲ್ಲಿ ನಂಬಿಕೆ ಇಟ್ಟಿದ್ದರು. ರೋಮನ್ ರಾಜರು ತಮ್ಮಮೇಲೆ ಆಗಬಹುದಾದ ಕೆಟ್ಟಕಣ್ಣಿನ ಪ್ರಭಾವ ವನ್ನು ತಪ್ಪಿಸಿಕೊಳ್ಳಲು ವಿಕಾರವಾದ ಮುಖವುಳ್ಳ ಜನರನ್ನು ತಮ್ಮ ಜೊತೆ ಇರಲು ನೇಮಿಸಿಕೊಳ್ಳುತ್ತಿದ್ದರು. ಕೆಟ್ಟಕಣ್ಣುಳ್ಳವರ ಗಮನ ಈ ವಿಕಾರ ಮುಖದ ವ್ಯಕ್ತಿಗಳ ಕಡೆ ಹರಿದು, ತಮಗೆ ಆ ಪ್ರಭಾವವು ತಟ್ಟದಿರಲಿ ಎಂಬ ಉದ್ದೇಶದಿಂದ ಹೀಗೆ ಮಾಡು ತ್ತಿದ್ದರು;[6] ತಮ್ಮ ಕೆಟ್ಟಕಣ್ಣಿನಿಂದ ಬೆಳೆಗಳನ್ನು ನಾಶಮಾಡಿದವರಿಗೆ ಸೂಕ್ತವಾದ ಶಿಕ್ಷೆ ವಿಧಿಸುವ ಶಾಸನಗಳನ್ನು ಮಾಡಿದ್ದರು.[7]

ಯಹೂದಿಗಳು ಬೈಬಲ್ಲಿನ ಕಾಲದಿಂದಲೂ ಕೆಟ್ಟಕಣ್ಣಿನಲ್ಲಿ ನಂಬಿಕೆ ಇಟ್ಟಿದ್ದಾರೆ. ಬೈಬಲ್‌ನಲ್ಲಿ ಕೆಟ್ಟಕಣ್ಣಿನ ಪ್ರಸ್ತಾಪವಿದೆ. ಹೀಗೆಯೇ ಮುಸಲ್ಮಾನರೂ ಮೊದಲಿನಿಂದಲೂ ಕೆಟ್ಟಕಣ್ಣಿನಲ್ಲಿ ನಂಬಿಕೆ ಇಟ್ಟಿದ್ದಾರೆ. ಕೊರಾನಿನಲ್ಲಿ ಈ ಸಂಬಂಧವಾದ ಉಲ್ಲೇಖಗಳಿವೆ.[8]

ಪ್ರಪಂಚದ ಬಹುಪಾಲು ಭಾಷೆಗಳಲ್ಲಿ 'ಕೆಟ್ಟಕಣ್ಣು' ಎಂಬ ಪದಕ್ಕೆ ಸಮಾನಾರ್ಥಕ ವಾದ ಪದಗಳು ಬಳಕೆಯಲ್ಲಿವೆ. ಉದಾಹರಣೆಗೆ ಗ್ರೀಕ್‌ನಲ್ಲಿ 'Gaskania', ಲ್ಯಾಟಿನ್ ನಲ್ಲಿ 'Fascinum', ಇಟಾಲಿಯನ್‌ನಲ್ಲಿ 'Jettatora'–ಹೀಗೆಯೇ ಇತರ ಭಾಷೆಗಳ ಲ್ಲಿಯೂ ಬೇರೆಬೇರೆಯ ಪದಗಳು ಬಳಕೆಯಲ್ಲಿವೆ.[9]

ಕೆಟ್ಟಕಣ್ಣಿಗೆ ನೇಪಲ್ಸ್‌ನಲ್ಲಿ ಜನ ಹೆದರುವಷ್ಟು ಆದಿವಾಸಿಗಳೂ ಹೆದರುತ್ತಿರಲಿಲ್ಲ ಎನಿಸುತ್ತದೆ. ಕೆಟ್ಟಕಣ್ಣುಳ್ಳವನು ದಾರಿಯಲ್ಲಿ ಬರುತ್ತಿದ್ದರೆ ಅವನ ನೋಟದಿಂದ ಪಾರಾ ಗಲು ಜನ ತಲೆಮರೆಸಿಕೊಂಡು ಹೋಗುತ್ತಿದ್ದುದುಂಟು. ಅಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ

---

5 Encyclopaedia of Religion and Ethics (1955). Vol V, pp. 609-610.

6 Abbe' Dubois: Hindu Manners, Customs and Ceremonies (1897). p. 151.

7 Encyclopaedia Britannica (1968). Vol V, p. 916.

8 Major H. R. Brown: Evil Eye, The Quarterly Journal of Mythic Society, Vol I, No. 2, pp 59-60.

9 The New Popular Encyclopaedia (1905). Vol V, P. 270

ಕೆಟ್ಟಕಣ್ಣಿನ ಪ್ರಭಾವ ತಡೆಯಲು ಒಂದಲ್ಲ ಒಂದು ಮಂತ್ರವನ್ನು ಕಲಿತಿರುತ್ತಾನೆ; ಒಂದಲ್ಲ ಒಂದು ಯಂತ್ರವನ್ನು ಹೊಂದಿರುತ್ತಾನೆ.[10]

ಮೊರಾಕೋ ದೇಶದ ಜನ ಬಹುಪಾಲು ಅನಾಹುತಗಳಿಗೆ ಕೆಟ್ಟಕಣ್ಣಿನ ಪ್ರಭಾವವೇ ಕಾರಣ ಎಂದು ನಂಬಿದ್ದಾರೆ. ಸ್ಮಶಾನದ ಮೂರನೆಯ ಒಂದು ಭಾಗ ಕೆಟ್ಟಕಣ್ಣಿಗೆ ಸೇರಿದೆ, ಜನಸಂಖ್ಯೆಯಲ್ಲಿ ಅರ್ಧಭಾಗದಷ್ಟು ಜನ ಸಾಯುವುದು ಕೆಟ್ಟಕಣ್ಣಿನಿಂದ, ಕೆಟ್ಟಕಣ್ಣು ಮನೆಗಳನ್ನು ಖಾಲಿಮಾಡುತ್ತದೆ ಎಂದೆಲ್ಲಾ ನಂಬುತ್ತಾರೆ.[11]

ಅಫ್‌ಘಾನಿಸ್ಥಾನ ಮತ್ತು ಹಿಂದೂಸ್ಥಾನದ ಗಡಿನಾಡಿನ ರೈತರು 'ಕಾಯಿಲೆಯಾದವರು ಚೇತರಿಸಿಕೊಳ್ಳುತಾರೆ, ಆದರೆ ಕೆಟ್ಟಕಣ್ಣಿನ ಪ್ರಭಾವಕ್ಕೆ ಒಳಗಾದವರು ಚೇತರಿಸಿಕೊಳ್ಳುವುದಿಲ್ಲ' ಎಂದು ನಂಬುತ್ತಾರೆ. ಮೊರಾಕೋ ದೇಶದ ಜನರಲ್ಲಿ ಕೆಟ್ಟಕಣ್ಣಿನ ಕಲ್ಪನೆ ಎಷ್ಟರ ಮಟ್ಟಿಗೆ ಬೇರೂರಿದೆ ಎಂದರೆ 'ಕೆಟ್ಟಕಣ್ಣಿನವ' ಎಂಬ ಅಪಖ್ಯಾತಿ ಪಡೆದ ವ್ಯಕ್ತಿ ಯಾವುದಾದರೂ ಸಮಾರಂಭದಲ್ಲಿ ಭಾಗವಹಿಸಿದ್ದಾಗ, ಏನು ಅನಾಹುತವಾದರೂ ಆ ನಷ್ಟವನ್ನು ಆತನೇ ಕಟ್ಟಿಕೊಡಬೇಕಾಗುತ್ತದೆ. ಇಂತಹ ವ್ಯಕ್ತಿ ಬೇರೊಬ್ಬರ ಹಸುವನ್ನೋ ಎಮ್ಮೆಯನ್ನೋ ನೋಡಿದಾಗ ಅದು ಆತ ನೋಡಿದ ಕೆಲವು ದಿನಗಳಲ್ಲಿಯೇ ತೀರಿಹೋದರೆ ಅದಕ್ಕೆ ಈತನ ಕೆಟ್ಟಕಣ್ಣಿನ ಪ್ರಭಾವವೇ ಕಾರಣ ಎಂಬ ನಂಬಿಕೆಯಿರುವುದರಿಂದ ಈತನೇ ಆ ನಷ್ಟವನ್ನು ತುಂಬಿಕೊಡಬೇಕಾಗುತ್ತದೆ.[12]

ಮೊದಲನೆಯ ಎಲಿಜಬೆತ್ ರಾಣಿಯ ಕಾಲದಲ್ಲಿ ಐರ್ಲೆಂಡಿನಲ್ಲಿ ಕೆಟ್ಟಪ್ರಭಾವ ಬೀರುವ ಮಾಟಗಾತಿಯರನ್ನು (witches) ಗಲ್ಲಿಗೇರಿಸಲಾಗುತ್ತಿತ್ತು.[13]

ಪ್ರಪಂಚದ ಬಹುಪಾಲು ದೇಶಗಳ ಜನಪದಗೀತೆಗಳಲ್ಲಿ ಹಾಗೂ ಜನಪದ ಕಥೆಗಳಲ್ಲಿ ಕೆಟ್ಟಕಣ್ಣಿನ ಪ್ರಸ್ತಾಪ, ಕೆಟ್ಟಕಣ್ಣಿನ ದುಷ್ಪರಿಣಾಮ, ಅದಕ್ಕೆ ಪರಿಹಾರ — ಈ ವಿಷಯಗಳ ಬಗ್ಗೆ ವಿಶೇಷವಾಗಿ ಆಧಾರಗಳು ದೊರೆಯುತ್ತವೆ.

ಆದಿವಾಸಿ ಜನಾಂಗಗಳಲ್ಲಿ ಕೆಟ್ಟಕಣ್ಣಿನ ಕಲ್ಪನೆ ಎಷ್ಟು ಪ್ರಬಲವಾಗಿದೆಯೆಂಬುದನ್ನು ಸಂಶೋಧಕರು ಗುರುತಿಸಿದ್ದಾರೆ. ಕ್ಯಾಮೆರಾದ ಮಸೂರದ (lens) ಬಗ್ಗೆ ಆದಿನಿವಾಸಿಗಳ ಅಭಿಪ್ರಾಯ ವಿಲಕ್ಷಣವಾಗಿದೆ. ಮನುಷ್ಯನಿಗೆ ಕೆಟ್ಟಕಣ್ಣಿರುವಂತೆ, ಕ್ಯಾಮೆರಾದ ಪೆಟ್ಟಿಗೆಗೂ ಕೆಟ್ಟಕಣ್ಣಿರುವುದೆಂದು ಭಾವಿಸಿ ಮಸೂರವನ್ನು "ಪೆಟ್ಟಿಗೆಯ

---

10 Encyclopaedia of Religion & Ethics (1955). Vol V, p. 609

11 Westermarck: Ritual and Belief in Morocco (1926). Vol I, p. 414

12 Ibid. p. 414.

13 Encyclopaedia of Religion & Ethics (1955). Vol V, p. 609.

ಕೆಟ್ಟಕಣ್ಣು "('Evil Eye of the box') ಎಂದು ಕರೆಯುತ್ತಿದ್ದುದನ್ನು ಅನೇಕ ಮಾನವ ಶಾಸ್ತ್ರಜ್ಞರು ಗುರುತಿಸಿದ್ದಾರೆ.

ಮೊದಲಿನಿಂದ ಸಾಗಿಬಂದಿರುವ ಮತ್ತು ಈಗಲೂ ಪ್ರಚಲಿತವಾಗಿರುವ ಕಲ್ಪನೆಗಳ ಆಧಾರದ ಮೇಲೆ ಕೆಟ್ಟಕಣ್ಣಿನ ಪ್ರಭಾವ ಎರಡು ರೀತಿಯದಾಗಿರಬಹುದೆಂದು ತಿಳಿಯಲು ಸಾಧ್ಯವಾಗಿದೆ :

1. ನೈತಿಕ ಬಗೆ (moral kind)
2. ಸಹಜವಾದ ಬಗೆ (natural kind)[14]

ಇಚ್ಛಾಶಕ್ತಿಯಿಂದ ಕೆಟ್ಟಕಣ್ಣಿನ ಪರಿಣಾಮ ಉಂಟುಮಾಡುವುದನ್ನೇ ನೈತಿಕ ಬಗೆ ಎಂದು ಕರೆಯಬಹುದು. ಇದಕ್ಕೆ ಅಸೂಯೆಯಿಂದ ಉಂಟಾದ ನೈತಿಕ ಪತನ ಬಹುಮಟ್ಟಿಗೆ ಕಾರಣವಾಗಿರುತ್ತದೆ. ಹೊಟ್ಟೆಕಿಚ್ಚಿಗೆ ಮತ್ತು ಕೆಟ್ಟಕಣ್ಣಿಗೆ ನಿಕಟವಾದ ಸಂಬಂಧವಿದೆ. ಬೈಬಲ್‌ನಲ್ಲಿ ಕೆಟ್ಟಕಣ್ಣು ಮತ್ತು ಹೊಟ್ಟೆಕಿಚ್ಚು (Envy) ಎರಡೂ ಸಾಮಾನಾರ್ಥಕ ಪದಗಳಾಗಿ ಬಳಕೆಯಾಗಿವೆ.[15] ಇಟಲಿಯಲ್ಲಿ ಈ ಬಗೆಯ ಕೆಟ್ಟಕಣ್ಣಿನ (Evil Eye) ಪ್ರಭಾವಕ್ಕೆ 'malacchio' ಎನ್ನುತ್ತಾರೆ.[16] ಇದು ಐಚ್ಛಿಕವಾದ ಕ್ರಿಯೆ.

ಸಹಜವಾದ ಬಗೆಗೆ ಇಟಲಿಯಲ್ಲಿ 'Jettatora' ಎಂಬ ಮಾತನ್ನು ಬಳಸುತ್ತಾರೆ. ಇದರ ಪ್ರಕಾರ ಈ ಶಕ್ತಿಯನ್ನು ಹೊಂದಿರುವ ವ್ಯಕ್ತಿಗೆ ತಿಳಿಯದಂತೆಯೇ ಅವನಿಂದ ಕೆಟ್ಟಕಣ್ಣಿನ ಪರಿಣಾಮ ಉಂಟಾಗುತ್ತದೆ. ಇದು ಅನೈಚ್ಛಿಕವಾದ ಕ್ರಿಯೆ. ಈ ಶಕ್ತಿಹೊಂದಿದ ವ್ಯಕ್ತಿಗೆ ಇದರಮೇಲೆ ಹಿಡಿತವಿರುವುದಿಲ್ಲ.[17]

ಈ ಬಗೆಯ ಕೆಟ್ಟ ಕಣ್ಣಿನ ಪ್ರಭಾವವನ್ನು ವಿವರಿಸುವ ಅನೇಕ ಕಥೆಗಳನ್ನು ಮೊರಾಕೋ ದೇಶದ ಜಾನಪದದಲ್ಲಿ ಕಾಣಬಹುದು.[18]

ಕೆಟ್ಟಕಣ್ಣಿನ ಸಹಜ ಬಗೆಯನ್ನು ಹುಟ್ಟಿನಲ್ಲಿಯೇ ಗುರುತಿಸಬಹುದೆಂಬ ನಂಬಿಕೆ ಉಂಟು. ಗರ್ಭಿಣಿಯಾದ ಹೆಂಗಸಿನ ಬಯಕೆಗಳನ್ನು ಈಡೇರಿಸದಿದ್ದರೆ ಆಕೆಗೆ ಹುಟ್ಟುವ ಮಗು ಬಲಹೀನವಾಗಿರುವುದು ಮಾತ್ರವಲ್ಲದೆ ದುರಾಸೆಯಿಂದಲೂ ಕೆಟ್ಟಕಣ್ಣಿನಿಂದಲೂ

---

14 Major H. R. Brown: Evil Eye, The Journal of Mythic Society, Vol I. No. 3, p. 60.

15 Encyclopaedia of Religion & Ethics, 1955. Vol V, p. 608.

16 Renee Haynes: The Hidden Springs. Hallis & Garter London, 1961, p. 253.

17 Ibid, p. 253.

18 Westermarck : Ritual and Belief In Morocco (1925). Vol I, p. 417.

ಕೂಡಿರುತ್ತದೆ. ಇಂತಹ ಮಗು ಬೆಳೆದಂತೆಲ್ಲಾ ಈ ಶಕ್ತಿ ಹೆಚ್ಚಾಗುತ್ತದೆ.[19] ಕೆಟ್ಟನಕ್ಷತ್ರದಲ್ಲಿ ಹುಟ್ಟಿದ ಮಗುವಿನಲ್ಲೂ ಕೆಟ್ಟಕಣ್ಣು ಇರುವುದೆಂದು ಓಂದೂಗಳಲ್ಲಿ ನಂಬಿಕೆಯಿದೆ. ಈ ಬಗೆಯ ಸಹಜವಾದ ಕೆಟ್ಟಕಣ್ಣಿನ ಪ್ರಭಾವ ನೈತಿಕ ಬಗೆಯ ಕೆಟ್ಟಕಣ್ಣಿನ ಪ್ರಭಾವಕ್ಕಿಂತ ಹೆಚ್ಚು ಅಪಾಯಕರವಾದುದು; ದಕ್ಷಿಣ ಭಾರತದಲ್ಲಿ ಪ್ರಚಲಿತವಾಗಿರುವ ಕೆಟ್ಟಕಣ್ಣಿನ ನಂಬಿಕೆ ಸಹಜ ಬಗೆಗೆ ಸಂಬಂಧಪಟ್ಟದ್ದು.[20]

ಹೊಗಳುವುದರಿಂದ ಕೆಟ್ಟಕಣ್ಣಿನ ಪರಿಣಾಮ ಹೆಚ್ಚಾಗುವುದೆಂಬ ನಂಬಿಕೆ ಬಹುಪಾಲು ದೇಶಗಳಲ್ಲಿ ಪ್ರಚಲಿತವಾಗಿದೆ. ಉದಾಹರಣೆಗೆ ಒಂದು ಮಗು ತುಂಬ ಮುದ್ದಾಗಿದ್ದರೆ ಅದನ್ನು ಅತಿಯಾಗಿ ಹೊಗಳಿದರೆ ಮಗುವಿಗೆ ಕೆಟ್ಟಕಣ್ಣಿನ ಪ್ರಭಾವ ಆಗುತ್ತದೆ. ಆಕಸ್ಮಾತ್ ಹೊಗಳಿದರೂ ಮಗುವನ್ನು ರಕ್ಷಿಸುವಂತೆ ದೇವರನ್ನು ಪ್ರಾರ್ಥಿಸಬೇಕು. ಇಂಗ್ಲೆಂಡಿನಲ್ಲಿ ಜನ ಅತಿಯಾಗಿ ಹೊಗಳುವ ಪ್ರವೃತ್ತಿಯನ್ನು ಬೆಳಸಿಕೊಳ್ಳದೆ ಮಿತಿಯಲ್ಲಿರಲು ಅವರ ಸೌಜನ್ಯಕ್ಕಿಂತ ಹೆಚ್ಚಾಗಿ ಈ ಭೀತಿ ಕಾರಣವಾಗಿದೆ ಎಂದು ಹೇಳಬಹುದು.[21] ನಮ್ಮ ನಾಡಿನಲ್ಲಿಯೇ ಹೆಂಗಸರು ಯಾರಾದರೂ ಸುಂದರವಾಗಿರುವ ಮಗುವನ್ನು ನೋಡಿ ಅದನ್ನು ಹೊಗಳಿದನಂತರ, ಮಗುವಿಗೆ ತೊಂದರೆ ಆಗದಿರಲೆಂದು ನೆಟ್ಟಿಗೆ ಮುರಿಯುತ್ತಾರೆ. ನೂಯರ್ (Nuer) ಜನಾಂಗದಲ್ಲಿ ತೀರ ದೊಡ್ಡ ತಪ್ಪು ಎಂದರೆ ಮಗುವನ್ನು ಹೊಗಳುವುದು; ಮಗುವಿನ ಬಗ್ಗೆ ಕಳಕಳಿ ಇರುವವರು ಮಗುವನ್ನು ಹೊಗಳಬಾರದು, ಬಯ್ಯಬೇಕು; ಮಕ್ಕಳನ್ನು ಉಗುಳುವುದರಮೂಲಕ ಆಶೀರ್ವದಿಸಬೇಕು. ಸ್ವಲ್ಪಮಟ್ಟಿಗೆ ಅಶ್ಲೀಲವಾದ ಮಾತುಗಳಿಂದ ಮಕ್ಕಳನ್ನು ಬಯ್ದರೆ ಮಕ್ಕಳಿಗೆ ಅದರಿಂದ ಹೆಚ್ಚು ಒಳ್ಳೆಯದಾಗುವುದು ಎಂಬ ನಂಬಿಕೆಯಿದೆ.[22]

ಮತ್ತೊಬ್ಬರನ್ನು ಹೊಗಳುವಷ್ಟೇ ತನ್ನನ್ನೂ ಅತಿಯಾಗಿ ಹೊಗಳಿಕೊಳ್ಳುವುದು ಅಪಾಯಕಾರಿಯಾದುದು. ನಾರ್ಸಿಸಿಸ್ ತನ್ನನ್ನು ತಾನು ಅತಿಯಾಗಿ ಹೊಗಳಿಕೊಂಡದ್ದರಿಂದ ಸತ್ತುಹೋದನೆಂದು ನಂಬಿಕೆಯುಂಟು.[23]

ಈವರೆಗಿನ ವಿವರಣೆ ಕೆಟ್ಟಕಣ್ಣಿನ ಪ್ರಭಾವದ ಸ್ವರೂಪಕ್ಕೆ ಸಂಬಂಧಿಸಿದ್ದು. ಮುಂದಿನವಿವರಣೆ ಕೆಟ್ಟಕಣ್ಣಿನ ಪರಿಣಾಮ ಯಾರಮೇಲೆ ಆಗುತ್ತದೆ ಎಂಬ ನಂಬಿಕೆಯನ್ನು ಕುರಿತದ್ದು: ಕೆಟ್ಟಕಣ್ಣಿನ ಪರಿಣಾಮ ಮನುಷ್ಯರಮೇಲೆ, ಪ್ರಾಣಿಗಳಮೇಲೆ, ನಿರ್ಜೀವ

---

19 William Crookes: The Popular Religion and Folklore of Northern India (1968). Vol II, pp. 2-3.

20 Major H. R. Brown: Evil Eye, The Journal of Mythic Society, Vol I, No. 2, p. 61.

21 Encyclopaedia of Religion & Ethics (1955). Vol. V, p. 611

22 E. E. Evans – Pritchard; Neur Religion (1962). p. 15

23 Encyclopaedia of Religion & Ethics (1955). Vol V, p. 611.

ವಸ್ತುಗಳಮೇಲೆ ಮತ್ತು ದೇವತೆಗಳಮೇಲೆ ಆಗುತ್ತದೆ. ಮನುಷ್ಯರಲ್ಲಿ ಚಿಕ್ಕಮಕ್ಕಳು, ಗರ್ಭಿಣಿಯರು, ಬಾಣಂತಿಯರು, ಮದುಮಕ್ಕಳು, ರಾಜ – ಇವರು ಕೆಟ್ಟಕಣ್ಣಿನ ಪ್ರಭಾವಕ್ಕೆ ವಿಶೇಷವಾಗಿ ಒಳಗಾಗುತ್ತಾರೆ. ಚಿಕ್ಕಮಕ್ಕಳು, ಗರ್ಭಿಣಿಯರು, ಬಾಣಂತಿಯರು ಸೂಕ್ಷ್ಮಪ್ರವೃತ್ತಿಯವರಾಗಿರುವುದರಿಂದ ಇವರ ಮೇಲೆ ಪರಿಣಾಮ ಹೆಚ್ಚು. ಮದುಮಕ್ಕಳು ಮತ್ತು ರಾಜ ತಮ್ಮ ಸೌಂದರ್ಯ, ಸುಖ ಹಾಗೂ ಅಧಿಕಾರಗಳಿಂದ ಉಳಿದವರ ಅಸೂಯೆಯನ್ನು ಅನಿವಾರ್ಯವಾಗಿ ಕೆರಳಿಸುವುದರಿಂದ ಇವರ ಮೇಲೆಯೂ ಕೆಟ್ಟಕಣ್ಣಿನ ಪ್ರಭಾವ ಉಂಟಾಗುತ್ತದೆ. ಇದರಿಂದಾಗಿ ಉಳಿದ ಜನರಿಗಿಂತ ಇವರು ಹೆಚ್ಚು ನಿಷಿದ್ಧಗಳನ್ನು ಆಚರಿಸಬೇಕು.[24] ಗರ್ಭಿಣಿಯರಿಗೆ ಕೆಟ್ಟಕಣ್ಣಿನ ಪ್ರಭಾವವಾದರೆ ಹೆರಿಗೆ ತುಂಬ ಕಷ್ಟವಾಗುತ್ತದೆ.[25] ಉಳಿದ ಜನ ಊಟಮಾಡುತ್ತಿರುವಾಗ ಕೆಟ್ಟಕಣ್ಣುಳ್ಳವರು ನೋಡಿದರೆ ಊಟಮಾಡುತ್ತಿರುವವರಿಗೆ ಹೊಟ್ಟೆನೋವು ಬರುತ್ತದೆ.

ಮೇಕೆ, ಕುರಿ, ಹಂದಿ, ಹಸು, ಎಮ್ಮೆ, ಕುದುರೆ ಮೊದಲಾದ ಪ್ರಾಣಿಗಳು ಕೆಟ್ಟಕಣ್ಣಿನ ಪ್ರಭಾವಕ್ಕೆ ಒಳಗಾಗುತ್ತವೆ. ಈ ಬಗ್ಗೆ ಈಗಾಗಲೇ ವಿವರಗಳನ್ನು ಕೊಟ್ಟಿರುವುದರಿಂದ ಪುನಃ ಬೆಳೆಸಬೇಕಾದ ಅಗತ್ಯವಿಲ್ಲ. ಈಯ್ದಿರುವ ಹಸು, ಎಮ್ಮೆಗಳಿಗೆ ಮೂರು ಕಣ್ಣಿನ ಚಿಪ್ಪನ್ನು ಕಟ್ಟುವುದು ಕೆಟ್ಟಕಣ್ಣಿನ ಪರಿಹಾರಕ್ಕೆ ಎಂಬುದನ್ನು ಈ ಸಂದರ್ಭದಲ್ಲಿ ಗಮನಿಸಬಹುದು.

ಬೆಳೆ, ಹಾಲು, ಮನೆ, ಚಾಪೆ, ಕಂಬಳಿ, ರತ್ನಕಂಬಳಿ, ಮೊದಲಾದ ವಸ್ತುಗಳೂ ಬಹುಮಟ್ಟಿಗೆ ನಿರ್ಜೀವ ವಸ್ತುಗಳೂ, ಕೆಟ್ಟಕಣ್ಣಿನ ಪ್ರಭಾವಕ್ಕೆ ಒಳಗಾಗುತ್ತವೆ. ಮನೆ ಕಟ್ಟುವಾಗ ಒಂದು ಕೋಲನ್ನು ನಿಲ್ಲಿಸಿ ಅದರಮೇಲೆ ಮನುಷ್ಯನ ಬಟ್ಟೆಗಳನ್ನಿಟ್ಟು ವಿಕಾರವಾದ ರೂಪವನ್ನು ಪ್ರದರ್ಶನಮಾಡುವುದು ಕೆಟ್ಟಕಣ್ಣಿನ ಪ್ರಭಾವಕ್ಕೆ ಮನೆ ಒಳಗಾಗದಿರಲಿ ಎಂಬ ಉದ್ದೇಶದಿಂದ. ಹೀಗೆಯೇ ಬೆಳೆದಿರುವ ಹೊಲದಲ್ಲಿ ಕೋಲಿನಮೇಲೆ ಚಿತ್ರಗಳನ್ನು ಬರೆದ ಮಡಕೆಗಳನ್ನು ತಗುಲಿಹಾಕುವುದು, ಗೃಹಪ್ರವೇಶ ಮಾಡುವಾಗ ಕುಂಬಳಕಾಯಿ ಒಡೆಯುವುದು, ಕುಂಬಳಕಾಯಿಯನ್ನು ಮನೆಯ ಎದುರು ಕಟ್ಟುವುದು, ತೆಂಗಿನಕಾಯನ್ನು ಮನೆಯೊಳಗೆ ಕಟ್ಟುವುದು, ಮೊದಲಾದ ಆಚರಣೆಗಳಿಗೂ ಕೆಟ್ಟಕಣ್ಣಿನ ಪ್ರಭಾವದ ಕಲ್ಪನೆಯೇ ಕಾರಣ. ಚಾಪೆ, ರತ್ನಕಂಬಳಿ ಮೊದಲಾದ ವಸ್ತುಗಳಮೇಲಿರುವ ಬಗೆಬಗೆಯ ಚಿತ್ರಗಳೂ ಸಹ ಈ ವಸ್ತುಗಳಿಗೆ ಆಗಬಹುದಾದ ದೃಷ್ಟಿದೋಷ ಪರಿಹರಿಸುವುದಕ್ಕೆ ಎಂದು ಹೇಳಬಹುದು.

ಮನುಷ್ಯರಿಗೆ ಮಾತ್ರವಲ್ಲದೆ ದೇವತೆಗಳಿಗೂ ಕೆಟ್ಟಕಣ್ಣಿನ ಪ್ರಭಾವ ತಟ್ಟುತ್ತದೆ. ಮನುಷ್ಯರಿಗೆ ಆರತಿಮಾಡುವಂತೆ ದೇವತೆಗಳು ದೇವಸ್ಥಾನದಲ್ಲಿದ್ದಾಗ, ದೇವಸ್ಥಾನ

---

24 ವಿವರಗಳಿಗೆ ನೋಡಿ : William Crookes: The Popular Religion and Folklore of Northern India, Vol. II.

25 Westermarck: Ritual and Belief In Morocco (1926). Vol I. pp. 421-422

ಜಿಟ್ಟುಹೊರಗೆ ಪೊರಟಾಗ, ದೇವಸ್ಥಾನಕ್ಕೆ ಹಿಂತಿರುಗಿ ಬಂದಾಗ ಮಂಗಳಾರತಿ ಮಾಡು ವುದು ದೃಷ್ಟಿದೋಷ ಪರಿಹಾರಕ್ಕೆ. ದೇವತೆಗಳ ಮುಂದೆ ಕುಣಿಸುವ ಬಗೆಬಗೆಯ ವಿಕಾರವಾದ ಮುಖವಾಡಗಳೂ ಸಹ ದೇವರಿಗೆ ದೃಷ್ಟಿದೋಷ ಆಗದಿರಲೆಂದು ಮಾಡಿ ಕೊಂಡ ಪರಿಹಾರಗಳು. ದೇವಸ್ಥಾನಗಳಲ್ಲಿ ಹಾಗೂ ರಥಗಳಲ್ಲಿ ವಿಕಾರವಾದ ಹಾಗೂ ಅಶ್ಲೀಲವಾದ ಚಿತ್ರಗಳನ್ನು ಕೆತ್ತಿರುವುದರ ಉದ್ದೇಶವೂ ಇದೇ ಎಂದು ಹೇಳಬಹುದು. ದೇವತೆಗಳಿಗೆ ನೈವೇದ್ಯಮಾಡುವಾಗ ಉಳಿದವರ ನೋಟದಿಂದ ದೃಷ್ಟಿಯಾಗದಿರಲೆಂದು ಗರ್ಭಗುಡಿಯ ಬಾಗಿಲನ್ನು ಮುಚ್ಚುತ್ತಾರೆ ಅಥವಾ ತೆರೆ ಎಳೆಯುತ್ತಾರೆ. ಸುಂದರವಾದ ವಿಗ್ರಹ ಕಡೆದಾಗ ಅದರ ಒಂದು ಭಾಗವನ್ನು ಸ್ವಲ್ಪ ಊನಮಾಡುವುದು ಈ ಉದ್ದೇಶದಿಂದಲೇ.[26]

ಕೆಟ್ಟಕಣ್ಣುಳ್ಳ ಜನರ ವ್ಯಕ್ತಿತ್ವದ ಬಗ್ಗೆ ಸಾಕಷ್ಟು ನಂಬಿಕೆಗಳಿವೆ: ಮನುಷ್ಯರಲ್ಲಿ ಗಂಡಸರಿಗಿಂತ ಹೆಂಗಸರಿಗೆ ಕೆಟ್ಟಕಣ್ಣಿನ ಶಕ್ತಿ ಹೆಚ್ಚು.[27] ಆರೋಗ್ಯವಾಗಿರುವವರಿಗಿಂತ ಕಾಯಿಲೆಯಾಗಿರುವವರಲ್ಲಿ ಈ ಶಕ್ತಿ ಹೆಚ್ಚು, ತೃಪ್ತರಿಗಿಂತ ಅತೃಪ್ತರಲ್ಲಿ ಕೆಟ್ಟಕಣ್ಣಿನ ಶಕ್ತಿ ಹೆಚ್ಚು. ಅತೃಪ್ತಿ, ಅಸೂಯೆ ಕೆಟ್ಟಕಣ್ಣಿನ ಶಕ್ತಿಗೆ ಕಾರಣವಾಗುತ್ತವೆ. ಹೆಂಗಸರಲ್ಲಿ ಮುದುಕಿಯರಲ್ಲಿ ಈ ಶಕ್ತಿ ಹೆಚ್ಚಾಗಿರುತ್ತದೆ. [28]

ತೀರ ಸುಂದರವಾಗಿರುವವರು, ತೀರಾ ವಿಕಾರವಾಗಿರುವವರು, ತೀರ ಹೆಚ್ಚು ದೈಹಿಕ ಶಕ್ತಿಯುಳ್ಳವರು, ಕುಳ್ಳರು, ಗೂನುಬೆನ್ನುಳ್ಳವರು, ಒಕ್ಕಣ್ಣಿನವರು, ಬೆಕ್ಕಿನಕಣ್ಣಿನವರು, ಮೆಳ್ಳೆಗಣ್ಣುಳ್ಳವರು – ಈ ಜನಗಳಲ್ಲಿ ಕೆಟ್ಟಕಣ್ಣು ಇರುತ್ತದೆ.

ಹಾವು, ನರಿ, ನಾಯಿ, ಕಾಗೆ, ಬೆಕ್ಕು, ಮೊಲ, ಹಂದಿ ಮೊದಲಾದ ಪ್ರಾಣಿಗಳಲ್ಲಿ ನವಿಲು, ಕಾಗೆ ಮೊದಲಾದ ಪಕ್ಷಿಗಳಲ್ಲಿ ಕೆಟ್ಟಕಣ್ಣುಂಟು. [29]

ಕೆಟ್ಟಕಣ್ಣುಳ್ಳ ಜನರಿಗೆ ಸಮಾಜದಲ್ಲಿ ತಿರಸ್ಕಾರವೇ ಹೆಚ್ಚು. ಸಮಾರಂಭಗಳಿಗೆ ಅವರಿಗೆ ಆಹ್ವಾನವಿರುವುದಿಲ್ಲ: ಕೆಟ್ಟಕಣ್ಣುಳ್ಳ ಜನರ ಮನೆತನದ ಎಲ್ಲರನ್ನೂ ಸಂಶಯ ದೃಷ್ಟಿಯಿಂದ ಜನ ನೋಡುವುದುಂಟು. ಕೆಲವುಜನ ಸ್ವಭಾವತಃ ಒಳ್ಳೆಯವರಾದರೂ ದುರದೃಷ್ಟವಶಾತ್ ಕೆಟ್ಟಕಣ್ಣನ್ನು ಪಡೆದಿರುವುದು ಉಂಟು. ಪೋಲೆಂಡಿನ ಜಾನಪದದಲ್ಲಿ ಇಂತಹ ಘಟನೆಗಳ ಉಲ್ಲೇಖವಿದೆ.[30]

---

26 Major H. R. Brown: Evil Eye, The Quarterly Journal of Mythic Society Vol I, No. 2, p. 68

27 Sarat Chandra Roy & Ramesh Chandra Roy: The Kharias, Vol II, p. 404

28 Westermarck: Ritiual and Belief in Morocco p. 421

29 Encyclopaedia of Religion & Ethics. Vol V, p. 610

30 Encyclopaedia of Religion & Ethics. Vol. V, p. 611.

ಕೆಟ್ಟಕಣ್ಣಿಗೆ ಸಂಬಂಧಿಸಿದ ವಿವರಗಳಲ್ಲಿ ಬಾಕಿ ಉಳಿದಿರುವುದು ಪರಿಹಾರಕ್ರಮಗಳು ಮಾತ್ರ. ಈ ಪರಿಹಾರ ಕ್ರಮಗಳು ದೇಶದಿಂದ ದೇಶಕ್ಕೆ ಅಲ್ಪಸ್ವಲ್ಪ ಬದಲಾದರೂ ಬಹುಮಟ್ಟಿನ ಸಾಮ್ಯವನ್ನು ಕಾಣಬಹುದು.

ಪರಿಹಾರಕ್ರಮಗಳಲ್ಲಿ ಕೆಲವು ಸರಳವಾಗಿರುತ್ತವೆ; ಮತ್ತೆ ಕೆಲವು ಸಂಕೀರ್ಣ ಸ್ವರೂಪವನ್ನು ಪಡೆದಿರುತ್ತವೆ.

ಮಕ್ಕಳಿಗೆ ದೃಷ್ಟಿದೋಷವಾದರೆ ಉರಿಯುತ್ತಿರುವ ಹಂಚಿಕಡ್ಡಿಗಳನ್ನು ನೀವಳಿಸಿ, ಅದರ ಕಪ್ಪನ್ನು ಮಕ್ಕಳ ಹಣೆಗೆ ಇಡುವುದು, ಕೆಟ್ಟಕಣ್ಣಿನ ಪ್ರಭಾವ ಬೀರಿದವರು ಹಾಳಾಗಲಿ ಎಂದು ಶಾಪಹಾಕಿ ನೆಟ್ಟಿಗೆ ಮುರಿಯುವುದು, ಉಪ್ಪನ್ನು ನೀವಳಿಸಿ ಒಲೆಗೆ ಹಾಕುವುದು, ಸಕ್ಕರೆಯನ್ನು ಮಂತ್ರಿಸಿ ತಿನ್ನಲು ಕೊಡುವುದು, ಕೆಟ್ಟಕಣ್ಣುಳ್ಳವರು ಹೋದಕಡೆ ಮೂರುಸಲ ಉಗುಳುವುದು — ಮೊದಲಾದ ಪರಿಹಾರಗಳು ಸರಳ ಸ್ವರೂಪದವು. ಇಂತಹ ಇನ್ನೂ ಅನೇಕ ಪರಿಹಾರಗಳುಂಟು.[31]

ಕೆಟ್ಟಕಣ್ಣಿನ ಪ್ರಭಾವದಿಂದ ತಪ್ಪಿಸಿಕೊಳ್ಳುವ ತೀರ ಸುಲಭೋಪಾಯ ಎಂದರೆ ಕೆಟ್ಟಕಣ್ಣುಳ್ಳವನು ಆಸೆಪಟ್ಟದ್ದನ್ನು ಅವನಿಗೆ ಕೊಟ್ಟುಬಿಡುವುದು. ಇದರಿಂದ ಆತನಿಗೆ ತೃಪ್ತಿಯಾಗಿ ಅವನ ಕಣ್ಣಿನ ಪರಿಣಾಮ ಹೆಚ್ಚಾಗಿ ಆಗುವುದಿಲ್ಲ. ಯಾರಿಗೂ ಕೊಡದೆ ತಿನ್ನುತ್ತಿದ್ದರೆ 'ಕಣ್ಣುಕುಡಿಕೆ' ಏಳುವುದೆಂಬ ನಂಬಿಕೆ ನಮ್ಮಲ್ಲಿದೆ,

ತೀರ ಸುಂದರವಾಗಿರುವವರನ್ನು ಸ್ವಲ್ಪ ಮಟ್ಟಿಗೆ ವಿರೂಪಗೊಳಿಸುವುದರಿಂದ ಕೆಟ್ಟಕಣ್ಣಿನ ಪರಿಣಾಮವನ್ನು ತಡೆಯಬಹುದು. ಕೆನ್ನೆಯ ಮೇಲೆ ಅಥವಾ ಗಲ್ಲದ ಮೇಲೆ ಕಪ್ಪು ಚುಕ್ಕೆ ಇಡುವ ಉದ್ದೇಶ ಇದೇ ಎಂದು ಹೇಳಬಹುದು. ಕಣ್ಣಿಗೆ ಕಾಡಿಗೆ ಹಚ್ಚುವುದು ಕೇವಲ ಸೌಂದರ್ಯವರ್ಧಕ ಎಂಬ ಕಾರಣಕ್ಕೆ ಮಾತ್ರ ಅಲ್ಲ; ಅದು ದೃಷ್ಟಿ ದೋಷವನ್ನು ಪರಿಹರಿಸುತ್ತದೆ ಎಂಬ ನಂಬಿಕೆಯಿಂದಲೂ ಹೌದು.[32] ಗಂಡು ಮಕ್ಕಳ ಉಡುಪನ್ನು ಹೆಣ್ಣುಮಕ್ಕಳಿಗೆ ಹಾಕುವುದು, ಹೆಣ್ಣುಮಕ್ಕಳ ಉಡುಪನ್ನು ಗಂಡುಮಕ್ಕಳಿಗೆ ಹಾಕುವುದರ ಉದ್ದೇಶವೂ ಇದೇ. ಹಚ್ಚೆಹುಯಿಸಿಕೊಳ್ಳುವುದರ ಮೂಲ ಉದ್ದೇಶವೂ ಇದೇ.

ದೃಷ್ಟಿದೋಷದ ಸಂಕೀರ್ಣ ಸ್ವರೂಪದ ಪರಿಹಾರಗಳೇ 'ಯಂತ್ರ'ಗಳು (amulets). ಇವು ಮೂರು ಬಗೆಯಾಗಿರುತ್ತವೆ: (1) ಬಟ್ಟೆಯ ಮೇಲೆ ಧರಿಸುವಂತಹ

---

31 ವಿವರಗಳಿಗೆ ನೋಡಿ: William Crookes: The Popular Relgion and Folklore of Northern India (1968). Vol. II.

32 ವಿವರಗಳಿಗೆ ನೋಡಿ:

Encyclopaedia of Religion & Ethics. Vo.l V.

ಯಂತ್ರಗಳು. (2) ಯಾರಿಗೂ ಕಾಣದಂತೆ ಬಟ್ಟೆಯ ಒಳಗೆ ಬರುವಹಾಗೆ ದೇಹದ ಮೇಲೆ ಧರಿಸಿದ ಯಂತ್ರಗಳು. (3) ಪವಿತ್ರವಾದ ಗ್ರಂಥಗಳ ಮಾತುಗಳನ್ನು ಬರೆದಿರುವ ಯಂತ್ರಗಳು.[33]

ಬಗೆಬಗೆಯ ಮಂತ್ರಗಳನ್ನೂ ಸಹ ದೃಷ್ಟಿದೋಷ ಪರಿಹಾರಾರ್ಥವಾಗಿ ಉಚ್ಚರಿಸುತ್ತಾರೆ; ಇದಕ್ಕೆ ಮಂತ್ರವಾದಿಗಳ ಸಹಾಯ ಪಡೆಯುತ್ತಾರೆ.

ದೃಷ್ಟಿದೋಷ ಪರಿಹಾರಕ್ಕೆ ಬಳಸುವ ವಸ್ತುಗಳಲ್ಲಿ ಉಗುಳು, ಉಪ್ಪು, ರಕ್ತ, ಬೆಲೆಬಾಳುವ ಕಲ್ಲುಗಳು, ಮುತ್ತು, ಹವಳ, ಆಭರಣಗಳು ಪ್ರಮುಖ ಪಾತ್ರವಹಿಸುತ್ತವೆ; ಲೋಹಗಳಲ್ಲಿ ಚಿನ್ನ, ಬೆಳ್ಳಿ, ತಾಮ್ರ, ಕಬ್ಬಿಣ, ಹಿತ್ತಾಳೆ ಮೊದಲಾದ ಲೋಹಗಳು ಇದೇ ಇದೇ ಪ್ರಯೋಜನಕ್ಕೆ ಬರುತ್ತವೆ; ಕೆಂಪು ಹಳದಿ ಕಪ್ಪು ಬಣ್ಣಗಳೂ ಸಹ ದೃಷ್ಟಿದೋಷ ಪರಿಹಾರದಲ್ಲಿ ಹೆಚ್ಚು ಉಪಯುಕ್ತವಾಗಿ ಪರಿಣಮಿಸಿವೆ.[34]

ಒಟ್ಟಾರೆ ಕೆಟ್ಟಕಣ್ಣಿನ ಪರಿಹಾರಗಳು ಅನೇಕ ಸಂಖ್ಯೆಯಲ್ಲಿವೆ.

ಕೆಟ್ಟಕಣ್ಣಿನ ಕಲ್ಪನೆ ಇಷ್ಟೆಲ್ಲಾ ನಂಬಿಕೆಗಳಿಗೆ, ಆಚರಣೆಗಳಿಗೆ ಕಾರಣವಾಗಿದೆ ಯೆಂಬುದನ್ನು ವಿವರವಾಗಿ ಅಧ್ಯಯನ ಮಾಡಿದಾಗ ನಿಜಕ್ಕೂ ದಿಗ್ಭ್ರಮೆಯಾಗುತ್ತದೆ. ಈ ವಿವರಗಳಲ್ಲಿ ಜೊಳ್ಳೆಷ್ಟು ಕಾಳೆಷ್ಟು ಎಂಬುದನ್ನು ಮುಂದೆ ವಿಶ್ಲೇಷಿಸಬೇಕಾಗಿದೆ.

[ಸಶೇಷ]

---

[33] ವಿವರಗಳಿಗೆ ನೋಡಿ:
Encyclopaeida of Religion & Ethics, Vol. V.

[34] ವಿವರಗಳಿಗೆ ನೋಡಿ: William Crookes: The Popular Religion and Folklore Northern India, Vol. II.

ಲುನಖೋಡ್-1

ಪಾ. ಸಂ. ವೆಂಕಟಸ್ವಾಮಿ ಶೆಟ್ಟಿ

ಇಪ್ಪತ್ತನೇ ಶತಮಾನದಲ್ಲಿ ವಿಜ್ಞಾನದ ಪ್ರಗತಿ ಅದ್ಭುತ ಗತಿಯಲ್ಲಿ ಸಾಗಿರುವುದು ಎಲ್ಲರಿಗೂ ತಿಳಿದ ವಿಷಯುವೇ ಆಗಿದೆ. ಹತ್ತೊಂಬತ್ತನೇ ಶತಮಾನಕ್ಕೂ ಇಪ್ಪತ್ತನೇ ಶತಮಾನಕ್ಕೂ ಇರುವ ಒಂದು ಮುಖ್ಯ ವ್ಯತ್ಯಾಸವೆಂದರೆ, ವಿಜ್ಞಾನತತ್ತ್ವಗಳ ಅನ್ವಯುದ ವೇಗ ! ಉದಾಹರಣೆಗಾಗಿ ಹಿಂದಿನ ಶತಮಾನದಲ್ಲಿ ಪ್ರಯೋಗ ಪ್ರವೀಣನಾದ ಫಾರಡೆ ಎಂಬ ವಿಜ್ಞಾನಿ ಡೈನಮೋ ಅಥವಾ ವಿದ್ಯುಜ್ಜನಕ ಯಂತ್ರದ ತತ್ತ್ವವನ್ನು ಕಂಡುಹಿಡಿದ. ಆದರೆ ಈ ತತ್ತ್ವಗಳ ಅನುಷ್ಠಾನವಾಗಿ ಡೈನಮೋಗಳು ಅಸ್ತಿತ್ವಕ್ಕೆ ಬರಲು ಐವತ್ತು ವರ್ಷಗಳು ಬೇಕಾದವು. ಆದರೆ ಈ ಶತಮಾನದಲ್ಲಿ ರಾಡಾರ್ ಯಂತ್ರದ ತತ್ತ್ವ ಅರಿವಾದ ನಾಲ್ಕಾರು ವರ್ಷಗಳ ಅವಧಿಯಲ್ಲೇ ಅತ್ಯಂತ ಉತ್ಕೃಷ್ಟವಾದ ಯಂತ್ರಗಳು ತಯಾರಾದುವು. ಇಷ್ಟೇ ಅಲ್ಲದೆ ಅದರ ಉಪಯೋಗದಿಂದ ಎರಡನೇ ಮಹಾಯುದ್ಧದ ದಿಕ್ಕೇ ಬದಲಾಯಿಸಿತೆಂದು ಹೇಳಬಹುದು. 1957ರಲ್ಲಿ ಉದ್ಘಾಟಿಸಲ್ಪಟ್ಟ ಆಕಾಶಯಾನ ಈ ಹದಿನಾಲ್ಕು ವರ್ಷಗಳಲ್ಲಿ ಅತ್ಯಮೋಘವಾದ ಪ್ರಗತಿಯನ್ನು ಸಾಧಿಸಿದೆ ಎಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಈಗಾಗಲೇ ಅಮೇರಿಕನರು ಚಂದ್ರಲೋಕವನ್ನು ತಲುಪಿ ಚಂದ್ರಮೃತ್ತಿಕೆ, ಚಂದ್ರಶಿಲೆಗಳನ್ನು ತಂದು ಪ್ರಪಂಚದ ಎಲ್ಲ ಜನರಿಗೂ ತೋರಿಸಿದ್ದಾರೆ, ನಾಲ್ಕಾರು ಚಂದ್ರಯಾನಗಳನ್ನು ಯಶಸ್ವಿಯಾಗಿ ಮಾಡಿದ್ದಾರೆ.

ರಷ್ಯನರು ಮಾನವರನ್ನು ಚಂದ್ರಲೋಕಕ್ಕೆ ಕಳುಹಿಸುವ ಪ್ರಯತ್ನ ಮಾಡದೆ ಇದ್ದರೂ ಚಂದ್ರನ ಅನ್ವೇಷಣೆಯನ್ನು ಮಾತ್ರ ಬಿಟ್ಟಿಲ್ಲ. ಅವರು ಮಾನವನಿಲ್ಲದ ಯಂತ್ರಗಳನ್ನೇ ಚಂದ್ರಲೋಕಕ್ಕೆ ಕಳುಹಿಸಿ ಅನೇಕ ಮಾಹಿತಿಗಳನ್ನು ಪಡೆದಿದ್ದಾರೆ. 1970 ರ ಸೆಪ್ಟೆಂಬರ್‌ನಲ್ಲಿ ಲ್ಯೂನ–17 ಎಂಬ ಆಕಾಶನೌಕೆಯನ್ನು ಚಂದ್ರಲೋಕದಲ್ಲಿ ಇಳಿಸಿದರು. ಅದರಲ್ಲಿ ಒಂದು ಬೈರಿಗೆಯನ್ನು ಉಪಯೋಗಿಸಿ ಚಂದ್ರಲೋಕದ ಮಣ್ಣನ್ನು ಹೊರತೆಗೆದರು. ಅಲ್ಲದೆ ಆ ಮಣ್ಣನ್ನು ಭೂಲೋಕಕ್ಕೆ ಯಂತ್ರಗಳ ಮೂಲಕವೇ ತರಿಸಿದರು. ಇದೆಲ್ಲವನ್ನೂ ವಿಜ್ಞಾನಿಗಳು ಭೂಮಿಯ ಮೇಲಿದ್ದುಕೊಂಡೇ ದೂರ ನಿಯಂತ್ರಣ (remote control) ದಿಂದಲೇ ಮಾಡಿ ತೋರಿಸಿದ್ದಾರೆ. ಆದರೆ ಲ್ಯೂನ-17 ಚಂದ್ರಲೋಕದಲ್ಲಿ ಯಾವಸ್ಥಳದಲ್ಲಿ ಇಳಿಯಿತೋ ಅಲ್ಲಿನ ಮಣ್ಣನ್ನುಮಾತ್ರ ತೆಗೆದು ಕಳುಹಿಸಿತು. ಸುತ್ತಮುತ್ತಲ ಪ್ರದೇಶದಲ್ಲಿ ಅದು ಓಡಾಡಲಿಲ್ಲ. ಅಲ್ಲದೆ

ಮಣ್ಣನ್ನು ಕಳುಹಿಸುವ ಒಂದೇ ಕೆಲಸ ಮಾಡಿತು. ಇದರಿಂದ ಉತ್ತೇಜಿತರಾದ ರಷ್ಯನರು ಇನ್ನೂ ಹೆಚ್ಚು ಉಪಯುಕ್ತವಾದ ಆಕಾಶನೌಕೆಯನ್ನು ತಯಾರುಮಾಡಿದರು. ಅದೇ ಲುನಖೋಡ್-1.

ಲುನಖೋಡ್-1 ಒಂದು ಸ್ವಯಂಚಾಲಿತ ವಾಹನ. ರಷ್ಯವಿಜ್ಞಾನಿಗಳು ಈ ವಾಹನವನ್ನು ಚಂದ್ರಲೋಕದಲ್ಲಿ ಇಳಿಸಿ ಅದರ ಕೈಯಿಂದಲೇ ಅನೇಕ ಪ್ರಯೋಗಗಳನ್ನು ನಡೆಸುತ್ತಿರುವರು. ಈ ಪ್ರಯೋಗವು ವಿಜ್ಞಾನದ ವಿಸ್ಮಯಗಳಲ್ಲಿ ಒಂದು ಎಂದು ಪ್ರಪಂಚದ ಎಲ್ಲ ವಿಜ್ಞಾನಿಗಳು ಒಪ್ಪಿಕೊಂಡಿದ್ದಾರೆ. 1970 ನೇ ನವೆಂಬರ್ 10ನೇ ತಾರೀಖು ರಷ್ಯವು ಆಕಾಶನೌಕೆಯಾದ ಲ್ಯೂನಾ-17ರನ್ನು ಉಡಾಯಿಸಿತು. ಚಂದ್ರನ ಮೇಲ್ಮೈಮೇಲೆ "ಸೀ ಆಫ್ ರೈನ್ಸ್" ಎಂಬ ಸ್ಥಳದಲ್ಲೇ ಇಳಿಯಬೇಕೆಂದು ನಿಶ್ಚಯಿಸಲ್ಪಟ್ಟಿತ್ತು. ಆದರೆ ನವೆಂಬರ್ 16 ರಂದು ಅದು ಸ್ವಲ್ಪ ದಾರಿತಪ್ಪಿದ್ದುದು ಕಂಡು ಬಂತು. ತಕ್ಷಣವೇ ಭೂಮಿಯಿಂದ ನಿಯಂತ್ರಿಸಿ ಅದರ ಮಾರ್ಗವನ್ನು ತಿದ್ದಲಾಯಿತು. ಇದರ ಪರಿಣಾಮವಾಗಿ ಆಕಾಶನೌಕೆಯು ತನ್ನ ಪಥವನ್ನು ವೃತ್ತಾಕಾರದಿಂದ ಅಂಡಾಕಾರಕ್ಕೆ ಬದಲಾಯಿಸಿತು. ಆಗ ಅದು ಚಂದ್ರನ ಮೇಲ್ಮೈಗೆ 19 ಕಿಲೋಮಿಾಟರಿನ ಅತ್ಯಂತ ಹತ್ತಿರದ ಎತ್ತರದಲ್ಲಿ ಸುತ್ತುವಂತಾಯಿತು. ಇದಾದಮೇಲೆ ನಿಷ್ಕರ್ಷಿತ ಇಳಿದಾಣ ಪಥದ ಮೂಲಕ ನೌಕೆಯು ನವೆಂಬರ್ 17 ರಂದು ಭಾರತೀಯ ಕಾಲಮಾನ ಬೆಳಗಿನ 9-30 ಘಂಟೆಗೆ ಚಂದ್ರನ ಮೇಲ್ಮೈಮೇಲೆ ಮೆಲ್ಲಗೆ ಅಪಾಯವಿಲ್ಲದ ರೀತಿಯಲ್ಲಿ ಇಳಿಯಿತು. ಇಳಿದಮೇಲೆ ಭೂಮಿಯಿಂದ ಒಂದು ಸಂಕೇತವನ್ನು ಕಳುಹಿಸಿ ಆಕಾಶನೌಕೆ ಲ್ಯೂನ-17 ಮತ್ತು ಅದರ ಒಳಗಿದ್ದ ಚಂದ್ರವಾಹನ ಲುನಖೋಡ್-1 ಇವೆರಡರ ಎಲ್ಲ ವೈಜ್ಞಾನಿಕ ವ್ಯವಸ್ಥೆಗಳನ್ನು ಒಂದುಸಲ ಸರಿಯಾಗಿದೆಯೋ ಇಲ್ಲವೋ ಎಂದು ತಾಳೆ ನೋಡಲಾಯಿತು. ಎರಡನೆಯದಾಗಿ ಆಕಾಶನೌಕೆಯ ಸುತಮುತ್ತಲೂ ಇದ್ದ ಪ್ರದೇಶವನ್ನೂ ಪರೀಕ್ಷಿಸಲಾಯಿತು. ಇಷ್ಟೆಲ್ಲಮಾಡಲು ಸುಮಾರು ಎರಡೂವರೆ ಘಂಟೆ ಹಿಡಿಯಿತು.

ಸುಮಾರು ಹನ್ನೆರಡು ಘಂಟೆಹೊತ್ತಿಗೆ ಎಂಟುಚಕ್ರಗಳನ್ನು ಹೊಂದಿದ್ದ ಸ್ವಯಂಚಾಲಿತ ಚಂದ್ರವಾಹನ ಲುನಖೋಡ್-1 ವಿಶೇಷ ಗ್ಯಾಂಗ್‌ವೇ ಮಾರ್ಗವಾಗಿ ಆಕಾಶನೌಕೆಯಿಂದ ಹೊರಬಂದಿತು. ವಾಹನದ ಎಲ್ಲ ಭಾಗಗಳೂ ಸಕ್ರಮವಾಗಿ ಕಾರ್ಯನಿರ್ವಹಿಸುತ್ತಿದ್ದವು. ಚಂದ್ರನ ಮೇಲ್ಮೈಮೇಲೆ "ಸೀ ಆಫ್ ರೈನ್ಸ್" ಎಂಬ ಸ್ಥಳದಲ್ಲಿ ಹೊರಬಂದ ಲುನಖೋಡ್-1. ಲ್ಯೂನ-17 ರಿಂದ ಇಪ್ಪತ್ತುಮಿಾಟರು ದೂರ ಚಲಿಸಿ ಪ್ರಯೋಗಗಳನ್ನು ಪ್ರಾರಂಭಿಸಿತು. ಈ ಪ್ರಯೋಗದಿಂದ ರಷ್ಯದ ವಿಜ್ಞಾನಕ್ಕೆ ಸ್ವಯಂಚಾಲಿತ ವಾಹನಗಳಿಂದ ಚಂದ್ರಲೋಕವನ್ನು ಪರಿಶೋಧಿಸಲು ಹೊಸ ಪರಿಣಾಮಕಾರಿಯಾದ ಒಂದು ಸಾಧನ ಸಿಕ್ಕಿದಂತಾಯಿತು.

ಆಕಾಶಯಾನದ ಚರಿತ್ರೆಯಲ್ಲಿ ಭೂಮಿಯಿಂದ ನಿಯಂತ್ರಿಸಲ್ಪಡುವ ಸ್ವಯಂ ಚಾಲಿತ ಚಂದ್ರವಾಹನವನ್ನು ಚಂದ್ರನಲ್ಲಿ ಇಳಿಸಿ ವೈಜ್ಞಾನಿಕ ಪ್ರಯೋಗಗಳನ್ನು ನಡೆಸು ತ್ತಿರುವುದು ಇದೇ ಪ್ರಥಮ. ಟೆಲಿವಿಷರ್ ಮೂಲಕ ತಿಳಿದುಬರುವ ಸಮಾಚಾರದ ಸಹಾ ಯದಿಂದ ಚಂದ್ರವಾಹನ ಲುನಖೋಡ್-1 ರ ನಿಯಂತ್ರಣವನ್ನು ರಷ್ಯದ ಅತಿದೂರ ಸಂಪರ್ಕಸಾಧನ ಕೇಂದ್ರದಿಂದ ಮಾಡಲಾಗುತ್ತಿದೆ.

ಲುನಖೋಡ್‌ನಲ್ಲಿ ವಿಧವಿಧವಾದ ವೈಜ್ಞಾನಿಕ ಸಲಕರಣೆಗಳಿವೆ. ಕಾಸ್ಮಿಕ್‌ರೇಸ್ ಅಥವಾ ವಿಶ್ವರಶ್ಮಿಗಳನ್ನು ಪರೀಕ್ಷೆಗೊಳಪಡಿಸತಕ್ಕ ಉಪಕರಣ. ಸೂರ್ಯನಿಂದ ಹೊರ ಹೊಮ್ಮುವ ಕಿರಣಗಳನ್ನು — ಇವುಗಳಲ್ಲಿ ಅನೇಕ ಕಿರಣಗಳು ಭೂಮಿಯ ಮೇಲ್ಮೈ ಯನ್ನೇ ತಲುಪುವುದಿಲ್ಲ — ವಿಶ್ಲೇಷಣೆಮಾಡಲು ಬೇಕಾದ ವೈಜ್ಞಾನಿಕ ಯಂತ್ರ, ಚಂದ್ರನಲ್ಲಿರುವ ಮಣ್ಣಿನ ರಸಾಯನಿಕ ರಚನೆ ಮತ್ತು ಅದರ ಭೌತಿಕ - ಯಾಂತ್ರಿಕ ಗುಣಗಳನ್ನು ಅಭ್ಯಾಸಮಾಡಲು ಬೇಕಾದ ಉಪಕರಣಗಳು. ಲುನಖೋಡ್ ಚಂದ್ರನ ಮೇಲೆ, ಸೂರ್ಯ ಮತ್ತು ಭೂಮಿಗೆ ಸಂಬಂಧಪಟ್ಟ ರೀತಿಯಲ್ಲಿ, ಇರುವ ಸ್ಥಾನವನ್ನು ತಿಳಿಯಲು, ಅದರ ಪಕ್ಕಗಳಲ್ಲಿ ಆಸ್ಟ್ರೋ - ಟೆಲಿಫೋಟೋ - ಮೀಟರುಗಳನ್ನು ಅಳವಡಿಸಿದ್ದಾರೆ. ಇವು ಚಂದ್ರವಾಹನದ ಸುತ್ತಲೂ ಇರುವ ಜಾಗದ ದೃಶ್ಯವನ್ನು ವೃತ್ತಾಕಾರದಲ್ಲಿ ತೋರಿಸುತ್ತವೆ. ಈ ದೃಶ್ಯದಲ್ಲಿ ಚಂದ್ರವಾಹನಕ್ಕೆ ಲಗತ್ತಿಸಿರುವ ರಷ್ಯದ ಧ್ವಜ ಮತ್ತು ಲೆನಿನ್ನನ ಚಿತ್ರ ಯಾವಾಗಲೂ ಕಾಣುವಂತೆ ಅಳವಡಿಸಿದೆ. ಈ ಮೀಟರುಗಳಿಂದ ಲುನಖೋಡ್ ಇಳಿದಿರುವ ಜಾಗವು ಚಪ್ಪಟೆಯಾಗಿದೆಯೆಂದೂ, ಅದರ ಚಲನೆಗೆ ಅನುಕೂಲವಾಗಿದೆಯೆಂದೂ ತಿಳಿದುಬಂದಿತು. ಲುನಖೋಡ್‌ನ ಮುಂದುಗಡೆ ಟೆಲಿವಿಷರ್ ಕ್ಯಾಮರಗಳನ್ನು ಜೋಡಿಸಿದ್ದು ಅವುಗಳು ವಾಹನದ ಕಣ್ಣು ಗಳಂತೆ ಕಾರ್ಯನಿರ್ವಹಿಸಿದವು. ಅವು ತಮಗೆ ಕಂಡದ್ದೆಲ್ಲವನ್ನೂ ದೃಶ್ಯರೂಪದಲ್ಲಿ ಭೂಮಿಗೆ ಕಳುಹಿಸಿದವು. ವಾಹನವು ಮುಂದೆ ಹೋದಂತೆಲ್ಲ ಇದರ ಸಹಾಯದಿಂದ ಚಪ್ಪಟೆಯ ನೆಲದ ಮೇಲಿರುವ ಜ್ವಾಲಾಮುಖಿಯಿಂದ ಉಂಟಾದ ಸಣ್ಣಸಣ್ಣ ಗುಳಿಗಳು ಕಂಡವು. ಮುಂದೆ ಚಂದ್ರನ ನೆಲ, ಚಂದ್ರದಿಗಂತ ಮತ್ತು ಕಪ್ಪಗಿರುವ ಆಕಾಶ ಕಂಡು ಬಂದವು. ಲುನಖೋಡ್‌ನ ಮೇಲುಗಡೆ ಫ್ರಾನ್ಸ್ ದೇಶದಲ್ಲಿ ತಯಾರಿಸಿದ ಒಂದು ಪ್ರತಿಫಲಕವನ್ನು ಜೋಡಿಸಿದೆ. ಇದು ಭೂಮಿಯಿಂದ ಕಳುಹಿಸಲ್ಪಡುವ ಲೇಸರ್ ಕಿರಣಗಳನ್ನು ಪ್ರತಿಫಲಿಸಿ ಹಿಂತಿರುಗಿಸುತ್ತದೆ. ಇದರಿಂದ ಚಂದ್ರನು ಭೂಮಿಯಿಂದ ಇರುವ ದೂರವನ್ನು ನಿಖರವಾಗಿ ತಿಳಿಯುವುದೇ ಅಲ್ಲದೆ ಇತರ ಅನೇಕ ಮಾಹಿತಿ ಗಳನ್ನು ಪಡೆಯಬಹುದು.

ಲುನಖೋಡ್‌ಗೆ ಎಂಟು ಚಕ್ರಗಳಿದ್ದು ನೆಲದ ಮೇಲೆ ಏರುತಗ್ಗಿನಲ್ಲೆಲ್ಲ ಸಂಚರಿ ಸಲು ಬೇಕಾದ ಸಾಮರ್ಥ್ಯ ಮತ್ತು ವಿಶ್ವಾಸಾರ್ಹತೆಯನ್ನು ಹೊಂದಿದೆ. ಈ ಚಕ್ರ ಗಳ ವಿನ್ಯಾಸವು ಅತ್ಯಂತ ಕಡಿಮೆ ಖರ್ಚಿನದೂ, ಸರಳವಾದುದೂ ಆಗಿದೆ. ಚಂದ್ರನ

ಮೇಲೆ ಸಂಚರಿಸುವಂಥ ಸ್ವಯಂಚಾಲಿತ ಚಲನಯಂತ್ರವನ್ನು ರೂಪಿಸುವುದು ಒಂದು ಜಟಿಲವಾದ ಇಂಜಿನಿಯರಿಂಗ್, ವೈಜ್ಞಾನಿಕ ಮತ್ತು ತಾಂತ್ರಿಕ ಸಮಸ್ಯೆ. ಈ ಸಮಸ್ಯೆಯನ್ನು ಪರಿಹರಿಸುವುದರಲ್ಲಿ ಕ್ರಿಯಾಗತಿಯ ಪ್ರತ್ಯೇಕ ಲಕ್ಷಣಗಳನ್ನೂ, ವಾಯುಶೂನ್ಯತೆ ಅಥವಾ ನಿರ್ವಾತವನ್ನೂ ಗಣನೆಗೆ ತೆಗೆದುಕೊಳ್ಳಬೇಕು. ಭೂಮಿಯ ಮೇಲೆ ಯಂತ್ರಗಳಿಗೆ ಬಳಸುವ ಕೀಲೆಣ್ಣೆಗಳು ನಿರ್ವಾತದಲ್ಲಿ ಬಹುಬೇಗ ಇಂಗಿ ಹೋಗುತ್ತವೆ. ಆದಕಾರಣ ವಿಶೇಷವಾದ ಕೀಲೆಣ್ಣೆಗಳನ್ನೂ ಮತ್ತು ನವೀನ ರಚನಾ ಸಾಮಗ್ರಿಗಳನ್ನೂ ಬಳಸಬೇಕಾಗುತ್ತದೆ. ಚಂದ್ರನ ನೆಲದ ವಿಶಿಷ್ಟ ಗುಣಗಳನ್ನು ಪ್ರತ್ಯೇಕವಾಗಿ ತಿಳಿಯಬೇಕಾಗುತ್ತದೆ. ಅದಕ್ಕೆ ಸಮಾನವಾದ ನೆಲಗಳು ಭೂಮಿಯಲ್ಲಿಲ್ಲ. ಅದಕ್ಕೋಸ್ಕರ ಚಲನೆಯ ಸಮಸ್ಯೆಗೆ ಪಳಗುವ ಅದರ ಗುಣಗಳನ್ನು ಮುಂದಾಗಿಯೇ ತಿಳಿದುಕೊಳ್ಳಬೇಕು. ನೆಲವು ಗಟ್ಟಿಯಿಲ್ಲದಿದ್ದಲ್ಲಿ ಕುಸಿಯದಂತೆ, ಬಂಡೆಯಮೇಲೆ ಜಾರದಂತೆ ರನ್ನಿಂಗ್ ಗಿಯರನ್ನು ನಿರ್ಮಾಣಮಾಡಬೇಕು. ಅಲ್ಲದೆ ಚಂದ್ರಗ್ರಹದ ಗುರುತ್ವಾಕರ್ಷಣೆಯು ಭೂಮಿಗಿಂತ ಆರು ಪಾಲು ಕಡಿಮೆಯಿರುವುದರಿಂದ, ಅಲ್ಲಿ ನೆಲ ಮತ್ತು ಚಕ್ರಗಳ ನಡುವಣ ಪರಸ್ಪರ ಕ್ರಿಯೆಯ ಚಿತ್ರವು ತೀವ್ರರೀತಿಯಲ್ಲಿ ಬದಲಾಗುತ್ತದೆ. ಈ ಪರಿಣಾಮವನ್ನೂ ಗಮನಕ್ಕೆ ತೆಗೆದುಕೊಂಡು ಗಿಯರುಗಳನ್ನು ರೂಪಿಸಬೇಕು,

ಟೆಲಿವಿಷನ್ ಮೂಲಕ ಚಂದ್ರನ ನೆಲದ ದೃಶ್ಯವನ್ನು ನೋಡಿಕೊಂಡು ಲುನ-ಖೋಡನ್ನು ನಡೆಸಬೇಕಷ್ಟೆ. ಅದಕ್ಕಾಗಿ ಚಂದ್ರನಲ್ಲಿ ಬೆಳಕಿರಬೇಕಾದುದು ಅವಶ್ಯಕ. ಇದು ಹಗಲಿನಲ್ಲಿ ಮಾತ್ರ ಸಾಧ್ಯ, ರಾತ್ರಿಯಲ್ಲಿ ಆಗುವುದಿಲ್ಲ. ಚಂದ್ರನ ಹಗಲು ಭೂಮಿಯ ಹದಿನೈದು ದಿನಗಳಿಗೆ ಸಮ. ಹಾಗೆಯೇ ಚಂದ್ರನ ರಾತ್ರಿಯೂ ಭೂಮಿಯ ಹದಿನೈದು ದಿನಗಳಿಗೆ ಸಮ. ಆದುದರಿಂದ ಚಂದ್ರನಲ್ಲಿ ಹಗಲಿರುವ ಹದಿನೈದು ದಿನಗಳು ಚಂದ್ರವಾಹನವನ್ನು ನಡೆಸಿ ಪ್ರಯೋಗಗಳನ್ನು ಮಾಡಬಹುದು. ಚಂದ್ರನಲ್ಲಿ ರಾತ್ರಿ ಇರುವ ಹದಿನೈದು ದಿನಗಳು ಚಂದ್ರವಾಹನಕ್ಕೆ ವಿಶ್ರಾಂತಿಕೊಡಬೇಕಾಗುತ್ತದೆ. ಹೀಗೆ ಹದಿನೈದು ದಿನಗಳ ಕೆಲಸ, ಹದಿನೈದು ದಿನಗಳ ವಿಶ್ರಾಂತಿಯಂತೆ ಲುನಖೋಡ್ ಕೆಲಸಮಾಡುತ್ತದೆ.

ಲುನಖೋಡ್‌ನ ನಿಯಂತ್ರಣವನ್ನು ವಾಹನದಿಂದ ಸುಮಾರು ನಾಲ್ಕು ಲಕ್ಷ ಕಿಲೋಮೀಟರುಗಳ ದೂರದಲ್ಲಿ, ಭೂಮಿಯ ಮೇಲೆ ಕುಳಿತಿರುವ ವಿಜ್ಞಾನಿಮಾಡುತ್ತಾನೆ. ದಾರಿಯನ್ನು ನೋಡಲು ಮತ್ತು ಸಂಚಾರದ ಸಾಧನಗಳನ್ನು ನಿಯಂತ್ರಿಸುವ ಉಪಕರಣಗಳನ್ನು ವೀಕ್ಷಿಸಲು ಅವನು ಟೆಲಿವಿಷನ್ ಬಳಸುತ್ತಾನೆ. ಇಷ್ಟು ದೂರದಿಂದ ಚಂದ್ರವಾಹನವನ್ನು ಚಾಲನೆಮಾಡುವುದು ಅತ್ಯಂತ ಜಟಿಲವಾದ ಕೆಲಸ.

ಲುನಖೋಡ್‌ನ ಕ್ರಿಯಾಶಕ್ತಿಯು ವ್ಯಯವಾದ ಮೇಲೆ ಅದನ್ನು ಒಂದು ನಿಶ್ಚಲವಾದ ವೈಜ್ಞಾನಿಕ ಕ್ಷೇತ್ರವಾಗಿ ಉಪಯೋಗಿಸಬಹುದು. ಲೇಸರ ಪ್ರತಿಫಲಕದ

ಸಹಾಯದಿಂದ ಅನೇಕ ವೈಜ್ಞಾನಿಕ ಸಂಶೋಧನೆಗಳನ್ನು ನಡೆಸಬಹುದು. ಈ ಪ್ರಯೋಗಗಳನ್ನು ಅನೇಕ ವರ್ಷಗಳ ವರೆಗೆ ಚಂದ್ರನ ಅನೇಕ ಸ್ಥಿತಿಗಳಲ್ಲಿ ಮತ್ತು ಚಂದ್ರಪಥದ ಅನೇಕ ಬಿಂದುಗಳಲ್ಲಿ ನಡೆಸಬಹುದು.

ರಷ್ಯವು ಹೊರಡಿಸಿರುವ ಪ್ರಕಟಣೆಗಳಲ್ಲಿ ಲುನಖೋಡ್‌ನಿಂದ ನಡೆಸುವ ಪ್ರಯೋಗಗಳ ವಿವರಗಳನ್ನು ತಿಳಿಸಿಲ್ಲ. ಎಷ್ಟು ಸಮಯದ ವರೆಗೂ ಈ ಪ್ರಯೋಗಗಳು ನಡೆಯುವುವು ಮತ್ತು ಚಂದ್ರವಾಹನವನ್ನು ಆಕಾಶನೌಕೆಯೊಂದಿಗೆ ಭೂಮಿಗೆ ವಾಪಸ್ಸು ತರಲಾಗುವುದೇ ಎಂಬ ವಿಷಯಗಳನ್ನೂ ತಿಳಿಸಿಲ್ಲ. ಮುಖ್ಯವಾಗಿ ಚಂದ್ರನ ಮೇಲಿರುವ ಜ್ವಾಲಾಮುಖಿಗಳಿಂದ ಉಂಟಾಗಿರುವ ಹಳ್ಳಕೊಳ್ಳಗಳ ಮತ್ತು ಬಂಡೆಗಳನ್ನು ಗುರುತಿಸುವುದು, ಹಳ್ಳಗಳಲ್ಲಿರುವ ಇಳಿಜಾರುಗಳ ಲಕ್ಷಣಗಳನ್ನು ಕಂಡುಹಿಡಿಯುವುದು. ಇವೇ ಚಂದ್ರವಾಹನದಿಂದ ನಡೆಸಬೇಕಾಗಿರುವ ಪರೀಕ್ಷೆಗಳೆಂದು ಕಂಡುಬರುತ್ತದೆ.

ಇದೇ ಸೆಪ್ಟೆಂಬರ್ ವರೆಗೆ ಲುನಖೋಡ್-1 ಸುಮಾರು ಹದಿನೈದು ಸಾವಿರ ಮೀಟರುಗಳಷ್ಟು ಓಡಾಡಿ ತನ್ನ ನಿಯಮಿತ ಕೆಲಸವನ್ನು ಮುಗಿಸಿತು. ಇದಕ್ಕೆ ವಹಿಸಿದ್ದ ನಾಲ್ಕಾರು ದೊಡ್ಡ ಹಳ್ಳಗಳ ಪರಿಶೋಧನೆಯನ್ನು ಅದು ಮುಗಿಸಿತು. ಲುನಖೋಡನ ಆರನೇ ಪ್ರವಾಸದಲ್ಲಿ ಯಂತ್ರೋಪಕರಣಗಳು ಸೂರ್ಯನಿಂದ ಬರುವ ವಿಶ್ವರಶ್ಮಿಗಳಲ್ಲಿರುವ ಕಣಗಳು ಸಾಕಷ್ಟು ಹೆಚ್ಚಿತ್ತೆಂದು ತಿಳಿಸಿದುವು.

ಲುನಖೋಡ್-1 ರ ಪ್ರಯೋಗಗಳಿಂದ ತಿಳಿದು ಬಂದಿರುವ ಅನೇಕ ವಿಷಯಗಳಿಂದ ಮುಂದಿನ ಸ್ವಯಂಚಾಲಿತ ವಾಹನಗಳ ನಿರ್ಮಾಣಕ್ಕೆ ಸಹಾಯವಾಗುವುದು.

ಏನೇ ಆಗಲಿ ಮೋಟಾರ್ ಸಜ್ಜಿತ ವಾಹನವೊಂದನ್ನು ಚಂದ್ರನ ಮೇಲೆ ಇಳಿಸುವುದರ ಮೂಲಕ ರಷ್ಯ ತಮಗಿಂತ ಒಂದು ಹೆಜ್ಜೆ ಮುಂದೆಹೋಗಿರುವುದಾಗಿ ಅಮೆರಿಕದ ಬಾಹ್ಯಾಕಾಶ ವಿಜ್ಞಾನಿಗಳು ಒಪ್ಪಿಕೊಂಡಿದ್ದಾರೆ. ಇದರಿಂದ ಆಕಾಶಯಾನದಲ್ಲಿ ರಷ್ಯವು ಮತ್ತೊಂದು ಪ್ರಥಮವನ್ನು ಸಾಧಿಸಿದಂತಾಗಿದೆ.

[A. I. R.ಕೃಪೆಯಿಂದ]

ಒಂದಿರುಳು

ಜಿ. ಎಸ್. ಶಿವರುದ್ರಪ್ಪ

ಈಗಷ್ಟೆ—ಐದು ನಿಮಿಷದ ಹಿಂದೆ ಮಳೆ ಸುರಿದು
ನೆಲವೆಲ್ಲ ಒದ್ದೆ. ಬಂದದ್ದು ಬಂದ ಹಾಗೆ ನಿಂತು,
ಮೇಲಿನಾಕಾಶದಲ್ಲಿ ನೋಡಿದರೆ ಒಂದಾದರೂ
ಮೋಡವೇ ಇಲ್ಲ! ತುಂಟ ಚಂದಿರನ ಕೊಂಕುತುಟಿಯಲ್ಲಿ
ಏನೋ ತೊದಲು. ಆಕಾಶದಲ್ಲೆಲ್ಲ, ಈ ಕೆಳಗೆ
ಇದುವರೆಗು ನಡೆದದ್ದಕ್ಕು ತನಗೂ ಏನೇನೂ
ಸಂಬಂಧವಿಲ್ಲವೆಂಬಂಥ ಸಾಚಾತನದ ಸೋಗು.
ತಾಯ ಸೀರೆಯ ಮೇಲೆ ಉಚ್ಚೆ ಹೊಯ್ದು
ಗೊತ್ತಿಲ್ಲದವರಂತೆ ಕಿಲ ಕಿಲ ನಗುತ್ತಲಿದೆ ಈ ಮಗು.

ದುಃಖ - ಒಂದು ಮನೋವೈಜ್ಞಾನಿಕ ವಿಶ್ಲೇಷಣೆ

ಎಂ. ಬಸವಣ್ಣ

ಮಾನವ ಭಾವಜೀವಿ. ಅವನ ಭಾವಜೀವನದ ಅಧ್ಯಯನ ಮನೋವಿಜ್ಞಾನದ ಬಹುಮುಖ್ಯ ಅಂಗ. ನಾವೆಲ್ಲರೂ ಹಲವು ಭಾವವಿಶೇಷಗಳನ್ನು ಅನುಭವಿಸುವವಾದರೂ, ಅವುಗಳಲ್ಲಿ ಮುಖ್ಯವಾದುವು ಭಯ, ಕೋಪ, ಪ್ರೇಮ ಮತ್ತು ದುಃಖ. ಈ ನಾಲ್ಕರ ಪೈಕಿ ಮೊದಲ ಮೂರರ ಬಗೆಗೆ ವಿಪುಲವಾಗಿ ಸಂಶೋಧನೆ ನಡೆದಿದ್ದರೂ, ಅದೇ ಪ್ರಮಾಣದಲ್ಲಿ ದುಃಖದ ವಿಚಾರವಾಗಿ ನಡೆದಿಲ್ಲ. ಇತ್ತೀಚೆಗೆ ಮನೋವಿಜ್ಞಾನಿಗಳ ಗಮನ ಈ ಕಡೆ ಹರಿಯುತ್ತಿರುವುದು ಸಂತೋಷದ ಸಂಗತಿ.

ದುಃಖಕ್ಕೆ ಕಾರಣಗಳು ಹಲವಾರಿರಬಹುದಾದರೂ, ಅವುಗಳಲ್ಲಿ ಮುಖ್ಯವಾದುದು ವಿರಹ (Separation). ವಿರಹ ತಾತ್ಕಾಲಿಕವಾಗಿರಬಹುದು, ಇಲ್ಲವೇ ಶಾಶ್ವತವಾದದ್ದಾಗಿರಬಹುದು. ಆತ್ಮೀಯರಿಂದ ಕೊಂಚಕಾಲ ಬೇರ್ಪಡಬೇಕಾದಾಗ, ಮಕ್ಕಳು ಮನೆಬಿಟ್ಟು ವ್ಯಾಸಂಗಕ್ಕಾಗಿ ಬೇರೆಡೆಗೆ ಹೋದಾಗ, ಪ್ರೇಮಿಗಳು ದೂರವಿರಬೇಕಾಗಿ ಬಂದಾಗ ಯಾವುದೇ ಕಾರಣಕ್ಕಾಗಿ ಪ್ರೀತಿಪಾತ್ರರಿಂದ ತಿರಸ್ಕರಿಸಲ್ಪಟ್ಟಾಗ ದುಃಖವಾಗುವುದು ಸಹಜ. ಈ ಎಲ್ಲಾ ಸಂದರ್ಭಗಳಲ್ಲೂ ವಿರಹವಿದ್ದರೂ ಪುನರ್ಮಿಲನದ ಸಾಧ್ಯತೆಗಳೂ ಇವೆ. ಇವು ತಾತ್ಕಾಲಿಕ ವಿರಹಗಳು. ಆದರೆ ಅತೀವ ದುಃಖವಾಗುವುದು ಶಾಶ್ವತ ವಿರಹದಿಂದ. ಶಾಶ್ವತ ವಿರಹಕ್ಕೆ ಕಾರಣ ಸಾವು. ಇದನ್ನು ವಿರಹವೆನ್ನುವುದಕ್ಕಿಂತ ವಿಯೋಗ (Bereavement) ವೆನ್ನುವುದು ಹೆಚ್ಚು ಸಮಂಜಸ. ಒಟ್ಟಿನಲ್ಲಿ ವಿರಹವೇ ಆಗಲಿ, ವಿಯೋಗವೇ ಆಗಲಿ ದುಃಖಕ್ಕೆ ಮುಖ್ಯಕಾರಣ ದುಃಖಿಗಾಗುವ ವೈಯಕ್ತಿಕ ನಷ್ಟ.

ದುಃಖದ ಮೂರು ಅವಸ್ಥೆಗಳು

ದುಃಖದ ನಿಜರೂಪದ ಅರಿವಾಗಬೇಕಾದರೆ ಮಕ್ಕಳ ವರ್ತನೆಯನ್ನು ಅಭ್ಯಾಸಮಾಡಬೇಕಾಗುತ್ತದೆ. ಚಿಕ್ಕಮಕ್ಕಳು ತಂದೆತಾಯಿಯರಿಂದ ಬೇರ್ಪಡಬೇಕಾಗಿ ಬಂದಾಗ ಅವರಿಗಾದ ದುಃಖವನ್ನು ಮನೋವಿಜ್ಞಾನಿಗಳು ಕೂಲಂಕಷವಾಗಿ ಅಭ್ಯಾಸಮಾಡಿ, ಮಕ್ಕಳ ಈ ಭಾವೋದ್ವೇಗದಲ್ಲಿ ಮೂರು ಅವಸ್ಥೆ ಅಥವಾ ಹಂತ (Stages) ಗಳನ್ನು ಗುರುತಿಸಿದ್ದಾರೆ.

ಅವುಗಳಲ್ಲಿ ಮೊದಲನೆಯದು ಪ್ರತಿಭಟನಾವಸ್ಥೆ (Protest). ತಂದೆತಾಯಿಯರಿಂದ ಬೇರ್ಪಟ್ಟ ಮಗು ಮೊದಲ ಒಂದೆರಡು ದಿನಗಳನ್ನು ಪ್ರತಿಭಟನೆಯಲ್ಲಿ ಕಳೆಯುತ್ತದೆ. ಈ

ಹಂತದಲ್ಲಿ ಮಗು ಅತಿಯಾಗಿ ಅಳುತ್ತದೆ; ಅಬ್ಬರಿಸುತ್ತದೆ; ಜೋಬ್ಬೆ ಇಡುತ್ತದೆ. "ನನಗೆ ಅಮ್ಮಬೇಕು" ಎಂದು ಅರಚುತ್ತದೆ. ಬೇರೆಯವರನ್ನು ಹತ್ತಿರ ಸೇರಗೊಡುವುದಿಲ್ಲ. ಈ ಹೋರಾಟ ಮುಗಿದಮೇಲೂ, ತಂದೆತಾಯಿಗಳು ತನ್ನ ಬಳಿ ಇಲ್ಲದುದಕ್ಕೆ ಕೋಪ ಪ್ರದರ್ಶನ ಮಾಡುತ್ತಾ, ಇನ್ನಾರ ಮಾತನ್ನೂ ಕೇಳುವುದಿಲ್ಲ.

ಹೀಗೆ ಎರಡುದಿನ ಕಳೆದು, ಪ್ರತಿಭಟನೆ ಹಾಗೂ ಹೋರಾಟ ಮುಗಿದಮೇಲೆ ಮಗುವಿನಲ್ಲಿ ಒಂದು ವಿಧವಾದ ವ್ಯಾಕುಲತೆ (Despair) ಮೂಡಿಬರುತ್ತದೆ. ಇದು ದುಃಖದ ಎರಡನೇ ಅವಸ್ಥೆ. ಈಗ ಮಗು ಮಂಕಾಗಿದ್ದು, ಒಂದು ತೆರನಾದ ಶಾಂತ ಪ್ರಲಾಪದಲ್ಲಿ ತೊಡಗುತ್ತದೆ. ಅಳದಿದ್ದರೂ ಅದರ ಮುಖದಲ್ಲಿ ಖಿನ್ನತೆ ಎದ್ದು ಕಾಣುತ್ತಿರುತ್ತದೆ; ಈ ಅವಸ್ಥೆಯಿಲ್ಲಿರುವಾಗ ಮಗು ತಾಯಿಗಾಗಿ ಕಾದಿರುವಂತೆ ತೋರಿಬರುವುದಿಲ್ಲ.

ವ್ಯಾಕುಲಾವಸ್ಥೆಯಲ್ಲಿ ಸುಮಾರು ಒಂದು ವಾರ ಕಳೆದನಂತರ ಮಗು ಮೂರನೆಯ ಹಂತವನ್ನುಮುಟ್ಟುತ್ತದೆ. ಇದು ನಿರ್ಲಿಪ್ತಾವಸ್ಥೆ (Detachment). ಈ ಅವಸ್ಥೆಯ ಮುಖ್ಯಲಕ್ಷಣ ಒಂದು ವಿಧವಾದ ನಿರಾಸಕ್ತಿ; ವಿರಕ್ತಿ ಎಂದರೂ ಸರಿಯೆ. ಈಗ ಮಗುವಿನಲ್ಲಿ ಆವೇಶ, ಉದ್ವೇಗ ಇವಾವುವೂ ಇರುವುದಿಲ್ಲ. ಅದರ ವರ್ತನೆ ವರ್ಣ ರಹಿತವಾಗಿರುತ್ತದೆ, ಒಂದು ವೇಳೆ ಈ ಕಾಲದಲ್ಲಿ ತಾಯಿಬಂದರೂ ಅವಳ ಮೇಲೆ ಹಾರಿ, ತಬ್ಬಿ, ಜೋತು ಬೀಳುವುದಿಲ್ಲ, ಮಗುವೀಗ ನಿರಾವೇಶಿ, ನಿರ್ಲಿಪ್ತ, ನಿರಾಸಕ್ತ. ಈ ಅವಸ್ಥೆ ಮನೋವಿಜ್ಞಾನದ ದೃಷ್ಟಿಯಲ್ಲಿ ಬಹು ಮುಖ್ಯವಾದುದು. ಇಲ್ಲಿನ ಅನುಭವ ಮಗುವಿನ ವ್ಯಕ್ತಿತ್ವ ವಿಕಾಸದಮೇಲೆ ಪರಿಣಾಮಕಾರಿಯಾದ ಪ್ರಭಾವ ಬೀರಬಲ್ಲದು. ಈ ಕಾಲದಲ್ಲಿ ತಾಯಿ ಹಿಂತಿರುಗಿ ಬಂದಾಗ ಕಂಡುಬರುವ ವರ್ತನೆಗಳೂ ಅಭ್ಯಾಸಾರ್ಹವೇ. ಈಗ ಮಗು ಅವಿಧೇಯತೆ ತೋರಿಸಬಹುದು; ಅಶಿಸ್ತಿನ ವರ್ತನೆಯಲ್ಲಿ ತೊಡಗಬಹುದು. ತಾಯಿಯನ್ನು ಅದು ಗುರುತಿಸಲೇ ಇಲ್ಲವೇನೋ ಎನ್ನುವಂತೆ ವರ್ತಿಸಬಹುದು. ಆದರೆ ಸಾಮಾನ್ಯವಾಗಿ ಈ ವರ್ತನೆ ತಕ್ಷಣ ಬದಲಾಗುತ್ತದೆ. ಬದಲಾದಾಗಿನ ವರ್ತನೆ ಮೊದಲದಕ್ಕೆ ತದ್ವಿರುದ್ಧ. ಈಗ ತಾಯಿಗೆ ಅತಿಯಾಗಿ ಅಂಟಿಕೊಳ್ಳುತ್ತದೆ; ಪರಾವಲಂಬಿಯಂತೆ ತಾಯಿಗೆ ಜೋತು ಬೀಳುತ್ತದೆ. ತಾಯಿಯಾದವಳು ನಾಲ್ಕಾರು ದಿನ ಈ ಅತ್ಯಾವಲಂಬನವನ್ನು ಸಹಿಸಲೇಬೇಕಾಗುತ್ತದೆ.

ಮಕ್ಕಳು ಬೆಳೆದು ನವತಾರುಣ್ಯಕ್ಕೆ (Adolescence) ಕಾಲಿಟ್ಟಾಗ ವಿರಹಕ್ಕೆ ಅವರು ತೋರುವ ಪ್ರತಿಕ್ರಿಯೆಗಳಲ್ಲಿ ಕೊಂಚ ವ್ಯತ್ಯಾಸ ಕಂಡುಬರುತ್ತದೆ. ಅವರು ತಂದೆತಾಯಿಯಿಂದ ಬೇರ್ಪಟ್ಟಾಗ ದುಃಖಿಸದಿರಬಹುದು; ಬದಲು ಸಂತೋಷಿಸಬಹುದು. ಒಂದೊಂದು ವೇಳೆ ಇವರೂ ಮೇಲೆ ಹೇಳಿದ ಬಾಲ್ಯಾವಸ್ಥೆಗಳನ್ನು ಪ್ರದರ್ಶಿಸಬಹುದು. ಪ್ರೇಮಿಗಳು ಅಥವಾ ನವ ವಿವಾಹಿತರು ಒಬ್ಬರಿಂದೊಬ್ಬರು ಬೇರ್ಪಡಬೇಕಾಗಿ ಬಂದಾಗಲೂ ಅವರ ದುಃಖ ಮೇಲ್ಕಂಡ ಮೂರು ಅವಸ್ಥೆಗಳ — ಪ್ರತಿಭಟನೆ, ವ್ಯಾಕುಲತೆ ಮತ್ತು ನಿರ್ಲಿಪ್ತತೆ — ಮೂಲಕ ಹಾದು ಹೋಗುತ್ತದೆ. ಆದರೆ ಯಾರಿಗಾದರೂ ದುಃಖದ

ಪೂರ್ಣಾನುಭವವಾಗುವುದು ಸಾವು ಬಾಗಿಲು ಬಡಿದಾಗಲೇ. ಹೀಗಾದಾಗ ವಯಸ್ಕರೂ ಮಕ್ಕಳಂತೆ ದುಃಖಿಸುತ್ತಾರೆ. ಆಗಲೂ ಈ ಮೂರು ಅವಸ್ಥೆಗಳ ದರ್ಶನ ನಮಗಾಗುತ್ತದೆ.

ಈ ಮೂರು ಅವಸ್ಥೆಗಳೂ ಮೂಲತಃ ಎಲ್ಲಾ ವಯಸ್ಸಿನವರಲ್ಲೂ ಕಂಡುಬಂದರೂ ಅಲ್ಲಲ್ಲಿ ಕೊಂಚ ವ್ಯತ್ಯಾಸಗಳು ಕಂಡುಬರದೇ ಇರುವುದಿಲ್ಲ. ತಂದೆಯನ್ನೋ. ತಾಯನ್ನೋ ಕಳೆದುಕೊಂಡು, ಮಾನಸಿಕ ಸಲಹಾಸದನ (Psychological counselling centre) ಗಳಿಗೆ ಬಂದ ಯುವಮಕ್ಕಳ ವರ್ತನೆಯನ್ನು ಅಭ್ಯಾಸ ಮಾಡಿದಾಗ ಹಾಗೆ ಕಂಡುಬಂತು.ಈ ಮಕ್ಕಳು ಗತಿಸಿದವರ ವ್ಯಕ್ತಿತ್ವದಲ್ಲಿ ತಮ್ಮ ಆದರ್ಶವನ್ನು ಕಂಡುಕೊಳ್ಳುವುದು, ಹಾಗೆಯೇ ಜೀವಿಸಿರುವ ತಂದೆ ಅಥವಾ ತಾಯಿಯಮೇಲೆ ಪ್ರತಿಭಟನೆ ತೋರುವುದು ಕಂಡುಬಂತು. ಇವರಲ್ಲೂ ನಿರ್ಲಿಪ್ತಾವಸ್ಥೆ ಕಂಡುಬಂದರೂ ಅದು ಸರ್ವ ವ್ಯಾಪಿಯಾಗಿರಲಿಲ್ಲ. ಎಲ್ಲಾ ಬಂಧನಗಳನ್ನು ಕಳಚಿಕೊಳ್ಳುವ ಅನಾಸಕ್ತಿಯಾಗಿರಲಿಲ್ಲ. ಕಾಲಕ್ರಮದಲ್ಲಿ ಅವರ ನಿರ್ಲಿಪ್ತತೆ ಗತಿಸಿದವರೆಡೆಗೇ ಹರಿದು ಅವರಲ್ಲೇ ಕೇಂದ್ರೀಕೃತವಾಗಿ, ಬೇರೆಯವರೊಡನೆ ಮಧುರ ಬಾಂಧವ್ಯವೇರ್ಪಡುವುದು ಸಾಧ್ಯವಾಗುತ್ತದೆ. ಈ ರೀತಿಯ ದುಃಖ ರಚನಾತ್ಮಕವಾದುದು. ಹೀಗಾಗ ಬೇಕಾದರೆ ಮಕ್ಕಳು ತಂದೆ ತಾಯಿಗಳಮೇಲೆ ಅತ್ಯಾವಲಂಬಿಗಳಾಗಿರಬಾರದು. ಅವರು ತಂದೆತಾಯಿಯರಿಂದ ಸ್ವಾತಂತ್ರ್ಯ ಪಡೆಯಲು ಯತ್ನಿಸಿ, ಬೇರ್ಪಟ್ಟು. ಅದರಿಂದಾಗುವ ತಾತ್ಕಾಲಿಕ ವಿರಹತಾಪವನ್ನನುಭವಿಸಿರಬೇಕು. ಅವರಿಗೆ ಇದು ಒಂದು ತರಹ ಪ್ರಾಯೋಗಿಕ ದುಃಖ (Trail mourning) ದಂತಿದ್ದು, ಸಹಜ ವಿಯೋಗವಾದಾಗ ಅದನ್ನು ಭರಿಸುವ ಶಕ್ತಿಯನ್ನು ತಂದುಕೊಡುತ್ತದೆ. ಆಗ ಅವರು ಪುಟ್ಟಮಕ್ಕಳಂತೆ ಮಾನಸಿಕ ಸಮತೋಲವನ್ನು ಕಳೆದು ಕೊಳ್ಳುವುದಿಲ್ಲ. ತರುಣರು ಪಡೆದಿರಬೇಕಾದ ಈ ಭಾವಸಿದ್ಧಿ (Emotional achievement) ಜೀವನದಲ್ಲಿ ಅವರು ಎದುರಿಸಬೇಕಾಗಿಬರುವ ಹಲವಾರು ವಿರಹಗಳನ್ನು ನಿಯಂತ್ರಿಸಿಕೊಳ್ಳಲು ಬಹಳ ಸಹಾಯವಾಗುತ್ತದೆ.

ಮನಸ್ವಾಸ್ಥ್ಯ ಮತ್ತು ದುಃಖ

ಮನುಷ್ಯ ಅನುಭವಿಸುವ ದುಃಖದ ಸ್ವರೂಪ ಅವನ ಮನಸ್ವಾಸ್ಥ್ಯದ ಮಟ್ಟವನ್ನನುಸರಿಸಿರುತ್ತದೆಂದು ಮನೋವಿಜ್ಞಾನ ಹೇಳುತ್ತದೆ. ಮಾನಸಿಕವಾಗಿ ಸ್ವಸ್ಥನಾಗಿರುವ ವ್ಯಕ್ತಿ ಪ್ರದರ್ಶಿಸುವ ದುಃಖ ಅಸ್ವಸ್ಥನು ತೋರುವುದಕ್ಕಿಂತ ಬೇರೆಯಾಗಿರುತ್ತದೆ. ಸಾವಿನ ಸುದ್ದಿ ಸ್ವಸ್ಥವ್ಯಕ್ತಿಯ ಮನಸ್ಸಿನ ಮೇಲೆ ಅಗಾಧವಾದ ಪರಿಣಾಮ ಮಾಡುತ್ತದೆ. ಮೊದಲು ಅವನು ಕೇಳಿದ ಸುದ್ದಿಯನ್ನು ನಂಬುವುದಿಲ್ಲ. ಅನಂತರ ಅಳಲು ಆರಂಭಿಸುತ್ತಾನೆ. ಅವನ ಭಾವನೆಗಳು ಮೊರಟಾಗುತ್ತವೆ. ಸಾವಿಗೆ ಕಾರಣರಾದವರಂತೆ ತೋರಿಬರುವವರ ಮೇಲೆ ಆಕ್ರೋಶಗೊಳ್ಳುತ್ತಾನೆ. ಕಾಲ ಕಳೆದಂತೆ ಅವನ ಉದ್ವೇಗ ಇಳಿದು ಶೋಕ ಹೊರಹೊಮ್ಮುತ್ತದೆ. ಈಗ ಅವನು ಗತಿಸಿದ ವ್ಯಕ್ತಿಗಾಗಿ ಪರಿತಪಿಸುತ್ತಾನೆ.

ಸತ್ತವನಿಗಾಗಿ ಮಾಡಬೇಕಾಗಿದ್ದ, ಮಾಡಲಾರದಾದ ಸೇವೆಗಳನ್ನು ಕುರಿತು ಚಿಂತಿಸುತ್ತಾನೆ. ಅವನು ಖಿನ್ನನಾಗಿದ್ದು ಅವನ ವರ್ತನೆ ವರ್ಣರಹಿತವಾಗುತ್ತದೆ. ಜೀವನದ ಅರ್ಥಹೀನತೆಯನ್ನು ಕುರಿತು, ಅದರ ನಶ್ವರತೆಯನ್ನು ಕುರಿತು ಆಳವಾಗಿ ಆಲೋಚಿಸುತ್ತಾನೆ. ಅವನಿಗೆ ಅನ್ನಾಹಾರಗಳು ರುಚಿಸುವುದಿಲ್ಲ; ತಿಂದರೂ ಜೀರ್ಣವಾಗುವುದಿಲ್ಲ; ರಾತ್ರಿ ನಿದ್ದೆ ಬರುವುದಿಲ್ಲ. ಒಟ್ಟಿನಲ್ಲಿ ಅವನಿಗೆ ವಿಶ್ರಾಂತಿಯಿಲ್ಲ. ಶಾಂತಿಯಿಲ್ಲ. ಈಗ ಅವನು ಅಷ್ಟಾಗಿ ಜನಸಂಪರ್ಕವನ್ನು ಬಯಸುವುದಿಲ್ಲ. ಒಂದುವೇಳೆ ಬಯಸಿದರೂ ಅದು ಸತ್ತವನ ವಿಚಾರವಾಗಿ ಅನುಕಂಪವಿರುವವರಲ್ಲಿ ಮಾತ್ರ, ಅವನ ಸಂಭಾಷಣೆಯಲ್ಲಿ ಸತ್ತವನ ಗುಣಗಾನ ಮತ್ತು ಆದರ್ಶದ ಶ್ಲಾಘನೆ ತುಂಬಿರುತ್ತದೆ. ದಿನಕಳೆದಂತೆ ಕೊಂಚ ಕೊಂಚವಾಗಿ ತನ್ನಕಾರ್ಯಗಳಲ್ಲಿ ಮಗ್ನನಾದರೂ ಅದು ಉತ್ಸಾಹ ಭರಿತವಾಗಿರುವುದಿಲ್ಲ. ಹೀಗೆ ಒಂದುತಿಂಗಳು ತುಂಬುತ್ತಲೇ ಅವನು ತನ್ನ ಮೊದಲ ಸ್ಥಿತಿಗೆ ಹಿಂದಿರುಗುತ್ತಾನೆ; ದಿನನಿತ್ಯದ ಜೀವನ ಕ್ರಮಕ್ಕೆ ಒಗ್ಗಿಕೊಳ್ಳುತ್ತಾನೆ.

ಅಸ್ವಸ್ಥ ವ್ಯಕ್ತಿಯ ದುಃಖ ಇದಕ್ಕಿಂತ ಭಿನ್ನವಾದುದು. ಸಾವಿನ ನೆನಪು ಅವನನ್ನು ನಿರಂತರವೂ ಕಾಡುತ್ತಿರುತ್ತದೆ. ಗತಿಸಿದವನ ಸಾವಿಗೆ ತಾನೇ ಕಾರಣವೆನ್ನುವ ಶಂಕೆ ಅವನಲ್ಲಿ ಹುಟ್ಟಿಕೊಳ್ಳುತ್ತದೆ. ಅದಕ್ಕಾಗಿ ತನ್ನನ್ನೇ ಹಳಿದುಕೊಳ್ಳುತ್ತಾನೆ. ಅವನಿಗೆ ಬದುಕು ಭಾರವೆನಿಸುತ್ತದೆ. ಜೀವನ ನಿರರ್ಥಕವೆನಿಸಿ ಎಲ್ಲದರಲ್ಲೂ ನಿರಾಸಕ್ತಿ ಎದ್ದು ಕಾಣುತ್ತದೆ. ಹಲವು ವೇಳೆ ಅವನಲ್ಲಿ ಆತ್ಮಹತ್ಯೆಯ ವಿಚಾರ ಮೂಡಿಬರಬಹುದು. ಒಂದು ದೃಷ್ಟಿಯಲ್ಲಿ ಸಾವು ಅವನ ಅಂತರ್ಗತ ಮಾನಸಿಕ ಅಸ್ವಸ್ಥತೆಯನ್ನು ಹೊರಗೆಳೆಯುವ ಒಂದು ಘಟನೆಯಾಗಿರುತ್ತದೆ. ಮನೋವಿಜ್ಞಾನಿಗಳ ಪ್ರಕಾರ ಇಂಥವರಿಗೆ ಸತ್ತವರ ವಿಷಯದಲ್ಲಿ ಸುಪ್ತದ್ವೇಷವಿದ್ದು, ಅವರ ಸಾವಿಗೆ ತಾವೇ ಕಾರಣರೆಂಬುವ ಅಳುಕು (Guilt) ಆರಂಭವಾಗುತ್ತದೆ. ತತ್ಪರಿಣಾಮವಾಗಿ ಇವರ ದುಃಖಪ್ರದರ್ಶನ ಅಸ್ವಾಭಾವಿಕವೂ, ಅಸಮಂಜಸವೂ ಆಗಿದ್ದು, ಇವರಿಗೆ ಸತ್ತವರ ನೆನಪು ಮಧುರಯಾತನೆಯಾಗುವ ಬದಲು ಕಾಡುವ ಪೀಡೆಯಾಗುತ್ತದೆ. ನಿಜವಾಗಿಯೂ ಇವರು ಸತ್ತವರ ನೆನಪನ್ನು ಮರೆಯಲು ಯತ್ನಿಸುತ್ತಾರೆ. ಹಾಗೆ ಮಾಡುವಾಗಲೆಲ್ಲಾ ಅವರ ಅಂತರಿಕ ಅಳುಕು ಹೊರಹೊಮ್ಮಿ ಮನಶ್ಶಾಂತಿ ಕದಡುತ್ತದೆ. ಈ ಯಾತನೆಯಿಂದ ಪಾರಾಗಲು ಇವರು ಕುಡಿತ, ನೃತ್ಯ, ಸಂಭೋಗವೇ ಮೊದಲಾದ ಮನರಂಜನೆಗಳಲ್ಲಿ ನಿರತರಾಗಬಹುದು. ಒಟ್ಟಿನಲ್ಲಿ ಇವರ ದುಃಖದ ಹಿನ್ನೆಲೆಯಲ್ಲಿ ಕಳಂಕ ಭಾವನೆಯೊಂದಿದ್ದು, ವರ್ತನೆಯೆಲ್ಲಾ ಈ ಕಳಂಕದ ಹೊರೆಯನ್ನು ಕಡಮೆ ಮಾಡಿಕೊಳ್ಳುವುದರಲ್ಲೇ ಕಳೆಯುತ್ತಿರುತ್ತದೆ.

ಪತಿವಿಯೋಗ ಮತ್ತು ದುಃಖ

ದುಃಖಗಳಲ್ಲೆಲ್ಲಾ ಪತಿವಿಯೋಗದ ದುಃಖ ಅತಿ ದಾರುಣವಾದುದೆಂಬುದು ಎಲ್ಲರಿಗೂ ತಿಳಿದ ವಿಷಯ. ಮನೋವಿಜ್ಞಾನಿಗಳು ಈ ವಿಚಾರವಾಗಿ ಹಲವು

ಸಂಶೋಧನೆಗಳನ್ನು ನಡೆಸಿದ್ದಾರೆ. ಇಲ್ಲಿ ಕೂಡ ದುಃಖದ ಸ್ವರೂಪ ವ್ಯಕ್ತಿಯ ಮನಸ್ವಾಸ್ಥ್ಯದ ಮಟ್ಟವನ್ನನುಸರಿಸಿರುತ್ತದೆಂಬ ತೀರ್ಮಾನಕ್ಕೆ ಸಾಕ್ಷ್ಯಗಳು ದೊರಕಿವೆ. ಅಸ್ವಸ್ಥ ವಿಧವೆಯರು ಕೂಡ ಸತ್ತ ಗಂಡನ ನೆನಪಿನಿಂದ ತಪ್ಪಿಸಿಕೊಳ್ಳಲು ಹಲವಾರು ಮನೋವ್ಯಾಪಾರಗಳಲ್ಲಿ ತೊಡಗುವುದು ಕಂಡುಬಂದಿದೆ.

ಪತಿ ಅಥವಾ ಪತ್ನಿ ವಿಯೋಗವಾದಾಗ ಕಂಡು ಬಂದ ಆಶ್ಚರ್ಯಕರವಾದ ಪ್ರತಿಕ್ರಿಯೆ ಲೈಂಗಿಕ ಸ್ವೇಚ್ಛಾಚಾರ. ಇದು ಮೇಲ್ನೋಟಕ್ಕೆ ಅಸಹಜ ಮತ್ತು ಸಂಬಲನರ್ಹವಾಗಿ ಕಂಡುಬಂದರೂ, ಹಲವರಲ್ಲಿ ಇಂಥ ವರ್ತನೆ ಇರುವುದನ್ನು ಮನೋವಿಜ್ಞಾನಿಗಳು ಸಮರ್ಥಿಸುತ್ತಾರೆ. ಆದರೆ ಈ ರೀತಿಯ ನೈತಿಕ ಅಧಃಪತನ ಗುಟ್ಟಾಗಿ ನಡೆಯುವುದರಿಂದ ಇದು ಸಂಶೋಧನೆಗೆ ನಿಲುಕದ ವಸ್ತುವಾಗಿದ್ದು ಇದರ ವಿಚಾರವಾಗಿ ನಿರ್ಣಯಾತ್ಮಕ ತೀರ್ಮಾನಕ್ಕೆ ಬರುವುದು ಸಾಧ್ಯವಾಗಿಲ್ಲ. ಇಲ್ಲಿ ದೊರೆತಿರುವ ಆಧಾರಗಳೆಲ್ಲವೂ ವೈಯಕ್ತಿಕ ಅನುಸಂಧಾನ (Case study) ಪದ್ಧತಿಯಲ್ಲಿ ಕಲೆಹಾಕಿದವು. ಇಂಥವರಲ್ಲಿ ಹೆಚ್ಚು ಜನ ಈ ಕಾರ್ಯದಲ್ಲಿ ತಮ್ಮ ಜೀವನದಲ್ಲಿ ಮೊದಲ ಬಾರಿಗೆ ತೊಡಗುತ್ತಿರುತ್ತಾರೆ. ಇದು ಕೇವಲ ಪ್ರೇಮರಹಿತ ಲೈಂಗಿಕ ಕ್ರಿಯೆ. ಈ ಕಾರ್ಯವನ್ನು ಅವರು ಒಂದು ವಿಧವಾದ ಮಾನಸಿಕ ಮರೆಗುಳಿಗೆ (Psychological narcotics) ಗಳಂತೆ ಉಪಯೋಗಿಸಿಕೊಳ್ಳುತ್ತಾರೆ. ಕೆಲವರಿಗೆ ಈ ಲೈಂಗಿಕ ಸ್ವೇಚ್ಛಾಚಾರ ಕಳೆದುಕೊಂಡವರನ್ನು ಮತ್ತೆ ಪಡೆಯುವ ಒಂದು ಸಾಂಕೇತಿಕ (Symbolical) ಪ್ರಯತ್ನವಾಗಿರುತ್ತದೆ. ಉದಾಹರಣೆಗೆ ಪತ್ನಿಯನ್ನು ಕಳೆದುಕೊಂಡ ವ್ಯಕ್ತಿ ಅವಳನ್ನು ಮತ್ತೆ ಪಡೆಯುವ ಸುಪ್ತಾಕಾಂಕ್ಷೆಯಿಂದ ಬೇರೊಂದು ಹೆಣ್ಣಿನ ಸಹವಾಸ ಮಾಡುತ್ತಾನೆಂದುಕೊಳ್ಳೋಣ, ಆದರೆ ಅವನಿಗೆ ಅಲ್ಲಿ ಪತ್ನೀಪ್ರೇಮ ದೊರಕುವುದಿಲ್ಲ. ಆಗ ಬೇರೊಬ್ಬಳೆಡೆಗೆ ಹೋಗುತ್ತಾನೆ. ಅಲ್ಲೂ ಅವನಿಗೆ ಬೇಕಾದ್ದು ದೊರಕುವುದಿಲ್ಲ. ಆಗ ಮತ್ತೊಬ್ಬಳು, ಮಗುದೊಬ್ಬಳು. ಹೀಗೆ ಮುಂದುವರಿಯುತ್ತದೆ ಈ ಅನಾಗರಿಕಕ್ರಿಯೆ. ಸ್ವಾರಸ್ಯದ ವಿಷಯವೆಂದರೆ, ಈ ಅವ್ಯವಸ್ಥಿತ ವ್ಯವಹಾರದಲ್ಲಿದ್ದಾಗ ಅವನಿಗೆ ಅನುಕೂಲಳಾದವಳೊಬ್ಬಳು ದೊರಕಿ, ಅವಳೊಡನೆ ಅವನು ವಾಸ್ತವಿಕ ಜೀವನವನ್ನು ಪುನರಾರಂಭಿಸಬಹುದು.

ವಿಧವೆಯರೂ ಇಂಥಾ ಸ್ವೇಚ್ಛಾಚಾರದಲ್ಲಿ ತೊಡಗಬಹುದಾದರೂ. ಅದು ಗಂಡಸರಷ್ಟು ಬಹಿರಂಗ ವರ್ತನೆಯಾಗಿರುವುದಿಲ್ಲ. ಇವರು ಕೂಡ ಶೋಕತಪ್ತರಾಗಿ, ಭಾವದ ಸಮತೋಲ ತಪ್ಪಿದಾಗ ಇಂಥಾ ವರ್ತನಾವಿಕಾರಕ್ಕೊಳಗಾಗುವುದು ತಿಳಿದು ಬಂದಿದೆ. ಇಂತಹ ಒಂದು ಅನುಭವವನ್ನು ಡಿಲಾನ್ ಥಾಮಸ್‌ನ ಪತ್ನಿ ಕೈಟಾಲಿನ್ ಥಾಮಸ್ ತನ್ನ ಆತ್ಮ ಚರಿತ್ರೆಯಲ್ಲಿ ಬರೆದಿದ್ದಾಳೆ. ಅವಳು ಗಂಡ ತೀರಿಕೊಂಡ ಮೇಲೆ ಲೈಂಗಿಕ ಸ್ವೇಚ್ಛಾಚಾರದಲ್ಲಿ ತೊಡಗಿದಳೆಂದೂ. ತಾನು ಹಾಗೆ

ಮಾಡಿದುದು ಸಮಾಜ ವಿಧವೆಯರ ಮೇಲೆ ಹೇರಿರುವ ಕಟ್ಟುಪಾಡುಗಳ ವಿರುದ್ಧ ಪ್ರತಿಭಟಿಸಲೋಸುಗವೆಂದೂ ಹೇಳಿಕೊಂಡಿದ್ದಾಳೆ.

ಫ್ರಾಯ್ಡನ ದೃಷ್ಟಿಯಲ್ಲಿ ದುಃಖ

ಸಿಗ್ಮಂಡ್ ಫ್ರಾಯ್ಡನ ಪ್ರಕಾರ ದುಃಖ ಒಂದು ನೆನಪರಿಕೆ ಕಾರ್ಯ: ವೈಯಕ್ತಿಕ ದುರಂತದಿಂದಾಗಿ ಕಳೆದುಕೊಂಡ ಮಾನಸಿಕ ಸಮತೋಲನವನ್ನು ಮರಳಿಪಡೆಯಲು ಅನುವಾಗುವ ಒಂದು ಪ್ರಕ್ರಿಯೆ. ವಿಯೋಗಕ್ಕೊಳಗಾದ ವ್ಯಕ್ತಿ ಗತಿಸಿದವರ ಜತೆ ತಾನು ಕಳೆದ ರಸನಿಮಿಷಗಳನ್ನು ನೆನಪಿಸಿಕೊಳ್ಳುತ್ತಾ, ಗತಕಾಲದ ಶ್ರೀಮಂತಿಕೆಯನ್ನು ಇಂದಿನ ಶೂನ್ಯದೊಂದಿಗೆ ಹೋಲಿಸಿಕೊಂಡು ಪ್ರಲಾಪಿಸುತ್ತಾನೆ. ಈ ವೇದನಾತ್ಮಕ ನೆನವರಿಕೆಯನ್ನು ಫ್ರಾಯ್ಡ್ ಶೋಕಾಚರಣೆ (Work of mourning) ಎಂದು ಕರೆದು ಅದು ವಾಸ್ತವಿಕ ಸ್ಥಿತಿಯನ್ನು ಅರಿತುಕೊಂಡು, ಬದಲಾದ ವಾತಾವರಣಕ್ಕೆ ಹೊಂದಿಕೊಳ್ಳಲು ವ್ಯಕ್ತಿಗೆ ಸಹಾಯಕವಾಗುತ್ತದೆ ಎಂದು ಹೇಳಿದ್ದಾನೆ. ವಿಯೋಗವಾದಾಗ ವೈಯಕ್ತಿಕ ಸಮಂಜಸಕ್ಕೆ (Personal adjustment) ಶೋಕಾಚರಣೆ ಬಹಳ ಅವಶ್ಯಕವೆಂಬುದು ಫ್ರಾಯ್ಡನ ಅಭಿಪ್ರಾಯ.

ದುಃಖಕ್ಕೊಳಗಾದ ವ್ಯಕ್ತಿಯಲ್ಲಿ ಹಲವು ಮನೋವ್ಯಾಪಾರಗಳು ನಡೆಯುತ್ತಿದ್ದು ಇವನ್ನು ಫ್ರಾಯ್ಡ್ ಪರಿಪೂರಣಾತ್ಮಕ ತಂತ್ರಗಳೆಂದು (Compensatory mechanisms) ಕರೆದಿದ್ದಾನೆ. ಈ ತಂತ್ರಗಳಲ್ಲಿ ಮುಖ್ಯವಾದುದು ಅಪ್ರಜ್ಞಾತ್ಮಕ ತಾದಾತ್ಮ್ಯತೆ (Unconscious identification). ಅಂದರೆ ವಿಯೋಗಕ್ಕೊಳಗಾದ ವ್ಯಕ್ತಿ ತನಗರಿವಿಲ್ಲದಂತೆ ಸತ್ತವರ ನಡೆನುಡಿಗಳನ್ನು ಅನುಕರಣ ಮಾಡುತ್ತಾನೆ. ಉದಾಹರಣೆಗೆ ತಂದೆಯನ್ನು ಕಳೆದುಕೊಂಡ ಮಗ ತನ್ನ ನಡೆನುಡಿಗಳಲ್ಲಿ, ವೇಷಭೂಷಣಗಳಲ್ಲಿ ತನ್ನ ತಂದೆಯನ್ನು ಅನುಕರಿಸಬಹುದು. ತಂದೆಯಂತೆ ಕೋಟು ಪೇಟ ಧರಿಸಿ ಗಡ್ಡ ಮೀಸೆ ಬಿಡಬಹುದು. ತಂದೆ ಪ್ರತಿಪಾದಿಸುತ್ತಿದ್ದ ನ್ಯಾಯ ನೀತಿಗಳನ್ನು, ಧ್ಯೇಯಾದರ್ಶಗಳನ್ನು ಅನುಸರಣೆಗೆ ತರಲು ಯತ್ನಿಸಬಹುದು. ಅಷ್ಟೇ ಅಲ್ಲದೆ, ತಂದೆ ಜೀವಂತವಿದ್ದಾಗ ಯಾವ ವಿಷಯಗಳನ್ನು ತಾನು ವಿರೋಧಿಸುತ್ತಿದ್ದನೋ ಅದೇ ವಿಚಾರಗಳನ್ನು ಈಗ ತಾನೇ ಪ್ರತಿಪಾದಿಸಲು ಆರಂಭಿಸಬಹುದು. ಇದರಿಂದಾಗಿ ಸಂಸಾರದ ಇತರರೊಡನೆ ಘರ್ಷಣೆಗೊಳಗಾಗಬಹುದು. ಈ ವರ್ತನೆಯನ್ನು ಫ್ರಾಯ್ಡ್ ವಿಲಂಬಿತ ವಿಧೇಯತೆ (Postponed obedience) ಎಂದು ಕರೆದು, ಇದು ಸತ್ತ ವ್ಯಕ್ತಿಯ ನೆನಪನ್ನು ಜೀವಂತವಾಗಿ ಉಳಿಸಿಕೊಳ್ಳಲು ಮಾಡುವ ಅಪ್ರಜ್ಞಾತ್ಮಕ ಅನುಕರಣೆ (Unconscious imitation) ಎಂದಿದ್ದಾನೆ. ಸಾವಿನ ವಾಸ್ತವಿಕತೆಯನ್ನು ಒಪ್ಪಿಕೊಂಡು, ಬದಲಾದ ಪರಿಸ್ಥಿತಿಗೆ ಹೊಂದಿಕೊಳ್ಳುವಲ್ಲಿ ಶವಸಂಸ್ಕಾರ, ಉತ್ತರಕ್ರಿಯೆ ಮೊದಲಾದ ಧಾರ್ಮಿಕ ವಿಧಿಗಳೂ ಬಹಳ ನೆರವಾಗುತ್ತವೆಂಬುದು ಗಮನಿಸಬೇಕಾದ

ವಿಚಾರ. ದುಃಖ ನಿರ್ವಹಣೆಗೆ ಸಮಾಜ ನಿರ್ಮಿಸಿರುವ ಕಾರ್ಯಕ್ರಮಗಳೇ ಈ ಧಾರ್ಮಿಕ ವಿಧಿಗಳೆಂದರೆ ತಪ್ಪಲ್ಲ.

ಶೋಕಾಚರಣೆ ಮಾಡಲಾರದವನು ಬದಲಾದ ಸ್ಥಿತಿಗೆ ಹೊಂದಿಕೊಂಡಿಲ್ಲವೆಂದು ಫ್ರಾಯ್ಡ್ ಹೇಳುತ್ತಾನೆ. ಅಂತಹ ಮನುಷ್ಯ ಸತ್ತವರನ್ನು ಸತ್ತಿಲ್ಲವೆಂದು ಭಾವಿಸಿ, ಅಂತೆಯೇ ವರ್ತಿಸುತ್ತಾ, ಮನೋರಾಜ್ಯದಲ್ಲಿ ವಿಹರಿಸುತ್ತಿರುತ್ತಾನೆ. ಇದು ಮಾನಸಿಕ ಅಸ್ವಸ್ಥತೆಯ ಕುರುಹು. ಸ್ವಸ್ಥವ್ಯಕ್ತಿ ಶೋಕಾಚರಣೆಯಲ್ಲಿ ಪೂರ್ಣವಾಗಿ ಪಾಲ್ಗೊಳ್ಳುತ್ತಾನೆ. ಗತಿಸಿದವರಿಗೆ ಪ್ರಿಯವಾಗಿದ್ದ ಕಾರ್ಯಗಳಲ್ಲಿ ತೊಡಗುತ್ತಾನೆ. ಅವರು ಆರಂಭಿಸಿದ್ದ ಕಾರ್ಯಗಳನ್ನು ಪೂರ್ಣಗೊಳಿಸುತ್ತಾನೆ. ಈ ಕಾರ್ಯಗಳನ್ನು ಮಾಡುವುದರ ಮೂಲಕ ಸಾವಿಗೆ ಸವಾಲು ಹಾಕಿ, ಅದನ್ನು ಅರಗಿಸಿಕೊಳ್ಳುತ್ತಾನೆ. ಆದರೆ ಇದನ್ನೆಲ್ಲಾ ಅವನು ತನಗರಿವಿಲ್ಲದಂತೆ ಅಂದರೆ ಅಪ್ರಜ್ಞಾತ್ಮಕವಾಗಿ ಮಾಡುತ್ತಾನೆಂಬುದನ್ನು ಮರೆಯಬಾರದು.

ವಿರಹ ದುಃಖಕ್ಕೊಳಗಾದವರಲ್ಲಿ ಕಂಡುಬರುವ ಇನ್ನೊಂದು ಮನೋವ್ಯಾಪಾರ ದಿವಾಸ್ವಪ್ನ (Day dreaming). ಇವರು ಸಾಮಾನ್ಯವಾಗಿ ಕಲ್ಪನಾಲೋಕದಲ್ಲಿ ವಿಹರಿಸುವುದು ಕಂಡುಬಂದಿದೆ. ಈ ವರ್ತನೆ ಮಕ್ಕಳಲ್ಲಿ ಹೆಚ್ಚು. ಹಲವರಲ್ಲಿ ಈ ಕಲ್ಪನಾ ವಿಹಾರ ಸಾಹಿತ್ಯಸೃಷ್ಟಿಗೆ ಕಾರಣವಾಗಬಹುದು. ಡಾಂಟೆ, ರೂಸೊ, ಎಮಿಲಿ ಬ್ರಾಂಟೆ ಮುಂತಾದವರಿಗೆ ದುಃಖವೇ ಸೃಜನಾತ್ಮಕ ಸಾಹಿತ್ಯ ನಿರ್ಮಾಣಕ್ಕೆ ಪ್ರೇರಣೆಯಾಯಿತೆಂದು ಹೇಳಲು ಸಾಧ್ಯವಿದೆ. ಭಾರತದ ಆದಿಕವಿ ವಾಲ್ಮೀಕಿಗೆ ಅತೀವ ದುಃಖವಾದಾಗಲೇ ರಾಮಾಯಣ ಕಾವ್ಯವೃಕ್ಷ ಚಿಗುರೊಡೆಯಿತೆಂಬುದು ಸತ್ಯದೂರವೇನಲ್ಲ.

ದುಃಖದ ಇತರ ಪ್ರಕಾರಗಳು

ವಿರಹ ಅಥವಾ ವಿಯೋಗವಲ್ಲದೆ ಬೇರೆ ಕಾರಣಗಳೂ ಮನುಷ್ಯರನ್ನು ದುಃಖದ ಕಡಲಲ್ಲಿ ಮುಳುಗಿಸಬಹುದು. ಯಾವುದಾದರೂ ವ್ಯಕ್ತಿಗೆ ತಾನು ವಾಸಿಯಾಗಲಾರದ ರೋಗದಿಂದ ನರಳುತ್ತಿರುವುದು ತಿಳಿದು, ತನ್ನ ಸಾವು ಖಚಿತವೆನಿಸಿದಾಗ ಆಗುವ ದುಃಖವೇನು ಸಾಮಾನ್ಯವೇ? ಇಂತಹ ದುಃಖಿಗಳನ್ನು, ಅದರಲ್ಲೂ ಮುಖ್ಯವಾಗಿ ಕ್ಯಾನ್ಸರ್ ರೋಗಿಗಳನ್ನು ಮನೋವಿಜ್ಞಾನಿಗಳು ಅಭ್ಯಾಸಿಸಿದ್ದಾರೆ. ಈ ರೋಗಿಗಳು ತಮ್ಮ "ಚರಮಗೀತೆ" ಯನ್ನು ಮೊದಲು ಕೇಳಿದಾಗ ಬಹಳ ಉದ್ವೇಗಗೊಳ್ಳುತ್ತಾರೆ. ಕೇಳಿದ್ದನ್ನು ನಂಬುವುದಿಲ್ಲ, ಅದನ್ನು ನಿರಾಕರಿಸಲೂಬಹುದು. ಆದರೆ ಕೊಂಚಕಾಲದಲ್ಲಿ ಈ ಪ್ರತಿಭಟನೆ ಮುಗಿದು ಅವರು ವ್ಯಾಕುಲಚಿತ್ತರಾಗುತ್ತಾರೆ. ಕೆಲ ದಿನಗಳ ನಂತರ ವ್ಯಾಕುಲತೆ ಕಳೆದು ನಿರ್ಲಿಪ್ತತೆ ಉದಯಿಸುತ್ತದೆ. ಆಗ ಅವರು ವಾಸ್ತವ ಸತ್ಯವನ್ನು ಒಪ್ಪಿಕೊಂಡು ಉಳಿದಕಾಲವನ್ನು ಸದುಪಯೋಗ ಪಡಿಸಿಕೊಳ್ಳಲು ಯತ್ನಿಸುತ್ತಾರೆ.

ಭಾರಿ ಅನಾಹುತಗಳು ನಡೆದಾಗಲೂ ಮಾನವ ತೋರುವ ಭಾವಪ್ರದರ್ಶನವೂ ಮೇಲೆ ಹೇಳಿದ ರೀತಿಯಲ್ಲೇ ನಡೆಯುತ್ತದೆ. ದುರ್ವಾರ್ತೆಗಳು ಕೇಳಿಬಂದಾಗಲೂ ಶೋಕಾಚರಣೆ ಇದೇ ಹಾದಿಯಲ್ಲಿ ಹರಿಯುತ್ತದೆ. ಆದರೆ ಇಲ್ಲಿ ಒಂದು ಸ್ವಾರಸ್ಯಕರ ಪ್ರತಿಕ್ರಿಯೆ ಕಂಡುಬರುತ್ತದೆ. ಅದು ದುಃಖಿಯ ಕಣ್ಣುಗಳಲ್ಲಿ ಕಂಡುಬರುವ ಶೂನ್ಯ ನೋಟ, ಅದೊಂದು ತೆರನಾದ ಸ್ಥಿರದೃಷ್ಟಿ. ಜನರು ಪ್ರವಾಹ ಪೀಡಿತರಾದಾಗ, ಚಂಡಮಾರುತದ ಹೊಡೆತಕ್ಕೆ ಸಿಕ್ಕಿದಾಗ, ಬೆಂಕಿ ಅನಾಹುತಕ್ಕೊಳಗಾದಾಗ, ಬಾಂಬು ಸಿಡಿದು ಪಟ್ಟಣಗಳು ನಾಶವಾದಾಗ, ಜನನಾಯಕನೊಬ್ಬನ ಕೊಲೆಯಾದಾಗ ಇಂತಹ ಪ್ರತಿಕ್ರಿಯೆ ಕಂಡುಬರುವುದು ಸಾಮಾನ್ಯ. ಕೆನಡಿಯವರ ಕೊಲೆಯಾದ ದಿನ ಹಲವರ ಮುಖದಲ್ಲಿ ಈ ಅನಿರ್ದೇಶಿತ ಶೂನ್ಯದೃಷ್ಟಿಯಿದ್ದುದನ್ನು ವಿಜ್ಞಾನಿಗಳು ಚಿತ್ರಸಹಿತ ವಿವರಿಸಿದ್ದಾರೆ.

ಒಟ್ಟಿನಲ್ಲಿ ದುಃಖಕ್ಕೆ ಕಾರಣವೇನೇ ಇರಲಿ, ಅದು ಹರಿಯುವ ಹಾದಿ ಮಾತ್ರ ಮೂಲತಃ ಒಂದೇ ಆಗಿರುತ್ತದೆ. ಸಾಮಾನ್ಯವಾಗಿ ಅದು ನಾವು ಮೊದಲೇ ವಿವರಿಸಿದ ಮೂರು ಹಂತಗಳಲ್ಲಿ–ಪ್ರತಿಭಟನೆ, ವ್ಯಾಕುಲತೆ ಮತ್ತು ನಿರ್ಲಿಪ್ತತೆ–ಪ್ರವಹಿಸುತ್ತದೆ. ಅಂದರೆ ದುಃಖ ಪ್ರವಾಹಕ್ಕೆ ನಿರ್ದಿಷ್ಟವಾದ ಹಾದಿ ಇದೆ, ಅದಕ್ಕೊಂದು ಅರ್ಥವಿದೆ ಹಾಗೂ ಉದ್ದೇಶವಿದೆ ಎಂಬುದನ್ನು ಮನೋವಿಜ್ಞಾನ ತೋರಿಸಿಕೊಟ್ಟಿದೆ.

ಆಶೆಯೇ ದುಃಖದ ಮೂಲವೆಂದು ಹೇಳಿದ ಬುದ್ಧ ಅತಿ ಪ್ರಾಚೀನ ಮನೋವಿಜ್ಞಾನಿ. ಆಶೆ ಎಂಬುದು ಒಂದು ವಿಧವಾದ ನಿರೀಕ್ಷೆ ಹಾಗು ನಂಬಿಕೆಯನ್ನೊಳಗೊಂಡಿರುತ್ತದೆ. ಮಾನವನ ನಿರೀಕ್ಷೆ ಫಲಿಸದಾದಾಗ, ನಂಬಿಕೆ ಬುಡಮೇಲಾದಾಗ, ಆಶೆ ನಿರಾಶೆಯಾದಾಗ ಅವನು ತೋರುವ ಭಾವನಾತ್ಮಕ ಪ್ರತಿಕ್ರಿಯೆ ದುಃಖ. ವಿರಹ, ವಿಯೋಗ, ವಿಪತ್ತು ಹಾಗೂ ನಿರಾಶೆ ಸಾರ್ವಲೌಕಿಕ ಅನುಭವಗಳು. ಅಂದಮೇಲೆ ದುಃಖ ಅನಿವಾರ್ಯ. ಅದು ಅತಿಯಾದರೆ ವ್ಯಕ್ತಿತ್ವದಮೇಲೆ ದುಷ್ಪರಿಣಾಮ ಮಾಡಬಲ್ಲದು. ಆದುದರಿಂದ ವ್ಯಕ್ತಿಗಳಿಗೆ ದುಃಖವನ್ನು ನಿಯಂತ್ರಿಸಿಕೊಳ್ಳಲು ಒಂದು ವಿಧವಾದ ತರಬೇತಿ ಅವಶ್ಯಕವೆಂದು ಮನೋವಿಜ್ಞಾನ ಪ್ರತಿಪಾದಿಸುತ್ತದೆ. ದುಃಖದ ಮೂಲ ರೂಪವನ್ನು ವಿಶ್ಲೇಷಿಸಿ, ಅದರ ಅರ್ಥ ಮತ್ತು ಉದ್ದೇಶಗಳನ್ನು ಜನರಿಗೆ ತಿಳಿಸುವುದು ಈ ಹಾದಿಯಲ್ಲಿ ಮೊದಲ ಹೆಜ್ಜೆ ಎನ್ನುವುದು ಮನೋವಿಜ್ಞಾನಿಗಳ ನಂಬಿಕೆ.

ಆಧಾರ ಗ್ರಂಥ

JANIS, I. L., MAHL, G. F., KAGAN, J., and HOLT. R. R. *Personality: Dynamics, Development and Assessment.* New york, Harcourt Brace & World, 1969.


ಮೈಸೂರು ರಾಜ್ಯದ ನೀರು ಮತ್ತು ಮಣ್ಣಿನ ಸಂಪತ್ತು

ಬಿ. ವಿ. ವೆಂಕಟರಾವ್

ಆಹಾರ ಮತ್ತು ನೀರು ಮಾನವ ಜೀವನಕ್ಕೆ ಮೂಲ ಆಧಾರ. ಒಂದು ಪ್ರದೇಶದಲ್ಲಿ ಕೃಷಿ ಉನ್ನತ ಮಟ್ಟದಲ್ಲಿದ್ದರೆ, ನಮಗೆ ಬೇಕಾದ ಆಹಾರ, ಬಟ್ಟೆ ಮತ್ತಿತರ ಅಗತ್ಯ ವಸ್ತುಗಳು ಸಮೃದ್ಧಿಯಾಗಿ ಒದಗುತ್ತವೆ. ಸಂಪದ್ಭರಿತ ಕೃಷಿಗೆ ಆಧಾರ ಫಲವತ್ತಾದ ಮಣ್ಣು, ಸಾಕಷ್ಟು ನೀರಿನ ಆಸರೆ. ನಾವು ಪುರಾತನ ಸಂಸ್ಕೃತಿಗಳನ್ನು ಪರಿಶೀಲಿಸಿದಾಗ, ಅವು ನದಿ ಬಯಲುಗಳಲ್ಲಿ, ಫಲವತ್ತಾದ ಮೆಕ್ಕಲು ಮಣ್ಣು ಮತ್ತು ನದಿ ನೀರಿನ ಸೌಲಭ್ಯಗಳನ್ನವಲಂಬಿಸಿ ಅಸ್ತಿತ್ವದಲ್ಲಿದ್ದುದು ಕಂಡು ಬರುತ್ತದೆ. ಪುರಾತನ ಹಿಂದೂ ಸಂಸ್ಕೃತಿ, ಗಂಗಾ-ಯಮುನಾ-ಸಿಂಧೂ ನದಿಬಯಲುಗಳಲ್ಲಿ ಇದ್ದು, ಬೆಳೆದು ಉನ್ನತಿಯನ್ನು ಹೊಂದಿತ್ತು; ಪುರಾತನ ಈಜಿಪ್ಟ್ ಸಂಸ್ಕೃತಿಗೆ ಆಧಾರ ನೈಲುನದಿ ಬಯಲಿನ ಫಲವತ್ತಾದ ಭೂಮಿಗಳು. ಇವತ್ತಿಗೂ ಕೂಡ ಗಂಗಾ, ಕೃಷ್ಣಾ, ಗೋದಾವರಿ ಕಾವೇರಿ ಈ ನದಿಗಳ ಮೆಕ್ಕಲು ಭೂಮಿಗಳಲ್ಲಿ ಬರುವ ಇಳುವರಿಯನ್ನು ಬೇರೆ ಕಡೆಗಳಲ್ಲಿ ತೆಗೆಯಬೇಕಾದರೆ ಹೆಚ್ಚು ಶ್ರಮ ವಹಿಸಬೇಕಾಗುತ್ತದೆ.

ಭೌಗೋಳಿಕವಾಗಿ ಮೈಸೂರುರಾಜ್ಯ ದಕ್ಷಿಣ ಭಾರತ ಪರ್ಯಾಯ ದ್ವೀಪದ ಕೇಂದ್ರ ಪಶ್ಚಿಮಾರ್ಧ. ಉತ್ತರದಿಂದ ದಕ್ಷಿಣಕ್ಕೆ ಸುಮಾರು ಇನ್ನೂರು ಮೈಲಿ ಉದ್ದದ ಅರಬ್ಬಿ ಸಮುದ್ರದ ತೀರ ಪ್ರದೇಶ ಇದೆ. ರಾಜ್ಯದ ವಿಸ್ತೀರ್ಣ 74,861 ಚದುರ ಮೈಲಿ ಅಥವಾ ಸುಮಾರು 470 ಲಕ್ಷ ಎಕರೆಗಳು. 30-40 ಮೈಲಿ ತೀರ ಪ್ರದೇಶವನ್ನು ಬಿಟ್ಟು, ಉತ್ತರದಿಂದ ದಕ್ಷಿಣಕ್ಕೆ ಪಶ್ಚಿಮ ಘಟ್ಟಗಳು ಮತ್ತು ಕೆಲವೆಡೆ 5000 ಅಡಿ ಎತ್ತರವಿರುವ ಮಲೆನಾಡು ಪರ್ವತ ಶ್ರೇಣಿ ಇದೆ. ಪರ್ವತಶ್ರೇಣಿಗಳಿಂದ ಪೂರ್ವಾಭಿಮುಖವಾದ ಇಳಿಜಾರಿದ್ದು, ರಾಜ್ಯದ ವಿಸ್ತೀರ್ಣವೆಲ್ಲ ಸಮುದ್ರ ಮಟ್ಟದಿಂದ 2000 ದಿಂದ 3000 ಅಡಿ ಎತ್ತರವಿರುವ ಪ್ರಸ್ಥಭೂಮಿ. ನದಿಗಳೆಲ್ಲಾ ಈ ಪರ್ವತ ಶ್ರೇಣಿಗಳಲ್ಲಿ ಹುಟ್ಟಿ ಪೂರ್ವ ಇಲ್ಲವೆ ಪಶ್ಚಿಮಾಭಿಮುಖವಾಗಿ ಹರಿಯುತ್ತವೆ.

ಮಳೆ: ಮೈಸೂರು ರಾಜ್ಯ ಹಿಂಗಾರು ಮತ್ತು ಮುಂಗಾರು ಮಳೆಗಳ ಪ್ರಭಾವಕ್ಕೆ ಒಳಗಾಗಿದೆ. ರಾಜ್ಯದ ಮೇಲೆ ಬೀಳುವ ಬಹುಭಾಗ ಮಳೆ ಹಿಂದೂ ಮಹಾಸಾಗರದಲ್ಲಿ ಉದ್ಭವವಾಗುವ ನೈರುತ್ಯ ಮಾರುತದಿಂದ ಜೂನ್-ಅಕ್ಟೋಬರ್ ತಿಂಗಳಲ್ಲಿ ಬರುತ್ತದೆ. ಉತ್ತರ ಮೈಸೂರಿನಲ್ಲಿ ಕೆಲಮಟ್ಟಿನ ಮಳೆ ಬಂಗಾಳಾ ಕೊಲ್ಲಿಯಿಂದ ಬರುವ ಆಗ್ನೇಯ ಮಾರುತದಿಂದ ಉಂಟಾಗುತ್ತದೆ.



ಚಿತ್ರ 1. ಮೈಸೂರಿನ ವಿವಿಧ ಭಾಗಗಳಲ್ಲಿ ಮಳೆ

ಪಶ್ಚಿಮ ತೀರಪ್ರದೇಶದಲ್ಲಿ. ವರ್ಷಕ್ಕೆ 150 ರಿಂದ 200 ಅಂಗುಲ ಮಳೆ ಬೀಳುತ್ತದೆ (ಚಿತ್ರ 1). ಪಶ್ಚಿಮ ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ಮಳೆ ಪ್ರಮಾಣ 60 ರಿಂದ 150 ಅಂಗುಲ: ಆಗುಂಬೆಯಂಥ ಕೆಲವು ಜಾಗಗಳಲ್ಲಿ ಸುರಿಯುವ ಮಳೆ 350 ಅಂಗುಲಕ್ಕೂ ಹೆಚ್ಚು. ಪರ್ವತ ಶ್ರೇಣಿಗಳ ಪೂರ್ವ ಇಳಿಜಾರಿನಲ್ಲಿ ಉತ್ತರದಿಂದ ದಕ್ಷಿಣಕ್ಕೆ ಉದ್ದಕ್ಕೂ ಇರುವ ಕಿರಿದಾದ ಅರೆಮಲೆನಾಡು ಪ್ರದೇಶದಲ್ಲಿನ ಮಳೆ ಪ್ರಮಾಣ 35 ರಿಂದ 60 ಅಂಗುಲ. ರಾಜ್ಯದ ಉತ್ತರ ಭಾಗ. ಅಂದರೆ ಬಿಜಾಪುರ. ಗುಲ್ಬರ್ಗ, ರಾಯಚೂರು. ಬಳ್ಳಾರಿ ಜಿಲ್ಲೆಗಳು. ಚಿತ್ರದುರ್ಗ ಜಿಲ್ಲೆಯ ಈಶಾನ್ಯ ಭಾಗ. ಧಾರವಾಡ ಬೆಳಗಾಂ ಜಿಲ್ಲೆಗಳ ಪೂರ್ವಾರ್ಧ – ಇಲ್ಲಿ ಮಳೆ 20-25 ಅಂಗುಲಗಳಿಗೂ

ಕಡಿಮೆ. ಇವೆಲ್ಲಾ ಹಿಂಗಾರು ಪ್ರದೇಶಗಳು. ಚಿಕ್ಕಮಗಳೂರು ಹಾಸನ ಜಿಲ್ಲೆಗಳ ಪೂರ್ವಭಾಗ, ತುಮಕೂರು ಜಿಲ್ಲೆಯ ಪಶ್ಚಿಮ ಭಾಗ, ಚಿತ್ರದುರ್ಗ ಜಿಲ್ಲೆಯ ದಕ್ಷಿಣ ಭಾಗ, ಮಂಡ್ಯ ಜಿಲ್ಲೆಯ ಬಹುಭಾಗ, ಕೋಲಾರ ಜಿಲ್ಲೆಯ ಪೂರ್ವಭಾಗ–ಇಲ್ಲಿ ಮಳೆ 20–25 ಅಂಗುಲ. ಅನೇಕ ಕಡೆ 15–20 ಅಂಗುಲ ಸಹ ಸಾಮಾನ್ಯ. ತುಮಕೂರು ಜಿಲ್ಲೆಯ ಈಶಾನ್ಯ ಭಾಗ, ಕೋಲಾರ ಜಿಲ್ಲೆಯ ಪಶ್ಚಿಮ ಭಾಗ, ಬೆಂಗಳೂರು ಜಿಲ್ಲೆ ಮೈಸೂರು ಜಿಲ್ಲೆ – ಇಲ್ಲಿನ ಮಳೆ 25–35 ಅಂಗುಲ.

ಈ ಅಂಕಿ ಅಂಶಗಳ ಪರಿಶೀಲನೆಯಿಂದ. ರಾಜ್ಯದ ವಿಸ್ತೀರ್ಣದ ಶೇಕಡಾ 12 ರಷ್ಟಿರುವ ಅರೆಮಲೆನಾಡಿನ ಪ್ರದೇಶದಲ್ಲಿ ಮಾತ್ರ ಮಳೆ ಪ್ರಮಾಣ ಬೇಸಾಯಕ್ಕೆ ಅನುಕೂಲವಾಗಿದೆ ಎಂಬ ಅಂಶ ವೇದ್ಯವಾಗುತ್ತದೆ. ತೀರಪ್ರದೇಶ ಮತ್ತು ಕರಾವಳಿ ಮತ್ತು ಮಲೆನಾಡಿನಲ್ಲಿ ಅತಿವೃಷ್ಟಿ: ಉಳಿದ 70 ಭಾಗದಲ್ಲಿ ಅನಾವೃಷ್ಟಿ ಸಾಮಾನ್ಯ ಅನುಭವ. ತತ್ಫಲವಾಗಿ ಈ ಪ್ರದೇಶಗಳಲ್ಲಿ ಬೆಳೆ ನಷ್ಟವಾಗಿ 4-5 ವರ್ಷಗಳಿಗೊಮ್ಮೆ ಕ್ಷಾಮ ತಪ್ಪಿದ್ದಲ್ಲ. ರಾಜ್ಯದಲ್ಲಿ ಬೀಳುವ ಮಳೆಯ ಶೇಕಡಾ 70ಕ್ಕೂ ಹೆಚ್ಚು ಭಾಗ ಸುಮಾರು ಶೇಕಡಾ 17 ರಷ್ಟು ವಿಸ್ತೀರ್ಣದ ತೀರ ಪ್ರದೇಶ. ಪಶ್ಚಿಮ ಘಟ್ಟಗಳು ಮತ್ತು ಮಲೆನಾಡು ಭಾಗಗಳಲ್ಲಿ ಬೀಳುತ್ತದೆ. ಹೀಗೆ ಬಿದ್ದು, ಹರಿದು ಹೋಗುವ ಮಳೆ ನೀರಿನ ಪ್ರಮಾಣ 1600 ಸಾವಿರ ಮಿಲಿಯನ್ ಘನ ಅಡಿ ಎಂದು ಅಂದಾಜು ಮಾಡಲಾಗಿದೆ. ಇದರಲ್ಲಿ ಕೆಲವು ಭಾಗ ಪೂರ್ವಾಭಿಮುಖವಾಗಿ ಹರಿಯುವ ಕಾವೇರಿ, ಅದರ ಉಪನದಿಗಳು ಮತ್ತು ಕೃಷ್ಣಾ. ಅದರ ಉಪನದಿಗಳ ಮೂಲಕ ಹರಿದು ಬರುತ್ತದೆ. ಉಳಿದೆಲ್ಲಾ ನೀರು ಅರಬ್ಬಿ ಸಮುದ್ರಕ್ಕೆ ಕೊಚ್ಚಿಹೋಗುತ್ತದೆ. ಇದರಿಂದ ತೀರ ಪ್ರದೇಶಗಳಲ್ಲಿ ಪ್ರವಾಹದ ಹಾವಳಿ ಸರ್ವೇಸಾಮಾನ್ಯ.

ನೀರಾವರಿ ಸೌಕರ್ಯ: ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ರಾಜ್ಯದ ಸಾಗುವಳಿ ಜಮೀನಿನ ಶೇಕಡಾ 9.7 ರಷ್ಟು ಅಂದರೆ ಸುಮಾರು 24 ಲಕ್ಷ ಎಕರೆಗಳಿಗೆ ನೀರಾವರಿ ಸೌಕರ್ಯ ಇದ್ದಿತು. ಇದು 1969–70 ರಲ್ಲಿ. ಶೇಕಡಾ 15.0. ಅಂದರೆ 35 ಲಕ್ಷ ಎಕರೆಗಳಷ್ಟಕ್ಕೆ ಹೆಚ್ಚಿದೆ ಎಂದು ಅಂಕಿ ಅಂಶಗಳಿಂದ ತಿಳಿದುಬಂದಿದೆ. ಇದರಲ್ಲಿ, 14 ಲಕ್ಷ ಎಕರೆ ನಾಲೆ ಆಸರೆಯಲ್ಲಿ, 12 ಲಕ್ಷ ಎಕರೆ ಕೆರೆ-ಅಚ್ಚುಕಟ್ಟುಗಳಲ್ಲಿ ಮತ್ತು 9 ಲಕ್ಷ ಎಕರೆ ಬಾವಿ ಆಸರೆಯಲ್ಲಿವೆ ಎಂದು ಸಹ ಗೊತ್ತಾಗಿದೆ. ಜಲಾಶಯ ಕೆರೆ ಬಾವಿ ಮುಂತಾದವುಗಳ ನಿರ್ಮಾಣಕಾರ್ಯ ಇದೇ ಗತಿಯಲ್ಲಿ ಸಾಗಿದರೆ ಇನ್ನು 10–20 ವರ್ಷಗಳಲ್ಲಿ 70–75 ಲಕ್ಷ ಎಕರೆಗಳಿಗೆ ನೀರಾವರಿ ಸೌಕರ್ಯ ಒದಗಬಹುದು. ಉಳಿದ ಭಾಗಗಳಲ್ಲಿ ಬೇಸಾಯಕ್ಕೆ ಮಳೆಯೇ ಗತಿ.

ಮಣ್ಣುಗಳು: ರಾಜ್ಯದ ಮಣ್ಣುಗಳನ್ನು ಮುಖ್ಯವಾಗಿ ಕಪ್ಪುಮಣ್ಣು, ಕೆಂಪು ಮಣ್ಣು ಮತ್ತು ಜಂಬಿಟ್ಟಿಗೆಮಣ್ಣು ಎಂದು ವರ್ಗೀಕರಿಸಬಹುದು (ಚಿತ್ರ 2). ಕಪ್ಪು

ಅಥವಾ ಎರೇ ಮಣ್ಣು ಚಿತ್ರದುರ್ಗ, ಬಳ್ಳಾರಿ, ರಾಯಚೂರು, ಗುಲ್ಬರ್ಗ, ಬೀದರ, ಬೆಳಗಾಂ, ಬಿಜಾಪೂರ, ಧಾರವಾಡ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಇರುವುದು ಕಂಡುಬರು



ಚಿತ್ರ 2. ಮೈಸೂರು ರಾಜ್ಯದ ಮಣ್ಣುಗಳು

ತ್ತದೆ. ಈ ಮಣ್ಣುಗಳಲ್ಲಿ ಸುಣ್ಣದ ಅಂಶ ಹೆಚ್ಚು. ಪಿಹೆಚ್ ಅಥವಾ ರಸಸಾರಸ್ಥಿತಿ. ಕ್ಷಾರಗತಿ. ಜೇಡಿ ಅಂಶ ಹಾಗೆಯೇ ಮಣ್ಣಿನ ಆಳವೂ ಕೂಡ ಅಲ್ಲದೆ ನೀರು ಉಳಿಸಿ ಕೊಳ್ಳುವ ಸಾಮರ್ಥ್ಯವೂ ಸಹ ಹೆಚ್ಚು. ಬಿದ್ದ ಸ್ವಲ್ಪ ಮಳೆ ಅಂದರೆ 10–20 ಅಂಗುಲ ಗಳ ಆಧಾರದ ಮೇಲೆಯೇ ಉತ್ತಮ ಬೆಳೆ ತೆಗೆಯಬಹುದು. ಎರೆಯನ್ನು ನಯ-

ಮೊರೆಯನ್ನು ಸಂಬು ಎನ್ನುವ ಗಾದೆಗೆ ಅನುಗುಣವಾಗಿ ಕಪ್ಪುಬಣ್ಣವಿರುವ ಮಣ್ಣುಗಳು ಉತ್ಕೃಷ್ಟವಾದ ಫಲವತ್ತಾದ ಮಣ್ಣುಗಳು. ಜೋಳ, ಹತ್ತಿ, ಶೇಂಗಾ ಮತ್ತಿತರ ಅನೇಕ ಬೆಳೆಗಳು ಈ ಭಾಗದ ಬೇಸಾಯದ ವೈಶಿಷ್ಟ್ಯ.

ಕೆಂಪು ಮಣ್ಣುಗಳ ಗುಂಪಿನಲ್ಲಿ, ಕೆಂಪುಗೋಡು, ಕೆಂಪು ಮರಳುಮಣ್ಣು, ತೀರ ಪ್ರದೇಶದಲ್ಲಿರುವ ಮರಳು, ಮೆಕ್ಕಲುಮಣ್ಣುಗಳನ್ನು ಸೇರಿಸಬಹುದು. ರಾಜ್ಯದ ಮಣ್ಣುಗಳಲ್ಲಿ ಇದೇ ಪ್ರಧಾನವಾದ ಗುಂಪು. ಬೆಂಗಳೂರು, ಕೋಲಾರ, ತುಮಕೂರು, ಮಂಡ್ಯ, ಮೈಸೂರು, ಕೊಡಗು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಧಾರವಾಡ, ಬೆಳಗಾಂ, ಗುಲ್ಬರ್ಗ, ಬೀದರ – ಇಲ್ಲೆಲ್ಲಾ ವ್ಯಾಪಕವಾಗಿದೆ. ಹಾಗೆಯೇ ಧಾರವಾಡ, ರಾಯಚೂರು, ಬಳ್ಳಾರಿ ಜಿಲ್ಲೆಗಳಲ್ಲಿ ಕೆಂಪು ಮತ್ತು ಕಪ್ಪು ಮಣ್ಣುಗಳು ಅಕ್ಕಪಕ್ಕದಲ್ಲಿ ವಿಶಾಲ ಭಾಗಗಳಲ್ಲಿ ಅಸ್ತಿತ್ವದಲ್ಲಿರುವುದು ಸಾಮಾನ್ಯ. ಕೆಂಪು ಭೂಮಿಗಳಲ್ಲಿ ಜೇಡಿ ಅಂಶ ಕಡಿಮೆ; ಮರಳು ಹೆಚ್ಚು ಮತ್ತು ಇವುಗಳಲ್ಲಿ ಸುಣ್ಣ ಇರುವುದು ಅಪರೂಪ. ಈ ಮಣ್ಣುಗಳ ಪಿಹೆಚ್ ಸಮಘಾತು ಇಲ್ಲವೇ ಹುಳಿಮುಖ. ನೀರು ಉಳಿಸಿಕೊಳ್ಳುವ ಶಕ್ತಿ ತೀರ ಕನಿಷ್ಟ. ಈ ಕಾರಣದಿಂದ ಬೆಳೆಕಾಲದಲ್ಲಿ ಕ್ಷಿಪ್ರ ಅಂತರದಲ್ಲಿ ಮಳೆ ಬೀಳದಿದ್ದರೆ, ಪೈರು ನೀರಿನ ಕೊರತೆಯಿಂದ ಹಾನಿಹೊಂದುತ್ತದೆ. ಈ ಮಣ್ಣುಗಳಲ್ಲಿ ಹೆಚ್ಚಿನ ಮಟ್ಟದ ಲಾಗೋಡು ಹಾಕಿ, ಗೊಬ್ಬರ ಮತ್ತು ನೀರಿನ ಆಸರೆ ಒದಗಿಸದಿದ್ದರೆ ಬೇಸಾಯ ಹಸನಾಗುವುದಿಲ್ಲ. ಸಾಮಾನ್ಯವಾಗಿ ಕೆಂಪುಮಣ್ಣು ಪ್ರದೇಶದಲ್ಲಿ ಹವಾಗುಣ ಹಿತಕರವಾಗಿರುವುದರಿಂದ ನೀರಾವರಿಯಿಂದ ಯಾವ ಬೆಳೆಯನ್ನು ಬೇಕಾದರೂ ತೆಗೆಯುವುದು ಸಾಧ್ಯ. ಜಂಬಿಟ್ಟಿಗೆ ಮಣ್ಣುಗಳು ಹೆಚ್ಚು ಮಳೆ ಬೀಳುವ ಕರಾವಳಿ ಮತ್ತು ಪಶ್ಚಿಮ ಘಟ್ಟ ಮತ್ತು ತೀರಪ್ರದೇಶಗಳಲ್ಲಿ ಇರುವುದು ಕಂಡುಬರುತ್ತದೆ. ಕೊಡಗು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಜಂಬಿಟ್ಟಿಗೆ ಮಣ್ಣು ಹೆಚ್ಚಾಗಿದೆ. ಇಲ್ಲಿ ಮಳೆ 100 ರಿಂದ 300 ಅಂಗುಲಗಳಷ್ಟಿರುವುದರಿಂದ ಮುಖ್ಯವಾಗಿ ಮಳೆಯೇ ಆಧಾರ. ಇವು ತುಂಬಾ ತೆರದ ರಚನೆಯುಳ್ಳದ್ದಾಗಿದ್ದು, ಬಿದ್ದ ಮಳೆನೀರು ಶೀಘ್ರವಾಗಿ ಬಸಿದು ಹೋಗುತ್ತದೆ. ಬೇಸಿಗೆಯಲ್ಲಿ ಈ ಪ್ರದೇಶಗಳಲ್ಲಿ ಕುಡಿಯುವ ನೀರಿಗೂ ಸಹ ಅಭಾವ ಉಂಟಾಗುತ್ತದೆ. ತೀರಪ್ರದೇಶದಲ್ಲಿ ತೆಂಗು, ಅಡಿಕೆ ಮತ್ತು ಮಳೆಗಾಲದ ಭತ್ತ ಸಾಮಾನ್ಯ ಬೆಳೆಗಳು. ಮಲೆನಾಡಿನಲ್ಲಿ ಕಾಫಿ, ಏಲಕ್ಕಿ, ಅಡಿಕೆ ತೋಟಗಳು ವ್ಯಾಪಕವಾಗಿ ಕೃಷಿಯಲ್ಲಿವೆ. ಹೆಚ್ಚು ವಿಸ್ತೀರ್ಣದಲ್ಲಿ ಮಳೆಯ ಆಸರೆಯಲ್ಲಿ ಭತ್ತ ಬೆಳೆಯುತ್ತಾರೆ. ಸಮೃದ್ಧವಾದ, ಸ್ವಾಭಾವಿಕವಾದ ಕಾಡು ಈ ಪ್ರದೇಶದ ಅತಿಮುಖ್ಯ ಸಂಪತ್ತು.

ನೀರಿನ ಸಂಪನ್ಮೂಲಗಳ ವೃದ್ಧಿ: ಪ್ರಪಂಚದ ಅನೇಕ ಭಾಗಗಳಲ್ಲಿದ್ದಂತೆ ನಮ್ಮರಾಜ್ಯದ ಕೃಷಿಯಲ್ಲೂ ನೀರಿನ ಕೊರತೆ ಒಂದು ಪ್ರಧಾನ ಸಮಸ್ಯೆ. ನೀರಾವರಿ ಸೌಕರ್ಯ, ದೇಶದ ಇತರ ಭಾಗಗಳೊಡನೆ ಹೋಲಿಸಿದರೆ ಕಡಮೆಯೇ ಹೌದು.

ಮಳೆಯನ್ನು ನಂಬಿದ ಬೇಸಾಯ ಸಹಜವಾಗಿ ಅನಿಶ್ಚಯ. ಈಗಿರುವಹಾಗೆ, ನಮ್ಮ ರಾಜ್ಯ ಆಹಾರದಲ್ಲಿ ಸ್ವಾವಲಂಬಿಯಾಗಿಲ್ಲ. ಜನಸಂಖ್ಯೆ ಬೆಳೆದಹಾಗೆ ಆಹಾರದ ಕೊರತೆ ಇನ್ನೂ ತೀವ್ರವಾಗುತ್ತದೆ. ಈ ಸಮಸ್ಯೆಯನ್ನು ಎದುರಿಸಬೇಕಾದರೆ ಹೆಚ್ಚು ನೀರು ಒದಗಿಸಿಕೊಳ್ಳುವ ದಿಕ್ಕಿನಲ್ಲಿ ನಮ್ಮಿಂದ ಭಗೀರಥ ಪ್ರಯತ್ನ ಅತ್ಯಾವಶ್ಯಕ. ಇದು ನಮ್ಮ ಉಳಿವು ಅಳಿವಿನ ಪ್ರಶ್ನೆ. ಮಳೆವಿಷಯದಲ್ಲಿ, ಪ್ರಕೃತಿ ನಮಗೆ ತುಂಬಾ ಅನುಕೂಲವಾಗಿದೆ. ಮಳೆಯಿಂದ ಬೀಳುವ ಅಪಾರ ನೀರಿನ ಸಂಪತ್ತು ನಮ್ಮದಾಗಿದೆ. ನಾವು ಈ ಮೊದಲೇ ಕಂಡಂತೆ ಮಲೆನಾಡು-ಕರಾವಳಿ ಪ್ರದೇಶಗಳಲ್ಲಿ ಧಾರಾಕಾರವಾಗಿ ಮಳೆ ಸುರಿದು ಅರಬ್ಬಿ ಸಮುದ್ರಕ್ಕೆ ಕೊಚ್ಚಿಹೋಗುತ್ತಿದೆ. ಈ ನೀರಿನ ಮೊತ್ತ ಸುಮಾರು 1600 ಸಾವಿರ ಮಿಲಿಯನ್ ಘನ ಅಡಿಗಳಷ್ಟಿರುತ್ತದೆ. ನದಿ ನೀರುಗಳಂತೆ, ಈ ನೀರಿಗೆ ನೆರೆರಾಜ್ಯಗಳೊಡನೆ ವಿವಾದಕ್ಕೆ ಎಡೆಯಿಲ್ಲ. ಈ ಪರ್ವತದ ಶ್ರೇಣಿಗಳಲ್ಲಿ. ಆಯ ಕಟ್ಟು ಸ್ಥಳಗಳಲ್ಲಿ, ಪಶ್ಚಿಮಕ್ಕೆ ಕೊಚ್ಚಿಹರಿದು ಹೋಗುವ ನೀರನ್ನು ತಡೆದು ಶೇಖರಿಸಿ ಪೂರ್ವಕ್ಕೆ ಸೈಫನ್ ವಿಧಾನದಿಂದ ಇಲ್ಲವೆ ಸುರಂಗಗಳ ನಿರ್ಮಾಣದಿಂದ ತಿರುಗಿಸಿದ್ದೇ ಆದರೆ, ಹಾಸನ, ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ಮಳೆಯ ಅಭಾವದಿಂದ ಸೊರಗುತ್ತಿರುವ 40–50 ಲಕ್ಷ ಎಕರೆ ಪ್ರದೇಶದ ಬೇಸಾಯಕ್ಕೆ ನೆಮ್ಮದಿಯನ್ನು ತರುವುದು ಸಾಧ್ಯವಾದೀತು. ಈ ಸಲಹೆ ಹೊರನೋಟಕ್ಕೆ ಹುಚ್ಚು ಎಂದು ಕಾಣಿಸುವುದು ಸಹಜವಾದರೂ ಪ್ರಪಂಚದ ಇತರ ಭಾಗಗಳಲ್ಲಿ. ಅದರಲ್ಲೂ ದಕ್ಷಿಣ ಕ್ಯಾಲಿಫೋರ್ನಿಯಾದಲ್ಲಿ, ಕೌಲರೇಡೋ ನದಿ ನೀರನ್ನು 500 ಮೈಲಿ ದೂರ, ಒಂದೆರಡು ಕಡೆ 1000 ಅಡಿ ಎತ್ತರಕ್ಕೆ ಪಂಪುಮಾಡಿ, ಇಂಪೀರಿಯಲ್ ಕಣಿವೆಗೆ ಒದಗಿಸಿದ್ದಾರೆ. ಇದರಿಂದಾಗಿ ಹಿಂದೆ ಮರುಭೂಮಿಯಾಗಿದ್ದ ಈ ಕಣಿವೆ ಪ್ರಸ್ತುತ ನಂದನವನವಾಗಿದೆ. ನಮ್ಮ ಇಂಜಿನಿಯರುಗಳು ಈ ವಿಷಯಕ್ಕೆ ತೀವ್ರ ಗಮನಕೊಟ್ಟು ಅಧ್ಯಯನಮಾಡಿ ಈ ಯೋಜನೆಯ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸುವದು ಅಗತ್ಯ. ಈ ತಕ್ಷಣ ಅಲ್ಲದಿದ್ದರೂ, ಇನ್ನೂ 10-20 ವರ್ಷಗಳನಂತರ ಈ ಕನಸು ನನಸಾಗಿ, ರಾಜ್ಯದಲ್ಲಿ ಸುಭಿಕ್ಷತೆಗೆ ನಾಂದಿಯಾದೀತು.

ಕಣ್ಣು-ಮುಚ್ಚಣಕಿ

ಅಂಬಿಕಾತನಯದತ್ತ

ದೇವರನ್ನ ತಪ್ಪಿಸಿ ನೀ ಎಲ್ಲೆಹ್ವಾದಿ?
ಕಣ್ಣು ಮುಚ್ಚಣಕಿ ಆಟದಾಗ
ಯಾರ್‍ಯಾರು ಎಲ್ಲೆಲ್ಲಿ ಅಡಗಿರತಾರೊ?

ಹುಡುಗಿಯರ ಹಿಂದೆ ಹುಡುಗರು
ಹುಡುಗರ ಹಿಂದೆ ಹುಡುಗಿಯರು
"ಬಿಟ್ಟೆ ಬಿಟ್ಟೆ ಬೆಳಗಾತು
ಕಟ್ಟೀಮನೀ ಹಾಳಾತು"
'ಫಟ್ ಫಟ್ ಫಜಾರಗ್ಯೋss'
ಅಂಬೋದರೊಳಗ ಯಾರನ್ನಾರೆ ಹಿಡೀಬೇಕು
ಅವರ ತಲೀಮ್ಯಾಲೆ ಆಟಾ ಹೇರಬೇಕು
ಅಡಗೋ ಪಾಳಿ ನಂದೂ, ಹುಡುಕೋ ಪಾಳಿ ಅವಂದು
ಫಜಾರಗಟ್ಟೀ ಮ್ಯಾಲೆ ನಮ್ಮ ಕಣ್ಣುಮುಚ್ಚಿ,
ತೆರೆಯೋ ಅಂವಾ ದೇವರು—
ಎವೀ ಬಡೀದs ನಭದಾಗಿನ ಭಗಣಾ—
—ಹಗರಣಾ ಮಾಡಿಧಾಂಗ ಬರೇ ನೋಡ್ತಿದ್ದಾ.
ಅವಂದs ಜೀವನಾ ಅವಂದs ನಾಟಕ
ಅವಂದs ಕಂಪನಿ, ಅವಂದs ಥೇಟರು
ವಿದ್ಯಾರ್ಥಿಗಳ ಸಲುವಾಗಿ
ಮೋಫತ್ ನಾಟ್ಯಪ್ರಯೋಗ !
ನಾಟಕಾ ನೋಡಾವರು ಏನೇನು ಕಲೀತಾರೋ?
ಹ್ಯಾಂಗ ಹ್ಯಾಂಗ ಬಿಡಿಸಿಕೋತಾರೋ?

ರಂಗಭೂಮಿ ಮ್ಯಾಲೆ ಮಳೀ ಬೀಳ್ತಿತ್ತು
ವಸಂತಸೇನಾ ಚಾರುದತ್ತನ ಅಪ್ಪಿಗೋತಿದ್ದಲು
ಸೆಟ್ಟಿ ಮೂರು ಮೊಳಾ, ಪಾವಡಾ ಆರು ಮೊಳಾ
ಘಟ್ಟಿ ಕೂತಿದ್ದಾ ತನ್ನ ಸೀಟಿನ್ಯಾಗ.

ತಿಳಕೊಂಬೋದು ತಿಳಕೊಂಡಾ,
ಅಂತ ಉಳಕೊಂಡಾ.

ಮನೀಗೆ ಹೋಗಿ ನಿದ್ದೀಮಾಡಿದಾ
ಹೊತ್ತುಂಟಲೇ ಎದ್ದು, ಗುಡಿಗೆ ಹೋಗಿ ಕೈಮುಗದಾ
ಅಂಗಡಿಗೆ ಹೋಗಿ ರೊಕ್ಕಾ ತಗೊಂಡು, ಸಾಮಾನು ಕೊಟ್ಟಾ.
ಚಾಚಿದ ಕೈ ಹಿಡೀಲಿಲ್ಲಾ
ಹೋದವರ ಬೆನ್ನು ಹತ್ತಲಿಲ್ಲಾ
ತನಗ ತಾನs ತಿಳದs ಶಿವಶಿವಾ ಅನತಿದ್ದಾ.

ಆಟ ಭಾಳ ಮೋಜಿನದೈತಿ
ನೋಟಾ ಗಾಜಿನದೈತಿ
ಎಲ್ಲಾ ಆರುಪಾರು !
ತೆರಿ ಅಂದರ ತೆರಿ,
ಗ್ವಾಡಿ ಅಂದರ ಗ್ವಾಡಿ.
ತೂತಿನ್ಯಾಗಿಂದ ಎಷ್ಟು ನೋಡಿಯೋ ಮಗನs !
ಕಣ್ಣು ಮುಚ್ಚಿ ನೋಡೋದನ್ನ
ಕಣ್ಣು ತೆರೆದು ನೋಡು—
ಗಂಗಾ ತಲೀಮ್ಯಾಲೆ
ಪಾರ್ವತಿ ತೊಡೀಮ್ಯಾಲೆ
ಕೊರಳಿಗೆ ಹಾವು ಸುತ್ತ್ಯಾವ.
ಶೆಟ್ಟಿ ಮನಸ್ಸು ಚಂದ್ರಶಿಖರ ದಾಟಿ
ಧ್ರುವನ ಸುತ್ತು ಹಾಕತಿತ್ತು
ಹರಹರಾ ಅಂದ್ರೂ ಅದs, ಹರಿಹರಿ ಅಂದ್ರೂ ಆದs
ಅಂಗಡೀ ಸೆಟ್ಟಿ ಅಂಗಡ್ಯಾಗs ಇದ್ದಾ
ಹಿಂಗಡೀ ಮನಸ್ಸು ಹಿಂಗದs ಇತ್ತು
ಎಲ್ಲಾ ಮೋಜು, ಎಲ್ಲಾ ಗಾಜು.

ನೊಬೆಲ್ ಪ್ರಶಸ್ತಿವಿಜೇತ ಜಾನ್ ಟಿನ್‌ಬರ್ಗ‌ನ್

ಎನ್. ಪ್ರಭುಸ್ವಾಮಿ

ಪಾಶ್ಚಿಮಾತ್ಯ ದೇಶಗಳಲ್ಲಿ ನೊಬೆಲ್ ಬಹುಮಾನ ಗಳಿಸುವುದು ಅಂದರೆ ಒಂದು ಅಪರೂಪ ಗೌರವ ಎಂದು ಭಾವಿಸಲಾಗಿದೆ. ಕಳೆದ ಅನೇಕ ವರ್ಷಗಳಿಂದ ರಸಾಯನಶಾಸ್ತ್ರ, ಭೌತಶಾಸ್ತ್ರ, ವೈದ್ಯಕೀಯಶಾಸ್ತ್ರ ಮುಂತಾದವುಗಳಲ್ಲಿ ಅತ್ಯುನ್ನತ ಸಂಶೋಧನೆ ನಡೆಸಿ ಪ್ರಪಂಚದ ಜ್ಞಾನಾಭಿವೃದ್ಧಿಗೆ ಕಾರಣರಾದವರನ್ನು ನೊಬೆಲ್ ಪಾರಿತೋಷಕ ಕೊಟ್ಟು ಗೌರವಿಸಲಾಗುತ್ತಿದೆ. ಈ ಪಾರಿತೋಷಕ ಪಡೆಯಲು ಪ್ರಪಂಚದ ಯಾವ ರಾಷ್ಟ್ರದ ಪ್ರಜೆಯಾದರೂ ಸರಿಯೆ, ಯಾವ ಮತಕ್ಕೆ ಸೇರಿದ್ದರೂ ಸರಿಯೆ, ಯಾವ ಭಾಷೆಯಲ್ಲಿ ಸಂಶೋಧನಾ ವಿಷಯಗಳನ್ನು ಪ್ರಕಟಿಸಿದ್ದರೂ ಸರಿಯೆ. ಎಲ್ಲರಿಗೂ ಸರ್ವಸಮನಾದ ಹಕ್ಕಿದೆ. ಈ ಪಾರಿತೋಷಕವನ್ನು ಪಡೆಯಲು ವಿದ್ವಾಂಸರುಗಳು ತಾವಾಗಿಯೇ ಹೋಗಿ ಯಾರನ್ನೂ ಬೇಡಬೇಕಾಗಿಲ್ಲ. ಯಾರಾದರೂ ವಿದ್ವಾಂಸರು ಪ್ರಪಂಚದ ಯಾವ ಭಾಗದಲ್ಲಿಯಾದರೂ ಹೊಸದಾಗಿ ಜ್ಞಾನಾಭಿವೃದ್ಧಿಗೆ ಸಹಾಯ ಮಾಡಿದ್ದಾರೆ ಎಂದು ಕಂಡು ಬಂದೊಡನೆಯೆ ನೊಬೆಲ್ ಪಾರಿತೋಷಕ ಸಮಿತಿಯವರು ತಾವಾಗಿಯೇ ಅವರನ್ನು ಆದರದಿಂದ ಬರಮಾಡಿಕೊಂಡು ಗೌರವಿಸುತ್ತಾರೆ. ಆದುದರಿಂದ ನಿಜವಾಗಿಯೂ ಇಂತಹ ಗೌರವ ಪಾರಿತೋಷಕ ಯಾವ ವಿದ್ವಾಂಸರಿಗಾದರೂ ದೊರೆತರೆ ಅದು ಒಂದು ಹೆಮ್ಮೆಯ ವಿಷಯುವೇ ಮತ್ತು ಅವರು ವಾಸಿಸುವ ದೇಶಕ್ಕೆ ಒಂದು ದೊಡ್ಡ ಕೀರ್ತಿ ಬಂದಂತೆ. ಇದುವರೆಗೆ ನೊಬೆಲ್ ಪಾರಿತೋಷಕವನ್ನು ಸಮಾಜಶಾಸ್ತ್ರಗಳನ್ನು (Social sciences) ಅಧ್ಯಯನ ಮಾಡಿರುವ ಮತ್ತು ಅವುಗಳಲ್ಲಿ ಸಂಶೋಧನೆ ನಡೆಸಿರುವ ವಿದ್ವಾಂಸರುಗಳಿಗೆ ಕೊಡುತ್ತಿರಲಿಲ್ಲ. ಏಕೆಂದರೆ ಸಮಾಜಶಾಸ್ತ್ರಗಳಲ್ಲಿ ಮಾಡಿದ ಪರಿಶೋಧನೆ ಭೌತಶಾಸ್ತ್ರಗಳಲ್ಲಿ ಅಥವಾ ಪ್ರಕೃತಿಶಾಸ್ತ್ರಗಳಲ್ಲಿ ಮಾಡುವ ಪರಿಶೋಧನೆಗೆ ಸಮನಾಗಿರುವುದಿಲ್ಲ ಮತ್ತು ಮಾನವನ ಜ್ಞಾನಾಭಿವೃದ್ಧಿಗೆ ಸರಿಸಮವಾದ ಹೊಸ ವಿಷಯಗಳನ್ನು ಸಮಾಜಶಾಸ್ತ್ರಗಳು ಒದಗಿಸಲಾರವು ಎಂಬ ಭಾವನೆ ಇದುವರೆಗಿತ್ತು. ಆದರೆ ಕಳೆದ 42 ವರ್ಷಗಳಿಂದ (1929 ರಿಂದ) ಅರ್ಥಶಾಸ್ತ್ರದಲ್ಲಿ ಬೆಳೆದು ಬಂದಿರುವ ಸಂಶೋಧನಾ ರೀತಿಯನ್ನು ಮತ್ತು ಅದರಿಂದ ಉಂಟಾಗಿರುವ ಪ್ರಯೋಜನವನ್ನು ಗಣನೆಗೆ ತೆಗೆದುಕೊಂಡು ನೊಬೆಲ್ ಪಾರಿತೋಷಕ ಸಮಿತಿಯವರು ಅರ್ಥಶಾಸ್ತ್ರಜ್ಞರಿಗೂ ಕೂಡ ನೊಬೆಲ್ ಬಹುಮಾನ ಕೊಡಲು ತೀರ್ಮಾನಿಸಿದರು. ಸಮಾಜಶಾಸ್ತ್ರಗಳ ಪೈಕಿ ಇಂತಹ ದೊಡ್ಡ ಗೌರವಸ್ಥಾನ

ವನ್ನು ಪಡೆದುದು ಮೊದಲ ಬಾರಿಗೆ ಅರ್ಥಶಾಸ್ತ್ರ. ಆದರೂ ಭೌತಶಾಸ್ತ್ರಗಳ ಮತ್ತು ಪ್ರಕೃತಿಶಾಸ್ತ್ರಗಳಷ್ಟೇ ಕರಾರುವಾಕ್ಕಾಗಿ ಅರ್ಥಶಾಸ್ತ್ರದ ಸಂಶೋಧನೆಗಳು ಪ್ರಭಾವ ಬೀರಲಾರವು ಎಂಬುದನ್ನು ಅರಿತುಕೊಂಡು, ಅರ್ಥಶಾಸ್ತ್ರಜ್ಞರಿಗೆ ನೊಬೆಲ್ ಪಾರಿತೋಷಕ ಕೊಡುವುದರ ಬದಲು ನೊಬೆಲ್ ಪ್ರಶಸ್ತಿ ಕೊಡಬೇಕೆಂದು ತೀರ್ಮಾನಿಸ ಲಾಯಿತು. ಹೀಗೆ ಮೊಟ್ಟಮೊದಲ ಬಾರಿಗೆ ನೊಬೆಲ್ ಪ್ರಶಸ್ತಿಪಡೆದ ಸುಪ್ರಸಿದ್ಧ ಅರ್ಥಶಾಸ್ತ್ರಜ್ಞರು ಇಬ್ಬರು. ಮೊದಲನೆಯವರು ನಾರ್ವೆ ದೇಶದ ರ್‍ಯಾಗನರ್ ಫ್ರಿಷ್ ಎಂಬುವರು ಮತ್ತು ಎರಡನೆಯವರು ನೆದರಲೆಂಡ್ (ಹಾಲೆಂಡ್) ದೇಶದ ಜಾನಟಿನ್-ಬರ್ಗನ್‌ರವರು. ಈ ಲೇಖನದಲ್ಲಿ ಜಾನ್ ಟಿನ್‌ಬರ್ಗನ್‌ರವರು ಅರ್ಥಶಾಸ್ತ್ರದಲ್ಲಿ ಸಾಧಿಸಿ ರುವ ವಿಕ್ರಮಗಳೇನು ಮತ್ತು ಏತಕ್ಕಾಗಿ ಅವರಿಗೆ ನೊಬೆಲ್ ಪ್ರಶಸ್ತಿ ದೊರಕಿತು ಎಂಬುದನ್ನು ಕುರಿತು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

ರ್‍ಯಾಗನರ್ ಫ್ರಿಷ್ ಮತ್ತು ಜಾನ್ ಟಿನ್‌ಬರ್ಗನ್‌ರವರಿಗೆನೊಬೆಲ್ ಪ್ರಶಸ್ತಿಯನ್ನು ಕೊಡಲಾಗಿದೆ ಎಂಬ ಪ್ರಕಟಣೆ ಹೊರಬಿದ್ದ ಕೂಡಲೇ ಪ್ರಪಂಚದ ಎಲ್ಲಾ ಕಡೆಯೂ ಅದಕ್ಕೆ ಒಳ್ಳೆ ಸ್ವಾಗತ ದೊರೆಯಿತು. ಪ್ರಪಂಚದ ಎಲ್ಲಾ ದೇಶಗಳಲ್ಲೂ ಸುಪ್ರಸಿದ್ಧ ಅರ್ಥಶಾಸ್ತ್ರಜ್ಞರು ಎಂಬ ಕೀರ್ತಿ ಪಡೆದಿರುವ ಇವರಿಬ್ಬರಿಗೆ ಪ್ರಶಸ್ತಿ ದೊರೆಯಿತು ಎಂಬುದನ್ನು ತಿಳಿದು ಎಲ್ಲಾ ದೇಶಗಳ ಅರ್ಥಶಾಸ್ತ್ರಜ್ಞರು ಸಂತೋಷಪಟ್ಟರು. ಅನೇಕರು ಪ್ರಮುಖ ವರ್ತಮಾನ ಪತ್ರಿಕೆಗಳಲ್ಲಿ ಅಥವಾ ನಿಯತಕಾಲಿಕೆಗಳಲ್ಲಿ ಇವರುಗಳನ್ನು ಕುರಿತು ಅಗ್ರ ಲೇಖನಗಳನ್ನು ಬರೆದರು. ಏಕೆಂದರೆ ಇವರಿಬ್ಬರನ್ನೂ ಅನೇಕ ಅರ್ಥ ಶಾಸ್ತ್ರಜ್ಞರು ಗೌರವದಿಂದ ಕಾಣುತ್ತಾರೆ.

ಜಾನ್ ಟಿನ್‌ಬರ್ಗನ್‌ರವರು ನೆದರ್‌ಲೆಂಡ್ಸ್ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ವಿಭಾಗದ ಪ್ರಮುಖ ಪ್ರಾಧ್ಯಾಪಕರಾಗಿದ್ದವರು. ಯೂರೋಪಿನ ಅನೇಕ ದೇಶಗಳಲ್ಲಿ 19 ನೇ ಶತಮಾನದಿಂದ ಅರ್ಥಶಾಸ್ತ್ರವನ್ನು ಬೋಧಿಸಲು ಪ್ರಾರಂಭಿಸಿದಂತೆ ನೆದರ್ ಲೆಂಡ್ಸ್‌ನಲ್ಲಿಯೂ ಪ್ರಾರಂಭಿಸಲಾಯಿತು. ನೆದರ್‌ಲೆಂಡ್ಸ್‌ನಲ್ಲಿ ಬ್ರಿಟಿಷ್ ಮತ್ತು ಜರ್ಮನ್ ವಿಶ್ವವಿದ್ಯಾನಿಲಯಗಳಲ್ಲಿ ಅರ್ಥಶಾಸ್ತ್ರವನ್ನು ಬೋಧಿಸುತ್ತಿದ್ದ ರೀತಿಯಲ್ಲೇ, ಬಹಳ ಕಾಲದವರೆಗೂ ಬೋಧಿಸಲಾಗುತ್ತಿತ್ತು. ಆದರೆ 1913 ರಲ್ಲಿ ರಾಟರ್‌ಡಾಂ ಪಟ್ಟಣದಲ್ಲಿ ನೆದರ್‌ಲೆಂಡ್‌ನ ಅರ್ಥಶಾಸ್ತ್ರದ ಪ್ರೌಢವಿದ್ಯಾಶಾಲೆ (Netherlands School of Economics) ಯನ್ನು ಸ್ಥಾಪಿಸಲಾಯಿತು. ಆ ವಿದ್ಯಾಶಾಲೆ ಯಲ್ಲಿ ಅನೇಕ ಪ್ರಮುಖ ಅರ್ಥಶಾಸ್ತ್ರಜ್ಞರಿದ್ದಾರೆ. ಅವರ ಪೈಕಿ ಜಾನ್ ಟಿನ್‌ಬರ್ಗನ್ ರವರು ಬಹಳ ಕೀರ್ತಿ ಪಡೆದವರು. ಇವರುಗಳ ಪರಿಶ್ರಮದ ಫಲವಾಗಿ ಇಂದು ಪ್ರಪಂಚದಲ್ಲಿ ನೆದರ್‌ಲೆಂಡ್‌ನ ಅರ್ಥಶಾಸ್ತ್ರದ ಪ್ರೌಢ ವಿದ್ಯಾಶಾಲೆಯು ಬಹಳ ಹೆಸರುವಾಸಿಯಾಗಿದೆ.

ಟಿನ್‌ಬರ್ಗನ್‌ರವರು 1903 ರಲ್ಲಿ ಜನ್ಮ ತಾಳಿದರು. ಲೀಡನ್ ವಿಶ್ವವಿದ್ಯಾನಿಲಯದಿಂದ ತಮ್ಮ ಡಾಕ್ಟರೇಟ್ ಪದವಿ ಪಡೆದರು. ಬೇರೆ ಬೇರೆ ಕರ್ತವ್ಯಗಳನ್ನು ನೆರವೇರಿಸುವುದಕ್ಕೋಸ್ಕರ ಸ್ವಲ್ಪ ಕಾಲ ಹೊರಗಡೆ ಹೋಗಿದ್ದರೂ, 1929 ರಿಂದ 1945 ರ ಅವಧಿಯಲ್ಲಿ ಅವರು ನೆದರ್‌ಲೆಂಡಿನ ಕೇಂದ್ರ ಸಂಖ್ಯಾಶಾಸ್ತ್ರದ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದಾರೆ (Central Bureau of Statistics, Netherlands). ಜೊತೆಗೆ 1933 ರಿಂದ ನೆದರ್‌ಲೆಂಡಿನ ಅರ್ಥಶಾಸ್ತ್ರದ ಪ್ರೌಢ ವಿದ್ಯಾಶಾಲೆಯಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿ ಕೆಲಸ ಮಾಡಿದ್ದಾರೆ. 1936–1938 ರ ಅವಧಿಯಲ್ಲಿ ರಾಷ್ಟ್ರಗಳ ಒಕ್ಕೂಟದ ಸಂಸ್ಥೆಗೆ (League of Nations) ಅರ್ಥಶಾಸ್ತ್ರ ಸಲಹೆಗಾರರಾಗಿ ಜಿನೀವದಲ್ಲಿ ಸೇವೆ ಮಾಡಿದರು. ಈ ಅವಧಿಯಲ್ಲಿ ಅವರು ಅಮೆರಿಕಾದ ಸಂಯುಕ್ತ ಸಂಸ್ಥಾನಗಳ ಮಾರುಕಟ್ಟೆಗಳಿಗೆ ಸಂಬಂಧಿಸಿದಂತೆ ಅರ್ಥಮಿತಿಯ ವಿಶ್ಲೇಷಣೆಯನ್ನು (Econometric analysis) ನಡೆಸಿದರು. 1945 ಮತ್ತು 1955 ರ ಅವಧಿಯಲ್ಲಿ ನೆದರ್‌ಲೆಂಡಿನ ಯೋಜನಾ ಕಚೇರಿಯ ಮುಖ್ಯಾಧಿಕಾರಿಗಳಾಗಿ ಕಾರ್ಯ ನಿರ್ವಹಿಸಿದರು. 1955 ರಿಂದ ಈಚೆಗೆ ಅನೇಕ ದೇಶಗಳಲ್ಲಿ ಆರ್ಥಿಕ ಸಲಹೆಗಾರರಾಗಿ ಕೆಲಸಮಾಡಿದ್ದಾರೆ. ಜೊತೆಗೆ ಅನೇಕ ಅಂತರ ರಾಷ್ಟ್ರೀಯ ಸಂಸ್ಥೆಗಳು ಇವರ ಸಲಹೆಯನ್ನು ಆಗಿಂದಾಗ್ಗೆ ಪಡೆದಿವೆ. 1966 ರಿಂದ ವಿಶ್ವಸಂಸ್ಥೆಯ ಅಭಿವೃದ್ಧಿ ಯೋಜನಾ ಸಮಿತಿಯ ಅಧ್ಯಕ್ಷರಾಗಿ ಕೆಲಸಮಾಡುತ್ತಿದ್ದಾರೆ. ಪ್ರಪಂಚದ ಅನೇಕ ರಾಷ್ಟ್ರಗಳ ವಿಶ್ವವಿದ್ಯಾನಿಲಯಗಳು ಇವರಿಗೆ ಗೌರವ ಡಾಕ್ಟರೇಟ್ ಪದವಿಯನ್ನಿತ್ತು ಗೌರವಿಸಿವೆ.

ಟಿನ್‌ಬರ್ಗನ್‌ರವರು ಅರ್ಥಮಾಪನಶಾಸ್ತ್ರದ ಬೆಳವಣಿಗೆಗೆ ಮತ್ತು ಗಣಿತ ಶಾಸ್ತ್ರವನ್ನು ಅರ್ಥಶಾಸ್ತ್ರದೊಂದಿಗೆ ಅಳವಡಿಸಿಕೊಂಡು ಅರ್ಥಶಾಸ್ತ್ರದ ಆದರ್ಶಗಳನ್ನು (Economics models) ರೂಪಿಸುವುದರಲ್ಲಿ ಬಹಳವಾಗಿ ಶ್ರಮಿಸಿದ್ದಾರೆ. ಅರ್ಥಶಾಸ್ತ್ರ ಸಂಶೋಧನೆಗೆ ಈಗಿನ ಕಾಲದಲ್ಲಿ ಅರ್ಥಮಾಪನ ಶಾಸ್ತ್ರವು (Econometrics) ಅತ್ಯವಶ್ಯಕ ಎಂದು ಪರಿಗಣಿಸಲಾಗಿದೆ. ಅರ್ಥಶಾಸ್ತ್ರದ ತತ್ವಗಳು, ಸಿದ್ಧಾಂತಗಳು ಮತ್ತು ಅವುಗಳ ಅನ್ಯೋನ್ಯ ಸಂಬಂಧಗಳನ್ನು ಗಣಿತೋಕ್ತಿಗಳ ರೂಪದಲ್ಲಿ ನಿರೂಪಿಸಿ ಈ ಉಕ್ತಿಗಳನ್ನು ಪ್ರತ್ಯಕ್ಷ ಸನ್ನಿವೇಶದಲ್ಲಿ ಪರೀಕ್ಷಿಸಿ ಅರ್ಥಶಾಸ್ತ್ರದ ತತ್ವಗಳನ್ನು ಬೆಳೆಸುವುದಕ್ಕೆ ಅರ್ಥಮಾಪನಶಾಸ್ತ್ರ ಪ್ರಯೋಜನಕಾರಿಯಾಗಿರುವುದರಿಂದ ಇಂದು ಅರ್ಥಶಾಸ್ತ್ರದಲ್ಲಿ ಅರ್ಥಮಾಪನಶಾಸ್ತ್ರ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಇಂತಹ ಪ್ರಮುಖ ಶಾಸ್ತ್ರವನ್ನು ರೂಪಗೊಳಿಸುವುದರಲ್ಲಿ ಟಿನ್‌ಬರ್ಗನ್‌ರವರು ತಮ್ಮ ಪ್ರತಿಭೆ ತೋರಿಸಿದ್ದಾರೆ. ನಾರ್ವೆಯ ರ್‍ಯಾಗನರ್ ಫ್ರಿಷ್ (ಮತ್ತೊಬ್ಬ ನೊಬೆಲ್‌ಪ್ರಶಸ್ತಿ ವಿಜೇತರು) ಮತ್ತು ಅಮೆರಿಕಾದ ಇರ್‌ವಿಂಗ್ ಫಿಷರ್‌ರವರ ಸಹಕಾರದಿಂದ ಟಿನ್‌ಬರ್ಗನ್‌ರವರು ಅರ್ಥಮಾಪನಶಾಸ್ತ್ರ ಕೂಟವನ್ನು (ಇಕನಾಮಿಟ್ರಿಕ್

ಸೊಸೈಟಿ) ಸ್ಥಾಪಿಸಿದರು. ಇದರ ಸ್ಥಾಪನೆಯಿಂದ ಪರಿಮಾಣರೂಪದ ಅರ್ಥಶಾಸ್ತ್ರದ ಸಂಶೋಧನೆ (Quantitative Economic research) ಪ್ರಾರಂಭವಾಯಿತು.

ಬಹಳ ಕಾಲದಿಂದಲೂ ಆರ್ಥಿಕ ಕ್ಷೇತ್ರದಲ್ಲಿ ಉಂಟಾಗುತ್ತಿದ್ದ ಘಟನೆಗಳ ವಿಷಯವಾಗಿ ಮತ್ತು ಅವುಗಳ ಸಾಪೇಕ್ಷಿಕ ಪರಿಣಾಮಗಳನ್ನು ಕುರಿತು ಅರ್ಥಶಾಸ್ತ್ರಜ್ಞರು ಯುಕ್ತವಿವರಣೆ ಕೊಡುತ್ತಿದ್ದರು. ಆದರೆ ಆ ವಿವರಣೆಗಳನ್ನು ಕೊಡುವಾಗ ಅವರು ಕೆಲವು ಕಲ್ಪನೆಗಳನ್ನು ಮಾಡಿಕೊಳ್ಳುತ್ತಿದ್ದರು. ಲೆಕ್ಕ ಹಾಕಿ ಆರ್ಥಿಕ ಪರಿಣಾಮಗಳನ್ನು ಸ್ಫುಟವಾಗಿ ತಿಳಿಸಲಾಗುತ್ತಿರಲಿಲ್ಲ. ಆದ್ದರಿಂದ ಆರ್ಥಿಕ ವ್ಯವಸ್ಥೆಯಲ್ಲಿ ಪ್ರತ್ಯಕ್ಷವಾಗಿರುತ್ತಿದ್ದ ಅಂಶಗಳು ಅನೇಕ ಸಾರಿ ಅರ್ಥಶಾಸ್ತ್ರಜ್ಞರು ಇತ್ತಿದ್ದ ವಿವರಣೆಗೆ ವಿರುದ್ಧವಾಗಿರುತ್ತಿದ್ದವು. ಒಂದು ನಿರ್ದಿಷ್ಟ ಪರಿಸ್ಥಿತಿಯಲ್ಲಿ ಯಾವ ಆರ್ಥಿಕ ತತ್ವಗಳು, ನಿಯಮಗಳು ಸಾಧು ಅಥವಾ ಅನ್ವಯಾರ್ಹ ಎಂಬುದನ್ನು ಪ್ರಯೋಗಿಸಿದ್ದ ರೀತಿಯಲ್ಲಿ ತಾಳೆ ನೋಡಿ ತನಿಖೆ ನಡೆಸಿದ ಹೊರತು ಸರಿಯಾದ ಆರ್ಥಿಕ ನೀತಿ ರೂಪಿಸಲು ಆಗುತ್ತಿರಲಿಲ್ಲ. ಸರಿಯಾದ ಆರ್ಥಿಕ ನೀತಿಯನ್ನು ಪರಿಸ್ಥಿತಿಗೆ ತಕ್ಕ ಹಾಗೆ ರೂಪಿಸಿಕೊಳ್ಳಬೇಕೆಂಬ ಅಭಿಪ್ರಾಯ 1930 ರಿಂದ ಈಚೆಗೆ ಅನೇಕ ದೇಶಗಳಲ್ಲಿ ಉಂಟಾಯಿತು. ಪ್ರಪಂಚದ ಬಹುಕಡೆ 1929–32 ರ ಅವಧಿಯಲ್ಲಿ ಆರ್ಥಿಕ ಸಂಕಟ ಒದಗಿದ ಕಾಲದಲ್ಲಿ ಆರ್ಥಿಕ ನೀತಿಯ ಪರಿಣಾಮಗಳನ್ನು ಖಚಿತವಾಗಿ ಲೆಕ್ಕ ಹಾಕಿ ಮಾಹಿತಿಗಳನ್ನು ತಿಳಿಯಬೇಕಾದ ಅಗತ್ಯ ಏರ್ಪಟ್ಟಿತು. ಈ ಅಗತ್ಯವನ್ನು ಪೂರ್ತಿಮಾಡುವ ಉದ್ದೇಶದಿಂದ ಅರ್ಥಮಾಪನಶಾಸ್ತ್ರದ ಉಪಯೋಗ ಪ್ರಾರಂಭಿಸಲ್ಪಟ್ಟಿತು. ಇಂತಹ ಸನ್ನಿವೇಶಗಳಿಗೆ ಸೂಕ್ತ ಮಾರ್ಗವನ್ನು ಅರ್ಥಮಾಪನ ಶಾಸ್ತ್ರದ ಮೂಲಕ ತೋರಿಸಿಕೊಟ್ಟ ಮೊದಲನೆ ಅರ್ಥಶಾಸ್ತ್ರಜ್ಞರು ಟಿನ್‌ಬರ್ಗನ್ ರವರು.

ಮಾರುಕಟ್ಟೆಯಲ್ಲಿ ಉಂಟಾಗುವ ಬದಲಾವಣೆಗಳನ್ನು ವಿವರಿಸಲು ಹಿಂದಿನ ಅರ್ಥಶಾಸ್ತ್ರಜ್ಞರು ಕೆಲವು ತತ್ವಗಳನ್ನು ಪ್ರತಿಪಾದಿಸಿದ್ದರು. ಆದರೆ ಆ ತತ್ವಗಳು ದೀರ್ಘಾವಧಿಯ ಮಾರುಕಟ್ಟೆಯ ನಿಜಪರಿಸ್ಥಿತಿಯನ್ನು ವಿವರಿಸುತ್ತಿರಲಿಲ್ಲ. ಕಾಲಾವಧಿ ಹೆಚ್ಚುತ್ತಾ ಹೋದ ಹಾಗೆಲ್ಲ ಮಾರುಕಟ್ಟೆಯಲ್ಲಿ ಉಂಟಾಗುವ ಬದಲಾವಣೆಗಳು ಹೊಸ ರೂಪವನ್ನು ತಾಳುತ್ತಿದ್ದವು. ಇಂತಹ ಬದಲಾದ ಪರಿಸ್ಥಿತಿಯನ್ನು ವಿವರಿಸಲು ಟಿನ್ ಬರ್ಗನ್‌ರವರು ಜೇಡರ ಬಲೆ ಆಧಾರದ ಮೇಲೆ ಹೊಸ ಸಿದ್ಧಾಂತವನ್ನು (Cobweb theorem) ರೂಪಿಸಿದರು. ಉದಾಹರಣೆಗೆ, ಕೆಲವು ಬಳಕೆಯ ವಸ್ತುಗಳ ಬೇಡಿಕೆಯಲ್ಲಿ ಆಗಬಹುದಾದ ಬದಲಾವಣೆ, ಬೆಲೆ ಮತ್ತು ಆದಾಯದಲ್ಲಿನ ಬದಲಾವಣೆಗಳನ್ನು ಅನುಸರಿಸುತ್ತದೆ ಎಂದು ಅರ್ಥಶಾಸ್ತ್ರ ಸೂಚಿಸುತ್ತದೆ. ಇಂತಹ ಸಂಬಂಧ ನಿಜವಾಗಿಯೂ ಇದೆಯೇ ಎಂಬುದನ್ನು ಅರ್ಥಮಾಪನಶಾಸ್ತ್ರದ ಮೂಲಕ ತಿಳಿದುಕೊಳ್ಳಬಹುದು ಎಂಬುದನ್ನು ಟಿನ್ ಬರ್ಗನ್ ರವರು ತೋರಿಸಿಕೊಟ್ಟರು. ಇದು ಮಾತ್ರವಲ್ಲದೆ ಆದಾಯ ಮತ್ತು ಬೆಲೆಯ ಪ್ರತಿ

ನಮ್ಯತೆಗಳನ್ನು (Elasticity) ಗಣನೆಗೆ ತೆಗೆದುಕೊಂಡು ಅವುಗಳ ಸಹಾಯದಿಂದ ಈ ಸಂಬಂಧವನ್ನು ಮತ್ತಷ್ಟು ಸ್ಪಷ್ಟವಾಗಿ ನಿರೂಪಿಸಬಹುದು ಎಂದು ತೋರಿಸಿಕೊಟ್ಟರು.

ಟಿನ್‌ಬರ್ಗನ್‌ರವರು 2 ಗ್ರಂಥಗಳನ್ನು ಬರೆದರು: (1) ಬಂಡವಾಳ ಹೂಡುವಿಕೆಯ ಚಟುವಟಿಕೆಗಳಲ್ಲಿ ಒಂದು ಮಾರ್ಗ ಮತ್ತು ಅದರ ಅನುಸರಣೆ (A method and its application to Investment Activity) (2) ಅಮೇರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿ ವಾಣಿಜ್ಯ ಆವರ್ತಗಳು (Business cycles in the U.S.A.) 1919-1932;- ಈ ಎರಡು ಗ್ರಂಥಗಳ ಮೂಲಕ ಅರ್ಥಮಾಪನಶಾಸ್ತ್ರದ ಬೆಳವಣಿಗೆಯಲ್ಲಿ ಮತ್ತೊಂದು ಹೊಸ ದಾರಿಯನ್ನು ತೋರಿಸಿಕೊಟ್ಟರು. ಆರ್ಥಿಕ ಚರಗಳ ಎಲ್ಲಾ ವಿಧವಾದ ಸಂಬಂಧಗಳನ್ನು ಪರಿಮಾಣೀಕರಿಸಿದ ಅನಂತರವೇ ದೊರೆಯುವ ಜ್ಞಾನವನ್ನು ಆರ್ಥಿಕ ಧೋರಣೆಗೆ ಮಾರ್ಗದರ್ಶಕವಾಗಿ ಬಳಸಲು ಸಾಧ್ಯ ಎಂಬುದನ್ನು ತೋರಿಸಿ ಕೊಟ್ಟರು. ಅರ್ಥಶಾಸ್ತ್ರದಲ್ಲಿ ಪ್ರತಿಪಾದ್ಯವಾದ ವಾಣಿಜ್ಯ ಆವರ್ತ (ಟ್ರೇಡ್ ಸೈಕಲ್) ತತ್ವಗಳನ್ನು ಸಂಖ್ಯಾಶಾಸ್ತ್ರ ವಿಧಾನಗಳಿಂದ ಪರೀಕ್ಷಿಸಿ, ಅನ್ಯಾದೃಶ ಆರ್ಥಿಕ ಘಟನೆಗಳ ಅನ್ಯೋನ್ಯ ಸಂಬಂಧಗಳನ್ನು ಸೂಚಿಸುವ ಹಲವಾರು ಗುಣಕಗಳನ್ನು ಸಂಗ್ರಹಿಸಿ ಅದನ್ನು ಅಮೇರಿಕಾದ ಸನ್ನಿವೇಶಗಳಿಗೆ ಅನ್ವಯಿಸಿ ಪರೀಕ್ಷಿಸಿದರು. ಈ ಸಂಶೋಧನೆಯ ಫಲವಾಗಿ ಅವರು ಬಂಡವಾಳ ಹೂಡುವಿಕೆಯ ತತ್ವಗಳನ್ನು ಪ್ರತಿಪಾದಿಸುವಾಗ ಲಾಭ ಗಳಿಕೆಯ ತತ್ವವನ್ನು (Profit principle) ಎತ್ತಿ ಹಿಡಿದರು. ಈ ಹೊಸ ತತ್ವ ಪ್ರತಿಪಾದನೆಯಿಂದ ಅರ್ಥಶಾಸ್ತ್ರಜ್ಞರಲ್ಲಿ ನೂತನ ವಿಚಾರ ಧಾರೆ ಪ್ರಾರಂಭವಾಯಿತು.

ಟಿನ್‌ಬರ್ಗನ್‌ರವರಿಗಿಂತ ಮುಂಚೆಯೇ ಅನೇಕ ಅರ್ಥಶಾಸ್ತ್ರಜ್ಞರು ವಾಣಿಜ್ಯ ಆವರ್ತಗಳ ವಿಷಯದಲ್ಲಿ ಅನೇಕ ರೀತಿಯ ತತ್ವಗಳನ್ನು ಪ್ರತಿಪಾದಿಸಿದ್ದರು. ಆದರೆ ಅವರುಗಳು ವಾಣಿಜ್ಯ ಆವರ್ತಗಳಲ್ಲಿ ಉಂಟಾಗುವ ಪ್ರತಿಯೊಂದು ಬೆಳವಣಿಗೆಯ ಸ್ಥಿತಿಯನ್ನು ಪ್ರತ್ಯೇಕವಾಗಿ ಪರಿಶೀಲಿಸಿ ಅದರ ಕಾರಣಗಳನ್ನು ಮತ್ತು ಪರಿಣಾಮಗಳನ್ನು ಕುರಿತು ಚರ್ಚಿಸುತ್ತಿದ್ದರು. ವಾಣಿಜ್ಯ ಆವರ್ತಗಳನ್ನು ಒಟ್ಟಾಗಿ ತೆಗೆದುಕೊಂಡು ಅದಕ್ಕೆ ಪರಿಹಾರ ಕಂಡು ಹಿಡಿಯುವ ಮಾರ್ಗದಲ್ಲಿ ಹಿಂದಿನ ಅರ್ಥಶಾಸ್ತ್ರಜ್ಞರು ಪ್ರಗತಿ ಸಾಧಿಸಿರಲಿಲ್ಲ. ಟಿನ್‌ಬರ್ಗನ್‌ರವರು ತಮ್ಮ ಗಣಿತಶಾಸ್ತ್ರದ ತಿಳುವಳಿಕೆಯಿಂದ ಒಂದು ಹೊಸ ಆದರ್ಶವನ್ನು (Model) ರೂಪಿಸಿ ಅದರ ಮೂಲಕ ಸಂಪೂರ್ಣವಾಗಿ ವಾಣಿಜ್ಯ ಆವರ್ತದ ಪರಿಣಾಮಗಳನ್ನು ವಿವರಿಸಬಹುದು ಎಂದು ತೋರಿಸಿಕೊಟ್ಟರು. ಜೊತೆಗೆ ಭವಿಷ್ಯದಲ್ಲಿ ಉಂಟಾಗಬಹುದಾದ ಆರ್ಥಿಕ ಪರಿಣಾಮಗಳ ವಿರುದ್ಧ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸಹಾಯ ಮಾಡುತ್ತದೆ ಎಂದು ತೋರಿಸಿದರು.

1955 ಆದಮೇಲೆ ಟಿನ್‌ಬರ್ಗನ್‌ರವರು ಅನೇಕ ದೇಶಗಳಿಗೆ ಆರ್ಥಿಕ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದಾರೆ. ಈ ಅವಧಿಯಲ್ಲಿ ಅವರು ಅಭಿವೃದ್ಧಿ ಹೊಂದುತ್ತಿರುವ

ಬಡದೇಶಗಳ ವಿಷಯದಲ್ಲಿ ಬಹಳ ಅನುಕಂಪನೆ ವ್ಯಕ್ತಪಡಿಸಿದ್ದಾರೆ. ಅನೇಕ ದೇಶಗಳು ತಮ್ಮ ದೇಶದ ಆರ್ಥಿಕಾಭಿವೃದ್ಧಿಯನ್ನು ಆರ್ಥಿಕ ಯೋಜನೆಗಳ ಮೂಲಕ ಸಾಧಿಸ ಬೇಕೆಂದು ಹವಣಿಸುತ್ತಿದ್ದವು. ಆ ದೇಶಗಳ ಆರ್ಥಿಕ ಯೋಜನೆಗಳನ್ನು ತಯಾರಿಸುವುದಕ್ಕೆ ಟಿನ್‌ಬರ್ಗನ್‌ರವರು ತಮ್ಮ ಕೈಲಾದ ನೆರವು ನೀಡಿದ್ದಾರೆ. ಅನೇಕ ದೇಶಗಳಲ್ಲಿ ಆರ್ಥಿಕ ವಿಷಯಗಳಿಗೆ ಸಂಬಂಧಪಟ್ಟ ಹಾಗೆ ಅಂಕಿ ಅಂಶಗಳನ್ನು ಸಂಗ್ರಹಿಸುವ ವ್ಯವಸ್ಥೆಯು ಜಾರಿಗೆ ಬಂದಿತು. ಸರಿಯಾದ ಅಂಕಿ ಅಂಶಗಳನ್ನು ಸಂಗ್ರಹಿಸಿದ ಹೊರತು ಸರಿಯಾದ ಆರ್ಥಿಕ ಯೋಜನೆಯನ್ನು ತಯಾರಿಸಲು ಸಾಧ್ಯವಿಲ್ಲ ಎಂಬುದನ್ನು ಟಿನ್‌ಬರ್ಗನ್‌ರವರು ಆ ದೇಶಗಳ ಮುಖ್ಯಸ್ಥರಿಗೆ ಮನವರಿಕೆ ಮಾಡಿಕೊಟ್ಟರು. ಬಡ ದೇಶಗಳಲ್ಲಿ ನುರಿತ ಅಧಿಕಾರಿಗಳು ಮತ್ತು ರಾಜಕೀಯ ಮುಂದಾಳುಗಳು ದೊರೆಯುವುದು ಕಷ್ಟ ಎಂಬು ದನ್ನು ತಮ್ಮ ಅನುಭವದಿಂದ ಅರಿತುಕೊಂಡರು. ಆದುದರಿಂದ ಅಂತಹ ದೇಶಗಳ ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವಾಗ ಎಚ್ಚರಿಕೆಯಿಂದ ಇರಬೇಕೆಂಬುದನ್ನು ತಿಳಿದುಕೊಂಡರು. ಪ್ರಗತಿ ಸಾಧಿಸಿರುವ ದೇಶಗಳಲ್ಲಿ ಆರ್ಥಿಕ ಯೋಜನೆಗಳನ್ನು ಸಿದ್ಧ ಗೊಳಿಸುವ ಮಾದರಿಯಲ್ಲಿ ಈ ಬಡ ದೇಶಗಳಿಗೂ ಆರ್ಥಿಕ ಯೋಜನೆ ಸಿದ್ಧಗೊಳಿಸಿದರೆ ಏನೂ ಪ್ರಯೋಜನವಿಲ್ಲವೆಂದರು. ಅದರ ಬದಲು ಬಡ ದೇಶಗಳಲ್ಲಿರುವ ವಿಶಿಷ್ಟ ಪರಿಸ್ಥಿತಿಗಳನ್ನು ಗಮನಕ್ಕೆ ತೆಗೆದುಕೊಂಡು ಅವುಗಳ ಆಧಾರದ ಮೇಲೆ ಸರಳವಾದ ಯೋಜನಾ ಆದರ್ಶಗಳನ್ನು (Planning models) ರೂಪಿಸಿ ಅವುಗಳನ್ನು ಜಾರಿಗೆ ತರುವಂತೆ ಆ ದೇಶಗಳ ಸರ್ಕಾರಗಳಿಗೆ ಸಲಹೆ ಕೊಟ್ಟರು. ತಮ್ಮ ಇತರ ಸಹೋದ್ಯೋಗಿ ಗಳು ರಚಿಸುವಂತೆ ಜಟಿಲವಾದ ಯೋಜನಾ ಆದರ್ಶಗಳನ್ನು ರೂಪಿಸಲು ಹೋಗಲಿಲ್ಲ.

ಬಡದೇಶಗಳು ಹಂತ ಹಂತವಾಗಿ ಆರ್ಥಿಕ ಯೋಜನೆಯನ್ನು ಜಾರಿಗೆ ತರಬೇಕೆಂದು ಸಲಹೆ ಇತ್ತರು. ಬಡದೇಶಗಳಲ್ಲಿರುವ ಅನೇಕ ತೊಂದರೆಗಳನ್ನು ಇವರು ಮನಗಂಡರು. ಯೋಜನೆಗಳನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲು (ಹಿಂದುಳಿದ ದೇಶಗಳಲ್ಲಿ) ಸಾಕಷ್ಟು ಬಂಡವಾಳ, ಅನುಭವ ಹೊಂದಿರುವ ಇಂಜಿನಿಯರುಗಳು ಮತ್ತು ತಾಂತ್ರಿಕ ಸಮಸ್ಯೆಗಳ ವಿಷಯದಲ್ಲಿ ಸಾಕಷ್ಟು ವೃತ್ತಾಂತ ದೊರೆಯುವುದು ಕಷ್ಟ ಎಂಬುದನ್ನು ಅರಿತರು. ಟಿನ್‌ಬರ್ಗನ್‌ರವರು, ಹಿಂದುಳಿದ ದೇಶಗಳ ಮುಖ್ಯ ಲಕ್ಷಣಗಳ ಪೈಕಿ ದಕ್ಷತೆ ಇಲ್ಲದೆ ಕೆಲಸ ಮಾಡುವುದು ಒಂದು ಮುಖ್ಯ ಲಕ್ಷಣ ಎಂದು ಹೇಳಿದ್ದಾರೆ. ಈ ದೇಶಗಳಲ್ಲಿ ಈಗಿನ ಸನ್ನಿವೇಶಗಳಲ್ಲಿ ದಕ್ಷತೆಯಿಂದ ಕೆಲಸ ನಡೆಯುವುದನ್ನು ಅಪೇಕ್ಷಿ ಸುವುದು ಕಷ್ಟ ಎಂದು ಹೇಳಿದ್ದಾರೆ. ತಮ್ಮ ಸಹೋದ್ಯೋಗಿ ಅರ್ಥಶಾಸ್ತ್ರಜ್ಞರುಗಳು ಟಿನ್‌ಬರ್ಗನ್‌ರವರನ್ನು ಅನೇಕ ಸಾರಿ ಆಕ್ಷೇಪಿಸಿದ್ದಾರೆ. ಹಿಂದುಳಿದ ದೇಶಗಳಲ್ಲಿ ಟಿನ್ ಬರ್ಗನ್‌ರವರ ಸಲಹೆ ಇದ್ದರೂ ದಕ್ಷತೆಯಿಂದ ಯೋಜನೆಗಳನ್ನು ಕಾರ್ಯಗತ ಮಾಡದೆ ಹೋದುದಕ್ಕಾಗಿ ಇಂತಹ ಆಕ್ಷೇಪಣೆಯನ್ನು ಮಾಡಿದ್ದಾರೆ. ಆದರೂ ಟಿನ್‌ಬರ್ಗನ್ ರವರು ತಾಳ್ಮೆಯಿಂದ ಹಿಂದುಳಿದ ದೇಶಗಳ ಸರ್ಕಾರಿ ಅಧಿಕಾರಿಗಳೊಡನೆ ಕಲೆತು ಕೆಲಸ

ಮಾಡಿದ್ದಾರೆ. ಹಿಂದುಳಿದ ದೇಶಗಳಲ್ಲಿ ಸರ್ಕಾರಗಳು ಮತ್ತು ನಾಯಕರುಗಳು ಪ್ರಬಲ ಶಾಲಿಗಳಾಗಿರುವುದಿಲ್ಲ. ರಾಜಕೀಯ ದೃಷ್ಟಿಯಿಂದ ಅವರುಗಳು ಅನೇಕ ಸಲ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ಆದುದರಿಂದ ತಾವು ಕೈಗೊಂಡ ಕಾರ್ಯಗಳನ್ನು ದಕ್ಷತೆಯಿಂದ ಮತ್ತು ನಿರ್ಭಯದಿಂದ ಮಾಡಬೇಕಾದ ಶಕ್ತಿಯನ್ನು ನಾಯಕರುಗಳು ಅನೇಕ ವೇಳೆ ಹೊಂದಿರುವುದಿಲ್ಲ ಎಂಬುದು ಟಿನ್‌ಬರ್ಗನ್‌ರವರ ಅಭಿಪ್ರಾಯ. ಆರ್ಥಿಕವಾಗಿ ಹಿಂದುಳಿದ ದೇಶಗಳಲ್ಲಿ ಯೋಜನೆಯನ್ನು ಕಾರ್ಯಗತಗೊಳಿಸುವವರೂ ಮತ್ತು ರಾಜಕೀಯ ನಾಯಕರುಗಳೂ ಕೂಡ ಹಿಂದುಳಿದವರಾದುದರಿಂದ, ಹಿಂದುಳಿದ ದೇಶಗಳ ಆರ್ಥಿಕ ಯೋಜನೆಗಳ ಗುಣಮಟ್ಟವನ್ನು ಅಭಿವೃದ್ಧಿ ಹೊಂದಿರುವ ದೇಶಗಳ ಯೋಜನೆಗಳ ಗುಣಮಟ್ಟದೊಡನೆ ಹೋಲಿಸಿ ನೋಡಿ, ಹಿಂದುಳಿದ ದೇಶಗಳನ್ನು ಟೀಕಿಸುವುದು ಸಾಧುವಾದುದಲ್ಲ ಎಂದು ಹೇಳಿದ್ದಾರೆ. ಹೀಗೆ ಹಿಂದುಳಿದ ದೇಶಗಳಲ್ಲಿ ಕೆಲಸ ಮಾಡುವಾಗ ಟಿನ್‌ಬರ್ಗನ್‌ರವರು ಅನೇಕ ಸಮಸ್ಯೆಗಳನ್ನು ಎದುರಿಸಿದರೂ ಅವುಗಳೊಡನೆ ತಾವು ಇಟ್ಟುಕೊಂಡಿರುವ ಬಾಂಧವ್ಯವನ್ನು ಮಾತ್ರ ಅವರು ಮುಂದುವರಿಸಿಕೊಂಡು ಹೋಗಿದ್ದಾರೆ. ಆ ದೇಶಗಳೊಡನೆ ಕೆಲಸ ಮಾಡುವುದಕ್ಕೆ ಅವರಿಗೆ ಇರುವ ಮುಖ್ಯ ಪ್ರೇರಣೆ ಎಂದರೆ ಮಾನವತ್ವದಲ್ಲಿ ಅವರಿಗೆ ಇರುವ ನಂಬಿಕೆಯೆ. ಹಿಂದಿನ ವಸಾಹತಿನ ನೀತಿಯಿಂದಾಗಿ ಬಡದೇಶಗಳು ಈಗಿನ ಆರ್ಥಿಕ ದುಸ್ಥಿತಿಯನ್ನು ಅನುಭವಿಸುತ್ತವೆ. ಆದುದರಿಂದ ಅವುಗಳ ಅಭಿವೃದ್ಧಿಗೆ ತಮ್ಮ ಕೈಲಾದ ಸೇವೆಯನ್ನು ಮಾಡಿ ಯುರೋಪಿಯನ್ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಮಾಡಿದ್ದ ತಪ್ಪನ್ನು ಅಳಿಸಬೇಕೆಂಬುದೇ ಟಿನ್‌ಬರ್ಗನ್‌ರವರ ಮಹದಾಶಯ. ಆದುದರಿಂದಲೇ ಅನೇಕ ಹಿಂದುಳಿದ ರಾಷ್ಟ್ರಗಳ ಸರ್ಕಾರಗಳು ಅವರನ್ನು ಗೌರವದಿಂದ ಕಾಣುತ್ತವೆ.

ಆರ್ಥಿಕ ನೀತಿಗಳನ್ನು ರೂಪಿಸುವುದರಲ್ಲಿ ಕೂಡ ಟಿನ್‌ಬರ್ಗನ್‌ರವರು ಹೊಸ ಮಾರ್ಗದರ್ಶನ ಮಾಡಿದ್ದಾರೆ. ಯಾವುದಾದರೂ ದೇಶದಲ್ಲಿ ಬೆಲೆಗಳನ್ನು ಸ್ಥಿಮಿತದಲ್ಲಿಡುವಾಗ, ಉದ್ಯೋಗ ಅವಕಾಶಗಳನ್ನು ಹೆಚ್ಚಿಸುವಾಗ, ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಅಸಮಾನತೆ ತಗ್ಗಿಸುವಾಗ, ಆದಷ್ಟು ಸಮನಾಗಿ ವರಮಾನವನ್ನು ಸಮಾಜದಲ್ಲಿ ಹಂಚಲು ಯತ್ನ ಮಾಡಿದಾಗ, ಸಮಸ್ಯೆಗಳು ಉದ್ಭವಿಸಿದರೆ ಅವುಗಳನ್ನು ಏಕಕಾಲದಲ್ಲಿ ಸಿಫಾರಿಸಲು ಅರ್ಥಶಾಸ್ತ್ರಜ್ಞರು ಅಸಮರ್ಥರಾಗಿದ್ದರು. ಬಹಳ ಕಾಲದವರೆಗೆ ಅರ್ಥಶಾಸ್ತ್ರಜ್ಞರು ಇಂತಹ ಸಮಸ್ಯೆಗಳನ್ನು ಎದುರಿಸಲು ಪ್ರತ್ಯೇಕವಾಗಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಸಲಹೆ ಮಾಡುತ್ತಿದ್ದರು. ಬೆಲೆಗಳನ್ನು ಸ್ಥಿಮಿತದಲ್ಲಿ ಇಡಬೇಕಾದರೆ ಹಣದ ಚಲಾವಣೆಯ ಮೇಲೆ ಹತೋಟಿ ಇಟ್ಟುಕೊಳ್ಳಬೇಕೆಂದು ಸೂಚಿಸುತ್ತಿದ್ದರು. ಉದ್ಯೋಗ ಅವಕಾಶಗಳನ್ನು ಹೆಚ್ಚಿಸಬೇಕಾದರೆ ಕಾರ್ಮಿಕರ ಮಾರುಕಟ್ಟೆ ವಿಷಯದಲ್ಲಿ ಸರ್ಕಾರ ಪ್ರವೇಶಿಸಬೇಕೆಂದು ಸೂಚಿಸುತ್ತಿದ್ದರು. ಅಂತರ ರಾಷ್ಟ್ರೀಯ ವ್ಯಾಪಾರದಲ್ಲಿ ಅಸಮಾನತೆ ಉಂಟಾದರೆ ವಿದೇಶಿ ವಿನಿಮಯದ ಬಳಕೆಯ ಮೇಲೆ ಹತೋಟಿ ಇಟ್ಟುಕೊ

ಳ್ಳಬೇಕೆಂದು ಸೂಚಿಸುತ್ತಿದ್ದರು. ವರಮಾನ ಹಂಚುವಿಕೆಯಲ್ಲಿ ಸಮಾನತೆ ಉಂಟುಮಾಡಬೇಕಾದರೆ ರಾಜ್ಯಾದಾಯದ ಮತ್ತು ತೆರಿಗೆಯ ನೀತಿಗಳಲ್ಲಿ ಬದಲಾವಣೆ ಮಾಡಬೇಕೆಂದು ಸೂಚಿಸುತ್ತಿದ್ದರು. ಅನೇಕ ದೇಶಗಳಲ್ಲಿ ಮೇಲ್ಕಂಡ ಎಲ್ಲಾ ಸಮಸ್ಯೆಗಳು ಒಟ್ಟಾಗಿ ಕಾಣಿಸಿಕೊಂಡಾಗಲೂ ಏಕ ಕಾಲದಲ್ಲಿ ಅವುಗಳ ನಿವಾರಣೆಗೆ ತಕ್ಕ ಸಲಹೆ ಕೊಡಲು ಅರ್ಥಶಾಸ್ತ್ರಜ್ಞರು ನಿಸ್ಸಹಾಯಕರಾಗಿದ್ದರು.

ಟಿನ್‌ಬರ್ಗನ್‌ರವರು ತಮ್ಮ ದೇಶದ ಕೇಂದ್ರ ಯೋಜನಾ ಕಚೇರಿಯ ಮುಖ್ಯಾಧಿಕಾರಿಗಳಾಗಿದ್ದಾಗ, ರಾಷ್ಟ್ರಾನುಭೋಗ, ರಾಷ್ಟ್ರಾದಾಯ ಮುಂತಾದ ಮಹದಾರ್ಥಿಕ (ಮ್ಯಾಕ್ರೋ ಇಕನಾಮಿಕ್) ಪರಿಸ್ಥಿತಿಗಳನ್ನು ಗಣನೆಗೆ ತೆಗೆದುಕೊಂಡು ಅವುಗಳಿಗೆ ತಮ್ಮ ಗಣಿತಶಾಸ್ತ್ರ ವಿಧಾನವನ್ನು ಅನ್ವಯಿಸಿ ಒಂದು ಹೊಸ ಆರ್ಥಿಕ ನೀತಿಯನ್ನು ರೂಪಿಸುವ ವಿಧಾನವನ್ನು ಕಂಡುಹಿಡಿದರು. ಮೇಲ್ಕಂಡ ಸಮಸ್ಯೆಗಳು ಏಕ ಕಾಲದಲ್ಲಿ ಒಂದು ದೇಶದಲ್ಲಿ ಕಾಣಿಸಿಕೊಂಡಾಗ ಈ ವಿಧಾನವನ್ನು ಉಪಯೋಗಿಸಿದರೆ ಏಕಕಾಲದಲ್ಲಿ ಅವುಗಳಿಗೆ ಪರಿಹಾರವನ್ನು ಕಂಡುಹಿಡಿಯಬಹುದೆಂದು ಟಿನ್‌ಬರ್ಗನ್‌ರವರು ತೋರಿಸಿಕೊಟ್ಟರು. ಆದರೆ ಇನ್ನೂ ಅನೇಕ ಅರ್ಥ ಶಾಸ್ತ್ರಜ್ಞರು ಈ ವಿಷಯದಲ್ಲಿ ಸಂಪೂರ್ಣವಾಗಿ ಟಿನ್‌ಬರ್ಗನ್‌ರವರ ಕೊಡುಗೆಯನ್ನು ಮೆಚ್ಚಿಕೊಂಡಿಲ್ಲ.

ಟಿನ್‌ಬರ್ಗನ್‌ರವರು ಆರ್ಥಿಕ ತತ್ವಗಳನ್ನು ರೂಪಿಸುವಾಗ, ತತ್ವಗಳನ್ನು ಪ್ರತಿಪಾದಿಸುವ ದೃಷ್ಟಿಯೊಂದನ್ನೇ ಇಟ್ಟುಕೊಂಡಿರುವುದಿಲ್ಲ. ತಾವು ಪ್ರತಿಪಾದಿಸಿದತತ್ವಗಳು ವಾಸ್ತವ ಪ್ರಪಂಚದಲ್ಲಿ ಪ್ರಯೋಗಕ್ಕೆ ಸಿದ್ಧವಾಗಿ ಫಲಿತಾಂಶಗಳನ್ನು ನೀಡುವಂತಹವುಗಳಾಗಿರಬೇಕೆಂದು ಅವರ ಮುಖ್ಯ ಉದ್ದೇಶ. ಆದುದರಿಂದ ಸಮಾಜದ ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯುವ ಉದ್ದೇಶದಿಂದ ಅವರು ತತ್ವಗಳನ್ನು ಪ್ರತಿಪಾದಿಸಲು ಯತ್ನಿಸುತ್ತಾರೆ. ಹೀಗೆ ಅವರು ಆರ್ಥಿಕ ತತ್ವಗಳು ಆರ್ಥಿಕ ನೀತಿಯನ್ನು ರೂಪಿಸಲು ಸಹಾಯಕವಾಗಿರುವಂತೆ ಮಾಡಲು ಶ್ರಮಿಸಿದ್ದಾರೆ. ತಮ್ಮ ಗಣಿತ ಶಾಸ್ತ್ರದ ಆದರ್ಶಗಳು (mathematical models) ಸಮಾಜದ ಜೀವನಕ್ಕೆ ಹೊಂದಿಕೊಂಡು ಅರ್ಥಗರ್ಭಿತವಾಗಿರುವಂತೆ ಮಾಡಿದ್ದಾರೆ. ಗಣಿತಶಾಸ್ತ್ರ ಮತ್ತು ಸಂಖ್ಯಾ ಶಾಸ್ತ್ರಗಳನ್ನು ಅರ್ಥಶಾಸ್ತ್ರದೊಂದಿಗೆ ಮಿಳನ ಮಾಡಿ ಸಂಶೋಧನೆ ನಡೆಸಿ, ಸಮಾಜದ ಸಮಸ್ಯೆಗಳ ಮೇಲೆ ಹೊಸ ಬೆಳಕು ಚೆಲ್ಲುವಂತೆ ಮಾಡಿ, ಒಂದು ನೂತನ ಪದ್ಧತಿಯನ್ನು ಅರ್ಥಶಾಸ್ತ್ರದಲ್ಲಿ ಬೆಳೆಸಲು ಟಿನ್‌ಬರ್ಗನ್‌ರವರು ಕಾರಣರಾಗಿದ್ದಾರೆ. ಕಳೆದ 40 ವರ್ಷಗಳಿಂದ (1929–1969) ಅರ್ಥಶಾಸ್ತ್ರಕ್ಕೆ ಹೊಸ ರೂಪವನ್ನು ಕೊಡಲು ಶ್ರಮಿಸಿ ಅರ್ಥಶಾಸ್ತ್ರವು ಇತರ ವಿಜ್ಞಾನಗಳ ಮಟ್ಟಕ್ಕೆ ಬರುವಂತೆ ಮಾಡಿದ್ದಾರೆ. ಇವರು ಕೈಗೊಂಡ ಶ್ರಮದ ಫಲವಾಗಿಯೇ ಇಂದು ಸಮಾಜಶಾಸ್ತ್ರಗಳ ಪೈಕಿ ಅರ್ಥಶಾಸ್ತ್ರಕ್ಕೆ ಮಹತ್ವದ ಸ್ಥಾನ ದೊರಕಿದೆ. ಇದನ್ನು ಮನಗಂಡು ನೊಬೆಲ್ ಪಾರಿತೋಷಕ ಸಮಿತಿಯವರು ಟಿನ್‌ಬರ್ಗನ್‌ರವರಿಗೆ ಮೊದಲನೆಯ ನೊಬೆಲ್ ಪ್ರಶಸ್ತಿಯನ್ನು ಕೊಟ್ಟು ಗೌರವಿಸಿದ್ದಾರೆ.

ಆಧಾರಶ್ರುತಿಯ ಮನೋವೈಜ್ಞಾನಿಕ ಸಮೀಕರಣ

ಟಿ. ಆರ್. ನಾಗರತ್ನ

ಮಾಧುರ್ಯ ಭಾರತೀಯ ಸಂಗೀತದ ಭಾವನಾತ್ಮಕ ಕ್ರಿಯೆಗೆ ಮೂರ್ತರೂಪ ಕೊಡುವ ಧ್ವನಿವಿಶೇಷ ; ಅಂದರೆ ಸಂಗತಸ್ವರಗಳು ಅಥವಾ ಸಂವಾದಿಸ್ವರಗಳ ಒಕ್ಕೂಟದಿಂದ ಉಂಟಾಗುವ ಮಧುರ ಸಾಮರಸ್ಯ. ಭಾವಗ್ರಾಹಕ ಶಕ್ತಿಯಿಂದ ವಿವೇಚಿಸುವುದಾದರೆ ಭಾರತೀಯ ಸಂಗೀತದ ಮಾಧುರ್ಯವು ಸ್ವರಶ್ರೇಣಿಯ 'ತರತಮರೂಪ' ಅಥವಾ 'ಅವ್ಯಹಿತ' ಕ್ರಿಯೆಯಿಂದ ಉಂಟಾಗುತ್ತದೆ. ಉದಾ: ಭಾರತೀಯ ಸಂಗೀತದ ಮಾಯಾಮಾಳವಗೌಳ ಮತ್ತು ಔತ್ತರೇಯ ಸಂಗೀತಪದ್ಧತಿಯ ಬಿಲಾವಲ್. ಈ ಎರಡು ರಾಗಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಗಾಯಕ ಅಥವಾ ವಾದಕ ತಾನು ರೂಢಿಸಿಕೊಳ್ಳುವ ಪ್ರತಿಯೊಂದು ಸ್ವರದ ತೀವ್ರತೆ-ಕೋಮಲತೆಗಳನ್ನು ಹಾಗೂ ಅವುಗಳ ಮೌಲ್ಯವನ್ನು ನಿರ್ಧರಿಸುವ ರೀತಿ ಗಮ್ಯವಾಗುತ್ತದೆ. ಸಂಗೀತದಲ್ಲಿ ಅವ್ಯಹಿತ ಕ್ರಿಯೆ ಒದಗುವುದು ನಾವು ರೂಢಿಸಿಕೊಳ್ಳುವ ಆಧಾರ ಶ್ರುತಿಯಿಂದ. ಇಲ್ಲಿ ಪ್ರತಿಯೊಂದು ಸ್ವರವೂ ಆಧಾರಶ್ರುತಿಯ ಹಿನ್ನಲೆಯೊಡನೆಯೇ ಸ್ಥಾಪಿತಗೊಂಡು ಅವುಗಳ ನಾದಗುಣದ ಔಚಿತ್ಯ ಪ್ರತ್ಯೇಕವಾಗಿ ಅರಿವಾಗುತ್ತದೆ.

ಮಾಧುರ್ಯ ಸಂಗೀತದಲ್ಲಿ ನಾದಗುಣದ ಭಾವನಾತ್ಮಕ ಶಕ್ತಿ ಅವ್ಯಹಿತವಾಗಿ ಸಂವಾದಿ ಮತ್ತು ವಿವಾದಿಸ್ವರಗಳ ಸಾಂಗತ್ಯದಿಂದ ಪರಿಣಮಿಸಿ ಆಧಾರಶ್ರುತಿಯೊಡನೆ ಮಿಳಿತವಾಗಿ ಗೋಚರವಾಗುತ್ತದೆ. ಆದ್ದರಿಂದ ಆಧಾರಶ್ರುತಿಯ ಕ್ರಿಯೆಗಳು ಎರಡು ವಿಧ: (i) ನಾದಗುಣಕ್ಕೆ ಹಿನ್ನೆಲೆ ಮತ್ತು (ii) ಆಧಾರಶಬ್ದಪರಿಮಿತಿ. ಈ ಶಬ್ದ ಪರಿಮಿತಿಯಲ್ಲಿ ಪ್ರಕ್ರಿಯೆಗಳು ಎರಡು : ಆಧಾರಸ್ವರವು ದೃಢವೂ ಹೌದು ; ಅಲ್ಲದೆ ನಿಕ್ಷೇಪ ಧ್ವನಿಯೂ ಹೌದು.

ಸಂವಾದಿ ವಿವಾದಿ ಸ್ವರಸಾಮರಸ್ಯ

ಈ ಸಾಮರಸ್ಯ ಪಾಶ್ಚಾತ್ಯ ಸಂಗೀತದಲ್ಲಿ ಕಂಡು ಬಂದರೂ, ಭಾರತೀಯ ಸಂಗೀತದಲ್ಲಿ ಅದು ಲುಪ್ತವಾದ ಭಾಗ. ಪಾಶ್ಚಿಮಾತ್ಯ ಸಂಗೀತದಲ್ಲಿ ಸಂವಾದಿ ವಿವಾದಿ ಸಾಂಗತ್ಯವು ಸಮರಸ ಸ್ವರಮೇಳದಲ್ಲಿ (chords) ಅದು ಸ್ಥಾಪಿತವಾಗುವ ಕ್ರಮವನ್ನು ಅನುಸರಿಸುತ್ತದೆ. ಅಲ್ಲಿ ಸ್ವರಗಳು ಸಾಪೇಕ್ಷ ಭಾಗಗಳು. ಆದ್ದರಿಂದ ಯಾವ ಸ್ವರವೂ ಆಧಾರಶ್ರುತಿಗೆ ನಿಯಮಿತವಾದ ಸಂಪರ್ಕವನ್ನು ಹೊಂದಲು

ಸಾಧ್ಯವಿಲ್ಲ; ನಾದದ ರಸಭಾವಗಳೂ ಸಮರಸಮೇಳಕ್ಕನುಗುಣವಾಗಿ ಬದಲಾಗುತ್ತವೆ. ಮಾಧುರ್ಯ ಸಂಗೀತದಲ್ಲಿ ಸ್ವರಗಳೆಲ್ಲವೂ ಸಾಪೇಕ್ಷವಲ್ಲದ ನಾದರೂಪಗಳು. ಇಲ್ಲಿ ಒಂದು ಆಧಾರಶ್ರುತಿಯಲ್ಲಿ ಯಾವುದಾದರೊಂದು ರಚನೆಯನ್ನು ಪ್ರಾರಂಭಿಸಿದರೆ, ಆ ರಚನೆಯು ನಿಯಮಿತ ಆಧಾರ ಶ್ರುತಿಗೇ ಸೀಮಿತವಾಗಿ ಅದರ ಮಾಧುರ್ಯ ಮತ್ತು ನಾದಗುಣಗಳೆರಡರಲ್ಲಿ ಆಧಾರಶ್ರುತಿಯೊಡನೆ ಸಾಮರಸ್ಯವೇರ್ಪಡುತ್ತದೆ. ಆದ್ದರಿಂದಲೇ ಭಾರತೀಯ ಸಂಗೀತದಲ್ಲಿ ಶ್ರುತಿಸಾಮರಸ್ಯವಿದ್ದಲ್ಲಿ ಶಾಂತ, ಕರುಣ, ಅದ್ಭುತ ಮುಂತಾದ ರಸಭಾವಗಳು ಆವಿರ್ಭಾವವಾಗುತ್ತವೆ. ಅಂತೆಯೇ ಸಂವಾದಿ ವಿವಾದಿಸ್ವರಗಳೆರಡರ ಮೇಳವಿದ್ದಲ್ಲಿ ಶೋಕರಸ ಮಾತ್ರ ಆವಿರ್ಭವಿಸಲು ಸಾಧ್ಯ. ರಸಭಾವಗಳು ಮಾತ್ರ ಈ ಎರಡು ಸಂವಾದಿ ವಿವಾದಿ ಸ್ವರಗಳ ಪರಿಮಾಣಕ್ಕನು ಗುಣವಾಗಿ ಏರ್ಪಡುತ್ತವೆ. ವಿವಾದಿ ಸಂಪರ್ಕವೂ ಸಂವಾದಿಯಂತೆಯೇ ಸಂಗೀತಕ್ಕೆ ಅವಶ್ಯಕವಾದ ಅಂಗ. ಸಂಗೀತದ ರಸಾಭಿಜ್ಞಾನದ (Aesthetics) ತತ್ವವೆಂದರೆ ವಿವಾದಿತ್ವವನ್ನು ಸಂವಾದಿತ್ವಕ್ಕೆ ರೂಪಾಂತರಿಸುವ ವಿಶ್ಲೇಷಣೆ. ಸೌಂದರ್ಯ ಶಾಸ್ತ್ರತತ್ವದ ಪ್ರಕಾರ ಉದ್ರೇಕದಿಂದ ಪ್ರಶಾಂತಸ್ಥಿತಿಗೆ ಪರಿವರ್ತಿಸುವುದು. ಸಿಶೋರ್ ಕಾರ್ಲ್‌ಇ ಎಂಬ ಮನೋವೈಜ್ಞಾನಿಕ ಸಂಗೀತ ಶಾಸ್ತ್ರಜ್ಞ ತನ್ನ 'ಸೈಕಾಲಜಿ ಆಫ್ ಮ್ಯೂಸಿಕ್' ಎಂಬ ಗ್ರಂಥದಲ್ಲಿ ಸಂವಾದಿ ವಿವಾದಿ ಸ್ವರಗಳನ್ನು ಈ ಕೆಳಕಂಡಂತೆ ವಿವರಿಸಿದ್ದಾನೆ:

c^1c^2, c^1g^2, c^1a^1, c^1E^1, c^1F^1, $c^1a^1{}_b$,

$c^1E^1{}_b$, c^1G^1b, $c^1b^1{}_b$, c^1d^1, c^1b^1, $c^1d^1{}_b$

ಈ ಸ್ವರಶ್ರೇಣಿಗಳೆಲ್ಲವೂ ನಯವಾದ, ಶುದ್ಧವಾದ ಮತ್ತು ಸಂಮಿಳಿತರಸ ಭಾವಗಳನ್ನು ರೂಪಿಸುತ್ತವೆ. ಆದ್ದರಿಂದ ಮಾಧುರ್ಯದ ಗತಿಯು ಸ್ವರಗಳ ಹಾಗೂ ಅವುಗಳ ನಾದಗುಣಕ್ಕನುಗುಣವಾಗಿರುತ್ತವೆಂಬುದು ಸರ್ವವಿದಿತ. ಭಾರತೀಯ ಸಂಗೀತ ಪದ್ಧತಿಯಲ್ಲಿ ಶ್ರುತಿಯ ಹಿನ್ನೆಲೆಯನ್ನು ಸಾಮಾನ್ಯವಾಗಿ ತಂಬೂರಿವಾದ್ಯವು ಒದಗಿಸುವುದರಿಂದ ಈ ವಾದ್ಯದ ಕೂಲಂಕಷ ವಿಮರ್ಶೆ ಅಗತ್ಯ. ಆಧಾರ ಶ್ರುತಿಯ ಹಿನ್ನೆಲೆಯನ್ನು ಜ್ಞೇಯಸಾಧ್ಯ (objective) ಹಾಗೂ ಮನೋಗ್ರಾಹ್ಯ (subjective) ಎಂಬೆರಡು ದೃಷ್ಟಿಕೋನಗಳಿಂದ ಪರಿಗಣಿಸಬಹುದು. ತಂಬೂರಿಯಲ್ಲಿ ಉಗಮವಾಗುವ ಸ್ವರಗಳು ಹಾಗೂ ತಂತಿಗಳ ಅನುರಣನೆಯಿಂದುಂಟಾಗುವ ಸ್ವಯಂಭೂಸ್ವರಗಳು ಜ್ಞೇಯಸಾಧಕ ಹಿನ್ನೆಲೆಯನ್ನು ಒದಗಿಸುತ್ತವೆ. ರಾಗಗಳಲ್ಲಿ ಬರುವ ಸ್ವರಗಳಿಗನುಗುಣವಾಗಿ ತಂಬೂರಿಯ ನಾಲ್ಕು ತಂತಿಗಳನ್ನು ಸಾಮಾನ್ಯವಾಗಿ

ಪ ಸಂ ಸಂ ಸ, ಮ ಸಂ ಸಂ ಸ, ನಿ ಸಂ ಸಂ ಸ.

G_1 c c c_1, F_1 c c c_1, B c c c_1

ಎಂದು ಶ್ರುತಿಮಾಡಲಾಗುತ್ತದೆ. ಮೇಲಿನ ಮೂರು ವಿಧಗಳಲ್ಲಿ ಕೊನೆಯದು ಅಷ್ಟಾಗಿ ರೂಢಿಗೆ ಹೊರತಾದುದು. ಮೊದಲ ಮತ್ತು ಎರಡನೆಯ ವಿಧಗಳಲ್ಲಿ ಅಂದರೆ, 'ಪ' ಶ್ರೇಣಿ ಮತ್ತು 'ಮ' ಶ್ರೇಣಿಯಲ್ಲಿ ಅವುಗಳ ಮೇಲೆ ಉಗಮವಾಗುವ ಇತರ ಸ್ವರಗಳ ಜೋಡಣೆ ಕೆಳಕಂಡಂತಿದೆ:

"ಪ" ಶ್ರೇಣಿ

	1	2	3	4	5	6	7	8	9
C	c	c^1	g^1	c^2	E^2	G^2	$7b^2{}_b$	c^3	d^3
C_1	c^1	c	g^1	c^1	E^1	G^1	$7b^1{}_b$	c^2	d^2
G_1	G^1	G	d^1	G^1	b^1	d^2	$7Fb^2$	g^2	a^2

"ಮ" ಶ್ರೇಣಿಯಲ್ಲಿ c ಮತ್ತು c^1 ಸ್ವರಗಳೊಡನೆ F_1 F_1 F c^1 F^1 a^1 c^2 $7Eb^2$ F^2 G^2 ಎಂದಾಗುತ್ತದೆ.

ಪ್ರಾಯೋಗಿಕವಾಗಿ ಮೇಲಿನ ಸಂಗತ ಸ್ವರಗಳ ತೀವ್ರತೆಯನ್ನು ಕಂಡುಹಿಯಲು ಸಾಧ್ಯವಿದೆ. ತಂಬೂರಿಯ ತಂತಿಗಳ ಸ್ಪಂದನಗಳು ಹೆಲ್ಮ್ಸ್ ಹೋಲ್ಟ್ಸ್ ನ ಸಿದ್ಧಾಂತಕ್ಕೆ ಅನುವಾದಂತೆ ಕಾಣುವುದಿಲ್ಲ. ಅವು ತಂಬೂರಿಯ ತಂತಿಗಳಲ್ಲಿ ನಿಯಮಿತವಲ್ಲದ ಸ್ವಯಂಭೂಸ್ವರಗಳನ್ನು ಅದೇ ಸ್ಥಾಯಿಬಿಂದುವಿನಿಂದ ಉತ್ಪಾದನೆ ಮಾಡುತ್ತವೆ. ಡಾ॥ ಸಿ. ವಿ. ರಾಮನ್ ಅವರ ನಿರ್ಣಯದ ಪ್ರಕಾರ ಇದಕ್ಕೆ ಕಾರಣವೆಂದರೆ ತಂಬೂರಿಯ ತಂತಿಗಳು ಕುದುರೆಯ ಬಿಲ್ಲಾಕಾರದ ವಲನದಮೇಲೆ ಹಾದು ಹೋಗುವುದು. ಸ್ವಯಂಭೂ ಸ್ವರಗಳ ತೀವ್ರತೆಯು ತಂಬೂರಿಯ ಮೀಟುಗೆರೆಯಿಂದ ಉಂಟಾಗುವ ಧ್ವನಿಗಿಂತ ಭಿನ್ನವಾದುದೆಂದು ರಾಮನ್ ಅವರು ಸ್ಥಿರೀಕರಿಸಿದ್ದಾರೆ. ತಂಬೂರಿಯನ್ನು ಕುದುರೆಯಿಂದ ಬಲಕ್ಕೆ $\frac{1}{3}$ಭಾಗದಲ್ಲಿ ಮೀಟುವುದು ಅನಿವಾರ್ಯ ಎಂದಮೇಲೆ ರಾಮನ್‌ರವರ ಹೇಳಿಕೆಯಂತೆ ಒಂದಕ್ಕೊಂದು ಸ್ವಯಂಭೂಸ್ವರಗಳ ತೀವ್ರತೆಯ ಪರಿಮಾಣ ಅವು ಉದ್ಭವಿಸುವ ಸ್ವರದಿಂದ ಪ್ರತ್ಯೇಕವಾಗಿರುವುದು ಆಶ್ಚರ್ಯವೆನಿಸುವುದಿಲ್ಲ.

ಮನೋಗ್ರಾಹ್ಯ ಸ್ವರಗಳು

ಮನೋಗ್ರಾಹ್ಯ ಸ್ವರಗಳೆಂದರೆ ನಮ್ಮ ಕಿವಿಯ ಒಳಭಾಗದಲ್ಲಿ ಶ್ರಾವ್ಯಸಾಧ್ಯವಾಗಿ ಉಚ್ಚಾರಣಾಸ್ವರೊಡನೆ ಕೇಳದೇ ಇರುವ ಸ್ವರಗಳು. ಇದು ಕಿವಿಯ ಶಬ್ದತರಂಗದಲ್ಲಿ ಕಂಡುಬರುವ ಅಸ್ಥಿತ ರೇಖಾವಿನ್ಯಾಸ ಮತ್ತು ಅಸಮ ಪ್ರಮಾಣದ ಸಾಗಣೆಯಿಂದ ಉಂಟಾಗುತ್ತದೆ. ಒಂದು ಉಚ್ಚಾರಣಾಸ್ವರದ ಪೌಲ್ಯ ಮತ್ತು ಅದರ ವಿಸ್ತೀರ್ಣ 'ಅ' ಎಂದಾದರೆ, ಕಿವಿಯಲ್ಲಿ ಮೇಲೆ ತಿಳಿಸಿದ ಕ್ರಿಯೆಯಿಂದಾಗಿ '2ಅ', '3ಅ', '4ಅ' ಎಂದು ಪೌಲ್ಯವು ಹೆಚ್ಚುತ್ತಾ ಹೋಗುತ್ತದೆ. ಈಪೌಲ್ಯಗಳನ್ನು ಶ್ರಾವಕ ಸ್ವಯಂ

ಭೂಸ್ವರಗಳೆಂದು (Aural harmonics) ಕರೆಯುತ್ತಾರೆ. ಇದೇ ರೀತಿಯಲ್ಲಿ ಎರಡು ಸ್ವರಗಳ ಉಚ್ಚಾರಣಾ ಬಿಂದುವಿನಿಂದ ಉಂಟಾಗುವ ಸ್ವಯಂಭೂಸ್ವರಗಳು ಒಂದರೊಡನೊಂದು ಕಲೆತು ಕಿವಿಯೊಳಗೆ ಶ್ರಾವ್ಯವಾಗುತ್ತವೆ ಮತ್ತು ಅವುಗಳ ಶ್ರಾವಕ ಸ್ವಯಂಭೂಸ್ವರಗಳು ಸಹ ಗೋಚರಿಸುತ್ತವೆ. ಆದ್ದರಿಂದ ಮನೋಗ್ರಾಹ್ಯಸ್ವರಗಳನ್ನು ಶ್ರಾವಕ ಸ್ವಯಂಭೂ ಸ್ವರಗಳು ಮತ್ತು ಸಂಯೋಗ ಸ್ವರಗಳೆಂದು ಎರಡು ವಿಧಗಳಾಗಿ ವಿಂಗಡಿಸಬಹುದು.

ಶ್ರಾವಕ ಸ್ವಯಂಭೂಸ್ವರಗಳು

ಇವು ಕಿವಿಯ ಶಬ್ದತರಂಗದ ಅಸಂಗತ ರೇಖಾವಿನ್ಯಾಸ ಮತ್ತು ಅಸಮ ಪ್ರಮಾಣದಿಂದುಂಟಾಗುವಂತಹವು. ಆದರೆ ಇವು ಗಮ್ಯವಾಗಬೇಕಾದರೆ ಉಚ್ಚಾರಣಾಸ್ವರದ ತೀವ್ರತೆಯು ಅತಿ ಹೆಚ್ಚಿನದಾಗಿರಬೇಕು. ಒಂದು ತಂಬೂರಿಯ ತಂತಿಗಳಲ್ಲಿ ಈ ರೀತಿಯ ಅನೇಕ ಶ್ರಾವಕ ಸ್ವಯಂಭೂಸ್ವರಗಳು ಉತ್ಪಾದನೆಯಾಗುತ್ತವೆ. ತಂಬೂರಿಯ ಜ್ಞೇಯಸಾಧ್ಯ ಸಂಗತಸ್ವರಗಳ ತೀವ್ರತೆ ಎಷ್ಟು ಶ್ರಾವಕ ಸ್ವಯಂಭೂಸ್ವರಗಳನ್ನು ಉಂಟುಮಾಡಲು ಸಾಧ್ಯ ಎಂಬುದೇ ಪ್ರಶ್ನೆ. ಉದಾಹರಣೆಗೆ, ಒಂದು ಆಧಾರಸ್ವರದ ತೀವ್ರತೆ ಅಥವಾ ಮೌಲ್ಯ 'O' ಎಂದಾದರೆ ಅದರಿಂದುಂಟಾಗುವ ಸ್ವಯಂಭೂಸ್ವರ ಶ್ರೇಣಿಗಳ ಮೌಲ್ಯಗಳು – 1.4, – 2.6, – 3.7, – 4.8 ಎಂದಾಗುತ್ತವೆ. ಇಲ್ಲಿ ಮತ್ತೊಂದು ಅನುಭವಗಮ್ಯ ಅಂಶವೆಂದರೆ ಸಮ ಮತ್ತು ಅಸಮ ಶ್ರಾವಕ ಸ್ವಯಂಭೂಸ್ವರಗಳ ಪರಸ್ಪರ ತೀವ್ರತೆ. ನ್ಯೂಮನ್, ಸ್ಟೀವನ್ಸ್ ಮತ್ತು ಡೇವಿಸ್ ಮುಂತಾದ ವಿಜ್ಞಾನಿಗಳು ಹಂದಿ ಮತ್ತು ಬೆಕ್ಕುಗಳ ಕಿವಿಗಳಿಗೆ ಗ್ರಾಹ್ಯಸಾಧ್ಯವಾಗುವ ಸಂಗತಧ್ವನಿಯನ್ನು ಪ್ರಾಯೋಗಿಕ ಸಂಶೋಧನೆಯಿಂದ ಪರೀಕ್ಷಿಸಿ ಸಮಸಂಗತ ಸ್ವರಗಳಿಗಿಂತ ಅಸಮಸಂಗತ ಸ್ವರಗಳೇ ಹೆಚ್ಚು ಧ್ವನಿದಾರ್ಢ್ಯತೆಯನ್ನು ಹೊಂದುವುದೆಂದು ನಿರ್ಧರಿಸಿದ್ದಾರೆ.

ಸಂಯೋಗ ಸ್ವರಗಳು

ಎರಡು ಪೂರ್ಣಸ್ವರಗಳು ಒಂದೇಬಾರಿ ಕಿವಿಗೆ ಶ್ರಾವ್ಯವಾದಾಗ ಅವುಗಳ ಸಂಗತ ಸ್ವರಗಳು ಪ್ರತ್ಯೇಕವಾಗಿ ಗೋಚರಿಸುವುದರ ಜೊತೆಗೆ ಅವುಗಳ ಒಂದು ಮಿಶ್ರಧ್ವನಿಯೂ ಗೋಚರಿಸುತ್ತದೆ. ಸ್ವರಳೆರಡು 'ಡಿ' ಮತ್ತು 'ಬಿ' ಎಂದಾದರೆ ಅವುಗಳ ಮಿಶ್ರಧ್ವನಿಯು ಡಿ + ಬಿ, 2 ಡಿ + ಬಿ, 2 ಬಿ + ಡಿ ಎಂದಾಗುತ್ತದೆ. ಆದರೆ ಅವುಗಳ ಪರಸ್ಪರ ವ್ಯತ್ಯಾಸ ಡಿ – ಬಿ, 2 ಡಿ – ಬಿ, 2 ಬಿ – ಡಿ ಎಂದಾಗುತ್ತದೆ. ಒಟ್ಟಿನಲ್ಲಿ ಮಿಶ್ರಧ್ವನಿಯ ಮೌಲ್ಯವು ಎ ಡಿ ± ಸಿ ಬಿ ಅಥವಾ 'ಡಿ' ಮತ್ತು 'ಬಿ' ಸ್ವರಗಳ ಸಮ್ಮಿಶ್ರಿತ ಮೌಲ್ಯವು ಪೂರ್ಣವಾಗಿ 'ಎ' ಮತ್ತು 'ಸಿ' ಎಂದಾಗುತ್ತದೆ.

ವೆಗೆಲ್ ಮತ್ತು ಲೇನ್ ಎಂಬ ವಿಜ್ಞಾನಿಗಳು ಒಂದು ಸಂಯೋಗಸ್ವರದ ಮೌಲ್ಯವು 6×10 ವಿಸ್ತೀರ್ಣ ಪರಿಮಾಣದಲ್ಲಿ ಒಂದೇ ತೀವ್ರತೆಯಲ್ಲಿ 1200 ~ ಮತ್ತು 700 ~ ಎಂದಾದಾಗ ಅವುಗಳ ಸಂಗತ ಸ್ವರಗಳ ಮೌಲ್ಯವು

c_1 : 1200, c_2 : 700, c_1+c_2 : 1900, c_1-c_2 : 500, $2c_1$: 2400, $2c_2$: 1400, $3c_1$: 3600, $3c_2$: 2100, $2c_1+c_2$: 3100, $2c_1-c_2$: 1700, $2c_2+c_1$: 2600, $2c_2-c_1$: 200, $4c_2$: 2800, $2c_1+2c_2$: 3800, $2c_1-2c_2$: 1000, $3c_1+c_2$: 4300, $3c_1-c_2$: 2900, $3c_2+c_1$: 3300, $3c_2-c_1$: 900 ಎಂದು ವಿಂಗಡಿಸಿದ್ದಾರೆ. ವಿವರ್ ಎಂಬ ವಿಜ್ಞಾನಿ ಸಂಯೋಗಸ್ವರದ ವಿಶೇಷಣಗಳನ್ನು (i) ಸಂಯೋಗ ಸ್ವರಗಳು ಮೂಲಸ್ವರ ತೀವ್ರತೆಯನ್ನು ಇಮ್ಮಡಿಸುತ್ತವೆ; (ii) ಈ ಸ್ವರಗಳ ಪರಸ್ಪರ ಸಂಯೋಗ ಹಾಗೂ ಬೇರ್ಪಡೆಗಳೆರಡೂ ಎಲ್ಲ ಕಾಲದಲ್ಲೂ ಒಂದೇ ತೆರನಾಗಿರುತ್ತವೆ; (iii) ಸಂಯೋಗ ಸ್ವರಗಳ ಉತ್ಪಾದನಾಸಂಖ್ಯೆಯು ಮೂಲಸ್ವರಗಳ ಮೌಲ್ಯದ ಬೇರ್ಪಡೆಯಿಂದ ಸೀಮಿತವಾಗುವುದಿಲ್ಲ — ಎಂದು ವಿವರಿಸಿದ್ದಾನೆ.

ಮೇಲಿನ ರೀತಿಯಲ್ಲಿ ನಿರ್ಧರಿಸುವುದಾದರೆ ತಂಬೂರಿಯ ಪಂಚಮ ಮತ್ತು ಮಧ್ಯಮ ಸ್ವರಗಳ ಸಂಯೋಜನೆಯಲ್ಲಿ ಒಟ್ಟು 85 ವಿಧದ ಸಂಯೋಗ ಸ್ವರಗಳು ಉಂಟಾಗುತ್ತವೆ. ಮತ್ತೊಂದು ಮುಖ್ಯ ಅಂಶವೆಂದರೆ ಮೂಲಸ್ವರಗಳ ಶಬ್ದ ಪರಿಮಿತಿ ಅತಿ ಹೆಚ್ಚಿನದಾದಾಗ ಶ್ರಾವಕ ಸ್ವಯಂಭೂಸ್ವರಗಳು ಮತ್ತು ಸಂಯೋಗ ಸ್ವರಗಳು ಗೋಚರಿಸದಿರುವುದು.

"ಪ" ಮತ್ತು "ಮ" ಸ್ವರಶ್ರೇಣಿಯಲ್ಲಿ ಉಂಟಾಗುವ ಸಂಯೋಗ ಸ್ವರಗಳ ಸಂಖ್ಯೆ
ಪ — ಸ, ಗ, ಪ, ನಿ, ರಿ, ಮ, ದ, ನಿ, ರಿ,
ಮ — ಸ, ಮ, ಪ, ದ, ಗ, ನಿ, ಗ, ರಿ, ಮ, ರಿ ಎಂದಾಗುತ್ತವೆ.

ಸಂಯೋಗಸ್ವರಗಳುಮತ್ತು ಶ್ರಾವಕ ಸ್ವಯಂಭೂಸ್ವರಗಳು ನಾದಗುಣದ ವೈಶಿಷ್ಟ್ಯವನ್ನು ಹೆಚ್ಚುಗೊಳಿಸುವ ಅಂಶಗಳೆನ್ನುವುದರಲ್ಲಿ ಸಂದೇಹವಿಲ್ಲ. ನಾದದಲ್ಲಿನ ಈ ಸುಧಾರಣೆ ಕಿವಿಯ ಹೊರಭಾಗ ಮತ್ತು ಒಳಭಾಗದ ಶಬ್ದವರ್ಣ ಪಟಲವನ್ನನುಸರಿಸಿರುತ್ತದೆ. ಕರ್ಣಶಂಕದಲ್ಲಿ ನಡೆಯುವ ಶಬ್ದದ ವಿಕಿರಣಶಕ್ತಿಯಲ್ಲಿ ಶಬ್ದ ಕಿರಣಗಳು ಮಾರ್ಪಡುತ್ತವೆ. ಕಿವಿಯೊಳಗೆ ಉತ್ಪಾದನೆಯಾಗುವ ನಾದದ ಅನುರಣನೆಯು ಸ್ವರಗಳ ಪುನರಾವರ್ತನೆಯ ಶ್ರೇಣಿಯ ವ್ಯತ್ಯಾಸದಿಂದಲೂ ನಿರ್ಧರಿಸಲ್ಪಡುತ್ತದೆ. ಈ ವ್ಯತ್ಯಾಸದಿಂದ ನಾದದ ಅಲೆಗಳಲ್ಲಿ ವಿವಿಧ ಜೋಡಣೆಗಳು ಏರ್ಪಟ್ಟು ಇವೇ ಸ್ವರಬಿಂದುಗಳಾಗಿ ಕಿವಿಗೆ ಗ್ರಾಹ್ಯವಾಗುತ್ತವೆ. ಇವುಗಳ ಸಂಪರ್ಕದಿಂದಾಗಿ ಸಂಗತ ಸ್ವರಗಳ ಶಬ್ದ ಪರಿಮಿತಿ ನೈಜರೂಪ ಮತ್ತು ಒಟ್ಟಿನಲ್ಲಿ ಒಂದುರೀತಿಯ ಹೊಸ ಪ್ರಕ್ರಿಯೆಯೇ ಗೋಚರವಾಗುತ್ತದೆನ್ನಬಹುದು. ಕೊನೆಯದಾಗಿ ನಾದದಲ್ಲಿ ಉಂಟಾಗುವ ಸಂಪೂರ್ಣ ರೂಪಾಂತರವೂ ಗಮ್ಯವಾದುದು. ಎಷ್ಟೇ ವಿಧದ ಜ್ಞೇಯ ಹಾಗೂ ಮನೋಗ್ರಾಹ್ಯ ಸ್ವರಗಳು ತಂಬೂರಿಯಲ್ಲಿ ಅಂಕುರಿಸಿದರೂ, ಅವುಗಳಲ್ಲಿ ಹಲವು ಗ್ರಾಹ್ಯವಾಗುವುದಿಲ್ಲ. ತಗ್ಗಿನ ಸ್ವರಗಳನ್ನು ಹೆಚ್ಚಿನ ಶಬ್ದಪರಿಮಿತಿಗೆ ಪರಿವರ್ತಿಸುವಾಗ ರೂಪಾಂತರ ಹೊಂದುವ ಸ್ವರದ ತೀವ್ರತೆಗಿಂತ ರೂಪಾಂತರ ಹೊಂದಿದ ಸ್ವರಗಳ ತೀವ್ರತೆ ಹೆಚ್ಚಿನದಾಗಿರುತ್ತದೆ.

ಒಟ್ಟಿನಲ್ಲಿ ಶ್ರುತಿಯ ಹಿನ್ನಲೆಯಿಂದ ನಾದದಲ್ಲಿ ಉಂಟಾಗುವ ಗಮನಿಸಬೇಕಾದ ಪ್ರಕ್ರಿಯೆಗಳು ನಾಲ್ಕು :

1. ಜ್ಞೇಯಸಾಧ್ಯ ಸ್ವರಗಳ ನಾದಗುಣ ಮತ್ತು ತೀವ್ರತೆ
2. ಮನೋಗ್ರಾಹ್ಯ ಸ್ವರಗಳ ನಾದಗುಣ ಮತ್ತು ತೀವ್ರತೆ
3. ನಾದದ ಅನುರಣನೆಯಲ್ಲಿ ಪುನರಾವರ್ತನೆಯಿಂದ ಉಂಟಾಗುವ ರೂಪಾಂತರಗಳು
4. ನಾದಬಿಂದುಗಳು ಒಂದಕ್ಕೊಂದು ಉಂಟುಮಾಡುವ ಚಾಲಕದ ಪರಿಣಾಮ

ಇವುಗಳೆಲ್ಲಾ ಪೂರ್ಣಸ್ವರಗಳ ಆಧಾರದಮೇಲೆ ರೂಪಿತವಾಗುವ ವಿಶ್ಲೇಷಣೆಗಳು. ತಂಬೂರಿಯಲ್ಲಿ ಉಂಟಾಗುವ ಸ್ವರಗಳ ವಿಚ್ಛಿತ್ತಿಸಂಪರ್ಕಗಳು ಬಹಳ ನಿಕಟವಾದುವು ಮತ್ತು ಅವುಗಳ ಕೂಲಂಕಷ ಸಮೀಕ್ಷೆ ಬಹು ಕಷ್ಟಕರ.

ಮಾಧುರ್ಯ ಸಂಗೀತದಲ್ಲಿ ಶ್ರುತಿಯ ಸಂಪರ್ಕ

ಮಾಧುರ್ಯ ಸಂಗೀತದಲ್ಲಿ ಶ್ರುತಿಯಿಂದುಂಟಾಗುವ ಪರಿಣಾಮಗಳು ಎರಡು. ಆಧಾರಸ್ವರವು ಅನುಕಲಕವೂ ಹೌದು ಮತ್ತು ನಿರ್ಬಂಧಿತ ಆಧಾರಸ್ವರವೂ ಹೌದು.

ವಿವಿಧ ಶಬ್ದಪರಿಮಿತಿಯಲ್ಲಿ ನಾವು ಗ್ರಹಿಸುವ ಒಂದು ರೀತಿಯ ಭಾವನಾ ಚೈತನ್ಯ ಮತ್ತು ಮಾಧುರ್ಯ ವಿಕ್ಷೇಪ ಯಾವುದೋ ಅಗೋಚರ ಹಿನ್ನೆಲೆಗೆ ಐಕ್ಯವಾಗುವುದು ವ್ಯಕ್ತವಾಗುತ್ತದೆ. ಆಧಾರವಾದ ಒಂದು ಶಬ್ದಸ್ಥಾಯಿ ಎಲ್ಲರೀತಿಯ ಮಾಧುರ್ಯಕ್ಕೂ ಮೂರ್ತರೂಪಕೊಡುವ ಸಾಧನೆ. ಶ್ರುತಿಯ ಮತ್ತು ಶಬ್ದ ಮಾಧುರ್ಯದ ಸಂಪರ್ಕಗಳನ್ನು ವಿವೇಚಿಸುವಾಗ ನಮ್ಮ ದೃಷ್ಟಿ ಆಹ್ಲಾದಕರವೆಂಬಷ್ಟಕ್ಕೇ ನಿಕೃಷ್ಟವಾಗಬಾರದು. ಸೌಂದರ್ಯ ಸೃಷ್ಟಿ ಆಹ್ಲಾದ ಅಥವಾ ಸಹ್ಯ ಮತ್ತು ಅಸಹ್ಯ ಎಂಬೆರಡರ ಸಮ್ಮಿಲನದಿಂದಲೇ ಸಾಧ್ಯ. ಆದ್ದರಿಂದ ಸೌಂದರ್ಯರಹಿತ ಮಾಧುರ್ಯ ಉದ್ರೇಕ ಮತ್ತು ಶಾಂತರಸಗಳೆರಡರ ಸಮರಸ ಭಾಗ. ಈ ಕ್ರಿಯೆ ಸಂಗೀತದಲ್ಲಿ ಶ್ರಾವ್ಯ ಅಶ್ರಾವ್ಯಸ್ವರಗಳು ಅಥವಾ ಹಿತ ಅಹಿತಸ್ವರಗಳಿಗೂ ಮತ್ತು ಆಧಾರಶ್ರುತಿಗೂ ಇರುವ ಸಂಪರ್ಕದಿಂದ ಏರ್ಪಡುತ್ತದೆ. ಪ್ರಸ್ತುತಸಂಪರ್ಕವಿಲ್ಲದೆ ಸಂಗೀತದಲ್ಲಿ ಮಾಧುರ್ಯ ಸಾಧನೆ ಅಸಾಧ್ಯ. ಅವಶ್ಯಕವಾಗಿ ಈ ಸಂಪರ್ಕ ಮನೋವೈಜ್ಞಾನದಮೇರೆಗೇ ಅನುವಾದುದು. ಈ ಹೇಳಿಕೆ ನಾವು ಒಂದು ವಾದ್ಯವನ್ನು ಶ್ರುತಿಯ ಹಿನ್ನಲೆಯನ್ನಾಗಿ ಹೊಂದಿದ್ದರೂ ನಮ್ಮ ಸಂಗೀತದಲ್ಲಿ ಶಬ್ದಪರಿಮಿತಿಯ ಮಟ್ಟ ನಿತಾಂತವಾಗಿರುವುದನ್ನು ಗಮನಿಸಿದರೆ ಸ್ಥಿರಪಡುತ್ತದೆ.

ಬಯಲು

ಜಿ. ಎಸ್. ಸಿದ್ಧಲಿಂಗಯ್ಯ

1

ಬಯಲಿನೊಳಗೊಂದು ಬಯಲು
ಸ್ವಯಂಭೂ ಬಯಲು
ಸುಸಿಲ ಹೊನಲುಕ್ಕಿ
ನೂರು ಸಾವಿರಕೋಟಿ ಇಚ್ಛಾಕೋಟಿ
ತಥಾಸ್ತು :
ಹರಿದಾಡಿದುವು ಹಲವು
ಹಿಗ್ಗಿ ಬಾನಿನ ಕನಸು ಕಾಣುತ
ಕೆಲವು ಧುಮ್ಮಿಕ್ಕಿದುವು
ನಿಂತೆ ಬಿಟ್ಟವು ಹಲವು
ಸುತ್ತುರುಳಿ ಮಲೆತು ಹೊಡೆದುವು ಗೊರಕೆ
ಲೀಲಾ ವಿನೋದದಲಿ ಹರಿದುವಗೊ ಕೆಲಕೆಲವು
ಮಂದಾಕಿನೀ.
ಕೊಚ್ಚಿ ಎಸೆದುವು ಸಿಕ್ಕು ಸಿಕ್ಕದ್ದನ್ನೆ ನುಗ್ಗಿ, ಆಗಿ ಪ್ರವಾಹ
ಕೆಲವಗೋ ಸೌಮ್ಯ ಮುಗ್ಧ ಪ್ರಶಾಂತ.
ಕೊನೆಗೆಲ್ಲ ಸೇರುವುದು ಕಡಲ
ಕೂಡಲ ಸಂಗಮ.

2

ಕಣ್ಣಾಡಿಸಿದ ಕಡೆ ಹೆಜ್ಜೆಗಳ ಗುರುತು
ಹೆಜ್ಜೆಗೊಂದೊಂದು ಕಥೆ,
ಜೇನಿನಗೂಡು.
ಕೆಲವು ಕರೆವುವು ; ಕೆಲವು ಅಂಜಿಸಿ
ಪುಕ್ಕಲೆದೆ ಮಾಡಿಬಿಡುವುವು.
ಹಲವೋ ಚಿದಂಬರ ರಹಸ್ಯ

ಇದೊಂದು ಬಯಲಾಗದ ಬಯಲು
ಫಲವತ್ತಾದ ಬಯಲು.

3

ಯಾವುದೋ ಕಣ್ಣಾಡಿ ಇಲ್ಲಿ ನೋಡಿರ್ರಿ,
ನೋಡಿ.
ಮಣ್ಣೆ ನವರಸವಾಗಿ ಆಕರ್ಷಣೆ.
ತಾರೆ ನೀಹಾರಿಕೆಯು ಬೆಳಕಿಲ್ಲಿ ತೊಟ್ಟಿಕ್ಕಿ
ಸೂರ್ಯ ಚಂದ್ರರು ಬಂದು
ಋತುಗಳಾರೂ ನಿಂತು
ಇಲ್ಲಿ ಕಣ ಕಣಕೆಲ್ಲ ರುಚಿಯು ಲೇಪನ ರಸದ ಲೇಪನ.
ಭಾಗ್ಯವಿದ್ದರೆ ಮುಟ್ಟಿದ್ದೆಲ್ಲವೂ ಚಿನ್ನ,
ಇಲ್ಲ ಇದ್ದಿಲು.
ಇದರೊಳಗೆ ತನ್ನ ಶಾಸನ ಕೊರೆವ ಕೊರೆಯಿಸುವ
ಇದ್ದುದಳಿಸುವ ಮೆರೆವ
ಬಗೆ ಬಗೆಯ ರಾಜಗೀಜರ
ಪಿರಮಿಡ್ಡು ಗೋಪುರಗಳಾಟ.
ವಾಸುಕಿಯ ಜಿಹ್ವೆ ಜಿಹ್ವೆಗು ರಸಸರಸ್ವತಿ ಕೂತು
ಹಾಡಿದರು ಮುಗಿಯದ್ದು
ಕೋಟಿ ಅವತಾರಕ್ಕು ಕ್ರೀಡಾಂಗಣ.
ಏನು ರಸವೋ ಇದರದ್ದು
ಮುಟ್ಟಿದರು ಮತ್ತೇರಿಸಿ
ತಲೆ ತಿರುಗಿ ಗಿರ್ರೆಂದು ಬೀಳುವನಕವೂ
ಇದರಮಲು.
ಇಲ್ಲೆಲ್ಲ ಹರಡಿ ಇವೆ
ಲಂಕಾ ಕುರುಕ್ಷೇತ್ರ ಪಾಣೀಪತ್ತು
ಪುಣ್ಯಾತ್ಮರೊಬ್ಬಿಬ್ಬರಿರಬಹುದು ಅಮಲೇರದೆ.
ಅವರವೇ ಅಲ್ಲಲ್ಲಿ ಇನ್ನೂ ಬೆಳಗುತ್ತ ಇವೆ ಅಡಿ
ಬೆಳಕ ಪಥ
ನಂದೀಧ್ವಜ.

ಭೂ ಸಂಪತ್ತು

ಸಿ. ನಾಗಣ್ಣ

ಭೂಮಿ ಸಕಲ ಸಂಪತ್ತಿನ ಮೂಲ. ಅದು ವಜ್ರ ವೈಡೂರ್ಯಾದಿ ನವರತ್ನಗಳ ಆಗರವಾಗಿರುವಂತೆ, ದಿನಬಳಕೆಯ ಕಲ್ಲು, ಮಣ್ಣು ಮುಂತಾದ ವಸ್ತುಗಳ ತವರೂ ಅಹುದು. ಭೂಮಿಯಲ್ಲಿ ಸಿಗುವ ಸಂಪತ್ತುಗಳಲ್ಲಿ ಖನಿಜ ಸಂಪತ್ತು ಅತಿ ಮುಖ್ಯವಾದುದು. ನಾಗರಿಕ ಜೀವನದ ಮೇಲ್ಮೆ ಮತ್ತು ದೇಶದ ಪ್ರಗತಿಯ ದೃಷ್ಟಿಯಿಂದ ಖನಿಜಗಳ ಪಾತ್ರ ತುಂಬ ಮಹತ್ವದ್ದಾಗಿದೆ. ವಿಜ್ಞಾನದ ಸಾಧನೆ ಅಸಾಧಾರಣವಾಗಿ ಮುನ್ನಡೆದಿದೆ ; ಆದರೆ ಖನಿಜಗಳನ್ನು ಕೃತಕ ರೀತಿಯಿಂದ ತಯಾರಿಸುವುದು ಮಾತ್ರ ಇನ್ನೂ ಸಾಧ್ಯವಾಗಿಲ್ಲ.

ನಮಗೆ ಅಗತ್ಯವಾದ, ಪ್ರಯೋಜನಕರ ಖನಿಜ ಸಂಪತ್ತೆಲ್ಲ ಭೂಮಿಯ ಮೇಲ್ಪದರದಲ್ಲಿ ಅಡಗಿದೆ. ಈ ಮೇಲ್ಪದರದ ಸರಾಸರಿ ರಾಸಾಯನಿಕ ಸಂಯೋಜನೆ ಹೀಗಿದೆ :

ಆಮ್ಲಜನಕ	...	46.60
ಸಿಲಿಕಾನ್	...	27.72
ಅಲ್ಯೂಮಿನ	...	8.13
ಕಬ್ಬಿಣ	...	5.00
ಮ್ಯಾಗ್ನೀಸಿಯಂ	...	2.09
ಕ್ಯಾಲ್ಸಿಯಂ	...	3.62
ಸೋಡಿಯಂ	...	2.82
ಪೊಟಾಸಿಯಂ	...	2.59
ಇತರ	...	1.43

ಮೇಲ್ಕಂಡ ವಸ್ತುಗಳು ಸಾಮಾನ್ಯವಾಗಿ ಏಕಧಾತುರೂಪದಲ್ಲಿರದೆ ಸಂಯುಕ್ತ ರೂಪದಲ್ಲಿರುತ್ತವೆ. ಈ ವಸ್ತುಗಳ ಸಂಯೋಜನೆಯ ಅಂಕಿಅಂಶಗಳನ್ನು ಪರಿಶೀಲಿಸಿದಾಗ, ನಮಗಾಗುವ ಅಚ್ಚರಿಯೆಂದರೆ : ಮಾನವನಿಗೆ ಅತಿಪ್ರಿಯವಾದ, ಕೈಗಾರಿಕೋದ್ಯಮಗಳಲ್ಲಿ ಹೆಚ್ಚು ಬಳಸುವ ಧಾತುಗಳು ಭೂಮಿಯಲ್ಲಿ ಕಡಿಮೆ ಪ್ರಮಾಣದಲ್ಲಿರುವ ಸಂಗತಿ. ಹೀಗಿದ್ದರೂ ಇವು ಭೂಮೇಲ್ಪದರದಲ್ಲಾಗುವ ಕೆಲವು ಭೌತ-ರಾಸಾಯನಿಕ ಪರಿವರ್ತನೆಗಳಿಂದಾಗಿ ಹಲವು ಭೌಗೋಳಿಕ ಪ್ರದೇಶಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ

ಶೇಖರಿತವಾಗುತ್ತವೆ. ಇದು ಮತ್ತೆ ಪ್ರಕೃತಿಯ ಪವಾಡ! ಇಂಗಾಲವು ಒಂದು ಪ್ರದೇಶದಲ್ಲಿ ಕಾಯಿಸುವ ಕಲ್ಲಿದ್ದಲಾಗಿ, ಮತ್ತೊಂದು ಕಡೆ ಬರೆಯುವ ಸೀಸದಾಕಾರದಲ್ಲಿ, ಬೇರೊಂದು ಕಡೆ ಹೊಳೆಯುವ ವಜ್ರದ ರೂಪದಲ್ಲಿ ದೊರಕುತ್ತದೆ. ಆಯಾ ಪ್ರದೇಶಗಳಲ್ಲಾಗಿರುವ ಪ್ರಾಕೃತಿಕ, ಭೌತಿಕ ಮತ್ತು ರಾಸಾಯನಿಕ ಬದಲಾವಣೆಗಳೇ ಈ ರೂಪ ಪರಿವರ್ತನೆಗೆ ಕಾರಣ. ಹೀಗೆ ಭೂಪ್ರದೇಶಗಳಲ್ಲಿ ಖನಿಜ ಸಂಪತ್ತಿನ ಹಂಚಿಕೆ ಸಹ ಆಯಾ ಪ್ರದೇಶಗಳಲ್ಲಾಗಿರುವ ಪ್ರಾಕೃತಿಕ, ಭೌತ-ರಾಸಾಯನಿಕ ಕ್ರಿಯೆಯನ್ನು ಅವಲಂಬಿಸಿದೆ. ಮಾನವ ನಿರ್ಮಿತ ರಾಷ್ಟ್ರಗಳ ರಾಜಕೀಯ ಎಲ್ಲೆಗೂ ಭೂಮಿಯಲ್ಲಿರುವ ಖನಿಜ ಸಂಪತ್ತಿಗೂ ಯಾವ ಸಂಬಂಧವೂ ಇಲ್ಲ. ನಮ್ಮ ಅಭಿಲಾಷೆ ಆಕಾಂಕ್ಷೆಗಳಿಗೆಟುಕದೆ ಖನಿಜ ಸಂಪತ್ತು ವಿವಿಧ ರಾಷ್ಟ್ರಗಳಲ್ಲಿ ತನ್ನದೇ ಆದ ವಿಶಿಷ್ಟ ಧಾಟಿಯಲ್ಲಿ ಹರಡಿಕೊಂಡಿದೆ.

ಭೂಮಿಯ ಹೊರಮೈ ಮೇಲೆ ಕಾಣಿಸಿಕೊಳ್ಳುವ ಖನಿಜಗಳನ್ನು ಗುರುತಿಸುವುದು ಸುಲಭ. ಆದರೆ ಖನಿಜಗಳ ಬಹುಭಾಗ ಭೂಮಿಯ ಒಳಗಡೆ ಅಡಕವಾಗಿದೆ. ಇಂತಹ ಖನಿಜ ಸಂಪತ್ತನ್ನು ಅನೇಕ ಅನ್ವೇಷಣೆಗಳ ಮೂಲಕ ಕಂಡುಹಿಡಿಯಬಲ್ಲ ವ್ಯಕ್ತಿಯೆಂದರೆ ಭೂವಿಜ್ಞಾನಿ. ಮಳೆ ಗಾಳಿಯೆನ್ನದೆ, ಬಿಸಿಲು ಚಳಿಯನ್ನು ಲೆಕ್ಕಿಸದೆ, ಕಾಡುಮೇಡುಗಳಲ್ಲಿ ತಿಂಗಳುಗಟ್ಟಲೆ ಸಂಚರಿಸುತ್ತ, ನಾಗರಿಕ ಪ್ರಪಂಚದ ಸಂಪರ್ಕದಿಂದ ದೂರವಿದ್ದು ದುಡಿಯುವ ಭೂವಿಜ್ಞಾನಿಗಳ ಶ್ರಮದ ಫಲವಾಗಿ ವಿಶ್ವದ ಖನಿಜ ನಿಧಿಗಳು ಪ್ರಕಾಶಕ್ಕೆ ಬಂದಿವೆ. ನುರಿತ, ಶ್ರಮಜೀವಿ ಭೂವಿಜ್ಞಾನಿಗಳು ಯಾವ ದೇಶದಲ್ಲಿಲ್ಲವೋ, ಆ ದೇಶದ ಭೂಮಿಯಲ್ಲಿ ಖನಿಜ ಸಂಪತ್ತು ಇದ್ದೂ ಇಲ್ಲದಂತೆಯೇ.

ಖನಿಜ ಸಂಪತ್ತನ್ನು ಸಾಮಾನ್ಯವಾಗಿ ಐದು ಪಂಗಡಗಳಾಗಿ ವಿಂಗಡಿಸುವುದು ವಾಡಿಕೆ: 1. ಲೋಹ ಖನಿಜಗಳು (metallic minerals); 2. ಲೋಹೇತರ ಖನಿಜಗಳು (non-metallic minerals); 3. ಕಲ್ಲಿದ್ದಲು ಮತ್ತು ಎಣ್ಣೆ (coal and oil); 4. ವಿಕಿರಣ ಖನಿಜಗಳು (radio-active minerals) ಮತ್ತು 5. ಅಂತರ್ಜಲ (ground water). ಮೊದಲ ನಾಲ್ಕು ಬಗೆಯ ಖನಿಜಗಳನ್ನು ಬಹುಕಾಲದಿಂದಲೂ ಮುಖ್ಯ ಖನಿಜ ಸಂಪತ್ತೆಂದು ಪರಿಗಣಿಸಲಾಗಿದ್ದು, ಅಂತರ್ಜಲವನ್ನು ಸಹ ಇತ್ತೀಚೆಗೆ ಪ್ರಮುಖ ಖನಿಜ ನಿಕ್ಷೇಪವೆಂದು ಭಾವಿಸಲಾಗುತ್ತಿದೆ.

ಲೋಹ ಖನಿಜಗಳಲ್ಲಿ ಮೂರು ಬಗೆ: (i) ಪ್ರಶಸ್ತ ಲೋಹ ಖನಿಜಗಳು, (ii) ಕಬ್ಬಿಣದ ಲೋಹ ಖನಿಜಗಳು ಮತ್ತು (iii) ಕಬ್ಬಿಣೇತರ ಲೋಹ ಖನಿಜಗಳು. ಪ್ರಶಸ್ತ ಲೋಹ ಖನಿಜಗಳೆಂದರೆ ಚಿನ್ನ, ಬೆಳ್ಳಿ, ಪ್ಲಾಟಿನಂ ಇತ್ಯಾದಿ ಲೋಹಗಳ ಖನಿಜಗಳು. ಕಬ್ಬಿಣ, ಮ್ಯಾಂಗನೀಸ್, ಕ್ರೋಮಿಯಂ, ನಿಕ್ಕಲ್, ಕೋಬಾಲ್ಟ್, ಮಲಿಬ್ಡಿನಂ, ಟಂಗ್‌ಸ್ಟನ್, ವೆನೆಡಿಯಂ, ಟೈಟಾನಿಯಂ ಮುಂತಾದವುಗಳ ಖನಿಜಗಳು ಕಬ್ಬಿಣದ ಲೋಹ ಖನಿಜಗಳ ಗುಂಪಿಗೆ ಸೇರುತ್ತವೆ.

ಹೀಗೆಯೇ ಲೋಹೇತರ ಖನಿಜಗಳನ್ನು (i) ಅಮೂಲ್ಯ ರತ್ನಗಳು ಮತ್ತು ಪ್ರಶಸ್ತ ಶಿಲೆಗಳು, (ii) ಹೆಚ್ಚು ಕಾವು ತಡೆಯುವ ವಸ್ತುಗಳು (refractories), (iii) ಘರ್ಷಕಗಳು (abrasives), (iv) ಜೇಡಿಮಣ್ಣು, (v) ಸಿಮೆಂಟು, ಗಾಜು ಇತ್ಯಾದಿ ವಸ್ತುಗಳಲ್ಲಿ ಬಳಸುವ ಖನಿಜಗಳು ಮತ್ತು (vi) ಬಣ್ಣ ಮತ್ತು ಗೊಬ್ಬರಗಳ ತಯಾರಿಕೆಯಲ್ಲಿ ಉಪಯೋಗಿಸುವ ಖನಿಜಗಳು — ಎಂಬುದಾಗಿ ವಿಂಗಡಿಸಲಾಗುತ್ತದೆ.

ವಜ್ರ, ಮಾಣಿಕ್ಯ (ruby), ನೀಲಮಣಿ (sapphire), ಗೋಮೇದಕ (topaz), ಮರಕತ (emerald), ಅಕ್ವಾಮೆರಿನ್, ಕ್ರೈಸೊಬೆರಿಲ್, ಗಾರ್ನೆಟ್, ಸ್ಪೈನಲ್, ಟೂರ್ಮಲಿನ್, ಜಿರ್ಕಾನ್, ಅಪಟೈಟ್, ಅಂಡಲುಸೈಟ್, ಅಂಬರ್ ಮುಂತಾದುವು ಪ್ರಶಸ್ತ ಅಮೂಲ್ಯ ರತ್ನಗಳು. ಕಲ್ನಾರು, ಅಭ್ರಕ, ಮ್ಯಾಗ್ನಸೈಟ್ ಇತ್ಯಾದಿ ಖನಿಜಗಳನ್ನು refractories ಎಂದು ಕರೆಯುತ್ತಾರೆ. ಘರ್ಷಕ ಖನಿಜಗಳೆಂದರೆ ಕುರಂಗಕಲ್ಲು, ವಜ್ರ, ಚಕಮುಕಿ ಕಲ್ಲು ಮುಂತಾದ ಖನಿಜಗಳು. ಸುಣ್ಣಕಲ್ಲು, ಜಿಪ್ಸಂ, ಡಾಲೊಮೈಟ್ ಇನ್ನಿತರ ಖನಿಜಗಳನ್ನು ಸಿಮೆಂಟಿನ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಬಣ್ಣಗಳ ತಯಾರಿಕೆಯಲ್ಲಿ ಬಳಸುವ ಅಗತ್ಯ ವಸ್ತುಗಳೆಂದರೆ ಬಳಪದಕಲ್ಲು, ಸುಣ್ಣಕಲ್ಲು, ಗೋಪಿ, ಗ್ರಾಫೈಟ್, ಟಿಟಾನಿಯಂ ಇತ್ಯಾದಿ. ಅಪಟೈಟ್, ಫಾಸ್ಫೇಟ್‌ಶಿಲೆ, ಜಿಪ್ಸಂ, ಗ್ಲಾಕೊನೈಟ್, ಪೈರೆಟ್ ಮುಂತಾದುವು ಕೃತಕ ಗೊಬ್ಬರದ ತಯಾರಿಕೆಯಲ್ಲಿ ಉಪಯೋಗಿಸಲಾಗುವ ಖನಿಜಗಳು. ಲೋಹೇತರ ಖನಿಜಗಳ ಪೈಕಿ ಇಲ್ಲಿ ನಮೂದಿಸಿದ ಯಾವ ಗುಂಪಿಗೂ ಸೇರದ ಇನ್ನಿತರ ಶಿಲೆ ಹಾಗೂ ಖನಿಜ ವಸ್ತುಗಳು ಕಟ್ಟಡಗಳ ನಿರ್ಮಾಣ ಕಾರ್ಯದಲ್ಲಿ ನೆರವಾಗುತ್ತವೆ.

ವಿವಿಧ ದರ್ಜೆಯ ಕಲ್ಲಿದ್ದಲುಗಳನ್ನು ಅಂತ್ರೋಸೈಟ್, ಲಿಗ್ನೈಟ್, ಸಾಮಾನ್ಯ ಕಲ್ಲಿದ್ದಲು ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ನಾನಾ ಬಗೆಯ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲಗಳೂ ಖನಿಜಗಳ ಪರಿಧಿಯಲ್ಲಿ ಸೇರುತ್ತವೆ.

ಯುರೇನಿಯಂ, ಥೋರಿಯಂ ಮುಂತಾದ ರಶ್ಮಿ-ನಿಕ್ಷೇಪಕ ಧಾತುಗಳನ್ನೊಳಗೊಂಡ ಖನಿಜಗಳನ್ನು ಯುರಾನಿನೈಟ್, ಪಿಚ್‌ಬ್ಲೆಂಡ್, ಕ್ಯೂರೈಟ್ ಎಂಬುದಾಗಿ ಕರೆಯಲಾಗುತ್ತದೆ. ಅಣುಶಕ್ತಿ ಇತ್ತೀಚಿನ ವರ್ಷಗಳಲ್ಲಿ ತುಂಬ ಪ್ರಾಮುಖ್ಯತೆಯನ್ನು ಪಡೆದಿದೆ. ಅದರ ಶಾಂತಿಯುತ ಬಳಕೆಗಳು ವಿಶೇಷವಾಗಿ ಹೆಚ್ಚುತ್ತಿವೆ. ಹೀಗಾಗಿ ವಿಕಿರಣ ಖನಿಜಗಳು ಶೀಘ್ರದಲ್ಲಿಯೇ ಅತ್ಯುತ್ತಮ ಶಕ್ತಿ ಸಂಪನ್ಮೂಲಗಳಾಗುವುದರಲ್ಲಿ ಸಂದೇಹವಿಲ್ಲ.

ಭೂಮಿಯಲ್ಲಿ ದೊರೆಯುವ ನೀರು ಶೇಕಡ 97 ರಷ್ಟು ಸಮುದ್ರದಲ್ಲಿಯೂ, ಶೇಕಡ 3 ರಷ್ಟು ಭೂಭಾಗದಲ್ಲಿಯೂ ಇದೆ. ಭೂಭಾಗದಲ್ಲಿ ಸಿಗುವ ನೀರಿನಲ್ಲಿ ಶೇಕಡ 75 ರಷ್ಟು ನೀರು ಹಿಮಪರ್ವತಗಳ ಶಿಖರಗಳಲ್ಲಿ ಶೇಖರಿತವಾಗಿದೆ; ಶೇಕಡ 24·6 ರಷ್ಟು ನೀರು ಭೂತಳದಲ್ಲಿ ಅಂತರ್ಜಲದ ರೂಪದಲ್ಲಿ ಅಡಕವಾಗಿದೆ. ಅಂದಮೇಲೆ

ಕೇವಲ ಶೇಕಡ 0.4 ರಷ್ಟು ಮಾತ್ರ ನೀರು ಸರೋವರಗಳು ಹಾಗೂ ನದಿಗಳಲ್ಲಿ ಪ್ರವಹಿಸುತ್ತದೆ. ಈ ನೀರನ್ನೇ ನಾವು ವ್ಯವಸಾಯ, ಪ್ರಾಣಿವರ್ಗದ ಸೇವನೆ ಮತ್ತು ಇನ್ನಿತರ ದೈನಂದಿನ ಬಳಕೆಗೆ ಹೆಚ್ಚಾಗಿ ಉಪಯೋಗಿಸುತ್ತಿರುವುದು. ಈ ರೀತಿ ಭೂಮಿಯಲ್ಲಿ ಪ್ರಕ್ಷಿಪ್ತವಾಗಿರುವ ನೀರಿನ ಬಹುಭಾಗದ ಪ್ರಯೋಜನ ನಮಗೆ ದಕ್ಕದಾಗಿದೆ. ಭೂಭಾಗದ ಒಟ್ಟು ನೀರಿನ ಶೇ. 24.6 ರಷ್ಟು ನೀರು ಭೂಮಿಯೊಳಗಡೆ ಅಡಗಿರುವಾಗ, ನೀರಿಗಾಗಿ ನಾವು ಆಕಾಶದತ್ತ ಅದೇಕೆ ದೃಷ್ಟಿ ಹರಿಸಬೇಕು? ನಮ್ಮ ಕಾಲಡಿಯಲ್ಲಿರುವ ಅಂತರ್ಜಲವನ್ನು ಏಕೆ ವೀಕ್ಷಿಸಬಾರದು? ಅಂತರ್ಜಲವನ್ನು ಹೆಚ್ಚು ಹೆಚ್ಚಾಗಿ ಬಳಸುವುದರ ಮೂಲಕ ದೇಶದ ಜಲಸಂಪತ್ತನ್ನು ನಾವು ವೃದ್ಧಿಗೊಳಿಸುವುದು ಸಾಧ್ಯ. ಹೀಗೆ ಅಂತರರಾಜ್ಯ ಜಲವಿವಾದಗಳಿಗೆ ಪರಿಹಾರ ಕಂಡುಹಿಡಿಯುವುದು ಕಷ್ಟವೇನಲ್ಲ.

ಖನಿಜ ಸಂಯೋಜನೆಯಿಂದಾದ ಕೆಲವು ಶಿಲೆಗಳು ಅಲಂಕರಣಕ್ಕಾಗಿ ಬಳಸಲ್ಪಡುತ್ತವೆ. ಅವುಗಳೆಂದರೆ ಅಮೃತಶಿಲೆ, ಡಾಲರೈಟ್, ಫಾರ್ಫೈರಿ ಇತ್ಯಾದಿ. ಅಲಂಕರಣ ಶಿಲೆಯಾಗಿ ಬಳಸುವುದಕ್ಕೋಸ್ಕರ ದೊಡ್ಡಬಳ್ಳಾಪುರದ ಸುತ್ತಮುತ್ತ ದೊರಕುವ ಗ್ರಾನೈಟ್ ಶಿಲೆಯನ್ನು ಪ್ರಪಂಚದ ವಿವಿಧ ಭಾಗಗಳಿಗೆ ರಫ್ತು ಮಾಡಲಾಗುತ್ತಿದೆ.

ಭಾರತದೇಶ ವಿಶೇಷ ಖನಿಜ ಸಂಪತ್ತುಳ್ಳ ರಾಷ್ಟ್ರಗಳಲ್ಲಿ ಒಂದು. ನಮ್ಮಲ್ಲಿ ದೊರೆಯುವ ಕಬ್ಬಿಣ ಮತ್ತು ಮ್ಯಾಂಗನೀಸ್ ಖನಿಜಗಳು ಪ್ರಪಂಚದಲ್ಲೆ ಉತ್ತಮ ದರ್ಜೆಯವುಗಳೆಂದು ಹೆಸರು ಪಡೆದಿವೆ. ಕಬ್ಬಿಣದ ಲೋಹ ಖನಿಜಗಳ ಕೊರತೆ ನಮ್ಮ ದೇಶದಲ್ಲಿಲ್ಲ; ಆದರೆ ಕಬ್ಬಿಣೇತರ ಲೋಹ ಖನಿಜಗಳ ಕೊರತೆ ಇದೆ. ಈ ಲೋಹ ಖನಿಜಗಳ ನಿಕ್ಷೇಪ ನಮ್ಮ ದೇಶದಲ್ಲಿದೆ ಎಂದು ತಜ್ಞರು ಅಭಿಪ್ರಾಯ ಪಡುತ್ತಾರೆ. ಭೂವಿಜ್ಞಾನಿಗಳು ಈ ದಿಸೆಯಲ್ಲಿ ಕಾರ್ಯವೆಸಗಿ ಅಂತಹ ಪ್ರದೇಶಗಳನ್ನು ಪತ್ತೆಹಚ್ಚಬೇಕಾಗಿದೆ. ಭಾರತದಲ್ಲಿ ಪೆಟ್ರೋಲಿಯಂ ಎಣ್ಣೆಯ ನಿಕ್ಷೇಪ ಇನ್ನಿಲ್ಲ ಎಂಬ ಅಭಿಪ್ರಾಯವಿತ್ತು. ಭಾರತೀಯ ಭೂವಿಜ್ಞಾನಿಗಳ ದುಡಿಮೆಯ ಫಲವಾಗಿ ಈಗೀಗ ಪ್ರಕಾಶಕ್ಕೆ ಬಂದ, ಕಡಲತೀರದ ಪೆಟ್ರೋಲಿಯಂ ನಿಕ್ಷೇಪವು ಅನೇಕರ ಕುತೂಹಲವನ್ನು ಕೆರಳಿಸಿದೆ. ಅಂತೆಯೇ ಕೋಲಾರದ ಚಿನ್ನದ ಗಣಿಗಳು ಮತ್ತು ಅನಂತಪುರದ ಬಳಿ ದೊರೆಯುವ ವಜ್ರಗಳು ಭಾರತದ ಭೂಸಂಪತ್ತನ್ನು ಹೆಚ್ಚಿಸಿವೆ.

ಭಾರತದಲ್ಲಿ ಹೇರಳವಾಗಿ ದೊರೆಯುವ ಖನಿಜ ಸಂಪತ್ತನ್ನು ಕಚ್ಚಾ ವಸ್ತುವಿನ ರೂಪದಲ್ಲಿ ಪರದೇಶಗಳಿಗೆ ರಫ್ತುಮಾಡಲಾಗುತ್ತಿದೆ. ಇದು ಹೆಚ್ಚು ಲಾಭದಾಯಕವಾದುದಲ್ಲ. ಆದ್ದರಿಂದ, ನಮ್ಮಲ್ಲಿ ದೊರೆಯುವ ಎಲ್ಲ ಖನಿಜ ಕಚ್ಚಾವಸ್ತುಗಳನ್ನು ನಮ್ಮ ದೇಶದಲ್ಲೇ ಸಿದ್ಧಪಡಿಸಿ ಪರದೇಶಗಳಿಗೆ ರಫ್ತುಮಾಡುವುದರಿಂದ ಆರ್ಥಿಕ ಪ್ರಗತಿ ಸಾಧಿಸಿದಂತಾಗುತ್ತದೆ. ನಮ್ಮ ದೇಶದ ಖನಿಜ ಉದ್ಯಮವು ಅಭಿವೃದ್ಧಿಗೊಳ್ಳಲು ಅವಕಾಶ ದೊರೆತಂತಾಗುತ್ತದೆ. ದೇಶದ ಭೂಸಂಪತ್ತಿನ ಪೂರ್ಣ ಫಲವನ್ನು ಆಗ ನಾವು ಪಡೆಯಬಹುದು.

ಕಪ್ಪೆ ಮತ್ತು ನೆಲಗಪ್ಪೆಗಳಲ್ಲಿ ಲೈಂಗಿಕ ವಿಭೇದೀಕರಣ ಅಸಂಗತಿಗಳು

ಎಚ್. ಬಿ. ದೇವರಾಜ ಸರ್ಕಾರ್, ಎಂ. ಸುವರ್ಣಲತ ಮತ್ತು ಬಿ. ಎಸ್. ತ್ಯಾಗರಾಜ

ಪ್ರಜನನ ಕ್ರಿಯೆ ಜೀವಿಗಳ ಮೂಲ ಲಕ್ಷಣ. ಒಂದು ಜೀವಿಯ ಅಳಿವಿನ ನಂತರ ಆ ಜಾತಿ ಉಳಿಯಬೇಕು ಎನ್ನುವ ಉದ್ದೇಶದಿಂದ ಆ ಜೀವಿ ತನ್ನಂತಿರುವ ಇನ್ನೊಂದು ಜೀವಿಯನ್ನು ಉತ್ಪತ್ತಿ ಮಾಡುವುದೇ ಪ್ರಜನನ ಕ್ರಿಯೆ. ಪ್ರಾಣಿಗಳಲ್ಲಿ ಮುಖ್ಯವಾಗಿ ಎರಡು ರೀತಿಯ ಪ್ರಜನನ ಕ್ರಿಯೆಗಳುಂಟು. ಒಂದೇ ಪ್ರಾಣಿಯಿಂದ ಖಂಡನ ಅಥವಾ ಅಂಕುರಗಳಿಂದ ಹೊಸದೊಂದು ಪ್ರಾಣಿ ಉತ್ಪತ್ತಿಯಾಗಬಹುದು (ಉದಾ : ಅಮೀಬಾ, ಹೈಡ್ರ). ಇದಕ್ಕೆ ನಿರ್ಲಿಂಗ ರೀತಿಯ ಪ್ರಜನನ ಕ್ರಿಯೆ ಎಂದು ಹೆಸರು. ಆದರೆ ಹೆಚ್ಚು ಮುಂದುವರಿದ ಪ್ರಾಣಿಗಳು ಲಿಂಗರೀತಿಯ ಪ್ರಜನನ ಕ್ರಿಯೆಯನ್ನು ರೂಢಿಸಿಕೊಂಡಿವೆ. ಇದರಲ್ಲಿ ಲಿಂಗಾಣುಗಳ (gametes) ಉತ್ಪತ್ತಿ ನಡೆಯುತ್ತದೆ. ಈ ಲಿಂಗಾಣುಗಳಲ್ಲಿ ಗಂಡು ಮತ್ತು ಹೆಣ್ಣು ಲಿಂಗಾಣುಗಳೆಂದು ಎರಡು ವಿಧವನ್ನು ಕಾಣಬಹುದು. ರಚನೆ, ಗಾತ್ರ, ನಡತೆಯಲ್ಲಿ ಎರಡೂ ಭಿನ್ನವಾಗಿವೆ. ಗಂಡು ಲಿಂಗಾಣುವಿಗೆ ಪುರುಷಾಣು ಅಥವಾ ಸ್ಪರ್ಮಟೊಜೋವ ಎಂದು ಹೆಸರು. ಹೆಣ್ಣು ಲಿಂಗಾಣುವಿಗೆ ಓವಂ ಅಥವಾ ಅಂಡಾಣು ಎಂದು ಹೆಸರು. ಲಿಂಗರೀತಿಯ ಪ್ರಜನನದಲ್ಲಿ ಈ ಎರಡು ಲಿಂಗಾಣುಗಳು ಕೂಡಿ ನಿಶೇಚನ ನಡೆದು ಹೊಸಪ್ರಾಣಿಯ ಉಗಮವಾಗುತ್ತದೆ. ಪುರುಷಾಣುಗಳು ವೃಷಣದಲ್ಲಿಯೂ, ಅಂಡಾಣುಗಳು ಅಂಡಾಶಯದಲ್ಲಿಯೂ ಉತ್ಪತ್ತಿಯಾಗುತ್ತವೆ. ಇವೇ ಲಿಂಗಾಂಗಗಳು ಅಥವಾ ಜನನೇಂದ್ರಿಯಗಳು. ಎರಡು ಲಿಂಗಾಂಗಗಳು ಒಂದೇ ಪ್ರಾಣಿಯಲ್ಲಿರಬಹುದು ಅಥವಾ ಬೇರೆ ಬೇರೆ ಪ್ರಾಣಿಗಳಲ್ಲಿರಬಹುದು. ಇವಕ್ಕೆ ಕ್ರಮವಾಗಿ ಉಭಯ ಲಿಂಗಿಗಳು (ಹರ್ಮ್ರಫ್ರೊಡೈಟ್) ಅಥವಾ ಭಿನ್ನಲಿಂಗಿಗಳೆಂದು ಹೆಸರು. ಹೈಡ್ರ ಎರೆಹುಳುಗಳು ಉಭಯ ಲಿಂಗಿಗಳು. ಉಳಿದ ಹೆಚ್ಚು ಮುಂದುವರಿದ ಶೃಂಗಜೀವಿಗಳು ಸಾಮಾನ್ಯವಾಗಿ ಭಿನ್ನ ಲಿಂಗಿಗಳು. ಒಂದು ಪ್ರಾಣಿ ಹೆಣ್ಣು ಅಥವಾ ಗಂಡಾಗಿ ಬೆಳೆಯಬೇಕು ಎನ್ನುವುದು ನಿಶೇಚನೆಯ ಕಾಲದಲ್ಲಿ ನಿರ್ಧಾರವಾಗುತ್ತದೆ. ಇದರಲ್ಲಿ ಕ್ರೋಮೊಸೋಮುಗಳು ಪ್ರಧಾನ ಪಾತ್ರ ವಹಿಸುತ್ತವೆ. ನಿಶೇಚನೆಯ ಕಾಲದಲ್ಲಿ ಅವುಗಳ ಲಿಂಗನಿರ್ಧಾರ ನಡೆದರೂ ಬೆಳವಣಿಗೆಯ ಒಂದು ಅವಸ್ಥೆಯಲ್ಲಿ ಹೆಣ್ಣು - ಗಂಡು ಎರಡೂ ಆಗಬಹುದಾದ ಉಭಯ ಸಾಮಾನ್ಯ ಲಿಂಗಾಂಗಗಳು ಬೆಳೆಯುತ್ತವೆ. ಈ ಲಿಂಗಾಂಗಗಳಲ್ಲಿ ಎರಡು ವಲಯಗಳನ್ನು ಪ್ರತ್ಯೇಕಿಸ

ಬಹುದು. ಹೊರಗಿನ ಕಾರ್ಟೆಕ್ಸ್ ಭಾಗ ಮತ್ತು ಒಳಗಿನ ಮೆಡುಲ್ಲ ಭಾಗ. ಕಾರ್ಟೆಕ್ಸ್ ಅಂಡಾಶಯುವಾಗಿಯೂ, ಮೆಡುಲ್ಲ ವೃಷಣವಾಗಿಯೂ ಬೆಳೆಯುತ್ತವೆ. ಯಾವುದು ಬೆಳೆಯಬೇಕು ಎಂಬ ನಿರ್ದೇಶವನ್ನು ಆನುವಂಶೀಯವಾದ ಲಿಂಗ ನಿರ್ಧಾರ ಕ್ರಮ ನಿರ್ಧರಿಸುತ್ತದೆ. ಕ್ರೋಮೊಸೋಮು ಸಂಯೋಗ ಗಂಡಾಗಿದ್ದರೆ ಮೆಡುಲ್ಲ ವೃಷಣವಾಗಿ ಬೆಳೆಯುತ್ತದೆ ಮತ್ತು ಕಾರ್ಟೆಕ್ಸ್ ಇಂಗಿ ನಶಿಸಿ ಹೋಗುತ್ತದೆ. ಹಾಗೆ ಕ್ರೋಮೊಸೋಮು ಸಂಯೋಗ ಹೆಣ್ಣಾಗಿದ್ದರೆ ಕಾರ್ಟೆಕ್ಸ್ ಅಂಡಾಶಯುವಾಗಿ ಬೆಳೆಯುತ್ತದೆ ಮತ್ತು ಮೆಡುಲ್ಲ ಇಂಗಿ ನಶಿಸಿಹೋಗುತ್ತದೆ. ಹೀಗೆ ಲಿಂಗಾಂಗಗಳು ರೂಪುಗೊಳ್ಳುವಾಗ, ಇವುಗಳ ಉತ್ಪಾದನೆಗಳನ್ನು ಸಾಗಿಸಲು ನಾಳಗಳು ರೂಪುಗೊಳ್ಳುತ್ತವೆ. ಈ ನಾಳಗಳು ಮೂತ್ರ ಜನಕಾಂಗ ನಾಳಗಳಿಂದ ರೂಪುಗೊಳ್ಳುತ್ತವೆ. ಕಶೇರುಕಗಳಲ್ಲಿ ಲಿಂಗಾಂಗಗಳು ಮತ್ತು ಮೂತ್ರ ವಿಸರ್ಜನಾಂಗಗಳ ಬೆಳವಣಿಗೆಯಲ್ಲಿ ಮುಖ್ಯವಾಗಿ ಮೂರು ಅವಸ್ಥೆಗಳಿವೆ. ಭ್ರೂಣಾವಸ್ಥೆಯಲ್ಲಿ ರೂಪುಗೊಂಡು ಕಾರ್ಯ ನಿರ್ವಹಿಸುವ ಮೂತ್ರ ವಿಸರ್ಜನಾಂಗಗಳೇ ಬೇರೆ. ಹೀಗೆ ಬೆಳೆಯುವ ರಚನೆಗಳನ್ನು ಬೆಳವಣಿಗೆಯಲ್ಲಿ ಕಾಣಿಸಿಕೊಳ್ಳುವ ಸರದಿ, ಕ್ರಮ ಮತ್ತು ದೇಹದಲ್ಲಿ ಬೆಳೆಯುವ ಭಾಗಗಳನ್ನನುಸರಿಸಿ ಪ್ರೊನೆಫ್ರಾಸ್, ಮಿಸೊನೆಫ್ರಾಸ್ ಮತ್ತು ಮೆಟನೆಫ್ರಾಸ್‌ಗಳೆಂದು ಕರೆಯುತ್ತಾರೆ. ಸರೀಸೃಪಗಳು, ಪಕ್ಷಿಗಳು ಮತ್ತು ಸಸ್ತನಿಗಳಲ್ಲಿ ಮೆಟನೆಫ್ರಾಸ್ ಪ್ರಬುದ್ಧಾವಸ್ಥೆಯ ಮೂತ್ರಪಿಂಡಗಳಾಗುತ್ತವೆ. ಉಳಿದುವು ಭ್ರೂಣೀಯ ಅವಸ್ಥೆಗಳಲ್ಲಿ ಕಾಣಿಸಿಕೊಂಡು ಮರೆಯಾಗುತ್ತವೆ. ಹಾಗೆ ಮೀನು ಮತ್ತು ಉಭಯವಾಸಿಗಳಲ್ಲಿ ಮಿಸೊನೆಫ್ರಾಸ್ ಪ್ರಬುದ್ಧಾವಸ್ಥೆಯ ಮೂತ್ರಪಿಂಡಗಳಾಗುತ್ತವೆ. ಇವು ಕಾಣಿಸಿಕೊಂಡಾಗ ಇವಕ್ಕೆ ಅನುವಾದ ನಾಳಗಳೂ ರೂಪುಗೊಳ್ಳುತ್ತವೆ. ಹೀಗೆ ಕಾಣಿಸಿಕೊಂಡ ಮಿಸೊನೆಫ್ರಿಕ್ ನಾಳವು ಮಿಸೊನೆಫ್ರಾಸ್ ಕಣ್ಮರೆಯಾದಾಗ ತಾನೂ ಕಣ್ಮರೆಯಾಗದೆ ಉಳಿದು ಪ್ರಬುದ್ಧಾವಸ್ಥೆಯ ಲಿಂಗಾಂಗವಾಹಿನಿಗಳಾಗುತ್ತದೆ. ಈ ಮಿಸೊನೆಫ್ರಿಕ್ ನಾಳದಿಂದ ಮುಲ್ಲೇರಿಯನ್ ನಾಳ ಮತ್ತು ವುಲ್ಫಿಯನ್ ನಾಳ ಉತ್ಪತ್ತಿಯಾಗುತ್ತದೆ. ಹೆಣ್ಣು ಪ್ರಾಣಿಗಳಲ್ಲಿ ಮುಲ್ಲೇರಿಯನ್ ನಾಳವು ಅಂಡವಾಹಿನಿಯಾಗುತ್ತದೆ ಮತ್ತು ಗಂಡುಪ್ರಾಣಿಗಳಲ್ಲಿ ವುಲ್ಫಿಯನ್ ನಾಳವು ವಾಸಡೆಫರೆನ್ಸ್ ಅಥವಾ ಶುಕ್ರವಾಹಕ (ವೃಷಣವಾಹಿನಿ)ವಾಗುತ್ತದೆ. ಇದು ಲಿಂಗಾಂಗಗಳು ಬೆಳೆಯುವ ಕ್ರಮ.

ಕಶೇರುಕಗಳಲ್ಲಿ ಈ ಲಿಂಗ ವಿಭೇದೀಕರಣ ನಿರ್ದಿಷ್ಟವಾಗಿದ್ದರೂ ಉಭಯವಾಸಿಗಳಲ್ಲಿ ಸ್ವಲ್ಪ ಅನುನಯುವನ್ನು ತೋರುತ್ತದೆ. ಇಲ್ಲಿ ಉಭಯ ಲಿಂಗಿಗಳು ಮತ್ತು ಅಂಡವೃಷಣಗಳಿರುವುದು ಬಹಳ ಸಾಮಾನ್ಯ. ನೆಲಗಪ್ಪೆಗಳಲ್ಲಿ ಹೆಣ್ಣುಗಂಡುಗಳೆರಡರಲ್ಲಿಯೂ ಅಂಡಾಶಯ ಅಥವಾ ವೃಷಣಗಳ ಜೊತೆಗೆ ಬಿಡ್ಡರ್ ಅಂಗ ಎಂಬೊಂದು ಭಿನ್ನಲಿಂಗ ಜನನೇಂದ್ರಿಯವೂ ಇರುತ್ತದೆ. ಕೆಲವೊಮ್ಮೆ ಬಹಳ ಅಪರೂಪವಾಗಿ ವೃಷಣದಲ್ಲಿ ಒಂದು ಅಂಡಾಣುವೂ ಇರಬಹುದು 1, 2, 3, 4. ನಾವು ಕಳೆದ ಹತ್ತುವರ್ಷಗಳಿಂದ ದಕ್ಷಿಣಭಾರತದ ಮೂರು ಪ್ರಭೇದದ ಕಪ್ಪೆಗಳನ್ನು ಮತ್ತು ಒಂದು ಪ್ರಭೇ

ದವ ನೆಲಗಪ್ಪೆಗಳನ್ನು ಅಭ್ಯಾಸಕ್ಕೆ ಮತ್ತು ಸಂಶೋಧನೆಗೆ ಉಪಯೋಗಿಸುತ್ತಿದ್ದೇವೆ. ಇದುವರೆಗೆ ಸುಮಾರು ಲಕ್ಷಾಂತರ ಪ್ರಾಣಿಗಳನ್ನು ಪ್ರಯೋಗಕ್ಕೆ ಬಳಸಿಕೊಂಡಿರಬಹುದು. ಆದರೆ ಇಲ್ಲಿ ಈಗ ವಿವರಿಸುತ್ತಿರುವ ಮೂರು ನಾಲ್ಕು ಘಟನೆಗಳು ಒಂದೊಂದು ಮಾತ್ರ ನಮಗೆ ದೊರಕಿವೆ.

1. **ರಾನ ಹೆಕ್ಸಡ್ಯಾಕ್ಟೈಲ** ಪ್ರಭೇದದ ಗಂಡುಕಪ್ಪೆಗಳನ್ನು ನಮ್ಮ ಸಂಶೋಧನೆಗೆ ಬಳಸಿಕೊಂಡಿದ್ದು, ಒಂದರ ವೃಷಣದ ಅಡ್ಡಸೀಳಿಕೆಯನ್ನು ಪರಿಶೀಲಿಸುತ್ತಿರುವಾಗ ನಮ್ಮ ಗಮನಕ್ಕೆ ಬಂದ ವಿಷಯ ವೃಷಣದ ಅಡ್ಡಸೀಳಿಕೆ ಮತ್ತೆಲ್ಲ ಲಕ್ಷಣಗಳಲ್ಲಿ ಸಹಜವಾಗಿದ್ದು ಅದರ ಅಂಶಭಾಗವಾದ ಒಂದು ಸೆಮಿನಿಫೆರಸ್ ನಾಳದಲ್ಲಿ ಒಂದೇ ಒಂದು ಅಂಡಾಣು ಇದೆ (ಚಿತ್ರ 1 ಮತ್ತು 2). ಇದನ್ನು ಪರಿಶೀಲಿಸಿದ ಟರ್ನರ್ (1966) ಇದಕ್ಕೆ ಎರಡು ವಿವರಣೆಗಳನ್ನು ಕೊಡುತ್ತಾನೆ.

ಬೆಳವಣಿಗೆಯ ಆದಿಯ ಹಂತದಲ್ಲಿ ಉಭಯ ಸಾಮಾನ್ಯ ಲಿಂಗಾಂಗದ ಕಾರ್ಟೆಕ್ಸ್‌ನಿಂದ ಒಂದು ಅಂಡಾಣು ಆಕಸ್ಮಾತ್ತಾಗಿ ಮೆಡುಲ್ಲ ಭಾಗಕ್ಕೆ ವಲಸೆ ಬಂದು ಸೆಮಿನಿಫೆರಸ್ ನಾಳದಲ್ಲಿ ಉಳಿದು ಹೋಗಿರಬಹುದು; ಪುರುಷಾಣುವಾಗಿ ವಿಭೇದೀಕರಣವಾಗಬೇಕಾಗಿದ್ದ ಒಂದು ಸ್ಪರ್ಮಟೋಗೋನಿಯಮ್ ಮೆಡುಲ್ಲದ ಪುರುಷ ಪ್ರಚೋದಕ ಪ್ರಭಾವದಿಂದ ತಪ್ಪಿಸಿಕೊಂಡು ಅಂಡಾಣುವಾಗಿರಬಹುದು. ಅನುವಂಶೀಯವಾಗಿ ಈ ಜೀವಕೋಶ ಅಂಡಾಣುವಾಗಬೇಕಿತ್ತೇ ಅಥವಾ ಪುರುಷಾಣುವಾಗಬೇಕಿತ್ತೇ ಎಂಬುದು ನಮಗೆ ತಿಳಿಯದು. ತಿಳಿಯುವ ಅವಕಾಶ ನಮಗೆ ಸಿಗಲಿಲ್ಲ. ಆದಿಯ ಕಶೇರುಕ ಪ್ರಜನನದ ಜೀವಕೋಶಗಳಿಗೆ ಇಬ್ಬಗೆಯ ಸಾಮರ್ಥ್ಯವಿರುವುದು ತಿಳಿದಿದೆ.

2. **ರಾನ ಹೆಕ್ಸಾಡ್ಯಾಕ್ಟೈಲ** ಪ್ರಭೇದದ ಗಂಡುಕಪ್ಪೆಯೊಂದರಲ್ಲಿ ಅಂಡವಾಹಿನಿಯಿರುವುದೂ ನಮ್ಮ ಗಮನಕ್ಕೆ ಬಂದಿದೆ (ಚಿತ್ರ 3). ಇದು ಮೇಲೆ ತಿಳಿಸಿದಷ್ಟು ಅಪರೂಪವಲ್ಲ. ಇದರಲ್ಲಿಯೂ ಮುಲ್ಲೇರಿಯನ್ ನಾಳವು ಇಂಗಿಹೋಗದೆ ಉಳಿದುಬಿಟ್ಟಿದೆ.


3. **ಬ್ಯೂಫೊ ಮೆಲನೊಸ್ಟಿಕ್ಟಸ್** ಪ್ರಭೇದದ ಗಂಡು ನೆಲಗಪ್ಪೆಯಲ್ಲಿ ವೃಷಣದ ಅಡ್ಡ ಸೀಳಿಕೆಯಲ್ಲಿ (ಒಂದು ವೃಷಣ ಮಾತ್ರ) ಅರ್ಧ ಅಂಡಾಶಯ ಮತ್ತು ಅರ್ಧ ವೃಷಣ ರಚನೆ ಇದೆ (ಚಿತ್ರ 5). ಇದರ ಅಂಡಾಶಯಭಾಗವು ಉಭಯವಾಸಿಗಳ ಅಂಡಾಶಯ ರಚನೆಯನ್ನು ತೋರುವುದಿಲ್ಲ. ಉಭಯವಾಸಿಗಳ ಅಂಡಾಶಯವು ಎರಡು ಪಟಲಾವೃತವಾದ ಚೀಲದ ರೂಪದಲ್ಲಿದೆ. ನಡುವಿನ ಅವಕಾಶಕ್ಕೆ ಅಂಡಾಶಯದ ಪಾಲಿಗಳು ಚಾಚಿಕೊಂಡಿರುತ್ತವೆ. ಬೆಳವಣಿಗೆಯ ವಿವಿಧ ಹಂತಗಳಲ್ಲಿರುವ ಅಂಡಾಣುಗಳು ಎರಡು ಪಟಲಗಳ ನಡುವೆ ಇರುತ್ತವೆ (ಚಿತ್ರ 4). ಆದರೆ ಇಲ್ಲಿ ಅಂಡಾಶಯವು ಸಸ್ತ

ನಿಗಳ ಮಾದರಿಯ ರಚನೆಯನ್ನು ತೋರಿ ನಡುವೆ ಅಂತರಾಲಿ ಜೀವಕೋಶ ಸಮುದಾಯವಿರುವುದನ್ನು ತೋರುತ್ತದೆ.


4. ಇದೊಂದು ಇದುವರೆಗೂ ಯಾರೂ ತಿಳಿಸದಿರುವ ಅಪರೂಪದ ವಿಷಯ. **ಬ್ಯೂಫೊ ಮೆಲನೊಸ್ಟಿಕ್ಟಸ್** ನೆಲಗಪ್ಪೆಯಲ್ಲಿ ಲಿಂಗ ವಿಭೇದೀಕರಣವು ಅರ್ಧನಾರೀಶ್ವರ ಮಾದರಿಯನ್ನು ತೋರುತ್ತದೆ. ಅರ್ಧ ಭಾಗವು ಗಂಡೋ ಎಂಬಂತೆ ಬಲಭಾಗದಲ್ಲಿ ಕೇವಲ ಒಂದು ವೃಷಣವೂ, ಇನ್ನರ್ಧ ಭಾಗ ಅಂದರೆ ಎಡಭಾಗದಲ್ಲಿ ಕ್ಷೀಣವಾದ ಅಂಡಾಶಯವೂ, ಚೆನ್ನಾಗಿ ಬೆಳೆದಿರುವ ಅಂಡವಾಹಿನಿಯೂ ಇವೆ (ಚಿತ್ರ 6). ವೃಷಣವನ್ನು ಅಡ್ಡಸೀಳಿಕೆ ತೆಗೆದು ನೋಡಿದಾಗ ಅದು ಪರಿಪಕ್ವವಾದ ರಚನೆಯನ್ನು ತೋರಿತು (ಚಿತ್ರ 7). ಆದರೆ ಅಂಡಾಶಯದ ಅಡ್ಡಸೀಳಿಕೆಯು ಕೇವಲ ಅಪಕ್ವವಾದ ಅಂಡಾಣುಗಳಿರುವುದನ್ನು ತೋರಿತು (ಚಿತ್ರ 8). ಈ ಚಿತ್ರವನ್ನು ಚಿತ್ರ 4 ರ ಸಹಜವಾದ ಅಂಡಾಶಯದ ಅಡ್ಡಸೀಳಿಕೆಗೆ ಹೋಲಿಸಿದರೆ ವ್ಯತ್ಯಾಸ ಸ್ವಯಂವೇದ್ಯವಾಗಿದೆ.


ಈ ಅಸಂಗತಿಗಳಿಗೆ ವಿವರಣೆ ನೀಡುವುದು ಸುಲಭವಲ್ಲ. ಪ್ರಾಯೋಗಿಕವಾಗಿ ಈ ಲಕ್ಷಣಗಳ ಬೆಳವಣಿಗೆಯನ್ನು ಪ್ರಚೋದಿಸಲು ಸಾಧ್ಯವಾಗಿಲ್ಲ. ಇತರ ಪ್ರಾಣಿಗಳ ಲಿಂಗ ನಿರ್ಧಾರ ಮತ್ತು ಲಿಂಗಾಂಗಗಳ ವಿಭೇದೀಕರಣಗಳ ಆಧಾರದಿಂದ ಇವಕ್ಕೆ ಉತ್ತರ ಹೇಳುವ ಪ್ರಯತ್ನ ಮಾಡಬಹುದು.

ಈ ದಿಸೆಯಲ್ಲಿ ಉಭಯವಾಸಿಗಳ ಲಿಂಗ ವಿಭೇದೀಕರಣದ ಬಗೆಗೆ ಅಭ್ಯಾಸ ಮಾಡಿ ಉತ್ತರ ಹೇಳುವ ಪ್ರಯತ್ನ ಮಾಡಿದವರಲ್ಲಿ ವಿಚಿ[1] ಮುಖ್ಯನಾದವನು. ಈತನ ಸೂಚನೆಯು ಬೆಳವಣಿಗೆಯ ಶರೀರ ಕ್ರಿಯಾ ವಿಶೇಷಕ್ಕೆ ಜೀನ್ ಚಟುವಟಿಕೆಯನ್ನು ತಾಳೆ ಹಾಕಿ, ಲಿಂಗ ನಿರ್ಧಾರಕ್ಕೂ-ಲಿಂಗ ವಿಭೇದೀಕರಣಕ್ಕೂ ಸಂಬಂಧ ಕಾಣಲು ಪ್ರಯತ್ನಿಸುತ್ತದೆ. ಲಿಂಗಾಂಗಗಳ ರಚನೆಯ ಅಸಾಮಾನ್ಯತೆಗಳಿಗೆ ಕ್ರೋಮೊಸೋಮುಗಳ ಅಸಮ ಹಂಚಿಕೆಯೂ ಕಾರಣವಾಗಬಹುದೆಂದು ಕೆಲವರು ಅಭಿಪ್ರಾಯ ಪಟ್ಟಿದ್ದಾರೆ. ಆರಂಭದಲ್ಲಿ ಒಂದೇ ಕ್ರೋಮೊಸೋಮು ಅಂಶಗಳನ್ನೊಳಗೊಂಡ ಈ ಜೀವಕೋಶಗಳಿಂದ ಗಂಡು ಮತ್ತು ಹೆಣ್ಣು ಲಿಂಗಾಂಗಗಳು ಬೆಳೆದುದು ಹೇಗೆ ? ಹೆಣ್ಣುತನಕ್ಕೆ ಕಾರಣವಾದ F ಮತ್ತು ಗಂಡುತನಕ್ಕೆ ಕಾರಣವಾದ M ಅಂಶಗಳೆರಡನ್ನೂ ಊಹಿಸಿಕೊಂಡು ವಿಚಿ ಈ ಸಮಸ್ಯೆಗೆ ಪರಿಹಾರ ಹುಡುಕುವ ಪ್ರಯತ್ನ ಮಾಡಿದ್ದಾನೆ ಮತ್ತು ಈ ಹಾದಿಯಿಂದ ಲಿಂಗ ನಿರ್ಧಾರ ಮತ್ತು ಲಿಂಗ ವಿಭೇದೀಕರಣಕ್ಕೆ ಸಂಬಂಧವನ್ನು ಕಲ್ಪಿಸುತ್ತಾನೆ. ಈ M ಮತ್ತು F ಅಂಶಗಳು ಭ್ರೂಣೀಯ ಕ್ಷೀಣ ಅಂಗಾಂಗಗಳ ಮೇಲೆ ತಮ್ಮ ಪ್ರಭಾವ ಬೀರುತ್ತವೆ ಎಂದು ಊಹಿಸಿಕೊಳ್ಳುತ್ತಾನೆ. ಈ ಊಹೆಯ ಆಧಾರದ ಮೇಲೆ ವಿವರಣೆ ಸುಲಭವಾಗುತ್ತದೆ. ಬಲ ಭಾಗದ ಭ್ರೂಣೀಯ ಅಂಗಾಂಗವಲ್ಲಿ ಮೆದುಲ್ಲ ಭಾಗ ಇಲ್ಲದಿರುವುದರಿಂದ ಅದು M ಅಂಶಕ್ಕೆ ಪ್ರತಿಕ್ರಿಯೆ ತೋರದೆ ಅಂಡಾಶಯವಾಗಿ ಬೆಳೆಯುತ್ತದೆ











1. ಅಂಡಾಣುವಿರುವುದನ್ನು ತೋರುವ ರಾನ ಹೆಕ್ಸಾಡ್ಯಾಕ್ಟೈಲ ವೃಷಣದ ಅಡ್ಡ ಸೀಳಿಕೆ
2. ಮೊದಲನೇ ಚಿತ್ರದ ಸ್ವಲ್ಪ ಭಾಗವನ್ನು ದೊಡ್ಡದು ಮಾಡಿ ತೋರಿಸಿದೆ
3. ಅಂಡವಾಹಿನಿಯಿರುವ ಗಂಡು ರಾನ ಹೆಕ್ಸಾಡ್ಯಾಕ್ಟೈಲ
4. ಸಹಜವಾದ ಕಪ್ಪೆಯ ಅಂಡಾಶಯ ಸೀಳಿಕೆ


ಅಂ = ಅಂಡಾಣು
ವೃ = ವೃಷಣ

ಅಂ. ವಾ. = ಅಂಡವಾಹಿನಿ
ವೃ. ಭಾ = ವೃಷಣದ ಭಾಗ

ಅಂ. ಶ = ಅಂಡಾಶಯ
ಸೆ. ನಾ = ಸೆಮಿನಿಫೆರಸ್ ನಾಳಗಳು









5. ಸೆಲಗಪ್ಪೆ, ಬ್ಯೂಫೊ ಮೆಲನೊಸ್ಟಿಕ್ಟಸ್‌ನ ಅಂಡ ವೃಷಣದ ಅಡ್ಡ ಸೀಳಿಕೆ

6. ಅರ್ಧನಾರೀಶ್ವರ ಸೆಲಗಪ್ಪೆ, ಬ್ಯೂಫೊ ಮೆಲನೊಸ್ಟಿಕ್ಟಸ್. ಬಲಗಡೆ ವೃಷಣ ಮತ್ತು ಎಡಗಡೆ ಅಂಡಾಶಯ ಮತ್ತು ಅಂಡವಾಹಿನಿಗಳನ್ನು ಗಮನಿಸಿ

7. 6ನೇ ಚಿತ್ರದ ಸೆಲಗಪ್ಪೆಯ ವೃಷಣದ ಅಡ್ಡ ಸೀಳಿಕೆ ಸ್ವಾಭಾವಿಕವಾಗಿರುವ ಲಕ್ಷಣಗಳನ್ನು ಗಮನಿಸಿ

8. 6ನೇ ಚಿತ್ರದ ಸೆಲಗಪ್ಪೆಯ ಅಂಡಾಶಯದ ಸೀಳಿಕೆ. ಅಂಡಾಣುಗಳು ಅಪಕ್ವವಾಗಿರುವುದನ್ನು ಗಮನಿಸಿ

ಹಾಗಾದರೆ ಈ ಪಾರ್ಶ್ವ ವಿಭೇದೀಕರಣ ಮತ್ತು ಬೆಳವಣಿಗೆಗಳು ನಡೆದ ಬಗೆ ಹೇಗೆ? ಈ ಪ್ರಶ್ನೆ ಪ್ರಾಯೋಗಿಕ ಸವಾಲುಗಳ ಪರಂಪರೆಯಲ್ಲಿಯೇ ತುಂಬಾ ಕುತೂಹಲಕಾರಿಯಾದ ಕ್ಷೇತ್ರಕ್ಕೆ ನಮ್ಮನ್ನು ಕರೆದೊಯ್ಯುತ್ತದೆ.

ಒಂದೇ ನೆಲಗಪ್ಪೆಯಲ್ಲಿ ಭ್ರೂಣೀಯ ವೃಷಣ ಮತ್ತು ಭ್ರೂಣೀಯ ಅಂಡಾಶಯಗಳು M ಮತ್ತು F ಎಂಬ ಅನುವಂಶೀಯ ಅಂಶಗಳಿಗೆ ತೋರುವ ಪ್ರತಿಕ್ರಿಯೆಯ ರೀತಿ ಮತ್ತು ವಿನ್ಯಾಸಗಳು ವ್ಯತ್ಯಾಸವಾಗುವುದು ಅಚ್ಚರಿಯ ವಿಷಯವಲ್ಲ! ಅವುಗಳ ರಚನಾ ವಿಶೇಷವ ಆಧಾರವು ಇದನ್ನು (ಪ್ರತಿಕ್ರಿಯೆಯನ್ನು) ನಿರ್ಧರಿಸುತ್ತದೆ. ಲಿಂಗ ವಿಭೇದೀಕರಣದಲ್ಲಿ ಕ್ರೋಮೊಸೋಮುಗಳು ಎರಡು ಭಿನ್ನ ರೀತಿಯಲ್ಲಿ ತಮ್ಮ ಪ್ರಭಾವ ಬೀರಬಹುದು. [1]

1. ಈ ಪ್ರಭಾವವು ಯುಕ್ರೊಮ್ಯಾಟಿನ್ ಭಾಗದಲ್ಲಿರುವ ಮೆಂಡೆಲನ ಜೀನ್‌ಗಳ ಮೂಲಕ ನಡೆಯಬಹುದು. ಇದರಿಂದ ನಿರ್ದಿಷ್ಟ ಜೀವ ರಸಾಯನಿಕ ಪ್ರಚೋದನೆಗಳನ್ನು ಉತ್ಪತ್ತಿ ಮಾಡಬಹುದು. ಅಥವಾ

2. ಹೆಟರೊಕ್ರೊಮ್ಯಾಟಿನ್ ಮೂಲಕ ನ್ಯೂಕ್ಲಿಯೋಟೈಡ್ ಸರಣೀಕರಣದ ದೂತನಾಗಿ ವರ್ತಿಸಿ ಪರಿಮಾಣಾತ್ಮಕ ವ್ಯತ್ಯಾಸಗಳನ್ನು ಅನುವಂಶೀಯವಾಗಿ ನಿಯಂತ್ರಿಸಬಹುದು. ಈ ವಿವರಣೆಯು ಪ್ರಕಾಶಕ ಲಿಂಗ ವಿಭೇದೀಕರಣವಲ್ಲಿ ಮತ್ತು ಪ್ರಜನನ ಜೀವಕೋಶಗಳ ಉತ್ಪಾದನೆಗಳೆರಡರಲ್ಲಿಯೂ ಹೆಟರೊಕ್ರೊಮ್ಯಾಟಿನ್ ಇರುವ ಕ್ರೋಮೊಸೋಮುಗಳು ಪಾತ್ರವಹಿಸುತ್ತವೆ ಎಂದು ಸೂಚಿಸುತ್ತದೆ. ಇದು ಅನೇಕ ಪ್ರಶ್ನೆಗಳಿಗೆ ಕಾರಣವಾಗುತ್ತದೆ. ಗಂಡು ಮತ್ತು ಹೆಣ್ಣು ಬೆಳವಣಿಗೆಯನ್ನು ಅಂತಿಮವಾಗಿ ಪರಿಮಾಣಾತ್ಮಕ ವ್ಯತ್ಯಾಸಗಳ ಆಧಾರದಿಂದ ವಿವರಿಸಬಹುದೇ? ಸ್ಟೀರಾಯಿಡ್ ಹಾರ್ಮೋನುಗಳ ಬಗೆಗೆ ನಿರ್ದಿಷ್ಟ ಜ್ಞಾನದ ಅಭಾವ ಮತ್ತು ಎರಡೂ ಲಿಂಗಗಳಲ್ಲಿ ಎಸ್ಟ್ರೊಜೆನ್ (ಸ್ತ್ರೀ ಲೈಂಗಿಕ ಹಾರ್ಮೋನು) ಮತ್ತು ಆಂಡ್ರೊಜೆನ್ (ಪುರುಷ ಲೈಂಗಿಕ ಹಾರ್ಮೋನು) ಗಳೆರಡೂ ಇರುವುದು, ನಮ್ಮ ಅಜ್ಞಾನ ಸಂಪತ್ತಿಗೆ ಸೇರಿದ ವಿಷಯ. ಲಿಂಗಗಳ ನಡುವೆ ಇರುವ ದ್ವಿರೂಪ್ಯವು ಶಾರೀರ ಕ್ರಿಯಾ ವಿಶೇಷ, ಅಂತಃಸ್ರಾವಕೀ. ಜೀವಕೋಶೀಯ ಮತ್ತು ಅನುವಂಶೀಯ ಅಂಶಗಳ ಒಟ್ಟು ಪ್ರಭಾವ ರೂಪ ಎಂದು ಹೇಳಬಹುದು.

ನಮ್ಮ ಈ ಸಂಶೋಧನೆಗಳ ಕಾಲದಲ್ಲಿ ನೆರವಿತ್ತು ಪ್ರೋತ್ಸಾಹಿಸಿದ ಪ್ರೊ. ಎಂ. ಆರ್. ರಾಜಶೇಖರ ಶೆಟ್ಟಿಯವರಿಗೆ ನಾವು ಚಿರಋಣಿಯಾಗಿದ್ದೇವೆ. ನಮ್ಮಲ್ಲಿ ಇಬ್ಬರಿಗೆ ಸಂಶೋಧನ ವಿದ್ಯಾರ್ಥಿವೇತನಗಳನ್ನಿತ್ತು ಸಹಕರಿಸಿದ ಸಿ. ಎಸ್. ಐ. ಆರ್. ಸಂಸ್ಥೆ (ಸುವರ್ಣಲತ) ಮತ್ತು ಮೈಸೂರು ವಿಶ್ವವಿದ್ಯಾನಿಲಯ (ತ್ಯಾಗರಾಜ)ಗಳಿಗೆ ಧನ್ಯವಾದಗಳು. ಈ ಲೇಖನದೊಂದಿಗಿರುವ ಛಾಯಾಚಿತ್ರಗಳು ಮತ್ತು ಸೂಕ್ಷ್ಮ ಛಾಯಾಚಿತ್ರಗಳನ್ನು ತೆಗೆಯಲು ನೆರವು ನೀಡಿದ ಶ್ರೀ ರಾಮಕೃಷ್ಣ ರಾಜುರವರಿಗೆ ನಮ್ಮ ನೆನಕೆಗಳು.

ಪರಾಮರ್ಶೆ :


1. Dodd, J. M., General Gonadotrapic hormones in lower Vertebrates. In Marshall's Physiology of Reproduction. Ed. A.S. Parkes, Longman–London. 1965. 3rd Edn. 1. 2. 480
2. Turner, C. D., General Endocrinology, 2nd Edn. Saunder's Co., Philadelphia. 1960. 222
3. Turner, C. D., General Endocrinology, 4th Edn. Saunder's Co., Philadelphia. 1966. 375
4. Jollie, M., Chordate Morphology, Reinhold East West Press. 1968.

ಕನ್ನಡ ಭಾಷೆಯ "ಅ-" ಸ್ವನಗಳು

ತೀ. ನಂ. ಶ್ರೀಕಂಠಯ್ಯ

ನಾನು ಇಲ್ಲಿ ಮುಖ್ಯವಾಗಿ ಮೈಸೂರು ಪ್ರಾಂತದ ಪದಾದಿಯ ಅ- ಕಾರವನ್ನು ಕುರಿತು ಪ್ರಸ್ತಾಪಿಸುತ್ತೇನೆ.

ನನ್ನ ಮಾತುಗಳು ಸ್ಪಷ್ಟವಾಗಬೇಕಾದರೆ ಡೇನಿಯಲ್ ಜೋನ್ಸ್ ಎಂಬ ಸ್ವನ ವಿಜ್ಞಾನಿಯು ಮಾನಸ್ವರಗಳೆಂದು ಹೆಸರಿಸಿರುವ ಸ್ವನಗಳ ಕೆಳಗಿನ ಚಿತ್ರವನ್ನು ಗಮನಿಸಬೇಕು.



ಇವುಗಳಲ್ಲಿ i — a ಸಾಲಿನಲ್ಲಿರತಕ್ಕುವು ಪೂರ್ವಸ್ವರಗಳೆಂದೂ u — a ಸಾಲಲ್ಲಿರತಕ್ಕುವು ಪಶ್ಚಸ್ವರಗಳೆಂದೂ, ಸಂವೃತ ಇತ್ಯಾದಿಗಳು ಆಯಾ ಸಾಲಲ್ಲಿ ಕಂಡುಬರುವ ಸ್ವರಗಳ ಹೆಸರೆಂದೂ ತಿಳಿಯಬೇಕು. ಉದಾಹರಣೆಗೆ ɔ ಎಂಬುದು ಅರ್ಧವಿವೃತ ಪಶ್ಚ ಸ್ವರ. ə ಇದನ್ನು neutral vowel ಅಥವಾ ತಟಸ್ಥ ಸ್ವರವನ್ನುತ್ತಾರೆ. ʌ ಇದರ ಉಚ್ಚಾರಣೆಯ ವಿಧಾನ, ನಾಲಗೆಯ ಎತ್ತರದ ದೃಷ್ಟಿಯಿಂದ, ɔ ಇದ್ದಂತೆಯೆ. ɔ ಹೇಳುವಾಗ ತುಟಿಗಳು ಗುಂಡಗಿದ್ದರೆ ʌ ಹೇಳುವಾಗ ತುಟಿಗಳು ಸ್ವಲ್ಪ ಹರಡಿಕೊಳ್ಳುತ್ತವೆ. (ಹೆಚ್ಚಿನ ವಿವರಗಳಿಗೆ ಹೆಫ್ನರ್, ಜೋನ್ಸ್ ಮುಂತಾದವರ ಸ್ವನವಿಜ್ಞಾನಕ್ಕೆ ಸಂಬಂಧಿಸಿದ ಗ್ರಂಥಗಳನ್ನು ನೋಡಬಹುದು).

ಈಗ ಕೆಳಗಿನ ಯುಗ್ಮಗಳನ್ನು ನೋಡಿ:

{ ಕದ
{ ಕದಿ

{ ಮಗ
{ ಮಗು

ಇಲ್ಲೆಲ್ಲಾ ಪದಾರಂಭದಲ್ಲಿ ಕನ್ನಡ ಲಿಪಿಯು ಅಕಾರವನ್ನೇ ಬರೆದಿದ್ದರೂ, ಸ್ವನ ವಿಜ್ಞಾನದ ದೃಷ್ಟಿಯಿಂದ ಮೇಲಿನ ಎರಡು ಜೋಡಿಗಳಲ್ಲೂ ಮೊದಲನೆಯ ಮತ್ತು ಎರಡನೆಯ ಪದಗಳ ಪ್ರಥಮ ಸ್ವರ ಒಂದೇ ಅಲ್ಲ. "ಕದ", "ಮಗ" ಎಂಬಲ್ಲಿನ ಆದಿಸ್ವರ ʌ; "ಕದಿ", "ಮಗು" ಎಂಬಲ್ಲಿನ ಆದಿಸ್ವರ ə.

ə – ಉಚ್ಚ, ಮಧ್ಯಸ್ವರ (ಇಂಗ್ಲಿಷಿನ data ಎಂಬಲ್ಲಿನ ಕೊನೆಯ ಸ್ವರ).
ʌ – ಇನ್ನೂ ಕೆಳಗಿನ ಪಶ್ಚ ಸ್ವರ (ಇಂಗ್ಲಿಷಿನ but ಎಂಬಲ್ಲಿನ ಸ್ವರ).

ಮೇಲಿನ ಎರಡು ಜೋಡಿಗಳಲ್ಲೂ ಕಂಡು ಬರುವ ʌ, ə ಸ್ವರಗಳು ಕಂಡು ಬರುವ ಇನ್ನೂ ಕೆಲವು ಯುಗ್ಮಗಳನ್ನು ನೋಡಿ —

ʌ ಅಕ್ಕ }
ə ಅಕ್ಕಿ

ʌ ತಟ್ಟೆ }
ə ತಟ್ಟಿ

ʌ ಅನ್ನ }
ə ಅನ್ನು

ʌ ಅಪ್ಪ }
ə ಅಪ್ಪು

ʌ ಕಕ್ಕೆ }
ə ಕಕ್ಕು

[ಪಟ್ಟಿ 1]

ə ಕಂಡುಬರುವ ಮೇಲಿನ ಮತ್ತು ಅಂತಹ ಇನ್ನೂ ಹಲವಾರು ಪದಗಳನ್ನು ಗಮನಿಸಿ ನೋಡಿದರೆ, ಆ ಪದಗಳ ಎರಡನೆಯ ಸ್ವರ i ಅಥವಾ u ಎಂಬ ಸಂವೃತ ಸ್ವರಗಳೇ ಆಗಿರುವುದನ್ನು ಗುರುತಿಸಬಹುದು. ʌ ಕಂಡುಬರುವ ಪದಗಳನ್ನೆಲ್ಲ ಪರಿಶೀಲಿಸಿದರೆ, ಅಂತಹ ಪದಗಳ ಎರಡನೆಯ ಸ್ವರಗಳೆಲ್ಲ ಸಂವೃತೇತರಗಳಾಗಿರುವುದನ್ನೂ ಗುರುತಿಸಬಹುದು. ಇದನ್ನೇ ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು.

ಎರಡನೆಯ ಸ್ವರ ಸಂವೃತವಾಗಿದ್ದರೆ ə ಸಾಧ್ಯ.
ಎರಡನೆಯ ಸ್ವರ ಸಂವೃತೇತರವಾಗಿದ್ದರೆ ʌ ಸಾಧ್ಯ.

ʌ, ə ಗಳೆರಡೂ ಒಂದೇ ಪರಿಸರದಲ್ಲಿ ಕಾಣಿಸಿಕೊಂಡಿಲ್ಲ. ಅವು ಪರಿಸರದ ದೃಷ್ಟಿಯಿಂದ ಒಂದು ಇನ್ನೊಂದನ್ನು ಹೊರತುಪಡಿಸಿ ಬರುವುದರಿಂದ ಅವೆರಡೂ ಪೂರಕಪ್ರಸಾರದಲ್ಲಿವೆಯೆಂದು (Complementary distribution) ಭಾವಿಸಬೇಕಾಗುತ್ತದೆ. ಈ ದೃಷ್ಟಿಯಿಂದ ನೋಡಿದಾಗ, ಸ್ವನಶಾಸ್ತ್ರೀಯವಾಗಿ ಕದ, ಕದಿ ಮುಂತಾದ ಕಡೆಗಳಲ್ಲಿ ಎರಡು ಭಿನ್ನಸ್ವರಗಳಿದ್ದರೂ, ಅವೆರಡೂ ಒಂದೇ ಸ್ವನಿಮದ

ರೂಪಗಳಾಗಿರುವುದರಿಂದ, ಒಂದನೇ ಪಟ್ಟಿಯಲ್ಲಿ ಎರಡು ಕಡೆಯಲ್ಲೂ ಬರವಣಿಗೆಯಲ್ಲಿ ಅವುಗಳನ್ನು ಬರೆಯಲು ಒಂದೇ ಚಿಹ್ನೆಯನ್ನು (ಅಕಾರ) ಬಳಸುತ್ತಿರುವುದು ಸಮರ್ಥನೀಯವಾಗುತ್ತದೆ.

ಆದರೆ ಅದಕ್ಕಿಂತ ಸ್ವಾರಸ್ಯ ಸಂಗತಿ ಮತ್ತೊಂದಿದೆ. ಕೆಳಗಿನ ಯುಗ್ಮವನ್ನು ನೋಡಿ:

ʌ ಕರಿ 'to milk', 'to call'
ə ಕರಿ 'to fry', 'black'

ಇಲ್ಲಿ ʌ, ə ಗಳು ಕಾಣಿಸಿಕೊಳ್ಳುವ ಪರಿಸರಗಳು ಒಂದೇ ಆಗಿವೆ; ಇಂತಹ ಇನ್ನೂ ಕೆಲವು ಉದಾಹರಣೆಗಳು:

ʌ ಬರಿ 'to write' (ಕಾಗದ ಬರಿ).
ə ಬರಿ 'bare' (ಬರೀ ಮೈ)

ʌ ಅಂದ 'beautiful'.
ə ಅಂದ 'he said'.

ʌ ಅತ್ತೆ 'mother-in-law'.
ə ಅತ್ತೆ 'I cried'.

ʌ ತಂದೆ 'father'. (ನನ್ನ ತಂದೆ)
e ತಂದೆ 'brought'. (ನಾನು ಸಾಮಾನು ತಂದೆ)

ʌ ತಡಿ 'wait'.
ə ತಡಿ 'saddle'.

[ಪಟ್ಟಿ 2]

ಇಲ್ಲಿ ʌ, ə ಗಳು ಸ್ಪಷ್ಟವಾಗಿ ವಿರೋಧಪ್ರಸಾರದಲ್ಲಿವೆ (contrast). ಎಂದರೆ, ಎರಡು ಸ್ವನಗಳೂ ಒಂದೇ ಪರಿಸರದಲ್ಲಿ ಬಂದಿದ್ದು ಅರ್ಥವ್ಯತ್ಯಾಸಕ್ಕೆ ಕಾರಣವಾಗಿರುವುದರಿಂದ ಎರಡೂ ಸ್ವತಂತ್ರ ಸ್ವನಿಮಗಳೆಂದು ಕರೆಯಿಸಿಕೊಳ್ಳುತ್ತವೆ. ಸಾರಾಂಶ — ಅವೆರಡೂ ಸ್ವತಂತ್ರ ಸ್ವನಿಮಗಳಾಗಿರುವುದರಿಂದ, (ಎರಡನೇ ಪಟ್ಟಿಯಲ್ಲಿ) ಕನ್ನಡದಲ್ಲಿ ಅವೆರಡಕ್ಕೂ ಬರವಣಿಗೆಯಲ್ಲಿ ಒಂದೇ ಚಿಹ್ನೆಯನ್ನು (ಅ ಕಾರ) ಬಳಸುತ್ತಿರುವುದು ಸಮರ್ಥನೀಯವಾಗುವುದಿಲ್ಲ.

ಹಿಂದೆ ನೋಡಿದಂತೆ (ಪಟ್ಟಿ 1) ʌ, ə ಗಳು ಒಂದು ಸ್ವನಿಮದ ಎರಡು ಉಪ ಸ್ವನಗಳು ; ಮೇಲೆ ನೋಡಿದಂತೆ (ಪಟ್ಟಿ 2) ಅವೆರಡೂ ಪ್ರತ್ಯೇಕ ಸ್ವನಿಮಗಳು. ಇದು ಏಕೆ ಹೀಗಾಯ್ತು ? ಈ ಗೊಂದಲ, ಗೋಜುಗಳಿಗೆ ಐತಿಹಾಸಿಕ ಕಾರಣವಿದೆ.

ಹಳಗನ್ನಡದ ಬಳಿಕ (ನಡುಗನ್ನಡವಾದಮೇಲೂ), ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ವ್ಯಾವಹಾರಿಕ ಕನ್ನಡದಲ್ಲಿ ಪದಾಂತ್ಯದ – ಎ ಕಾರವು – ಇ ಕಾರವಾಗಿ ಮಾರ್ಪಾಟಾಯಿತು[1]. ಹಳಗನ್ನಡದಲ್ಲಿ ಈಗಿನಂತೆಯೇ (ಪಟ್ಟಿ 1) ʌ, ə ಗಳು ಭಿನ್ನ ಭಿನ್ನ ಪರಿಸರಗಳಲ್ಲಿ ಕಾಣಿಸಿಕೊಂಡು ಉಪಸ್ವನಗಳಾಗಿದ್ದುವು. ಆದರೆ, ಪದಾಂತ್ಯದ – ಎಕಾರವು –ಇಕಾರವಾದಾಗ, ಎಂದರೆ ಪರಿಸರ ವ್ಯತ್ಯಾಸವಾದಾಗ ಮೊದಲ ಸ್ವರ ಆ ಪರಿಸರಕ್ಕನುಗುಣವಾಗಿ ವ್ಯತ್ಯಾಸ ಹೊಂದಲಿಲ್ಲ. "ಬರೆ" ('to write') ಎಂಬಲ್ಲಿ ʌ– ಇದ್ದು, ಬರೆ > ಬರಿ ಆದಾಗ, ನ್ಯಾಯವಾಗಿ ʌ– > ə– ಆಗಬೇಕಾಗಿತ್ತು. ಆದರೆ ಹಾಗಾಗದೆ ʌ– > ʌ– ಆಗಿಯೇ ಉಳಿದದ್ದರಿಂದ ʌ ಬರಿ 'to write' ə ಬರಿ 'bare' ಎಂಬ ಪದಗಳಲ್ಲಿ ʌ, ə ಗಳೆರಡೂ ವಿರೋಧ ಪ್ರಸಾರದಲ್ಲಿರಲು ಕಾರಣವಾಯ್ತು.

'to call' ಎಂಬರ್ಥದ "ಕರೆ" ಎಂಬಲ್ಲಿಯೂ ʌ ಕರಿ 'to call', ə ಕರಿ 'to fry' ಎಂಬುವುಗಳಿಗೆ ವಿರೋಧ ಕಂಡುಬರಲು ಮೊದಲಿನದೇ ಕಾರಣ. ಎಂದರೆ ಹಿಂದೆ ಒಂದು ಸ್ವನಿಮ (ಅದನ್ನು /ʌ/ ಎಂದಾದರೂ ಕರೆಯಬಹುದು. /ə/ ಎಂದಾದರೂ ಕರೆಯಬಹುದು) ಇದ್ದು ಅದು, ಆಮೇಲೆ /ʌ/, /ə/ ಎಂಬ ಎರಡು ಪ್ರತ್ಯೇಕ ಸ್ವನಿಮ ಗಳಾಗಿ ಒಡೆಯಿತು. . ಇದನ್ನು 'Phonemic split' ಎಂದು ಕರೆಯುತ್ತಾರೆ.[2]

ಹೀಗೆ ಒಂದು ಸ್ವನಿಮದ ಉಪಸ್ವನಗಳಾಗಿದ್ದ [ʌ], [ə] ಗಳು ತಾವೇ ಸ್ವತಂತ್ರ ಸ್ವನಿಮಗಳಾದರೂ (ಪಟ್ಟಿ 2), ಹಿಂದಿನ ಉಪಸ್ವನೀಯ ಲಕ್ಷಣಗಳನ್ನು (ಪಟ್ಟಿ 1) ಉಳಿಸಿಕೊಂಡೇ ಬಳಕೆಗೆ ಬಂದುವು. ಹಿಂದೆ [ʌ], [ə] ಗಳು ಉಪಸ್ವನಗಳಾಗಿದ್ದಾಗ ಅವುಗಳ ಪರಿಸರ ಸ್ಪಷ್ಟವಾಗಿದ್ದಿತು ಮತ್ತು ಅವುಗಳ ಬಳಕೆಯ ವಿಷಯದಲ್ಲಿ ಖಚಿತತೆ ಯಿದ್ದಿತು. ಎಂದರೆ, [ʌ], [ə] ಎಲ್ಲೆಲ್ಲಿ ಬರಬೇಕು ಎಂಬುದರ ಬಗ್ಗೆ ಸ್ಪಷ್ಟ ಅರಿವು ಇದ್ದಿತು. ಇದು ಸಂಸ್ಕೃತದಿಂದ ಬಂದ ಪದಗಳಿಗೂ ಅನ್ವಯವಾಗುತಿದ್ದಿತೆಂದು ಕಾಣುತ್ತದೆ – ಈಗಿನ ಉಚ್ಚಾರವನ್ನು ನೋಡಿದರೆ.

---

1 ಉತ್ತರ ಕರ್ಣಾಟಕ ಕನ್ನಡದಲ್ಲಿ ಮನೆ, ಕತ್ತೆ, ಒಂಟೆ ಇತ್ಯಾದಿ ಪದಗಳನ್ನು ಮನಿ, ಕತ್ತಿ, ಒಂಟಿ ಎಂದೇ ಹೇಳುತ್ತಾರೆ.

2 ಇದಕ್ಕೆ ಪ್ರತಿಯಾದುದು 'Phonemic merger' — ಒಂದು ಸ್ವನಿಮ ಬೇರೆ ಸ್ವನಿಮಗಳಲ್ಲಿ ವಿಲೀನ ಹೊಂದುವುದು. ಹಳಗನ್ನಡದ /ೞ್/ ಎಂಬ ಸ್ವನಿಮ ಬೇರೆ ಬೇರೆ ಪರಿಸರಗಳಲ್ಲಿ /ಳ್/, /ರ್/ ಎಂಬ ಸ್ವನಿಮಗಳಲ್ಲಿ ವಿಲೀನ ಹೊಂದಿದ್ದು ಸುಪ್ರಸಿದ್ಧ ಸಂಗತಿಯಾಗಿದೆ.

{ ʌ ಭಕ್ತ 'devotee'
{ ə ಭಕ್ತಿ 'devotion'

{ ʌ ಅಕ್ಷರ 'letter'
{ ə ಅಕ್ಷಿ 'eye'

{ ʌ ಪಕ್ಷ 'wing'
{ ə ಪಕ್ಷಿ 'bird'

ಆದರೆ /ʌ/, /ə/ ಗಳು ಸ್ವತಂತ್ರ ಸ್ವನಿಮಗಳಾದ ಮೇಲೆ, ಎಂದರೆ ಅವು ಪರಿಸರ ಬದ್ಧವಾಗಿ ಕಾಣಿಸಿಕೊಳ್ಳುವುದು ಕೆಲವು ಕಡೆ ನಿಂತುಹೋಗಿ, ಕೆಲವು ಕಡೆ ಉಳಿದು ಕೊಂಡು ಬಂದು ಅವುಗಳ ಬಳಕೆಯ ವಿಷಯದಲ್ಲಿ ಅವ್ಯವಸ್ಥೆ ಕಾಣಿಸಿಕೊಂಡಿತು. ಉದಾಹರಣೆಗೆ "ಅದು" ಎಂಬ ಪದದ ಮೊದಲ ಸ್ವರದ ಉಚ್ಚಾರಣೆಯಲ್ಲಿ ಕೆಲವೆಡೆ ʌ ಇದ್ದರೆ, ಮಲೆನಾಡಿನಲ್ಲಿ ə ಕಾಣಿಸಿಕೊಳ್ಳುತ್ತದೆ. ಕೆಲವರ ಉಚ್ಚಾರಣೆಯಲ್ಲಿ "ಕರ್ಮ" ಎಂಬ ಪದದ ಮೊದಲ ಸ್ವರದ ಉಚ್ಚಾರಣೆಯಲ್ಲಿ ʌ, ə ಗಳೆರಡರಲ್ಲಿ ಯಾವುದು ಬೇಕಾದರೂ ಬರಬಹುದು. ನನ್ನ ಉಚ್ಚಾರಣೆಯಲ್ಲಿ ಮೊದಲ ಸ್ವರವಾಗಿ "ಸರ್ಪ", "ಗರ್ಭ", "ಧರ್ಮ" ಎಂಬಲ್ಲಿ ʌ ಎಂಬುದೂ, "ಗರ್ವ", "ಕರ್ಮ" ಎಂಬಲ್ಲಿ ə ಎಂಬುದೂ ಕಾಣಿಸಿಕೊಳ್ಳುತ್ತದೆ. ಈ ಅವ್ಯವಸ್ಥೆ ಕಾರಣವಾಗಿ, ಕೆಲವುಸಾರಿ ಅಪಾರ್ಥ ಗಳಿಗೂ ತಪ್ಪುಗಳಿಗೂ ಕಾರಣವಾಗಬಹುದು.

/ʌ/, /ə/ ಗಳು ಸ್ವತಂತ್ರ ಸ್ವನಿಮಗಳಾಗಿದ್ದರೂ, ಅವುಗಳನ್ನು ಬರೆಯಲು ಒಂದೇ ಚಿಹ್ನೆಯನ್ನು ಬಳಸುತ್ತಿದ್ದೇವೆ ತಾನೆ! ನ್ಯಾಯವಾಗಿ, "ತಂದೆ" 'father' "ತಂದೆ" 'I brought' ಎಂಬ ಎರಡು ಪದಗಳ ಮೊದಲ ಸ್ವರಗಳಿಗೆ ಬೇರೆ ಬೇರೆ ಚಿಹ್ನೆಗಳನ್ನು ಕಲ್ಪಿಸಬೇಕಾಗಿತ್ತು. ಹಾಗಾಗದಿರಲು ಕಾರಣ, ಬರವಣಿಗೆಯು ವ್ಯಾವಹಾರಿಕ ಭಾಷೆಯ ಜೊತೆಗೆ ಹೆಜ್ಜೆ ಹಾಕದೆ ಹಿಂದುಳಿದಿರುವುದೇ ಕಾರಣ. ಭಾಷೆಗಿಂತ ಬರಹ ಸಂಪ್ರದಾಯ ನಿಷ್ಠವಾದುದು ಎಂಬುದನ್ನು ಇಲ್ಲಿ ನೆನೆಯಬಹುದು.[3]

[ಸಂಗ್ರಾಹಕ: ಎಂ. ಚಿದಾನಂದಮೂರ್ತಿ]

---

3 ಸಂಗ್ರಾಹಕನ ಕೆಲವು ಮಾತುಗಳು:

1959ರ ಸರಿಸುಮಾರಿನಲ್ಲಿ ಮೈಸೂರಿನ Linguistic circle ಆಶ್ರಯದಲ್ಲಿ ಮಾಡಿದ ಉಪನ್ಯಾಸವನ್ನು ನಾನು ಆ ದಿನ ತೆಗೆದುಕೊಂಡ ಟಿಪ್ಪಣಿಗಳ ಸಹಾಯದಿಂದ ಸಿದ್ಧ ಪಡಿಸಿದ್ದೇನೆ. ಅಲ್ಲಿ ಇಲ್ಲಿ ಒಂದೆರಡು ನನ್ನ ಮಾತುಗಳು ನುಸುಳಿ ಕೊಂಡಿರಬಹುದು. ಕೆಲವೆಡೆ ವಿವರಣೆಗಾಗಿ ಎರಡು ಮಾತು ಸೇರಿಸಿರಬಹುದು. ಆದರೆ ಆ ದಿನದ ಅವರ ಉಪನ್ಯಾಸವನ್ನು ಪ್ರತಿನಿಧಿಸುವಂತಿದೆ ಈ ಪ್ರಬಂಧ ಎಂಬ ವಿಶ್ವಾಸ ತಕ್ಕಮಟ್ಟಿಗೆ ನನಗಿದೆ. ಆದರೆ ನನಗರಿವಿಲ್ಲದಂತೆ ಅವರ ಅಭಿಪ್ರಾಯಗಳನ್ನು ತಪ್ಪಾಗಿ ನಿರೂಪಿಸಿದ್ದರೆ ಅದಕ್ಕೆ ನಾನೇ ಪೂರ್ಣ ಜವಾಬ್ದಾರ. ಹಾಗೇನಾದರೂ ಆಗಿದ್ದರೆ ನಾನು ವಿಷಾದಿಸುತ್ತೇನೆ. ಆ ವಿದ್ವಾಂಸರ ಉಪನ್ಯಾಸ ಹಾಗೇ ಹಾಳಾಗಿ ಹೋಗುವುದಲ್ಲ ಎಂಬ ಕೊರಗು ಈ ಪ್ರಬಂಧವನ್ನು ಸಿದ್ಧಪಡಿಸಲು ಪ್ರೇರೇಪಿಸಿತು.

ಮೆರವಣಿಗೆ

ಲಕ್ಷ್ಮೀನಾರಾಯಣ ಭಟ್ಟ

ಸುರುಳಿ ಸುತ್ತಿದ ಬಾಳ ನೆನಪು ಕೆರಳಿ
ಮರಳಿ ಬಿಚ್ಚಿ ಹೊರಳುತ್ತೇನೆ ಆಗೀಗ.
ಹಳೆ ಅರಳಿಮರ
ಹೊಳೆಮೆಟ್ಟಲು
ಗರುಡಗಂಬ
ಚಿಕ್ಕದೊಡ್ಡದ್ದೆಲ್ಲ ಚಿಮ್ಮಿ ನಿಲ್ಲುತ್ತವೆ ಹುಗಿದ ತಳದಿಂದ.
ಹುಟ್ಟಿಕೊಳ್ಳುತ್ತವೆ ಸತ್ತಗಿಡ
ಅತ್ತಿತ್ತ ದಡ
ನಡುವೆ
ಕತ್ತರಿಸಿ ತೆಗೆದ ಆಕಾಶದಂತೆ ಕಪ್ಪಗೆ
ಬೆತ್ತಲೆ ಮೈಯ ನುಣುಪುಜಲ.

ಬೆತ್ತಲೆ ಮೈಯ ತುಂಗಾನದಿಯ ಪಿಸುದನಿ
ನೆಕ್ಕಿಬಿಡುತ್ತದೆ ತಲೆಯೊಳಗೆ ಮೊಳೆತ ಉರಿಯ,
ಹೊರಡುತ್ತದೆ ಚಿತ್ತ ಹೊದೆದುಕೊಂಡು ಮೇವಿಗೆ
ಹಿಂಡುಕುರಿಯ :
ಕೂರುತ್ತೇನೆ ದಡದಲ್ಲಿ
ಕಾಲಾಡುತ್ತ ನೀರಲ್ಲಿ
ಕರೆಯುತ್ತೇನೆ ಒಬ್ಬೊಬ್ಬರಾಗಿ
ಕಾಡಿದ ಕೌರವರ ಕೂಡಿದ ಪಾಂಡವರ;
ಕರೆಯುತ್ತೇನೆ ಕಂಪು ಕನಸುಗಳನ್ನ
ಎದೆಗೆ ಹಬ್ಬಿದ್ದ ಚೆಲುವೆಯರ;
ಆಸೆಗೆ ಆಕೃತಿ ನೀಡಿದ ಅರುಣೋದಯ ಋಣಗಳ
ಆದರಿಸಿ ಆಲಿಂಗನದಲ್ಲಿ ಅಘಜಲರಾದ ನೆಂಟರ
ನಾಲಿಗೆಯಲ್ಲಿ ಜೆಟ್ ಬಿಡುವ ಕಾಲುನಡಿಗೆ ಕುಂಟರ.

ಚೈತ್ರ ಅರಳುತ್ತದೆ
ಜ್ಯೇಷ್ಠ ಕೆರಳುತ್ತದೆ
ಮುಗಿಯುತ್ತದೆ ಮಾಗಿ ತಾಗಿ ಎಲ್ಲ ಕೋಲಾಹಲ.
ಬಿಸಿಲು ಬೆಳುದಿಂಗಳೆಲ್ಲ ಜೊತೆ ಬೆರಳಂತೆ ನಿಂತು
ಒಂದೇ ಕೈಯಾಗಿದೆ ಅವು ಕಾಲೂರಿದ ನೆಲ.

ಇಲ್ಲ, ಎಲ್ಲ ಅರ್ಥವಾಗುತ್ತಿದೆ ಈಗ ನನಗೆ
ಬಿಚ್ಚಿ ನಿಲ್ಲುತ್ತಿವೆ ಪಾತ್ರಗಳೆಲ್ಲ ಗ್ರೀನ್ ರೂಮಿನಲ್ಲಿ ತೊಡಿಗೆ.
ಒಂದೇ ದಾರ ಬರೆದಿದೆ ಕಸೂತಿಯ
ಬಗೆ ಬಗೆ ಚಿತ್ರ ಹೆಣಿಗೆ;
ಸುಖ ದುಃಖ ಬ್ಯಾಂಡು ಹೊಡೆಯುತ್ತ
ಸಾಗಿದೆ ವಿವೇಕದ ಮೆರವಣಿಗೆ.

ಭಾರತದ ಭೂಸಂಪತ್ತು

ಎಂ. ಸೂರ್ಯನಾರಾಯಣ ಶಾಸ್ತ್ರಿ

'ಬಹುರತ್ನಾ ವಸುಂಧರಾ' ಎಂಬ ಉಕ್ತಿಯನ್ನು ಪುನಃ ಪುನಃ ನಮಗೆ ನೆನಪು ಮಾಡಿ ಕೊಡಲು ಭಾರತ ಭೂಮಿಯು ಬೆಂಗಾಡು ಪ್ರದೇಶವಾದ ಅನಂತಪುರ ಜಿಲ್ಲೆಯ ವಜ್ರಕರೂರಿನಲ್ಲಿ 1971ರಲ್ಲಿ 9.456 ಕ್ಯಾರೆಟ್ ತೂಕವುಳ್ಳ ಅಮೋಘವಾದ ವಜ್ರವೊಂದನ್ನು ನೀಡಿತು. ಅಲ್ಲದೆ ಇನ್ನೂ ಈಚೆಗೆ ಮಧ್ಯಪ್ರದೇಶದ ಪನ್ನಾಗಣಿಯು 24 ಕ್ಯಾರಟ್‌ಗೂ ಮೀರಿದ ಒಂದು ಹಸುರು ವಜ್ರವನ್ನು ನೀಡಿತು. ಹೀಗೆ ಕೇವಲ ವಜ್ರಗಳೇ ಅಲ್ಲದೆ ಇನ್ನೂ ಅನೇಕ ವಿಧಗಳಲ್ಲಿ ಭಾರತದೇಶ ಬಹು ಸಂಪದ್ಭರಿತವಾಗಿದೆ. ಈಚಿನ ಸಮೀಕ್ಷೆಗಳ ಅಂದಾಜಿನ ಪ್ರಕಾರ ಭಾರತದ ಭೂಸಂಪತ್ತು ಅಮೇರಿಕಾ ದೇಶದ ಸಂಪತ್ತಿಗೂ ಮಿಗಿಲಾಗಿದೆಯೆಂದು ತಿಳಿದು ಬಂದಿದೆ. ಇದು ಹೆಮ್ಮೆಯ ವಿಷಯವಾಗಿದೆಯಾದರೂ, ಕೆಲವು ಖನಿಜಗಳ ಬಾಬುಗಳಲ್ಲಿ ಕೊರತೆಯು ಇನ್ನೂ ಇದ್ದೇ ಇದೆ.

ದೇಶದ ಆರ್ಥಿಕ ಮತ್ತು ಕೈಗಾರಿಕಾಭಿವೃದ್ಧಿಗೆ ಬೆನ್ನೆಲುಬಾದ ಕಬ್ಬಿಣ ಮತ್ತು ಕಲ್ಲಿದ್ದಲು ನಮ್ಮಲ್ಲಿ ಹೇರಳವಾಗಿ ದೊರೆಯುತ್ತವೆ. ಬಹುಶಃ ಭಾರತದಲ್ಲಿ ಹೇರಳವಾಗಿರುವಷ್ಟು ಕಬ್ಬಿಣದ ಅದುರು ಬೇರೆ ಯಾವ ದೇಶದಲ್ಲೂ ಇರಲಾರದು. ಪ್ರಪಂಚದಲ್ಲಿನ ನಾಲ್ಕನೇ ಒಂದು ಭಾಗದಷ್ಟು ಉತ್ಕೃಷ್ಟ ಕಬ್ಬಿಣದ ಅದುರು ನಮಲ್ಲಿದೆ. ಇಷ್ಟಾಗಿಯೂ ನಮ್ಮ ದೇಶವು ಕಬ್ಬಿಣದ ಕ್ಷಾಮವನ್ನು ಅನುಭವಿಸುತ್ತಿರುವುದು ಸೋಜಿಗ. ನಮ್ಮ ದೇಶದ ವಾರ್ಷಿಕ ಉಕ್ಕಿನ ಅವಶ್ಯಕತೆ 5.5 ಮಿಲಿಯನ್ ಟನ್‌ಗಳಷ್ಟಿದ್ದು, ಸದ್ಯದಲ್ಲಿ 4.5 ಮಿಲಿಯನ್ ಟನ್‌ಗಳನ್ನು ಮಾತ್ರ ನಾವು ಉತ್ಪಾದಿಸುತ್ತಿದ್ದೇವೆ.

ಉತ್ಕೃಷ್ಟ ಕಬ್ಬಿಣದ ಅದುರಿನ ನಿಕ್ಷೇಪವು ಈಚಿನ ಅಂದಾಜಿನ ಪ್ರಕಾರ 21,600 ಮಿಲಿಯನ್ ಟನ್ನುಗಳನ್ನು ಮೀರಿದೆ. ಈ ಅದುರು ಮುಖ್ಯವಾಗಿ ಬಿಹಾರ್, ಮಧ್ಯ ಪ್ರದೇಶ, ಒರಿಸ್ಸಾ, ಮೈಸೂರು, ಗೋವ ಮತ್ತು ಮಹಾರಾಷ್ಟ್ರಗಳಲ್ಲಿ ದೊರೆಯುತ್ತದೆ. ಮೈಸೂರು ದೇಶದಲ್ಲಿ ಬಹುದೊಡ್ಡ ನಿಕ್ಷೇಪಗಳು ಬಳ್ಳಾರಿ ಜಿಲ್ಲೆಯ ದೋಣಿಮಲೈ ಪ್ರದೇಶದಲ್ಲಿಯೂ ಮತ್ತು ಪಶ್ಚಿಮ ಘಟ್ಟಗಳ ಕುದುರೇಮುಖ ಪ್ರದೇಶದಲ್ಲಿಯೂ ಇವೆ. ಇತ್ತೀಚೆಗೆ ಬಳ್ಳಾರಿ ಜಿಲ್ಲೆಯ ತೋರಣಗಲ್ಲು ಪ್ರದೇಶದಲ್ಲಿ 'ವಿಜಯನಗರ' ಉಕ್ಕಿನ ಕಾರ್ಖಾನೆಯ ಶಂಕುಸ್ಥಾಪನೆ ನಡೆಯಿತು. ಭದ್ರಾವತಿ ಉಕ್ಕಿನ ಕಾರ್ಖಾನೆಯು ಬಾಬಾಬುಡ್ನ ಬೆಟ್ಟಗಳ ಅದುರನ್ನು ಉಪಯೋಗಿಸುತ್ತಿದೆ.

ಭಾರತದಲ್ಲಿ ವಿಪುಲವಾಗಿರುವ ಈ ಅದುರಿನ ಆಧಾರದ ಮೇಲೆ ಬಹು ದೊಡ್ಡ ಕೈಗಾರಿಕೋದ್ಯಮವಾದ ಕಬ್ಬಿಣ ಮತ್ತು ಉಕ್ಕಿನ ಉದ್ಯಮವನ್ನು ತಾತಾರವರ ಜಂಷ-ದ್ಪುರದ ಕಾರ್ಖಾನೆ, ಕೇಂದ್ರ ಸರ್ಕಾರದ ರೂರ್ಕೇಲ, ಭಿಲಾಯಿ, ದುರ್ಗಾಪುರ ಮತ್ತು ಬೊಖಾರೋ ಕಾರ್ಖಾನೆಗಳು ನಿರ್ವಹಿಸುತ್ತಿವೆ. ಅದಲ್ಲದೆ ಸೇಲಂ, ವಿಶಾಖಪಟ್ಟಣ ಮುಂತಾದೆಡೆಗಳಲ್ಲಿ ಕಾರ್ಖಾನೆಗಳನ್ನು ಆರಂಭಿಸುವುದಕ್ಕೆ ಕೇಂದ್ರ ಸರಕಾರ ಅನುಮತಿ ಕೊಟ್ಟಿದೆ. ನಮ್ಮಲ್ಲಿ ಅತ್ಯಧಿಕವಾಗಿರುವ ಈ ಕಬ್ಬಿಣದ ಅದುರನ್ನು ಅತಿ ಹೆಚ್ಚು ವಿದೇಶಿ ವಿನಿಮಯವನ್ನು ಸಂಪಾದಿಸಲು ರಫ್ತುಮಾಡಲಾಗುತ್ತಿದೆ. ಈ ರಫ್ತು ವ್ಯಾಪಾರವನ್ನು ಇನ್ನೂ ಅಭಿವೃದ್ಧಿಗೊಳಿಸಲು ಜಪಾನ್ ದೇಶದೊಂದಿಗೆ ಒಪ್ಪಂದವನ್ನು ಮಾಡಿಕೊಂಡು ಮಧ್ಯಪ್ರದೇಶದ ಬೈಲದಿಲ್ಲಾ, ಕಿರಿಬರುಗಣಿಗಳನ್ನು ಮತ್ತು ಮೈಸೂರಿನ ಕುದುರೇಮುಖ ಗಣಿಗಳನ್ನು ವಿಸ್ತರಿಸಲಾಗುತ್ತಿದೆ.

ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳಲ್ಲಿ ಮುಖ್ಯವಾಗಿ ಬಳಸಲಾಗುವ ಇತರ ಖನಿಜಗಳೆಂದರೆ ಮ್ಯಾಂಗನೀಸ್, ಕ್ರೋಮೈಟ್, ಸುಣ್ಣಕಲ್ಲು, ಬೆಣಚುಕಲ್ಲು ಮತ್ತು ಕಲ್ಲಿದ್ದಲು.

ಮ್ಯಾಂಗನೀಸನ್ನು ಕಬ್ಬಿಣದೊಂದಿಗೆ ಬೆರಸಿ ನಮಗೆ ಬಹು ಪರಿಚಿತವಾದ ಸ್ಟೈನ್-ಲೆಸ್‌ಸ್ಟೀಲನ್ನು ತಯಾರಿಸಲಾಗುವುದು. ಅಲ್ಲದೆ ಮ್ಯಾಂಗನೀಸನ್ನು ವಿವಿಧ ಪ್ರಮಾಣಗಳಲ್ಲಿ ಬೆರಸಿ ವಿವಿಧ ರೀತಿಯ ಉಕ್ಕುಗಳನ್ನು ತಯಾರಿಸುವರು. ಮ್ಯಾಂಗನೀಸ್ ಖನಿಜವು ಭಾರತ ದಲ್ಲಿ ಹೆಚ್ಚಾಗಿ ದೊರೆಯುತ್ತಿದ್ದು ಈ ನಿಕ್ಷೇಪಕ್ಕೆ ಪ್ರಪಂಚದಲ್ಲಿ ಭಾರತವು ತೃತೀಯ ಸ್ಥಾನವನ್ನು ಪಡೆದಿರುವುದು. ಮ್ಯಾಂಗನೀಸ್ ಖನಿಜವು ಮುಖ್ಯವಾಗಿ ಮಧ್ಯಪ್ರದೇಶದ ಬಾಲಘಾಟ್ ಮತ್ತು ಚಿಂದವಾರ, ಮಹಾರಾಷ್ಟ್ರದ ಭಂಡಾರ ಮತ್ತು ನಾಗಪುರ, ಒರಿಸ್ಸದ ಖಿಯೋಂಜಾರ್ ಮತ್ತು ಕೋರಾಪಟ್, ಆಂಧ್ರದ ಶ್ರೀಕಾಕುಲಂ ಮತ್ತು ವಿಶಾಖಪಟ್ಟಣ, ಮೈಸೂರಿನ ಬಳ್ಳಾರಿ, ಶಿವಮೊಗ್ಗ, ತುಮಕೂರು ಮತ್ತು ಕಾರವಾರ ಜಿಲ್ಲೆಗಳಲ್ಲಿ ದೊರ ಕುವುದು. ನಮ್ಮ ದೇಶದ ಒಟ್ಟು ಮ್ಯಾಂಗನೀಸ್ ನಿಕ್ಷೇಪವು ಸುಮಾರು 200 ಮಿಲಿಯನ್ ಟನ್‌ಗಳಷ್ಟೆಂದು ತಿಳಿದಿದೆ. ವರ್ಷ ಒಂದರಲ್ಲಿ ಸುಮಾರು 2 ಮಿಲಿಯನ್ ಟನ್‌ಗಳಷ್ಟು ಅದುರನ್ನು ತೆಗೆಯಲಾಗುತ್ತಿದ್ದು ಇದರಲ್ಲಿ ಬಹುಭಾಗವನ್ನು ರಫ್ತು ಮಾಡಲಾಗುತ್ತಿದೆ. ಮೈಸೂರು ಪ್ರದೇಶದ ದಾಂಡೇಲಿ, ಒರಿಸ್ಸಾ ಮತ್ತು ಆಂಧ್ರಪ್ರದೇಶದ ಕೆಲವೆಡೆಗಳಲ್ಲಿ ಸಣ್ಣ ಪ್ರಮಾಣದಲ್ಲಿ ಫೆರೋ ಮ್ಯಾಂಗನೀಸ್ ಉಕ್ಕನ್ನು ತಯಾರಿಸ ಲಾಗುತ್ತಿದೆ.

ಮ್ಯಾಂಗನೀಸಿನಷ್ಟೇ ಉಕ್ಕಿನ ಕೈಗಾರಿಕೆಯಲ್ಲಿ ಮುಖ್ಯವಾದ ಖನಿಜವೆಂದರೆ ಕ್ರೋಮೈಟ್. ಭಾರತದಲ್ಲಿ ಈ ಖನಿಜವು ಸಾಕಷ್ಟು ಪ್ರಮಾಣದಲ್ಲಿರುವುದು. ಎಲ್ಲ ದರ್ಜೆಯ ಅದರೂ ಸೇರಿ 15 ಮಿಲಿಯನ್ ಟನ್ನುಗಳೆಂದು ಅಂದಾಜು ಮಾಡಲಾಗಿದೆ. ಇತ್ತೀಚಿನ

ವರೆಗೆ ಬಹುಪಾಲು ಈ ಅದುರನ್ನು ರಫ್ತುಮಾಡಲಾಗುತ್ತಿದ್ದು ಈಗ ಅದರ ಮೇಲೆ ನಿರ್ಬಂಧ ಹಾಕಲಾಗಿದೆ. ಕ್ರೋಮೈಟನ್ನು ಉಕ್ಕಿನ ತಯಾರಿಕೆಯಲ್ಲಿ ಬಳಸುವುದಲ್ಲದೆ ಬಹು ಮುಖ್ಯವಾದ ರಸಾಯನಿಕ ವಸ್ತುವಾದ ಡೈಕ್ರೋಮೇಟನ್ನು ತಯಾರಿಸಲೂ ಬಳಸುವರು. ಈ ವಸ್ತುವು ಚರ್ಮ ಹದಮಾಡಲೂ, ಸಿಪಾಯಿಗಳ ಸಮವಸ್ತ್ರಗಳ ಬಣ್ಣಕ್ಕೂ ಉಪ ಯುಕ್ತವಾಗಿದೆ. ಕೀಳು ದರ್ಜೆಯ ಕ್ರೋಮೈಟ್ ಅದುರನ್ನು ಲೋಹಗಳನ್ನು ಉತ್ಪಾದಿ ಸುವ ಮೂಸೆಗಳಲ್ಲಿ ಬಳಸುವ ಕಾವಿಟ್ಟಿಗೆಗಳಿಗೆ ಉಪಯೋಗಿಸುವರು. ಕ್ರೋಮೈಟ್ ಅದುರು ಬಿಹಾರಿನ ಸಿಂಗ್‌ಭೂಮ್, ಒರಿಸ್ಸಾದ ಖಿಯೋಂಜಾರ್ ಮತ್ತು ಸುಕಿಂದ, ಮೈಸೂರಿನ ಹಾಸನ ಮತ್ತು ಮೈಸೂರು ಜಿಲ್ಲೆಗಳಲ್ಲಿ ಸಿಗುತ್ತದೆ.

ಕೆಲವು ವಿಶೇಷ ರೀತಿಯ ಉಕ್ಕುಗಳ ಉತ್ಪಾದನೆಯ ಮೊದಲ ಹಂತದಲ್ಲಿ ಫೆರೋ ಸಿಲಿಕಾನ್ ಎಂಬ ಒಂದು ಜಾತಿಯ ಉಕ್ಕನ್ನು ಬಳಸುವರು. ಇದನ್ನು ಕಬ್ಬಿಣದ ಅದುರಿ ನೊಂದಿಗೆ ಬೆಣಚುಕಲ್ಲನ್ನು ಮಿಶ್ರಮಾಡಿ ಕರಗಿಸಿ ತಯಾರಿಸುತ್ತಾರೆ. ಭದ್ರಾವತಿ ಕಾರ್ಖಾ ನೆಯಲ್ಲಿ ಈ ಫೆರೋಸಿಲಿಕಾನ್‌ನ್ನು ತಯಾರಿಸುವರು. ಇದಕ್ಕೆ ದೇಶದ ಇತರ ಉಕ್ಕಿನ ಕಾರ್ಖಾನೆಗಳಿಂದ ಮತ್ತು ವಿದೇಶಗಳಿಂದಲೂ ಬಹಳ ಬೇಡಿಕೆ ಇದೆ.

ಉಕ್ಕು ಮತ್ತು ಕಬ್ಬಿಣದ ಉದ್ಯಮಕ್ಕೆ ಹೊಂದಿಕೊಂಡಿದ್ದು ಅದಕ್ಕಿಂತಲೂ ಹೆಚ್ಚು ಉಪಯುಕ್ತವಾದ ಖನಿಜವೇ ಕಲ್ಲಿದ್ದಲು. ಕಬ್ಬಿಣ ಮತ್ತು ಕಲ್ಲಿದ್ದಲು ಒಂದನ್ನೊಂದು ಅವಲಂಬಿಸಿದ್ದು ದೇಶದ ಪ್ರಗತಿಗೆ ಆಧಾರ ಸ್ತಂಭಗಳಾಗಿವೆ. ಪ್ರಪಂಚದ ಪ್ರಗತಿಶೀಲ ರಾಷ್ಟ್ರಗಳ ಮುನ್ನಡೆಗೆ ಇವೆರಡೇ ಮುಖ್ಯಕಾರಣಗಳಾಗಿವೆ. ಅಲ್ಲದೆ ಇವೆರಡೂ ಒಂದ ಕ್ಕೊಂದು ಸಮೀಪದಲ್ಲಿ ದೊರತದ್ದೇ ಆದರೆ ಅದು ಆ ದೇಶದ ಸೌಭಾಗ್ಯವೇ ಸರಿ; ಮೈಸೂರು ದೇಶದಲ್ಲಿ ಕಲ್ಲಿದ್ದಲು ದೊರೆತಿದ್ದಲ್ಲಿ ಭದ್ರಾವತಿಯು ಬರ್ಮಿಂಗ್‌ಹ್ಯಾಮ್ ಇಲ್ಲವೆ ಪಿಟ್ಸ್‌ಬರ್ಗ ಆಗುತ್ತಿತ್ತು. ಕಲ್ಲಿದ್ದಲಿನ ಬಹು ಮುಖ್ಯವಾದ ಉಪಯೋಗವೆಂದರೆ ಅದನ್ನು ಇಂಧನವಾಗಿ ಬಳಸುವಿಕೆ. ಪ್ರಪಂಚದಲ್ಲಿ ಶೇ. 75 ರಷ್ಟು ಕಲ್ಲಿದ್ದಲನ್ನು ಈ ರೀತಿ ಬಳಸಲಾಗುವುದು. ಶೇ. 20 ನ್ನು ಉಕ್ಕು ಮತ್ತು ಕಬ್ಬಿಣ ತಯಾರಿಕೆಗೂ, ಉಳಿದ ಶೇ. 5 ರಷ್ಟನ್ನು ಇತರೆ ಬಾಬುಗಳಿಗೂ ಬಳಸಲಾಗುತ್ತಿದೆ. ಉಗಿಬಂಡಿಗಳ ಮತ್ತು ಹಡಗುಗಳ ಚಲನೆ ಇಂದಿಗೂ ಬಹುವಾಗಿ ಕಲ್ಲಿದ್ದಲಿನಿಂದಲೇ ಆಗಿದೆ. ವಿದ್ಯುಚ್ಛಕ್ತಿ ಉತ್ಪಾದನೆಗೂ, ಅಡಿಗೆ ಕೆಲಸಗಳಿಗೂ ಕಲ್ಲಿದ್ದಲನ್ನು ಬಳಸುವರು. ಸೋಜಿಗವೆಂದರೆ ಅನೇಕಾನೇಕ ರಸಾ ಯನಿಕ ವಸ್ತುಗಳು, ಸುಗಂಧ ದ್ರವ್ಯಗಳು, ಕ್ರಿಮಿನಾಶಕಗಳು ಮತ್ತು ಅತಿ ಸಿಹಿಯಾದ ಸ್ಯಾಕ್ರೀನ್ ವಸ್ತುವೂ ಸಹ ತಯಾರಿಸಲ್ಪಡುವುದು. ಅಂದರೆ ಕಲ್ಲಿದ್ದಲು ಬಹು ಮುಖ್ಯ ಉಪಯೋಗದ ಏಕೈಕವಸ್ತುವಾಗಿದೆ. ಭಾರತದಲ್ಲಿ ಈಗಿನ ಸಮೀಕ್ಷೆಯ ಪ್ರಕಾರ ಕಲ್ಲಿದ್ದ- ಲಿನ ನಿಕ್ಷೇಪವು ಸಮೃದ್ಧವಾಗಿದೆಯೆಂದು ತಿಳಿದುಬಂದಿದೆ. ಈಗ್ಯೆ ಕೆಲವು ವರ್ಷಗಳ ಹಿಂದೆ ನಮ್ಮಲ್ಲಿ ಕಲ್ಲಿದ್ದಲಿನ ಕ್ಷಾಮವು ತಲೆದೋರಬಹುದೆಂಬ ಭೀತಿಯು ಇದ್ದಿತು. ಎಲ್ಲ ದರ್ಜೆಯ ಕಲ್ಲಿದ್ದಲು ಸೇರಿ ನಮ್ಮಲ್ಲಿ ಸುಮಾರು 200,000 ಮಿಲಿಯನ್ ಟನ್ನು

ಗಳಷ್ಟಿದೆಯೆಂದು ತಿಳಿದುಬಂದಿದೆ. ಕಲ್ಲಿದ್ದಲು ಇಷ್ಟು ಸಮೃದ್ಧವಾಗಿದ್ದರೂ ಲೋಹಗಳ ತಯಾರಿಕೆಯಲ್ಲಿ ಬಳಸಬಹುದಾದ ಕಿಟ್ಟವನ್ನು ನೀಡಬಲ್ಲ ಮೃದುವಾದ (Coking coal) ಕಲ್ಲಿದ್ದಲಿನ ಅಭಾವ ನಮ್ಮಲ್ಲಿದೆ. ಆದ್ದರಿಂದ ಕಿಟ್ಟವನ್ನು ನೀಡಬಲ್ಲ ಕಲ್ಲಿದ್ದಲಿನ ಸುಮಾರು 200ಕ್ಕೂ ಹೆಚ್ಚು ಗಣಿಗಳನ್ನು ಈಚೆಗೆ ರಾಷ್ಟ್ರೀಕರಣಮಾಡಲಾಗಿದೆ. ನಮ್ಮ ದೇಶದಲ್ಲಿ ಕಲ್ಲಿದ್ದಲಿನ ವಾರ್ಷಿಕ ಉತ್ಪಾದನೆಯು ಸುಮಾರು 95 ಮಿಲಿಯನ್ ಟನ್‌ಗಳಷ್ಟು ಎಂದು ತಿಳಿಯಬಹುದು. ಇದರಲ್ಲಿ ಸುಮಾರು 2 ಮಿಲಿಯನ್ ಟನ್‌ಗಳನ್ನು ರಫ್ತು ಮಾಡಲಾಗುತ್ತಿದೆ.

ಭಾರತವು ಅತಿ ವಿಶಾಲವಾದ ದೇಶವಾಗಿದ್ದು ಕಲ್ಲಿದ್ದಲಿನ ನಿಕ್ಷೇಪಗಳು ಎಲ್ಲೆಡೆಯೂ ಹರಡಿರದೆ ಕೇವಲ ಬಂಗಾಳ, ಬಿಹಾರ್, ಮಧ್ಯಪ್ರದೇಶ, ಆಂಧ್ರ ಮತ್ತು ಸ್ವಲ್ಪಮಟ್ಟಿಗೆ ಮಹಾರಾಷ್ಟ್ರಗಳಲ್ಲಿ ಮಾತ್ರ ದೊರೆಯುವುವು. ಇವುಗಳಲ್ಲಿ ರಾಣಿಗಂಜ್, ಕರ್ಣಪುರ, ಕರ್ಗಲಿ ಮತ್ತು ಬಾರಕರ್ ನಿಕ್ಷೇಪಗಳು ಬಹು ಪ್ರಸಿದ್ಧವಾದುವು. ದಕ್ಷಿಣ ಭಾರತದಲ್ಲಿ ಕಲ್ಲಿದ್ದಲಿನ ಕೊರತೆಯಿರುವುದು. ಈಚಿನ ವರ್ಷಗಳಲ್ಲಿ ತಮಿಳುನಾಡಿನ ನೈವೇಲಿಯಲ್ಲಿ ಲಿಗ್ನೈಟ್ ಎಂಬ ಕೀಳುದರ್ಜೆಯ ಕಲ್ಲಿದ್ದಲನ್ನು ತೆಗೆದು ಅದರಿಂದ ವಿದ್ಯುಚ್ಛಕ್ತಿ, ರಸಾಯನಿಕ ಗೊಬ್ಬರ, ಮತ್ತು ಲಿಕೋ ಎಂಬ ಇಂಧನವನ್ನು ತಯಾರಿಸಲಾಗುತ್ತಿದೆ. ಮೈಸೂರು ದೇಶವಲ್ಲಿ ಕಲ್ಲಿದ್ದಲಿನ ಗಣಿಗಳಿಲ್ಲದಿರುವುದು ಬಹು ದೊಡ್ಡ ಕೊರತೆಯಾಗಿದೆ.

ಕಲ್ಲಿದ್ದಲಿನ ಹಾಗೆಯೇ ಅತಿ ಉಪಯುಕ್ತವಾದ ಇನ್ನೊಂದು ಇಂಧನವೆಂದರೆ ಕಲ್ಲೆಣ್ಣೆ ಅಥವಾ ಪೆಟ್ರೋಲಿಯಂ, ಇದು ಸ್ವಯಂಚಾಲಿತ ಯಂತ್ರಗಳ ಯುಗವಾದ ಈ ದಿನಗಳಲ್ಲಿ ಬಹು ಅಮೂಲ್ಯವಾಗಿದೆ. ಅಲ್ಲದೆ ಇದು ಅನೇಕ ರಸಾಯನಿಕ ವಸ್ತುಗಳ ತಯಾರಿಕೆಗೆ ಬಹು ಮುಖ್ಯವಾಗಿದೆ. ಆದರೆ ಭಾರತದಲ್ಲಿ ಕಲ್ಲೆಣ್ಣೆಯ ಕೊರತೆ ಬಹಳವಾಗಿದೆ. ನಮ್ಮ ಆವಶ್ಯಕತೆಯ ಬಹು ಪಾಲು ಪೆಟ್ರೋಲಿಯಂ. ಅಂದರೆ ಸುಮಾರು ಶೇಕಡ 20ರಷ್ಟನ್ನು ನಾವು ಆಮದು ಮಾಡಿಕೊಳ್ಳಬೇಕಾಗಿದೆ. ಇದರಿಂದಾಗಿ ವರ್ಷಂಪ್ರತಿ 200ಕ್ಕೂ ಹೆಚ್ಚು ಕೋಟಿ ರೂಪಾಯಿಗಳ ವಿದೇಶಿ ವಿನಿಮಯವನ್ನು ತೆರಬೇಕಾಗಿದೆ. ನಮ್ಮ ದೇಶದಲ್ಲಿ ಕಲ್ಲೆಣ್ಣೆಯನ್ನು ಅಸ್ಸಾಂನ ಡಿಗ್‌ಬಾಯ್, ನಹರ್‌ಕಾಟಿಯಾ, ಮೊರಾನ್ ಮತ್ತು ಪಶ್ಚಿಮತೀರದಲ್ಲಿ ಗುಜರಾತಿನ ಅಂಕಲೇಶ್ವರ, ಮೆಹ್ಸಾನ್ ಕೊಸಂಬಾ. ಕ್ಯಾಂಬೆ ಪ್ರದೇಶಗಳಿಂದ ತೆಗೆಯಲ್ಪಡುತ್ತೆ. ನಮ್ಮ ದೇಶದ ಪೆಟ್ರೋಲಿಯಂ ಕೊರತೆಯನ್ನು ನೀಗಲು ಕೇಂದ್ರ ಸರ್ಕಾರದಿಂದ ನಿಯೋಜಿತವಾದ 'ಆಯಿಲ್ ಅಂಡ್ ನ್ಯಾಚುರಲ್ ಗ್ಯಾಸ್ ಕಮಿಷನ್' ಸತತವಾಗಿ ಶ್ರಮಿಸುತ್ತಿದೆ. ಈ ಆಯೋಗವು ಭಾರತದ ವಿವಿಧ ಪ್ರದೇಶಗಳಲ್ಲಿ ಕಾರ್ಯಾಚರಣೆಯನ್ನು ಮಾಡುತ್ತಿರುವುದಲ್ಲದೆ ಕ್ಯಾಂಬೆ ತೀರದ ಸಮೀಪದಲ್ಲಿನ ಅಲಿಯಾಬೇಟ್ ಎಂಬಲ್ಲಿನ ಸಮುದ್ರ ತಳದಲ್ಲಿಯೂ ಎಣ್ಣೆಭಾವಿಗಳನ್ನು ತೋಡಲು ಪ್ರಯತ್ನಿಸಿದೆ. ನಮ್ಮ ದೇಶವು ಪೆಟ್ರೋಲಿಯಂನ ಕೊರತೆಯನ್ನು ಅನುಭವಿಸುತ್ತಿದ್ದರೂ ವಿಶೇಷ ಪ್ರಮಾಣದಲ್ಲಿ ಮಧ್ಯಪ್ರಾಚ್ಯ ಮತ್ತು ಅಮೇರಿಕ ದೇಶಗಳಿಂದ ಕಚ್ಚಾ ಎಣ್ಣೆಯನ್ನು

ಆಮದು ಮಾಡಿಕೊಂಡು ಅದನ್ನು ಶುದ್ಧಗೊಳಿಸವುದಲ್ಲದೆ ಅನೇಕ ಪೆಟ್ರೊ ಕೆಮಿಕಲ್ ವಸ್ತುಗಳನ್ನು ಉತ್ಪಾದಿಸಿ ರಫ್ತುಮಾಡುವ ಸಾಹಸವನ್ನು ಯಶಸ್ವಿಯಾಗಿ ಕೈಗೊಂಡಿದೆ. ಇಂತಹ ಪೆಟ್ರೊಲಿಯಂ ಕಾರ್ಯಾಗಾರಗಳು, ಬೊಂಬಾಯಿ, ಎರ್ನಾಕುಲಂ, ಮದ್ರಾಸ್ ಬಳಿಯ ಮನಾಲಿ, ವಿಶಾಖ ಪಟ್ಟಣ, ಕಲ್ಕತ್ತ ಮುಂತಾದ ಅನೇಕ ಸ್ಥಳಗಳಲ್ಲಿ ಕೆಲಸ ಮಾಡುತ್ತಿವೆ.

ಈಚಿನ ದಿನಗಳಲ್ಲಿ ಈ ಇಂಧನಗಳ ಜೊತೆಗೆ ಅಣುಶಕ್ತಿಯನ್ನು ಸೇರಿಸಬಹುದಾಗಿದೆ. ನಮ್ಮ ದೇಶದ ನೈಋತ್ಯ ಕರಾವಳಿ ಪ್ರದೇಶವಾದ ತಿರುವಾಂಕೂರಿನಲ್ಲಿ ಮತ್ತು ಬಿಹಾರಿನ ಸಿಂಘಭುಂನಲ್ಲಿಯೂ ಯಥೇಚ್ಛವಾಗಿ ಅಣುಶಕ್ತಿಯ ಖನಿಜಗಳು ದೊರೆಯುವುವು. ಇವು ತಿರುವಾಂಕೂರುನಲ್ಲಿನ ತೀರದ ಮರಳಲ್ಲಿ ಶೇಖರಗೊಂಡಿದ್ದು ಬೃಹತ್ ಪ್ರಮಾಣದ ಶಕ್ತಿಯ ಆಗರವೇ ಆಗಿದೆ. ಈಗಾಗಲೇ ಅಣುಶಕ್ತಿಯಿಂದ ತಾರಾಪುರದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲಾಗುತ್ತಿದ್ದು ತಮಿಳುನಾಡು ಮತ್ತು ರಾಜಸ್ಥಾನಗಳಲ್ಲಿಯೂ ವಿದ್ಯುಚ್ಛಕ್ತಿಯ ಕೊರತೆಯನ್ನು ನೀಗಲು ಅಣುಶಕ್ತಿಯನ್ನು ಬಳಸಲು ಯೋಚಿಸಲಾಗುತ್ತಿದೆ. ಇತ್ತೀಚಿನ ವರದಿಗಳ ಪ್ರಕಾರ ಹಿಮಾಲಯ ಪ್ರದೇಶಗಳಲ್ಲಿ ಮತ್ತು ಕಾಶ್ಮೀರದಲ್ಲಿ ಅಣುಶಕ್ತಿ ಖನಿಜಗಳು ಇರುವುದು ಕಂಡುಬಂದಿದೆ.

ಇದೇ ಸಂದರ್ಭದಲ್ಲಿ ನಮಗೆ ಅನೇಕ ಪ್ರದೇಶಗಳಲ್ಲಿ ನೈಸರ್ಗಿಕ ಸನ್ನಿವೇಶದಿಂದ ಲಭಿಸಿರತಕ್ಕ ಜಲವಿದ್ಯುದಾಗಾರಗಳನ್ನು ಜ್ಞಾಪಿಸಿಕೊಳ್ಳಬಹುದು. ಪಂಚವಾರ್ಷಿಕ ಯೋಜನೆಗಳಿಂದಾಗಿ ಅನೇಕ ದೊಡ್ಡ ದೊಡ್ಡ ಜಲ ವಿದ್ಯುತ್ ಕ್ರೇಂದ್ರಗಳು ಸ್ಥಾಪಿಸಲ್ಪಟ್ಟು ದೇಶದ ಅಭಿವೃದ್ಧಿಗೆ ಕಾರಣವಾಗಿದೆ. ಇವುಗಳೆಲ್ಲಕ್ಕೂ ನೈಸರ್ಗಿಕ ಸನ್ನಿವೇಶ ಮತ್ತು ವಿಪುಲವಾಗಿ ಹರಿಯತಕ್ಕ ಜಲವೇ ಕಾರಣವಾಗಿದ್ದು ಬಹು ಮುಖ್ಯವಾದ ಭೂಸಂಪತ್ತಾಗಿದೆ. ಮೈಸೂರು ದೇಶದಲ್ಲಿನ ಶರಾವತಿ ಮತ್ತು ಈಗ ನಿರ್ಮಿಸಲಾಗುತ್ತಿರುವ ಕಾಳೀನದಿ ಯೊಜನೆಗಳನ್ನು ಬಹುದೊಡ್ಡದಾದ ವಿದ್ಯುಚ್ಛಕ್ತಿಯ ಉತ್ಪಾದನಾಕೇಂದ್ರಗಳೆಂದು ಪರಿಗಣಿಸಲಾಗಿದೆ,

ಕಬ್ಬಿಣದ ಅದುರು ಇಂಧನಗಳು ಇತ್ಯಾದಿ ಸಂಪತ್ತು ನಮ್ಮ ಭಾರತದಲ್ಲಿ ಹೆಚ್ಚಾಗಿದ್ದರೂ ಪ್ರಶಸ್ತವಾದ ಲೋಹಗಳ ಕೊರತೆ ಬಹು ಹೆಚ್ಚಾಗಿದ್ದು ಇದು ಬಿಡಿಸಲಾಗದ ಸಮಸ್ಯೆಯಾಗಿದೆ. ಪ್ರಶಸ್ತಿ ಲೋಹಗಳೆಂದರೆ ಚಿನ್ನ, ಬೆಳ್ಳಿ ಮತ್ತು ಪ್ಲಾಟಿನಂ. ಭಾರತದಲ್ಲಿ ಚಿನ್ನವನ್ನು ಉತ್ಪಾದಿಸುವ ಏಕೈಕ ಪ್ರದೇಶವೆಂದರೆ ಕನ್ನಡನಾಡಾದ ಮೈಸೂರು. ಇಲ್ಲಿ ಕೋಲಾರ ಮತ್ತು ಹಟ್ಟಿಗಳಲ್ಲಿನ ಗಣಿಗಳಿಂದ ಚಿನ್ನವನ್ನು ತೆಗೆಯಲಾಗುತ್ತಿದೆ. ಇವರ ಪ್ರಮಾಣವು ಅತ್ಯಲ್ಪವಾಗಿದ್ದು ಪ್ರಪಂಚದ ಉತ್ಪಾದನೆಯ ಶೇ. 0.3ರಷ್ಟು ಮಾತ್ರವಾಗಿದೆ. ಕೋಲಾರದ ಚಿನ್ನದಗಣಿಗಳು ಪ್ರಪಂಚದಲ್ಲೆ ಆಳವಾದ ಮತ್ತು ಸುವ್ಯವಸ್ಥಿತ ಗಣಿಗಳೆಂದು ಖ್ಯಾತಿಗೊಂಡಿವೆ. ಭಾರತದಲ್ಲಿ ಬೆಳ್ಳಿ ಮತ್ತು ಪ್ಲಾಟಿನಂ ಎಲ್ಲೂ ಸಿಕ್ಕುವುದಿಲ್ಲ.

ಚಿನ್ನ ಮತ್ತು ಸೀಸದೊಂದಿಗೆ ಬೆರತು ಬರುವ ಬೆಳ್ಳಿಯನ್ನು ಅಲ್ಪವಾಗಿ ಪಡೆಯಲಾಗುತ್ತಿದೆ. ಹೀಗಾಗಿ ಜಗತ್ತಿನ ಮುಖ್ಯ ಐಶ್ವರ್ಯವಾದ ಮತ್ತು ವಿದೇಶೀ ವಿನಿಮಯಕ್ಕೆ ಆಧಾರವಾದ ಚಿನ್ನದ ಅಭಾವವು ತೀವ್ರವಾಗಿದ್ದು ನಮ್ಮ ಆರ್ಥಿಕ ದುರ್ಬಲತೆಗೆ ಮುಖ್ಯ ಕಾರಣವಾಗಿದೆ. ಇಷ್ಟಾದರೂ ಭಾರತದಲ್ಲಿ ಪ್ರಪಂಚದಲ್ಲೇ ಅತಿ ಹೆಚ್ಚಿನ ಪ್ರಮಾಣದಲ್ಲಿ ಚಿನ್ನ ಮತ್ತು ಬೆಳ್ಳಿಯನ್ನು ಆಭರಣಗಳಿಗಾಗಿ ಉಪಯೋಗಿಸಲ್ಪಡುತ್ತಿದ್ದು ದೇಶದ ಆರ್ಥಿಕ ವ್ಯವಸ್ಥೆಯನ್ನು ಮತ್ತಷ್ಟು ದುರ್ಬಲಗೊಳಿಸಿದೆ.

ಕಬ್ಬಿಣೇತರ ಲೋಹಗಳ ಗುಂಪಿಗೆ ಸೇರಿದ ತಾಮ್ರ, ತವರ, ಸೀಸ, ಸತುವಿನ ನಿಕ್ಷೇಪಗಳೂ ಸಹ ನಮ್ಮಲ್ಲಿ ಅಧಿಕವಾಗಿಲ್ಲ. ತಾಮ್ರದ ಅದುರು ಬಿಹಾರ್‌ನ ರಾಖಾ, ರಾಜಸ್ಥಾನದ ಖೇತ್ರಿ, ಆಂಧ್ರದ ಅಗ್ನಿಗುಂಡಲ ಮತ್ತು ಗಣಿಪ್ರದೇಶ, ಮೈಸೂರಿನಲ್ಲಿ ಚಿತ್ರದುರ್ಗದ ಬಳಿ ಇಂಗಳದ ಹಾಳು ಮತ್ತು ಅರಸೀಕೆರೆಯ ಬಳಿ ಕಲ್ಯಾಡಿಯಲ್ಲಿ ದೊರೆಯುತ್ತದೆ. ಮುಖ್ಯವಾಗಿ ಬಿಹಾರಿನಲ್ಲಿ ರಾಖಾ ದುತ್ತು ಮೊಸಬಾನಿಗಳಲ್ಲಿ ಕೆಲವು ಸಹಸ್ರ ಟನ್‌ಗಳಷ್ಟು ತಾಮ್ರವನ್ನು ಉತ್ಪಾದಿಸಲಾಗುತ್ತಿದ್ದು ಖೇತ್ರಿಯ ಕಾರ್ಖಾನೆಯು ಉತ್ಪಾದನೆಯನ್ನು ಪ್ರಾರಂಭಿಸವುದರಲ್ಲಿದೆ. ಇಂಗಳದ ಹಾಳು ಮತ್ತು ಕಲ್ಯಾಡಿಗಣಿಗಳ ಸಮೀಕ್ಷೆಯು ಮುಗಿದಿದ್ದು ಇಷ್ಟರಲ್ಲೇ ಉತ್ಪಾದನೆಯನ್ನು ಕೈಗೊಳ್ಳುವ ದೃಷ್ಟಿಯಿಂದ ಮೈಸೂರು ಸರ್ಕಾರವು 'ಚಿತ್ರದುರ್ಗ ಕಾಪರ್ ಕಂಪನಿ' ಎಂಬ ಸಂಸ್ಥೆಯನ್ನು ನಿರ್ಮಿಸಿದೆ.

ತಾಮ್ರವು ವಿದ್ಯುಚ್ಛಕ್ತಿಯ ವಿತರಣೆಯಲ್ಲಿ ಬಹು ಅವಶ್ಯವಾದ ವಸ್ತುವಾಗಿದ್ದು ಪಂಚವಾರ್ಷಿಕ ಯೋಜನೆಗಳ ಪೂರೈಕೆಯಲ್ಲಿ ಬಹು ಮುಖ್ಯವಾದ ಪಾತ್ರವನ್ನು ಹೊಂದಿದೆಯಾದರೂ ನಮ್ಮ ದೇಶದ ಉತ್ಪಾದನೆಯು ಸಾಲದಾಗಿದೆ. ಪರದೇಶಗಳಿಂದ ಅಧಿಕ ಪ್ರಮಾಣದಲ್ಲಿ ತಾಮ್ರವನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ. ಇತ್ತೀಚೆಗೆ ಆಫ್ರಿಕಾ ಖಂಡದ ಜಾಂಬಿಯ ದೇಶದಿಂದ 45 ಕೋಟಿ ರೂಪಾಯಿಗಳ ಬೆಲೆಯ 54,000 ಟನ್ ತಾಮ್ರವನ್ನು ಕೊಳ್ಳಲು ಒಪ್ಪಂದ ಮಾಡಿಕೊಳ್ಳಲಾಗಿದೆ. ನಮ್ಮ ದೇಶದಲ್ಲಿ ತಾಮ್ರದ ಕೊರತೆ ಇಷ್ಟಾದರೂ ಮನೆಗಳಲ್ಲಿ ಪಾತ್ರೆ ಪರಟೆಗಳಿಗಾಗಿ ತಾಮ್ರವನ್ನು ಬಳಸುವುದು ನಿಂತಿಲ್ಲ.

ನಮ್ಮಲ್ಲಿ ಸ್ವಲ್ಪಮಟ್ಟಿಗೆ ಸೀಸ ಮತ್ತು ಸತುವಿನ ಅಭಾವವಿರುತ್ತದೆ. ಈಚಿನ ವರ್ಷಗಳಲ್ಲಿ ರಾಜಸ್ಥಾನದ ಜಾವರ್‌ನಲ್ಲಿದ್ದ ಪುರಾತನ ಗಣಿಗಳನ್ನು ಅಭಿವೃದ್ಧಿಗೊಳಿಸಿ ಈ ಲೋಹಗಳ ಉತ್ಪಾದನೆಯನ್ನು ಕೈಗೊಳ್ಳಲಾಗಿದೆ. ಬಿಹಾರ್ ಮತ್ತು ಬಂಗಾಳದ ಕೆಲವೆಡೆಗಳಲ್ಲಿ ಆಂಧ್ರದ ಕಡಪ ಜಿಲ್ಲೆಯಲ್ಲಿ ಮತ್ತು ಮೈಸೂರಿನ ಚಿತ್ರದುರ್ಗ ಜಿಲ್ಲೆಯಲ್ಲಿ ಈ ಲೋಹಗಳ ನಿಕ್ಷೇಪಗಳು ಇರುವುದಾಗಿ ವ್ಯಕ್ತವಾಗಿದೆ ಹಾಗೂ ಇವುಗಳ ಸಮೀಕ್ಷೆ ಮುಂದುವರೆಯುತ್ತಿದೆ.

ಅತಿ ಹಗುರ ಲೋಹವಾದ ಮತ್ತು ಈಚಿನ ದಿನಗಳಲ್ಲಿ ಸಾಮಾನ್ಯ ಬಳಕೆಗೆ ಬಂದಿ

ರುವ ಅಲ್ಯೂಮಿನಿಯಂ ಲೋಹದ ಅದುರಾದ ಬಾಕ್ಸೈಟ್ ಖನಿಜವು ಭಾರತದಲ್ಲಿ ಯಥೇಚ್ಛ ವಾಗಿ ದೊರೆಯುತ್ತದೆ. ಇದರ ನಿಕ್ಷೇಪಗಳು ಮಧ್ಯಪ್ರದೇಶ, ಪಶ್ಚಿಮ ಬಿಹಾರ್, ಒರಿಸ್ಸಾ, ಮಹಾರಾಷ್ಟ್ರ, ಮೈಸೂರು ಮತ್ತು ತಮಿಳುನಾಡುಗಳಲ್ಲಿ ದೊರೆಯುವುದು. ಅಲ್ಯೂ ಮಿನಿಯಂ ಲೋಹವು ವಿದ್ಯುತ್ತನ್ನು ಸುಲಭವಾಗಿ ವಾಹಿಸಬಲ್ಲದಾದುರಿಂದ ಅನೇಕ ಕಡೆ ತಾಮ್ರದ ತಂತಿಗಳಿಗೆ ಬದಲು ಈ ಲೋಹವನ್ನು ಬಳಸಲಾಗುತ್ತಿದೆ. ಇದರಿಂದಾಗಿ ಇದು ತಾಮ್ರದ ಕೊರತೆಯನ್ನು ಪರಿಹರಿಸಲು ಸಹಾಯಕವಾಗಿದೆ. ಭಾರತದ ಅನೇಕ ಕಡೆಗಳಲ್ಲಿ ಅಲ್ಯೂಮಿನಿಯಂ ಲೋಹದ ಕಾರ್ಖಾನೆಗಳು ಸ್ಥಾಪಿಸಲ್ಪಟ್ಟಿವೆ. ಅವುಗಳಲ್ಲಿ ಮೈಸೂರು ದೇಶದ ಬೆಳಗಾವಿ ಮತ್ತು ತಮಿಳುನಾಡಿನ ಕಾರ್ಖಾನೆಗಳು ದಕ್ಷಿಣದಲ್ಲಿ ಮುಖ್ಯವಾಗಿವೆ. ಭಾರತವು ಹೆಚ್ಚು ಅಲ್ಯೂಮಿನಿಯಂ ಲೋಹವನ್ನು ಉತ್ಪಾದಿಸಿ ವಿಶ್ವದ ಇತರ ದೇಶ ಗಳಿಗೆ ರಫ್ತುಮಾಡುವ ಅಭಿಲಾಷೆಯನ್ನು ಹೊಂದಿದೆ.

ಮಂಥನ

1. 'ಶುಕ ಸಪ್ತತಿ'ಯ ಬಗೆಗೆ ಒಂದು ಟಿಪ್ಪಣಿ

"ಶುಕ ಸಪ್ತತಿ"ಯ ಎರಡು ಪಾಠಗಳು (ಶುಕ ಸಪ್ತತಿ; ಶುಕಸಪ್ತತಿಯ ಬೃಹತ್ಪಾಠ) ಶ್ಮಿಟ್ ಮಹಾಶಯನಿಂದ ಜರ್ಮನಿಯಲ್ಲಿ ಪ್ರಕಾಶಗೊಂಡಿವೆ. **ಮೂಲ ಶುಕ ಸಪ್ತತಿ ಮೂಲ ಪಂಚತಂತ್ರದಂತೆ ನಷ್ಟವಾಗಿದೆ.** ಈ ಗ್ರಂಥ ಯಾವಾಗ ಯಾರಿಂದ ಬರೆಯಲ್ಪಟ್ಟಿತೆಂಬುದು ತಿಳಿಯದು. ಇದರ ಕಾಲ ಕ್ರಿ. ಶ. 1165 ಕ್ಕೂ ಹಿಂದಿನದೆಂದೂ, ಕರ್ತೃ ಚಿಂತಾಮಣಿ ಭಟ್ಟನೆಂದೂ ಸದ್ಯಕ್ಕೆ ಹೇಳಬಹುದು.

ಹೆಸರಿಗೆ ಅನುಗುಣವಾಗಿ ಶುಕಸಪ್ತತಿಯಲ್ಲಿ 70 ಕಥೆಗಳಿವೆ. ಹರದತ್ತನೆಂಬ ವ್ಯಾಪಾರಿಗೆ ಪ್ರಭಾವತಿಯೆಂಬ ಹೆಂಡತಿಯಿರುವಳು. ಒಂದುಬಾರಿ ಅವನು ವ್ಯಾಪಾರಕ್ಕಾಗಿ ಊರನ್ನು ಬಿಟ್ಟು ಹೋಗುವುದಕ್ಕಿಂತ ಮುಂಚೆ ತಾನು ಸಾಕಿದ ಒಂದು ಗಿಣಿಗೆ ಪ್ರಭಾವತಿ ದುರ್ನಡತೆಯುವಳಾಗದಂತೆ ನೋಡಿಕೊಳ್ಳಲು ಹೇಳಿ ಪ್ರಯಾಣ ಮಾಡುತ್ತಾನೆ. ಕೆಲವು ದಿನಗಳಮೇಲೆ ಪರಪುರಷನ ಬಳಿಗೆ ಹೋಗಲು ಸಿದ್ಧವಾಗತೊಡಗುವ ಪ್ರಭಾವತಿಯನ್ನು ಕುರಿತು ಪಂಜರದ ಗಿಣಿ ರೂಪಿಣಿ ಎಂಬೊಬ್ಬಳಿಗೆ ಅಂಥದೇ ಸಂದರ್ಭಲ್ಲಿ ಒದಗಿದ ವಿಪತ್ತಿನ ಕಥೆಯನ್ನು ಹೇಳಿ, ಪ್ರಭಾವತಿ ತನಗೆ ಬರಬಹುದಾದ ವಿಪತ್ತನ್ನು ನಿವಾರಿಸುವ ಉಪಾಯವನ್ನು ಯೋಚಿಸಲು ಸಲಹೆಮಾಡುತ್ತದೆ. ಭ್ರಾಂತಳಾದ ಪ್ರಭಾವತಿಗೆ ಯಾವ ಉಪಾಯವೂ ಹೊಳೆಯುವುದಿಲ್ಲ. ಆಗ ಗಿಣಿ ಅವಳಿಗೆ ರೂಪಿಣಿ ಹೂಡಿದ ಉಪಾಯದ ಕಥೆಯನ್ನು ಹೇಳುತ್ತದೆ. ಅದು ಮುಗಿಯುವಲ್ಲಿ ಅಂದಿನ ರಾತ್ರಿ ಕಳೆದು ಹೋಗಿರುತ್ತದೆ. ಹೀಗೆಯೇ ಎಪ್ಪತ್ತು ಕಥೆಗಳನ್ನು ಹೇಳಿ ಮುಗಿಸುವಲ್ಲಿ 70 ದಿವಸಗಳು ಕಳೆದು ಪ್ರಭಾವತಿಯ ಪತಿ ಹಿಂತಿರುಗಿ ಬರುತ್ತಾನೆ.

ಶುಕಸಪ್ತತಿಯ ಬೃಹತ್ಪಾಠದಲ್ಲಿ ಶುಕಸಪ್ತತಿಯಲ್ಲಿ ಇಲ್ಲದ ಅನೇಕ ಕಥೆಗಳಿವೆ. ಕ್ರಿ. ಶ. 1329ರಲ್ಲಿ ನೆಕ್‌ಶೆಬಿ ಎಂಬವನು ಪಾರ್ಸಿ ಭಾಷೆಯಲ್ಲಿ ಮಾಡಿದ ಶುಕಸಪ್ತತಿಯ ಅನುವಾದದಲ್ಲಿಯೂ (ತೂತಿನಾಮೆ) ಮೇಲೆ ಹೇಳಿದ ಎರಡು ಶುಕಸಪ್ತತಿಗಳಲ್ಲಿಯೂ ಇಲ್ಲದ ಅನೇಕ ಕಥೆಗಳಿವೆ. ಇಂಥ ಕಥೆಗಳೆಲ್ಲವೂ ಈಗ ನಮಗೆ ದೊರೆತಿಲ್ಲದ ಶುಕಸಪ್ತತಿ ಪಾಠಾಂತರಗಳಲ್ಲಿ ಇದ್ದವೆಂದು ಊಹಿಸಲಾಗಿದೆ. ನೆಕ್‌ಶೆಬಿಯ ತೂತಿನಾಮೆ ಶಾ ಅಬ್ದುಲ್ಲಾ ಎಫೆಂಡಿ ಎಂಬುವನಿಂದ ತುರ್ಕಿಭಾಷಗೆ ಅನುವಾದಗೊಂಡಿದೆ. ಕ್ರಿ. ಶ. ಸುಮಾರು 18ನೆಯ ಶತಮಾನದ ಅಂತ್ಯದಲ್ಲಿ ಪಾರ್ಸಿಭಾಷೆಗೆ ತರ್ಜುಮೆಗೊಂಡಿದೆ. ಅಲ್ಲದೆ ಈಚೆಗೆ ಭರತಖಂಡದ

ಅನೇಕ ಭಾಷೆಗಳಿಗೂ ಮಲಯ ಮತ್ತು ಜಾವಾದ್ವೀಪಗಳ ಭಾಷೆಗಳಿಗೂ ಅನುವಾದಗೊಂಡಿದೆ.

ಪಂಚತಂತ್ರದ ಕಥೆಗಳಂತೆ ಶುಕಸಪ್ತತಿಯ ಕೆಲವು ಕಥೆಗಳೂ ವಿಶ್ವದ ನಾನಾ ದೇಶಗಳಿಗೆ ಹರಡಿರುವುದನ್ನು ನೋಡಿದರೆ ಅದರ ಪ್ರಾಮುಖ್ಯ ಸ್ವಯಂ ವಿದಿತವಾಗುತ್ತದೆ.

ಶ್ಲೋಕ ಛಂದಸ್ಸಿನಲ್ಲಿದ್ದು ಸದಾಚಾರವನ್ನು ಬೋಧಿಸುವ ದಿನಾಲಾ ಪನಿತಾ ಶುಕ ಸಪ್ತತಿಯೆಂಬ ಗ್ರಂಥವೂ ಬಹಳ ಅರ್ವಾಚೀನವಾದುದು **'ಕನ್ನಡ ವಿಶ್ವಕೋಶ'ದಲ್ಲಿ** (ಸಂಪುಟ 3, ಪುಟ 657). ಇಷ್ಟುದ್ದವಾಗಿ ಬರೆದುದು ಕೇವಲ ವಿಕ್ಷಿಪ್ತರೀತಿಯಾಗಿದೆಯೆಂದು (ಕೇವಲ ಆಂಗ್ಲಲೇಖಿನ-ಕೃತಿಗಳ ಆಧಾರಿತವೆಂದು) ಹೇಳಬಹುದು !

ಇಲ್ಲಿಯ ಕೆಲವು ಸಂಶಯಾತ್ಮಕ ವಿಷಯಾಂಶಗಳು ಓದುಗನಲ್ಲಿ (ನನ್ನಲ್ಲಿ) ಕುತೂಹಲವನ್ನು ಕೆರಳಿಸುತ್ತವೆ: (1) 'ಶುಕಸಪ್ತತಿ'ಯ ಅವೆರಡು ವಿಧದಲ್ಲಿ ಒಂದಾದರೂ ಸಂಸ್ಕೃತ ಕೃತಿ ದೊರಕಿದೆಯೋ? ಇಲ್ಲವೋ? ಅದೂ ಅಚ್ಚಾಗಿದೆಯೋ? ಇಲ್ಲವೋ? 'ಮೂಲ ಪ್ರತಿ ನಷ್ಟವಾಗಿದೆ'ಯೆಂದರೆ, ಈತರವ ದೀರ್ಘ ಪರಿಚಯ ಯಾವುದರ ಆಧಾರದಿಂದ ಬರೆದುದಿರಬಹುದು?

2) ಜರ್ಮನಿಯಲ್ಲಿ 3 ಕೃತಿ ಪ್ರಕಾಶಿತವದೆಯೆಂದರೆ ಅದು ಯಾವಾಗ, ಯಾವುದರ ಆಧಾರದಿಂದಲೆಂದು ತಿಳಿದಿಲ್ಲವೆ? ಅಂತೆ, ಅದೊಂದು ಕೃತಿಯ ಕೆಲವು ಅಂಶಗಳುಳ್ಳ ಪಾರ್ಸಿ ಅನುವಾದ, ಅದರ ತುರ್ಕಿ ಭಾಷೆಯ ಅನುವಾದವೆಂದು ಹೇಗೆ ತಿಳಿಯಿತು? ಇವಲ್ಲಿಲ್ಲದ ಕಥೆಗಳು ಪಾಠಾಂತರಗಳಲ್ಲಿರಬಹುದೆಂದು ಊಹಿತವದೆಯೆಂಬುದಕ್ಕೆ. ಆ ಪಾಠಾಂತರಗಳಾವುವೆಂದು ಹೇಳಿಲ್ಲ! ಅಲ್ಲದೆ 'ಈಚೆಗೆ ಭರತಖಂಡದ ಅನೇಕ ಭಾಷೆಗಳಿಗೂ- ಅನುವಾದಗೊಂಡಿದೆ'ಯೆಂಬಲ್ಲಿ ಆ ಭಾಷೆಗಳೇನೆಂದು ಸೂಚನೆಯೇನಿಲ್ಲ!

'ಶುಕಸಪ್ತತಿ'ಯ ಬಗ್ಗೆ ಇಷ್ಟೆಲ್ಲಾ ಓದಿದರೂ, ಕನ್ನಡ ಭಾಷೆಯಲ್ಲಿ ಆ ವೊಂದು ತರವ ಅನುವಾದ ಯಾರಿಂದಲಾಗಿದೆಯೆಂದು ಇಲ್ಲಿಲ್ಲ. ಅಂದರೆ, 'ಶುಕಸಪ್ತತಿ'ಯೆಂಬ ಸಂಸ್ಕೃತ ಗ್ರಂಥ, ಅದರ ವಿದೇಶೀಯ ಭಾಷಾಂತರಗಳ ವಿಚಾರಗಳು ಈ ಪ್ರಾತಿನಿಧಿಕವಾದ' **ಕನ್ನಡ ವಿಶ್ವಕೋಶ**'ದಲ್ಲಿರುವುದರ ಅವಶ್ಯವೇನಿದೆ? ಈ ತರದಲ್ಲಿ ಅನವಶ್ಯವಾದ ಅಂಶವೆಷ್ಟಾದರೂ ಹೀಗೆ ಇಲ್ಲಿ ಅಚ್ಚುಗೊಳಿಸಿದುದು ವ್ಯರ್ಥವಾಗಲಾರದೇ? ಎಂದು ಮೊದಲಾದ ಜಿಜ್ಞಾಸೆಗಳುಂಟಾಗಿವೆ.

ಕರ್ಣಾಟಕ ಕವಿಗಳ–ಕೃತಿಗಳ ಬಗೆಗೆ ಸಾಧ್ಯವಾದಂತೆ ಹಲವು ವರ್ಷಗಳಲ್ಲಿ ಸಂಕಲಿಸಿ, ಅದೊಂದು ಪಾಂಗವಾಗಿ ಬರೆದಿರುವ ಆಧಾರ ಗ್ರಂಥಗಳೆಂದರೆ. ಶ್ರೀ ಆರ್. ನರಸಿಂಹಾಚಾರ್ಯರ **ಕರ್ಣಾಟಕ ಕವಿಚರಿತೆಯ** ಮೂರು ಸಂಪುಟಗಳು, 1927ಕ್ಕೆ ಮೂರನೆಯ ಸಂಪುಟವ ಪೂರೈಸಲಾಗಿದೆ. ಈ ಗ್ರಂಥವಲ್ಲಿ 'ಶುಕ ಸಪ್ತತಿ'ಯ ಕನ್ನಡ ಭಾಷಾನುವಾದ

ಗಳ-ತತ್ಕರ್ತೃಗಳ ವಿಚಾರವೇನಾದರೂ ತಿಳಿಯಬಹುದೇ ಎಂದು ತಿಳಿಯುವುದಕ್ಕೆ ಬಯಸಿದರೆ ತಪ್ಪಾಗದಲ್ಲವೇ? (**ಈ ಕನ್ನಡ ವಿಶ್ವಕೋಶವು** ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ 1970ರಲ್ಲಿ ಪ್ರಕಟವಾದುದು. **ಕರ್ಣಾಟಕ ಕವಿಚರಿತೆಯ** ಮೂರು ಸಂಪುಟಗಳಲ್ಲಿ ಹೆಸರಿಸಿದ ಕೃತಿಗಳ ಪ್ರತಿಗಳು ಅದೇ ಕನ್ನಡ ಅಧ್ಯಯನ ಸಂಸ್ಥೆಯ ವಶದಲ್ಲಿವೆಯೆಂಬುದು ಇಲ್ಲಿ ಗಮನೀಯವು!)

ಮೈಸೂರ ಮಹಾರಾಜರಲ್ಲಿ ಒಬ್ಬನಾದ ಚಿಕ್ಕದೇವರಾಯನ ಆಶ್ರಯದಲ್ಲಿದ್ದ, ಅವನ ಮಂತ್ರಿಯೂ ಆಸ್ಥಾನ ಪಂಡಿತನೂ ಆದ ಚಿಕ್ಕುಪಾಧ್ಯಾಯನು (ಇಸ್ವಿ 1682ರಲ್ಲಿ) 'ಶುಕಸಪ್ತತಿ'ಯೆಂಬ ಗದ್ಯ-ಅನುವಾದ ಗ್ರಂಥ ಬರೆದನೆಂದು ಕ. ಕ. ಚರಿತೆಯಲ್ಲಿದೆ. (2-484). ಅಂತೆ, ಮೈಸೂರ ಮಹಾರಾಜರಲ್ಲಿ ಒಬ್ಬನಾದ ಮುಮ್ಮಡಿ ಕೃಷ್ಣರಾಜನು (ಇಸ್ವಿ 1820ರಲ್ಲಿ) 'ಶುಕಸಪ್ತತಿ'ಯನ್ನು ಬರೆದನೆಂದಿದೆ. (3-172).

ಈ ಕಾಲಗಳ ಮಧ್ಯದಲ್ಲಿ, ಕನ್ನಡ ಭಾಷೆಯಲ್ಲಿ ಪದ್ಯರೂಪದಲ್ಲೂ 'ಶುಕಸಪ್ತತಿ'ಯು ಬರೆಯಲಾಗಿದೆಯೆಂದೂ ತಿಳಿಯುತ್ತದೆ, ಕ. ಕ. ಚ. (3-297, 299). ಈಯೆರಡು ಕಡೆಗಳಲ್ಲಿ ಹೇಳಿದ ಶುಕಸಪ್ತತಿಯು ಪದ್ಯರೂಪಗಳು ಬೇರೆಬೇರೆಯಲ್ಲ; ಒಬ್ಬನೇ ಕವಿಯ ಅದೊಂದೇ ಕೃತಿಯೆಂದು ಮುಂದೆ ವಿವರಿಸಲಾಗಿದೆ.

ಕನ್ನಡಭಾಷೆಯಲ್ಲಿ ಗದ್ಯ-ಪದ್ಯರೂಪಗಳಲ್ಲಿ ಬರೆದಿರುವ ಈ ಮೂರುಕೃತಿಗಳಲ್ಲಿ ಒಂದನ್ನಾದರೂ '**ಕನ್ನಡ ವಿಶ್ವಕೋಶ**'ದಲ್ಲಿ ಓದುಗರಿಗಾಗಿ ನಿರ್ದೇಶಿಸಬೇಕಾಗಿತ್ತಲ್ಲವೇ? ಅಂತೆ ಸಂಸ್ಕೃತದಲ್ಲಿ ಬರೆದಿರುವ ಎರಡು ತರದ 'ಶುಕಸಪ್ತತಿ'ಗಳ ಹಸ್ತಪ್ರತಿಗಳು ಬೇರೆ ಬೇರೆಡೆ ದೊರಕುತ್ತವೆ, (ಉತ್ತರಭಾರತದಲ್ಲಿ ಹೆಚ್ಚು ಪ್ರಚುರವಿರುವ ಸಂ. ಶುಕಸಪ್ತತಿ-ಶೃಂಗಾರಮಯ. ಉತ್ತರ ಭಾರತದಲ್ಲಿ ಪ್ರಚುರವಿರುವ ಸಂ. 'ಶುಕಸಪ್ತತಿ'ಯು ಕಾಶಿ, ದಿಲ್ಲಿ, ಪಾಟನಗಳಲ್ಲಿರುವ ಮೋತಿಲಾಲ ಬನಾರಸಿದಾಸರ ಪ್ರಕಟನಾಲಯದಲ್ಲಿ ಇಸ್ವಿ 1959ರಲ್ಲಿ ಮುದ್ರಿತವಾಗಿ ದೊರೆಯುತ್ತದೆ;

ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಪ್ರಚಾರದಲ್ಲಿರುವ ಸಂಸ್ಕೃತ ಶುಕಸಪ್ತತಿಯ ಪ್ರತಿಗಳು ತಂಜಾವೂರು, ತಿರುಪತಿ, ಮದ್ರಾಸ್ ಲೈಬ್ರರಿಗಳಲ್ಲಿದೆಯೆಂದೂ ತಿಳಿಯುತ್ತದೆ. (ಬೆಂಗಳೂರ ಸರಕಾರಿ ಕಲಾಶಾಲೆಯ ಕನ್ನಡ ಅಧ್ಯಾಪಕರಾದ ಶ್ರೀ ಸಾ. ಶಿ. ಮರುಳಯ್ಯ: 'ಶುಕ ಸಪ್ತತಿಯ ಎರಡು ಮೂಲಗಳು'. ಸುರತ್ಕಲ್ಲಿನ ವಿದ್ಯಾದಾಯಿನೀ ಹೈಸ್ಕೂಲಿನ ನಿವೃತ್ತ ಮುಖ್ಯೋಪಾಧ್ಯಾಯರಾದ, ರಾಷ್ಟ್ರ ಪ್ರಶಸ್ತಿ ವಿಜೇತ, ಶ್ರೀ ಎಂ. ವಾಸುದೇವ ರಾಯರ ಸಂಭಾವನ ಗ್ರಂಥ 'ಅರ್ಪಣೆ'ಯಲ್ಲಿ ಪ್ರಕಟಿತವಾಗಿದೆ. ಈ ಲೇಖವು ಸದ್ಯಃ

ಪ್ರಕಟವಾಗಲಿರುವ 'ಶುಕಸಪ್ತತಿ-ಕನ್ನಡ ಪದ್ಯಕಾವ್ಯ'ದ ೧ನೆಯ ಸಂಚಿಕೆಯಲ್ಲಿ ಸಂಕಲಿತ ವಾಗಲಿದೆ.)

'ಕನ್ನಡ ವಿಶ್ವಕೋಶ'ದಲ್ಲಿ ಹೇಳಿದ ಮಾತುಗಳು, ಈ ಮೇಲಿನ ವಿಚಾರಗಳನ್ನು ಆಧ ರಿಸಿದರೆ, ತೀರಾ ವಿಕ್ಷಿಪ್ತದೃಷ್ಟಿಯಲ್ಲಿ ಬರೆದವುಗಳೆಂದರೆ ತಪ್ಪಾಗಲಾರದಲ್ಲವೆ? (ಆಂಗ್ಲ ಗ್ರಂಥ-ಲೇಖಗಳಲ್ಲಿ ಕೆಲವೆಡೆ ಕಾಣುವಂತೆ, ಕನ್ನಡದತ್ತ ತಾತ್ಸಾರದೃಷ್ಟಿಯ ರೀತಿ ಇಲ್ಲಿ ಅನುಸ ರಿಸಲಾಗಿದೆಯೆನ್ನಲೂಬಹುದಾಗಿದೆಯಲ್ಲವೇ?) **'ಕನ್ನಡ ವಿಶ್ವಕೋಶ'ದ** ಪ್ರಾರಂಭ ಯೋಚನೆ–ಯೋಜನೆಗಳು ಆಗಿ ಕೆಲವು ವರ್ಷಗಳಾದವು; ಅಂತೆ ಆ ಬಗೆಗೆ ಲೇಖಕರಿಂದ ಬರೆದು ತರಿಸಿಟ್ಟ ಲೇಖಗಳೂ ಕೆಲವುವರ್ಷಗಳ ಮೊದಲಿನವಿರಬೇಕು. ಭರತಖಂಡದಲ್ಲಿ ಮಾತ್ರವಲ್ಲ, ವಿಶ್ವದ ಯಾವುದೇ ದೇಶದಲ್ಲಿ ಸಂಗ್ರಾಹ್ಯವಾದ ಸಾಹಿತ್ಯಾದಿ ಕೃತಿಗಳವಿಚಾ ರಗಳು ತಿಳಿಯಲು ತಕ್ಕ ಅನುಕೂಲತೆಗಳು ಇಂದಿನ ವಿಜ್ಞಾನಯುಗಲ್ಲಿ ಹೆಚ್ಚಿವೆ. ಅಂದ ಮೇಲೆ, **ಶುಕಸಪ್ತತಿ**ಯೆಂಬ ಈ ಪ್ರಾಚೀನ ಕಥಾಸಂಕಲನದ ಬಗೆಗೆ ತುಸು ಉದಾರತೆ ಯಿಂದಲೂ ವೈಶಾಲ್ಯದಿಂದಲೂ ವ್ಯವಹರಿಸುತ್ತಿದ್ದರೆ, ಬೇರೆ ಬೇರೆ ಗ್ರಂಥಾನುಕ್ರಮಣಿ ಕೆಗಳನ್ನೂ ಕವಿಚರಿತೆಗಳನ್ನೂ ಪರಿಶೀಲಿಸುತ್ತಿದ್ದರೆ ಇನ್ನಷ್ಟು ಹೆಚ್ಚಿನ ಹಾಗೂ ಅವಶ್ಯ ವಾದ ರೀತಿಯಲ್ಲಿ ಸೂಚಿಸಬರುತ್ತಿತ್ತು; ಕನ್ನಡದಲ್ಲೂ 'ಶುಕಸಪ್ತತಿ' ರಚಿಸಿದವರಿದ್ದಾ ರೆಂದು ಇತರರು ಈ 'ಕನ್ನಡ ವಿಶ್ವಕೋಶ'ವೇ ಆಧಾರವೆಂದು ತಿಳಿವವರು ಅರಿಯಲು ಉಪಕಾರವಾಗುತ್ತಿತ್ತೆಂದು ಸವಿಷಾದದಿಂದ ವಿನಂತಿಸುತ್ತೇನೆ. (ಬೆಂಗಳೂರ ಕನ್ನಡ ಸಾಹಿತ್ಯ ಪರಿಷತ್ ಪ್ರಕಟಿಸುವ ಕನ್ನಡ–'ಕನ್ನಡ ಕೋಶದಲ್ಲೂ ವ್ಯಾಕರಣ ರೀತಿಯಲ್ಲಿ, ಭಾಷಾರೀತಿಯಲ್ಲಿ ಹಾಗೂ ಇತರ ವಿಚಾರಗಳಲ್ಲಿ ಕೆಲವು ಲೋಪ ದೋಷಗಳಿವೆಯೆಂದು ಈ ಮೊದಲು ನಾನು ಬರೆದಿದ್ದು, ಕೆಲವು ವಿದ್ವಾಂಸರಿಗೆ ಮಾತ್ರ ನನ್ನಲ್ಲಿ ಅಸಮಾಧಾನ ವೊದಗುವ ಸಾರ್ಥಕವಾಯಿತೇ ಹೊರತು, ಬೇರೇನೂ ಸಫಲಿತವಾಗಿಲ್ಲ! ಅಂತೆ, 'ಕನ್ನಡ ವಿಶ್ವಕೋಶ'ದಲ್ಲಿ ಕಾಣುವ ಅರೆ-ಕೊರೆಗಳನ್ನು ಸಾರಿದರೆ, ಅಂತಹ ಲೇಖಕನಲ್ಲಿ ಕೇವಲ ಉದಾರತೆಯಿಂದಾದರೂ, ಕನ್ನಡದ ಅಭಿಮಾನದಿಂದಾದರೂ ಇದರತ್ತ ತುಸ ಗಮನಿಸುವ ರೆಂದೇ ಹಾರಯಿಸುವೆ.)

ಶುಕಸಪ್ತತಿ-ಕನ್ನಡ ಪದ್ಯ ಕಾವ್ಯದ ವಿಚಾರ

ಇದರ ಮೂಲ ಸಂಸ್ಕೃತ ಭಾಷೆಯಲ್ಲಿದೆ, ಅದರ ಅನುವಾದ ಕನ್ನಡದಲ್ಲೂ. ಪರ ಭಾಷೆಗಳಲ್ಲೂ ಹಲವಾರು ಮಂದಿ ಬರೆದಿದ್ದಾರೆ. ಹಾಗೆ ಕನ್ನಡಿಸಿದವರಲ್ಲಿ **'ಶರಜಾ ನಾಗಪ್ಪಯ್ಯ'** ನೆಂಬವನೊಬ್ಬನು (ಇಸ್ವಿ 1672 ರಲ್ಲಿದ್ದ ಚಿಕ್ಕುಪಾಧ್ಯಾಯ; ಇಸ್ವಿ 1820 ರಲ್ಲಿದ್ದ ಮುಮ್ಮಡಿ ಕೃಷ್ಣರಾಜ ಇವರಿಬ್ಬರೂ ಗದ್ಯರೂಪದಲ್ಲಿ ಶುಕಸಪ್ತತಿ ಬರೆದಿದ್ದಾರೆ).

'ಕೆಳದಿ ನೃಪವಿಜಯ' ದಲ್ಲಿ. 1 ನೆಯ ಬಸವರಾಜನಲ್ಲಿ ಇವನು 'ನಿಯೋಗಿ' (ಮಂತ್ರಿ) ಆಗಿದ್ದನೆಂದಿದೆ.

"ಧರಣಿಗುತ್ತಮನಾಗಿ ರಾಜಿಪ। ದೊರೆ ಕೆಳದಿ ಬಸವ ಕ್ಷಿತೀಶನ । ಚರಣ ಕಮಲದ ಭೃಂಗ **ಶರಜಾನಾಗಮಂತ್ರೀಶ**। ವಿರಚಿಸಿದನೇ ಪುಣ್ಯಕತೆಯನು । ಹರುಷದಿಂ ಕೇಳ್ವ ರಿಗೆ ಕೊಡಗಿಯ। ಪುರವ ಶಂಕರನಾರಯಣನಿತ್ತಪನು ಸಂಪದವ" ಎಂದು ಈ 'ಶುಕ ಸಪ್ತತಿ–ಕನ್ನಡ ಪದ್ಯಕಾವ್ಯ' ದಲ್ಲಿದೆ.

ಕೆಳದಿ ಮನೆತನದ 1 ನೆಯ ಬಸಪ್ಪನಾಯಕನು ಇ. 1697-1715 ರಲ್ಲಿದ್ದನೆಂದಿದೆ (ಕೆ. ನೃ. ವಿ. 170–7; ದ. ಭಾ. ಚಾ. ಶಾ. 291–360). ಈ ಬಸವರಾಜನು ಸ್ವಯಂ ಕವಿಯಾಗಿದ್ದನು, ಹಲವು ಕವಿಗಳಿಗೆ ಆಶ್ರಯದಾತನೂ ಆಗಿದ್ದನೆಂದು ತಿಳಿಯುತ್ತದೆ:

"ಧಾರಿಣಿಗೆ ಪಶ್ಚಿಮದಿ ಶೋಭಿಪ। ವಾರಿನಿಧಿಯಾ ನಾಳ್ವ ಕೆಳದಿಯ। ಭೂರಮಣ ಬಸವೇಶನಂಘ್ರಿಯ ಸೇರಿಬಾಳ್ವ" ಸುಬ್ಬ (ಸುಬ್ರಹ್ಮಣ್ಯ) ಕವಿ 'ರುಕ್ಮಿಣೀ ಸ್ವಯಂವರ' ವೆಂಬ ಯಕ್ಷಗಾನ ಪ್ರಸಂಗ ಬರೆದಿದ್ದಾನೆ (ಶ್ರೀ ಶಿವರಾಮ ಕಾರಂತ : ಯಕ್ಷಗಾನ ಬಯಲಾಟ. ಪುಟ 210). "ಹೂವಕೊಟ್ಟಳು ಮಹಾದೇವಿ ಮೂಕಾಂಬಾ" ಎಂಬ ಪದ್ಯಬರೆದ ಅಪ್ಪಯ್ಯನೂ 1ನೆ ಬಸಪ್ಪನ ಹೆಸರು ಹೇಳಿದ್ದಾನೆ (ಕ. ಕ. ಚ, 3-1).

ಕರ್ಣಾಟಕ ಕವಿಚರಿತೆಯಲ್ಲಿ ಒಂದೆಡೆ (3–297), ಶುಕಸಪ್ತತಿ, ಸು. 1650 ಎಂದಿದೆ; ಇನ್ನೊಂದೆಡೆ (3–299), ಶುಕಸಪ್ತತಿ, ಸು. 1680 ಎಂದಿದೆ. ಕವಿಯ ವಿಚಾರಗಳೇನೂ ಹೇಳಿಲ್ಲ. ಕವಿಚರಿತೆಕಾರರಿಗೆ ದೊರೆತ ಹಸ್ತಪ್ರತಿಯಲ್ಲಿ ಈ ವಿಚಾರದ (ಈ ಮೇಲೆ ಹೇಳಿದ) ಪದ್ಯ ಬರೆದಿಲ್ಲ (ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಕೆ. ಬಿ. 27 ನೋಡಿ). ಅವೆರಡೂ ಕಡೆ ಕವಿಚರಿತೆಯಲ್ಲಿ ಹೇಳಿದ ಕೃತಿಗಳು (ಶುಕಸಪ್ತತಿಗಳು) ಬೇರೆ ಅಲ್ಲ; ಕವಿಚರಿತೆಕಾರರೇ ಊಹಿಸಿದಂತೆ, ಒಬ್ಬನೇ ಕವಿಯದು; ಅವೆರಡೊಕಡೆ ಉಲ್ಲೇಖಿಸಿದ ಪದ್ಯಗಳು ಶರಜಾನಾಗಪ್ಪಯ್ಯನ ಕನ್ನಡ ಶುಕ ಸಪ್ತತಿಯವು!

'ಶುಕಸಪ್ತತಿ ಕಥೆಗಳು' ಎಂಬ ಪುಸ್ತಕ ಬೆಂಗಳೂರಂ ಶ್ರೀ ಕೃಷ್ಣಯ್ಯ ಶೆಟ್ಟಿಯವರಿಂದ ಪ್ರಕಟಿತವದೆ. ಅದರಲ್ಲಿಯ ಅನುಕ್ರಮಣಿಕೆಗಳು, ಕಥಾವರ್ಣನಾದಿಗಳು ಈ ಕನ್ನಡ ಪದ್ಯಕೃತಿ ಶುಕಸಪ್ತತಿಗಿಂತ ಕೆಲವೆಡೆ ಬೇರೆಯಿವೆ.

ಸಂಸ್ಕೃತದಲ್ಲಿರುವ 'ಶುಕಸಪ್ತತಿ'ಯ ಕನ್ನಡ ರೂಪಾಂತರಗಳು ಅನೇಕಶಃ ಕೇಳು ತ್ತಿವೆ. ಕನ್ನಡ ವಿಶ್ವಕೋಶ'ದಲ್ಲಿ ಇವುಗಳ ಹೆಸರಿಕೆಯು ಸೇರ್ಪಡೆಯಾದರೆ ಸಾಹಿತ್ಯಾಭ್ಯಾಸ ಗಳಿಗೆ ತುಂಬ ಉಪಕಾರವಾದೀತೆಂದು ತೋರುತ್ತದೆಯಲ್ಲವೇ?

ಕೆ. ವೆಂಕಟರಾಯಾಚಾರ್ಯ

2. ಕೆಲವು ವಸ್ತ್ರನಾಮ ವಿಶೇಷಗಳು

ಪಂಪಭಾರತದ ಒಂದು ಸಂನಿವೇಶ : ಯುದ್ಧಾದಿಗಳೆಲ್ಲ ಮುಗಿದು ಕಟ್ಟ ಕಡೆಗೆ ಪಾಂಡವರು ಪಟ್ಟಣವನ್ನು ಪ್ರವೇಶಿಸಿದರು. ಆಗ ಊರೆಲ್ಲ ಸಿಂಗರಗೊಂಡು ಕಂಗೊಳಿಸುತ್ತಿತ್ತು. ಅದನ್ನು ಪಂಪ ಹೀಗೆ ಚಿತ್ರಿಸಿದ್ದಾನೆ—

ಒಳಿದೋರಣಮಾಯ್ತು ಹಾರದ ಪಚ್ಚೆ ಸಾರದ ಮಾಲೆ ಸೌ
ಧಾಳಿಯೊಳ್ಗುಡಿಯಾಯ್ತು ಚೀನದ ಸುಯ್ಯತಾಣದ ಪಟ್ಟಿ ಹ |
ರ್ಮ್ಯಾಳಿದಪ್ಪದೆ ರಯ್ಯಮಾಯ್ತೆಸೆವಾಟ ಪಾಟದ ಗೀತಿ ಕ
ಣ್ಗೋಳಿವಟ್ಟುದದೊಂದು ಚೆಲ್ವುದಲಾಯ್ತು ತತ್ಪುರಮಧ್ಯದೊಳ್ 14-15

ಸ್ಥೂಲವಾಗಿ ಈ ಪದ್ಯದ ಹುರುಳು ಇಷ್ಟು: ಹಾರದ ಪಚ್ಚೆ ಸಾರದ ಮಾಲೆ ಸಾಲು ತೋರಣವಾಯಿತು, ಚೀನದ **ಸುಯ್ಯತಾಣ**ದ ಪಟ್ಟಿ ಸೌಧಾಳಿಗೆ ಚೆಲುವಾದ ಬಾವುಟವಾಯಿತು, ಉಪ್ಪರಿಗೆಗಳ ಸಾಲು ತಪ್ಪದೆ ಮನೋಹರವಾಯಿತು, ಒಪ್ಪುವ ಆಟಪಾಟಗೀತಿ ಕಣ್ಣುಗಳಿಗೆ ಓರಣವಾಯಿತು – ಇದೆಲ್ಲ ಆ ಊರಿನ ನಡುವೆ ಉಂಟಾದ ಚೆಲುವಿನ ಪರಿ.

ಪಂಪನ ಈ ಪದ್ಯದಲ್ಲಿ ಬರುವ ಸುಯ್ಯತಾಣ ಶಬ್ದಕ್ಕೆ ಪಂಪಭಾರತ ನಿಘಂಟಿನಲ್ಲಿ ಅರ್ಥ ತಿಳಿಯದೆಂದು ಪ್ರಶ್ನಾರ್ಥಕ ಚಿಹ್ನೆ ಹಾಕಿದೆ. ಇತರ ಕನ್ನಡ ನಿಘಂಟುಗಳಲ್ಲಿ ಈ ಶಬ್ದ ಇಲ್ಲ. ಪಂಪಭಾರತದಲ್ಲೇ ಇಂಥ ಇನ್ನೊಂದು ಶಬ್ದವಿದೆ. ಸ್ವಯಂವರ ಶಾಲೆಯನ್ನು ದ್ರುಪದ ರಾಜ ಹಲವು ತೆರನಾಗಿ ಅಣಿಗೊಳಿಸಿದ್ದನ್ನು ನಿರವಿಸುವ ಸಂದರ್ಭದಲ್ಲಿ ಬರುವ ವರ್ಣನೆ :

> "...ಆ ನೆಲೆಯ ಚೌಪಳಿಗೆಗಳೊಳನೇಕ ಪ್ರಾಸಾದದ ಮೇಲೆ ಚಿತ್ರದ ಪಟ್ಟವಿಗೆಗಳಂ ತುಱುಗಲುಂ ಬಂಬಲ್ಗಳುಮಾಗೆ ಕಟ್ಟಿಸಿ ಪಚ್ಚೆಯ ಹಾರದ ತೋರಣಂಗಳಂ ದುಗುಲದ ಗುಡಿಗಳಂ ಕಟ್ಟಿಸಿ ಕಂಭಂಗಳೊಳೆಲ್ಲಂ ಸುಯ್ಯಾಣದ ಚಿನ್ನದ ಪಟ್ಟಿಯ ಸಕಳವಟ್ಟೆಗಳಂ ಸುತ್ತಿಸಿ ಮುತ್ತಿನ ಮಂಡವಿಗೆಗಳನೆಡೆಯಱಿದೆತ್ತಿಸಿ ಪೊನ್ನ ಮಾಂಗಾಯ ಗೊಂಚಲ್ಗಳುಮಂ ಮುತ್ತಿನ ಬುಂಭುಕಂಗಳುಮನೆಱಲೆ ಕಟ್ಟಿಸಿ ಮತ್ತಮಾ ಪ್ರಾಸಾದಂಗಳ ಚೌಪಳಿಗೆಗಳ ಪೊನ್ನ ಪೊಂಗಱಿಗೆ ನೀಳ್ಪುಂ ಬೆಳ್ಪುಮಂ ತಾಳ್ದಿ ಕರ್ಪಿನೊಳಾಶ್ರಯಂಬಡೆದು......3-40 ವ.

ಇಲ್ಲಿನ **ಸುಯ್ಯಾಣ** ಹಾಗೂ ಮೇಲೆ ಹೇಳಿದ ಸುಯ್ಯತಾಣ ಶಬ್ದಗಳು ನಂಟು ನುಡಿಗಳೆಂದು ತೋರುತ್ತದೆ. ಇವುಗಳಲ್ಲಿ ಸುಯ್ಯತಾಣ ಎಂಬ ಮಾತು ಹಳೆಯದಿರಬೇಕು. ಅಲ್ಲದೆ ಅದರ ಏಕೈಕ ಪ್ರಯೋಗವದು. ಒಂದೇ ಪ್ರಯೋಗವಾದರೂ ಅದರ ರೂಪವಿಚಾರದಲ್ಲಿ ಸಂದೇಹಕ್ಕೆ ಅವಕಾಶವಿಲ್ಲವೆಂದು ತೋರುತ್ತದೆ, ಪಾಠಾಂತರಗಳಾವೂ ಇಲ್ಲದಿರುವುದರಿಂದ. ಸುಯ್ಯಾಣ ಶಬ್ದವೂ ಅಪರೂಪವಾದುದೇ. ಪಂಪಭಾರತ 3–40 ರ ಗದ್ಯಭಾಗದಲ್ಲಿ ಸುಯ್ಯಾಣ ಶಬ್ದದ ಜೊತೆಗೆ ಬಂದಿರುವ ಸಕಳವಟ್ಟೆ

ಶಬ್ದವನ್ನೂ ಗಮನಿಸಬೇಕು. ಅದೂ ಒಂದು ಅಪೂರ್ವ ಶಬ್ದ. ಸುಯ್ಯಾಣ, ಸಕಳ ವಟ್ಟೆ ಶಬ್ದಗಳ ರೂಪಸಾಧುತ್ವವನ್ನು ಅನುಮಾನಿಸಲವಕಾಶವಿದ್ದಂತಿಲ್ಲ, ಎರಡು ಕಾರಣಗಳಿಂದ; ಅವಕ್ಕೆ ಪಾಠಾಂತರಗಳಿಲ್ಲ, ಅನ್ಯಪ್ರಯೋಗಗಳು ಇವೆ.

ಸುಯ್ಯಾಣ ಹಾಗೂ ಸಕಳವಟ್ಟೆ ಎಂಬೆರಡು ಶಬ್ದಗಳಿಗೆ ಪಂಪಭಾರತ ನಿಘಂಟಿನಲ್ಲಿ ಪ್ರಶ್ನಾರ್ಥಕ ಚಿಹ್ನೆ ಹಾಕಿದೆ. ಕನ್ನಡದ ಇತರ ನಿಘಂಟುಗಳಲ್ಲಿ ಈ ಶಬ್ದಗಳಿಲ್ಲ. ಇವುಗಳ ಅರ್ಥ ನಿರ್ಣಯಕ್ಕೆ ಇನ್ನಿತರ ಪ್ರಯೋಗಗಳನ್ನು ಆಶ್ರಯಿಸಬೇಕು. ನನಗೆ ತಿಳಿದಂತೆ ಹಳಗನ್ನಡ ಕಾವ್ಯಗಳಲ್ಲೂ ಈ ಶಬ್ದಗಳ ಬಳಕೆ ಕಡಮೆಯೇ. **ಪಂಪ ಭಾರತ**ವನ್ನು ಬಿಟ್ಟರೆ ಸಿಗುವ ಸುಯ್ಯಾಣ ಶಬ್ದದ ಮೂರು ಪ್ರಯೋಗಗಳು ಇಂತಿವೆ: ಜನ್ನನ **ಅನಂತನಾಥ ಪುರಾಣ**ದಲ್ಲಿ

ಸುರ ನಿಕರುಂಬಮಯೋಧ್ಯಾ
ಪುರದಿಂ ನೆಗೆದಮರಗಿರಿಗೆ ನಡೆಯಿಟ್ಟುದು ಸು ।
ಟ್ಟುರೆ ಗಾಳಿಗೆ ಸುಯ್ಯಾಣದ
ತೆರೆಯಂ ಹೊತ್ತಿಸಿ ಬಿಚ್ಚಿದಂತಿರೆ ನಭದೊಳ್ 5-37

ಇನ್ನೊಂದು ವೃತ್ತವಿಲಾಸನ **ಧರ್ಮಪರೀಕ್ಷೆ**ಯ ಪ್ರಯೋಗ. ಅದು ಇನ್ನೂ ಅಚ್ಚಾಗಿಲ್ಲ. ಇಲ್ಲಿ ಕೊಡುವ ಸಾಲುಗಳನ್ನು ನನ್ನ ಬಳಿ ಇರುವ ಓಲೆಗರಿಯಿಂದ ಎತ್ತಿಕೊಂಡಿದ್ದೇನೆ :

"...ಪಾತ್ರಚೂಡಾಮಣಿಯೆಂಬ ನರ್ತಕಿಯುಟ್ಟ ಚಲ್ಲಣದ ತೊಟ್ಟ ಸುಯ್ಯಾಣದ ಕಂಚುಳಿಕೆಯಿಟ್ಟ ಕಸ್ತೂರಿಯ ತಿಲಕದ ಮುತ್ತಿನ ಸೂಸಕದ ವಜ್ರದೋಲೆಯ ಮಾಣಿಕ್ಯದ ಕರ್ಣಪೂರದ ಮೂಗಿನ ಮೂಗುತಿಯ ಪಚ್ಚೆಯ ಪದಕದ ತೋರಹಾರದ ಕೀರ್ತಿಮುಖದ ತೋಳಬಂದಿಯ ಮಣಿ ಖಚಿತ ಕೇಯೂರದ..."

ಇತ್ಯಾದಿಯಾಗಿ ಉಟ್ಟ ಉಡುಪು ತೊಟ್ಟ ಆಭರಣಗಳ ಸೊಗಸಾದ ವರ್ಣನೆಯಿದೆ. ಇದು ಧರ್ಮಪರೀಕ್ಷೆಯ ಎರಡನೆಯ ಆಶ್ವಾಸದಲ್ಲಿ ಬರುವ ಪಂಕ್ತಿ. ಮತ್ತೊಂದು ಪ್ರಯೋಗ ಕೇಶಿರಾಜನದು, **ಶಬ್ದಮಣಿದರ್ಪಣ**ದಲ್ಲಿ ಸೂತ್ರ 309ಕ್ಕೆ ಕೊಡುವ ಉದಾಹರಣೆಗಳಲ್ಲಿ ಸೂಯಾಣ ಶಬ್ದವಿದೆ. ಇಲ್ಲೆಲ್ಲ ಬರುವ ಪ್ರಸಂಗಾಧಾರದಿಂದ ಸುಯ್ಯಾಣ ಶಬ್ದಕ್ಕೆ ಅರ್ಥ ಹೇಳುವುದಾದರೆ, ಒಂದು ಬಗೆಯ ವಸ್ತ್ರವೆಂದಾಗುತ್ತದೆ. ಜನ್ನನ ಪ್ರಯೋಗ ಇದರ ಅರ್ಥನಿರ್ಣಯದಲ್ಲಿ ಇನ್ನೂ ಹೆಚ್ಚು ಪುಷ್ಟಿಕೊಡುತ್ತದೆ. ಏಕೆಂದರೆ **ಅನಂತನಾಥ ಪುರಾಣ**ದ ಪದ್ಯದಲ್ಲಿ ಸುಯ್ಯಾಣದ ತೆರೆ ಎಂಬುದಕ್ಕೆ ಬಟ್ಟೆಯ ತೆರೆ ಎಂಬರ್ಥ ನಿಚ್ಚಳವಾಗುತ್ತದೆ.

ಇನ್ನು ಈ ಶಬ್ದದ ನಿಷ್ಪತ್ತಿ ವಿಚಾರ. ಸೂಚೀಯಾನ ಎಂಬ ಸಂಸ್ಕೃತ ಶಬ್ದ ಪ್ರಾಕೃತದ ಮೂಲಕ ಕನ್ನಡಕ್ಕೆ ಕಾಲಿಟ್ಟಿರಬಹುದು. ಸೂಚೀಯಾನ ಎಂದರೆ ಕಸೂತಿ

ಕೆಲಸ. **ಜಾತಕ ತಿಲಕ**ದಲ್ಲಿ (19–7) ಬರುವ ಸೂಚೀಕರ್ಮ ಶಬ್ದವನ್ನು ಗಮನಿಸಬಹುದು. ಅಲ್ಲದೆ ಸಂಸ್ಕೃತದ ಸೂ(ಶೂ)ಚಿ(=ವಸನ ಬಂಧಿಕೆ), ಸೂ(ಶೂ)ಚಿಯಾನ ಶಬ್ದಗಳನ್ನೂ ಪರಿಶೀಲಿಸಬಹುದು. ಸಿಂಪಿಗ, ದರ್ಜಿ ಎಂಬರ್ಥದ ಸೂಚಿಕ ಎಂಬ ಸಂಸ್ಕೃತ ಪುಲ್ಲಿಂಗ ಶಬ್ದ ಪ್ರಾಕೃತದಲ್ಲಿ ಸೂಇಅ ಎಂದಾಗುತ್ತದೆ, ಸೂಚೀ ಎಂಬ ಸ್ತ್ರೀಲಿಂಗ ಶಬ್ದ ಸೂಈ ಎಂದಾಗುತ್ತದೆ. ಸೂಚೀಯಾನ >*ಸೂ(ಈ)ಇಅಣ > ಸೂಯಾಣ < ಸುಯ್ಯಾಣ ಎಂಬಂತೆ ಈ ಶಬ್ದದ ವಿಕಾಸವನ್ನು ಸೂಚಿಸಬಹುದು. **ಶಬ್ದಮಣಿದರ್ಪಣ**ದ ಸೂತ್ರ 309 ರಲ್ಲಿ ಕೇಶಿರಾಜ ಪೂರ್ವಪದಾಂತ್ಯಲೋಪಕ್ಕೆ ಈ ಶಬ್ದದ ಉದಾಹರಣೆಕೊಟ್ಟು ಇದರ ಹುರುಳು ಹೆಚ್ಚು ನಿರುಕಾಗುವಂತೆ ಮಾಡಿದ್ದಾನೆ: ಸೂಚಿಯಾನಂ — ಸೂಯಾಣಂ, ದೇವಕುಲಂ — ದೇಗುಲಂ, ದೇಶಶಾಖೆ — ದೇಸಾಕೆ. ಸಂಸ್ಕೃತದ ನಕಾರ ಪ್ರಾಕೃತದಲ್ಲಿ ಣಕಾರವಾಗುತ್ತದೆ.

ಇಂಥದೇ ಇನ್ನೊಂದು ಶಬ್ದ ಸಾಹಿಯಾಣ ಎಂಬುದು. ಈ ಶಬ್ದ ಕೂಡ ಸುಯ್ಯಾಣ ಶಬ್ದದ ಜ್ಞಾತಿ ಶಬ್ದವಾಗಿರುವುದರ ಜೊತೆಗೆ ಅದರ ಅರ್ಥದ ತೊಡಕು ಬಿಡಿಸುವುದರಲ್ಲಿ ತುಂಬ ಸಹಾಯಕವಾಗಿದೆ. ಶಾಂತಿನಾಥ ಕವಿಯ **ಸುಕುಮಾರ ಚರಿತೆ**ಯಲ್ಲಿ ಸಾಹಿಯಾಣ ಶಬ್ದ ಬರುವ ಸಂದರ್ಭವಿದು:

> "...ಕಾಲೋಹಣದ ಸಾಹಿಯಾಣದ ಚೀನದ ಮಹಾಚೀನದ ಪರಿಯ ಚಿತ್ರಾವಟ್ಟೆಯ ಪಟ್ಟಾವಟ್ಟೆಯ ಪಟ್ಟಸೂತ್ರದ ಚಿತ್ರಸೂತ್ರದ ನೇತ್ರವಟ್ಟಣಿಗೆಯ ಪೆಟ್ಟಿಗೆಗಳನೊಟ್ಟಾಗಿ ಪುಂಜಿಸಿ"
> (10-91)

ಇಲ್ಲಿ ಬರುವ **ಸಾಹಿಯಾಣ** ಎಂಬುದು ಕನ್ನಡ ಕೋಶಗಳಲ್ಲಿ ಸಿಗದ ಅಪೂರ್ವ ಶಬ್ದ. ಇದು ಸೂಚಿಯಾನ ಶಬ್ದಕ್ಕೆ ನೇರವಾಗಿ ಸಂಬಂಧಿಸಿದೆ. ಇದಲ್ಲದೆ ಇನ್ನೊಂದು ಪ್ರಯೋಗ ಸಿಗುವುದು, ಆದಿಪು 4–34 ವಚನದಲ್ಲಿ. ಶಾಂತಿನಾಥ ಶಬ್ದವನ್ನು ಸಾಹಿಯಾಣ ಎಂಬಂತೆಯೇ ಪ್ರಯೋಗಿಸಿದನೇ ಎಂಬ ಸಂಶಯಕ್ಕೆ ಸ್ವಲ್ಪ ಅವಕಾಶವಿದೆ. ಏಕೆಂದರೆ ಸೂಚಿಯಾನವೆಂಬ ಸಂಸ್ಕೃತ ಶಬ್ದಕ್ಕೆ ಇದು ನೇರವಾಗಿ ಸಂಬಂಧಿಸಿದ್ದೆಂಬುದರಲ್ಲಿ ಅನುಮಾನವಿಲ್ಲ. ಸೂಚೀಯಾನ >ಸೂಹಿಯಾಣ ಆಗಬಹುದೇ ಹೊರತು ಸಾಹಿಯಾಣ ಎಂದಾಗುವುದು ಸಂದೇಹ. ಪ್ರತಿಕಾರರ ಕೈವಾಡದಿಂದ ಸೂಹಿಯಾಣ ಸಾಹಿಯಾಣ ಆಗಿರಬಹುದೇ ? ಒಂದು ವೇಳೆ ಹಾಗಾಗಿದ್ದಲ್ಲಿ ಈ ಮಾತಿನ ಬೆಳವಣಿಗೆ ನಿರುಕಾಗುತ್ತದೆ :

ಸಂ. ಸೂಚಿಯಾನ >*ಪ್ರಾ. ಸೂ(ಈ)ಇಯಾಣ >*ಸೂಹಿಯಾಣ >ಕ. ಸೂಯಾಣ >*ಸುಯಿಯಾಣ >ಸುಯ್ಯಾಣ. ಆದರೆ ಈ ಶಬ್ದದ ಅನ್ಯ ಪ್ರಯೋಗಗಳು ದೊರೆಯಬೇಕು.

ಸಾ(ಸೂ)ಹಿಯಾಣ ಶಬ್ದಕ್ಕೆ ಕಸೂತಿಮಾಡಿದ ಬಟ್ಟೆ ಎಂದರ್ಥ ಹೇಳಬಹುದು. ಸುಯ್ಯತಾಣ, ಸುಯ್ಯಾಣ ಶಬ್ದಗಳಿಗೂ ಇದೇ ಅರ್ಥ. ಇಲ್ಲಿ ಒಂದು ಹೆಚ್ಚಿನ ಮಾತಿದೆ. ಈ ಎರಡು ಶಬ್ದಗಳು ಒಂದು ಬಗೆಯ ಬಟ್ಟೆಯಾಗಿರುವುದರ ಜೊತೆಗೆ ಅದು ತಯಾರಾಗುತ್ತಿದ್ದ ಊರಿನ ಹೆಸರನ್ನೂ ತೋರುತ್ತಿರಬಹುದು. ಈ ಗುಮಾನಿಯನ್ನು ಸುಯ್ಯಾಣ ಎಂಬ ಮಾತಿಗಿಂತ ಸುಯ್ಯತಾಣ ಬಲಪಡಿಸುತ್ತದೆ.

ಶಾಂತಿನಾಥನ ಪ್ರಯೋಗದಲ್ಲಿ ಬರುವ ಕಾಲೋಹಣದ ಪಟಿ ಹಾಗೂ ಪಂಪನ ಆದಿಪುರಾಣದಲ್ಲಿ ಬರುವ ಕಾರೋಹಣದ ಪಟಿ ಒಂದೇ. ಲಕಾರ ರಕಾರಗಳು ಎಡೆಮಾರುವುದು ಕನ್ನಡದಲ್ಲಿ ಹೊಸದಲ್ಲ. ಈ ಶಬ್ದದ ಅರ್ಥ ಕೂಡ ವಸ್ತ್ರವಿಶೇಷವೆಂದೇ. ಇದರ ವಿಚಾರವಾಗಿ ದಿವಂಗತ ಡಾ॥ ಡಿ. ಎಲ್. ಎನ್.ರವರು ಬರೆದಿರುವ ಕಾರೋಹಣದ ಪಟಿ ಎಂಬ ಲೇಖನ ನೋಡಬಹುದು. (**ಪೀಠಿಕೆ**ಗಳು **ಲೇಖನ**ಗಳು. 1971 ಪುಟ 890–92). ಅಲ್ಲಿ ಅವರು 'ಕಾರೋಹಣದ ಪಟಿ ಶಬ್ದದಲ್ಲಿನ ಕಾರೋಹಣ ಎಂಬುದು ಒಂದು ಊರಿನ ಇಲ್ಲವೇ ಪ್ರದೇಶದ ಹೆಸರಾಗಿರಬಹುದೆಂದು ಸೂಚಿಸಿದ್ದಾರೆ. ಕೆಲವೊಮ್ಮೆ ಕೆಲವು ವಸ್ತುಗಳು ಸಿಗುವ, ಬೆಳೆಯುವ ಇಲ್ಲವೇ ಸಿದ್ಧವಾಗುವ ಸ್ಥಳ ಅಥವ ಪ್ರದೇಶದ ಹೆಸರನ್ನು ಹೊತ್ತಿರುತ್ತವೆ; ಬೊಂಬಾಯಿ ಬೋಂಡ, ಮದ್ದೂರು ವಡೆ, ದಿಂಡಿಗಲ್ಲು ಸೀರೆ, ಷಾಪೂರ್ ಸೀರೆ, ಮೈಸೂರು ಸಿಲ್ಕ್ ಇತ್ಯಾದಿ. **ವಡ್ಡಾರಾಧನೆ**ಯಲ್ಲಿ ಬರುವ ನೆಲವತ್ತಿಯಡಕೆ (ಪುಟ 78) ಇಂತಹ ಒಂದು ಮಾತು. ಜೋನೆಗವಟಿ ಎಂಬ ವಸ್ತ್ರ ಈ ಬಗೆಯದು. ಯವನಕದ ತದ್ಭವ ಜೋನೆಗ. ಯವನ ದೇಶದ ಬಟ್ಟೆ ಜೋನೆಗವಟಿ (**ರಾಜಶೇಖರ ವಿಲಾಸ** 9–11 ವ). ಇವುಗಳಂತೆ ಸುಯ್ಯತಾಣ, ಸುಯ್ಯಾಣ ಒಂದು ಊರಿನ ಇಲ್ಲವೇ ಭಾಗದ ಹೆಸರಿರಬಹುದು. ಈ ಊಹೆಯನ್ನು ಸುಯ್ಯತಾಣದ ಪಟ್ಟೆ, ಸುಯ್ಯಾಣದ ಪಟಿ ಎಂಬ ಷಷ್ಠ್ಯಂತದ ಮಾತುಗಳು ಬೆಂಬಲಿಸುತ್ತವೆ. ಹಾಗಿದ್ದಲ್ಲಿ ಆ ಮಾತುಗಳ ಹುರುಳು ಸುಯ್ಯತಾಣವೆಂಬಲ್ಲಿಯ, ಸುಯ್ಯಾಣ ಎಂಬಲ್ಲಿನ ಕಸೂತಿ ಮಾಡಿದ ಬಟ್ಟೆ ಎಂದಾಗುತ್ತದೆ. ಆದರೆ ಇದೊಂದು ಸೂಚನೆ ಮಾತ್ರ.

ಇನ್ನು ಪಂಪನ **ವಿಕ್ರಮಾರ್ಜುನವಿಜಯ**ದ (3–40 ವ) ಪ್ರಯೋಗದಲ್ಲಿ ಕಂಡುಬಂದ ಇನ್ನೊಂದು ಶಬ್ದವಾದ **ಸಕಲವಟ್ಟೆ**ಯ ವಿಚಾರ. ಈ ಶಬ್ದಕ್ಕೆ ಪಂಪಭಾರತ ನಿಘಂಟಿನಲ್ಲಿ ಅರ್ಥ ತಿಳಿಯದೆಂದು ಸೂಚಿಸಿದ್ದಾರೆ. ಕನ್ನಡದ ನಿಘಂಟುಗಳಲ್ಲಿ ಈ ಶಬ್ದ ಕೊಟ್ಟಿಲ್ಲ. ಸಕಳವಟ್ಟೆ ಶಬ್ದ ಕೂಡ ಕನ್ನಡ ವಾಙ್ಮಯದ ಅಪರೂಪ ಶಬ್ದಗಳಲ್ಲಿ ಒಂದು. ಈ ಶಬ್ದದ ಅರ್ಥವನ್ನು ನಿರ್ಧರಿಸುವಲ್ಲಿ ಅಷ್ಟೊಂದು ತೊಡಕಿಲ್ಲ. ಮೂರು ಕಾರಣಗಳಿಂದ : ಒಂದು, ಅದು ಪ್ರಯೋಗವಾಗಿರುವ ಸಂದರ್ಭದ ಬಲವಿದೆ; ಎರಡು, ಇನ್ನೆರಡು ಪ್ರಯೋಗಗಳಿವೆ; ಮೂರು, ಸಕಳವಟ್ಟೆಗೆ ಸಂಬಂಧಿಸಿದ ಮತ್ತೊಂದು ಮಾತಾದ ಸಕಲಾತಿ ಶಬ್ದದ ಅನೇಕ ಪ್ರಯೋಗಗಳು ದೊರೆತಿದೆ.

ಸಕಲವಟ್ಟೆ ಶಬ್ದದ ಇನ್ನೊಂದು ಪ್ರಯೋಗ ಶಾಂತಿನಾಥನ ಸುಕುಮಾರ ಚರಿತೆಯಲ್ಲಿದೆ :

ಬೊಂಗದ ನಾರಂಗದ ದೇ
ವಾಂಗದ ಪಲತೆರದ ಸಕಲವಟ್ಟೆಗಳಂ ಗೇ ।
ಹಾಂಗಣದೊಳ್ ಮೆಟ್ಟುವ ತಾ
ಣಂಗಳೊಳೋರಂತೆ ಪಾಸಿ ತದನಂತರದೊಳ್ 10-90

ಈ ಪ್ರಯೋಗದಿಂದ ಸಕಲವಟ್ಟೆ ಒಂದು ವಸ್ತ್ರನಾಮವಿಶೇಷವೆಂದು ಅರ್ಥವಾಗುತ್ತದೆ. ಸಕಳವಟ್ಟೆ ಸಕಲವಟ್ಟೆ ಒಂದೇ ಶಬ್ದ ; ಲಕಾರ ಳಕಾರಗಳು ಎಡೆಮಾರುವುದುಂಟು; ಅಲ್ಲದೆ ಲ ಳ ಯೋರಭೇದಃ. ಪಂಪನ **ಆದಿಪುರಾಣ**ದಲ್ಲಿ ಸಕಲಪಟ್ಟೆ ಎಂಬ ಶಬ್ದವಿದೆ. ಮದುವೆಯ ಒಸಗೆಯಲ್ಲಿ ಹೆಣ್ಣುಮಕ್ಕಳಿಗೆ ಬಾಗಿನಗಳನ್ನು ಬೀರಿ ವಸ್ತ್ರದಾನ ಮಾಡಿದ ಸಂನಿವೇಶ : ...... ದೇವಾಂಗದ **ಸಕಳಪಟ್ಟೆ**ಗಳುಮಂ ಮೆಟ್ಟುವೆಡೆಗಳೊಳೆಲ್ಲಂ ಪಾಸಿ **ಕಾರೋಹಣದ** ಕಕ್ಕರವಟಿಯಿಗೆಯ ಚಿತ್ರಾವಟಿಯ ಪಟಿಯ ತುಟಿಯ ನೇಟಲ ಪಾಣಿಯ ಬಣ್ಣದ ಕಣದ ಬಣ್ಣವಣ್ಣಿಗೆಯ ಜವಳಿಗಳನೆ ಮೊಗಂನೋಡದೆ ಸೂಸಿ (೪-೩೪. ವ). ಇಲ್ಲಿ ಬರುವ ಸಕಲ ಪಟ್ಟೆಶಬ್ದ **ಪಂಪಭಾರತ** ಮತ್ತು **ಸುಕುಮಾರ ಚರಿತೆ**ಗಳಲ್ಲಿ ಬರುವ ಸಕಲವಟ್ಟೆ ಶಬ್ದವೇ. ಮತ್ತು ಮೇಲಿನ ಪ್ರಯೋಗಗಳಲ್ಲಿ ಕೇವಲ ವಿವಿಧ ವಸ್ತ್ರನಾಮ ವಿಶೇಷಗಳನ್ನೇ ಹೆಸರಿಸಿರುವುದರಿಂದ ಸಕಲವ (ಪ) ಟ್ಟೆ ಶಬ್ದದ ಅರ್ಥ ಅದೇ ಎಂಬುದು ಖಚಿತವಾಗುತ್ತದೆ.

ಈ ಮೂರು ಪ್ರಯೋಗಗಳಲ್ಲದೆ ಸಕಲವಟ್ಟೆ ಶಬ್ದಕ್ಕೆ ಅನ್ಯ ಪ್ರಯೋಗಗಳಿದ್ದಂತಿಲ್ಲ. ಆದರೆ ಸಕಲವಟ್ಟೆ ಶಬ್ದದ ಜ್ಞಾತಿಸಬ್ದವಾದ ಸಕಲಾತಿ ಶಬ್ದ ಹಲವಾರು ಕಡೆ ದೊರೆಯುತ್ತದೆ. ಇಲ್ಲಿ ಕೆಲವು ಉದಾರಣೆ ಕೊಡಬಹುದು. ಕನಕದಾಸರ ಪ್ರಯೋಗ—

ಮೇಲುತರದ ಪಟ್ಟೆವೆರಸೂಪುಸಕಲಾತಿ
ಜೂಲುಗಳಿಂದೆ ರಂಜಿಸುವ ।
ಕಾಲುವೇಗದ ಶುನಿವಿಡಿದ ಕಿರಾತರು
ಸಾಲಿಟ್ಟು ನಡೆದರೊಗ್ಗಿನಲಿ ॥ ಮೋಹನತರಂಗಿಣಿ 19-10

ಪುರಂದರದಾಸರ ಕೀರ್ತನೆಯಲ್ಲಿ ಸ್ವಚ್ಛದೀಪದ ಬೆಳಕು ಕುರುಂಡೇಸುಬಲ್ಲ, ಮೊಚ್ಚೆಗರ ಸಕಲಾತೇಸುಬಲ್ಲ ಎಂಬ ಪ್ರಯೋಗವಿದೆ. ಕಂಠೀರವ ನರಸರಾಜ ವಿಜಯ (11-88), ವಾದಿರಾಜರ ಕೀರ್ತನೆ (ಭಾಗ-1), ಕರ್ನಾಟಕ ಭಕ್ತವಿಜಯ (ಭಾಗ 2), ಅರ್ಜುನವತಾರ ವಿಲಾಸ, ಕೃಷ್ಣರಾಜ ವಾಣಿವಿಲಾಸ ಭಾರತ ಟೀಕು (ಆದಿಪರ್ವ) ಮೊದಲಾದುವು.

ಸಕಲಾತಿ ಎಂಬ ಶಬ್ದಕ್ಕೆ ಶಾಲು ಎಂಬರ್ಥವಿದ್ದರೂ ಉಣ್ಣೆಯ ಹೊದಿಗೆ ಎಂಬರ್ಥ ಉಚಿತವಾಗುತ್ತದೆ. ಸ್ಥೂಲವಾಗಿ ವಸ್ತ್ರನಾಮ ವಿಶೇಷವೆಂದೇ ಇದಕ್ಕೂ ಅರ್ಥನ್ಯಸ

ಬಹುದು. ಇಲ್ಲಿ ಸಕಲ ಎಂಬುದು ಪೂರ್ವಪದ. ಇದಕ್ಕೆ (ವ) ಬಟ್ಟೆ, ಪಟ್ಟೆ ಸೇರಿ ಸಕಲವಟ್ಟೆ ಸಕಲಪಟ್ಟೆ ಆಗಿದೆ. ಪಳಗನ್ನಡ ಕಾವ್ಯಗಳಲ್ಲಿ ಇಂತಹ ಅನೇಕ ಬಗೆಯ ವಸ್ತ್ರವಿಶೇಷಣ ಶಬ್ದಗಳು ಬರುತ್ತವೆ. ನೇತ್ರವಟ್ಟೆ, ನೇತ್ರಾವಳಿ, ನೇತ್ರಪಟಿ, ಸಕಲವಟ್ಟೆ, ಅಡವಟ್ಟೆ (ಶಾಂತಿಪುರಾಣ 6-111) ಮುಂತಾದುವು ಈ ಬಗೆಯವು. ಇವುಗಳಲ್ಲಿ ನೇತ್ರಪಟ್ಟೆ ನೇತ್ರಪಟಿ ನೇತ್ರಾವಳಿ (ಟಿ) ಸಮಾನ ಶಬ್ದಗಳು, ಇದರಂತೆ ಸಕಲವಟ್ಟೆ ಸಕಲಪಟ್ಟೆ ಸಮಾನಾರ್ಥಕ ಶಬ್ದಗಳು. ಸಕಲವ(ಪ)ಟ್ಟೆ ಪ್ರಾಚೀನ ಪ್ರಯೋಗ. ಸಕಲಾತಿ ನಡು ಗನ್ನಡಾನಂತರ ಕಾವ್ಯಗಳಲ್ಲಿ ಮಾತ್ರ ಸಿಗುತ್ತದೆ.

ನೇತ್ರಪಟಿ, ನೇತ್ರವಟ್ಟೆ, ಸಕಲ(ವ)ವಟ್ಟೆ ಅಡವಟ್ಟೆ ಇವು ಯಾವೂ ಕನ್ನಡ ಕೋಶಗಳಲ್ಲಿಲ್ಲದ ಮಾತುಗಳು. ನೇತ್ರ (=ವಸ್ತ್ರ, ಸೀರೆ)+ಪಟಿ (=ವಸ್ತ್ರ)=ನೇತ್ರ ಪಟಿ. ನೇತ್ರವಟಿ ಶಬ್ದ ಸುಕುಮಾರಚರಿತೆಯಲ್ಲಿ ಅಲ್ಲದೆ ಶಾಂತೀಶ್ವರ ಪುರಾಣ (7-73 ವ) ದಲ್ಲೂ ಸಿಗುತ್ತದೆ. ಪಟಿ ಎಂಬುದು ಪಟ ಶಬ್ದದ ತದ್ಭವವೆಂಬ ಸೂಚನೆಯಿದೆ. ವಸ್ತ್ರವಿಶೇಷವೆಂಬರ್ಥದಲ್ಲಿ ಪಟಿ ಶಬ್ದ ಬಿಡಿಯಾಗಿ ವಡ್ಡಾರಾಧನೆ (93), ಆದಿಪುರಾಣ (5-74), ಸುಕುಮಾರಚರಿತೆ (10-91 ವ) ಮುಂತಾದ ಹತ್ತಾರು ಕೃತಿಗಳಲ್ಲೂ, ಸಮಾಸ ದಲ್ಲಿ ನೇತ್ರಪಟಿ ಎಂಬಲ್ಲಿ ಅಲ್ಲದೆ ಜೋನೆಗವಟಿ, ವೀರಪಟಿ, ಸುವರ್ಣಪಟಿ, ಚಿತ್ರಪಟಿ ಎಂಬಲ್ಲಿಯೂ ಪ್ರಯೋಗವಾಗಿದೆ. ಈ ಪಟಿಯೇ ಸಮಾಸದಲ್ಲಿ - ವಟಿಯಾಗಿದೆ: ಪ್ರಯೋಗ; ನೇತ್ರಾವಟಿ, ಚಿತ್ರಾವಟಿ, ಪಟ್ಟಾವಟಿ. ಮೃದುವಾದ ಒಂದು ಬಗೆಯ ಕಬ್ಬಿಗೆ ಪಟಾವಳಿ ಕಬ್ಬು ಎಂಬ ಹೆಸರಿದೆ. ಅದು ಪಟಾವಟಿ (=ರೇಷ್ಮೆಬಟ್ಟೆ) ಶಬ್ದ ದಿಂದ ಸಾಧಿತವಾದ ಶಬ್ದ. ಅಂತೆಯೇ ಪಟಾವಳಿಸೀರೆ. ಆದಿಪುರಾಣದಲ್ಲಿ ಬರುವ ಅಂತರೀಯ (ಉಟ್ಟುಕೊಳ್ಳುವ ಬಟ್ಟೆ, ಉಡುಪು) 11-148, ಕ್ಷೌಮಾಂಬರ (=ರೇಶಿಮೆ ಬಟ್ಟೆ 8-55) ಜೋಗ (5-34) ಕೂಡ ಅಂತ ಒಂದು ಶಬ್ದ. ದೇವಾಂಗ (=ವಸ್ತ್ರ) ವನ್ನೇ ವಿಶೇಷವಾಗಿ ನೇಯುತ್ತಿದ್ದ ಜನಾಂಗದವರಿಗೆ ದೇವಾಂಗದವರೆಂಬ ಹೆಸರಾಯಿ ತೆಂದು ತೋರುತ್ತದೆ.

ನಾರಂಗದ ಪಟಿ, ನಾರಂಗದ ವಟ್ಟೆ ಎಂಬುದು ಕೂಡ ಈ ಬಗೆಯ ವಸ್ತ್ರನಾಮ ವಿಶೇಷ. ಅದು ವರ್ಣಪ್ರಧಾನದಿಂದ ಬಂದದ್ದು. ಈ ನಾರಂಗಶಬ್ದ **ಪಂಪಭಾರತ**ದಲ್ಲೂ (11-140 ವ), **ಸುಕುಮಾರಚರಿತೆ**ಯಲ್ಲೂ (10-90) ಇನ್ನಿತರ ಕೆಲವು ಕಡೆಗಳಲ್ಲೂ ಪ್ರಯೋಗವಾಗಿದೆ; ಕಿತ್ತಲೆಬಣ್ಣದ ವಸ್ತ್ರಸಂದರ್ಭ. ಆದರೆ ಈ ಶಬ್ದಕ್ಕೆ ಮೂಲವಾದ ಶಬ್ದ ನಾಗರಂಗವಿರಬೇಕೆಂದು ಊಹಿಸಲವಕಾಶವಿದೆ. **ಜಗನ್ನಾಥ ವಿಜಯ**ದ ಪದ್ಯ (2-15)ದಲ್ಲೂ ಮಲ್ಲಿಕಾರ್ಜುನನ **ಸೂಕ್ತಿಸುಧಾರ್ಣವ**ದ ಪುರವರ್ಣನೆಯಲ್ಲೂ (ಪದ್ಯ 36) ಉದಾಹೃತವಾಗಿದೆ. ಅದರಲ್ಲಿ ನಾಗರಂಗವೆಂಬ ಶಬ್ದ, ಪಾಠಾಂತರದೊಡನೆ ಪ್ರಯೋ ಗವಾಗಿದೆ. ನಾಗರಂಗಕ್ಕೆ ಬೇರೆ ಪ್ರಯೋಗಗಳು ದೊರೆಯದಿರುವುದರಿಂದಲೂ, ನಾರಂ

ಗದ ಪ್ರಯೋಗಗಳು ಸಾಕಷ್ಟಿರುವುದರಿಂದಲೂ ನಾಗರಂಗವೇ ಮೂಲಶಬ್ದವೆಂದು ಪರಿಗ್ರಹಿಸಬಹುದು. ಬಹುಶಃ ನಾಗರಂಗ ಎಡೆಮಾರಿ ನಾರಂಗ ಶಬ್ದದ ರೂಪಸಿದ್ಧಿಯಾಗಿರಬಹುದು. ಈ ಬಗೆಯ ವರ್ಣಪಲ್ಲಟ ಕನ್ನಡಕ್ಕೆ ಅಪರೂಪವಲ್ಲ. ಇದರಂತೆ ಶಾಂತಿನಾಥನ **ಸುಕುಮಾರಚರಿತೆ**ಯಿಂದ ಉದಾಹರಿಸಿದ (10-90) ಪದ್ಯದ ಮೊದಲ ಶಬ್ದ 'ಬೊಂಗದ' ಎಂಬುದು 'ಜೊಂಗದ' ಎಂದಿರಬೇಕು. ಪಂಪನ ಆದಿಪುರಾಣದಲ್ಲಿ ಜೊಂಗದ ಎಂದಿರುವುದನ್ನು ಗಮನಿಸಬಹುದಲ್ಲದೆ ಶಾಂತಿನಾಥನ ಶಬ್ದಕ್ಕೆ ಚೊಂಗದ ಎಂಬ ಪಾಠಾಂತರವೂ ಇದೆಯೆಂಬುದನ್ನು ಪರಿಶೀಲಿಸಬಹುದು. ಜೊಂಗ ಎಂಬ ಶಬ್ದ ಪಂಪನಲ್ಲಿ ಸಿಗುತ್ತದೆಯಲ್ಲದೆ ಅದರ ಸಂದರ್ಭವೂ ಸುಕುಮಾರ ಚರಿತೆ ಕಾವ್ಯಕ್ಕೆ ಸದೃಶವಾಗಿದೆ. ಈ ಶಬ್ದದ ನಿಷ್ಪತ್ತಿಯನ್ನು ಖಚಿತವಾಗಿ ಹೇಳುವುದು ಕಷ್ಟವಾದರೂ ಅದು ಯವನಕ ಶಬ್ದದ ತದ್ಭವ ರೂಪವಿರಬಹುದೆಂದು ಸೂಚಿಸಬಹುದು : ಸಂ. ಯವನಕ >ಕ. ಜೋನೆಗ > ಜೊಂಗ ಆಗಿರಬಹುದು.

ಹಂಪ. ನಾಗರಾಜಯ್ಯ

ಸಂಪಾದಕೀಯ

'ಸಾಧನೆ' ಬೆಂಗಳೂರು ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ ಪ್ರಥಮ ಕನ್ನಡ ತ್ರೈಮಾಸಿಕ.

ಸೃಜನಾತ್ಮಕ ಹಾಗೂ ಸಂಶೋಧನಾತ್ಮಕ ಬರೆಹಗಳಿಗೆ ಮೀಸಲಾದ, ಸಾಹಿತ್ಯಿಕ, ಮಾನವಿಕ ಮತ್ತು ವೈಜ್ಞಾನಿಕ ವಿಷಯಗಳನ್ನೊಳಗೊಳ್ಳುವ ಪತ್ರಿಕೆ, 'ಸಾಧನೆ'.

ಸುಮಾರು ಐವತ್ತು ವರ್ಷಗಳ ಹಿಂದೆ, 1919ರಲ್ಲಿ, ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೆ 'ಪ್ರಬುದ್ಧ ಕರ್ಣಾಟಕ'ವು ಹುಟ್ಟಿದ್ದು ಇಲ್ಲಿ, ಈ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ. ಸುವರ್ಣ ಮಹೋತ್ಸವವನ್ನು ಕಂಡ ಆ ಪತ್ರಿಕೆ ಈಗ 'ಮಾನವಿಕ ಕರ್ಣಾಟಕ' ಮತ್ತು 'ವಿಜ್ಞಾನ ಕರ್ಣಾಟಕ' ಎಂಬ ಎರಡು ಹೊಸ ಶಾಖೆಗಳನ್ನು ಚಾಚಿ ಕೊಂಡು ಮೈಸೂರಿನಿಂದ ಪ್ರಕಟವಾಗುತ್ತಿದೆ.

ಇಂದು ಅದೇ ಸೆಂಟ್ರಲ್ ಕಾಲೇಜಿನ ಪರಿಸರದಲ್ಲಿ, ಮೈಸೂರು ವಿಶ್ವವಿದ್ಯಾನಿಲಯದಿಂದ ಬೇರೆಯಾದ ಅಸ್ತಿತ್ವವೊಂದನ್ನು ಹೊಂದಿ ಬೆಂಗಳೂರು ವಿಶ್ವವಿದ್ಯಾಲಯವು ತನ್ನ ಎಂಟನೆಯ ವರ್ಷದಲ್ಲಿ ತನ್ನದೇ ಆದ ಕನ್ನಡ ತ್ರೈಮಾಸಿಕ 'ಸಾಧನೆ' ಯ ಪ್ರಥಮ ಸಂಚಿಕೆಯನ್ನು ಪ್ರಕಟಿಸುತ್ತಿದೆ. ಇದೊಂದು ಐತಿಹಾಸಿಕ ಘಟನೆ ಈ ನೂತನ ವಿಶ್ವವಿದ್ಯಾಲಯದ ಬದುಕಿನಲ್ಲಿ.

ಬೆಂಗಳೂರು ವಿಶ್ವವಿದ್ಯಾಲಯಕ್ಕೆ ತನ್ನದೇ ಆದ ಇಂತಹ ಪತ್ರಿಕೆಯ ಅಗತ್ಯವಿದೆ ಎಂಬ ಸೂಚನೆಯನ್ನು ಕನ್ನಡ ವಿಭಾಗ ಹಾಗೂ ಪ್ರಕಟಣ ವಿಭಾಗ ಮಾನ್ಯ ಉಪಕುಲಪತಿಗಳಾದ ಶ್ರೀ ಟಿ. ಕೆ. ತುಕೋಳ್ ಅವರ ಗಮನಕ್ಕೆ ತಂದಾಗ, ಅವರು ಅದನ್ನು ಮನಸ್ಸಿಗೆ ತಂದುಕೊಂಡು, ಕಾರ್ಯನಿರ್ವಹಣೆಗಾಗಿ ಕೂಡಲೆ ಒಂದು ಸಲಹಾ ಸಮಿತಿಯನ್ನು ರೂಪಿಸಿದರು. ಆ ಸಮಿತಿ ಹೀಗಿದೆ.

ಡಾ. ಜಿ. ಎಸ್. ಶಿವರುದ್ರಪ್ಪ	ಅಧ್ಯಕ್ಷರು
ಡಾ. ಎಂ. ಷಡಕ್ಷರಸ್ವಾಮಿ	ಸದಸ್ಯರು
ಡಾ. ಬಿ. ಕೆ. ರಾಮಯ್ಯ	,,
ಡಾ. ಎನ್. ವಿ. ತೀರ್ಥ	,,
ಡಾ. ಕೆ. ವೆಂಕಟಗಿರಿಗೌಡ	,,

ಡಾ. ಎಚ್. ನರಸಿಂಹಯ್ಯ	ಸದಸ್ಯರು
ಪ್ರೊ. ಎಂ. ಪಿ. ಎಲ್. ಶಾಸ್ತ್ರಿ	,,
ಶ್ರೀ ಕೆ. ಸಿ. ಶಿವಪ್ಪ	ಸಂಚಾಲಕರು

ಈ ಸಮಿತಿಯು ತಾ. 8–7–71 ರಂದು ಸೇರಿ ಪತ್ರಿಕೆಯ ಹೆಸರು 'ಸಾಧನೆ' ಎಂದಿರಬೇಕೆಂದು ನಿರ್ಣಯಿಸಿ, ಕೆಳಗೆ ಕಾಣಿಸಿದಂತೆ ಸಂಪಾದಕರ ಮಂಡಲಿಯೊಂದನ್ನು ರಚಿಸಿತು:

ಡಾ. ಜಿ. ಎಸ್. ಶಿವರುದ್ರಪ್ಪ	ಪ್ರಧಾನ ಸಂಪಾದಕರು
ಡಾ. ಎಂ. ಚಿದಾನಂದಮೂರ್ತಿ	ಸಂಪಾದಕರು
ಡಾ. ಪಿ. ಎಸ್. ವೆಂಕಟಸ್ವಾಮಿ ಶೆಟ್ಟಿ	,,
ಡಾ. ಸೂರ್ಯನಾಥ ಕಾಮತ್	,,

ಹೀಗೆ ಸಾಹಿತ್ಯಿಕ, ವೈಜ್ಞಾನಿಕ ಮತ್ತು ಮಾನವಿಕ ವಿಭಾಗಗಳನ್ನು ಪ್ರತಿನಿಧಿಸುವ ಈ ಸಂಪಾದಕ ಮಂಡಲಿ ತನ್ನ ಕಾರ್ಯದಲ್ಲಿ ತೊಡಗಬೇಕೆಂದೂ, ಜನವರಿಯಿಂದ ಮೊದಲುಗೊಂಡು ಡಿಸೆಂಬರ್ ವರೆಗಿನ ಅವಧಿಯಲ್ಲಿ ಅನುಕ್ರಮವಾಗಿ ಮೂರು ತಿಂಗಳಿಗೆ ಒಂದು ಸಂಚಿಕೆಯನ್ನು ಪ್ರಕಟಿಸಬೇಕೆಂದೂ, ವಿಶ್ವವಿದ್ಯಾಲಯದ ಪ್ರಕಟಣ ವಿಭಾಗದ ಕೋ-ಆರ್ಡಿನೇಟರ್ ಶ್ರೀ ಕೆ. ಸಿ. ಶಿವಪ್ಪನವರು ಇದರ ಪ್ರಕಾಶಕರೆಂದೂ ಸಮಿತಿಯು ನಿರ್ದೇಶಿಸಿತು.

ಸಂಪಾದಕ ಮಂಡಲಿಯು ಕಾರ್ಯೋನ್ಮುಖವಾಗಿ ಈ ಪತ್ರಿಕೆಗೆ ಲೇಖಕರ ಸಹಕಾರವನ್ನು ಕೋರಿ ಪತ್ರಗಳನ್ನು ಬರೆದಾಗ ನಮಗೆ ಒದಗಿಬಂದ ಲೇಖನ ಸಮೃದ್ಧಿ ನಮಗೆ ಉತ್ಸಾಹವನ್ನು ತಂದಿದೆ. ಸಂಪಾದಕ ಮಂಡಲಿ ಹೀಗೆ ಒದಗಿಬಂದ ಲೇಖನಗಳನ್ನು ಪರಿಶೀಲಿಸಿ ಸಾಧ್ಯವಾದಷ್ಟು ಸಮಗ್ರವಾಗಿ ವಿವಿಧ ಅಧ್ಯಯನಾಂಗಗಳನ್ನು ಪ್ರತಿನಿಧಿಸುವ ರೀತಿಯಲ್ಲಿ ಲೇಖನಗಳನ್ನು ಕೂಡಿಸಿ ಪ್ರಕಟನೆಗಾಗಿ ಒಪ್ಪಿಸಿತು. ಹೀಗಾಗಿ ಇದೋ ಜನವರಿ 1972ರ 'ಸಾಧನೆ' ಸಿದ್ಧವಾಗಿದೆ.

ಇದು ಇದರ ಚರಿತ್ರೆ.

'ಸಾಧನೆ' ವಿಶ್ವವಿದ್ಯಾಲಯದ ಪತ್ರಿಕೆಯಾದುದರಿಂದ, ಅದರ ಜವಾಬ್ದಾರಿಗಳೇನು ಎಂಬುದನ್ನು ಸಂಪಾದಕರಾದ ನಾವು ಅರಿತಿದ್ದೇವೆ. ಮತ್ತು ನಿಶ್ಚಿತವಾದ ಒಂದು ಮಟ್ಟವನ್ನು ಉದ್ದಕ್ಕೂ ಕಾಯ್ದುಕೊಂಡು ಬರುವ ಭರವಸೆಯನ್ನು ಕೊಡುತ್ತೇವೆ.

ಇದು ಸಾಹಿತ್ಯ, ಮಾನವಶಾಸ್ತ್ರ ಮತ್ತು ವಿಜ್ಞಾನ — ಈ ಮೂರು ವಿಭಾಗಗಳ ವಿಷಯಗಳನ್ನು ಸದ್ಯಕ್ಕೆ ಒಳಗೊಂಡಿರುತ್ತದೆ. ಕಾಲಕ್ರಮದಲ್ಲಿ ಈ ಒಂದೊಂದು ಅಧ್ಯಯನಾಂಗವೂ ತನ್ನದೇ ಆದೊಂದು ಪತ್ರಿಕೆಯನ್ನು ಹೊರತರುವತನಕ ಈ 'ಸಾಧನೆ'

ಆ ಎಲ್ಲವನ್ನೂ ಒಳಗೊಂಡು ಪ್ರಕಟವಾಗುತ್ತದೆ. ಇದರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಮತ್ತು ಹೊರಗಿನ ಎಲ್ಲ ಲೇಖಕರ ಬರಹಗಳಿಗೆ ಸ್ವಾಗತವುಂಟು. ವಿದ್ಯಾರ್ಥಿ ಪ್ರತಿಭೆಗೆ ವಿಶೇಷ ಗಮನಕೊಡುವುದೂ ಈ ಪತ್ರಿಕೆಯ ಉದ್ದೇಶಗಳಲ್ಲಿ ಒಂದು. ಯಾವ ಬಗೆಯ ಸಂಕುಚಿತ ಪ್ರವೃತ್ತಿಗಳಿಗೂ ಎಡೆಕೊಡದೆ, ಎಲ್ಲ ಬಗೆಯ ದೃಷ್ಟಿಕೋನಗಳ ಮಂಡನೆಗೂ ಈ ಪತ್ರಿಕೆ ಒಂದು ವೇದಿಕೆಯಾಗಬೇಕೆಂಬುದು ನಮ್ಮ ಅಪೇಕ್ಷೆ. ಒಟ್ಟಿನಲ್ಲಿ ಆರೋಗ್ಯಕರವಾದ ಶೈಕ್ಷಣಿಕ ವಾತಾವರಣದ ನಿರ್ಮಾಣವೇ 'ಸಾಧನೆ'ಯ ಮುಖ್ಯ ಉದ್ದೇಶ.

ಈ ಪತ್ರಿಕೆಯ ಪ್ರಕಟಣೆಯಲ್ಲಿ ವಿಶೇಷ ಪ್ರೋತ್ಸಾಹ ನೀಡಿರುವ ಮಾನ್ಯ ಉಪ ಕುಲಪತಿ ಶ್ರೀ ಟಿ. ಕೆ. ತುಕೋಳ್ ಅವರಿಗೂ, ಈ ಕಾರ್ಯದಲ್ಲಿ ನಮ್ಮನ್ನು ನಿಯೋಜಿಸಿದ ಸಲಹಾ ಸಮಿತಿಗೂ ಸಂಪಾದಕ ಮಂಡಲಿಯು ತನ್ನ ಕೃತಜ್ಞತೆಗಳನ್ನರ್ಪಿಸುತ್ತದೆ.

'ಸಾಧನೆ' ಬೆಳೆದು ಉತ್ಕೃಷ್ಟ ಪತ್ರಿಕೆಯಾಗುವ ಬಯಕೆಯನ್ನಿಟ್ಟುಕೊಂಡಿದೆ. ಅದಕ್ಕಾಗಿ ಲೇಖಕರ ಸಹಕಾರವನ್ನೂ ಚಂದಾದಾರರ ನೆರವನ್ನೂ ಕೋರುತ್ತೇವೆ.

ಈ ಸಂಚಿಕೆಯ ಲೇಖಕರು

ಕೆ. ಎಸ್. ನರಸಿಂಹ ಸ್ವಾಮಿ	397, I ಬ್ಲಾಕ್, ಜಯನಗರ ಬೆಂಗಳೂರು-11
ಚೆನ್ನವೀರ ಕಣವಿ	ನಿರ್ದೇಶಕರು, ವ್ಯಾಸಂಗ ವಿಸ್ತರಣ ಹಾಗೂ ಪ್ರಕಟಣ ವಿಭಾಗ, ಕರ್ನಾಟಕ ವಿಶ್ವ-ವಿದ್ಯಾಲಯ, ಧಾರವಾಡ–3
ಡಾ: ವಿ. ಕೃ. ಗೋಕಾಕ	ವೈಟ್ ಫೀಲ್ಡ್ಸ್, ಬೆಂಗಳೂರು
ಡಾ. ಜಿ. ವರದರಾಜರಾವ್	ರೀಡರ್, ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು–6
ಎಂ. ವಿ. ಸೀತಾರಾಮಯ್ಯ	ಯು. ಜಿ. ಸಿ. ಪ್ರಾಧ್ಯಾಪಕರು ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು–9
ಪ್ರೊ. ಎಸ್. ಕೆ. ರಾಮಚಂದ್ರರಾವ್	ಪ್ರಾಧ್ಯಾಪಕರು, ಕ್ಯಾಲಿಸನ್ ಕಾಲೇಜು 9, ವಾಲ್ಟನ್ ರಸ್ತೆ, ಬೆಂಗಳೂರು–7
ಟಿ. ಕೆ. ತುಕೋಳ್	ಉಪ ಕುಲಪತಿಗಳು ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು–1
ಡಾ. ಎಂ. ಷಡಕ್ಷರಸ್ವಾಮಿ	ಪ್ರಿನ್ಸಿಪಾಲ್ ಸೆಂಟ್ರಲ್ ಕಾಲೇಜ್, ಬೆಂಗಳೂರು–1
ಡಾ. ಡಿ. ಎಸ್. ಶಿವಪ್ಪ	ವೈದ್ಯಶಾಸ್ತ್ರ ಪ್ರಾಧ್ಯಾಪಕರು ಬೆಂಗಳೂರು ಮೆಡಿಕಲ್ ಕಾಲೇಜು ಬೆಂಗಳೂರು–2
ವಿ. ಚೆಲುವರಾಜ ಅಯ್ಯಂಗಾರ್	ಭೌತಶಾಸ್ತ್ರ ಅಧ್ಯಾಪಕರು ಸ್ಟೇಷನ್ ರಸ್ತೆ, ಗಾಂಧಿನಗರ ತುಮಕೂರು

ಎಸ್. ಎಲ್. ಭೈರಪ್ಪ	ರೀಡರ್, ರೀಜನಲ್ ಕಾಲೇಜ್ ಆಫ್ ಎಜುಕೇಶನ್, ಮೈಸೂರು–6
ಕೆ. ಎಸ್. ನಿಸಾರ್ ಅಹಮದ್	ಭೂವಿಜ್ಞಾನದ ಅಧ್ಯಾಪಕರು ಸಹ್ಯಾದ್ರಿ ಕಾಲೇಜ್, ಶಿವಮೊಗ್ಗ
ತೀ. ನಂ. ಶಂಕರನಾರಾಯಣ	ಕನ್ನಡ ಅಧ್ಯಾಪಕರು ವಿಶ್ವವಿದ್ಯಾಲಯದ ಸಂಜೆ ಕಾಲೇಜ್ ಮೈಸೂರು–5
ಡಾ. ಪಾ. ಸಂ. ವೆಂಕಟಸ್ವಾಮಿ ಶೆಟ್ಟಿ	ರೀಡರ್, ಭೌತಶಾಸ್ತ್ರ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು–1
ಡಾ. ಜಿ. ಎಸ್. ಶಿವರುದ್ರಪ್ಪ	ನಿರ್ದೇಶಕರು, ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು–9
ಡಾ. ಎಂ. ಬಸವಣ್ಣ	ಮನಶ್ಶಾಸ್ತ್ರ ವಿಭಾಗ ಶ್ರೀ ವೆಂಕಟೇಶ್ವರ ವಿಶ್ವವಿದ್ಯಾಲಯ ತಿರುಪತಿ, ಆಂಧ್ರ ಪ್ರದೇಶ
ಬಿ. ವಿ. ವೆಂಕಟರಾವ್	ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು–3
ಡಾ. ದ. ರಾ. ಬೇಂದ್ರೆ 'ಅಂಬಿಕಾತನಯದತ್ತ'	'ಶ್ರೀ ಮಾತಾ', ಸಾಧನಕೇರಿ ಧಾರವಾಡ
ಎಸ್. ಪ್ರಭುಸ್ವಾಮಿ	ಅರ್ಥಶಾಸ್ತ್ರವಿಭಾಗ ಮಹಾರಾಜಾ ಕಾಲೇಜ್ ಮೈಸೂರು–5
ಟಿ. ಆರ್. ನಾಗರತ್ನ	ಅಧ್ಯಾಪಕರು. ಸಂಗೀತಶಾಸ್ತ್ರ ವಿಭಾಗ ಮಹಾರಾಣಿಯವರ ಕಾಲೇಜು ಬೆಂಗಳೂರು–1

ಜಿ. ಎಸ್. ಸಿದ್ಧಲಿಂಗಯ್ಯ	ರೀಡರ್ ಮತ್ತು ಮುಖ್ಯಸ್ಥರು ಕನ್ನಡ ವಿಭಾಗ, ಸರ್ಕಾರಿ ಕಾಲೇಜ್ ಬೆಂಗಳೂರು–1
ಡಾ. ಸಿ. ನಾಗಣ್ಣ	ಮುಖ್ಯಸ್ಥರು, ಭೂವಿಜ್ಞಾನ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು–1
ಡಾ. ಎಚ್. ಬಿ, ದೇವರಾಜ ಸರ್ಕಾರ್ ಎಂ. ಸುವರ್ಣಲತ ಬಿ. ಎಸ್. ತ್ಯಾಗರಾಜ	ಪ್ರಾಣಿಶಾಸ್ತ್ರ ವಿಭಾಗ ಮಾನಸ ಗಂಗೋತ್ರಿ ಮೈಸೂರು–6
ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ	ಅಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು–9
ಎಂ. ಸೂರ್ಯನಾರಾಯಣ ಶಾಸ್ತ್ರಿ	ರೀಡರ್, ಭೂವಿಜ್ಞಾನ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು–1
ವಿದ್ವಾನ್ ಕೆ. ವೆಂಕಟರಾಯಾಚಾರ್ಯ	ಸುರತ್ಕಲ್ಲು (ದ.ಕ.)
ಹಂಪ. ನಾಗರಾಜಯ್ಯ	ಅಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು–9

ಸಾಧನೆ

ಲೇಖನಗಳು:

1. ಲೇಖನಗಳನ್ನು ಪುಟದ ಒಂದೇ ಮಗ್ಗುಲಲ್ಲಿ ಬರೆದಿರಬೇಕು.
2. ಬರವಣಿಗೆ ಸಾಧ್ಯವಾದ ಮಟ್ಟಿಗೆ ಸ್ಫುಟವಾಗಿರಬೇಕು.
3. ಬರವಣಿಗೆಯ ತುದಿಗೆ ಲೇಖಕರು ತಮ್ಮ ಹೆಸರು-ವಿಳಾಸಗಳನ್ನು ಕಾಣಿಸಿರಬೇಕು.
4. ಅಸ್ವೀಕೃತ ಲೇಖನಗಳನ್ನು ಹಿಂದಕ್ಕೆ ಪಡೆಯುವ ಕಾಲದಲ್ಲಿ ಅಂಚೆ ವೆಚ್ಚವನ್ನು ಲೇಖಕರೇ ವಹಿಸಬೇಕಾಗುತ್ತದೆ.

ವ್ಯವಹರಿಸುವ ವಿಳಾಸ :

ಡಾ. ಜಿ. ಎಸ್. ಶಿವರುದ್ರಪ್ಪ
ನಿರ್ದೇಶಕರು, ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 9

ವಿಮರ್ಶೆಗೆ ಪುಸ್ತಕಗಳು, ಚಂದಾ ಇತ್ಯಾದಿ:

1. ಪ್ರಕಾಶಕರು ಅಥವಾ ಲೇಖಕರು ವಿಮರ್ಶೆಗಾಗಿ ಪುಸ್ತಕದ ಎರಡು ಪ್ರತಿಗಳನ್ನು ಕಳುಹಿಸಬೇಕಾಗುತ್ತದೆ.
2. ಚಂದಾದಾರರಾಗ ಬಯಸುವ ವಿದ್ಯಾರ್ಥಿಗಳು ತಾವು ಕಲಿಯುವ ಕಾಲೇಜಿನ ಮುಖ್ಯಸ್ಥರಿಂದ ತಾವು ವಿದ್ಯಾರ್ಥಿಗಳೆಂಬ ಬಗ್ಗೆ ದಾಖಲೆ ಪತ್ರವನ್ನು ಕಳುಹಿಸುವುದು ಅಗತ್ಯ.

ವ್ಯವಹರಿಸುವ ವಿಳಾಸ :

ಶ್ರೀ ಕೆ. ಸಿ. ಶಿವಪ್ಪ
ಕೋ–ಆರ್ಡಿನೇಟರ್
ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 1

ಲೇಖಕರ ಸೂಚಿ

ಅಣಜಿ ಸಿ ಆರ್ 4, 95
ಅಂಬಿಕಾತನಯ ದತ್ತ 1, 159
ಕಲಬುರ್ಗಿ ಎಂ ಎಂ 4, 37
ಕುಲಕರ್ಣಿ ಸಿ ಎಂ 4, 81
ಕುಲಕರ್ಣಿ ಆರ್ ಜಿ [ಸಾಕ್ಷಿ] 3, 84
ಕೋದಂಡರಾವ್ ರೆ ಎಂ 4, 142
ಗುರುರಾಜ ಭಟ್ಟ ಪಿ 2. 95
ಗುರುರಾಜಾಚಾರ್ ಎಸ್ 2, 200
ಗೋಕಾಕ ವಿ ಕೃ [ವಿನಾಯಕ] 1, 5
3, 1
ಚಂದ್ರಶೇಖರಯ್ಯ ಎನ್ ಜಿ 2, 153
ಚಿದಾನಂದಮೂರ್ತಿ ಎಂ 3, 198
ಚೆನ್ನಬಸಪ್ಪ ಕೋ 4, 2
ಚೆನ್ನವೀರ ಕಣವಿ 1, 4
ಚೆಲುವರಾಜ ಅಯ್ಯಂಗಾರ್ ವಿ 1, 87
ಜವಳಿ ಬಿ ಸಿ 2, 3
ತುಕೋಳ್ ಟಿ ಕೆ 1, 65
ತ್ಯಾಗರಾಜ ಬಿ ಎಸ್ 1, 181
ದಯಾನಂದ 2, 70
ದೀಕ್ಷಿತ್ ಜಿ ಎಸ್ 4, 150
ದೇವರಾಜ ಸರ್ಕಾರ್ ಎಚ್ ಬಿ 1, 181
ದೇವೀರಪ್ಪ ಎಚ್ 3, 187
ದೇಶ ಕುಲಕರ್ಣಿ 2, 145
ನರಸಿಂಹಸ್ವಾಮಿ ಕೆ ಎಸ್ 1, 1
ನರಸಿಂಹಾಚಾರ್ ಡಿ ಎಲ್ 3, 129
ನಾಗಣ್ಣ ಪಿ 1, 177
ನಾಗರತ್ನ ಟಿ ಆರ್ 1, 169
ನಾಗರಾಜಯ್ಯ, ಹಂಪ 1, 206
ನಾರಾಯಣ ಕೆ ವಿ 2, 195
4, 178
ನಾರಾಯಣ ಪಿ ವಿ 4, 111
ನಿಸಾರ್ ಅಹಮದ್ ಕೆ ಎಸ್ 1, 124
4. 80
ನಿಂಗಣ್ಣ ಸಣ್ಣಕ್ಕಿ 4, 172
ಪ್ರಭಾ ಮಾಗಳ್ 4, 175
ಪ್ರಭುಸ್ವಾಮಿ ಎನ್ 1, 161
ಪು. ತಿ. ನ 2, 1
ಬಸವಣ್ಣ ಎಂ 1, 145
ಬಾಲಸುಬ್ರಹ್ಮಣ್ಯ 4, 164
ಬೋಳೇ ಗೌಡ, ಬನ್ನೂರು ನಂ 2, 115
ಭಾಗ್ಯಲಕ್ಷ್ಮಿ ಎನ್ ವಿ 2, 86
ಭೈರಪ್ಪ ಎಸ್ ಎಲ್ 1. 93
ಮಧುಸೂದನ ಕೆ ಎಸ್ 2, 185
ಮುಂಗಳಿ ರಂ ಶ್ರೀ 4, 181
ರಮೇಶ ಕೊ ವ್ಯಾ 3, 189
ರಾಜಗೋಪಾಲ್ ಕ ವೆಂ 3, 183
ರಾಮಚಂದ್ರರಾವ್ ಎಸ್ ಕೆ 1, 54
ರಾಮರಾವ್ ಎಸ್ ವಿ 3, 172
ರುದ್ರಮೂರ್ತಿಶಾಸ್ತ್ರಿ ಸು 2. 151
ಲಕ್ಷ್ಮಣರಾವ್ ಕೆ ಎಸ್ 2, 151
ಲಕ್ಷ್ಮೀನಾರಾಯಣಭಟ್ಟ ಎನ್ ಎಸ್ 1, 192
ಲಲಿತಮ್ಮ ಎಂ ಎಲ್ 2, 187
ವರದರಾಜರಾವ್ ಜಿ 1, 11
ವ್ಯಾಸರಾವ್ ಎಂ ಎನ್ 3, 110
ವಿಜಯಪ್ಪ ಟಿ ಎನ್ 3, 145
ವಿರೂಪಾಕ್ಷ ಗೌಡ ಕೆ 2, 93
ವೀರತಪ್ಪ ಕೆ 3, 77
ವೆಂಕಟರಾಯಾಚಾರ್ಯ ಕೆ 1, 201
ವೆಂಕಟರಾವ್ ಬಿ ವಿ 1, 153
ವೆಂಕಟಸ್ವಾಮಿ ಶೆಟ್ಟಿ ಪಾ ಸಂ 1, 139
ವೆಂಕಟಸುಬ್ಬಾರಾವು, ತಂಗಿರಾಲ 3, 2
4, 11
ವೆಂಕಟೇಶಮೂರ್ತಿ ಎಚ್ ಎಸ್ 4, 149

ವೆಂಕಟೇಶಮೂರ್ತಿ ಎಸ್ 4, 165
ವೇಣುಗೋಪಾಲ ಸೊರಬ 3, 60
ಶಂಕರನಾರಾಯಣ ತೀ ನಂ 1, 127
2, 161
3, 87
ಶಂಕರನಾರಾಯಣರಾವ್
ಎನ್ ಪಿ 3, 195
ಶಾಸ್ತ್ರೀ ಬಿ ವಿ ಕೆ 4, 135
ಶಿವಕುಮಾರಸ್ವಾಮಿ ಎಂ 4, 49
ಶಿವಣ್ಣ ಎಸ್ 3, 167
ಶಿವಪ್ಪ ಡಿ ಎಸ್ 1, 79
ಶಿವರಾಮ ಐತಾಳ ಕೆ 3, 32
ಶಿವರುದ್ರಪ್ಪ ಜಿ ಎಸ್ 1, 144
2, 37
3, 112
4, 1

ಶ್ರೀಕಂಠಯ್ಯ ತೀ ನಂ 1, 18
4, 34
ಶ್ರೀಧರ್ ಬಿ ಎಚ್ 3, 13
ಶೇಷಾದ್ರಿ ಅಯ್ಯಂಗಾರ್ ಕೆ 3, 62
ಶೈಲಜಾ 4, 15
ಷಡಕ್ಷರಪ್ಪ ಕೆ ಎಸ್ 3, 15
ಷಡಕ್ಷರಸ್ವಾಮಿ ಎಂ 1, 73
ಸದಾಶಿವಯ್ಯ 4, 15
ಸಿದ್ಧಲಿಂಗ ಪಟ್ಟಣ ಶೆಟ್ಟಿ 2, 2
ಸಿದ್ಧಲಿಂಗಯ್ಯ ಜಿ ಎಸ್ 1, 17
2, 13
4, 93
ಸೀತಾರಾಮಯ್ಯ ಎಂ ವಿ 1, 36
ಸುವರ್ಣಲತ ಎಂ 1, 18
ಸುಂದರ ಅ 2, 10
ಸೂರ್ಯನಾರಾಯಣ ಶಾಸ್ತ್ರಿ ಎಂ 1, 19

ಪ್ರಚಾರೋಪನ್ಯಾಸ ಮಾಲೆ

1.	ನಗೆಯ ನೆಲೆ	ಎಸ್.ಕೆ. ರಾಮಚಂದ್ರರಾವ್
2.	ನಕ್ಷತ್ರ ಲೋಕ	ಜಿ. ಟಿ. ನಾರಾಯಣರಾವ್
3.	ಭಯ–ಸರಳ ವಿಶ್ಲೇಷಣೆ	ಎಂ. ಶಿವರಾಂ
4.	ಶ್ರೀ ಕವಿ ಲಕ್ಷ್ಮೀಶ	ಜಿ. ಎಸ್. ಸಿದ್ಧಲಿಂಗಯ್ಯ
5.	ಶಾಂತಿನಾಥ ಕವಿ	ಕಮಲಾ ಹಂಪನಾ
6.	ಉತ್ತಂಗಿ ಚನ್ನಪ್ಪ	ಸ. ಸ. ಮಾಳವಾಡ
7.	ಬಯಲಾಟಗಳು	ಚಂದ್ರಶೇಖರ ಕಂಬಾರ
8.	ನಾಟಕದಲ್ಲಿ ನವ್ಯತೆ	ಪಿ. ಲಂಕೇಶ್
9.	ದ್ರಾವಿಡ ಸಂಖ್ಯಾವಾಚಕಗಳು	ಹಂಪ. ನಾಗರಾಜಯ್ಯ
10.	ಉಪಭಾಷೆ	ಕೃಷ್ಣ ಪರಮೇಶ್ವರ ಭಟ್ಟ
11.	ಅರವಿಂದರ ವಿಚಾರಧಾರೆ	ಸಿ. ಕೆ. ವೆಂಕಟರಾಮಯ್ಯ
12.	ಪೂರ್ಣಯೋಗಿ ಶ್ರೀ ಅರವಿಂದರು	ಕೋ. ಚೆನ್ನಬಸಪ್ಪ
13.	ಪ್ರಾಚೀನ ಸಂಸ್ಕೃತಿ	ಎಸ್. ಕೆ. ರಾಮಚಂದ್ರರಾವ್
14.	ಪ್ರಾಚೀನ ಭಾರತದ ಆರ್ಥಿಕ ವ್ಯವಸ್ಥೆ	ಎಸ್. ಜಿ. ಚಂದ್ರಶೇಖರಯ್ಯ
15.	ಸಣ್ಣ ಕೈಗಾರಿಕೆಗಳು	ಆರ್. ಎಸ್. ಆರಾಧ್ಯ
16.	ವಿವಾಹ ಪದ್ಧತಿಗಳು	ಎಸ್. ಕೆ. ರಾಮಚಂದ್ರರಾವ್
17.	ಪಾನೀಯಗಳು	ಕೆ. ಎಸ್. ಲಕ್ಷ್ಮಣರಾವ್
18.	ಚಂದ್ರಲೋಕ ಯಾತ್ರೆ	ಪಿ. ಎಸ್. ವೆಂಕಟಸ್ವಾಮಿ ಶೆಟ್ಟಿ
19.	ಬೆಳಕಿನ ಸ್ವರೂಪ	ಬಿ. ವಿ. ನಾರಾಯಣರಾವ್
20.	ದೂರ ದರ್ಶನ	ಕೆ. ಶೇಷಾದ್ರಿ ಅಯ್ಯಂಗಾರ್
21.	ಸೂಕ್ಷ್ಮದರ್ಶಕಗಳು ಮತ್ತು ದೂರದರ್ಶಕಗಳು	ಕೆ. ಶೇಷಾದ್ರಿ ಅಯ್ಯಂಗಾರ್
22.	ಕುರುಡು	ಎಸ್. ಟಿ. ಪುಟ್ಟಣ್ಣ
23.	ಕಣ್ಣಿನ ರೋಗಗಳು	ಎಸ್. ಟಿ. ಪುಟ್ಟಣ್ಣ
24.	ಕ್ಷಯ	ಎಂ. ಬಸವರಾಜೆ ಅರಸು
25.	ಮೂತ್ರಪಿಂಡದ ಕೆಲವು ರೋಗಗಳು	ಎಂ. ಬಸವರಾಜೆ ಅರಸು
26.	ಉಕ್ಕು: ತಯಾರಿಕೆ ಮತ್ತು ರಚನೆ	ಕೆ. ಆರ್. ಮೋಹನ್
27.	ನೀರಾವರಿ ಸಮಸ್ಯೆಗಳು	ಕೆ. ಎನ್. ಶಿವಶಂಕರರಾವ್
28.	ಅಂತರ್ಜಲ	ಸಿ. ನಾಗಣ್ಣ

ಈಸ್ಟರ್ನ್ ಪ್ರೆಸ್, ಬೆಂಗಳೂ